# ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳ ಸಾರಾಂಶ

## ಭಾಗ : 2

ಲೇಖಕರು
**ಸಿ.ಎನ್.ಪರಶಿವಮೂರ್ತಿ,** ಎಂ.ಎಸ್.ಡಬ್ಲುಯು, ಎಲ್.ಎಲ್.ಬಿ
**ಸಹಕಾರ ಸಂಘಗಳ ನಿವೃತ್ತಿ ಅಪರ ನಿಬಂಧಕರು**

ಪ್ರಕಟಿಸಿದವರು
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾಣ ಭವನ" ಡಾ. ರಾಜಕುಮಾರ್ ರಸ್ತೆ,
1ನೇ ಕ್ರಾಸ್, ರಾಜಾಜಿನಗರ, ಬೆಂಗಳೂರು – 560010

**<u>ಸೂಚನೆ</u>** : ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯದ ತೀರ್ಪುಗಳ ಸಂಕ್ಷಿಪ್ತ ಸಾರಾಂಶವನ್ನು, ಈ ಪುಸ್ತಕದಲ್ಲಿ ನೀಡಿದ್ದು, ಮಾರ್ಗದರ್ಶನಕ್ಕಾಗಿ ಮಾತ್ರ. ಈ ತೀರ್ಪುಗಳನ್ನು ಅನುಸರಿಸಬೇಕಾದಾಗ ತೀರ್ಪಿನ ಪೂರ್ಣ ಪಾಠವನ್ನು ಓದಿದ ನಂತರವೇ ಅನುಸರಣೆ ಮಾಡತಕ್ಕದ್ದು.

ಪ್ರಕಾಶಕರು : **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಿರ್ಮಾಣ ಭವನ, ಡಾ. ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು– 560010
ದೂರವಾಣಿ: 080 23378375–80
ಇ–ಮೇಲ್: souharda@souharda.coop
ವೆಬ್‌ಸೈಟ್: www.souharda.coop

ಮೊದಲ ಮುದ್ರಣ : ಸೆಪ್ಟೆಂಬರ್ 2018,
ಪ್ರತಿಗಳು.: 500

ಬೆಲೆ : ರೂ. 100/–

ಮುದ್ರಕರು: Banashankari Print Solutions, Bangalore
prajvalprints1996@gmail.com
92429 10465

# ಮೊದಲ ಮಾತು



**ಆತ್ಮೀಯ ಸಹಕಾರಿ ಬಂಧುಗಳೇ,**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ, ಆರೋಗ್ಯಕರ ಬೆಳವಣಿಗೆಗಾಗಿ ಅನೇಕ ವಿಷಯಗಳ ಕುರಿತು ಪುಸ್ತಕಗಳನ್ನು, ಕೈಪಿಡಿಗಳನ್ನು ಹಾಗೂ ಪ್ರಕಟಣೆಗಳನ್ನು ಕಾಲಕಾಲಕ್ಕೆ ಪ್ರಕಟಿಸುತ್ತ ಬಂದಿದೆ. ಸಹಕಾರಿಗಳು ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುವುದಕ್ಕಾಗಿ ನ್ಯಾಯಾಲಯಗಳ ನೆರವು ಪಡೆಯುವುದು ಸರ್ವೆಸಾಮಾನ್ಯ. ನೋಂದಣಿ, ಉಪವಿಧಿಗಳ ತಿದ್ದುಪಡಿ, ಸಹಕಾರಿ ಸಂಸ್ಥೆಗಳನ್ನು ಒಂದುಗೂಡಿಸುವುದು, ವಿಭಜಿಸುವುದು, ಚುನಾವಣೆಗೆ ಸಂಬಂಧಿಸಿದ ವಿಷಯಗಳು, ಆಡಳಿತ ಮಂಡಳಿ ರದ್ದುಪಡಿಸುವಿಕೆ, ಆಡಳಿತಾಧಿಕಾರಿಗಳ ನೇಮಕ, ವಿಚಾರಣೆ, ಅದಿಭಾರ ನಡುವಳಿಕೆಗಳು, ದಾವಾ ಪ್ರಕರಣಗಳು ಹಣ ದುರುಪಯೋಗ, ಆದೇಶ ಮತ್ತು ತೀರ್ಪುಗಳನ್ನು ಜಾರಿಮಾಡುವ ವಿಧಾನ ಹಾಗೂ ಸಮಾಪನೆ ಇತ್ಯಾದಿ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಹಲವಾರು ಮಹತ್ವದ ತೀರ್ಪುಗಳಾಗಿವೆ. ಇಷ್ಟೊಂದು ತೀರ್ಪುಗಳಿದ್ದಾಗ್ಯೂ ಸಹ, ಅನೇಕ ಬಾರಿ ಸಹಕಾರ ಸಂಸ್ಥೆಗಳು ಇವುಗಳ ಸರಿಯಾದ ಮಾಹಿತಿಗಳು ದೊರಕದೆ ಆತಂಕದಲ್ಲಿದ್ದು, ಅನಗತ್ಯವಾಗಿ ಕಾನೂನು ಸಲಹೆ ಪಡೆಯುವ ಹಾಗೂ ನ್ಯಾಯಾಲಯಗಳ ಮೊರೆಹೋಗುವುದನ್ನು ಸಂಯುಕ್ತ ಸಹಕಾರಿಯು ಗಮನಿಸಲಾಗಿದೆ. ಈ ತೊಂದರೆಗಳನ್ನು ನಿವಾರಿಸುವುದಕ್ಕಾಗಿಯೇ ಸಂಯುಕ್ತ ಸಹಕಾರಿಯು ಸಹಕಾರ ಕಾಯಿದೆಗಳಿಗೆ ಸಂಬಂಧಪಟ್ಟ ತೀರ್ಪುಗಳ ಕುರಿತ ಪುಸ್ತಕಗಳನ್ನು ಶ್ರೀ ಸಿ ಎನ್ ಪರಶಿವಮೂರ್ತಿಯವರಿಂದ ಪಡೆದು ಪ್ರಕಟಿಸುವ ಕಾರ್ಯವನ್ನು ಮಾಡುತ್ತಲಿದೆ.

ಸಹಕಾರ ಇಲಾಖೆಯ ನಿವೃತ್ತ ಹಿರಿಯ ಅಪರ ನಿಬಂಧಕರಾದ ಶ್ರೀ ಸಿ.ಎನ್.ಪರಶಿವಮೂರ್ತಿಯವರು ಇವುಗಳನ್ನು ಸಂಪಾದಿಸಿ, ತೀರ್ಪುಗಳ ಸಂಕ್ಷಿಪ್ತ ಸಾರಾಂಶವನ್ನು ಸಿದ್ಧಪಡಿಸಿ ಸಂಯುಕ್ತ ಸಹಕಾರಿಯು ಮುದ್ರಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಈ ಮಹತ್ವದ ಕಾರ್ಯವನ್ನು ಮಾಡಿಕೊಟ್ಟ ಅವರಿಗೆ ಕೃತಜ್ಞತೆಗಳು.

ಸಹಕಾರ ಕಾಯಿದೆಗಳಿಗೆ ಸಂಬಂಧಪಟ್ಟ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯಗಳ ತೀರ್ಪಿನ ಸಾರಂಶಗಳ ಪುಸ್ತಿಕೆಯು ಸಹಕಾರಿಗಳಿಗೆ, ಸಹಕಾರಿ ಸಂಸ್ಥೆಗಳಿಗೆ ಅದರಲ್ಲೂ ಪ್ರಮುಖವಾಗಿ ಆಡಳಿತ ಮಂಡಲಿ ಸದಸ್ಯರಿಗೆ ಮಾರ್ಗದರ್ಶಿಯಂತೆ ಅಳವಡಿಸಿಕೊಳ್ಳಲು, ಈ ತೀರ್ಪುಗಳ ಸಂಕ್ಷಿಪ್ತ ಟಿಪ್ಪಣಿ ಅನುಕೂಲವಾಗುತ್ತದೆಂದು ಭಾವಿಸಿದೆ. ಸೌಹಾರ್ದ ಸಹಕಾರಿಗಳಿಗೆ, ಸಹಕಾರಿ ನೇತಾರರಿಗೆ, ವಕೀಲರಿಗೆ, ಇಲಾಖಾಧಿಕಾರಿಗಳಿಗೆ ಅತ್ಯಂತ ಪ್ರಯೋಜನಕಾರಿಯಾಗಬಹುದೆಂದು ಸಂಯುಕ್ತ ಸಹಕಾರಿಯು ಭಾವಿಸಿದೆ. ತಾವುಗಳು ಈ ಸಂಗ್ರಹ ಪುಸ್ತಕವನ್ನು ಓದಿ ಪ್ರಯೋಜನ ಪಡೆದುಕೊಂಡರೆ ಸಂಯುಕ್ತ ಸಹಕಾರಿಯ ಈ ಪ್ರಯತ್ನ ಸಾರ್ಥಕ. ಈ ಪ್ರಕಟಣೆಯ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಾಗೂ ಸಲಹೆಗಳನ್ನು ಸ್ವಾಗತಿಸುತ್ತೇವೆ.

**ಬಿ. ಹೆಚ್. ಕೃಷ್ಣಾರೆಡ್ಡಿ**
**ಅಧ್ಯಕ್ಷರು**

# ಮೊದಲ ಮಾತು



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಬೆಂಗಳೂರು ಇವರು 2015ರಲ್ಲಿ, ವಿವಿಧ ನ್ಯಾಯಾಲಯಗಳು ನೀಡಿದ ತೀರ್ಪುಗಳ ಸಂಕ್ಷಿಪ್ತ ಸಾರಾಂಶವನ್ನು ನನ್ನ ಮೊದಲ ಪುಸ್ತಕ ಪ್ರಕಟಿಸಿದೆ. ಅದಕ್ಕಾಗಿ ಸಂಯುಕ್ತ ಸಹಕಾರಿಗೆ ನನ್ನ ವಂದನೆಗಳು. ಎರಡನೇ ಪ್ರಯತ್ನವಾಗಿ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯ ನೀಡಿದ ತೀರ್ಪುಗಳ, ಸಹಕಾರ ಕಾಯಿದೆ ಬಗ್ಗೆ, ಒಂದೇ ಕಡೆ ಸಿಗದೆ ಇರುವುದರಿಂದ, ಸಂಕ್ಷಿಪ್ತವಾಗಿಯಾದರೂ ಇದು ಲಭ್ಯವಾಗಲಿ ಎಂಬುದೇ ಈ ಪ್ರಯತ್ನ. ಆಂಗ್ಲಬಾಷೆಯಲ್ಲಿ ತೀರ್ಪುಗಳನ್ನು ಸಂಗ್ರಹಿಸಿ, ಸಂಪಾದಿಸಿದ ಪುಸ್ತಕಗಳನ್ನು ಸಂಯುಕ್ತ ಸಹಕಾರಿ ಪ್ರಕಟಿಸುತ್ತಿದೆ. ಆ ತೀರ್ಪುಗಳಲ್ಲಿನ ಸಾರಾಂಶವನ್ನು ಸಂಕ್ಷಿಪ್ತವಾಗಿ ಒಂದೇ ಕಡೆ ಲಭ್ಯವಾದರೆ ಸಹಕಾರಿಗಳಿಗೆ/ಸಹಕಾರ ಸಂಸ್ಥೆಗಳಿಗೆ/ನ್ಯಾಯಾವಾದಿಗಳಿಗೆ ಅನುಕೂಲವಾಗುತ್ತದೆಂದು ಭಾವಿಸಿ ಈ ಪ್ರಯತ್ನ.

ನಾನು ಈ ಪುಸ್ತಕವನ್ನು ತಯಾರಿಸಲು ಹಲವಾರು ತಿಂಗಳುಗಳ ಶ್ರಮದಲ್ಲಿ ನನ್ನ ಹೆಂಡತಿ ಶ್ರೀಮತಿ. ಸರೋಜ.ಪಿ.ಮೂರ್ತಿ ಇವರ ಸಹಕಾರ ಸ್ಮರಿಸಲೇಬೇಕು. ಅದೇ ರೀತಿ ನನ್ನ ಮಕ್ಕಳಾದ ಡಾ. ಸಿ.ಪಿ.ಕಾತ್ಯಾಯಿನಿ, ಡಾ. ಸಿ.ಪಿ.ದಯಾನಂದಮೂರ್ತಿ ಮತ್ತು ಡಾ. ಸಿ.ಪಿ.ನಂದಿನಿ ಇವರ ಕಳಕಳಿಗೆ ನನ್ನ ವಂದನೆ. ಅದೇ ರೀತಿ ಶ್ರೀ ಟಿ.ಪಿ.ಧರ್ಮೇಂದ್ರ, ಶ್ರೀಮತಿ.ಬಿ.ಸೋಮಾಮೂರ್ತಿ ಮತ್ತು ಶ್ರೀ ಜಗದೀಶ್‌ಚಂದ್ರ ಅಳಿಯಂದಿರು ಮತ್ತು ಸೊಸೆಯನ್ನು ನೆನೆಯಬೇಕು. ಮೊಮ್ಮಕ್ಕಳಾದ ಶ್ರೀ ಟಿ.ಡಿ.ಕುಶಲ್, ಶ್ರೀ ಟಿ.ಡಿ.ತೇಜೋವಂತ್ ಮತ್ತು ಶ್ರೀ ದಿವ್ಯಾಂಶರನ್ನು ನೆನೆಸುತ್ತೇನೆ.

ಈ ಪುಸ್ತಕ ಪ್ರಕಟಿಸಲು ಸಂಯುಕ್ತ ಸಹಕಾರಿ ತೆಗೆದುಕೊಂಡ ಕ್ರಮ ಮತ್ತು ಸಹಕಾರ ನೆನೆಯಲೇಬೇಕು. ಪ್ರಮುಖವಾಗಿ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ, ಅಧ್ಯಕ್ಷರು, ಶ್ರೀ ಜಗದೀಶ ಕವಟಗಿಮಠ, ಉಪಾಧ್ಯಕ್ಷರು, ಶ್ರೀ ಗುರುನಾಥ್‌ಜಾಂತೀಕರ್, ಶ್ರೀ ಹೆಚ್.ವಿ.ರಾಜೀವ್ ಮತ್ತು ಶ್ರೀ ಶರಣಗೌಡ. ಜಿ.ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರು ಇವರ ಸಹಕಾರ ಇಲ್ಲದೇ ಈ ಪ್ರಕಟಣೆ ಸಾಧ್ಯವಾಗುತ್ತಿರಲಿಲ್ಲ. ಸಂಯುಕ್ತ ಸಹಕಾರಿಯು ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಈ ಸಂದರ್ಭದಲ್ಲಿ ನೆನೆಸುತ್ತೇನೆ. ಜೆಎಸ್ಎಸ್ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘದ ಕುಮಾರಿ.ಅನಿತ, ಬೆರಳಚ್ಚು ಮಾಡಿಕೊಟ್ಟಿದ್ದಕ್ಕೆ ನನ್ನ ವಂದನೆಗಳು.

ಈ ಪುಸ್ತಕ ಪ್ರಕಟಣೆಯಿಂದ ಸಹಕಾರ ಇಲಾಖೆ ಅಧಿಕಾರಿಗಳಿಗೆ, ಅದರಲ್ಲಿ ದಾವಾ ಮತ್ತು ಅಧಿಭಾರ ಅರ್ಜಿ ತೀರ್ಮಾನ ಮಾಡುವಾಗ, ತುರ್ತಾಗಿ ತೀರ್ಪುಗಳ ಲಭ್ಯತೆ ಇಲ್ಲದೇ ಇದ್ದಾಗ, ಈ ಸಂಕ್ಷಿಪ್ತ ತೀರ್ಪುಗಳು ಸಹಕಾರಿಯಾಗಲೆಂದು ಆಶಿಸುತ್ತೇನೆ.

**–ಸಿ.ಎನ್.ಪರಶಿವಮೂರ್ತಿ**

# <u>ಪರಿವಿಡಿ :–</u>

**ಪುಟ**


| | |
|---|---|
| 1. ದಾವಾ/ಅಧಿಭಾರ ಅರ್ಜಿಗಳ ಬಗ್ಗೆ ತೀರ್ಮಾನಗಳು | 9 |
| 2. ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ ತೀರ್ಮಾನಗಳು | 105 |
| 3. ನೌಕರರ ಸೇವಾ ನಿಯಮಗಳ ಬಗ್ಗೆ ತೀರ್ಮಾನಗಳು | 127 |
| 4. ಆದಾಯ ತೆರಿಗೆಗೆ ಸಂಬಂಧಪಟ್ಟ ತೀರ್ಮಾನಗಳು | 152 |
| 5. ಮಾಹಿತಿ ಹಕ್ಕು ಕಾಯಿದೆ ಬಗ್ಗೆ ತೀರ್ಮಾನಗಳು | 154 |
| 6. ನ್ಯಾಯಾಲಯ ನಿಂದನೆ/ಮಾನ ನಷ್ಟದ ಬಗ್ಗೆ ತೀರ್ಮಾನಗಳು | 155 |
| 7. ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆಗೆ ಸಂಬಂಧಪಟ್ಟ ತೀರ್ಪುಗಳು | 162 |
| 8. ಡಿಕ್ರಿ, ಆದೇಶಗಳು ಮತ್ತು ತೀರ್ಪುಗಳ ಜಾರಿ – ವಸೂಲಾತಿ ಕ್ರಮಗಳ ಬಗ್ಗೆ ತೀರ್ಪುಗಳು | 179 |
| 9. ಲೇಖನಗಳು : | 184 |
| 1) ಅಧಿಭಾರ ಅರ್ಜಿಗಳ ತೀರ್ಮಾನಕ್ಕೆ ಅನುಸರಿಸುವ ನೀತಿಗಳು | |
| 2) ದಾವಾ ಪ್ರಕರಣಗಳ ಇರ್ತ್ಯತಕ್ಕೆ ಅನುಸರಿಸುವ ನೀತಿಗಳು | |
| 3) ವಸೂಲಾತಿಗೆ ಸಂಬಂಧಪಟ್ಟ ನೀತಿಗಳು | |

# ಕಾಯಿದೆಗಳಲ್ಲಿ ಪರಿವಿಡಿಯಲ್ಲಿ ತಿಳಿಸಿದ ವಿಷಯಕ್ಕೆ ಸಂಬಂಧಪಟ್ಟ ಕಲಂಗಳು

1. ಅಧಿಭಾರ ಅರ್ಜಿ/ದಾವಾ ಪಕರಣಕ್ಕೆ ಸಂಬಂಧಪಟ್ಟಂತೆ ಕಾಯಿದೆಯಲ್ಲಿನ ಕಲಂಗಳು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ನಿಯಮ 1960 – (1)ಕಲಂ 69 (2)ಕಲಂ 70 (3)ಕಲಂ 70ಎ (4)ಕಳಂ 71 (5)ಕಲಂ 103 (6)ಕಲಂ 116 (7)ಕಲಂ 117 (8)ಕಲಂ 118 (9)ಕಲಂ 105 (10)ಕಲಂ 107 (11)ನಿಯಮ 31 (12)ನಿಯಮ 32

   ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997 ಮತ್ತು ನಿಯಮ 2004 – (1)ಕಲಂ 39 (2)ಕಲಂ 40 (3)ಕಲಂ 41 (4)ಕಲಂ 42 (5)ಕಲಂ 44 (6)ಕಲಂ 46 (7)ನಿಯಮ 11 (8)ನಿಯಮ 12

2. ಚುನಾವಣೆಗೆ ಸಂಬಂಧಪಟ್ಟ ಕಾಯಿದೆ ಅವಕಾಶಗಳು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ನಿಯಮ 1960 – (1)ಕಲಂ 20 (2)ಕಲಂ 21 (3)ಕಲಂ 28ಎ (4)ಕಲಂ 28ಬಿ (5)ಕಲಂ 29ಸಿ (6)ಕಲಂ 29ಎಫ್ (7)ಕಲಂ 39ಎ (8)ಕಲಂ 39ಎಎ (9)ಕಲಂ 39ಬಿ

   ಕರ್ನಾಟಕ ಸೌಹಾರ್ದ ಸಹಕಾರ ಕಾಯಿದೆ 1997 ಮತ್ತು ನಿಯಮ 2004 – (1)ಕಲಂ 20ಬಿ (2)ಕಲಂ 24 (3)ಕಲಂ 25 (4)ಕಲಂ 26 (5)ಕಲಂ 26ಎ (6)ಕಲಂ 28

3. ಸೇವಾ ನಿಯಮಗಳು – ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು 1960 – (1)ಕಲಂ 70 (2)ಕಲಂ 29ಜಿ (3) ನಿಯಮ 17

   ಕರ್ನಾಟಕ ಸೌಹಾರ್ದ ಸಹಕಾರ ಕಾಯಿದೆ 1997 ಮತ್ತು ನಿಯಮ 2004 – (1)ಕಲಂ 31 (2)ಕಲಂ 61 (3)ಕಲಂ 55 (4)ನಿಯಮ 6ಜೆ (5)ನಿಯಮ 6ಎಲ್

4. ವಸೂಲಾತಿಗೆ ಸಂಬಂಧಪಟ್ಟಂತೆ – ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ನಿಯಮ 1960 (1)ಕಲಂ 101 (2)ಕಲಂ 103

   ಕರ್ನಾಟಕ ಸೌಹಾರ್ದ ಸಹಕಾರ ಕಾಯಿದೆ 1997 ಮತ್ತು ನಿಯಮ 2004 – (1)ಕಲಂ 43 (2)ಕಲಂ 45

# ದಾವಾ/ಅದಿಭಾರ ಅರ್ಜಿಗಳ ಮೇಲೆ ತೀರ್ಮಾನಗಳು

## I. ಕರ್ನಾಟಕ ಉಚ್ಚನ್ಯಾಯಾಲಯದ ತೀರ್ಮಾನಗಳು

1. ಪ್ರಕರಣ ದಾಖಲಿಸಿಕೊಳ್ಳುವ ಪ್ರಾಧಿಕಾರ, ಅರ್ಜಿದಾರರಿಗೆ ಸಾಕಷ್ಟು ಅವಕಾಶ ನೀಡದೇ ತೀರ್ಮಾನಿಸಿದರೆ ಅದು ತಪ್ಪು. ಆರೋಪದಾರರು ಸಾಕಷ್ಟು ಪುರಾವೆಗಳಿದ್ದರೂ ಯಾರ ಮೇಲೆ ಪ್ರಕರಣ ದಾಖಲಾಗಿದೆಯೇ ಅವರಿಗೆ ಅವರನ್ನು ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶಗಳನ್ನು ನೀಡಬೇಕು. ಇಲ್ಲದಿದ್ದರೆ ಅದು ಸ್ವಾಭಾವಿಕ ನ್ಯಾಯ ನೀತಿ ನಿಯಮಕ್ಕೆ ವಿರುದ್ಧ. (2015 Indlaw Kar 757)

2. ಒಂದು ಸಂಘದ ಮುಖ್ಯ ಕಾರ್ಯನಿರ್ವಾಹಕ ಕಲಂ.29 (g) (h) ಮತ್ತು (s) ರನ್ವಯ ಪ್ರಕರಣ ದಾಖಲಿಸಲು, ಸಾಕ್ಷಿ ಮತ್ತು ದಾಖಲೆಗಳನ್ನು ಒದಗಿಸಲು ಅಧಿಕಾರ ನೀಡಲಾಗಿದ್ದು ಅದನ್ನು ಪ್ರಶ್ನಿಸಿ ಪ್ರಕರಣ ದಾಖಲಿಸಿದಾಗ, ಆ ಪ್ರಾಧಿಕಾರ ಮತ್ತು ಮೇಲ್ಮನವಿ ಪ್ರಾಧಿಕಾರ, ಮೂಲ ಆದೇಶ ಊರ್ಜಿತ ಎಂದು ಮತ್ತು ಕಾನೂನಿನಲ್ಲಿ ಸ್ಪಷ್ಟ ಅವಕಾಶ ಇರುವುದನ್ನು ಪ್ರತಿಪಾದಿಸಿರುವುದರಿಂದ ಈ ಪ್ರಕರಣದಲ್ಲಿ ಮಧ್ಯಪ್ರವೇಶ ಅವಶ್ಯಕತೆ ಇಲ್ಲ. (2015 Indlaw Kar 436)

3. ನಿಯಮ 14 al (2)(i)(ii) ರಲ್ಲಿ ಚುನಾವಣಾ ಪ್ರಾಧಿಕಾರ ಚುನಾವಣೆ ನಡೆಸಿದ ನಂತರ ಫಲಿತಾಂಶ ಪ್ರಕಟಿಸಲು ಅವಕಾಶ ಇರುವುದರಿಂದ, ತಕರಾರು ತೆಗೆದ ಯಾವುದೇ ವ್ಯಕ್ತಿಗೆ, ನಿಯಮಗಳಲ್ಲಿ, ಅವಕಾಶ ನೀಡಲು ಯಾವುದೇ ಅವಕಾಶ ಇಲ್ಲವಾದ್ದರಿಂದ, ಅವರ ವಾದವನ್ನು ಕೇಳುವ ಅವಕಾಶವಿಲ್ಲ. ಅಂದರೆ ನಿಯಮದಲ್ಲಿ ಅವಕಾಶ ನೀಡಬೇಕೆಂದು ಇಲ್ಲದಿದ್ದರೆ, ಅಂತಹ ಅವಕಾಶದ ಅವಶ್ಯಕತೆ ಇಲ್ಲ. (2015 Indlaw Kar 1741)

4. ಅರ್ಜಿದಾರರು ಸುಮಾರು 17 ವರ್ಷಗಳ ಕಾಲ ಅಧ್ಯಕ್ಷರಾಗಿದ್ದು, ಅವರ ಅವಧಿಯಲ್ಲಿ ನೇಮಕವಾದ ನೌಕರರೇ ಸೇವೆಯಲ್ಲಿ ಇರುವುದರಿಂದ ಮತ್ತು ಅಧ್ಯಕ್ಷರ ಪ್ರಭಾವ ಎಲ್ಲಾ ನೌಕರರನ್ನು ನಿಯಂತ್ರಿಸಬಹುದಾಗಿದ್ದು, ಅದರಲ್ಲಿ ಇನ್ನು ದಾಖಲೆ ಮತ್ತು ಸಾಕ್ಷ್ಯಗಳನ್ನು ಸಂಗ್ರಹಿಸುತ್ತಿದ್ದು ಈಗ ಜಮೀನು ನೀಡುವುದು ಸೂಕ್ತವಲ್ಲ. ಆರೋಪದಲ್ಲಿ ಸುವಾರು ರೂ.63 ಕೋಟಿ ದುರುಪಯೋಗವಾಗಿರುವಂತೆ ದಾಖಲೆಗಳನ್ನು ಪರಿಶೀಲಿಸುತ್ತಿರುವುದರಿಂದ ಜಾಮೀನು ನಿರಾಕರಿಸಿದೆ. (2014 Indlaw Kar 1646)

5. ಮೀನುಗಾರರ ಸಂಘದ ಕಾರ್ಯಚರಣೆ ಸಂದರ್ಭದಲ್ಲಿ ಶರತ್ತುಗಳನ್ವಯ ಮೀನುಗಾರನು ಹಿಡಿದ ಶೇ.50% ರಷ್ಟನ್ನು ಸಂಘಕ್ಕೂ, ಉಳಿದದ್ದನ್ನು ತನ್ನಲ್ಲಿಯೇ ಉಪಯೋಗಿಸಲು ಇರುವ ಅವಕಾಶದಿಂದ ಆಗುತ್ತಿರುವ ತೊಡಕುಗಳಿಗೆ ಪರಿಹಾರ ಕೇಳಲು ಸಲ್ಲಿಸಿದ ರಿಟ್ ಅರ್ಜಿ ಇದರಲ್ಲಿ ಶರತ್ತುಗಳನ್ನು ನಿಗದಿ ಪಡಿಸಿರುವುದು ಸರ್ಕಾರ, ಸರ್ಕಾರ ಯಾವಾಗ ಬೇಕಾದರೂ ಮಾರ್ಪಡಿಸಬಹುದು. ನ್ಯಾಯಾಲಯ ಈ ಪರಿಹಾರ ನೀಡಲಾಗದು. (2014 Indlaw Kar 1672)

6. ದಾವಾ ಪ್ರಕರಣದಲ್ಲಿ ದಾಖಲೆ/ಸಾಕ್ಷಿಗಳನ್ನು ಪೂರ್ಣವಾಗಿ ಪರಿಶೀಲಿಸಿದ ನಂತರ, ನ್ಯಾಯಾಧಿಕರಣ ಆದೇಶಿಸಿರುವುದಕ್ಕೆ ಮಧ್ಯಪ್ರವೇಶ ಅನಾವಶ್ಯಕ. ಪ್ರಕರಣ ದಾಖಲಿಸಿದಲ್ಲಿ 70 ದಿವಸಗಳ ವಿಳಂಬವಾಗಿದ್ದು ಇದನ್ನು ಉಪನಿಬಂಧಕರು ಪ್ರಕರಣ ವಿಚಾರಣೆ ಮಾಡಿರುವುದು ತಪ್ಪು. ಆದ್ದರಿಂದ ನ್ಯಾಯಾಧಿಕರಣ ಆದೇಶಕ್ಕೆ ಮಧ್ಯಪ್ರವೇಶ ಮಾಡುವ ಅವಶ್ಯಕತೆ ಇಲ್ಲ. (2014 Indlaw Kar 1960

2014 (5) KLJ 11)

7. ಕಲಂ 70 ಮತ್ತು ಕಲಂ 118 ಕ್ಕೆ ತಂದ ತಿದ್ದುಪಡಿಗಳ ಆಧಾರದ ಮೇಲೆ ಕಾರ್ಮಿಕ ನ್ಯಾಯಾಲಯಕ್ಕೆ ಅಧಿಕಾರ ಕತ್ತಿ ಹಾಕಿದೆ. ಇದರ ಮೋರೆಗೆ ಸಂಘವು ಲಾಭದ ದೃಷ್ಟಿಯಿಂದ ಆಸ್ಪತ್ರೆ ನಡೆಸುತ್ತಿಲ್ಲ. ಧಾನಧರ್ಮದಿಂದ ನಡೆಸಿಕೊಂಡು ಹೊಗುತ್ತಿರುವ ಆಸ್ಪತ್ರೆಗೆ ದಂಡ ವಿಧಿಸುವ ಅವಕಾಶ ಇರಬಾರದು. ಆದ್ದರಿಂದ ನ್ಯಾಯಾಲಯ ಬಾಕಿ ಇರುವ ಹಣದ ಐದು ಪಟ್ಟಿ ದಂಡ ವಿಧಿಸಿದ್ದನ್ನು ಅಸಿಂದು ಎಂದು ತೀರ್ಮಾನಿಸಿ ಬಾಕಿ ಇರುವ ಹಣ ಪಾವತಿಸಲು ಆದೇಶಿಸಿದೆ. (2014 Indlaw Kar 2069 2014 (143) FLR 394)

8. ಸಂಘವು ಸದಸ್ಯರಿಗೆ ಸಾಲ ನೀಡುವಾಗ ಬಡ್ಡಿ ದರದ ಬಗ್ಗೆ ಒಪ್ಪಂದವಾಗಿದ್ದು, ಆ ಬಡ್ಡಿ ದರವನ್ನು ಸಿ.ಪಿ.ಸಿ ಕಲಂ.34 ರನ್ವಯ ಇಳಿಸಲು ಸಾಧ್ಯವಿಲ್ಲ. ಮದ್ಯಸ್ಥಿಗಾರರು ಬಡ್ಡಿ ಇಳಿಸುವ ಆದೇಶ ನೀಡಲಾಗದು ಮತ್ತು ಒಪ್ಪಂದದಂತೆ ಬಡ್ಡಿ ದರ ವಸೂಲಿ ಮಾಡಲು ಸಂಘಕ್ಕೆ ಅಧಿಕಾರ ಇದೆ ಸಿ.ಪಿ.ಸಿ ಕಲಂ.34 ಅನ್ವಯವಾಗುವುದಿಲ್ಲ. (2014 Indlaw Kar 1268 AIR 2014 Kar 88 2014 (6) KLJ 593)

9. ಒಬ್ಬ ನೌಕರನ ಮೇಲೆ ಶಿಸ್ತು ಕ್ರಮ ಜರುಗಿಸಿದಾಗ ಅದನ್ನು ಕಲಂ 70 ರನ್ವಯ ನೀಡಲು ಅವಕಾಶ ಇರುವುದರಿಂದ ಸಂಬಂಧಪಟ್ಟ ನೌಕರ ಆ ಪರಿಹಾರವನ್ನು ನಿಬಂಧಕರಿಂದ ಪಡೆಯಬಹುದು. ನಿಬಂಧಕರು ತೀರ್ಮಾನ ತೆಗೆದುಕೊಳ್ಳುವಾಗ ಸ್ವಾಭಾವಿಕ ನ್ಯಾಯಾ/ನೀತಿ ಅನ್ವಯ ಅವಕಾಶ ಕಲ್ಪಿಸಬೇಕು. ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ಅದಕ್ಕೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆ. ಸ್ವಾಭಾವಿಕ ನ್ಯಾಯ/ನೀತಿ ಅನ್ವಯ ಅವಕಾಶ ನೀಡಲಾಗಿದೆಯೇ ಎಂಬುದನ್ನು ನಿಬಂಧಕರೇ ಪರಿಶೀಲಿಸಬಹುದಾಗಿದೆ. ಅಂದರೆ ಸಹಕಾರ ಕಾಯಿದೆಯಲ್ಲಿ ಪರಿಹಾರ ಪಡೆಯಲು ಅವಕಾಶ ಇರುವುದರಿಂದ, ಈ ನ್ಯಾಯಾಲಯ ರಿಟ್ ಅರ್ಜಿ ಮೂಲಕ ಪರಿಹಾರ ನೀಡಲಾಗದು. (2014 Indlaw Kar 1995 2014 (5) KLJ 430)

10. ನಿವೃತ್ತಿ ಸಮಯದಲ್ಲಿ ನೀಡಬೇಕಾಗಿದ್ದ ಆರ್ಥಿಕ ಸೌಲಭ್ಯಗಳ ಬಗ್ಗೆ ಪರಿಹಾರ ನೀಡಲು ನಿಬಂಧಕರಿಗೆ ಅಧಿಕಾರ ಇದೆ. ಎರಡೂ ಪಕ್ಷದಾರರು ಒಪ್ಪಂದ ಮಾಡಿಕೊಂಡು ಪರಿಹಾರ ಪಡೆಯಲು ಬಯಸಿದರು, ಅದನ್ನು ನಿಬಂಧಕರು ಒಪ್ಪಿ ದಾವಾ ವಜಾ ಮಾಡಬಹುದು. ಮಧ್ಯಸ್ತಿಗಾರನು ಒಪ್ಪಂದದ ಮೇಲೆ ಪರಿಹಾರ ಪಡೆದ ನಂತರ, ಅಂದರೆ ತನಗೆ ಬರಬೇಕಾದ ಪೂರ್ತಾ ಹಣ ಬಂದಿದೆ ಎಂದು ಬರೆದುಕೊಟ್ಟ ನಂತರ, ಮೇಲ್ಮನವಿ ಪ್ರಾಧಿಕರಣ ಮೇಲ್ಮನವಿ ವಜಾ ಮಾಡಿರುವುದಕ್ಕೆ ಮಧ್ಯಪ್ರವೇಶ ಮಾಡುವ ಅವಶ್ಯಕತೆ ಇಲ್ಲ. ಮೇಲ್ಮನವಿ ಪ್ರಾಧಿಕರಣ ಯಾವುದೇ ತಪ್ಪು ಮಾಡಿಲ್ಲ. (2014 Indlaw Kar 1844 2014 (3) KLJ 222)

11. ಹೆಚ್ಚುವರಿ ಸಾಕ್ಷಿ/ದಾಖಲೆಗಳನ್ನು ಪ್ರಕರಣದ ಮುಕ್ತಾಯದ ಸಮಯದಲ್ಲಿ ಸಲ್ಲಿಸಿದರೆ ಅದನ್ನು ಸ್ವೀಕರಿಸಬೇಕೇ ಎಂಬುದನ್ನು ತೀರ್ಮಾನಿಸಬೇಕು. ಈ ರೀತಿ ವಿಳಂಬ ಮಾಡಿ ಸಲ್ಲಿಸಿದ ದಾಖಲೆ/ಸಾಕ್ಷಿ ವಿಳಂಬ ನೀತಿ ಅನುಸರಿಸಲು ಇರಬಹುದು ಅಥವಾ ತಪ್ಪು ದಾರಿಗೆ ಎಳೆಯಲಿರಬಹುದು, ನಿವೇಶನದ ಫೋಟೋ ಸಾಕ್ಷಿ ಯಾಗುವುದಿಲ್ಲ. ಕಂದಾಯ ಇಲಾಖೆಯಿಂದ ಲಭ್ಯವಾಗುವ ಆರ್.ಟಿ.ಸಿ ಖಾತೆ ಮತ್ತಿತರ ದಾಖಲೆ ಇಲ್ಲದೆ ಫೋಟೋ ಆಧಾರವಾಗಲಾರದು. ಅಂತಹ ಸಂದರ್ಭದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಆಸ್ತಿ ದೃಢೀಕರಿಸಲು ಪ್ರತ್ಯೇಕ ಪ್ರಕರಣ ದಾಖಲಿಸಬೇಕು. ಅಂದರೆ ಮಾರಾಟವಾಗಿರುವ ಆಸ್ತಿ ಬಗ್ಗೆ ಪರಿಹಾರವನ್ನು ಸಿವಿಲ್

ನ್ಯಾಯಾಲಯದಲ್ಲಿ ಪಡೆಯುಬಹುದು. (2014 Indlaw Kar 1221)

12. ಕರ್ನಾಟಕ ಮೇಲ್ಮನವಿ ಪ್ರಾಧಿಕರಣ ಕಲಂ 103 ರಲ್ಲಿ ಜಪ್ತಿ ಮಾಡಿದ ಆಸ್ತಿ ಕಲಂ 69 ಮತ್ತು 71 ರಲ್ಲಿ ಇದ್ದಾಗ ಮಾತ್ರ ಅನ್ವಯವಾಗುತ್ತಿದೆ ಎಂದು ತೀರ್ಮಾನಿಸಿದೆ. ಕಲಂ 103ರ ಆದೇಶ ಮಾಡುವಾಗ ಕಲಂ 69/70 ರಲ್ಲಿ ಬಾಕಿ ಇದ್ದಾಗ. ಆದರೆ ಜಪ್ತಿ ಆದೇಶ ತೀರ್ಪಿನ ನಂತರ ಜಾರಿ ಮಾಡುವ ಆದೇಶಗಳಿಗೆ ಕಲಂ 105 (1) ರಲ್ಲಿ ಪರಿಹಾರ ಇಲ್ಲ. ಮೇಲ್ಮನವಿ ಪ್ರಾಧಿಕಾರ ನೀಡಿದ ಆದೇಶ ಕಾನೂನನ್ನು ಸಮರ್ಪಕವಾಗಿ ಆರ್ಥ್ಯಸಿ ಮಾಡಿದ್ದಲ್ಲಿ. ಆದ್ದರಿಂದ ನ್ಯಾಯಾಧಿಕಾರಣದ ತೀರ್ಪು ಊರ್ಜಿತವಲ್ಲ. (2014 Indlaw Kar 1737 2014 (3) KLJ 641)

13. ಮಧ್ಯಮ ವರ್ಗದ ಸಂಘಗಳ ಚುನಾವಣೆ ಯಾದ 30 ದಿವಸಗಳ ನಂತರ ರಾಜ್ಯ ಸಂಸ್ಥೆಯ ಚುನಾವಣೆ ನಡೆಯಬೇಕಾಗಿರುವುದರಿಂದ, ಮಾಧ್ಯಮಿಕ ವರ್ಗದ ಚುನಾವಣೆ ನಡೆಯಬೇಕು. (2014 Indlaw Kar 1436 2014 (4) KLJ 242)

14. ಒಕ್ಕೂಟ ಸಾಕ್ಷಿಗಳನ್ನು ನೀಡದೇ ಇದ್ದರೂ, ಇನ್ನಿತರರು ಸಾಕ್ಷಿಗಳು ಮತ್ತು ದಾಖಲೆಗಳ ಆಧಾರದ ಮೇಲೆ, ಮತ್ತು ಆರೋಪಿಗಳು ಒಪ್ಪಿಕೊಂಡಿರುವುದರಿಂದ, ಆರೋಪಿಗಳು ಸಾಬೀತಾಗಿದೆ ಎಂದು ವರದಿ ಆಧಾರದ ಮೇಲೆ ಒಕ್ಕೂಟ ಕಾರಣಕೇಳುವ ನೋಟೀಸ್ ಜಾರಿ ಮಾಡಿ ನೌಕರರನ್ನು ವಜಾಗೊಳಿಸಿತು. ಸಾಕ್ಷಿಗಳ ಹೇಳಿಕೆಗಳನ್ನು ಪಾಟೀ ಸವಾಲು ಮಾಡಿಲ್ಲ ಮತ್ತು ಆ ಹೇಳಿಕೆಗಳನ್ನು ಪ್ರಶ್ನಿಸಿಲ್ಲ. ಒಕ್ಕೂಟ ತನ್ನ ಕಾರ್ಯ ಚಟುವಟಿಕೆಗಳನ್ನು ಮುಕ್ತಿಯಗೊಳಿಸಿಲ್ಲ/ಮುಚ್ಚಿಲ್ಲ. ಆದ್ದರಿಂದ ನ್ಯಾಯಾಧಿಕರಣ ದಾಖಲೆಗಳನ್ನು ಪರಿಶೀಲಿಸಿ ಆದೇಶಿಸಿದೆ. ಆದ್ದರಿಂದ ಅದನ್ನು ಮರು ಪರಿಶೀಲಿಸುವ ಅವಶ್ಯಕತೆ ಇಲ್ಲ. ಒಕ್ಕೂಟ ಸಲ್ಲಿಸಿದ ಈ ರಿಟ್ ಅರ್ಜಿಯನ್ನು ತಿರಸ್ಕರಿಸಿದೆ. (2014 Indlaw Kar 1769 2014 (4) KLJ 35)

15. ಕಾನೂನಿನಲ್ಲಿ ಪರಿಹಾರ ಕಂಡುಕೊಳ್ಳಲು ಅವಕಾಶ ಇದ್ದಾಗ, ಉಚ್ಚನ್ಯಾಯಾಲಯ ಸಾಮಾನ್ಯವಾಗಿ ಮಧ್ಯಪ್ರವೇಶ ಮಾಡಬಾರದು. ಇದಕ್ಕೆ (2004) 4 SCC 268/2004 Indlaw SC 179) ಅನ್ವಯಿಸಲಾಗಿದೆ. (2014 Indlaw Kar 1836 2014 (3) KLJ 134)

16. ಅಂತರಿಕ ಅರ್ಜಿ ಆಧಾರದ ಮೇಲೆ ವಸುಲಾತಿಗೆ ತಡೆಆಜ್ಞೆ ನೀಡಿದ್ದು, ಇದನ್ನು ವಿಚಾರಣೆಗಾಗಿ ದಿನಾಂಕ ನಿಗದಿ ಪಡಿಸಿರುವುದರಿಂದ, ಈ ನ್ಯಾಯಾಲಯ ಈ ಸ್ಥಿತಿಯಲ್ಲಿ ಮಧ್ಯಪ್ರವೇಶಿಸುವ ಅವಶ್ಯಕತೆ ಇಲ್ಲ. ಅದರಂತೆ ನ್ಯಾಯಾಲಯಕ್ಕೆ 2 ತಿಂಗಳಲ್ಲಿ ತೀರ್ಮಾನತೆಗೆದುಕೊಳ್ಳಲು ನಿರ್ದೇಶಿಸಲಾಯಿತು. (2014 Indlaw Kar 1869 2014 (3) KLJ 327)

17. ಅರ್ಜಿದಾರರು ತಮ್ಮ ಅಧಿಕಾರವಧಿ ಮುಕ್ತಾಯವಾಗುವ ದಿನಾಂಕ ಸ್ಪಷ್ಟವಾಗಿ ತಿಳಿದಿತ್ತು. ಈ ಅವಧಿಯನ್ನು ವಿಸ್ತರಿಸಿದ ತಿದ್ದುಪಡಿ ಅರ್ಜಿದಾರರು ತಮಗೆ ಅನ್ವಯ ಮಾಡಲು ಬರುವುದಿಲ್ಲ. ಇದರಲ್ಲಿ ಅರ್ಜಿದಾರರು ಪರಿಹಾರಕೊಳ್ಳಲು ಅವಕಾಶ ಇರುವುದಿಲ್ಲ. (2014 Indlaw Kar 1601)

18. ಒಂದು ಪ್ರಕರಣದಲ್ಲಿ ಅಂತರಿಕ ಪರಿಹಾರ ಮತ್ತು ಮುಖ್ಯ ಪ್ರಕರಣದ ಪರಿಹಾರ ಒಂದೇ ಆಗಿರುವುದರಿಂದ, ಆಂತರಿಕ ಅರ್ಜಿಗೆ ಪರಿಹಾರ ನೀಡದೆ ಇರುವುದು ಸರಿಯಾದ ಕ್ರಮ (ಖಂಡಿಕೆ 5) (2013 Indlaw Kar 1736)

19. ಆಡಳಿತಾಧಿಕಾರಿ, ಹೊಸ ಆಡಳಿತ ಮಂಡಳಿ ಚುನಾವಣೆ ನಡೆಸಿ ದಿನಾಂಕ 01.09.2013 ಮಂಡಳಿ

ರಚನೆಯಾಗಿದೆ. ಅದಾದ ನಂತರ ಸುತ್ತೋಲೆಯಲ್ಲಿ ಸಂಘದ ಸಾಮಾನ್ಯ ಸಭೆಯನ್ನು 30.09.2015 ರೊಳಗೆ ನಡೆಸಲು ಸೂಚನೆ ಬಂದಾಗ, ಅದರ ಆಧಾರದ ಮೇಲೆ ದಿನಾಂಕ 18.09.2013 ರಂದು ಅಧಿಕಾರ ಗ್ರಹಣ ಮಾಡಿದ ಮಂಡಳಿ, ಶ್ರೀ ರಾಮಚಂದ್ರಪ್ಪ ಎಂಬುವರ ಅಮಾನತ್ತನ್ನು ರದ್ದುಗೊಳಿಸಿ 21.09.2013 ರಂದು ತುರ್ತು ಸಭೆ ನಡೆಸಲು ತೀರ್ಮಾನಿಸಿತು. ಆ ಸಭೆಯಲ್ಲಿ 15 ದಿವಸಗಳ ನೋಟೀಸ್ ನೀಡಲು ಸಾಧ್ಯವಿಲ್ಲವಾದ್ದರಿಂದ, ಇಲಾಖೆಗೆ ಸಭೆ ನಡೆಸಲು ಕಾಲಾವಕಾಶಕೇಳಲು ತೀರ್ಮಾನಿಸಿ ವಿನಂತಿಸಲಾಯಿತು. ಆದರೆ ಕಾನೂನಿನಲ್ಲಿ ಸೆಪ್ಟೆಂಬರ್ ಮೂವತ್ತರೊಳಗೆ ಮಹಾಸಭೆ ನಡೆಸಿಲ್ಲವೆಂದು, ನಿರ್ದೇಶಕರನ್ನು ಅನರ್ಹತೆಗೊಳಿಸಿ, ಆಡಳಿತಾಧಿಕಾರಿಯನ್ನು ನೇಮಿಸಲಾಯಿತು. ಇದನ್ನು ಪ್ರಶ್ನಿಸಿ ಅಂತರಿಕ ಅರ್ಜಿ ಮತ್ತು ಮೂಲ ದಾವಾ ಪರಿಹಾರ ಒಂದೇ ಇದ್ದರೆ, ಅಂತರಿಕ ಪರಿಹಾರ ನೀಡಲಾಗದು ಎಂದು ತೀರ್ಮಾನಸರಿಯಾಗಿದೆ. ಎರಡೂ ಪರಿಹಾರಗಳು ಒಂದೇ ಇದ್ದಾಗ ಅಂತರಿಕ ಪರಿಹಾರ ನೀಡಲಾಗದು. (2013 Indlaw Kar 1736)

20. ಸಾಲ ಬಾಕಿ (ರೂ.97,239.00) ಉಳಿಸಿಕೊಂಡಿದ್ದ ಸಂದರ್ಭದಲ್ಲಿ ಬ್ಯಾಂಕ್ ಮರುಪಾವತಿ ಮಾಡದಿದ್ದರೆ, ಅವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು ಎಂದು ನೋಟೀಸ್‌ಕೊಟ್ಟಾಗ, (ಸೆಕ್ಯೂರೈಟೆಸೇಷನ್ ಕಾಯಿದೆಯಡಿ) ರಿಟ್ ಅರ್ಜಿ ಸಲ್ಲಿಸಿದ್ದಕ್ಕೆ, ರಿಟ್ ಮೂಲಕ ಪರಿಹಾರ ಕೇಳುವ ಬದಲು, ಪರಿಹಾರವನ್ನು ಬ್ಯಾಂಕಿಗೆ ಮನವಿ ಸಲ್ಲಿಸಿಕೊಳ್ಳಲು ಅವಕಾಶ ಇದ್ದು, ಇದನ್ನು ಉಪಯೋಗಿಸಿಕೊಂಡಿಲ್ಲ. ಇಂತಹ ಪರಿಸ್ಥಿತಿಯಲ್ಲಿ ರಿಟ್ ಮೂಲಕ ಪರಿಹಾರ ನೀಡಲಾಗದು. (2013 Indlaw Kar 2598, 2014 (2) BC 625, 2014 (2) DRTC 243, 2014 (1) KLJ 571)

21. ಆರ್ಥಿಕವಾಗಿ ಹಿಂದುಳಿದ ವ್ಯಕ್ತಿಗಳಿಗೆ ಮೀಸಲಾದ ನಿವೇಶನವನ್ನು ಅದೇ ವರ್ಗದ ಸದಸ್ಯರಿಗೆ ನೀಡಬೇಕು. ನಿಯಮದಲ್ಲಿ ರೂ.11,800/– ಕ್ಕಿಂತ ಕಡಿಮೆ ಆದಾಯ ಇರುವ ವ್ಯಕ್ತಿಗಳಿಗೆ ನೀಡಬೇಕೆಂದು ನಿಗದಿ ಪಡಿಸಿದಾಗ, ಈ ಆದಾಯಕ್ಕಿಂತ ಹೆಚ್ಚಿಗೆ ಆದಾಯದ ವ್ಯಕ್ತಿಗಳಿಗೆ ನೀಡತಕ್ಕದ್ದಲ್ಲ. ಆದಾಯ ಮಿತಿ ಲೆಕ್ಕಹಾಕುವಾಗ, ನೌಕರನಲ್ಲಿ ಎಂಬ ಕಾರಣ ಮತ್ತು ವಾರ್ಷಿಕ ಆದಾಯ ರು.11,800/–ಕ್ಕೆ ಮೀರಿಲ್ಲ ಎಂದು ತೀರ್ಮಾನಿಸುವಾಗ ಗಂಡ/ಹೆಂಡತಿ ವಾರ್ಷಿಕ ಆದಾಯ ತೆಗೆದು ಕೊಂಡಾಗ, ಅಂತಹ ವ್ಯಕ್ತಿ ಆರ್ಥಿಕವಾಗಿ ಹಿಂದುಳಿದ ಗುಂಪಿಗೆ ಬರುವುದಿಲ್ಲ. (2013 Indlaw Kar 1927)

22. ಸರ್ಕಾರ ಕಲಂ 121 ನ್ನು ಉಪಯೋಗಿಸಿ, ಕಲಂ.20 (2)(b)(iv)(a) ಮತ್ತು (D) ಗೆ ದಿನಾಂಕ 31.12.2013 ರವರೆಗೆ ವಿನಾಯ್ತಿ ನೀಡಿದ್ದನ್ನು ಪ್ರಶ್ನಿಸಿ, ಕೃಷಿ ಪತ್ತಿನ ವ್ಯವಸ್ಥೆ ಕಲಂ.98–Y ನಲ್ಲಿ ಬರುವ ಸಹಕಾರ ಸಂಘಗಳಿಗೆ ಅನ್ವಯವಾಗುವುದ್ದಿಲವೆಂದು ಪ್ರಶ್ನಿಸಿದಾಗ, ಯಾವ ಸಹಕಾರ ಸಂಘಗಳು ವಸೂಲಾತಿಯಲ್ಲಿ ನಿಗದಿ ಪಡಿಸಿರುವ ಶರತ್ತುಗಳನ್ನು ಪೂರೈಸಿದಾಗ, ಅಂದರೆ ಸರ್ಕಾರ ಸಾಲ ಮನ್ನ ಮಾಡಿದ ಹಣವೂ ಸೇರಿ, ಹೊಸದಾಗಿ ಮತದಾರರ ಪಟ್ಟಿಯನ್ನು ತಯಾರಿಸಿ ಮಾಡಿದ ಚುನಾವಣೆಗೆ ಮಧ್ಯಪ್ರವೇಶ ಅವಶ್ಯಕವಿಲ್ಲ. ಕಲಂ.98–Y ಸಂಘಗಳಿಗೆ ಸರ್ಕಾರದ ಆದೇಶ ಕಾನೂನು ಬಾಹಿರ. (2013 Indlaw Kar 1762 2014 (2) KLJ 361)

23. ಕಲಂ 70 ರಲ್ಲಿ ದಾವಾ ದಾಖಲಿಸಿ ಡಿಕ್ರಿ ಪಡೆದು ನಂತರ ಕರ್ನಾಟಕ ಮೇಲ್ಮನವಿ ಪ್ರಕರಣದಲ್ಲಿ ಮೇಲ್ಮನವಿಸಲ್ಲಿಸಿ ಪುನಃ ಮರು ವಿಚಾರಣೆಗೆ ಆದೇಶಿಸಿದ ನಂತರ, ಬ್ಯಾಂಕ್ ಸೆಕ್ಯೂರೈಟೆಸೇಷನ್ ಕಾಯಿದೆಯಲ್ಲಿ ಅಡಮಾನ ಮಾಡಿದ ಆಸ್ತಿಯನ್ನು ಹರಾಜು ಹಾಕಲು ತೀರ್ಮಾನಿಸಿ 26.03.2003 ರಂದು ಹರಾಜು ಮಾಡಲಾಯಿತು. ಇದನ್ನು ಉಚ್ಚನ್ಯಾಯಾಲಯದಲ್ಲಿ (11075/2006) ರಲ್ಲಿ

ಪ್ರಶ್ನಿಸಿದಾಗ ಅದನ್ನು ವಜಾ ಮಾಡಲಾಯಿತು. ಉಪನಿಬಂಧಕರು ಮರು ವಿಚಾರಣೆ ಮಾಡುವಾಗ, ಸಾಲ ಬಾಕಿ, ಸೆಕ್ಯೂರೈಟೇಸೇಷನ್ ಕಾಯಿದೆಯಡಿ ಆಸ್ತಿ ಮಾರಾಟ ಮಾಡಿ ಸಾಲಕ್ಕೆ ಜಮಾ ಮಾಡಿಕೊಂಡಿದ್ದ ಸಾಲ ಬಾಕಿ ಇಲ್ಲದೇ ಇರುವುದರಿಂದ ಡಿಕ್ರಿ ನೀಡುವ ಅವಶ್ಯಕತೆ ಇಲ್ಲವೆಂದು ಆದೇಶಿಸಿದರು. ಇದನ್ನು ನ್ಯಾಯಾಧಿಕರಣದ ಮುಂದೆ ಮೇಲ್ಮನವಿಸಲ್ಲಿಸಿದಾಗ, ಆ ಮೇಲ್ಮನವಿಯನ್ನು ತಿರಸ್ಕರಿಸಲಾಯಿತು. ಈ ಆದೇಶ ಮಾಡುವಾಗ ನ್ಯಾಯಾಧಿಕರಣದ ಆದೇಶ ಮಾಡಿದ ಏಕ ಸದಸ್ಯರ ಅಧಿಕಾರ ಇಲ್ಲ ಎಂದು, ದ್ವಿಸದಸ್ಯ ಪೀಠ ಮಾತ್ರ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವಿದೆಯೇ ಹೊರತು ಏಕ ಸದಸ್ಯ ಪೀಠವಲ್ಲ ಎಂದು ವಜಾ ಮಾಡಿದ ಆದೇಶವನ್ನು ಕಿತ್ತು ಹಾಕಿ ಮರು ವಿಚಾರಣೆಗೆ ಆದೇಶಿಸಿತು. (2013 Indlaw Kar 1780 2013 (6) KLJ 395)

24. ಬ್ಯಾಂಕ್ ಅಧಿಕಾರ ಇರಲಾರದೆ, ನಿವೃತ್ತಿ ಸಮಯದಲ್ಲಿ ಕೊಡಬೇಕಾದ ರೂ.1,07,000/– ತಡೆ ಹಿಡಿದಿರುವುದು ತಪ್ಪು ಎಂದು ಅರ್ಜಿ ಸಲ್ಲಿಸಿದಾಗ, ಅರ್ಜಿದಾರರು ನೇರವಾಗಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮೇಲ್ಮನವಿಸಲ್ಲಿಸಿ ಪರಿಹಾರ ಕೇಳುವ ಬದಲು, ನೇರವಾಗಿ ರಿಟ್ ಅರ್ಜಿಯಲ್ಲಿ ಪರಿಹಾರ ನೀಡಲಾಗದು. (2013 Indlaw Kar 1295)

25. ಆಡಳಿತಾಧಿಕಾರಿ ನೇಮಿಸಿದಾಗ, ಸಂಘವನ್ನು ನಡೆಸಿಕೊಂಡು ಹೋಗಲು ಅವಶ್ಯಕವಾದ ಸಂಖ್ಯೆಯ ನಿರ್ದೇಶಕರು ಆಯ್ಕೆ ಯಾಗದ ಕಾರಣ ನೇಮಿಸಲಾಗಿತ್ತು. ಆದರೆ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ನಿರ್ದೇಶಕರನ್ನು ತೆಗೆದುಹಾಕಿಲ್ಲ. ಬಹು ಸಂಖ್ಯೆಯ ನಿರ್ದೇಶಕರು ಆಯ್ಕೆಯಾಗಿಲ್ಲವೆಂದು, ಸಭೆ ನಡೆಸಲು ಕೋರಂ ಇಲ್ಲದೆ ಇರುವುದರಿಂದ ಆಡಳಿತಾಧಿಕಾರಿ ನೇಮಿಸಿದ್ದು, ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳ, ಅವರಿಂದ ಯಾವುದೇ ತಪ್ಪು ಇಲ್ಲದ್ದರಿಂದ ಅವರನ್ನು ನಿರ್ದೇಶಕತನ ಕಳೆದುಕೊಳ್ಳುತ್ತಾರೆಂದು ಅರ್ಥೈಸುವುದು ಸರಿಯಲ್ಲ ಆದ್ದರಿಂದ ಆಡಳಿತಾಧಿಕಾರಿ, ಆಯ್ಕೆಯಾದ ನಿರ್ದೇಶಕರನ್ನು ಹೊರತು ಪಡಿಸಿ, ಉಳಿದ ಸ್ಥಾನಗಳಿಗೆ ಮಾತ್ರ ಚುನಾವಣೆ ನಡೆಸತಕ್ಕದ್ದು. (2013 Indlaw Kar 1933)

26. ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗಿ (08.08.2013) ರಿಟ್ ಅರ್ಜಿಯನ್ನು ದಿನಾಂಕ 20.08.2013ಕ್ಕೆ ಸಲ್ಲಿಸಲಾಗದೆ. ಚುನಾವಣೆಯನ್ನು ದಿನಾಂಕ 01.09.2013ಕ್ಕೆ ನಿಗದಿ ಪಡಿಸಿದ್ದು, ಪರಿಹಾರವನ್ನು ಕಲಂ 70ರಲ್ಲಿ ಪಡೆಯಲು ಅವಕಾಶ ಇರುವುದರಿಂದ, ರಿಟ್ ಅರ್ಜಿ ಊರ್ಜಿತವಲ್ಲ. (2013 Indlaw Kar 1197)

27. ಅರ್ಜಿದಾರರು ಕರ್ನಾಟಕ ಮೇಲ್ಮನವಿ ಪ್ರಾಧಿಕರಣದ ಮುಂದೆ ಮೇಲ್ಮನವಿಸಲ್ಲಿಸಿ, ತಡೆಯಾಜ್ಞೆ ನೀಡಲು ಮಾಡಿದ ಮನವಿಗೆ ಯಾವುದೇ ಆದೇಶವನ್ನು ಮಾಡದೆ, ಆದೇಶ ಮಾಡಿದರೆ ಅದು ಮೂಲ ಪ್ರಕರಣದ ಮೇಲೆ ಅಭಿಪ್ರಾಯ ವ್ಯಕ್ತ ಪಡಿಸಬೇಕಾಗುತ್ತದೆಂದು, ಅಭಿಪ್ರಾಯಕ್ಕೆ ಬಂದು ಆದೇಶ ಮಾಡಿಲ್ಲ. ಆದರೆ, ಅಂತಹ ಅಂತರಿಕ ಅರ್ಜಿ ಸಲ್ಲಿಸಿದಾಗ, ಆದೇಶ ಮಾಡುವುದು ನ್ಯಾಯಾಧಿಕರಣದ ಜವಾಬ್ದಾರಿ. ಮೂಲ ಪ್ರಕರಣದ ಮೇಲೆ ಪ್ರಭಾವ ಬೀರುತ್ತದೆಂದು ತೀರ್ಮಾನಕ್ಕೆ ಬಂದರೂ, ವಾಸ್ತಿಕ ಸ್ಥಿತಿ ತಿಳಿಸಿ ಆದೇಶಿಸಬೇಕಾಗಿತ್ತು. ಆದ್ದರಿಂದ ಅಂತರಿಕ ಅರ್ಜಿ ಮೇಲೆ ಆದೇಶ ಮಾಡಲು ಸೂಚಿಸಿ ಪ್ರಾಧಿಕರಣದ ಆದೇಶವನ್ನು ಕಿತ್ತುಹಾಕಿತು. (2013 Indlaw Kar 1181)

28. ಸಹಕಾರ ಸಂಘ ರಾಜ್ಯಾಂಗದ ಒಂದು ಅಂಗವಲ್ಲ ಆದ್ದರಿಂದ ಅದು ನೇರವಾಗಿ ರಿಟ್ ಅರ್ಜಿ ದಾಖಲಿಸಲು ಅವಕಾಶವಿಲ್ಲ. ಆದರೆ ಸಂಘವು ಒಬ್ಬ ಸದಸ್ಯರನ್ನು ಸದಸ್ಯತನದಿಂದ ಕಿತ್ತುಹಾಕಿದಾಗ ಅದು ಸಹಕಾರ ಕಾಯಿದೆಯು ಸದಸ್ಯ/ಮಾಜಿ ಸದಸ್ಯ, ಸಂಘದ ಮೇಲೆ ದಾವಾ ದಾಖಲಿಸಲು,

ಅವಕಾಶ ಇರುವುದರಿಂದ ಸಹಕಾರ ಕಾಯಿದೆಯಲ್ಲಿಯೇ ಪರಿಹಾರ ಪಡೆಯಬೇಕು ರಿಟ್ ಅರ್ಜಿ ಮುಖಾಂತರರಲ್ಲಿ. (2013 Indlaw Kar 1180)

29. ದಾವಾ ಪ್ರಕರಣ ನಿಬಂಧಕರ ನ್ಯಾಯಾಲಯದಲ್ಲಿ ಊರ್ಜಿತವಲ್ಲ ಎಂಬ ತೀರ್ಮಾನಕ್ಕೆ ಬಂದಾಗ, ಅದನ್ನು ವಜಾ ಮಾಡುವ ಬದಲು, ಆ ಅರ್ಜಿಯನ್ನು ವಾಪಸ್ ಮಾಡಿ, ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಬೇಕು. ವಜಾ ಮಾಡಬಾರದು. (2013 Indlaw Kar 2712 2014 (1) KLJ 85)

30. ಸರ್ಕಾರದಿಂದ ನಾಮ ನಿರ್ದೇಶನ ಮಾಡಿದ ನಿರ್ದೇಶಕರು ಯಾವ ಹಕ್ಕನ್ನು ಪಡೆಯುವುದಿಲ್ಲ. ಅದು ಸಂವಿಧಾನದ ಅನುಚ್ಛೇದ 311 ರಡಿ ಮತ್ತು ಅನುಚ್ಛೇದ 16(2) ರಡಿ ಯಾವುದೇ ಹಕ್ಕನ್ನು ನೀಡುವುದಿಲ್ಲ. ಏಕೆಂದರೆ ಸಹಕಾರ ಕಾಯಿದೆಯಲ್ಲಿ ನಾಮ ನಿರ್ದೇಶನ ಮಾಡಿದ ವ್ಯಕ್ತಿಗಳ ಯಾವುದೇ ಶಾಸನಾತ್ಮಕ ಹುದ್ದೆ ಅಲಂಕರಿಸಿದಂತಾಗುವುದಿಲ್ಲ. ಇದಕ್ಕೆ ಪೂರಕವಾಗಿ 1993 Indlaw SC 909 ನ್ನು ಅನುಸರಿಸಿ ತೀರ್ಪು ನೀಡಿ, ಸರ್ಕಾರದ ಅರ್ಜಿಯಲ್ಲಿ ನಾಮನಿರ್ದೇಶನ ಮಾಡಿರುವುದರಿಂದ, ಅವರನ್ನು ಮುಂದುವರಿಸಬೇಕೆಂದು ರಿಟ್ ಮೂಲಕ ಪರಿಹಾರ ಕೇಳತಕ್ಕದ್ದಲ್ಲ. ಇದರ ಜೊತೆ ಸರ್ಕಾರ ನಾಮ ನಿರ್ದೇಶಿತ ವ್ಯಕ್ತಿಗಳಿಗೆ, ಸ್ವಭಾವಿಕ ನ್ಯಾಯ ನೀತಿ ಅನ್ವಯ ಯಾವುದೇ ರೀತಿ ನೋಟೀಸ್ ನೀಡುವ ಅವಶ್ಯಕತೆ ಇಲ್ಲ. (2013 Indlaw Kar 1066 2013 (5) KLJ 519)

31. ಅರ್ಜಿದಾರನ ಮೇಲೆ ದಾವಾ ಪ್ರಕರಣದಲ್ಲಿ, ಡಿಕ್ರಿ ಪಡೆದ ನಂತರ, ನ್ಯಾಯಾಧಿಕರಣ ದೃಡೀಕರಿಸಿದ ನಂತರ, ಈ ರಿಟ್ ಅರ್ಜಿಯಲ್ಲಿ ಎದುರು ಅರ್ಜಿದಾರ ಬ್ಯಾಂಕ್‌ಗೆ ನೋಟೀಸ್ ನೀಡಿದರೆ ಡಿಕ್ರಿ ತೀರ್ಮಾನವಾಗುವ ಪ್ರಸಂಗ ಇದೆ ಎಂಬ ಕಾರಣ ನೀಡಿ ರಿಟ್‌ನ ಪ್ರಾರ್ಥನೆ ಅರ್ಜಿದಾರ ಬಾಕಿ ಇರುವ ಶೇ.50% ರಷ್ಟು ಹಣ ಠೇವಣಿ ಮೂಲಕ ಒಂದುವಾರದಲ್ಲಿ ಇಟ್ಟರೆ, ನೋಟೀಸ್ ನೋಡಲು ಒಪ್ಪಿಗೆ ನೀಡಿ, ಠೇವಣಿ ಮಾಡದಿದ್ದರೆ ರಿಟ್ ಅರ್ಜಿ ವಜಾ ಆದಂತೆ ತಿಳಿಯಲು ಆದೇಶಿಸಿತು ಹಾಗೂ ರೂ.2.00 ಲಕ್ಷವನ್ನು ಉಚ್ಚನ್ಯಾಯಾಲಯದಲ್ಲಿ ಇಡಲು (ಎರಡು ವಾರದಲ್ಲಿ) ಅವಕಾಶ ನೀಡಿ ಮತ್ತು ರೂ.2.00 ಲಕ್ಷವನ್ನು ನಾಲ್ಕು ವಾರಗಳಲ್ಲಿ ಜಮಾ ಮಾಡಲು ಆದೇಶಿಸಿತು ಆದರೆ ಅರ್ಜಿದಾರ ಈ ಶರತ್ತುಗಳನ್ನು ಪೂರೈಸದೇ ಇದ್ದುದರಿಂದ ರಿಟ್ ತಿರಸ್ಕರಿಸಲಾಯಿತು. (2013 Indlaw Kar 1067)

32. ದಾವಾ ಪ್ರಕರಣ ದಾಖಲಿಸಲು, ಆದ ವಿಳಂಬದ ಬಗ್ಗೆ ಸಾಕ್ಷಿಗಳನ್ನು ಪರಿಶೀಲಿಸದೆ, ಆದೇಶಿಸಿರುವುದು ತಪ್ಪು. ಕಾರ್ಮಿಕ ನ್ಯಾಯಾಲಯದಲ್ಲಿ ಸಲ್ಲಿಸಿದ ಅರ್ಜಿಯನ್ನು, ಸಹಕಾರ ಕಾಯಿದೆಯಲ್ಲಿಯೇ ಪರಿಹಾರ ಪಡೆಯಲು ಅವಕಾಶ ಇರುವುದನ್ನು ಪರಿಗಣಿಸಿ ವಾಪಸ್ ಪಡೆದಾಗ, ಆ ದಿನಾಂಕದಿಂದ ವಿಳಂಬದ ಬಗ್ಗೆ ಪರಿಶೀಲಿಸಬೇಕು. ಅದನ್ನು ಪರಿಗಣಿಸದೆ, ನೇರವಾಗಿ ಪ್ರಕರಣ ದಾಖಲಿಸಿರುವುದು ಮತ್ತು ಇದರಲ್ಲಿ 508 ದಿನಗಳ ವಿಳಂಬವಾದ ಬಗ್ಗೆ ಅರ್ಜಿ ಸಲ್ಲಿಸಿರುವುದನ್ನು ಎದುರು ಅರ್ಜಿದಾರರಿಗೆ ನೋಟೀಸ್ ನೀಡದೆ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ ನೀಡಿದ ಆದೇಶವನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕರಣ ವಿಚಾರಣ ನಡೆಸಿ, ಕೆಳ ನ್ಯಾಯಾಲಯದ ಆದೇಶವನ್ನು ಕಿತ್ತುಹಾಕಿತು. ಎದುರು ಅರ್ಜಿದಾರರು ವಿಳಂಬದ ಬಗ್ಗೆ ತಕರಾರು ಅರ್ಜಿ ಸಲ್ಲಿಸಿದಾಗ ಸಾಕ್ಷಿಗಳು ಮತ್ತು ದಾಖಲೆಗಳನ್ನು ಪರಿಶೀಲಿಸಲು ಅವಕಾಶ ನೀಡಬೇಕಾಗಿತ್ತು. ಈ ಹೇಳಿಕೆಗಳ/ಸಾಕ್ಷಿಗಳ ಆಧಾರದ ಮೇಲೆ ವಿಳಂಬ ವಿನಾಯ್ತಿ ಅರ್ಜಿ ತೀರ್ಮಾನಿಸತಕ್ಕದ್ದು. (2013 Indlaw Kar 978)

33. ಅಧಿಭಾರ ಅರ್ಜಿಯಲ್ಲಿ ಮಾಡಿದ ಆದೇಶವನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕರಣ ನ್ಯಾಯ ಭದ್ರತೆ

ಬಗ್ಗೆ ತೀರ್ಮಾನಿಸ ಬೇಕಾಗಿತ್ತು. ಅರ್ಜಿದಾರರಿಗೆ ಯಾವುದೇ ಪರಿಹಾರ ಸಿಗುವ ಸಂಭವವಿರಲಿಲ್ಲ. ಪ್ರಕರಣ ಸ್ವೀಕರಿಸುವ ಸಂದರ್ಭದಲ್ಲಿ 25% ಹಣ ಠೇವಣಿ ಇಡಲು ತಿಳಿಸಿತ್ತು. ಈ ಹಣವನ್ನು ನಿಗದಿತ ಠೇವಣಿಯನ್ನು ಒಂದು ವರ್ಷದ ಅವಧಿಗೆ ಇದ್ದು. ನ್ಯಾಯಾಧಿಕರಣ ತೀರ್ಮಾನ ನೀಡುವ ತನಕ ಆ ಠೇವಣಿಯನ್ನು ನವೀಕರಿಸತಕ್ಕದ್ದು. ರಿಟ್ ಅರ್ಜಿ ವಜಾ ಮಾಡಲಾಯಿತು. (2013 Indlaw Kar 899)

34. ಸಾಮಾನ್ಯ ಸೇವಾ ಪ್ರಾಧಿಕಾರದ ವಿರುದ್ಧ ಆದೇಶ ಹೊರಡಿಸಿದ ನಂತರ, ಅದು ಅಂತಿಮವಾಗಿದೆ. ಇದನ್ನು ಕಲಂ 101 ರನ್ವಯ ಜಾರಿ ಮಾಡಲು ಕ್ರಮಜರುಗಿಸಬೇಕು. ಜಾರಿ ಮಾಡುವ ಬದಲು ಹಿಂಬರಹ ನೀಡಿದ್ದನ್ನು ರಿಟ್ ಮುಖಾಂತರ ಪ್ರಶ್ನಿಸಿದಾಗ, ಜಾರಿ ಮಾಡಲು ಕ್ರಮ ಜರುಗಿಸಬೇಕು ಮತ್ತು ದಿನಾಂಕ 12.07.2013 ರಂದು ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಹಾಜರಾಗಿ ಆದೇಶ ಪಡೆಯತಕ್ಕದ್ದು ಮತ್ತು ಈ ಆದೇಶದ ನಾಲ್ಕು ವಾರಗಳಲ್ಲಿ ಜಾರಿ ಕ್ರಮ ಮುಗಿಸಲು ನಿರ್ದೇಶಿಸಲಾಯಿತು. (2013 Indlaw Kar 981)

35. ಕಲಂ 70 ರಡಿ ಸಲ್ಲಿಸಿದ ಪ್ರಕರಣದಲ್ಲಿ ಈ ದಾವಾ ಊರ್ಜಿತವೇ ಅಲ್ಲವೇ ಎಂಬುದನ್ನು ಹಾಜರಾಗಿ ಕೇಳಿದರೂ ಪರಿಹಾರ ನೀಡದೇ ಇದ್ದುದರಿಂದ ರಿಟ್ ದಾಖಲಿಸಲಾಗಿದೆ. ದಾವಾ ದಾಖಲಿಸಿದಾಗ ಊರ್ಜಿತತೆ ಬಗ್ಗೆ ಪ್ರಶ್ನಿಸಿರಲಿಲ್ಲ ಎಂಬ ಅಂಶವನ್ನು ತಿಳಿದಾಗ, ಎದುರು ಅರ್ಜಿದಾರರ ಮುಂದೆ ಹಾಜರಾಗಿ, ಈ ವಿಷಯ ತೀರ್ಮಾನಿಸುವಂತೆ (ಪೂರ್ವಭಾವಿಯಾಗಿ) ತಿಳಿಸಿ ಮತ್ತು ಅದಕ್ಕೂ ಆದೇಶ ಪಡೆಯದಿದ್ದರೆ ನ್ಯಾಯಾಧಿಕರಣದ ಮುಂದೆ ಮೇಲ್ಮನವಿ ಸಲ್ಲಿಸಲು ಸೂಚಿಸಿ ತೀರ್ಮಾನಿಸಲಾಯಿತು. (2013 Indlaw Kar 2636 2013 (4) KLJ 414)

36. ಯಾವುದೇ ವ್ಯಕ್ತಿಯ ಮೇಲೆ ವಿಚಾರಣಾ ವರದಿಯನ್ನು ಆಧರಿಸಿ ಕ್ರಿಮಿನಲ್ ಮೊಕದ್ದೊಮ್ಮೆ ಹೂಡಲು ತೀರ್ಮಾನಿಸಿದ ನಂತರವೂ, ಹಣ ವಸೂಲಿ ಮಾಡಿಕೊಳ್ಳಲು ಕಲಂ 69 ರನ್ವಯ ಅಧಿಭಾರ ಅರ್ಜಿ ಸಲ್ಲಿಸಲು ಯಾವುದೇ ನಿರ್ಭಂದವಿಲ್ಲ. ಕ್ರಿಮಿನಲ್ ಮೊಕದ್ದೊಮ್ಮೆ ಹೂಡಲು ಕಲಂ.111(2)(ಎ) ಮತ್ತು (2)(ಬಿ) ಅನ್ವಯ ಪೂರ್ವಾನುಮತಿ ಅವಶ್ಯಕ. ಆದರೆ ಕೆಲವು ಪ್ರಸಂಗಗಳಲ್ಲಿ ಅಂದರೆ ಹಣ ದುರುಪಯೋಗ ಮಾಡಿಕೊಂಡದ್ದನ್ನು ಕಲಂ.63, 64, 65 ರಡಿ ವಿಚಾರಣೆ ನಡೆಸಿದಾಗ, ಕ್ರಿಮಿನಲ್ ಪ್ರಕರಣ ದಾಖಲಿಸಲು ಪೂರ್ವಾನುಮತಿ ಅವಶ್ಯಕತೆ ಇಲ್ಲ. (2013 Indlaw Kar 1769 2014 (1) KLJ 329)

37. ಅರ್ಜಿದಾರ ಸಂಘಕ್ಕೆ ಕೊಡಬೇಕಾದ ಬಾಕಿ ಬಗ್ಗೆ, ಕಲಂ.70 ರ ದಾವಾದಲ್ಲಿ ಡಿಕ್ರಿ ಪಡೆದಿದ್ದು ಅದಕ್ಕೆ ರೂ.8.20 ಲಕ್ಷ ಈಗಾಗಲೆ ಪಾವತಿಸಿದ್ದು ಉಳಿಕೆ ಹಣ ಪಾವತಿಸಲು ಒಂದು ವರ್ಷದ ಅವಧಿಯನ್ನು ಈ ರಿಟ್ ಮುಖಾಂತರ ಕೇಳಿದ್ದನ್ನು ಪರಿಗಣಿಸಿ, ಅರ್ಜಿದಾರ 4 ತ್ರೈಮಾಸಿಕ ಸಮಕಂತುಗಳಲ್ಲಿ ಪಾವತಿಸಲು ಆದೇಶಿಸಿ, ಎರಡು ಕಂತಿನ ಸುಸ್ತಿಯಾದರೆ, ಸಂಘವೂ ಪೂರ್ಣ ಸಾಲ ವಸೂಲಿ ಮಾಡಲು ಅವಕಾಶ ನೀಡಿ ಆದೇಶಿಸಲಾಯಿತು. (2013 Indlaw Kar 676)

38. ಕಲಂ 69 ರಡಿ ಪ್ರಕರಣವನ್ನು ಒಬ್ಬ ಉಪನಿಬಂಧಕರಿಂದ ಮತ್ತು ಒಬ್ಬ ಅಧಿಕಾರಿಗೆ ವರ್ಗಾಯಿಸಲು ಅರ್ಜಿ ಪರಿಗಣಿಸಿ, ಮತ್ತೊಬ್ಬ ಅಧಿಕಾರಿಗೆ ವರ್ಗಾವಣೆ ಮಾಡಿದ ನಂತರ, ಮತ್ತೊಮ್ಮೆ ಆ ವಿಷಯದಲ್ಲಿ ಮರು ಚಿಂತನೆ ಮಾಡಿ, ಉಪನಿಬಂಧಕರಿಗೆ ವರ್ಗಾಯಿಸಿದರೆ, ಅದು ಸರ್ಕಾರದ ದಿನಾಂಕ 17.02.2011ರ ಅಧಿ ಸೂಚನೆಯಂತೆ ಕ್ರಮ ಭದ್ದವಾಗಿದೆ. ಏಕ ಸದಸ್ಯ ಪೀಠ ಮಾಡಿದ ಆದೇಶಕ್ಕೆ ಮಧ್ಯಪ್ರವೇಶ ಮಾಡುವ ಅವಶ್ಯಕತೆ ಇಲ್ಲ. (2013 Indlaw Kar 2351 2013 (3) KLJ 545)

39. ದಾವಾ ಪ್ರಕರಣ ವಿಚಾರಣೆ ಮಾಡುವ ಸಂದರ್ಭದಲ್ಲಿ ಮಧ್ಯಸ್ಥಿಗಾರ, ದಾಖಲೆಯಲ್ಲಿರುವ ಸಾಕ್ಷಿಗಳು/ದಾಖಲೆ ಪರಿಶೀಲಿಸಿ ಆದೇಶಿಸಿದೆ, ತಪ್ಪು ಮಾಡಿದ್ದರಿಂದ ನ್ಯಾಯಾಧಿಕರಣ ಮರುವಿಚಾರಣೆಗೆ ಆದೇಶ ಮಾಡಿರುವುದು ತಪ್ಪು. ನ್ಯಾಯಾಧಿಕರಣದ ದಾಖಲೆಯಲ್ಲಿ ಎಲ್ಲಾ ಸಾಕ್ಷಿ/ದಾಖಲೆಗಳು ಲಭ್ಯವಿದ್ದರೆ ಅವುಗಳ ಆಧಾರದ ಮೇಲೆ ತೀರ್ಮಾನ ಮಾಡುವ ಅಧಿಕಾರ ಇದೆ. ಇಲ್ಲವಾದರೆ ಇದು ವಿಳಂಬ ನೀತಿ ಅನುಸರಿಸಿದಂತಾಗುತ್ತಿದೆ. ಆದ್ದರಿಂದ ಮೇಲ್ಮನವಿ ಪ್ರಾಧಿಕರಣದ ಆದೇಶವನ್ನು ನ್ಯೂನತೆಗಳಿಂದ ಕೂಡಿದೆ ಎಂದು ಕಿತ್ತುಹಾಕಿತು. (2013 Indlaw Kar 44 2013 (2) KLJ 505)

40. ಬ್ಯಾಂಕಿನ ಕಟ್ಟಡ ಬಾಡಿಗೆ ಪಡೆದಾಗ, ಅದು ಬ್ಯಾಂಕಿನ ಮುಖ್ಯ ಉದ್ದೇಶವಲ್ಲ. ಆದ್ದರಿಂದ ಈ ಪ್ರಕರಣ ಸಹಕಾರ ನ್ಯಾಯಾಲಯದಲ್ಲಿ ಊರ್ಜಿತವಲ್ಲವೆಂದು ಮಂಡಿಸಿದಾಗ ಮತ್ತು ದಾಖಲೆ P6 ನ್ನು ಸ್ವೀಕರಿಸಬಾರದಿತ್ತು ಎಂದು ವಾದಿಸಿದಾಗ ಈ ರಿಟ್‌ನಲ್ಲಿ ತೆಗೆದುಕೊಂಡ ತೀರ್ಮಾನ ಒಂದು ಬ್ಯಾಂಕ್ ತನ್ನ ವ್ಯವಹಾರಕ್ಕೆ ಪೂರಕವಾಗಿ ಹೆಚ್ಚುವರಿ ಸ್ಥಳವನ್ನು ಅವಶ್ಯಕತೆ ಇಲ್ಲವೆಂದು ಮನಗೊಂಡಾಗ, ಬಾಡಿಗೆ ನೀಡಿರುವುದು ತಪ್ಪಿಲ್ಲ. ಏಕೆಂದರೆ ಹೆಚ್ಚುವರಿ ಸ್ಥಳದ ಅವಶ್ಯಕತೆ ಇಲ್ಲದಾಗ, ಅದು ಒಂದು ಪೂರಕ ಸೇವೆಯಾಗುತ್ತಿದೆ. ಮತ್ತು P6 ನ್ನು ದಾಖಲೆಯಲ್ಲಿ ತೆಗೆದುಕೊಳ್ಳಬಾರದಿತ್ತು ಎಂಬ ವಾದಕ್ಕೆ, ಪ್ರಕರಣ ವಿಚಾರಣೆ ಸಮಯದಲ್ಲಿ ಮತ್ತು ದಾಖಲೆ ಸಲ್ಲಿಸಿದಾಗ ಯಾವುದೇ ಕಕ್ಷಿದಾರ ತಕರಾರು ಇಲ್ಲದೇ ಇದ್ದು, ಈಗ ಅದನ್ನು ಪ್ರಶ್ನಿಸಲಾಗದು. ಏಕೆಂದರೆ, ಅದು ಈಗ ದಾಖಲೆಗಳ ಒಂದು ಭಾಗವಾಗಿದೆ. ಆದ್ದರಿಂದ ರಿಟ್ ವಜಾ ಮಾಡಿ, ಬಾಡಿಗೆ ಪಡೆದ ಸ್ಥಳವನ್ನು 31.03.2013 ರೊಳಗೆ ತೆರವುಗೊಳಿಸಿ ಬ್ಯಾಂಕ್‌ಗೆ ಬಿಟ್ಟುಕೊಡಲು ಆದೇಶಿಸಲಾಯಿತು. (2012 Indlaw Kar 1028)

**ಸೂಚನೆ : ಇದೇ ರೀತಿ ಇದೇ ಬ್ಯಾಂಕಿನ ಸಂಬಂಧ ಎಸ್.ಬಾಲಚಂದರ್ ಅವರ ಪ್ರಕರಣದಲ್ಲಿ 31.03.2013 ರವರೆವಿಗೆ ಸಮಯ ನಿಗದಿಪಡಿಸಿ ಆದೇಶಿಸಿದೆ. (2012 Indlaw Kar 1153)**

41. ಮೇಲ್ಮನವಿ ಪ್ರಾಧಿಕರಣ, ಪ್ರಕರಣ ವಿಚಾರಣೆ ಸ್ವೀಕರಿಸುವಾಗ, ಬಾಕಿ ಹಣದ ಶೇ.40/– ರಷ್ಟನ್ನು ಠೇವಣಿ ಇಡಲು ಸೂಚಿಸಿದ ಆಧಾರದ ಮೇಲೆ, ಈ ರಿಟ್ ಅರ್ಜಿ ದಾಖಲಾಗಿದೆ. ಕಾಯಿದೆ ಕಲಂ 105 ರಡಿ ಮೇಲ್ಮನವಿ ಸಲ್ಲಿಸಲು ಕನಿಷ್ಠ 25% ಹಣ ಪಾವತಿಸಲು ಅವಕಾಶ ಕಲ್ಪಿಸಿದೆ. ಈ ತಿದ್ದುಪಡಿ ದಿನಾಂಕ 30.03.2010 ರಂದು ಜಾರಿಗೆ ಬಂದಿದೆ, ಆದರೆ ಈ ಪ್ರಕರಣ 2009 ರಲ್ಲಿ ಸಲ್ಲಿಕೆಯಾಗಿದೆ. ಆದ್ದರಿಂದ ಶರತ್ತನ್ನು ಮಾರ್ಪಾಡು ಮಾಡಲು ವಿನಂತಿಸಿದ ಮೇಲೆ ಉಚ್ಚನ್ಯಾಯಾಲಯ ಬಾಕಿ ಇರುವ ಅಸಲಿನಲ್ಲಿ ಶೇ.20% ಹಣ ಪಾವತಿಸಲು ಆದೇಶಿಸಲಾಯಿತು. (2012 Indlaw Kar 3031)

42. ಮೂಲ ದಾವಾ ದಾಖಲಿಸಿದ ಸಂಘ, ವಿವಾದದಲ್ಲಿರುವ ಆಸ್ತಿ ಎಂದು ಪ್ರತಿ ಪಾದಿಸಿದ್ದು, ಈ ರಿಟ್ ಸಲ್ಲಿಸಿದ ವ್ಯಕ್ತಿ ಅಥವಾ ಅವನ ಸಂಬಂಧಿಗಳು ಆಸ್ತಿ ತಮ್ಮ ವಶದಲ್ಲಿದೆ ಎಂದೂ ನಿರೂಪಿಸಿಲ್ಲ, ದಾವಾದಿಂದ ಹಾಗೂ ಪವರ್ ಆಫ್ ಆಟಾರ್ನಿಯಲ್ಲಿ ಪ್ರಮಾಣೀಕರಿಸಿದ ವಿಷಯಕ್ಕೆ ಬಾಯಿ ಮಾತಿನ ಹೇಳಿಕೆ ಆಧರಿಸಿರುವುದರಿಂದ ನಂಬಲಾರ್ಹವಲ್ಲ. ಸಂಘವು ಆಸ್ತಿಯು ತನ್ನ ವಶದಲ್ಲಿದೆ ಎಂದು, ರಿಟ್ ಅರ್ಜಿದಾರನು ಯಾವುದೇ ಹಕ್ಕಿಲ್ಲವೆಂದು ಸಾಬೀತು ಪಡಿಸಿದ್ದಾರೆ. (2011 Indlaw Kar 534)

43. ಸಹಕಾರ ಕಾಯಿದೆಯಲ್ಲಿ ಕಲಂ 2ಎ(5) ರಲ್ಲಿ ನಿಬಂಧಕರ ಅಧಿಕಾರವನ್ನು ಮತ್ತೊಬ್ಬ ಅಧಿಕಾರಿಗೆ ವರ್ಗಾಯಿಸಲು ಅಧಿಕಾರ ನೀಡಲಾಗಿದೆ. ಅಂದರೆ ಯಾವ ವ್ಯಕ್ತಿಗೆ ಆ ಅಧಿಕಾರ ಚಲಾಯಿಸಲು ನೀಡಲಾಗಿದೇಯೋ, ಆ ಅಧಿಕಾರ ನಿಬಂಧಕರು ಚಲಾಯಿಸಿದ ಅಧಿಕಾರವಾಗುತ್ತಿದೆ. ಮೇಲ್ಮನವಿ ಸಲ್ಲಿಸಬೇಕಾದರೆ, ಅದು ಮೇಲಾಧಿಕಾರಿಗೆ ಅಲ್ಲ ಎಂಬ ಅಂಶವನ್ನು ಎರಡು ರಿಟ್ ಅರ್ಜಿಯಲ್ಲಿ ಪ್ರಶ್ನಿಸಿದಾಗ, ಈ ಎರಡೂ ಪ್ರಕರಣಗಳಲ್ಲಿನ ಅಂಶಕ್ಕೆ ರಿಟ್‌ನ್ನು (ಪೂರ್ಣ ಪೀಠ) ತ್ರಿ ಸದಸ್ಯ ಪೀಠಕ್ಕೆ ವರ್ಗಾಯಿಸಿದಾಗ, ನೀಡಿದ ತೀರ್ಪು ಉಚ್ಚನ್ಯಾಯಾಲಯ ಮತ್ತು ಶ್ರೇಷ್ಠ ನ್ಯಾಯಾಲಯದ ತೀರ್ಪುಗಳನ್ನು ಪರಿಶೀಲಿಸಿ, ಸಹಾಯಕ ನಿಬಂಧಕರು ತಮ್ಮ ಅಧಿಕಾರ ಚಲಾಯಿಸಿ ಡಿಕ್ರಿ ನೀಡಿದಾಗ, ಅವರು ನಿಬಂಧಕರ ಅಧಿಕಾರ ಚಲಾಯಿಸಿರುವುದರಿಂದ, ಮೇಲ್ಮನವಿ ಸರ್ಕಾರಕ್ಕೆ ಇರಬೇಕೇ ಹೊರತು, ಉಪನಿಬಂಧಕರಿಗಲ್ಲ ಎಂದು, ಈ ವಿಷಯ ಪೂರ್ಣ ಪೀಠಕ್ಕೆ ವರ್ಗಾಯಿಸಿದೆ. ಈ ವಿಷಯ ವಿಮರ್ಶೆ ಮಾಡುವಾಗ ಕಲಂ 2ಎ(2) ಮತ್ತು ಕಲಂ 106 ಮತ್ತು ಶ್ರೇಷ್ಠ ನ್ಯಾಯಾಲಯದ AIR 1963 SC 1962/1962 Indlaw SC 274 ತೀರ್ಪು, (1998) 7 SCC 162/1998 Indlaw SC 1176 ನ ತೀರ್ಪು, 1970 (1) Mys LJ 530 ನ ತೀರ್ಪಿನಲ್ಲಿ ವಿಮರ್ಶಿಸಿದ ಕಲಂ 106 (2) (a) ಮತ್ತು (b) ನ ವಿಮರ್ಶೆ ಆಧರಿಸಿ ಮತ್ತು 1979 (2) KLJ 50 ನಲ್ಲಿ ನೀಡಿದ ತೀರ್ಪು ಕಾನೂನಿನ ಸಮರ್ಪಕ ವಿಮರ್ಶೆ ಅಲ್ಲವೆಂದು, ಅಂದರೆ ಸಹಾಯಕ ನಿಬಂಧಕರ ಆದೇಶಕ್ಕೆ ಸರ್ಕಾರಕ್ಕೆ ಮೇಲ್ಮನವಿ ಎಂಬ ತೀರ್ಪನ್ನು ಕಿತ್ತು ಹಾಕಿ, ಸಹಾಯಕ ನಿಬಂಧಕರ ಆದೇಶಕ್ಕೆ ಉಪನಿಬಂಧಕರು ಮೇಲ್ಮನವಿ ಸ್ವೀಕರಿಸಲು ಅಧಿಕಾರ ಇದೆ ಎಂದು, ತೀರ್ಮಾನಿಸಿದೆ. ಅಂದರೆ ಸಹಾಯಕ ನಿಬಂಧಕರು, ನಿಬಂಧಕರ ಅಧಿಕಾರ ಚಲಾಯಿಸಿದರೂ, ಮೇಲ್ಮನವಿ ಸಂದರ್ಭದಲ್ಲಿ ಉಪನಿಬಂಧಕರಿಗೆ ಇರತಕ್ಕದ್ದು, ಸರ್ಕಾರಕ್ಕೆ ಅಲ್ಲ ಎಂದು ಅರ್ಥೈಸಿದೆ. (2011 Indlaw Kar 539)

44. ಸಹಕಾರ ಸಂಘದ ನೌಕರರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಪೂರ್ವಾನುಮತಿ ಅವಶ್ಯಕ ಎಂಬ ತೀರ್ಪಿಗೆ ವಿರುದ್ಧವಾಗಿ ರಾಜ್ಯ ಸರ್ಕಾರ ರಿಟ್ ಅರ್ಜಿ ಸಲ್ಲಿಸಿದಾಗ, ಅಂದರೆ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ 2002 (4) KLJ 409 ರಲ್ಲಿ (ಮೊಕದಮ್ಮೆ ಹೂಡಲು ಪೂರ್ವಾನುಮತಿ ಬೇಕೆಂದು) ಆಧರಿಸಿ ಸಲ್ಲಿಸಿದಾಗ, ಈ ತೀರ್ಪನ್ನು ILR 2004 Kar 4439 ರಲ್ಲಿ ಕಿತ್ತು ಹಾಕಿರುವುದರಿಂದ, ಸಹಕಾರ ಸಂಘದ ನೌಕರರ ಮೇಲೆ ಹಣ ದುರುಪಯೋಗ ಮಾಡಿಕೊಂಡಾಗ ಯಾವುದೇ ಪ್ರಾಧಿಕಾರದ ಪೂರ್ವಾನುಮತಿ ಅವಶ್ಯಕವಿಲ್ಲವೆಂದು ತೀರ್ಪಿತ್ತಿದ್ದು, 2002 (4) KLJ 409 ರ ತೀರ್ಪನ್ನು ಕಿತ್ತುಹಾಕಿದೆ. ಆದ್ದರಿಂದ ಇನ್ನು ಮುಂದೆ ಸಹಕಾರ ಸಂಘದ ನೌಕರರು, ಹಣ ದುರುಪಯೋಗ ಮಾಡಿಕೊಂಡರೆ, ಅವರ ಮೇಲೆ ಕ್ರಿಮಿನಲ್ ಮೊಕದಮ್ಮೆ ಹೂಡಲು ಯಾವುದೇ ಪ್ರಾಧಿಕಾರದ ಪೂರ್ವಾನುಮತಿ ಅವಶ್ಯಕವಿಲ್ಲ. (2011 Indlaw Kar 384)

45. ಸಂಯುಕ್ತ ನಿಬಂಧಕರು ನಿಯಮ 31(4)(b) ಅನ್ವಯ ಡಿಕ್ರಿಯಿಂದ ಬಂದ ಅರ್ಜಿ ಸ್ವೀಕರಿಸಬಹುದೆ? ಹಾಗೂ ಆ ಅರ್ಜಿ 30 ದಿವಸಗಳ ನಂತರ ಸಲ್ಲಿಕೆಯಾದರೆ, ವಿಳಂಬ ವಿನಾಯ್ತಿ ಇಲ್ಲದೆ ಡಿಕ್ರಿಮೇಲೆ ಕಲಂ 105 ರನ್ವಯ ಮೇಲ್ಮನವಿ ಸಲ್ಲಿಸಲು ಅಧಿಕಾರ ಇದೆ. ಅಂದರೆ ಮೇಲ್ಮನವಿ ಸಲ್ಲಿಸಲು ವಿಳಂಬವಾದರೆ ವಿಳಂಬ ವಿನಾಯ್ತಿ ಅರ್ಜಿ ಸಲ್ಲಿಸಲು ಅವಕಾಶ ಇದೆ. ಮೇಲ್ಮನವಿ ಸಲ್ಲಿಸಲು ಅವಕಾಶ ಒಂದು ಹಕ್ಕು. ವಿಳಂಬ ವಿನಾಯ್ತಿ ಕಾಯಿದೆ ಕಲಂ 5 ಅನ್ವಯವಾಗದೇ ಇದ್ದರೂ ಮಿಸಲೇನಿಯಸ್ ಅರ್ಜಿ ಸ್ವೀಕರಿಸಿದ್ದು ತಪ್ಪು ಮತ್ತು ಅದರಲ್ಲಿ 30 ದಿವಸಗಳ ನಂತರ, ಡಿಕ್ರಿ ನೀಡಿದ

ನಂತರ, ತಿಳುವಳಿಕೆ ಬಂದ ದಿನಾಂಕದಿಂದ ವಿಳಂಬವಾದರೆ ಅರ್ಜಿಸಲ್ಲಿಸಬೇಕು. ಆದ್ದರಿಂದ ಜಂಟಿ ನಿಬಂಧಕರು ನಿಯಮ 31(4)(b) ಅರ್ಜಿ ಸ್ವೀಕರಿಸಿದ್ದು ತಪ್ಪು. (2010 Indlaw Kar 580, 2011 (2) KLJ 333)

46. ಸಂಬಳದಿಂದ ಕಂತು ವಸೂಲಿ ಮಾಡಲು ಕಲಂ.34(2) ರನ್ವಯ ಒಪ್ಪದೇ ಇದ್ದಾಗ, ನಂತರ ಸಂಬಳ ಪಾವತಿಸುವ ಅಧಿಕಾರಿ ಮೇಲೆ ಕಲಂ 109(4) ರನ್ವಯ ಅಪರಾದಕ್ಕಾಗಿ ಮೊಕದಮ್ಮೆ ಹೂಡಬಹುದು. ಸಂಬಳದಲ್ಲಿ ಕಂತು ವಸೂಲಿ ಮಾಡಿ 14 ದಿವಸಗಳೊಳಗೆ ಸಂಘಕ್ಕೆ ಪಾವತಿ ಮಾಡಲು ಸಕಾರಣಗಳಿಲ್ಲದೇ ಪಾವತಿ ಮಾಡದಿದ್ದರೆ ಅದು ಅಪರಾಧ. ಜಪ್ತಿ ವಾರೆಂಟ್‌ನ್ನು ವಸೂಲಾತಿ ಅಧಿಕಾರಿ ನೀಡಿದಾಗ, ಅದನ್ನು ಜಾರಿ ಮಾಡಿ ವಸೂಲಿ ಮಾಡದಿದ್ದರೆ ಅದು ಅಪರಾಧ. ಆದರೆ ರಿಟ್ ಅರ್ಜಿ ಮೂಲಕ ಸಂಬಳದಿಂದ ವಸೂಲಿ ಮಾಡಿಕೊಡಲು ಯಾವುದೇ ಮಧ್ಯಪ್ರವೇಶದ ಅವಶ್ಯಕತೆ ಇಲ್ಲ. ಅಂದರೆ ರಿಟ್ ಮೂಲಕ ವಸೂಲಾತಿ ಕ್ರಮ ಪಡೆಯಲಾಗದು. (2010 Indlaw Kar 309/2010 (4) KLJ 516)

47. ಕಲಂ 101(1)(9) ಅನ್ವಯ ಡಿಕ್ರಿ ಜಾರಿ ಮಾಡಲು ಸಿವಿಲ್ ನ್ಯಾಯಾಲಯದ ಮೂಲಕ ಜಾರಿ ಮಾಡಲು ನಿಬಂಧಕರ ಪ್ರಮಾಣ ಪತ್ರದ ಮೇಲೆ ಅಧಿಕಾರ ಇದೆ. ಪ್ರಮಾಣ ಪತ್ರ ಇಲ್ಲದ ಪ್ರಸಂಗದಲ್ಲಿ ನಿಬಂಧಕರು ನಿರ್ದೇಶಿಸಿದ ವ್ಯಕ್ತಿಯಿಂದ ಜಾರಿ ಮಾಡಿಸಬಹುದು. ಆದರೆ ಪ್ರಮಾಣ ಪತ್ರ ಡಿಕ್ರಿಗೆ ವಿರುದ್ಧವಾಗಿದ್ದರೂ ಅದನ್ನು ಸಿವಿಲ್ ನ್ಯಾಯಾಲಯದ ಮೂಲಕ ಜಾರಿ ಮಾಡಿಸಲು ಸಾಧ್ಯವಾಗುವುದಿಲ್ಲ. (2010 Indlaw Kar 390, 2010 (5) KLJ 524)

48. ಅಪೆಕ್ಸ್ ಸಂಸ್ಥೆಗೆ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿದ್ದು ಈ ಅಂತರಿಕ ಆದೇಶ, ಆ ಚುನಾವಣೆಗೆ ತಡೆಯಾಗಬಹುದಾದರೂ, ಶ್ರೇಷ್ಠ ನ್ಯಾಯಾಲಯ ತನ್ನ AIR 1952 SC 64 ರಲ್ಲಿ ಒಮ್ಮೆ ಚುನಾವಣಾ ಪ್ರಕ್ರಿಯೆ ಪ್ರಾರಂಭವಾದ ನಂತರ, ಯಾವುದೇ ನ್ಯಾಯಾಲಯ ಮಧ್ಯಪ್ರವೇಶ ಮಾಡಬಾರದೆಂಬ ನೀತಿ ಅನುಗುಣ, ಚುನಾವಣೆ ಪ್ರಕ್ರಿಯೆ ಮುಗಿದ ನಂತರ ಕಲಂ 70 ರನ್ವಯ ದಾವಾ ಪ್ರಕರಣದಲ್ಲಿ ಪರಿಹಾರ ಪಡೆಯಬೇಕು. ಆದ್ದರಿಂದ ಈ ಪ್ರಕರಣದಲ್ಲಿ ಬ್ಯಾಂಕಿನ ಪ್ರತಿನಿಧಿಯಾಗಿ ಅಪೆಕ್ಸ್ ಬ್ಯಾಂಕಿನ ಚುನಾವಣಾ ಪ್ರಕ್ರಿಯಲ್ಲಿ ಭಾಗವಹಿಸಲು 9ನೇ ಎದುರು ಅರ್ಜಿದಾರರಿಗೆ ಅವಕಾಶ ನೀಡಲಾಗಿದೆ. (2010 Indlaw Kar 330, 2010 (5) KLJ 1)

49. ಸಾಲ ಪಡೆಯುವಾಗ ನೀಡಿದ ಗ್ಯಾರೆಂಟಿ ದಾರ, ಸಾಲದ ಬಾಕಿಗೆ ಕಲಂ 70 ರಲ್ಲಿ ಡಿಕ್ರಿ ಪಡೆದ ನಂತರ ತನ್ನ ಹಕ್ಕು ಭಾದ್ಯತೆಗಳ ಬಗ್ಗೆ ಪ್ರಶ್ನಿಸಲು ಅವಕಾಶ ಇದೆ. ಕಲಂ 105ರ ಮೇಲ್ಮನವಿಯಲ್ಲಿಯೂ ಅವಕಾಶ ಇದೆ. ರಿಟ್ ಮೂಲಕ ಪರಿಹಾರ ಪಡೆಯಲಾಗದು. ದಾವಾ ವಿಚಾರಣ ಸಮಯದಲ್ಲಿ ಅಥವಾ 105ರ ಮೇಲ್ಮನವಿಯಲ್ಲಿ ಪರಿಹಾರ ಕೇಳುವ ಬದಲು, ರಿಟ್ ಮೂಲಕ ಅಲ್ಲ. (2010 Indlaw Kar 12, 2010 (2) KLJ 379)

50. ಜಾರಿ ಮಾಡುವ ಪ್ರಾಧಿಕಾರ ಸಂಬಳದಿಂದ ಬಾಕಿ ವಸೂಲಿ ಮಾಡಲು ವಾರೆಂಟ್ ಹೊರಡಿಸಿದ ನಂತರ, ಸಾಲ ಬಾಕಿಯನ್ನು ಸಂಬಳದಿಂದ ಮುರಿದು ಸಂಘಕ್ಕೆ ಕಟ್ಟುವ ಜವಾಬ್ದಾರಿ, ಸಂಬಳ ಬಟವಾಡೆ ಮಾಡುವ ಅಧಿಕಾರಿಯು ಜವಾಬ್ದಾರಿ. ಆ ರೀತಿ ಮಾಡದೆ ಇದ್ದುದರಿಂದ ಈ ರಿಟ್ ಮುಖಾಂತರ ಪರಿಹಾರ ಕೇಳಿದಾಗ, ಅದನ್ನು ಮಾನ್ಯ ಮಾಡಬೇಕು. ಆದ್ದರಿಂದ ಸಂಬಳ ಬಟವಾಡೆ ಮಾಡುವ ಅಧಿಕಾರಿ ಸಂಬಳದಲ್ಲಿ ಮುರಿದು ಜಮಾ ಮಾಡತಕ್ಕದ್ದು. (2009 Indlaw Kar 400, 2010

(1) KLJ 379)

51. ವ್ಯವಸ್ಥಾಪಕ ನಿರ್ದೇಶಕನಿಗೆ ನೌಕರರನ್ನು ನೇಮಕ ಮಾಡಲು ಅಧಿಕಾರ ಇಲ್ಲದೇ ಇದ್ದರೂ, ನೇಮಕ ಮಾಡಿ, ಭರ್ತಿ ಮಾಡುವ ಸಂದರ್ಭದಲ್ಲಿ ಅಂತಹ ನೌಕರಿನಿಗೆ ಭಡ್ತಿ ನೀಡಲಾಗದು. ಅಂದರೆ, ಅಂತಹ ನೇಮಕಗೊಂಡ ವ್ಯಕ್ತಿ ಸಂಘದ ನೌಕರನೇ ಅಲ್ಲ ಮತ್ತು ಅವನ ಹೆಸರು ಜೇಷ್ಠತಾ ಪಟ್ಟಿಯಲ್ಲಿ ಇರತಕ್ಕದ್ದಲ್ಲ. ನೇಮಕ ಮಾಡುವ ಅಧಿಕಾರ ಆಡಳಿತ ಮಂಡಳಿ (ನೇಮಕಾತಿ ಸಮಿತಿಗೆ)ಗೆ ಮಾತ್ರ. (2009 Indlaw Kar 346, 2010 (1) KLJ 100)

52. ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿ 12 ನಿರ್ದೇಶಕರ ಆಯ್ಕೆ ಮುಕ್ತಾಯವಾಗದೆ ಈ ರಿಟ್ ಮೂಲಕ ಇಬ್ಬರು ಅಭ್ಯರ್ಥಿಗಳಿಗೆ ಚುನಾವಣೆಯಲ್ಲಿ ಭಾಗವಹಿಸಲು ಅವಕಾಶ ನೀಡುವಂತೆ ಮನವಿ ಸ್ವೀಕರಿಸಲಾಗದು. ಸಹಕಾರ ಕಾಯಿದೆ ಯಲ್ಲಿ ಪರಿಹಾರ ಪಡೆಯಲು ಕಲಂ 70 ರಲ್ಲಿ ಅವಕಾಶ ಕಲ್ಪಿಸಿರುವುದರಿಂದ, ದಾವಾ ದಾಖಲಿಸಿ ಪರಿಹಾರ ಕೇಳುವ ಬದಲು, ರಿಟ್ ಮುಖಾಂತರ ಪರಿಹಾರ ನೀಡಲಾಗದು. ಸಹಕಾರ ಕಾಯಿದೆಯಲ್ಲಿಯೇ ಪರಿಹಾರ ಪಡೆಯಬೇಕು. (2009 Indlaw Kar 170, 2009 (5) KLJ 595)

53. ರಾಜ್ಯ ಸರ್ಕಾರ ಚುನಾವನೆಯನ್ನು ಮುಂದೂಡುವ ಅಧಿಕಾರ ಇದೆ (ಕಲಂ 39ಎ(4) ಮತ್ತು ಕಲಂ 121) ಏಕೆಂದರೆ ಎರಡು ಚುನಾವಣೆಗಳು  ನಡೆಯುತ್ತಿರುವುದರಿಂದ ಮುಂದೆ ಹಾಕಬಹುದು. (ಲೋಕ ಸಭೆ ಚುನಾವಣೆ) ಅಂತಹ ಸಂದರ್ಭದಲ್ಲಿ ಸಹಕಾರ ಸಂಘಗಳ ಚುನಾವಣೆ ಮುಂದೂಡಿದಾಗ, ಪುನಃ ಪ್ರಕ್ರಿಯೆ ಪ್ರಾರಂಭಿಸುವಾಗ ಯಾವ ಸ್ಥಿತಿಯಲ್ಲಿ ಚುನಾವಣೆ ನಿಂತು ಹೊಗಿತ್ತು ಆ ಸ್ಥಿತಿಯಿಂದ ಪುನಃ ಪ್ರಾರಂಭಿಸತಕ್ಕದ್ದು ಮತ್ತು ಸರ್ಕಾರಕ್ಕೆ ಮುಂದೂಡಿದ ಅಧಿಸೂಚನೆ ಯಾವ ದಿನಾಂಕದಿಂದ ಹಿಂಪಡೆಯಲಾಗುತ್ತಿದೆ ಎಂದು ಸೂಚಿಸಲು ಆದೇಶಿಸಿತು. (2009 Indlaw Kar 144, 2009 (5) KLJ 280)

54. ಕರ್ನಾಟಕ ಮೇಲ್ಮನವಿ ಪ್ರಾಧಿಕಾರಣ ಕಲಂ 105 ರಲ್ಲಿ ಸಲ್ಲಿಸಿದ ಪ್ರಕರಣದಲ್ಲಿ ಏಕ ಸದಸ್ಯ ಪೀಠ ಪ್ರಕರಣ ವಜಾ ಮಾಡಿದ್ದನ್ನು ಪ್ರಶ್ನಿಸಿದ್ದು, ಇದು ನ್ಯಾಯ ಸಮರ್ಪಕವಲ್ಲವೆಂದು ವಾದಿಸಿದ್ದನ್ನು ಊರ್ಜಿತಗೆ ಉಳಿಸಿ, ಏಕ ಸದಸ್ಯ ಪೀಠ ಯಾವುದೇ ಪ್ರಕರಣವನ್ನು ವಜಾ ಮಾಡುವ ಅಧಿಕಾರ ಇಲ್ಲ. ದ್ವಿ ಸದಸ್ಯ ಪೀಠ ಮಾತ್ರ ಒಂದು ಪ್ರಕರಣ ತೀರ್ಮಾನಿಸಬಹುದು, ಏಕ ಪೀಠವಲ್ಲವೆಂದು ತೀರ್ಮಾನಿಸಿತು. (2009 Indlaw Kar 71, 2009 (4) KLJ 294)

55. ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿದ್ದ ಸಮಯದಲ್ಲಿ ಮಾರಾಟ ಮಾಡಿದ ಬ್ಯಾಂಕ್ ಆಸ್ತಿಯನ್ನು ಒಂದು ಟ್ರಸ್ಟ್‌ಗೆ ಮಾರಾಟ ಮಾಡಿದ್ದು, ಆ ಟ್ರಸ್ಟ್‌ನ ಅಧ್ಯಕ್ಷರು ಬ್ಯಾಂಕಿನ ಅಧ್ಯಕ್ಷರ ಹೆಂಡತಿ ಇದ್ದು, ಇದು ಬ್ಯಾಂಕಿಗೆ ಸಂಬಂಧಪಟ್ಟ ವಿಷಯವಾಗಿದ್ದು, ಇದು ಸಹಕಾರ ಸಂಘಗಳ ಕಾಯಿದೆ ಕಲಂ 70 ರಲ್ಲಿ ವಿವಾದವಾಗುತ್ತಿದೆ ಮತ್ತು ಆ ವಿವಾದವನ್ನು ಸಹಕಾರ ಕಾಯಿದೆಯಲ್ಲಿಯೇ ಪರಿಹಾರ ಪಡೆಯಬೇಕು. (2009 Indlaw Kar 123, 2009 (4) KLJ 633)

56. ಕರ್ನಾಟಕ ಮೇಲ್ಮನವಿ ಪ್ರಾಧಿಕರಣ ಕಲಂ 70 ರಲ್ಲಿ ದಾಖಲಾದ ಪ್ರಕರಣ ವಿಚಾರಣಾ ಸಂದರ್ಭದಲ್ಲಿ ವಿಳಂಬ ವಿನಾಯ್ತಿ ಕಾಯಿದೆಯಲ್ಲಿ ಸಲ್ಲಿಕೆ ಯಾದ ಅರ್ಜಿಯನ್ನು ಪರಿಶೀಲಿಸಿ, ಎರಡೂ ಪಕ್ಷಗಳ ವಕೀಲರ ವಾದಗಳನ್ನು ಕೇಳಿ ದಾಖಲೆಗಳನ್ನು ಪರಿಶೀಲಿಸಿ, ವಿಳಂಬ ವಿನಾಯ್ತಿ ನೀಡಿರುವುದರಿಂದ ಮಧ್ಯಪ್ರವೇಶ ಮಾಡುವ ಅವಶ್ಯಕತೆ ಇಲ್ಲ. (2009 Indlaw Kar 9, 2009 (2) KLJ

561)

57. ಚುನಾವಣಾ ಪ್ರಕ್ರಿಯೆ ಸಂದರ್ಭದಲ್ಲಿ ಒಂದು ಕ್ಷೇತ್ರದ ಸ್ಪರ್ಧಿಗಳಲ್ಲಿ ಒಬ್ಬ ನಾಮ ಪತ್ರ ವಾಪಸ್ ಪಡೆದಿದ್ದರೆಂದು ಮತ್ತೊಬ್ಬ ಅಭ್ಯರ್ಥಿ ಅವಿರೊದವಾಗಿ ಆಯ್ಕೆಯಾಗಿದ್ದರೆಂದು ತೀರ್ಪಿತ್ತಾಗ, ಅದನ್ನು ಪ್ರಶ್ನಿಸಿ, ತಾನು ನಾಮಪತ್ರ ವಾಪಸ್ ಪಡೆದಿಲ್ಲವೆಂದು ದಾವಾ ದಾಖಲಿಸಿದಾಗ ಸಂಯುಕ್ತ ನಿಬಂಧಕರು, ಉಪನಿಬಂಧಕರಿಗೆ ಪ್ರಕರಣ ತೀರ್ಮಾನಕ್ಕೆ ರವಾನಿಸಿದಾಗ, ವಿಳಂಬವಾಗಿದೆ ಎಂದು ಅರ್ಜಿ ತಿರಸ್ಕರಿಸಿದಾಗ, ಈ ರಿಟ್ ಅರ್ಜಿ ದಾಖಲಾಗಿದೆ. ಕಲಂ 70ಎ ಅನ್ವಯ ಚುನಾವನಾ ತಕರಾರು ಅರ್ಜಿಯನ್ನು 30 ದಿವಸಗಳ ನಂತರವೂ ದಾಖಲಿಸಲು ಅವಕಾಶ ಇರುವುದರಿಂದ, ಉಪನಿಬಂಧಕರು ನೀಡಿದ ಹಿಂಬರಹ ತಪ್ಪು. ಆದ್ದರಿಂದ, ವಿಳಂಬವಾಗಿದೆ ಎಂದು ವಜಾ ಮಾಡಿ ನೀಡಿದ ಹಿಂಬರಹವನ್ನು ಕಿತ್ತು ಹಾಕಲಾಯಿತು. (2008 Indlaw Kar 342, 2009 (1) KLJ 458)

58. ಸಾಲ ಪಡೆದಾತನ ಮೇಲೆ ಪಡೆದ ಡಿಕ್ರಿಯನ್ನು ಜಾರಿ ಮಾಡಿದಾಗ, ಮಾರಾಟವನ್ನು ರದ್ದು ಪಡಿಸಲು ಸಲ್ಲಿಸಿದ ಅರ್ಜಿ ವಿಲೇವಾರಿ ಮಾಡುವಾಗ, ವಿವಿದ ಪ್ರಾಧಿಕಾರಗಳ ಮುಂದೆ ಪ್ರಕರಣ ವಜಾ ಆಗಿದೆ ಮತ್ತು ಅರ್ಜಿ ಸಲ್ಲಿಸಲು ವಿಳಂಬವಾಗಿದೆ ಎಂಬ ಕಾರಣದಿಂದ, ತಿರಸ್ಕರಿಸಲಾಗದು. ಬೇರೆ ಬೇರೆ ಪ್ರಾಧಿಕಾರಗಳಲ್ಲಿ ನಡವಳಿಕೆಗಳು ಇದ್ದ ಕಾರಣದಿಂದ, ಪರಿಹಾರ ನಿರಾಕರಿಸಲಾಗದು. ಆದ್ದರಿಂದ ರಿಟ್ ಅರ್ಜಿ ಮನ್ನ ಮಾಡಲಾಯಿತು. ಎಲ್ಲಿ ಒಬ್ಬ ವ್ಯಕ್ತಿಯ ಹಕ್ಕುಗಳಿಗೆ ತೊಡಕಾಗುತ್ತದೆಯೋ, ಅಂತಹ ಸಂದರ್ಭದಲ್ಲಿ ಪರಿಹಾರ ನಿಯಮ 38(5) ರಲ್ಲಿ ನೀಡಬಹುದು. (2008 Indlaw Kar 489, 2009 (4) KLJ 419)

59. ಪೋಲೀಸ್ ಅಧಿಕಾರಿಯು ಮೌಖಿಕ ಆದೇಶದ ಮೇಲೆ ಚುನಾವಣೆಯನ್ನು ಮುಂದೂಡಲಾಗದು. ಚುನಾವಣೆಯನ್ನು ಯಾವ ಸ್ಥಿತಿಯಲ್ಲಿ ಮುಂದೂಡಲಾಗಿತ್ತೋ, ಅದೇ ಸ್ಥಿತಿಯಂದು ಮುಂದುವರಿಸಿ ಚುನಾವಣೆ ಮುಕ್ತಿಯ ಮಾಡಲು ಆದೇಶಿಸಲಾಯಿತು. (2008 Indlaw Kar 281, 2009 (2) KLJ 438)

60. ಚುನಾವಣಾಧಿಕಾರಿಗೆ, ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ನಂತರ – ಮುಂದೂಡಲು ಕಾಯಿದೆ ಮತ್ತು ನಿಯಮಗಳಲ್ಲಿ ಅವಕಾಶ ಇಲ್ಲ. ಚುನಾವಣಾಧಿಕಾರಿ ಯಾವುದೇ ಕಾರಣಕ್ಕೂ ಅಧಿಕಾರ ಇಲ್ಲದೇ ಇದ್ದರೂ, ಇದೆ ಎಂದು ಕ್ರಮ ಜರುಗಿಸುವ ಅಧಿಕಾರ ಇಲ್ಲ. ಕಾನೂನು ಸುವ್ಯವಸ್ಥೆ ಕಾಪಾಡಲು ಎಂದು ಅಧಿಕಾರ ದುರುಪಯೋಗ ಮಾಡತಕ್ಕದ್ದಲ್ಲ. ಅದರಲ್ಲಿ ಪೋಲೀಸ್ ಅಧಿಕಾರಿಯು ಮೌಖಿಕ ಆದೇಶದ ಮೇಲೆ, ಚುನಾವಣೆ ಮುಂದೂಡತಕ್ಕದ್ದಲ್ಲ. ಯಾವ ಸ್ಥಿತಿಯಲ್ಲಿ ಚುನಾವಣಾ ಪ್ರಕ್ರಿಯೆ ನಿಂತು ಹೋಗಿತ್ತೊ, ಅದೇ ಸ್ಥಿತಿಯಂದು ಮುಂದುವರಿಸಿ ಚುನಾವಣೆ ಮುಕ್ತಾಯ ಮಾಡತಕ್ಕದ್ದು. (2008 Indlaw Kar 137, 2009 (1) KLJ 121)

**ನೀತಿ : ರಾಜ್ಯ ಸರ್ಕಾರ ಒಮ್ಮೆ ಚುನಾವಣಾ ಪ್ರಕ್ರಿಯೆ ಪ್ರಾರಂಭವಾದ ನಂತರ ಮುಂದೂಡುವ ಅಧಿಕಾರ ಇಲ್ಲ.**

61. ಡಿಕ್ರಿ ಪಡೆದು ಆಸ್ತಿ ಮಾರಾಟ ಮಾಡುವಾಗ, ಮಾರಾಟಾಧಿಕಾರಿ ಯಾವುದೇ ಕಾರಣಕ್ಕೂ ಮಾರಾಟ ಮಾಡಿದ ಶರತ್ತಿಗನ್ವಯ ಬಾಕಿ ಹಣ ಪಾವತಿಗೆ ನಿಯಮದಲ್ಲಿ ನಿಗದಿ ಪಡಿಸಿದ ಅವಧಿಯೊಳಗೆ ಪಾವತಿ ಮಾಡತಕ್ಕದ್ದು. ಅವಧಿ ವಿಸ್ತರಿಸುವ ಅಧಿಕಾರ ಮಾರಾಟಾಧಿಕಾರಿಗೆ ಇರತಕ್ಕದ್ದಲ್ಲ. (2008 Indlaw Kar 345, 2009 (1) KLJ 493)

62. ಅಧ್ಯಕ್ಷರ ಸ್ಥಾನ ಅವಧಿ ಮುಗಿದ ನಂತರ ಖಾಲಿಯಾದಾಗ, ಆ ಸ್ಥಾನಕ್ಕೆ ಆಯ್ಕೆ ಮಾಡಿದ ಸಭೆಯಲ್ಲಿ

ಕೋರಂ ಅಭಾವದಿಂದ ಆಯ್ಕೆ ಅಸಿಂದು ಎಂದು ಸಹಾಯಕ ನಿಬಂಧಕರು ತೀರ್ಮಾನಿಸಿದಾಗ, ಅದನ್ನು ಪ್ರಶ್ನಿಸಿ ರಿಟ್ ಅರ್ಜಿ ದಾಖಲಿಸಲಾಗಿ, ಅಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸಿದ ನಿರ್ದೇಶಕರ ಸಂಖ್ಯೆ ಮೂರು ಮಾತ್ರ ಇದ್ದು ಒಂಬತ್ತು ನಿರ್ದೇಶಕರಲ್ಲಿ ಇಬ್ಬರು ಅನರ್ಹತೆಗೊಂಡಿದ್ದು, ಕೋರಂಗೆ ಅವಶ್ಯಕವಾದ ಸಂಖ್ಯೆ ನಾಲ್ಕು ಅಥವಾ ಐದು ಇರಬೇಕು. ಮೂವರು ಮಾತ್ರ ಹಾಜರಿದ್ದುದರಿಂದ ಅಧ್ಯಕ್ಷರ ಆಯ್ಕೆ ಕೋರಂ ಇಲ್ಲದೆ ನಡೆದಿದೆ. ಆದ್ದರಿಂದ ಸಹಾಯಕ ನಿಬಂಧಕರ ಆದೇಶ ಕಿತ್ತು ಹಾಕಲಾಗದು. (2008 Indlaw Kar 143, 2009 (1) KLJ 151)

63. ಆಡಳಿತ ಮಂಡಳಿಗೆ ಚುನಾವಣೆ ನಡೆಸುವುದು ಒಂದು ಜವಾಬ್ದಾರಿ. ಏಳು ವರ್ಷಗಳಿಂದ ಮಂಡಳಿ ರದ್ದತಿ ಮಾಡಿ, ಕಾಯಿದೆಯಲ್ಲಿ ನಿಗದಿ ಪಡಿಸಿದ ಅವಧಿಯೊಳಗೆ ಚುನಾವಣೆ ನಡೆಸದೇ ಇರುವುದು ಸಂಬಂಧಪಟ್ಟ ಪ್ರಾಧಿಕಾರದ ಬೆಜವಾಬ್ದಾರಿ. ಆಡಳಿತ ಮಂಡಳಿ, ನಿಗದಿ ಪಡಿಸಿದ ಅವಧಿಗೆ ಚುನಾವಣೆ ನಡೆಸಲು ನಿರ್ದೇಶಿಸಲಾಯಿತು. (2008 Indlaw Kar 410, 2009 (3) KLJ 380)

64. ಸಾಲಬಾಕಿಗೆ ಡಿಕ್ರಿ ಪಡೆದು, ವಸೂಲಾತಿ ಕ್ರಮ ಜರುಗಿಸುವುದು ಸಂಘದ ಜವಾಬ್ದಾರಿ. ಕಲಂ 101(1) ರನ್ವಯ ಜಾರಿ ಕ್ರಮ ಜರುಗಿಸಿದಾಗ 12 ವರ್ಷದೊಳಗೆ ಜಾರಿ ಮಾಡಿಲ್ಲ ಮತ್ತು 20 ವರ್ಷಗಳ ನಂತರ ಜಾರಿ ಅರ್ಜಿ ಸಲ್ಲಿಸಲಾಗಿದೆ ಎಂದು ವಿಳಂಬದ ಬಗ್ಗೆ ತಕರಾರು ತೆಗೆದಾಗ ಅದನ್ನು ಸಿವಿಲ್ ನ್ಯಾಯಾಲಯ, ಸಂಘದ ಪರವಾಗಿ ತೀರ್ಪಿತ್ತದ್ದನ್ನು ಪ್ರಶ್ನಿಸಿ, ರಿಟ್ ಅರ್ಜಿ ದಾಖಲಿಸಿದಾಗ, ಸಂಘ ಸಾಲ ವಸೂಲಿ ಪ್ರಕ್ರಿಯೆಯನ್ನು ಯಾರ ಮುಖಾಂತರ, ಯಾವಾಗ ಜಾರಿ ಮಾಡಬೇಕೆಂದು ತೀರ್ಮಾನಿಸಬಹುದು. ಅದನ್ನು ಸಿಪಿಸಿ ಅನ್ವಯ ಇಲ್ಲ. ಆದ್ದರಿಂದ ವಿಳಂಬದ ಬಗ್ಗೆ ತೆಗೆದು ತಕರಾರನ್ನು ಅನೂರ್ಜಿತಗೊಳಿಸಿದ ಸಿವಿಲ್ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಿತು. (2008 Indlaw Kar 212, 2008 (6) KLJ 643)

65. ಸೆಕ್ಯೂರೈಟೆಸೇಷನ್ ಕಾಯಿದೆಯಲ್ಲಿ ಸಹಕಾರ ಬ್ಯಾಂಕಿನಿಂದ ನೀಡಿದ ಭದ್ರತೆ ಆಧಾರದ ಸಾಲ ವಸೂಲಾತಿಯಲ್ಲಿ ಪ್ರಾಶಸ್ತ್ಯ ಸಿಗುತ್ತದೆ. ಆದಾಯ ತೆರಿಗೆ ಕಾಯಿದೆ/ಅಧಿಕಾರಿ ಕಾಯಿದೆಯಲ್ಲಿನ ಬಾಕಿ ವಸೂಲಿ ಮಾಡಲು ಮೊದಲ ಪ್ರಾಶಸ್ತ್ಯ ಭದ್ರತೆ ಆಧಾರದ ಸಾಲದ ಆಸ್ತಿ ಹರಾಜಿನಿಂದ ಹಣದ ಮೇಲಲ್ಲ ಆಧಾರ ರಹಿತ ಸಾಲ ಬ್ಯಾಂಕ್ ನೀಡಿದ್ದರೆ, ಮಾತ್ರ ಅಂತಹ ಪ್ರಸಂಗದಲ್ಲಿ ಮಾತ್ರ ಪ್ರಾಶಸ್ತ್ಯ ಇರತಕ್ಕದ್ದು. (2008 Indlaw Kar 13, 2008 (5) KLJ 81, 2008 (3) KLJ 608)

66. ಸಹಕಾರ ಕಾಯಿದೆಯಲ್ಲಿ ಒಬ್ಬ ವ್ಯಕ್ತಿಯನ್ನು ಸದಸ್ಯನನ್ನಾಗಿ ನೇಮಿಸಿಕೊಳ್ಳಲು (ಕಲಂ 70 ರಡಿ) ಆದೇಶ ಪಡೆದ ನಂತರ, ಅದನ್ನು ಜಾರಿ ಮಾಡದೇ ಇದ್ದ ಪ್ರಸಂಗದಲ್ಲಿ, ಅದು ನ್ಯಾಯಾಲಯ ನಿಂದನೆ ಕಾಯಿದೆಯಲ್ಲಿ ಊರ್ಜಿತವೇ ಎಂಬ ಪ್ರಶ್ನೆ ಬಂದಾಗ – ಅದು ಊರ್ಜಿತವಲ್ಲ. ಏಕೆಂದರೆ ಸಹಕಾರ ಕಾಯಿದೆಯಲ್ಲಿ ಕಲಂ 109(13) ರಲ್ಲಿ ಆದೇಶ ಪಾಲಿಸದಿದ್ದರೆ ಶಿಕ್ಷೆ ಮತ್ತು ದಂಡಕ್ಕೆ ಅವಕಾಶ ಕಲ್ಪಿಸಿದ್ದು, ಅದನ್ನು ಜಾರಿ ಮಾಡಬೇಕು. ಏಕೆಂದರೆ ಒಂದು ಕಾಯಿದೆಯಲ್ಲಿ ಅನುಸರಿಸಬೇಕಾದ ನೀತಿ ನಿಯಮಗಳನ್ನು ರೂಪಿಸಿದಾಗ, ಅದೇ ಮಾರ್ಗದಲ್ಲಿ ನಡೆಯಬೇಕು. ಅಂದರೆ ಸಹಕಾರ ಕಾಯಿದೆಯಲ್ಲಿ ಆದೇಶ ಪಾಲಿಸದಿದ್ದರೆ ಕಲಂ 109(13) ರಲ್ಲಿ ಕ್ರಮವಿಡಲು ಅವಕಾಶ ಇರುವುದರಿಂದ, ಅದು ನ್ಯಾಯಾಲಯ ನಿಂದನೆ ಕಾಯಿದೆ ವ್ಯಾಪ್ತಿಗೆ ಬರುವುದಿಲ್ಲ. (2008 Indlaw Kar 282, 2009 (2) KLJ 444)

67. ಸಹಕಾರ ನ್ಯಾಯಾಲಯ ಒಬ್ಬ ಕಕ್ಷಿದಾರನ ಹೆಸರಿಗೆ ಮಾರಾಟವನ್ನು (ಒಂದು ವಾರದೊಳಗೆ) ಮಾಡಿಕೊಡಲು ಸೂಚಿಸಿದಾಗ, ಈ ರಿಟ್ ಅರ್ಜಿ ದಾಖಲಾಗಿದೆ. ಸಂಘದ ವ್ಯವಹಾರದಲ್ಲಿ ಯಾವುದೇ ರೀತಿ ನಿಯಮಗಳನ್ನು ತಿಳಿಸಿ, ಅಧಿಕಾರ ಇಲ್ಲದೇ ಚಲಾಯಿಸಿದಾಗ, ಅಂದರೆ ಕಾನೂನು ಬಾಹಿರ ಕ್ರಮ ನಡೆಯುತ್ತಿದ್ದರೂ, ಅದನ್ನು ರಿಟ್ ಅರ್ಜಿಯಲ್ಲಿ ಪರಿಹಾರ ನೀಡತಕ್ಕದ್ದಲ್ಲ. (2008 Indlaw Kar 436, 2009 (3) KLJ 555)

68. ಕಲಂ 70 ರಡಿ ದಾವಾ ದಾಖಲಿಸಿ ಡಿಕ್ರಿ ಪಡೆಯುವ ಅಧಿಕಾರ ಸಂಘಕ್ಕೆ ಇದೆ. ಇದಾದ ನಂತರ ಸಾಲಗಾರ ಸಂಬಳ ಪಡೆಯುವ ನೌಕರನಾಗಿದ್ದು, ಸಂಬಳ ಬಟವಾಡೆ ಮಾಡುವ ಅಧಿಕಾರಿಗೆ ಕಲಂ 34(1) ಮತ್ತು (2) ರನ್ನು ಸಂಬಳದಲ್ಲಿ ಮುರಿದು ಸಂಘಕ್ಕೆ ಪಾವತಿಸಲು ಆದೇಶಿಸುವುದು ವಸೂಲಾಧಿಕಾರಿ ಅಧಿಕಾರ. ಆದ್ದರಿಂದ ಸಾಲ ವಸೂಲಿಗೆ ಕಲಂ 34 (1) ಮತ್ತು (2) ರಲ್ಲಿ ಸಂಬಳದಲ್ಲಿ ಹಿಡಿದು ಸಂಘಕ್ಕೆ ಪಾವತಿಸಲು ಆದೇಶಿಸಿದಾಗ, ಅಂತರ ಆದೇಶ ಪಾಲಿಸುವುದು ಸಂಬಳ ಪಾವತಿಸುವ ಅಧಿಕಾರಿ ಜವಾಬ್ದಾರಿ. (2008 Indlaw Kar 173, 2009 (1) KLJ 36)

69. ಸೇವಾ ನಿಯಮಗಳಂತೆ ವಿಚಾರಣೆಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿದಾಗ ಕಲಂ 80ರಲ್ಲಿ ಸಲ್ಲಿಸಿದ ದಾವ ಪ್ರಕರಣದಲ್ಲಿ ಆದೇಶ ನೀಡಿ ಮಧ್ಯಪ್ರವೇಶಿಸಬಾರದು. ಶ್ರೇಷ್ಠ ಮತ್ತು ಉಚ್ಚನ್ಯಾಯಾಲಯ ಮತ್ತು ನ್ಯಾಯಾಧಿಕರಣಗಳು ಇಂತಹ ಪ್ರಸಂಗದಲ್ಲಿ ವಿಚಾರಣೆಗೆ ಮಧ್ಯಪ್ರವೇಶ ಮಾಡಬಾರದೆಂದು ನಿರ್ದೇಶಿಸಿರುವಾಗ, ಈ ನ್ಯಾಯಾಲಯ ಮಧ್ಯಪ್ರವೇಶ ಸಲ್ಲದು. (2008 Indlaw Kar 221, 2008 (6) KLJ 696)

70. ವ್ಯವಹಾರಕ್ಕೆ ಸಂಬಂಧಪಟ್ಟ ಠೇವಣಿ ನೀಡಿದ ಏಜೆಂಟ್, ಠೇವಣಿ ಹಣ ವಾಪಸ್ ಪಡೆಯಲು ಔದ್ಯೋಗಿಕ ಕಾಯಿದೆ ಅಡಿ ಪ್ರಕರಣ ದಾಖಲಿಸಿದಾಗ, ಈ ವಿವಾದ ಸಹಕಾರ ಕಾಯಿದೆ ಕಲಂ 70ರಲ್ಲಿ ಊರ್ಜಿತಾನೇ ಅಲ್ಲವೇ ಎಂಬುದಕ್ಕೆ, ಸಹಕಾರ ಕಾಯಿದೆ ಅನ್ವಯ. ಸಂಘದ ಜೊತೆ ವ್ಯವಹಾರ ಮಾಡುವ ಒಬ್ಬ ಏಜೆಂಟ್ ತನ್ನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಇಟ್ಟ ಠೇವಣಿ (ಇಡಿ ಗಂಟು) ವಾಪಸ್ ಪಡೆಯಲು ಸಹಕಾರ ಕಾಯಿದೆಯಲ್ಲಿಯೇ ಪರಿಹಾರ ಪಡೆಯಬೇಕು. ಏಜೆಂಟ್ ಎಂದರೆ ಮಾಜಿ ಏಜೆಂಟ್ ಸಹ ಸೇರುತ್ತಾನೆ. ಸಿವಿಲ್ ಪ್ರಕರಣ ಊರ್ಜಿತವಲ್ಲ. (2008 Indlaw Kar 205, 2008 (6) KLJ 530)

71. ಕೇಂದ್ರ ಕಾಯಿದೆ ಬಾಕಿಗಳಿಗೆ ಬರಬೇಕಾದ ಬಾಕಿ ವಸೂಲಾತಿಗೆ ಬ್ಯಾಂಕ್‌ಗಳು ನೀಡಿದ ಭದ್ರತೆ ಆಧಾರದ ಆಸ್ತಿ ಮೇಲೆ ಪ್ರಥಮ ಪ್ರಾಶಸ್ತ್ಯ ಪಡೆಯುತ್ತದೆಯೇ ಎಂಬ ಪ್ರಶ್ನೆಗೆ – ಕೇಂದ್ರ ಕಾಯಿದೆಗಳಲ್ಲಿ ಯಾವುದೇ ಬ್ಯಾಂಕು ನೀಡಿದ ಸಾಲಗಳಿಗಿಂತ ಪ್ರಥಮ ಪ್ರಾಶಸ್ತ್ಯ ಆಧ್ಯತೆ ಇದೆ ಎಂದು ಸ್ಪಷ್ಠ ಅವಕಾಶ ಇಲ್ಲದೇ ಇರುವುದರಿಂದ, ಕೇಂದ್ರ ಕರ ಕಾಯಿದೆ ವಸೂಲಿ ಮಾಡುವ ಅಧಿಕಾರ ಇಲ್ಲ. ಅಂದರೆ ಬ್ಯಾಂಕ್‌ಗಳು ಸಾಮಾನ್ಯ ಅಥವಾ ಭದ್ರತೆ ಆಧಾರದ ಸಾಲ ನೀಡಿ ಬಾಕಿ ವಸೂಲಿ ಮಾಡುವಾಗ, ಅವರ ಸಾಲ ವಸೂಲಿಗೆ ಪ್ರಶಸ್ತ್ಯ ಇರತಕ್ಕದ್ದು, ಕೇಂದ್ರ ಕಾಯಿದೆಯಲ್ಲಿನ ಅಧಿಕಾರಿಗಳಿಗಿಲ್ಲ. (2008 Indlaw Kar 45, AIR 2008 Kar 70, 2008 (2) DRTC 219, 2008 (226) ELT 325, 2008 (12) STR 671)

72. ಒಬ್ಬ ನೌಕರನಿಗೆ ಸಂಬಳ ಹೆಚ್ಚಿಸಿ, ಸಂಬಂಧಪಟ್ಟ ಪ್ರಾಧಿಕಾರದ ಒಪ್ಪಿಗೆಗೆ ಕಳುಹಿಸಿದ್ದು, ಅದು ಸಿಕ್ಕದೇ ಇದ್ದಾಗ, ದಾವಾ ದಾಖಲಿಸಿ ವಸೂಲಿ ಕ್ರಮ ಜರುಗಿಸಿದ್ದ ಡಿಕ್ರಿ ಪಡೆದ ನಂತರ ಕರ್ನಾಟಕ ಮೇಲ್ಮನವಿ

ಪ್ರಾಧಿಕರಣ ದೃಢೀಕರಿಸಿದ್ದು ಸರಿಯಾದ ಕ್ರಮವಾಗಿದೆ. ಆದ್ದರಿಂದ ರಿಟ್ ಮೂಲಕ ಪರಿಹಾರ ನೀಡಲಾಗದು. ಸಹಕಾರ ಸಂಘಗಳ ನಿಯಮ 17 ರನ್ವಯ ಪೂರ್ವಾನುಮತಿ ಇಲ್ಲದೇ ಹೆಚ್ಚುವರಿ ಸಂಬಳ ಪಾವತಿಸಿರುವುದರಿಂದ, ಆ ಹಣವನ್ನು ವಸೂಲಿ ಮಾಡಲು ಸರಿಯಾದ ಕ್ರಮ ಜರುಗಿಸಿದೆ. ಮಧ್ಯ ಪ್ರವೇಶ ಸಲ್ಲದು. (2007 Indlaw Kar 364, 2008 (2) KLJ 126)

73. ಸ್ಥಾನದಿಂದ ಅನರ್ಹತೆಗೊಳಿಸಿದಾಗ – ಅನರ್ಹತೆ ಆದೇಶದ ಊರ್ಜಿತತೆ ಮತ್ತು ಕಾನೂನು ಪಾಲಿಸಿಲ್ಲವೆಂದು ರಿಟ್ ಅರ್ಜಿ ಮುಖಾಂತರ ಪರಿಹಾರ ಕೇಳತಕ್ಕದ್ದಲ್ಲ. ಸಹಕಾರ ಕಾನೂನಿನಲ್ಲಿ ಇದಕ್ಕೆ ಅವಕಾಶ ಇದ್ದು, ಇದರ ಮುಖಾಂತರವೇ ಪರಿಹಾರ ಪಡೆಯಬೇಕು. ಸಂಬಂಧಪಟ್ಟ ಪ್ರಾಧಿಕಾರ ಕಾರಣ ಕೇಳುವ ನೋಟೀಸ್ ನೀಡಿದ್ದ, ಅದಕ್ಕೆ ಉತ್ತರ ನೀಡಿಲ್ಲ. ಹಾಗೇನಾದರೂ ದಾಖಲೆ ಲಭ್ಯವಿದ್ದರೆ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಪ್ರಕರಣ ದಾಖಲಿಸಿ ಪರಿಹಾರ ಪಡೆಯತಕ್ಕದ್ದು. ರಿಟ್ ಮೂಲಕ ಅಲ್ಲ. (2007 Indlaw Kar 384, 2008 (2) KLJ 271)

74. ಹೆಚ್ಚುವರಿ ಸಂಬಳ ನೀಡದೇ ಇದ್ದದರಿಂದ, ಆಡಳಿತಾತ್ಮಕ ನ್ಯಾಯಾಲಯದಲ್ಲಿ ಪರಿಹಾರ ನೀಡಬಹುದು. ಏಕೆಂದರೆ ಪರಿಹಾರ ಕೊಡುತ್ತಿರುವ ಮತ್ತು ನೀಡುತ್ತಿರುವ ಅಧಿಕಾರಿಗಳು ಸರ್ಕಾರದಿಂದ ನೇಮಕ ಮಾಡಿದ ಅಧಿಕಾರಿಗಳು ಮತ್ತು ಸೇವಾ ಜೇಷ್ಠತೆ ಮತ್ತು ಹೆಚ್ಚುವರಿ ಸಂಬಳ ಸಂಘದ ನೌಕರರಿಗೆ ನೀಡಿದ ಸಂಬಳವಲ್ಲ. ಅವರು ಇಲಾಖೆಯಲ್ಲಿ ಅವರಿಗೆ ಬರಬೇಕಾದ ಹೆಚ್ಚುವರಿ ಸಂಬಳಕ್ಕಾಗಿ. ಆದ್ದರಿಂದ ಆಡಳಿತ ನ್ಯಾಯ ಮಂಡಳಿ ಪರಿಹಾರ ನೀಡಬೇಕು. ಇಂತಹ ಪ್ರಕರಣವನ್ನು ಕಲಂ 70ರಲ್ಲಿ ಪರಿಹಾರ ನೀಡಲು ಅವಕಾಶ ಇಲ್ಲ. ಏಕೆಂದರೇ ಇಬ್ಬರೂ ಅಧಿಕಾರಿಗಳೂ ಸರ್ಕಾರದಿಂದ ನೇಮಕವಾದವರು. (2007 Indlaw Kar 345, 2008 (2) KLJ 505)

75. ಗ್ರಾಚುಯುಟಿ ಪಾವತಿ ಬಗ್ಗೆ ಕ್ಲೀಷ್ಟಕರ ಪ್ರಶ್ನೆ ಉದ್ಭವಿಸಿದಾಗ ರಾಜ್ಯ ಸಹಕಾರ ಕಾಯಿದೆಯಲ್ಲಿನ ಅವಕಾಶಗಳಲ್ಲಿ ಪರಿಹಾರ ನೀಡುವ ಬದಲು ಕೇಂದ್ರ ಸರ್ಕಾರದ ಗ್ಯಾಚುಯಿಟಿ ಕಾಯಿದೆಯಲ್ಲಿನ ಅವಕಾಶಗಳನ್ನು ನೀಡಬೇಕು. ಇದಕ್ಕೆ 1979 Indlaw SC 75 ಆಧಾರವಾಗಿ ನೀಡಲಾಗಿದೆ. (2006 Indlaw Kar 337, 2007 (1) KLJ 211)

76. ಬಾಕಿ ಸಾಲ ವಸೂಲಾತಿಗೆ ಡಿಕ್ರಿ ಪಡೆದು ಜಾರಿ ಮಾಡುವಾಗ ಆಸ್ತಿ ಹರಾಜು ಹಾಕಿ, ಬಂದ ಹಣದಿಂದ ಸಾಲ ಬಾಕಿ ವಜಾ ಮಾಡಿಕೊಂಡ ನಂತರ, ಜಾರಿ ಕ್ರಮ ಸರಿಯಾಗಿಲ್ಲವೆಂದು ರಿಟ್ ದಾಖಲಿಸಿದಾಗ, ಏಕ ಸದಸ್ಯ ಪೀಠ, ಮಾರಾಟವನ್ನು ರದ್ದು ಪಡಿಸಿ ಮಾರಾಟ ಮಾಡುವಾಗ ಮಾಡಿದ ತಪ್ಪುಗಳನ್ನು ಸರಿಪಡಿಸಿ, ಮರು ಮಾರಾಟ ಮಾಡಲು ಆದೇಶಿಸಿದ್ದನ್ನು ಕಿತ್ತುಹಾಕಬೇಕೆಂದು ಮೇಲ್ಮನವಿ ಸಲ್ಲಿಸಿದಾಗ, ಅರ್ಜಿದಾರ ಸಾಲ ಬಾಕಿಯನ್ನು ಪಾವತಿ ಮಾಡಲು ಒಪ್ಪಿರುವುದರಿಂದ ಸಾಲ ಬಾಕಿ, ಬಡ್ಡಿ ಮತ್ತಿತರ ಖರ್ಚನ್ನು ವಸೂಲಿ ಮಾಡಿಕೊಂಡು, ಸಾಲ ಚುತ್ತಿ ಮಾಡಿಕೊಳ್ಳಲು ಆದೇಶಿಸಲಾಯಿತು. ಸಾಲ ಮರುಪಾವತಿ ಮಾಡದಿದ್ದರೆ, ಮತ್ತು ಸಂಘ ಸಾಲಗಾರನ ಆಸ್ತಿ ಹರಾಜು ಮಾಡಿ ಸಾಲ ವಸೂಲಿ ಮಾಡಿಕೊಳ್ಳಲು ನಿರ್ದೇಶಿಸಲಾಯಿತು. (2006 Indlaw Kar 222, 2006 (5) KLJ 233)

77. ಸಂಘದ ಹಣ ದುರುಪಯೋಗ ಮಾಡಿಕೊಂಡಿದ್ದರೆಂದು ಕಲಂ 69 ರಲ್ಲಿ ಅಧಿಭಾರ ಅರ್ಜಿಯಲ್ಲಿ ಆದೇಶಿಸಿದ ನಂತರ, ಅದೇ ವ್ಯಕ್ತಿಯ ಮೇಲೆ ಕಲಂ 29 ಸಿ(1)(1) ಅನ್ವಯ ಅನರ್ಹತೆಗೊಳಿಸಿ (ನಿರ್ದೇಶಕತನದಿಂದ) ಮಾಡಿದ ಆದೇಶವನ್ನು ಮೇಲ್ಮನವಿ ಮೂಲಕ ಅರ್ಜಿ ಸಲ್ಲಿಸಿದಾಗಲೂ,

ಅದನ್ನು ತಿರಸ್ಕರಿಸಲಾಗಿತ್ತು. ಹಣ ಮರುಪಯೋಗ ಮಾಡಿಕೊಂಡ ದಿನಾಂಕದಂದು ಆ ವ್ಯಕ್ತಿ ನಿರ್ದೇಶಕನಾಗಿರಲಿಲ್ಲ. (ಸಂಘದಲ್ಲಿ ಕಾರಕೂನನಾಗಿದ್ದ) ಅವರಿಂದ ದುರುಪಯೋಗ ಮಾಡಿಕೊಂಡ ಹಣ ಬಾಕಿ ಇತ್ತು ಮತ್ತು ಕಾಯಿದೆಯಲ್ಲಿ ದುರುಪಯೋಗ ಮಾಡಿಕೊಂಡ ದಿನಾಂಕದಂದು ಅವನು ನಿರ್ದೇಶಕ ನಿರಬೇಕೆಂದು ಶರತ್ತು ಇಲ್ಲ. ಅವನ್ನು ನಿರ್ದೇಶಕನಾದ ದಿನಾಂಕದಂದು ಸಂಘಕ್ಕೆ ಬಾಕಿ ಉಳಿಸಿಕೊಂಡಿದ್ದರೆ, ಆ ಆಧಾರದ ಮೇಲೆ ಅನರ್ಹತೆಗೊಳಗಾಗುತ್ತಾನೆ. (2006 Indlaw Kar 404, 2007 (2) KLJ 126)

78. ಕೆಲಸಗಾರರು ಮತ್ತು ಒಂದು ಸಂಘದ ಮಧ್ಯ ವಿವಾದವೇರ್ಪಟ್ಟಾಗ, ಅದನ್ನು ಕಾರ್ಮಿಕ ನ್ಯಾಯಾಲಯದ ಮುಂದೆ ಪ್ರಶ್ನಿಸಲಾಯಿತು. ಅದರಲ್ಲಿ ಸಹಕಾರ ಕಾಯಿದೆಯಲ್ಲಿ ಕಲಂ 70 ರನ್ವಯ ವಿವಾದ ಪರಿಹರಿಸಲು ಅವಕಾಶ ಇರುವುದರಿಂದ ಕಾರ್ಮಿಕ ನ್ಯಾಯಾಲಯದ ವ್ಯಾಪ್ತಿ ಇಲ್ಲವೆಂದು ವಾದಿಸಿದರೂ ಅದನ್ನು ತಿರಸ್ಕರಿಸಿ, ಕೆಲಸಗಾರರ ಪರವಾಗಿ ಆದೇಶಿಸಿತ್ತು. ಅದನ್ನು ರಿಟ್ ಮುಖಾಂತರ ಆಡಳಿತ ಮಂಡಳಿ ಪ್ರಶ್ನಿಸಿದಾಗ ಅದನ್ನು ವಜಾ ಮಾಡಲಾಗಿತ್ತು. ಆ ನಂತರ ಕೆಲಸಗಾರರು ಬಾಕಿ ಸಂಬಳ ಪಾವತಿಗೆ ಮತ್ತೆ ರಿಟ್ ಅರ್ಜಿ ಸಲ್ಲಿಸಿದರು. ಇದನ್ನು ವಿಮರ್ಷಿಸುವಾಗ, ಈ ನ್ಯಾಯಾಲಯದ ತೀರ್ಪುಗಳೆಂದರೆ 2000 Kar 3743 (DB), ILR 2001 (3) KLJ 519 (DB), 2000 Indlaw Kar 135 (Kar) (DB), 2001 FJR 657 (Kar) (DB) and 2003 Indlaw Kar 211 (FB), ILR 2003 Kar 2531 (FB), 2003 Indlaw Kar 211 (Kar)(FB) ನ್ನು ಆಧರಿಸಿ, ಕಾರ್ಮಿಕ ನ್ಯಾಯಾಲಯದ ವ್ಯಾಪ್ತಿಯನ್ನು ಕಿತ್ತು ಹಾಕಿ, ಸಹಕಾರ ಕಾಯಿದೆ ಕಲಂ 70 ರಲ್ಲಿ ಪರಿಹಾರ ಪಡೆಯಲು ಅವಕಾಶ ಇರುವುದರಿಂದ ಕಾರ್ಮಿಕ ನ್ಯಾಯಾಲಯ ಪ್ರಕರಣ ವಿಚಾರಣೆ ಮಾಡಿ ಆದೇಶಿಸಿರುವುದು ಅಸಿಂದು ಮತ್ತು ಬಾಕಿ ವೇತನ ಪಾವತಿಗೆ ಸಲ್ಲಿಸಿದ ರಿಟ್ ಅರ್ಜಿಯು ಉರ್ಜಿತವಲ್ಲ. ಏಕೆಂದರೆ ಕಾರ್ಮಿಕ ನ್ಯಾಯಾಲಯದ ಮರು ನೇಮಕಾತಿ ಆದೇಶವೇ ಅಸಿಂದುವಾಗಿರುವುದರಿಂದ ಬಾಕಿ ಪಾವತಿಸಲು ಸಲ್ಲಿಸಿದ ಅರ್ಜಿಯೂ ಉರ್ಜಿತವಲ್ಲ. (2006 Indlaw Kar 210, 2006 (4) KLJ 538)

79. ಕಾನೂನು ಅಧಿಕಾರ ಹುದ್ದೆ ನೇಮಕಾತಿಗೆ, ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿರುವ ನೌಕರರಿಗಾಗಿಯೇ ಅರ್ಜಿ ಆಹ್ವಾನಿಸಿ, ನೇಮಕ ಮಾಡುವಾಗ (ಆಂತರಿಕ ನೇಮಕಾತಿ) ಅರ್ಹ ಅಭ್ಯರ್ಥಿಗಳನ್ನು ನೇಮಿಸಿ ಸಂಬಳ ನಿಗದಿ ಪಡಿಸುವಾಗ, ಹಿಂದೆ ಅವರು ಪಡೆಯುತ್ತಿದ್ದ ವ್ಯಯಕ್ತಿಕ ವೇತನ ಸೇರಿಸಿಲ್ಲವೆಂದು ಕೇಳಿದಾಗ, ಅದನ್ನು ತಿರಸ್ಕರಿಸಿದಾಗ, ರಿಟ್ ಅರ್ಜಿ ದಾಖಲಿಸಿ ಪರಿಹಾರ ಕೇಳಿದಾಗ, ತಿರಸ್ಕರಿಸಿದ ಆದೇಶವನ್ನು ಕಿತ್ತು ಹಾಕಿ, ಕಾನೂನು ಅಧಿಕಾರಿಗಳ ಸಂಬಳ ನಿಗದಿ ಪಡಿಸುವಾಗ, ಮೂಲ ವೇತನ ಮತ್ತು ವ್ಯಯಕ್ತಿಕ ವೇತನ ಕೂಡಿಸಿ, ವೇತನ ನಿಗದಿ ಪಡಿಸಲು ಆದೇಶಿಸಲಾಯಿತು. (2006 Indlaw Kar 113, 2006 (3) KLJ 548)

80. ಚುನಾವಣಾ ತಕರಾರು ಅರ್ಜಿಯನ್ನು ದಾಖಲಿಸಿದಾಗ, ನಿಬಂಧಕರ ನ್ಯಾಯಾಲಯ ಗೆದ್ದ ಅಭ್ಯರ್ಥಿಯನ್ನು ಅಸಿಂದುಗೊಳಿಸಿ, ಸೊತ ಅಭ್ಯರ್ಥಿಯನ್ನು ಗೆದಿದ್ದಾರೆಂದು ಘೋಷಿಸಿರುವುದು ಸರಿಯೇ? ಸಹಕಾರ ಕಾಯಿದೆಯಲ್ಲಿ ಆಯ್ಕೆಯಿಂದ ಅಭ್ಯರ್ಥಿಗಳ ಆಯ್ಕೆ ಅಸಿಂದು ಎಂದು ತೀರ್ಮಾನಿಸಲು ಅವಕಾಶ ಇದೆಯೇ ಹೊರತು, ಸೊತ ಅಭ್ಯರ್ಥಿಯನ್ನು ಆಯ್ಕೆಯಾಗಿದ್ದಾನೆಂದು ತೀರ್ಮಾನ ನೀಡಲಾಗದು. ಮೇಲ್ಮನವಿ ಪ್ರಾಧಿಕರಣ ಅರ್ಜಿದಾರರನ್ನು ಆಯ್ಕೆಯಾಗಿರುವುದನ್ನು ಕಿತ್ತು ಹಾಕಿ ಮರು ಚುನಾವಣೆ ಮಾಡಲು ಮಾಡಿದ ಆದೇಶವನ್ನು ಎತ್ತಿಹಿಡಿಯಿತು. (2006 Indlaw Kar 616, 2008 (1) KLJ 227)

81. 1988ರ ವರೇವಿಗೆ ಸಂಘದ ಸದಸ್ಯತ್ವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೀಮಿತವಾಗಿತ್ತು. ಬೇರೆ ಸಮುದಾಯಕ್ಕೆ ಸೇರಿದ ಸದಸ್ಯರನ್ನು ಸೇರಿಸಿಕೊಳ್ಳಲು ಪ್ರಾರಂಭಿಸಿ, ಶೇ.80% ರಷ್ಟು ಇತರ ಸಮುದಾಯದ ಸದಸ್ಯರು ಹೆಚ್ಚಾದಾಗ, ನಿಬಂಧಕರು ಕಲಂ 12(5) ರನ್ವಯ ಉಪನಿಯಮಗಳನ್ನು ತಿದ್ದುಪಡಿ ಮಾಡಿಕೊಳ್ಳಲು, ಅಂದರೆ ಪರಿಶಿಷ್ಟ ಜಾತಿ/ಪಂಗಡದ, ಮೀಸಲಾತಿಗೆ ನಿರ್ದೇಶನ ನೀಡಿದಾಗ, ಈಗಾಗಲೇ ಬೇರೆ ವರ್ಗದ ಸದಸ್ಯರಿಗೆ ನಿವೇಶನ ಹಂಚಿ, ನೋಂದಾಯಿಸಿಕೊಟ್ಟಿರುವುದನ್ನು ಗಮನಿಸಲಾಗಿದೆ ಮತ್ತು ಆ ಬಗ್ಗೆ ಈ ಅರ್ಜಿಯಲ್ಲಿ ಪರಿಹಾರ ನೀಡಲಾಗದು. ಇದರ ಜೊತೆಗೆ ಎರಡು ಸಂಘಗಳ ವಿವಿಧ ವಿಳಾಸದಲ್ಲಿ ಅಸ್ತಿತ್ವದಲ್ಲಿದೆ ಎಂಬುದನ್ನು ಸಹ ಸಂಬಂಧಪಟ್ಟ ಪ್ರಾಧಿಕಾರದಲ್ಲಿ ಪರಿಹಾರ ಪಡೆಯಬೇಕು. (2006 Indlaw Kar 43, 2006 (2) KLJ 267)

82. ಸಾಲ ವಸೂಲಾತಿಗೆ ಕಲಂ 70 ರಲ್ಲಿ ದಾವಾ ದಾಖಲ್ ಮಾಡಿ, ಇಲಾಖಾ ಮಧ್ಯಸ್ತಿಗಾರರು ನೋಟೀಸ್ ಜಾರಿ ಮಾಡಿ, ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲಿಸುವಾಗ, ಸಾಲಗಾರರು ಸಾಲ ಪಡೆದಿರುವುದು ಮತ್ತು ಬಡ್ಡಿ ಮತ್ತು ಚಕ್ರ ಬಡ್ಡಿ ಪಾವತಿಸುವ ಬಗ್ಗೆ ಒಪ್ಪಿಗೆಕೊಂಡು ಮಧ್ಯಸ್ತಿಗಾರರ ನಡವಳಿಕೆಗಳಿಗೆ ಸಹಿ ಹಾಕಿರುವುದರಿಂದ, ಡಿಕ್ರಿ ನೀಡಿರುವುದನ್ನು ಪ್ರಶ್ನಿಸಿ ಕರ್ನಾಟಕ ಮೇಲ್ಮನವಿ ಪ್ರಾಧಿಕಾರಣಕ್ಕೆ ಮೇಲ್ಮನವಿ ಸಲ್ಲಿಸಿದಾಗ, ಮಧ್ಯಸ್ತಿಗಾರರು ನಡೆಸಿದ ನಡವಳಿಕೆಗಳು ಮತ್ತು ಸಾಲಗಾರರ ಸಾಲ ಮತ್ತು ಬಡ್ಡಿ ಒಟ್ಟಿಗೆ ನೀಡಿರುವುದನ್ನು ಗಮನಿಸಿ, ತಿರಸ್ಕರಿಸಿದ ನಂತರ, ಈ ರಿಟ್ ದಾಖಲಾಗಿದ್ದು ಎರಡೂ ಪ್ರಾಧಿಕಾರಿಗಳ ವಿಚಾರಣೆ ಸಂದರ್ಭದಲ್ಲಿ ಎಲ್ಲಾ ಹೇಳಿಕೆ/ದಾಖಲೆ ಪರಿಶೀಲಿಸಿರುವುದನ್ನು ಪರಿಗಣಿಸಿ, ಯಾವುದೇ ನ್ಯೂನತೆ ಇಲ್ಲದೇ ಇರುವುದರಿಂದ ರಿಟ್ ಅರ್ಜಿ ವಜಾಗೊಳಿಸಿತು. (2006 Indlaw Kar 37, 2006 (2) KLJ 227)

83. ಒಂದು ಗೃಹ ನಿರ್ಮಾಣ ಸಹಕಾರ ಸಂಘ ಜಮೀನು ಖರೀದಿ ಮಾಡಲು ಅವಕಾಶ ಇಲ್ಲದೇ ಇರುವುದರಿಂದ, ಸಂಘದ ಒಬ್ಬ ನಿರ್ದೇಶಕನ ಹೆಸರಿನಲ್ಲಿ ಜಮೀನು ಖರೀದಿ ಮಾಡಿ, ವ್ಯವಸಾಯೇತರ ಭೂಮಿಗೆ ವರ್ಗಾಯಿಸಿ, ನಂತರ ಸಂಘಕ್ಕೆ ವರ್ಗಾಯಿಸಲು ತೀರ್ಮಾನ ತೆಗೆದುಕೊಂಡ ನಂತರ, ಆ ನಿರ್ದೇಶಿತ, ಜಮೀನು ಖರೀದಿ ಮಾಡಿ, ಆ ನಂತರ ಕೃಷಿಯೇತರ ಭೂಮಿ ಎಂದು ವರ್ಗಾವಣೆಯಾದ ನಂತರ ಸಂಘದ ಹೆಸರಿಗೆ ವರ್ಗಾಯಿಸದೇ ಇದ್ದಾಗ, ಕಲಂ 70 ರಲ್ಲಿ ದಾವಾ ದಾಖಲಿಸಿ ಜಮೀನು ಪಡೆಯಲು ಅರ್ಜಿ ಸಲ್ಲಿಸಿದಾಗ, ವಿಚಾರಣೆ ನಡೆಸಿದ ನಿಬಂಧಕರು, ಜಮೀನನ್ನು ಸಂಘದ ಹೆಸರಿಗೆ ವರ್ಗಾಯಿಸಲು ಆದೇಶಿಸಿದೆ. ಆ ನಂತರ ಮೇಲ್ಮನವಿ ಸಲ್ಲಿಸಿದಾಗ ಕರ್ನಾಟಕ ನ್ಯಾಯಾಧಿಕರಣ ದೃಢೀಕರಿಸಿದ್ದ ನಂತರ ರಿಟ್ ಅರ್ಜಿ ಸಲ್ಲಿಸಿದಾಗ, ಅರ್ಜಿಯನ್ನು ವಜಾ ಮಾಡಿದೆ. ಅಂದರೆ ಸಂಘದ ಹೆಸರಿಗೆ ಕೃಷಿಯೇತರ ಭೂಮಿಯನ್ನು ವರ್ಗಾಯಿಸಲು ನೀಡಿದ ಆದೇಶ ಜಾರಿ ಮಾಡಲು ಸೂಚಿಸಿದೆ. (2005 Indlaw Kar 217, 2006 (4) KLJ 655)

84. ಸಾಲ ಬಾಕಿ ತೀರಿಸದೇ ಇದ್ದುದರಿಂದ ಕಲಂ 70ರಲ್ಲಿ ದಾವಾ ದಾಖಲಿಸಿ, ಡಿಕ್ರಿ ಪಡೆದ ನಂತರ ಕರ್ನಾಟಕ ಮೇಲ್ಮನವಿ ಪ್ರಾಧಿಕರಣದಲ್ಲಿ ಮೇಲ್ಮನವಿ ಸಲ್ಲಿಸಿದಾಗ, ಅದು ತಿರಸ್ಕಾರಗೊಂಡಿದೆ. ಆ ನಂತರ ಈ ರಿಟ್ ಅರ್ಜಿ ಮಧ್ಯಸ್ತಿಗಾರರು ಮತ್ತು ಮೇಲ್ಮನವಿ ಪ್ರಾಧಿಕರಣ ಮೌಖಿಕ ಮತ್ತು ದಾಖಲೆಗಳನ್ನು ಪರಿಶೀಲಿಸಿ, ಪಕ್ಷಗಳಿಗೆ ಅವಕಾಶ ನೀಡಿ ತೀರ್ಪು ನೀಡಿರುವುದರಿಂದ ಡಿಕ್ರಿ ನೀಡಿರುವುದರಲ್ಲಿ ಯಾವುದೇ ನ್ಯೂನತೆ ಕಂಡು ಬಂದಿಲ್ಲ. ಆದ್ದರಿಂದ ರಿಟ್ ಅರ್ಜಿ ವಜಾ ಮಾಡಿತು. (2005 Indlaw Kar 142, 2006 (3) KLJ 300)

85. ಅರ್ಜಿದಾರರು ಸಾಲಗಾರನ ಕಾನೂನು ಬದ್ಧ ಹೆಂಡತಿ ಮತ್ತು ತಾನು ಸಹಕಾರ ಸಂಘದ ಸದಸ್ಯ ಅಲ್ಲ ಮತ್ತು ಸಾಲ ಪಡೆದಿಲ್ಲ, ಆದ್ದರಿಂದ ತನ್ನ ಮೇಲೆ ವಸೂಲಾತಿ ಕ್ರಮ ಜರುಗಿಸತಕ್ಕದ್ದಲ್ಲವೆಂದು ಪ್ರತಿ ಪ್ರಾಧಿಸಿದಾಗ. ಈ ರಿಟ್ ಅರ್ಜಿ ಸಂಘವು ಸಾಲಗಾರನಿಗೆ ಆಸ್ತಿಯನ್ನು ಅಡಮಾನ ಮಾಡಿಕೊಂಡು ಸಾಲ ನೀಡಿದ್ದು. ಸಾಲ ಮರುಪಾವತಿ ಮಾಡದೇ ಇದ್ದುದರಿಂದ ದಾವಾ ದಾಖಲಿಸಿ ಡಿಕ್ರಿ ಪಡೆದಿದೆ. ಈ ಸಾಲಕ್ಕೆ ಜಾಮೀದಾರರನ್ನು ಪಡೆದಿದೆ. ಈ ಆದೇಶವನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕರಣದ ಮುಂದೆ ಪ್ರಶ್ನಿಸಿದಾಗ, ಮೇಲ್ಮನವಿ ತಿರಸ್ಕರಿಸಿದ್ದು ಡಿಕ್ರಿಯನ್ನು ಎತ್ತಿ ಹಿಡಿದಿದೆ. ಈ ಬಗ್ಗೆ ಪರಿಹಾರ ಕೇಳಿ ರಿಟ್ ದಾಖಲಿಸಿದ. ದಾಖಲೆಗಳನ್ನು ಪರಿಶೀಲಿಸಲಾಗಿ, ಅರ್ಜಿದಾರರು ಮೂಲಭೂತವಾಗಿ ದಾವಾ ಊರ್ಜಿತತೆ ಬಗ್ಗೆ ಮತ್ತು ಸಾಲದ ದಾಖಲೆಯಲ್ಲಿನ ಸಹಿ ಮತ್ತು ನೋಟೀಸ್‌ಗೆ ಸಹಿ ಮಾಡಿದ ಸಹಿ ವ್ಯತ್ಯಾಸ ಇರುವುದನ್ನು ತೀರಿಸಿದರೂ, ಆ ಪ್ರಶ್ನೆಗಳಿಗೆ ಉತ್ತರಿಸಿದೆ ತೀರ್ಮಾನಿಸಿರುವುದರಿಂದ, ಪ್ರಕರಣವನ್ನು ಮರು ವಿಚಾರಣೆಗೆ ಆದೇಶಿಸಿ ಡಿಕ್ರಿಯನ್ನು ಕಿತ್ತು ಹಾಕಿತು. (2005 Indlaw Kar 535, 2005 (5) KLJ 462)

86. ಅರ್ಜಿದಾರ ಸಹಕಾರ ಸಂಘ, ಸಹಕಾರ ಸಂಘಗಳ ಕಾಯಿದೆಯಲ್ಲಿ ದಾವಾ ದಾಖಲಿಸಲು ಅವಕಾಶ ಇದ್ದರೂ ಕಾರ್ಮಿಕ ನ್ಯಾಯಾಲಯ ಅರ್ಜಿ ಸ್ವೀಕರಿಸಿ, ತೀರ್ಮಾನಿಸಿರುವುದು ಊರ್ಜಿತವಲ್ಲವೆಂದು ಪ್ರಶ್ನಿಸಿ ಈ ರಿಟ್ ಅರ್ಜಿ ದಾಖಲಿಸಿದೆ. ಕಾರ್ಮಿಕ ನ್ಯಾಯಾಲಯ 1985 ILR (Kar) 50/1986 (1) KLJ 13 ನ ತೀರ್ಮಾನವನ್ನು ಆಧರಿಸಿ ನೀಡಿದ್ದ ಈ ತೀರ್ಪುಗಳನ್ನು 2001 (3) KLJ 519 (DB), 2000 ILR (Kar) 3343 (DB), 2000 Indlaw Kar 135 (Kar) (DB) ರಲ್ಲಿ ಅನೂರ್ಜಿತಗೊಳಿಸಿರುವುದರಿಂದ ಮತ್ತು ಇವುಗಳಲ್ಲದೇ 2005 Indlaw SC 950, 1997 SCC (L and S) 1128, 1996 Indlaw SC 2085, 1997 SCC (L and S) 1203, 1987 Indlaw SC 28165, 1987-H-LLJ 365 (SC), 1987 SCC (L and S) 366 ದೃಢೀಕರಿಸಿರುವುದನ್ನು ಆಧರಿಸಿ ಕಾರ್ಮಿಕ ನ್ಯಾಯಾಲಯ ನೀಡಿದ ತೀರ್ಪನ್ನು ಕಿತ್ತು ಹಾಕಿ, ನಿಬಂಧಕರಿಂದ ಪರಿಹಾರ ಪಡೆಯಲು ಸೂಚಿಸಿದರು. ಆ ಪ್ರಾಧಿಕಾರಿಗಳ ವಿಳಂಬ ವಿನಾಯ್ತಿ ಬಗ್ಗೆ ಪ್ರಶ್ನಿಸಿದೆ ಪ್ರಕರಣ ದಾಖಲಾದರೆ ತೀರ್ಮಾನಿಸಲು (ಅದರೆ ಕಕ್ಷಿದಾರ 8 ವಾರದೊಳಗೆ ಅರ್ಜಿ ಸಲ್ಲಿಸಿದರೆ) ನಿರ್ದೇಶಿಸಿತು. (2005 Indlaw Kar 259, 2006 (5) KLJ 528)

87. ಅರ್ಜಿದಾರ ಮಹಾಮಂಡಳ ಒಂದು ಡೈರಿ ನೌಕರರ ಸಂಘಗಳ ಮಹಾಮಂಡಳ. ಒಪ್ಪಂದದ ಆಧಾರದ ನೌಕರರನ್ನು ಖಾಯಂಗೊಳಿಸಲು ಸಲ್ಲಿಸಿದ ಅರ್ಜಿಯನ್ನು ಹಾಲು ಮಂಡಳ ತಿರಸ್ಕರಿಸಿದ್ದರಿಂದ, ಕಾರ್ಮಿಕ ಆಯುಕ್ತರ ಮುಂದು ಅರ್ಜಿ ಸಲ್ಲಿಸಲಾಯಿತು. ಆ ಅರ್ಜಿಗೆ ಕಾರ್ಮಿಕ ಆಯುಕ್ತರು, ಸಹಕಾರ ಕಾಯಿದೆ ಕಲಂ 70 ರಲ್ಲಿ ನಿಬಂಧಕರ ಮುಂದೆ ದಾಖಲಿಸಲು ಸೂಚಿಸಿತು. ಆ ಹಿಂಬರಹವನ್ನು ಪ್ರಶ್ನಿಸಿ ಈ ರಿಟ್ ದಾಖಲಿಸಲಾಗಿದೆ. ಈ ಹಿಂಬರಹವನ್ನು ಪರಿಶೀಲಿಸುವ ಸಮಯದಲ್ಲಿ, ಕಲಂ 70 ರಲ್ಲಿನ ವಿಷಯಗಳ ಪಟ್ಟಿ ಗಮನಿಸಿದಾಗ ಕಾರ್ಮಿಕರ ಮಹಾಮಂಡಳ ಸಲ್ಲಿಸಿದ ಅರ್ಜಿಯಲ್ಲಿನ ಅಂಶಗಳನ್ನು ಪರಿಶೀಲಿಸಿ ಆದೇಶಿಸಲು ಕಲಂ 70ರಲ್ಲಿ ಅವಕಾಶ ಇಲ್ಲದೇ ಇರುವುದರಿಂದ, ಕಾರ್ಮಿಕ ಆಯುಕ್ತರು ನೀಡಿದ ಹಿಂಬರಹವನ್ನು ಕಿತ್ತು ಹಾಕಿ, ಮೂಲ ಅರ್ಜಿಯನ್ನು ಪರಿಶೀಲಿಸಿ ಆದೇಶಿಸಲು ನಿರ್ದೇಶನ ನೀಡಲಾಯಿತು. (2005 Indlaw Kar 399, 2005 (6) KLJ 610)

88. ಸಾಲ ವಸೂಲಾತಿಗೆ ಕಲಂ 70ರಲ್ಲಿ ದಾವಾ ದಾಖಲಿಸಿ ಡಿಕ್ರಿ ಪಡೆದ ನಂತರ, ಸಾಲಗಾರನ

ಕಾನೂನು ವಾರಸುದಾರರು ಕರ್ನಾಟಕ ನ್ಯಾಯಾಧಿಕರಣಕ್ಕೆ ಮೇಲ್ಮನವಿ ಸಲ್ಲಿಸಿದಾಗ, ಬಡ್ಡಿದರವನ್ನು ಶೇ.21% ರ ಬದಲಾಗಿ ಶೇ.18% ಇಳಿಸಿ, ಭಾಗಶಹ ಡಿಕ್ರಿ ಎತ್ತಿಹಿಡಿದಿತ್ತು. ಇದನ್ನು ಪ್ರಶ್ನಿಸಿ ರಿಟ್ ಅರ್ಜಿ (21033/2001) ಕಾನೂನು ವಾರಸುದಾರರು ಸಲ್ಲಿಸಿದರು. ಈ ಪ್ರಕರಣ ವಿಚಾರಣೆ ಸಮಯದಲ್ಲಿ ಅರ್ಜಿದಾರರು ಸಾಲ ಮರುಪಾವತಿ ಮಾಡಿರುವ ಬಗ್ಗೆ ತಮ್ಮ ಲೆಕ್ಕಗಳನ್ನು ಸಲ್ಲಿಸಿದರು. ಇದಕ್ಕೆ ಸಂಘವು, ಈ ರಿಟ್ ಅರ್ಜಿದಾರರಲ್ಲಿ ಒಬ್ಬರು ಪ್ರತ್ಯೇಕ ಸಾಲಗಾರರಿದ್ದು, ಅವರು ಅವರ ಸಾಲಕ್ಕೆ ಪಾವತಿ ಮಾಡಿದ ಹಣದ ಲೆಕ್ಕವನ್ನು ಇದರಲ್ಲಿ ಸೇರಿಸಿ ಮರು ಪಾವತಿ ಮಾಡಿದ್ದೇವೆಂದು ಹೇಳಿಕೆ ಸಲ್ಲಿಸುತ್ತಾರೆ. ಇದಕ್ಕೆ ತೀರ್ಮಾನ ಕೊಡುವಾಗ ಏಕ ಸದಸ್ಯ ಪೀಠ, ವ್ಯಯಕ್ತಿಕ ಖಾತೆಗೆ ಜಮಾ ಮಾಡಿದ ಹಣವನ್ನು, ಡಿಕ್ರಿ ಪಡೆದ ಪ್ರಕರಣ ಬೇರೆ ಎಂಬುವನ್ನು ಗಮನಿಸುತ್ತದೆ ಮತ್ತು ಆ ಲೆಕ್ಕದಂತೆ ಆದೇಶ ನೀಡಿ, ಕಾನೂನು ವಾರಸುದಾರರಿಗೆ ಪರಿಹಾರ ನೀಡುತ್ತದೆ. ಇದಕ್ಕೆ ವಿರುದ್ಧವಾಗಿ ಈ ರಿಟ್ ಮೇಲ್ಮನವಿ ಸಲ್ಲಿಸಿದಾಗ ವಿಭಾಗೀಯ ಪೀಠ, ಇಂತಹ ಪ್ರಸಂಗದಲ್ಲಿ ಲೆಕ್ಕ ಪರಿಶೀಲನೆ ಮಾಡಿ, ಸಾಲಗಾರ ಮತ್ತು ಡಿಕ್ರಿ ಪಡೆದಾತನ ಲೆಕ್ಕ ಪರಿಶೀಲಿಸಿ ಪರಿಹಾರ ನೀಡುವುದು ನಿಬಂಧಕರ ಜವಾಬ್ದಾರಿ ನಿಬಂಧಕರು ಮಾಡಬೇಕಾದ ಕೆಲಸವನ್ನು ಈ ನ್ಯಾಯಾಲಯ (ಏಕ ಸದಸ್ಯ ಪೀಠ) ಮಾಡಿದೆ. ಆದ್ದರಿಂದ ಏಕ ಸದಸ್ಯ ಪೀಠದ ಆದೇಶ ತಪ್ಪು. ಕಾನೂನು ವಾರಸುದಾರರು ಜಾರಿ ಸಂದರ್ಭದಲ್ಲಿ ಲೆಕ್ಕ ಪತ್ರಗಳನ್ನು ಪರಿಶೀಲನೆ ಮಾಡಿ ಪರಿಹಾರ ಪಡೆಯಲು ಸೂಚಿಸಿ ದಾವಾ 4.29/90–91 ರ ಆದೇಶ ಜಾರಿ ಮಾಡಲು ಸಂಘದ ಮುಂದಾದಾಗ ಜಾರಿ ಮಾಡುವ ನಿಬಂಧಕರ ಮುಂದೆ ಕಾನೂನು ವಾರಸುದಾರರು ಪರಿಹಾರ ಪಡೆಯಲು ಅವಕಾಶ ಇದೆ ಎಂದು ತೀರ್ಮಾನಿಸಿತು. (2005 Indlaw Kar 484, 2005 (6) KLJ 500)

89. ದಾವಾ ಪ್ರಕರಣ ದಾಖಲಿಸಿದಾಗ, ಅಂದರೆ ಆಡಳಿತಾಧಿಕಾರಿ ಚುನಾವಣೆ ನಡೆಸಿದ ನಂತರ, ಆ ಪ್ರಕರಣದಲ್ಲಿ ಆಂತರಿಕ ಅರ್ಜಿ ಸಲ್ಲಿಸಿ, ಪರಿಹಾರ ಕೇಳಿದಾಗ, ಅವನ್ನು ನಿರಾಕರಿಸಿದ ನಂತರ, ಈ ರಿಟ್ ಅರ್ಜಿ ಸಲ್ಲಿಸಲಾಗಿದೆ. ಈ ಪ್ರಕರಣದ ತೀರ್ಪು ನೀಡುವಾಗ 2005 Air SCW 3149/2004 Indlaw SC 179 ನ್ನು ಆಧರಿಸಿ, ಕಾಯಿದೆಯಲ್ಲಿ ತುರ್ತಾಗಿ ಮತ್ತು ಕಡಿಮೆ ಖರ್ಚಿನಲ್ಲಿ ಪರಿಹಾರ ಪಡೆಯಲು ಅವಕಾಶ ಇರುವುದರಿಂದ ರಿಟ್ ಮೂಲಕ ಪರಿಹಾರ ಕೇಳಲಾಗದು/ನೀಡಲಾಗದು. ನಿಬಂಧಕರ ಮುಂದೆ ಇಂತಹ ಪರಿಹಾರ ಪಡೆಯಲು ಅವಕಾಶ ಇರುವುದರಿಂದ, ರಿಟ್ ವಿಲೇವಾರಿ ಮಾಡಲಾಯಿತು. (2005 Indlaw Kar 461, 2005 (6) KLJ 133)

90. ಸಾಲ ಮರು ಪಾವತಿ ಮಾಡದೇ ಇದ್ದರಿಂದ, ಸಂಘ ದಾವಾ ದಾಖಲಿಸಿ ಡಿಕ್ರಿ ಪಡೆದಿದೆ. ನಂತರ ಸಾಲಗಾರ ಕರ್ನಾಟಕ ಮೇಲ್ಮನವಿ ಪ್ರಾಧಿಕರಣದಲ್ಲಿ ಮೇಲ್ಮನವಿ ಸಲ್ಲಿಸಿ, ಪುನರ್ ಪರಿಶೀಲನೆಗೆ ಆದೇಶಿಸಿದ ನಂತರ ಎರಡನೇ ಸುತ್ತಿನ ವಿಚಾರಣ ನಡೆದು ಸಾಲಗಾರ ಸಲ್ಲಿಸಿದ ಕೆಲವು ಪೂರಕ ದಾಖಲೆಗಳನ್ನು (ಜೆರಾಕ್ಸ್ ಪ್ರತಿ) ಗಳನ್ನು ಪರಿಶೀಲಿಸಲು ಸೂಚಿಸಿ, ನಂತರ ಪುನಃ ವಿಚಾರಣ ಮಾಡಿ, ಸಾಲ ಬಾಕಿ ಬಗ್ಗೆ ಡಿಕ್ರಿ ನೀಡಿದೆ ಮತ್ತು ಮೇಲ್ಮನವಿ ಪ್ರಾಧಿಕರಣ ಅದನ್ನು ದೃಢೀಕರಿಸಿದೆ. ಮತ್ತು ಎರಡನೇ ಸುತ್ತಿನ ರಿಟ್ ಅರ್ಜಿ ಸಲ್ಲಿಸಿದಾಗ, ಮಧ್ಯಸ್ತಿಗಾರ ಮತ್ತು ಮೇಲ್ಮನವಿ ಪ್ರಾಧಿಕರಣ, ಮೌಖಿಕ ಮತ್ತು ಲಿಖಿತ ದಾಖಲೆಗಳನ್ನು ಹಾಗೂ ಸಾಕಷ್ಟು ಅವಕಾಶ ನೀಡಿ ತೀರ್ಮಾನಿಸಿ ಆ ಆದೇಶದಲ್ಲಿ ಯಾವುದೇ ನ್ಯೂನತೆ ಕಂಡು ಬಂದಿಲ್ಲ ಮತ್ತು ಇದಕ್ಕೆ ರಿಟ್ ಪರಿಹಾರ ನೀಡಲಾಗದು ಎಂದು ಇದಕ್ಕೆ ಪೂರಕವಾಗಿ AIR 1954 SCR 565/1954 Indlaw SC 180/AIR 1973 SCP 1598/1972 Indlaw SC 378ನ್ನು ಅನುಸರಿಸಿ ತೀರ್ಪು ನೀಡಿದೆ. (2005 Indlaw Kar 455, 2005 (5) KLJ 42)

91. ಅರ್ಜಿದಾರರು ಬ್ಯಾಂಕಿನ ನೌಕರರಾಗಿದ್ದು, ಅವರ ಪ್ರಕರಣವನ್ನು ಸರ್ಕಾರ ಕಾರ್ಯಕ ನ್ಯಾಯಾಲಯಕ್ಕೆ ವರ್ಗಾಯಿಸಿತು. ಈ ಮಧ್ಯ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ 70 ಮತ್ತು ಕಲಂ 118 ಕ್ಕೆ ತಿದ್ದುಪಡಿ ತಂದು ಕಾರ್ಯಕ ನ್ಯಾಯಾಲಯದ ವ್ಯಾಪ್ತಿಯನ್ನು ಕಿತ್ತು ಹಾಕಿತು. ಇದನ್ನು ಪರಿಗಣಿಸಿ ಈ ಪ್ರಕರಣವನ್ನು ನಿಬಂಧಕರಿಗೆ ವರ್ಗಾಯಿಸಲು ಆದೇಶಿಸಿತು. ಇದಕ್ಕೆ ಪೂರಕವಾಗಿ AIR 1952 SC 324/1952 Indlaw SC 64/1972 (1) MYSLJ 324 ನಲ್ಲಿ ಸೂಚಿಸಿದಂತೆ, ಅಂದರೆ ಯಾವುದೇ ಪ್ರಕರಣ ವಿಚಾರಣೆ ಹಂತದಲ್ಲಿದ್ದಾಗ, ಮತ್ತೊಂದು ಕಾಯಿದೆಗೆ ತಿದ್ದುಪಡಿ ತಂದು ಮಾರ್ಪಡಿಸಿದಾಗ, ಮಾರ್ಪಡಿಸಿದ ಅವಕಾಶಗಳು ಜಾರಿಗೆ ಬರುತ್ತವೆ ಎಂದು ಉಲ್ಲೇಖಿಸಿ ತೀರ್ಮಾನಿಸಿತು. (2005 Indlaw 509, 2005 (3) KLJ 300)

92. ಸಾಲ ವಸೂಲಾತಿಗೆ ಬ್ಯಾಂಕ್ ದಾವಾ ದಾಖಲಿಸಿ ಪ್ರಕರಣ ತೀರ್ಮಾನವಾಗುವ ತನಕ, ಆಸ್ತಿ ಜಪ್ತಿ ಆದೇಶ ಪಡೆದಾಗ (ಕಲಂ 103) ಅದನ್ನು ಕಂದಾಯ ಇಲಾಖೆ ತನ್ನ ಮೂಲ ದಾಖಲೆಯಲ್ಲಿ ದಾಖಲೆ ಮಾಡಲು ನಿರಾಕರಿಸಿದಾಗ, ಈ ರಿಟ್ ದಾಖಲಾಗಿದೆ. ಆಸ್ತಿ ವರ್ಗಾವಣೆ ಕಾಯಿದೆ ಕಲಂ 100 ರಲ್ಲಿ ಅಡಮಾನ ದಾಖಲಿಸುವ ಬಗ್ಗೆ ಉಲ್ಲೇಖವಿದ್ದು ಅದಕ್ಕೆ ಪೂರಕವಾಗಿ ದಾಖಲಿಸುವ ಅವಶ್ಯಕತೆ ಇಲ್ಲವೆಂದು ಮತ್ತು AIR 1958 Madras 67/1955 Indlaw Mad 150 ಯನ್ನು ಆಧರಿಸಿ ಕಲಂ 100ರ ವ್ಯಾಪ್ತಿಯಲ್ಲಿ ಈ ಪ್ರಕಾರ ಬರುವುದಿಲ್ಲ ಹಾಗೂ ಕರ್ನಾಟಕ ಭೂಮಿ ಕಂದಾಯ ಕಾಯಿದೆ 1964ರ ಕಲಂ.127 ರಿಂದ 129 ರಲ್ಲಿ ಯಾವುದೇ ಹಕ್ಕು ಪ್ರಸ್ತಾಪವಾಗುವುದಿಲ್ಲ. ಆದ್ದರಿಂದ ಕಂದಾಯ ಇಲಾಖೆ ಅಧಿಕಾರಿಗಳು ಜಪ್ತಿ ಮಾಡಿದ ಆಸ್ತಿಯ ಮೇಲೆ ಬ್ಯಾಂಕಿನ ಭೋಜ ಕೂರಿಸಲು ಬರುವುದಿಲ್ಲ. (2005 Indlaw Kar 372, 2005 (2) KLJ 81)

93. ಕಾರ್ಮಿಕ ಕಾಯಿದೆಯಡಿ ಸಾಮಾನ್ಯ ಸೇವ ರಚನೆ ಮಾಡಿ, ಒಕ್ಕೂಟ ನೇಮಕ ಮಾಡಿ, ಕಿತ್ತು ಹಾಕಿದ ಕೆಲಸಗಾರನನ್ನು ಮರು ನೇಮಕ ಮಾಡಲು ಆದೇಶಿಸಿದಾಗ ಮತ್ತು ಬಾಕಿ ಸಂಬಳ ಪಾವತಿಸಲು ಸೂಚಿಸಿದಾಗ, ಈ ಪ್ರಕರಣ ದಾಖಲಾಗಿದೆ. ಇದನ್ನು ಪರಿಶೀಲಿಸುವಾಗ ಒಕ್ಕೂಟ ನೇಮಕ ಮಾಡಿ, ವಜಾಗೊಳಿಸಿದ್ದರೂ, ಸಹಕಾರ ಕಾಯಿದೆ ಕಲಂ 128ಎ ಅಡಿ ತಿದ್ದುಪಡಿ ಮಾಡಿದ ನಂತರ, ಬ್ಯಾಂಕ್ ನಡೆಸಿಕೊಂಡು ಹೋಗಲು ಸೂಚಿಸಿದ್ದ ಒಕ್ಕೂಟ, ಈಗ ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ, ಬ್ಯಾಂಕ್ ಕೆಲಸಗಾರನನ್ನು ಮರು ನೇಮಕ ಮಾಡಿಕೊಳ್ಳಲು ಈಗಾಗಲೇ ಶೇ.50 ರಷ್ಟು ಸಂಬಳ ಪಾವತಿಸಿರುವುದರಿಂದ, ಯಾವುದೇ ರೀತಿ ಬಾಕಿ ವೇತನ ಪಾವತಿಸಲು ಆದೇಶಿಸದೆ, ಒಕ್ಕೂಟ ಕೆಲಸಗಾರನ ಸೇವೆಯನ್ನು ಮರು ನೇಮಕಮಾಡಿ ಬ್ಯಾಂಕ್ ಸೇವೆಗೆ ವರ್ಗಾಯಿಸಬಹುದು ಮತ್ತು ಕೆಲಸಗಾರನ ಸೇವೆಯು ಮುಂದುವರಿಸಿಕೊಂಡು (ಯಾವುದೇ ಬಿಡುಗಡೆ ಇಲ್ಲದೆ) ಹೋಗಲು ಆದೇಶಿಸಿದರು. (2003 Indlaw Kar 286, 2004 (2) KLJ 720)

94. ಚುನಾವಣೆಯಲ್ಲಿ ಮೀಸಲಾತಿ ಕ್ಷೇತ್ರದಿಂದ ಆಯ್ಕೆಯಾದ ಒಬ್ಬ ಅಭ್ಯರ್ಥಿಯನ್ನು ಗೆದ್ದ ನಂತರ ಹೆಚ್ಚು ಮತಗಳಿಸಿದ್ದಾನೆಂದು ಸಾಮಾನ್ಯ ಕ್ಷೇತ್ರಕ್ಕೆ ವರ್ಗಾಯಿಸಿ, ಮೀಸಲಾತಿ ಕ್ಷೇತ್ರದಿಂದ ಮತ್ತೊಬ್ಬ ಅಭ್ಯರ್ಥಿಯನ್ನು ಆಯ್ಕೆಯಾಗಿದ್ದಾನೆಂದು ತೀರ್ಮಾನಿಸುವ ಅಧಿಕಾರ ಚುನಾವಣಾಧಿಕಾರಿಗೆ ಇಲ್ಲ. ಏಕೆಂದರೆ ಅಂತಹ ಅವಕಾಶ ಸಹಕಾರ ಕಾಯಿದೆಯಲ್ಲಿ ಇಲ್ಲ. ಆ ರೀತಿ ಮಾಡಲು, ಅಂದರೆ ನ್ಯಾಯಾಲಯ ತೀರ್ಮಾನ ಕೊಡುವಾಗ ಮತ್ತೊಂದು ಕಾಯಿದೆಯಲ್ಲಿ ಆ ಅವಕಾಶ ಇದೆ ಎಂದು ಸಹಕಾರ ಕಾಯಿದೆಯಲ್ಲಿ ಈ ರೀತಿ ವರ್ಗಾವಣೆ ಮಾಡಲು ಬರುತ್ತದೆ ಎಂಬ ತೀರ್ಮಾನಕ್ಕೆ ಬರತಕ್ಕದ್ದಲ್ಲ. ಪ್ರತಿಯೊಂದು ಕಾಯಿದೆಯಲ್ಲಿ, ಆ ಅವಕಾಶ ಇದ್ದರೆ ಮಾತ್ರ ಮೀಸಲಾತಿ ಕ್ಷೇತ್ರದ

ಅಭ್ಯರ್ಥಿಯನ್ನು ಸಾಮಾನ್ಯ ಕ್ಷೇತ್ರಕ್ಕೆ ವರ್ಗಾಯಿಸಬಹುದು. ಆದರೆ ಸಹಕಾರ ಕಾಯಿದೆಯಲ್ಲಿ ಈ ಅವಕಾಶ ಇಲ್ಲ. (2003 Indlaw Kar 120, AIR 2003 Kar 364, 2003 (6) KLJ 503)

95. ಕಂತುಗಳ ಆಧಾರದ ಮೇಲೆ ಸಾಲ ಪಡೆದ ವ್ಯಕ್ತಿ ಕೊನೆಯ ಕಂತು ಬಾಕಿ ಆದ ನಂತರವೂ ಸಾಲ ಮರುಪಾವತಿ ಮಾಡಲಿಲ್ಲವಾದ್ದರಿಂದ ಕಲಂ 70ರಲ್ಲಿ ದಾವಾ ದಾಖಲಿಸಿ ಡಿಕ್ರಿ ಪಡೆಯಿತು. ಇದನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕರಣದಲ್ಲಿ ಮೇಲ್ಮನವಿ ಸಲ್ಲಿಸಿದಾಗ, ಮಧ್ಯಪ್ರವೇಶ ಅವಶ್ಯಕವಿಲ್ಲವೆಂದು ವಜಾ ಮಾಡಿತು. ಈ ರಿಟ್ ಅರ್ಜಿಯಲ್ಲಿ ಸಲ್ಲಿಸಿದ ಪ್ರಾರ್ಥನೆ ಎಂದರೆ ಬಡ್ಡಿದರದ ಬಗ್ಗೆ. ಇದಕ್ಕೆ ಪೂರಕವಾಗಿ (1991) ILR Kar 3186/1992 (1) BC 331 ರ ತೀರ್ಪನ್ನು ಆಧರಿಸಿ ಬಡ್ಡಿದರ ಕಡಿಮೆ ಮಾಡಲು ವಿನಂತಿಸಿತು. ಆದರೆ ಆ ಪ್ರಕರಣದಲ್ಲಿ ಮೊದಲನೇ ಕಂತು ಸುಸ್ತಿಯಾದ ಕೂಡಲೆ ದಾವಾ ಹಾಕಿದ್ದರಿಂದ ಮಧ್ಯಪ್ರವೇಶ ಮಾಡಿ ಪರಿಹಾರ ನೀಡಿತ್ತು. ಆದ್ದರಿಂದ ಶ್ರೇಷ್ಠ ನ್ಯಾಯಾಲಯ 2002 Indlaw SC 1760 ನ ತೀರ್ಪನ್ನು ಆಧರಿಸಿ ನ್ಯಾಯಾಧಿಕರಣ ಸಾಕ್ಷಿ ಮತ್ತು ದಾಖಲೆಗಳನ್ನು ಪರಿಶೀಲಿಸಿ ಆದೇಶಿಸಿರುವುದರಿಂದ ಉಚ್ಚನ್ಯಾಯಾಲಯ ಮಧ್ಯಪ್ರವೇಶದ ಅವಶ್ಯಕತೆ ಇಲ್ಲವೆಂದು ತೀರ್ಮಾನಿಸಿತು. (2003 Indlaw Kar 171, 2004 (1) BC 595, (2004) 121 Complas 447, 2003 (6) KLJ 60)

96. ಬ್ಯಾಂಕಿನಿಂದ ಎರಡು ವಾಹನ ಖರೀದಿ ಮಾಡಲು ಸಾಲ ಪಡೆದು ಮರು ಪಾವತಿ ಮಾಡದೇ ಇದ್ದಾಗ ಹಾಗೂ ಬ್ಯಾಂಕಿನ ಹೆಸರಿಗೆ ವಾಹನವನ್ನು ಅಡಮಾನ ಮಾಡಿ ಒಪ್ಪಂದಕ್ಕೆ ಭದ್ದನಾಗಿರತಕ್ಕದ್ದು. ಸಾಲ ಮರು ಪಾವತಿ ಮಾಡದೇ ಇದ್ದಾಗ ವಾಹನಗಳನ್ನು ಜಪ್ತಿ ಮಾಡಿರುವುದನ್ನು ಪ್ರಶ್ನಿಸಿ ರಿಟ್ ದಾಖಲಿಸಿದಾಗ. ಈ ನ್ಯಾಯಾಲಯ (1991) 4 Kar LJ 274 ರಲ್ಲಿ ಏಕ ಸದಸ್ಯ ಪೀಠದ ಆದೇಶವನ್ನು ಕಿತ್ತು ಹಾಕಿ, ಜಪ್ತಿ ಮಾಡಲು ಅಧಿಕಾರ ಇದೇ ಎಂದು ತೀರ್ಮಾನಿಸಿರುವುದರಿಂದ, ಸಾಲಗಾರ ಒಪ್ಪಂದಕ್ಕೆ ಸಹಿ ಮಾಡಿರುವುದರಿಂದ, ಮಧ್ಯ ಪ್ರವೇಶ ಮಾಡುವ ಅವಶ್ಯಕತೆ ಇಲ್ಲ. (2003 Indlaw Kar 147, AIR 2003 Kar 484, 2005 (1) BC 74)

97. ದಾವಾ ಪ್ರಕರಣ ದಾಖಲಿಸುವಾಗ ವಿಳಂಬವಾಗಿದೆ ಎಂದು ಕರ್ನಾಟಕ ಮೇಲ್ಮನವಿ ಪ್ರಾಧಿಕರಣ ದಾವಾ ಪ್ರಕರಣ ವಜಾ ಮಾಡಿರುವುದು ತಪ್ಪು. ಏಕೆಂದರೆ ಸಕ್ಕರೆ ನಿರ್ದೇಶಕರು ಮಾಡಿದ ಆದೇಶವನ್ನು ಪರಿಶೀಲಿಸದೆ ಮೇಲ್ಮನವಿ ಪ್ರಾಧಿಕರಣ ವಜಾ ಮಾಡಿರುವುದು ತಪ್ಪು. ಆದ್ದರಿಂದ ಪುನರ್ ವಿಮರ್ಷೆ ಅರ್ಜಿ ಪುರಸ್ಕರಿಸಿ, ವಿಳಂಬ ವಿನಾಯ್ತಿಯಾಗಿದೆ ಎಂದು ತೀರ್ಮಾನಿಸಿದ ಮೇಲ್ಮನವಿ ಪ್ರಾಧಿಕರಣದ ಆದೇಶವನ್ನು ಕಿತ್ತು ಹಾಕಿತು. (2003 Indlaw Kar 222, 2003 ILR (Kar) 2779)

98. ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯಲ್ಲಿನ ಕಲಂ.70(2)(d) ನಲ್ಲಿನ ವಿಷಯಗಳ ಬಗ್ಗೆ ತೀರ್ಮಾನ ಮಾಡಲು ಸಹಕಾರ ನ್ಯಾಯಾಲಯಕ್ಕೆ ಅಧಿಕಾರ ನೀಡಲಾಗಿದೆ. ಆರೆ 70(2)(d) ಹೊರತು ಪಡಿಸಿ ಇನ್ನಿತರ ಕಾರ್ಮಿಕ ವಿಷಯಗಳ ಬಗ್ಗೆ ಕಾರ್ಮಿಕ ನ್ಯಾಯಾಲಯ ಅಧಿಕಾರ ಹೊಂದಿದೆ. ಅಂದರೆ ಕಾರ್ಮಿಕ ನ್ಯಾಯಾಲಯಕ್ಕೆ ಅಧಿಕಾರ ತೆಗೆದು ಹಾಕಿದ್ದರೂ (ಕಲಂ 118), ಕಲಂ 70(2)(d) ನಲ್ಲಿ ನಮೂದಿಸಿದ ವಿಷಯಗಳನ್ನು ಹೊರತು ಪಡಿಸಿ ಇತರ ಕಾರ್ಮಿಕ ವಿಷಯದಲ್ಲಿ ಅಧಿಕಾರ ಕಾರ್ಮಿಕ ನ್ಯಾಯಾಲಯಕ್ಕೆ ಇದೆ. (2003 Indlaw Kar 211, 2003 ILR (Kar) 2531, 2003 (4) KLJ 453, 2003 (3) LLJ 502)

99. ಕಾರ್ಮಿಕರು ಮತ್ತು ಆಡಳಿತ ಮಂಡಳಿ ಒಪ್ಪಂದ ಮಾಡಿಕೊಂಡು ಅವರಲ್ಲಿ ಒಂದು ಶರತ್ತು ಕಾರ್ಮಿಕ ನ್ಯಾಯಾಲಯದಲ್ಲಿರುವ ಎಲ್ಲಾ ಪ್ರಕರಣಗಳನ್ನು ವಾಪಸ್ ಪಡೆಯಲು ಸೇರಿಸಿದ್ದಾಗ, ಅದರಂತೆ 124 ಕೆಲಸಗಾರರನ್ನು ತೆಗೆದುಹಾಕಿದ್ದು ಎಲ್ಲರೂ ವಾಪಸ್ ಪಡೆಯದೇ ಇದ್ದಾಗ 51 ಕೆಲಸಗಾರರು ಮಾತ್ರ ವಾಪಸ್ ಪಡೆದಾಗ, ಒಪ್ಪಂದ ಜಾರಿ ಮಾಡುವುದನ್ನು ನ್ಯಾಯಾಲಯ ತೀರ್ಮಾನಿಸಬೇಕು. ಅದರಂತೆ 51 ಕೆಲಸಗಾರರಿಗೆ ಒಪ್ಪಂದದಂತೆ ಪರಿಹಾರ ನೀಡಲು ಆದೇಶಿಸಿತು.

**ಸೂಚನೆ : ಇದು ಸಹಕಾರ ನ್ಯಾಯಾಲಯದ ತೀರ್ಮಾನವನ್ನು ಪ್ರಶ್ನಿಸಿದ್ದುದಲ್ಲಿ.** (2003 Indlaw Kar 385, 2003 (3) LLJ 300A)

100. ಕಲಂ 32 ಮತ್ತು 33ನ್ನು ವಿಮರ್ಷಿಸುವಾಗ, ನೌಕರರಿಗೆ ಕೊಡಬೇಕಾದ ಸಂಬಳ/ಬಾಕಿ ಹಣವನ್ನು, ಬ್ಯಾಂಕು ನೀಡಿದ್ದ ಭದ್ರತಾ ಸಾಲದಿಂದ ವಸೂಲಾದ ಬಾಕಿಗೆ ಮೊದಲನೇ ಪ್ರಾಶಸ್ತ್ಯ ವಿರುತ್ತದೆಯೇ ಹೊರತು, ಬ್ಯಾಂಕ್‌ನ ನೌಕರರ ಸಂಬಳಕ್ಕೆ ಪ್ರಾಶಸ್ತ್ಯ ಇಲ್ಲ ಎಂದು ಶ್ರೇಷ್ಠ ನ್ಯಾಯಾಲಯದ 1987 Indlaw SC 28750/1987-11-LLJ-1 ರನ್ವಯ ನೀತಿ ಅನ್ವಯಸಿದ್ದು. ಸಹಕಾರ ಬ್ಯಾಂಕ್ ಭದ್ರತೆ ಆಧಾರ ಸಾಲ ಬಾಕಿ ವಸೂಲಿ ಮಾಡಿದಾಗ ಕಾರ್ಮಿಕರ ವೇತನಕ್ಕೆ ಪ್ರಾಶಸ್ತ್ಯ ವಿಲ್ಲವೆಂದು ತೀರ್ಪಿಸಿದನ್ನು ಅನುಸರಿಸಿತು. (2003 Indlaw Kar 369, 2003 (6) KLJ 15, 2003 (2) LLJ 595)

101. ದಾವಾ ಪ್ರಕರಣದಲ್ಲಿ ಒಬ್ಬ ವಕೀಲ ಹಾಜರಾಗಿದ್ದ ಅವನು ಪ್ರಕರಣ ನಡೆಸಿಕೊಂಡು ಹೋಗಿದ್ದಾರೆ, ಅಂತಹ ವಕೀಲ ಮತ್ತೊಬ್ಬ ವಕೀಲ ನನ್ನ ಹಾಜರಾಗಲು ತಿಳಿಸಿದಾಗ ಅಂತಹ ವಕೀಲ ನ್ಯಾಯಾಲಯಕ್ಕೆ ಲಿಖಿತವಾಗಿ ಮೆಮೋ ಸಲ್ಲಿಸಿ ಪ್ರಾರ್ಥಿಸಬೇಕು. ಅಂದರೆ ದಾಖಲೆಯಲ್ಲಿರುವ ವಕೀಲನಲ್ಲದ ಬೇರೆ ವ್ಯಕ್ತಿ ಹಾಜರಾಗಬೇಕಾದರೆ, ಯಾವ ವಕೀಲ ದಾಖಲೆಯಲ್ಲಿ ಇರುತ್ತಾನೋ, ಅಂತಹ ವಕೀಲ ಲಿಖಿತವಾಗಿ ಅರ್ಜಿ ಸಲ್ಲಿಸಿ, ಒಪ್ಪಿಗೆ ಪಡೆದರೆ ಮಾತ್ರ ಹಾಜರಾಗಬಹುದು. (2003 Indlaw Kar 155, AIR 2003 Kar 30, 2002 (5) KLJ 321, 2003 (1) RCR (Civil) 584)

102. ಕಾರ್ಮಿಕ ಕಾಯಿದೆ 1–4–47 ರಿಂದ (ಕೇಂದ್ರ ಕಾಯಿದೆ) ಜಾರಿಗೆ ಬಂದಿದ್ದು, ಸಹಕಾರ ಕಾಯಿದೆ 1959 1–6–1960 ರಲ್ಲಿ ಜಾರಿಗೆ ಬಂದಿದ್ದರೂ, ರಾಷ್ಟ್ರಾಧ್ಯಕ್ಷರ ಒಪ್ಪಿಗೆ ರಾಜ್ಯ ಕಾಯಿದೆಗೆ ಪಡೆದಿರುವುದರಿಂದ, ರಾಜ್ಯ ಸಹಕಾರ ಕಾಯಿದೆ ಊರ್ಜಿತ. ಕಾರ್ಮಿಕ ನ್ಯಾಯಾಲಯ ಒಬ್ಬ ನೌಕರನನ್ನು ಮರು ನೇಮಕ ಮಾಡಲು ಆದೇಶಿಸಿದ್ದರೂ, ಆ ನ್ಯಾಯಾಲಯದ ಅಧಿಕಾರ ಇಲ್ಲದ್ದರಿಂದ ಮತ್ತು ಆ ನೌಕರುಗಳನ್ನು ನೇಮಿಸಿಕೊಂಡಾಗ, ಅಕೆಯ ವಯಸ್ಸು 1960 ಸಹಕಾರ ನಿಯಮದಂತೆ ಇರಲಿಲ್ಲ, ವಯಸ್ಸು ಮಿತಿಗಿಂತ ಮೀರಿತ್ತು. ಅಂತಹ ವ್ಯಕ್ತಿಯನ್ನು ನೇಮಿಸಿದ್ದ ಆಡಳಿತ ಮಂಡಳಿ ತಪ್ಪು ಮತ್ತು ನೌಕರ ಹಾಗೂ ಮಾಲೀಕ ಎಂಬ ಸಂಬಂಧವೇ ಇಲ್ಲದಿದ್ದಾಗ ಮರು ನೇಮಕ ಸಾಧ್ಯವಿಲ್ಲ. ಆದ್ದರಿಂದ ಆಕೇಯ ನೇಮಕವೇ ಅಸಿಂದುವಾದ್ದರಿಂದ ಮರು ನೇಮಕದ ಆದೇಶವೂ ತಪ್ಪು. (2001 Indlaw Kar 127, 2002 (18) CLR 721, 2001 (6) KLJ 36, 2001 (34) Labk 3578, 2002 (1) LLJ 684)

103. ಕಾರ್ಮಿಕ ನ್ಯಾಯಾಲಯದ ವ್ಯಾಪ್ತಿಯನ್ನು ಮುಚ್ಚಲಾಗದು ಎಂದು, ನೌಕರರು ಪರಿಹಾರಕೇಳಿದಾಗ ಅದನ್ನು ತೀರ್ಮಾನಿಸಲು ಅಧಿಕಾರ ಇದೆ ಎಂದು ಇದಕ್ಕೆ ಪೂರಕವಾಗಿ 1970 1 SCC 205/1970 Lablc 285 ಅನ್ನು ಅನುಸರಿಸಿ ತೀರ್ಮಾನಕ್ಕೆ ಬಂದಿದೆ. ಇದಕ್ಕೆ 2000 ILR (Kamt) 3743/2001 Lablc 269 ನಲ್ಲಿ ಸಹಕಾರ ನ್ಯಾಯಾಲಯದಲ್ಲಿ ಪರಿಹಾರ ಕೇಳಬೇಕು, ಕಾರ್ಮಿಕ

ನ್ಯಾಯಾಲಯದಲ್ಲಿ ಅಲ್ಲ ಎಂದು ತೀರ್ಮಾನಕ್ಕೆ ವಿರುದ್ದವಾಗಿ, ಕಾರ್ಮಿಕ ನ್ಯಾಯಾಲಯದ ಬಾಗಿಲನ್ನು ಮುಚ್ಚಲಾಗದು ಎಂದು 2001 1 Lab LJ 1404/2001 AIR (SCW) 2433 ನ ತೀರ್ಪನ್ನು ಉಲ್ಲೇಸಿದೆ.

**ಸೂಚನೆ : ಶ್ರೇಷ್ಠ ನ್ಯಾಯಾಲಯ ಕಾರ್ಮಿಕ ನ್ಯಾಯಾಲಯದ ವ್ಯಾಪ್ತಿಯನ್ನು, ಸಹಕಾರ ಸಂಘಗಳ ವಿಷಯದಲಿ ಕಿತ್ತು ಹಾಕಿರುವುದನ್ನು ಊರ್ಜಿತಗೊಳಿಸಿದೆ.** (2001 Indlaw Kar 78, 2002 (2) KLJ 6, 2001 (34) Lablc 2889)

104. ಕಾರ್ಮಿಕ ಕಾಯಿದೆ ಕಲಂ 10(4–ಎ) ಅಡಿ ಸಲ್ಲಿಸಲಾದ ಪ್ರಕರಣದಲ್ಲಿ ಸಹಕಾರ ಬ್ಯಾಂಕ್, ಸಹಕಾರ ಕಾಯಿದೆ ಕಲಂ 70(2)(ಡಿ) ಅಡಿ ಅವಕಾಶ ಕಲ್ಪಿಸಿರುವುದರಿಂದ, ಜಾದ್ಯೋಗಿಕ ಕಾಯಿದೆ ಅನ್ವಯವಾಗುವುದಿಲ್ಲವೆಂದು ತಕರಾರು ತೆಗೆದಾಗ, ಕಾರ್ಮಿಕ ನ್ಯಾಯಾಲಯ ಶ್ರೇಷ್ಠ ನ್ಯಾಯಾಲಯದ ತೀರ್ಪು 1997 Indlaw SC 950/1997-11- LLJ-236 ನಲ್ಲಿನ ತೀರ್ಪು ಈ ಪ್ರಕರಣಕ್ಕೆ ಹೊಲಿಕೆಯಾಗುವುದಿಲ್ಲವೆಂದು, ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ 603/1989ನ ಏಕ ಸದಸ್ಯ ಪೀಠದ ಆದೇಶವನ್ನು ಅನುಸರಿಸಿ, ಕಾರ್ಮಿಕ ನ್ಯಾಯಾಲಯದ ವ್ಯಾಪ್ತಿ ಇದೆ ಎಂದು ತೀರ್ಪಿಸಿದ್ದನ್ನು ಪ್ರಶ್ನಿಸಿ ಈ ರಿಟ್ ಅರ್ಜಿ ಸಲ್ಲಿಕೆಯಾಗಿದೆ (14792, 14804 and 14095/98). ಈ ರಿಟ್ ಅರ್ಜಿ ದ್ವಿಸದಸ್ಯ ಪೀಠದ ಮುಂದೆ ಬಂದಿದ್ದ ಈ ಕೆಳಕಂಡಂತೆ ತೀರ್ಮಾನಿಸಿದೆ. ಶ್ರೇಷ್ಠ ನ್ಯಾಯಾಲಯ 1969 Indlaw SC 341 ಮತ್ತು 1996 Indlaw SC 2085, ತೀರ್ಪಿನಲ್ಲಿ ಸಹಕಾರ ಕಾಯಿದೆಯಲ್ಲಿ ಸ್ಪಷ್ಟ ಅವಕಾಶಗಳನ್ನು ಮಾಡಿದ ನಂತರ ಕಾರ್ಮಿಕ ನ್ಯಾಯಾಲಯದ ಅಧಿಕಾರ ಮೊಟಕುಗೊಂಡಿದೆ ಎಂದು ತೀರ್ಮಾನಿಸಿರುವುದನ್ನು ಒಪ್ಪಿದೆ. ಇದಕ್ಕೆ ಪೂರಕವಾಗಿ ಕಾರ್ಮಿಕ ನ್ಯಾಯಾಲಯದ ವ್ಯಾಪ್ತಿ ಇದೆ ಎಂಬ ತೀರ್ಮಾನಗಳು (1985 ILR Kar 50/1987 Indlaw SC 28165/1987-11-11-LLJ 365) ಶ್ರೇಷ್ಠ ನ್ಯಾಯಾಲಯದ ನಂತರ ತೀರ್ಮಾನಗಳಲ್ಲಿ ಕಾರ್ಮಿಕ ನ್ಯಾಯಾಲಯದ ಅಧಿಕಾರ ಇಲ್ಲ ಎಂಬುದನ್ನು ದೃಢೀಕರಿಸಿರುವುದರಿಂದ ಮತ್ತು ಸಹಕಾರ ಕಾಯಿದೆಯಲ್ಲಿ ವಿವರವಾದ ಅವಕಾಶಗಳನ್ನು ಕಲ್ಪಿಸಿರುವುದರಿಂದ, ಕಾರ್ಮಿಕ ನ್ಯಾಯಾಲಯದ ಅಧಿಕಾರ ಇಲ್ಲ ಎಂದು ತೀರ್ಮಾನಿಸಿತು. (2000 Indlaw Kar 135, 2001 (34) Lablc 269, 2001 (1) LLJ 980)

105. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯದರ್ಶಿಗಳು ಕಾರ್ಮಿಕ ನ್ಯಾಯಾಲಯ ಮುಂದೆ, ಬೋನಸ್ ಪಾವತಿ ಬಗ್ಗೆ ಪ್ರಶ್ನಿಸಿದಾಗ, ಅದಕ್ಕೆ ಪರಿಹಾರವಾಗಿ, ಬೋನಸ್‌ಗೆ ಅರ್ಹರು ಎಂದು ತೀರ್ಪು ನೀಡಿದ್ದನು ಜಿಲ್ಲಾ ಬ್ಯಾಂಕ್ ನವರು ಪ್ರಶ್ನಿಸಿದಾಗಿ (ರಿಟ್ ಮೇಲ್ಮನವಿ 5084/1998) ಕಾರ್ಮಿಕ ನ್ಯಾಯಾಲಯ ಅರ್ಜಿ ವಿಚಾರಣೆ ಪ್ರಾರಂಭಿಸುವ ಪೂರ್ವದಲ್ಲಿ ಅರ್ಜಿದಾರರು ಕಾರ್ಮಿಕರು ಎಂಬ ವರ್ಗಕ್ಕೆ ಸೇರುತ್ತಾರೇಯೇ ಎಂಬುದನ್ನು ಪರಿಶೀಲಿಸದೆ ಆದೇಶಿಸಿರುವುದು ಮತ್ತು ಏಕ ಸದಸ್ಯ ಪೀಠ ಅದನ್ನು ಪುನರ್ ಪರಿಶೀಲಿಸಲು ವರ್ಗಾಯಿಸಿರುವುದನ್ನು ತಿರಸ್ಕರಿಸಿ ಕಾರ್ಯದರ್ಶಿ ಕಾರ್ಮಿಕ ಎಂಬ ವರ್ಗಕ್ಕೆ ಸೇರಿಲ್ಲವಾದ್ದರಿಂದ ಇದು ಕಾರ್ಮಿಕ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂದು ಮೂಲ ಅರ್ಜಿಯನ್ನೇ ವಜಾ ಮಾಡಿತು. ಅಂದರೆ ಕಾರ್ಯದರ್ಶಿ ಹುದ್ದೆ ಕಾರ್ಮಿಕ ಎಂಬ ಅರ್ಥದಲ್ಲಿ ಬರುವುದಿಲ್ಲವೆಂದು ತೀರ್ಪಿತ್ತಿದೆ. (2000 Indlaw Kar 117, 2001 (1) LLR 969, 2000 (8) KLJ 422, 2000 (33) Lablc 3714, 2001 (1) LLJ 655)

106. ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ನುರಿಸುವ ಸಮಯದಲ್ಲಿ, ದಿನ ಕೂಲಿ ನೌಕರರನ್ನು ನಿಗದಿತ ಅವಧಿಗೆ

ನೇಮಿಸಿ, ಅವಧಿ ಮುಗಿದ ನಂತರ ತೆಗೆದು ಹಾಕಲಾಗುತ್ತಿದ್ದು, ಇದು ಪ್ರತಿ ಕಬ್ಬು ನುರಿಸುವ ಹಂಗಾಮಿನಲ್ಲಿ ಮಾತ್ರ ನೇಮಿಸಲಾಗುತ್ತದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಕಾರ್ಮಿಕ ನ್ಯಾಯಾಲಯ ನೀಡಿದ ಡಿಕ್ರಿ ಪ್ರಶ್ನಿಸಿ ಸಕ್ಕರೆ ಕಾರ್ಖಾನೆ ರಿಟ್ ಸಲ್ಲಿಸಿದಾಗ, ಶ್ರೇಷ್ಠ ನ್ಯಾಯಾಲಯ ನೀಡಿದ ತೀರ್ಪಿನನ್ವಯ (1999 Indlaw SC 1022) ಸಹಕಾರ ಕಾಯಿದೆ ವ್ಯಾಪ್ತಿಗೆ ಬರುತ್ತಿದೆ ಹಾಗೂ ಇದು ಕಾರ್ಮಿಕ ನ್ಯಾಯಾಲಯಕ್ಕೆ ಬರುವುದಿಲ್ಲವೆಂದು ತೀರ್ಪಿತ್ತಿದೆ. (2000 Indlaw Kar 120, 2000 (8) KLJ 252, 2001 (34) Lablc 165)

107. ಒಬ್ಬ ವಕೀಲ ಒಂದು ಪ್ರಕರಣದಲ್ಲಿ ಒಬ್ಬ ಪಕ್ಷಗಾರನ ಪರವಾಗಿ ವಕಾಲತ್ ಸಲ್ಲಿಸಿದ ನಂತರ, ಮತ್ತೊಬ್ಬ ವಕೀಲ ಹಾಜರಾಗುತ್ತಾನೆಂದು ತಿಳಿಸಿರತಕ್ಕದ್ದಲ್ಲ. ನ್ಯಾಯಾದೀಶರಿಗೆ ಅರ್ಜಿ ಸಲ್ಲಿಸಿ ಮತ್ತೊಬ್ಬ ವಕೀಲನ ಹಾಜರಾತಿಗೆ ಒಪ್ಪಿಗೆ ಕೇಳಿ, ಒಪ್ಪಿದ ನಂತರವೇ ಹಾಜರಾಗತಕ್ಕದ್ದು. (2000 Indlaw Kar 270, AIR 2001 Kar 36, 2001 (2) KLJ 188)

108. ಪದಾಧಿಕಾರಿಗಳ ಆಯ್ಕೆ ಮಾಡುವಾಗ ಚುನಾಯಿತ ನಿರ್ದೇಶಕರನ್ನು ಮಾತ್ರ ಕರೆಯತಕ್ಕದ್ದು. ನಾಮ ನಿರ್ದೇಶಿತ ಮತ್ತು ಪದವಿಮಿತ್ತ ಅಧಿಕಾರಿಗಳು ಭಾಗವಹಿಸತಕ್ಕದ್ದಲ್ಲ.

**ಸೂಚನೆ : ಈ ತೀರ್ಮಾನವನ್ನು ಕಾಯಿದೆ ಕಲಂ 29ಎಫ್(4)(8)ರ ತಿದ್ದುಪಡಿ ನಂತರ ನಾಮ ನಿರ್ದೇಶಿತ/ಪದವಿ ನಿಮಿತ್ತ ನಿರ್ದೇಶಕನ್ನು ಭಾಗವಹಿಸಲು ಅಧಿಕಾರ ಇದೆ ಎಂದು ತೀರ್ಮಾನಿಸಲಾಗಿದೆ.** (2000 Indlaw Kar 344, AIR 2000 Kar 330, 2000 (5) KLJ 271)

109. ಕಲಂ 21(2) ರಲ್ಲಿ ಒಬ್ಬ ಸಾಮಾನ್ಯ ಸದಸ್ಯನನ್ನು ಮತ್ತೊಂದು ಸಹಕಾರ ಸಂಘಕ್ಕೆ ಪ್ರತಿನಿಧಿಯಾಗಿ ಕಳುಹಿಸಬಹುದು.

**ಸೂಚನೆ : ಈ ತೀರ್ಮಾನದ ನಂತರ ಕಲಂ 21 ರಲ್ಲಿ ಆಡಳಿತ ಮಂಡಳಿಯ ಒಬ್ಬ ಸದಸ್ಯನನ್ನು ಮಾತ್ರ ಕಳುಹಿಸಲು ಅವಕಾಶ ನೀಡಿ ತಿದ್ದುಪಡಿ ಮಾಡಿದೆ. ಇದನ್ನು ನ್ಯಾಯಾಲಯ ದೃಢೀಕರಿಸಿದೆ. ಆದ್ದರಿಂದ ಈ ತೀರ್ಮಾನ ಈಗ ಅನ್ವಯವಾಗುವುದಿಲ್ಲ.**

(1999 Indlaw Kar 355, AIR 2000 Kar 190, 2000 (3) KLJ 259)

110. ನಾಮ ನಿರ್ದೇಶನ ಹೊಡಿದ ನಿರ್ದೇಶಕರು ಮತ ಚಲಾಯಿಸಲು ಸುಗ್ರೀವಾಜ್ಞೆ ಮುಖಾಂತರ ತಂದ ಅಧಿಸೂಚನೆ ಅನೂರ್ಜಿತ, ಏಕೆಂದರೆ (28ಎ(6)ಮ 29ಎಫ್(4)(6) ತಿದ್ದುಪಡಿ ಮೂಲಕ) ಕಲಂ 29(ಎ) ನಲ್ಲಿ ನಾಮ ನಿರ್ದೇಶಿತ ಮೂರು ನಿರ್ದೇಶಕರು ಮತ ಚಲಾಯಿಸಲು ತಿದ್ದುಪಡಿ ಮಾಡಿಲ್ಲ.

**ಸೂಚನೆ : ಈ ತೀರ್ಪು ಈಗ ಅನ್ವಯಿಸುವುದಿಲ್ಲ ಏಕೆಂದರೆ ಕಾಯಿದೆಗೆ ಸಂವಿಧಾನ ತಿದ್ದುಪಡಿ ನಂತರ ಒಬ್ಬ ವ್ಯಕ್ತಿ ಮಾತ್ರ ನಾಮ ನಿರ್ದೇಶನಕ್ಕೆ ಅವಕಾಶ ಕಲ್ಪಿಸಿದ್ದು, ಅವನಿಗೆ ಮತದಾನದ ಹಕ್ಕು ಇದೆ.**

(1999 Indlaw Kar 357, AIR 2000 Kar 224, 2000 (1) KLJ 499, 2001(2) KLJ 527)

111. ಚುನಾವಣಾಧಿಕಾರಿ, ಚುನಾವಣಾ ವೇಳ ಪಟ್ಟಿ ಪ್ರಕಟಿಸಿದ ನಂತರ ಸಂಘದ ವ್ಯಾಪ್ತಿ ಬದಲಾವಣೆ, ಉಪವಿಭಾಗದ ಬದಲಾವಣೆ ನಂತರ, ಚುನಾವಣೆ ನಡೆಸಲು ಸಾಧ್ಯವಿಲ್ಲ. ಬೈಲಾ ತಿದ್ದುಪಡಿ ಮಾಡದ ಹೊರತು ಹೊಸ ಚುನಾವಣೆ ನಡೆಸಲಾಗದು. ಹಾಲಿ ಉಪನಿಯಮಗಳನ್ನು ಬದಲಾವಣೆ ಮಾಡದ ಹೊರತು ಚುನಾವಣೆಯನ್ನು ಈಗಾಗಲೇ ಹೊರಡಿಸಿರುವ ಚುನಾವಣೆ ವೇಳಾ ಪಟ್ಟಿಯಂತೆ ನಡೆಸಲಾಗದು. ಉಪನಿಯಮ ತಿದ್ದುಪಡಿ ಮಾಡಬೇಕು. ಆನಂತರ ಚುನಾವಣೆ ನಡೆಸಬೇಕು. (1999 Indlaw Kar 352, AIR 2000 Kar 113, 2000 (1) KLJ 14)

112. ಕಾರ್ಮಿಕ ಕಾಯಿದೆಯಡಿ ಒಂದು ಸಹಕಾರ ಬ್ಯಾಂಕ್‌ನ ನೌಕರರು ಸಂಘದ ಸಾಲವಸೂಲಿ ಮಾಡಲು ಸಾಲಗಾರನ ಆಸ್ತಿ ಮಾರಾಟ ಮಾಡಿದರೆ, ಆ ಹಣದಿಂದ ಸಂಬಳ ನೀಡಲು ಅರ್ಜಿ ಸಲ್ಲಿಸಿದಾಗ, ನ್ಯಾಯಾಲಯ ಆಸ್ತಿ ಮಾರಾಟ ಮಾಡುವುದನ್ನು ತಡೆಯಾಜ್ಞೆ ಮುಖಾಂತರ ನಿಲ್ಲಿಸಿತು. ಅದರಂತೆ ಅಂತಿಮ ಆದೇಶದಲ್ಲಿ ಮಾರಾಟದಿಂದ ಬಂದ ಹಣದಲ್ಲಿ ನೌಕರರಿಗೆ ಕೊಡಬೇಕಾದ ಬಾಕಿ ನೀಡಿದ ನಂತರ, ಉಳಿದ ಹಣವನ್ನು ಬ್ಯಾಂಕ್ ತನ್ನ ಸಾಲಕ್ಕೆ ಜಮಾ ತೆಗೆದು ಕೊಳ್ಳತಕ್ಕದ್ದು. (1999 Indlaw Kar 232, 1999 (6) KLJ 347, 2000 (1) LLJ 859)

113. ವಿಧಾನ ಮಂಡಳ ಸಹಕಾರ ಸಂಘಗಳ ನಿಯಮ 17ನ್ನು ಸೇರಿಸಿದಾಗ, ಸಹಕಾರ ಸಂಘಗಳ ನೌಕರರ ಸಂಖ್ಯೆ, ವೇತನ ಶ್ರೇಣಿ ಮತ್ತು ಇತರ ಭತ್ಯಗಳನ್ನು ನಿಬಂಧಕರ ಪೂರ್ವಾನುಮತಿ ನೀಡದೆ ನೀಡಬಾರದೆಂದು ವಿಧಿಸಿರುವುದು ಮತ್ತು ಕನಿಷ್ಠ ಸಂಬಳ ಕಾಯಿದೆ 1948 ರಲ್ಲಿ ಸಹಕಾರ ಸಂಘಗಳ ನೌಕರರನ್ನು ಕೈಬಿಟ್ಟಿರುವುದು ಎದ್ದುಕಾಣುತ್ತದೆ.

ಅಂದರೆ ಕನಿಷ್ಠ ಸಂಬಳ ಮಿತಿ ಕಾಯಿದೆ ಮತ್ತು ಗ್ರ್ಯಾಚುಯಿಟಿ ಕಾಯಿದೆ 1972 ರಿಂದ ವಿನಾಯ್ತಿ ನೀಡಬೇಕೆಂದು ವಿಧಾನ ಮಂಡಳ ತೀರ್ಮಾನಿಸಲಾಗುದು.

**ಸೂಚನೆ : ಮತ್ತೊಂದು ತೀರ್ಮಾನದಿಂದ ಈ ತೀರ್ಮಾನ ಮಾರ್ಪಾಡಾಗಿದೆ.** (1998 Indlaw Kar 269, 1999 (1) LLJ 1326)

114. ಈ ಮೇಲ್ಕಂಡ ತೀರ್ಮಾನವನ್ನು ಪ್ರಕರಣದಲ್ಲಿ ವಿಭಾಗೀಯ ಪೀಠ ಕಾರ್ಮಿಕ ಇಲಾಖೆ ತೀರ್ಮಾನವನ್ನು ಕಿತ್ತು ಹಾಕಿದೆ. 1998 Indlaw Kar 86.

**ಸೂಚನೆ: ಈ ತೀರ್ಮಾನ ಮತ್ತೊಂದು ತೀರ್ಮಾನದಿಂದ ಮಾರ್ಪಾಡಾಗಿದೆ.**

115. ನಿಬಂಧಕರು ಮುಖ್ಯ ಪ್ರವರ್ತಕರಿಗೆ, ನೊಂದಣಿ ಪೂರ್ವದಲ್ಲಿ ಪಾಲು ಬಂಡವಾಳ ಪಾವತಿಸಿದ ಸದಸ್ಯರಿಗೆ ಪ್ರಥಮ ಮಹಾಸಭೆಯಲ್ಲಿ ಭಾಗವಹಿಸಿ ಮತದಾನದ ಹಕ್ಕು ನೀಡಲು ತಯಾರಿಸಿದ ಪಟ್ಟಿಯಲ್ಲಿ ಸೇರಿಸಲು ನಿರ್ದೇಶನ ನೀಡುವ ಅಧಿಕಾರ ಇಲ್ಲ. ಯಾವುದೇ ವ್ಯಕ್ತಿ ಸದಸ್ಯತ್ವಕ್ಕೆ ಅರ್ಜಿ ಕೊಡಲಾರದೆ, ಸದಸ್ಯತ್ವ ನೀಡಲು ಮನವಿ ಮಾಡತಕ್ಕದ್ದಲ್ಲ. ಕಲಂ.3 ಅಥವಾ ಕಲಂ.7 ರಲ್ಲಿ ನಿಬಂಧಕರಿಗೆ ಈ ರೀತಿ ನಿರ್ದೇಶನ ನೀಡಲು ಅಧಿಕಾರ ಇಲ್ಲ. (1998 Indlaw Kar 358, AIR 1999 Kar 8, 1998 (4) KLJ 471)

116. ವೈಶ್ಯ ಸಹಕಾರ ಬ್ಯಾಂಕನ್ನು, ಕರ್ನಾಟಕ ಕೈಗಾರಿಕಾ ಸಹಕಾರ ಬ್ಯಾಂಕ್ ಜೊತೆ, ಭಾರತೀಯ ರಿಜರ್ವ್ ಬ್ಯಾಂಕ್‌ನ ಪೂರ್ವಾನುಮತಿಯೊಂದಿಗೆ ವಿಲೀನ ಆದೇಶಿಸಿದಾಗ, ವೈಶ್ಯ ಬ್ಯಾಂಕಿನ ನೌಕರರಿಗೆ ಸ್ವಾಭಾವಿಕ ನ್ಯಾಯದಂತೆ ಅವಕಾಶ ನೀಡಿಲ್ಲ ಎಂಬ ವಾದವನ್ನು ತಳ್ಳಿಹಾಕಿ, ಬ್ಯಾಂಕಿನ ಎಲ್ಲಾ ನೌಕರನ್ನು ಕೈಗಾರಿಕಾ ಬ್ಯಾಂಕ್‌ನಲ್ಲಿ ಕೆಲಸ ನಿರ್ವಹಿಸಲು ಅವಕಾಶ ನೀಡಿರುವುದರಿಂದ ರಿಟ್ ಅರ್ಜಿ ವಜಾಗೊಳಿಸಿತು. ಇದಕ್ಕೆ ಪೂರಕವಾಗಿ 1987 Indlaw SC 28776/10 ರಲ್ಲಿ ನೀಡಿದ ತೀರ್ಪು, ಇದಕ್ಕೆ ಅನ್ವಯ ವಾಗುವುದಿಲ್ಲ ಏಕೆಂದರೆ, ಶ್ರೇಷ್ಠ ನ್ಯಾಯಾಲಯ ಒಟ್ಟುಗೂಡಿಸಿದ ಬ್ಯಾಂಕ್‌ನ ನೌಕರರನ್ನು ಮುಂದುವರಿಸಲು ಅವಕಾಶ ಇಲ್ಲದೇ ಇದ್ದಾಗ ಪ್ರತಿ ನೌಕರನಿಗೂ ಸ್ವಾಭಾವಿಕ ನ್ಯಾಯಾ ನೀತಿ ಅನ್ವಯ ಅವಕಾಶ ನೀಡಬೇಕೆಂದು ತೀರ್ಮಾನಿಸಿತು. ಆದರೆ ಈ ಪ್ರಕರಣದಲ್ಲಿ ಎಲ್ಲಾ ನೌಕರರನ್ನು ಕೂಡಿಸಿ ಬ್ಯಾಂಕ್ ಸೇವೆಯಲ್ಲಿ ಮುಂದುವರಿಸಿರುವುದರಿಂದ ಆ ತೀರ್ಮಾನ ಅನ್ವಯವಾಗುವುದಿಲ್ಲ. (1998 Indlaw Kar 394, (1999) 95 comp cas 498, 2000 (1) KLJ 595)

117. ಸರ್ಕಾರ ಕಲಂ 121 ರಲ್ಲಿ ವಿನಾಯ್ತಿ ನೀಡುವಾಗ ಒಂದು ಸಹಕಾರ ಸಂಘದ ಕಾರ್ಯನಿರ್ವಹಣೆ ಅಧಿಕಾರಗಳು ಮತ್ತು ಕರ್ತವ್ಯಗಳ ಬಗ್ಗೆ ನೀಡಬಹುದು. ಆದರೆ ಕಾನೂನಿನನ್ವಯ ಅನರ್ಹತೆಗೊಂಡ ಒಬ್ಬ ವ್ಯಕ್ತಿಯನ್ನು ಚುನಾಯಿತನಾಗಲು, ನೇಮಿಸುವಾಗ ಮತ್ತು ಮುಂದುವರಿಯುವಾಗ (ಅಂದರೆ

ಅಧ್ಯಕ್ಷ, ಉಪಾಧ್ಯಕ್ಷ) ಅಂತಹ ಸಂದರ್ಭದಲ್ಲಿ ಕಲಂ 121 ರಲ್ಲಿ ವಿನಾಯ್ತಿ ನೀಡತಕ್ಕದ್ದಲ್ಲ. (1998 Indlaw Kar 370, AIR 1998 Kar 215, 1998 (3) KLJ 19)

118. ಯಾವುದೇ ಪ್ರಕರಣ ದಾಖಲಿಸಲು, ಬೇರೆ ನ್ಯಾಯಾಲಯದಲ್ಲಿ ಹೂಡಿದ್ದರೆ, ಅವಧಿಯನ್ನು ವಿಳಂಬ ವಿನಾಯ್ತಿಯಿಂದ ವಿನಾಯ್ತಿ ನೀಡಬಹುದು. ಅಂದರೆ ಎರಡನೆ ನ್ಯಾಯಾಲಯದ ಮುಂದೆ ದಾಖಲ್ ಮಾಡುವಾಗ, ಮೊದಲನೇ ನ್ಯಾಯಾಲಯದಲ್ಲಿ ಹೂಡಿದ ಅವಧಿಗೆ ವಿನಾಯ್ತಿ ನೀಡಬಹುದು. ಇದರ ಜೊತೆಗೆ ಹಿಂದಿನ ಪ್ರಕರಣದಲ್ಲಿ ಬಾಕಿ ಇರುವ ಪ್ರಕರಣ ವಾಪಸ್ ಪಡೆದಿರಲೇಬೇಕೆಂಬ ಶರತ್ತು ಇರುವುದಿಲ್ಲ ಅಥವಾ ವಾಪಸ್ ಪಡೆದಿಲ್ಲವೆಂಬ ಕಾರಣದಿಂದ ತಿರಸ್ಕರಿಸಲಾಗದು. (1997 Indlaw Kar 246, AIR 1998 Kar 20, 1997 (3) KLJ 622)

119. ಅಪೆಕ್ಸ್ ಬ್ಯಾಂಕ್, ಅರ್ಜಿದಾರನನ್ನು ತಾತ್ಕಾಲಿಕವಾಗಿ ನೇಮಿಸಿಕೊಂಡ, ಆ ನಂತರ ನೇಮಕಾತಿ ಪ್ರಕ್ರಿಯೇ ಮೂಲಕ ನೇಮಕ ಮಾಡಿದಾಗ ಅವನನ್ನು ಪಟ್ಟಿಯಲ್ಲಿ ಮೊದಲನೆ ಹೆಸರನ್ನು ಸೇರಿಸಿತು. ಆ ನಂತರ ಬ್ಯಾಂಕ್, ಈ ಪಟ್ಟಿ ಜೇಷ್ಠತಾಪಟ್ಟಿಯಲ್ಲವೆಂದು ಒಂದು ಪರಿಶೀಲನಾ ಸಮಿತಿ ರಚಿಸಿ, ಆ ಮೂಲಕ ಜೇಷ್ಠತೆಯನ್ನು ನಿರ್ಧರಿಸಿತು. ಈ ಪಟ್ಟಿಯಲ್ಲಿ ಅರ್ಜಿದಾರನ ಹೆಸರು 4ನೇ ಹೆಸರು ನಿಗದಿ ಮಾಡಿದಾಗ, ಈ ರಿಟ್ ಅರ್ಜಿ ಸಲ್ಲಿಸಿತು. ಈ ಅರ್ಜಿಯನ್ನು ತೀರ್ಮಾನಿಸುವಾಗ ಅಪೆಕ್ಸ್ ಬ್ಯಾಂಕ್ ರಾಜ್ಯದ ಅಂಗ ಸಂಸ್ಥೆ ಎಂದು ಮತ್ತು ರಿಟ್ ಅರ್ಜಿಯನ್ನು ನೇರವಾಗಿ ಸಲ್ಲಿಸಲು ಅವಕಾಶ ಇಲ್ಲ ಎಂಬ ಪ್ರಶ್ನೆಗೆ ಉತ್ತರಿಸುತ್ತಾ, ಇದು ಸಂವಿಧಾನದ ಅನುಛೇದ 12 ರನ್ವಯ ರಾಜ್ಯ ಸರ್ಕಾರ ಹಣಕಾಸು ನೆರವು ನೀಡಿರುವುದರ ಜೊತೆಗೆ ಕಲಂ 40 ರಿಂದ 54 ರಲ್ಲಿರುವ ಅವಕಾಶಗಳಂತೆ, ಇದು ಒಂದು ರಾಜ್ಯ ಸಂಸ್ಥೆಯಾಗುತ್ತಿದೆ. ಆದ್ದರಿಂದ ರಿಟ್ ಅರ್ಜಿಯನ್ನು ನೇರವಾಗಿ ದಾಖಲಿಸಬಹುದು ಎಂದು ತೀರ್ಮಾನಕ್ಕೆ ಬಂದು, ಅರ್ಜಿದಾರನ ಮನವಿಯನ್ನು ಪುರಸ್ಕರಿಸಿ, ಪಟ್ಟಿಯನ್ನು ಪುರಸ್ಕರಿಸಿ ಇದನ್ನು ಪೂರ್ವಭಾವಿ ಪಟ್ಟಿ ಎಂದು, ಅಂತಿಮ ಪಟ್ಟಿ ಪ್ರಕಟಿಸಲು ಸೂಚಿಸಿತು. (1994 Indlaw Kar 117, 1994 (3) KLJ 548, 1996 (1) LLJ 193)

120. ದಾವಾ ಪ್ರಕರಣದಲ್ಲಿ ಕಲಂ 103 ರಲ್ಲಿ ಜಪ್ತಿ ಮಾಡಿದ ಆಸ್ತಿಗಳಲ್ಲಿ ಪಿತ್ರಾರ್ಜಿತ ಆಸ್ತಿ ಎಂದು ಅರ್ಥೈಸುವಾಗ, ಸಂಸಾರದ ಆಸ್ತಿಯಲ್ಲದೆ ಬೇರೆ ಮೂಲದಿಂದ ಬಂದ ಆಸ್ತಿ ಪಿತ್ರಾರ್ಜಿತವಾಗುವುದಿಲ್ಲ. ಅಂದರೆ ತಾಯಿಯು ತಮ್ಮ ದಾನ ಮಾಡಿದ ಆಸ್ತಿ ಪಿತ್ರಾರ್ಜಿತವಾಗುವುದಿಲ್ಲ. ಜಾರಿ ಮಾಡುವ ಅಧಿಕಾರಿ ಜಪ್ತಿ ಮಾಡಿದ ಆಸ್ತಿಯನ್ನು ಬಿಡುಗಡೆ ಮಾಡಲು ಸಲ್ಲಿಸಿದ ಅರ್ಜಿ ವಜಾ ಮಾಡಿದಾಗ, ಡಿಕ್ರಿ ನೀಡಿದಾಗ 103ರ ಜಪ್ತಿ ಆದೇಶ ಬಾಕಿ ವಸೂಲಾಗುವ ತನಕ ಮುಂದುವರಿಯಲು ಆದೇಶಿಸಿದರೆ ಅದು ಮುಂದುವರಿಯುತ್ತದೆ. ವಿಚಾರಣೆ ಮಾಡಿದ ಪ್ರಾಧಿಕಾರ ಸಿ.ಪಿ.ಸಿ ಆರ್ಡರ್ 21 ನಿಯಮ 58ರಲ್ಲಿ ಸಲ್ಲಿಸಿದ ಅರ್ಜಿ ವಜಾ ಮಾಡಿರುವುದು ತಪ್ಪು. (1994 Indlaw Kar 146, AIR 1995 Kar 35, 1994 (2) KLJ 102)

121. ಭಾರತೀಯ ಆಹಾರ ನಿಗಮ, ಕಾರ್ಮಿಕ ಸಹಕಾರ ಸಂಘಗಳನ್ನು ಸ್ಥಾಪಿಸಿ, ವ್ಯವಹಾರ ಮಾಡಲು ವ್ಯವಸ್ಥೆ ಮಾಡುವ ಬದಲು, ಟೆಂಡರ್ ಮೂಲಕ ಕೆಲಸ ಮಾಡಿಸಲು ಕೈಗೊಂಡ ಕ್ರಮ ಅಸಿಂದು. (1993 Indlaw Kar 128, AIR 1994 Kar 147, 1993 (3) KLJ 472)

122. ಸಹಕಾರ ಕಾಯಿದೆಯಲ್ಲಿ ಕಲಂ 125 ರಲ್ಲಿ ನೋಟೀಸ್ ಕೊಡುವುದು ಅವಶ್ಯಕವೇ ಎಂಬುದು ವಿಮರ್ಷ ಮಾಡುವಾಗ, ಯಾವುದೇ ಸಹಕಾರ ಸಂಘದ, ರಚನೆ, ಆಡಳಿತ ಮತ್ತು ವ್ಯವಹಾರದ ಮೇಲೆ ಪ್ರಶ್ನಿಸುವಾಗ ಕಲಂ 125ರ ನೋಟೀಸ್ ನೀಡುವುದು ಶಾಸನ ಬದ್ಧ ಜವಾಬ್ದಾರಿ, ಇಲ್ಲವಾದರೆ ಸಿವಿಲ್ ನ್ಯಾಯಾಲಯದಲ್ಲಿ ದಾವಾ ದಾಖಲಿಸಲಾಗದು. (1992 Indlaw Kar 159, AIR 1993 Kar 20, (1993) 78 compcas 132, 1992 (4) KLJ 451)

123. ಕಲಂ 20 ರಲ್ಲಿ ವಿಧಿಸಿರುವ ಶರತ್ತುಗಳಲ್ಲಿ ವಸೂಲಾತಿ ಶೇ.50% ರಷ್ಟು ಇರಬೇಕು ಮತ್ತು ಅದನ್ನು ಹಣಕಾಸು ಪೂರೈಸುವ ಸಂಸ್ಥೆಗೆ ಜಮಾ ಮಾಡಿರಬೇಕು, ಹಾಗಿದ್ದರೆ ಮಾತ್ರ ಮತದಾನದ ಹಕ್ಕು ಎಂಬುದಕ್ಕೆ ಬೇರಾವುದೇ ಕಾರಣದಿಂದ ವಿನಾಯ್ತಿಸಲಾರದು ಮತ ಚಲಾಯಿಸಲು ಈ ಶರತ್ತು ಪೂರೈಸಿರಬೇಕು. (1992 Indlaw Kar 157, (1995) 82 compcas 620, 1993 (1) KLJ 492)
124. ಕಲಂ 4, 6, 7 ರಡಿ ಗೃಹ ನಿರ್ಮಾಣ ಸಹಕಾರ ಸಂಘ ನೋಂದಾಯಿಸಬಾರದೆಂದು ಸೂಚಿಸಿಲ್ಲವಾದ್ದರಿಂದ, ಯಾವುದೇ ನಿರ್ಭಂದ ಹೆರತಕ್ಕದ್ದಲ್ಲ. ಎಲ್ಲಿಯವರೆವಿಗೆ ಒಂದು ಸಂಘ ಸದಸ್ಯರ ಆರ್ಥಿಕ ಬೆಳವಣಿಗೆಗೆ ರಚನೆಯಾಗುತ್ತಿದ್ದಲ್ಲಿ ಅದನ್ನು ನೋಂದಾಯಿಸಬಹುದು. (1992 Indlaw Kar 209, AIR 1993 Kar 117, 1992 (3) KLJ 659)
125. ಕಲಂ 121ನ್ನು ಉಪಯೋಗಿಸಿ, ಕಲಂ 20ರ ಅರ್ಹತೆಯಿಂದ ವಿನಾಯ್ತಿ ನೀಡುವುದು ಸರಿಯೇ ಎಂಬ ಪ್ರಶ್ನೆಗೆ, ವ್ಯಕ್ತಿಗತ ಅನರ್ಹತೆಗೆ ವಿನಾಯ್ತಿ ನೀಡತಕ್ಕದ್ದಲ್ಲ, ಸಹಕಾರ ಸಂಘಗಳಿಗೆ ವಿನಾಯ್ತಿ ನೀಡಬಹುದೇ ಹೊರತು ಸದಸ್ಯ ವ್ಯಕ್ತಿಗಳಿಗಲ್ಲ. (1992 Indlaw Kar 218, AIR 1993 Kar 236, 1992 (3) KLJ 462)
126. ವಾಹನ ಸಾಲ ಪಡೆಯುವಾಗ, ವಾಹನವನ್ನು ಬ್ಯಾಂಕಿನ ಹೆಸರಿಗೆ ಅಡಮಾನ ಮಾಡಿದಾಗ, ಮತ್ತು ಸಾಲಗಾರ ಸಾಲದ ಕಂತುಗಳನ್ನು ಮರು ಪಾವತಿ ಮಾಡದೇ ಇದ್ದು, ವಾಹನವನ್ನು ಜಪ್ತಿ ಮಾಡಿರುವುದನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕರಣ ಅನೂರ್ಜಿತಗೊಳಿಸಿರುವುದು ನ್ಯಾಯಸಮ್ಮತತವಲ್ಲ. ಒಪ್ಪಂದದ ಕಾಯಿದೆ ಮತ್ತು ವಾಹನ ಅಡಮಾನ ಮಾಡಿದ ದಾಖಲೆಗಳ ಆಧಾರದ ಮೇಲೆ, ಬ್ಯಾಂಕ್ ಸಾಲ ಮರುಪಾವತಿ ಮಾಡದೇ ಇದ್ದ ಸಾಲಗಾರನ ಮಾಹನವನ್ನು ಜಪ್ತಿ ಮಾಡುವ ಅಧಿಕಾರ ಹೊಂದಿದೆ. ಇದಕ್ಕೆ ಪೂರಕವಾಗಿ ಏಕ ಸದಸ್ಯ ಪೀಠ ಒಪ್ಪಂದ ಕಾಯಿದೆ ಕಲಂ 176 ಅನ್ವಯವಿಲ್ಲ ಎಂಬ ವಾದವನ್ನು ಕಿತ್ತು ಹಾಕಿ, ಜಪ್ತಿ ಮಾಡಿ ವಸೂಲಿ ಮಾಡಿಕೊಳ್ಳಲು ಅಧಿಕಾರ ಇದೆ ಮತ್ತು ಇದಕ್ಕಾಗಿ ಕಲಂ 70ರ ದಾವಾ ಹೂಡುವ ಅವಶ್ಯಕತೆ ಇಲ್ಲ. (1991 Indlaw Kar 201, (1992) 74 compcas 79, 1991 (4) KLJ 274)
127. ಕಲಂ 118 ರಲ್ಲಿ ಸಿವಿಲ್ ನ್ಯಾಯಾಲಯದ ಕಾರ್ಯವ್ಯಾಪ್ತಿಯನ್ನು ಕಿತ್ತು ಹಾಕಿದ್ದು, ಕಲಂ 70 ರಲ್ಲಿ ಸಹಕಾರ ಸಂಘದ ಮೇಲೆ ದಾವಾ ಹಾಕಲು ಅವಕಾಶ ಇದೆ ಎಂದು ತೀರ್ಮಾನಿಸಿರುವುದು ಸರಿ. ವಿಳಂಬ ವಿನಾಯ್ತಿ ಕಾಯಿದೆ ಕಲಂ 4, 5, 12 ಮತ್ತು 14 ಮಾತ್ರ ಅನ್ವಯವಾಗುತ್ತಿದೆಂದು ಕಲಂ 119 ರಲ್ಲಿ ನಿಗದಿ ಪಡಿಸಿದೆ. ಆರು ವರ್ಷದ ಕಾಲಮಿತಿ ಪ್ರೋನೋಟ್‌ನಲ್ಲಿ ನಮೂದಿಸಿದ ದಿನಾಂಕದಿಂದ ಲೆಕ್ಕ ಹಾಕತಕ್ಕದ್ದು. ಸಂಘವನ್ನು ಸುಸ್ತಿದಾರರೆಂದು, ವ್ಯಕ್ತಿಗತ ಸಾಲಗಾರ ಸದಸ್ಯರನ್ನು ಗ್ಯಾರೆಂಟಾರ್ ಎಂದು ದಾಖಲಿಸುವುದು, ನಿಬಂಧಕರ ಒಪ್ಪಿಗೆ ಪಡೆದ ಸಿವಿಲ್ ನ್ಯಾಯಾಲಯದಲ್ಲಿ ದಾವಾ ದಾಖಲಿಸಬಹುದು. (1990 Indlaw Kar 155, (1992) 75 compcas 266, 1990 (2) KLJ 475)
128. ಕಲಂ 70ರಲ್ಲಿ ದಾವಾ ದಾಖಲಿಸಲು ವಿಳಂಬವಾಗಿದೆ, ಅಂದರೆ ಸಾಲ ನೀಡಿದ ಆರು ವರ್ಷಗಳ ನಂತರ ದಾಖಲಿಸಲಾಗಿದೆಯಾದ್ದರಿಂದ, ಇದು ತಪ್ಪು ಎಂದು, ಇದಕ್ಕೆ ಪ್ರಿವಿಕೌನ್ಸಿಲ್ ಮತ್ತು ಶ್ರೇಷ್ಠ ನ್ಯಾಯಾಲಯ, ಎಲ್ಲಾ ಕಂತುಗಳು ನೀಡಲಾಗಿದೆಯೋ, ಅಂತಹ ಸಂದರ್ಭದಲ್ಲಿ ಮೊದಲನೇ ಕಂತು ಮರು ಪಾವತಿ ಮಾಡದೇ ಇದ್ದರೂ ದಾವಾ ಹಾಕಬಹುದು ಅಥವಾ ಎಲ್ಲಾ ಕಂತುಗಳು ಬಾಕಿ ಯಾದ ನಂತರ ದಾವಾ ದಾಖಲಿಸಿಬಹುದು. ಸಾಲದ ಮೊತ್ತಕ್ಕೆ ದಾಖಲೆಗಳಿರುವುದರಿಂದ, ಕೊನೆಯ ಕಂತಿನ ನಂತರ ಆರು ವರ್ಷಗಳಲ್ಲಿ ದಾವಾ ದಾಖಲಿಸಬಹುದು ಅಥವಾ ಒಂದೇ ಕಂತು ಸುಸ್ತಿಯಾದ ಕೂಡಲೇ ದಾಖಲಿಸಬಹುದು. (1990 Indlaw Kar 147, (1992) 74 compcas 172)
129. ಒಂದು ದಾವಾ ಪ್ರಕರಣ ದಾಖಲಿಸಿದಾಗ, ಸಹಾಯಕ ನಿಬಂಧಕರನ ಕಾರ್ಯವ್ಯಾಪ್ತಿಗೆ ಬರುತ್ತಿದ್ದ

ದಾವಾ ದಾಖಲಿಸಿದಾಗ, ಈ ಪ್ರಕರಣ ದಾಖಲಾದ ನಂತರ ಸಂಘದ ಕಾರ್ಯವ್ಯಾಪ್ತಿ ವಿಸ್ತರಿಸಿದಾಗ, ಬಾಕಿ ಇದ್ದ ಪ್ರಕರಣ, ಶಾಸನ ಬದ್ಧವಾಗಿ ದಾಖಲಿಸಿದ್ದು ಬೈಲಾ ತಿದ್ದುಪಡಿ, ಆ ಅಧಿಕಾರವನ್ನು ಕಿತ್ತುಹಾಕಲಾಗದು ಏಕೆಂದರೆ ಬೈಲಾ ಶಾಸನವಲ್ಲ ಅದು ಒಂದು ಒಪ್ಪಂದ. ಆದ್ದರಿಂದ ಶಾಸನ ಬದ್ಧವಾಗಿ, ದಾವಾ ದಾಖಲಾದ ದಿನಾಂಕದಂದು ಇದ್ದ ಅಧಿಕಾರ ಮೊಟಕುಗೊಳ್ಳುವುದಲ್ಲ. ಅಂದರೆ ಕಾನೂನಿನಲ್ಲಿ ನಿಗದಿ ಪಡಿಸಿದ ಅಧಿಕಾರ ಚಲಾಯಿಸುವಾಗ ಉಪನಿಯಮಗಳ ತಿದ್ದುಪಡಿ ಪರಿಣಾಮದಿಂದ ಶಾಸನ ಬದ್ಧ ಅಧಿಕಾರ ಮೊಟಕುಗೊಳ್ಳುವುದಿಲ್ಲ. (1989 Indlaw Kar 69, (1992) 73 compcas 556, 1989 (3) KLJ 507)

130. ಅಡಮಾನ ಮಾಡಿದ ವಸ್ತುವನ್ನು ಜಪ್ತಿ ಮಾಡಿ ಮಾರಾಟ ಮಾಡುವುದು, ಸಾಲ ನೀಡುವ ಸಂಸ್ಥೆಯ ಹಕ್ಕು. ಜಪ್ತಿ ಮಾಡಬೇಕಾದ ವಸ್ತು ಬ್ಯಾಂಕಿನ ವಶದಲ್ಲಿಯೇ ಇದ್ದರೆ, ಅದನ್ನು ಮತ್ತೆ ಜಪ್ತಿ ಮಾಡಿ ಮಾರಾಟ ಮಾಡಲು ಸಾಧ್ಯವಿಲ್ಲ ಏಕೆಂದರೆ ಅದು ಬ್ಯಾಂಕಿನ ವಶದಲ್ಲಿಯೇ ಇದೆ. ಕರ್ನಾಟಕ ಮೇಲ್ಮನವಿ ಪ್ರಾಧಿದರಣ ಸರಿಯಾದ ತೀರ್ಮಾನಕ್ಕೆ ಬಂದಿದೆ. ಅಂದರೆ ವಸ್ತುವನ್ನು ಜಪ್ತಿ ಮಾಡಿ ಮಾರಾಟ ಮಾಡಿದ್ದನ್ನು ಕಲಂ 70ರ ದಾವಾ ಪ್ರಕರಣದಲ್ಲಿ ಪ್ರಶ್ನಿಸಬೇಕು. (1989 Indlaw Kar 73, (1991) 70 compcas 850)

131. ಸಹಕಾರ ಕಾನೂನು ರಚನೆ ಮಾಡಿದಾಗ ಸಂಘದ ಆಸ್ತಿಯನ್ನು ಕಾಪಾಡಲು, ಯಾವುದೇ ಪಕ್ಷಗಾರ, ವ್ಯವಹಾರದಲ್ಲಿ ಭಾಗಿಯಾಗಿದ್ದರೆ, ಅವನನ್ನು ಕಕ್ಷಿದಾರನನ್ನಾಗಿ ಮಾಡಬೇಕು. ಅಂತಹ ಸಂದರ್ಭದಲ್ಲಿ ಪ್ರಕರಣ ವಿಚಾರಣೆ ಮಾಡಿದಾಗ, ಅಂತಹ ಕಕ್ಷಿದಾರ ಪ್ರಕರಣದಲ್ಲಿ ಮಾಡಿದ ಆದೇಶಗಳಿಗೆ ಬದ್ಧನಾಗಿರುತ್ತಾನೆ ಮತ್ತು ಕಲಂ 117(3)(ಎ) ಪ್ರಕಾರ ಪ್ರಕರಣದಲ್ಲಿ ಅರ್ಜಿದಾರನ ಹಿತಾಸಕ್ತಿ ಕಾಪಾಡಲು ಕಕ್ಷಿದಾರರನ್ನಾಗಿ ಮಾಡಬಹುದು.

**ತತ್ವ :– ಕಲಂ 117(3)(ಎ) ಪ್ರಕಾರ ನಿಬಂಧಕರು ಅಥವಾ ಅವನಿಂದ ಪ್ರಕರಣ ಪಡೆದ ಮಧ್ಯಸ್ತಿಗಾರರು ಆಸ್ತಿಯಲ್ಲಿ ಹಿತಾಸಕ್ತಿ ಇದ್ದ ವ್ಯಕ್ತಿಗಳನ್ನು ಕಕ್ಷಿದಾರರನ್ನಾಗಿ ಮಾಡಿದಾಗ, ಅಂತಹ ವ್ಯಕ್ತಿಗಳು ಆದೇಶದಲ್ಲಿ ನೀಡಿದ ತೀರ್ಪಿಗೆ ಭದ್ದರಾಗಿರುತ್ತಾರೆ. (1989 Indlaw Kar 71, (1991) 71 compcas 560)**

132. ಸಹಕಾರ ಶಿಕ್ಷಣ ನಿಧಿ ಪಾವತಿ ಮಾಡಿದಾಗ ಅದು ಆದಾಯ ತೆರಿಗೆ ಕಾಯಿದೆಯಲ್ಲಿ ವಿನಾಯ್ತಿ ನೀಡಲಾಗದು ಎಂಬ ವಾದವನ್ನು ತಳ್ಳಿ ಹಾಕಿ, ಕಾಯಿದೆಯಲ್ಲಿ ಲಾಭದಿಂದ ಶಿಕ್ಷಣ ನಿಧಿ ಪಾವತಿ ಮಾಡುತ್ತಿದ್ದರು, ಅದು ಶಾಸನ ಬದ್ಧ ಪಾವತಿಯಾಗಿರುವುದರಿಂದ, ಅದು ಆದಾಯ ತೆರಿಗೆ ಕಾಯಿದೆಯಲ್ಲಿ ವಿನಾಯ್ತಿ ಪಡೆಯಲು ಅರ್ಹ

**ತತ್ವ :– ಸಹಕಾರ ಸಂಘದ ಮೀಸಲು ನಿಧಿ ಒಂದು ಶಾಸನ ಬದ್ಧ ಪಾವತಿ, ಪ್ರತಿಯೊಂದು ಸಹಕಾರ ಸಂಘ ಮೀಸಲು ನಿಧಿಗೆ ಹಣ ಪಾವತಿಸಲು ಬದ್ಧ ಮತ್ತು ನಿಬಂಧಕರ ಸೂಚನೆಯಂತೆ ಅದನ್ನು ಹೂಡಿಕೆ ಮಾಡಲು ಉಪಯೋಗಿಸಲು ಬದ್ಧ. (1988 Indlaw Kar 50, 1988 (74) CTR 54, (1988) 174 ITR 475)**

133. ಸಾಕ್ಷಿ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಒಬ್ಬ ನೌಕರನನ್ನು ಕೆಲಸದಿಂದ ತೆಗೆದು ಹಾಕಿದಾಗ, ವಿಚಾರಣೆ ನಡೆಸಿಲ್ಲವೆಂದು ತಿಳಿದ ಮೇಲೆ, ತೆಗೆದು ಹಾಕಿದ ಕ್ರಮ ಕಾನೂನು ಬಾಹರ. ಕಾರ್ಮಿಕ ನ್ಯಾಯಾಲಯ ವಜಾ ಆದೇಶವನ್ನು ಕಿತ್ತು ಹಾಕಿದೆ ತಪ್ಪು ಮಾಡಿದೆ. ಆಡಳಿತ ಮಂಡಳಿಗೆ ಪರಿಹಾರ ನೀಡಲು ಆದೇಶಿಸಬೇಕಾಗಿತ್ತು ಮತ್ತು ಮರು ನೇಮಕ ಮಾಡಲು ಆದೇಶಿಸಬಾರದು. ಅಂದರೆ ಮರು ನೇಮಕಾತಿ ಬದಲು ಪರಿಹಾರ ರೂಪದಲ್ಲಿ ಪಾವತಿ ಮಾಡಲು ಸೂಚಿಸತಕ್ಕದ್ದು. ಅಂದರೆ ಮರು ನೇಮಕಾತಿ ಬದಲು ಮುಂದಿನ ಮೂರು ವರ್ಷದ ವೇತನವನ್ನು ಪರಿಹಾರ

ರೂಪದಲ್ಲಿ ಪಾವತಿಸಲು ಸೂಚಿಸಬೇಕಾಗಿತ್ತು, ಅದು ಸೂಕ್ತ ಪರಿಹಾರವಾಗುತ್ತದೆ. (1988 Indlaw Kar 18, 1989 (2) LLJ 179)

134. ಒಂದು ಪ್ರಕರಣದಲ್ಲಿ ಡಿಕ್ರಿ ನೀಡಿದ ನಂತರ, ಆಸ್ತಿ ಭಾಗ ಮಾಡಿದ ನಂತರ, ಜವಾಬ್ದಾರಿ ಬದಲಾವಣೆಯಾಗುತ್ತಿದೆಯೋ ಎಂಬುದಕ್ಕೆ, ಡಿಕ್ರಿ ಆದ ದಿನಾಂಕದ ನಂತರ ಕುಟುಂಬದಲ್ಲಿ ಆದ ಜನನ ಮತ್ತು ಮರಣದಿಂದ ಯಾವುದೇ ಬದಲಾವಣೆಯಾಗುವುದಿಲ್ಲ. ಖರೀದಿದಾರ ಮಾರಾಟವಾದ ಆಸ್ತಿ ಪತ್ರಗಳು ಮತ್ತು ಹಿತಾಸಕ್ತಿ ವರ್ಗಾವಣೆಯಾಗಬೇಕು. ಅಂದರೆ ಮಾರಾಟದ/ಅಡಮಾನ ಮಾಡಿದ ಆಸ್ತಿ ಮಾರಾಟವಾದಾಗ. (1987 Indlaw Kar 82, AIR 1988 Kar 99, 1987 (2) KLJ 276)

135. ಒಂದು ಸಹಕಾರ ಸಂಘ ತನ್ನ ಗೊದಾವಿನಲ್ಲಿರುವ ಮಾಲಿಗೆ ವಿಮೆ ಮಾಡಿಸಿದಾಗ, ಆ ವಿಮೆ ಕಳ್ಳತನ, ದರೋಡೆ ಎಂದಿದ್ದರೂ ಸಾರ್ವಜನಿಕರು ಗದ್ದಲ ಮಾಡಿದಾಗಲೂ ಅದಕ್ಕೆ ಪರಿಹಾರ ನೀಡಬೇಕಾಗುತ್ತದೆ. ಇದಕ್ಕೆ (1889) 23 QBD 453 (CA) ಮತ್ತು (1909) I KB Kar 591ನ್ನು ಉಲ್ಲೇಖಿಸಿ, ಅರ್ಥ ವಿವರಣೆ ಪರಿಶೀಲಿಸಿ ರೂ.35,819.70 ಮತ್ತು ವಾರ್ಷಿಕ ಶೇ.6 ರಂತೆ ಬಡ್ಡಿ ಪಾವತಿಸಲು ಆದೇಶಿಸಿತು. ಇದಕ್ಕೆ ಪೂರಕವಾಗಿ ಸಾಕ್ಷಿಗಳ ಹೇಳಿಕೆ ದಾಖಲಿಸುವಾಗ, ಕೆಲವರು ಒಟ್ಟು ಗಂಟುಗಳನ್ನು ಗೊದಾಮಿನಿಂದ ತೆಗೆಯುವುದ್ದನ್ನು ಪರಿಶೀಲಿಸಿವೆ, ವಿಮೆ ಕಂಪನಿಗೆ ಪರಿಹಾರ ನೀಡಬೇಕಾಗಿಲ್ಲವೆಂದು ಆದೇಶಿಸಿದ್ದು ತಪ್ಪು ಎಂದು ತೀರ್ಮಾನಿಸಿತು. (1986 Indlaw Kar 100, (1990) 67 comp cas 154)

136. ವೈಶ್ಯ ಸಹಕಾರ ಬ್ಯಾಂಕ್ ತನ್ನ ವಶಕ್ಕೆ ನೀಡಿದ ಚೆಕ್‌ನ ಹಣವನ್ನು ಸಂಬಂಧಪಟ್ಟವರ ಖಾತೆಗೆ ಜಮಾ ಮಾಡಲಾಗಿದೆ ಎಂದು ದಾಖಲಿಸಿದ್ದರಿಂದ ಆ ಸಂಸ್ಥೆಯ ಹೆಸರಿನಲ್ಲಿ ಖಾತೆಯೇ ಇಲ್ಲದಾಗ ಜಮಾ ಮಾಡಲಾಗಿದೆ ಎಂದು ತಿಳಿಸಿರುವುದು ತಪ್ಪು ಬ್ಯಾಂಕ್ ತನ್ನ ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸಿದ ತಪ್ಪು ಮಾಡಿದೆ. ಆದ್ದರಿಂದ ಬಾಕಿ ಹಣ ರೂ.2641.00 ಮತ್ತು ಶೇ.6% ರಂತೆ ಬಡ್ಡಿ ಪಾವತಿಸಲು ಆದೇಶಿಸಿತು. (1986 Indlaw Kar 10, (1987) 62 comp cas 271)

137. ಸಾಮಾನ್ಯ ಸೇವಾ ಪ್ರಾಧಿಕಾರ ರಚನೆ ಬಗ್ಗೆ ಈಗಾಗಲೇ 1986 ILR (Kar) 427 ರಲ್ಲಿ ನಿಯಮ 17, 17ಬಿ ಯಂತೆ ರಚನೆ ಮಾಡಿರುವುದನ್ನು ಉರ್ಜಿತಗೊಳಿಸಿದ್ದು. ಸರ್ಕಾರ ಕಲಂ 30–ಬಿ (1) ರನ್ನು 02.09.1976 ರಲ್ಲಿ ಹೊರಡಿಸಿ ಆದೇಶ, ನಿಯಮ ರಚಿಸಲು ವಿಳಂಬವಾಗುತ್ತಿದೆಂದು ಉರ್ಜಿತಗೊಳಿಸಿದ್ದು, ಸಹಕಾರ ಸಂಘಗಳು, ನೇಮಕಾತಿ ಮಾಡಲು ನಿರ್ಭಂದ ಹೇರಿರುವುದನ್ನು ಪರಿಗಣಿಸಿ, ಈ ಅವಧಿಯಲ್ಲಿ ಸಹಕಾರ ಸಂಘಗಳು ನೇಮಕಾತಿ ಮಾಡುವುದನ್ನು ನಿರ್ಭಂದಿಸಿರುವುದು ಸರಿ ಎಂದು ತೀರ್ಮಾನಿಸಿದೆ. (1986 Indlaw Kar 28, 1986 (2) LLJ 36)

138. ಕಾರ್ಮಿಕನ್ಯಾಯಾಲಯ ವಜಾ ಮಾಡಿದ ನೌಕರನನ್ನು ಮರು ನೇಮಕ ಮಾಡಿಕೊಂಡು ಶೇ.50% ರಷ್ಟು ವೇತನ, ಮತ್ತು ಸೇವಾ ಮುಂದುವರಿಕೆ ಆದೇಶಕ್ಕೆ ಉಚ್ಚನ್ಯಾಯಾಲಯ ವಜಾ ಮಾಡಿರುವುದು ಸರಿ ಎಂದು ಮತ್ತು ಆಶಿಸ್ತು ಕ್ರಮವಾಗಿ ತೆಗೆದುಕೊಂಡ ಕ್ರಮವನ್ನು ಎತ್ತಿ ಹಿಡಿದು, ಅದಕ್ಕಾಗಿ ಆ ನೌಕರರ ಸಂಬಳ ರೂ.205/– ಮಾತ್ರ ಇದ್ದು ಅದಕ್ಕಾಗಿ ರು.25,000/– ಒಟ್ಟಾರೆ ಪರಿಹಾರ ನೀಡಲು ಆದೇಶಿಸಿತು ಮತ್ತು ಈಗಾಗಲೆ ಪಾವತಿಸಿರುವ ರೂ.7,000/– ವನ್ನು ಕಡಿತಗೊಳಿಸಿ ಉಳಿಕೆ ಹಣ ರೂ.18,000/– ಪಾವತಿಸಿ ಪ್ರಕರಣ ಮುಕ್ತಾಯಗೊಳಿಸಲು ಸೂಚಿಸಿತು. ಇದರಿಂದ ಆ ನೌಕರರು ಮತ್ತು ಗೌರವಯುತವಾಗಿ ಬೇರೆ ಕೆಲಸ ಹುಡುಕಿಕೊಳ್ಳಲು ಸಾಧ್ಯ ಎಂದು ತೀರ್ಮಾನಿಸಿತು. (1985 Indlaw Kar 16, 1987 (1) LLJ 22)

139. ಆಡಳಿತ ಮಂಡಳಿ ಅಥವಾ ಉಪಸಮಿತಿ ಸಾಮೂಹಿಕವಾಗಿ ತೆಗೆದುಕೊಂಡ ತೀರ್ಮಾನಗಳಿಗೆ

ವ್ಯಯಕ್ತಿಕವಾಗಿ ಕಲಂ 126 ಎ ಅನ್ವಯ ಅನರ್ಹತೆಗೊಳ್ಳುವುದಿಲ್ಲ.

**ಸೂಚನೆ : ಕಲಂ 29ಸಿ ತಿದ್ದುಪಡಿ ಮತ್ತು 97ನೇ ಸಂವಿದಾನ ತಿದ್ದುಪಡಿ ನಂತರ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ 30 ರೊಳಗಾಗಿ ಕರೆಯದಿದ್ದರೆ, ಲೆಕ್ಕ ತಪಾಸಣಾ ವರದಿಯನ್ನು ಪಡೆದು ಸಾಮಾನ್ಯ ಸಭೆ ಒಪ್ಪಿಗೆ ಪಡೆಯದಿದ್ದರೆ ಮತ್ತು ಹೊಸ ಆಡಳಿತ ಮಂಡಳಿ ರಚನೆ ಮಾಡಲು ಕ್ರಮ ಜರುಗಿಸದಿದ್ದರೆ ಸಾಮೂಹಿಕವಾಗಿ ಮತ್ತು ವ್ಯಯಕ್ತಿಕವಾಗಿ ಕಲಂ 29ಸಿ ಅನ್ವಯ ಅನರ್ಹತೆಗೆ ಒಳಗಾಗುತ್ತಾರೆ. ಮೇಲ್ಕಂಡ ತೀರ್ಮಾನವನ್ನು ಅನೂರ್ಜಿತಗೊಳಿಸಿದೆ.** (1985 Indlaw Kar 176, AIR 1985 Kar 202)

140. ಕಲಂ 14ಎ ಅನ್ವಯ ಒಂದು ಸಂಘವನ್ನು ಮತ್ತೊಂದು ಸಂಘದ ಜೊತೆ ಕೂಡಿಸುವುದು ಅಥವಾ ವಿಭಜಿಸುವ ಸಂದರ್ಭದಲ್ಲಿ, ಸ್ವಾಭಾವಿಕ ನ್ಯಾಯ ನೀತಿ ಅನ್ವಯ ಅವಕಾಶ ನೀಡುವ ಅವಶ್ಯಕತೆ ಇಲ್ಲ. ಸ್ವಾಭಾವಿಕ ನ್ಯಾಯ ನೀತಿ ಮೂಲ ಭೂತ ಹಕ್ಕಿನಂತಲ್ಲ. ಸ್ವಾಭಾವಿಕ ನ್ಯಾಯ ತತ್ವದನ್ವಯ ಒಂದು ಸಂಘಕ್ಕೆ ಅವಕಾಶ ನೀಡಲೇಬೇಕೆಂಬ ಶರತ್ತು ವಿಧಿಸಲಾಗದು. ಆದ್ದರಿಂದ ಕಲಂ 14ಎ ಅನ್ವಯ ಒಂದು ಸಂಘವನ್ನು ಬೇರೊಂದು ಸಂಘದ ಜೊತೆ ಕೂಡಿಸುವುದು ಅಥವಾ ವಿಭಜಿಸುವುದಕ್ಕೆ ನೋಟೀಸ್ ನೀಡಬೇಕೆಂದು ಶರತ್ತು ಅನ್ವಯಸದು. (1979 Indlaw Kar 81, AIR 1980 Kar 122)

141. ಈ ಮೇಲ್ಕಂಡ ಕಲಂ 14ಎ ಬಗ್ಗೆ ಪೂರ್ಣ ಪೀಠ (ಐದು ನ್ಯಾಯಾದೀಶರ ಪೀಠ) ಉಪನಿಬಂಧಕರು ಸಂಘಗಳ ವಿಲೀನ, ವಿಭಜನೆ ಮಾಡುವಾಗ ಸಮರ್ಪಕ ಪರಿಶೀಲನೆ ಮಾಡದೆ ಯಾಂತ್ರಿಕವಾಗಿ ಆದೇಶ ಮಾಡಿರುವುದು ತಪ್ಪು. ಅಂದರೆ ಯಾವುದೇ ಶಾಸನ ಭದ್ದ ತೀರ್ಮಾನಕ್ಕೆ ಬರುವಾಗ, ದಾಖಲೆಗಳ ಆಧಾರದ ಮೇಲೆ ಸಮರ್ಪಕವಾಗಿದೆ ಎಂದು ಸಮಾಧಾನವಾದ ನಂತರವೇ ಆದೇಶಿಸಬೇಕು ಸಹಕಾರ ಆಂದೋಲನಕ್ಕೆ ಪೂರಕವಾಗಿ ಆದೇಶಗಳನ್ನು ಮಾಡಬೇಕು. ಇದಕ್ಕಾಗಿ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಬೇಕು. ಇದಕ್ಕೆ ಪೂರಕವಾಗಿ ಸಹಕಾರ ಆಂದೋಲನದಲ್ಲಿ ಹಂತಗಳ ಬದಲಾವಣೆ ಮಾಡಬಹುದು ಇದನ್ನು ಮೂಲ ಭೂತಹಕ್ಕನ್ನು ಮೊಟಕುಗೊಳಿಸಲಾಗಿದೆ ಎಂದು ಭಾವಿಸತಕ್ಕದ್ದಲ್ಲ. ಆದರೆ ವಿಲೀನ ಮತ್ತು ವಿಭಜನೆ ಮಾಡುವಾಗ ಯಾಂತ್ರಿಕವಾಗಿ ಆದೇಶಿಸಿರುವುದು, ಮಾರ್ಗಸೂಚಿ ನೀತಿಯನ್ನು ಪಾಲಿಸದೇ ಇರುವುದು ತಪ್ಪು. ಆದ್ದರಿಂದ ಕಲಂ 14ಎ ನ ವಿಲೀನ/ವಿಭಜನೆ ಆದೇಶವನ್ನು ರದ್ದು ಪಡಿಸಲಾಗಿದೆ. (1978 Indlaw Kar 176, AIR 1978 Kar 148, 1978 (1) KLJ 502)

142. ಒಂದು ಸಕ್ಕರೆ ಕಾರ್ಖಾನೆ ವಾರ್ಷಿಕ ಮಹಾಸಭೆಯನ್ನು ಕಲಂ 121ನ್ನು ಚಲಾಯಿಸಿ, ಕಲಂ 27(1) ನ್ನು ಈ ಕಾರ್ಖಾನೆಗೆ ಅನ್ವಯಿಸುವುದಿಲ್ಲವೆಂದು ಅಧಿಸೂಚನೆ ಹೊರಡಿಸಿದಾಗ, ಅದರ ಊರ್ಜಿತತೆಯನ್ನು ಪ್ರಶ್ನಿಸಿತು. ಕೃಷಿ ಪತ್ತಿನ ಸಹಕಾರ ಸಂಘಗಳು ಸದಸ್ಯರಿರುವ ಸಕ್ಕರೆ ಕಾರ್ಖಾನೆಗಳಲ್ಲಿ ಕಲಂ 27(1) ರನ್ವಯ 76–77ನೇ ಸಾಲಿನ ಸಾಮಾನ್ಯ ಸಭೆಯನ್ನು ಮುಂದೂಡಿ ಆದೇಶಿಸಿತು. ಇದರ ಊರ್ಜಿತತೆಯನ್ನು ಪ್ರಶ್ನಿಸಿದಾಗ, ಕಲಂ 27(1) ನ್ನು 121ನೇ ಕಲಂ ಉಪಯೋಗಿಸಿ ಕಿತ್ತುಹಾಕಲಾಗಿದೆ. ಸಾಮಾನ್ಯವಾಗಿ ಈ ರೀತಿ ಮಾಡಲಾದ ಕಲಂ, ಅವಧಿ ಮುಗಿದ ಕೂಡಲೇ ಮರು ಸ್ಥಾಪನೆಯಾಗುತ್ತದೆ. ಆದರೆ ಈ ಪ್ರಕರಣದಲ್ಲಿ ಅಂತಹ ಪದಗಳ ಉಪಯೋಗ ಇಲ್ಲದೇ ಇರುವುದರಿಂದ ಎಲ್ಲಾ ಪಕ್ಷಗಾರರಿಗೆ ನೋಟೀಸ್ ಜಾರಿ ಮಾಡಿ ತೀರ್ಮಾನ ಮಾಡಬೇಕು ಎಂದು ಐವರು ನ್ಯಾಯಾದೀಶರ ಪೀಠದ ಬಹುಮತದ ತೀರ್ಮಾನ ನೀಡಲಾಗಿದೆ. (ಪೂರ್ಣ ಪೀಠ) (1977 Indlaw Kar 87, AIR 1978 Kar 37, 1978 (1) KLJ 51)

143. ಸಹಕಾರಿ ಸಂಘ ಸಂಘದ ಕಾರ್ಯದರ್ಶಿ ಮೇಲೆ ರೂ.3,358.51ರ ವಸೂಲಿಗೆ ದಾವಾ ದಾಖಲಿಸಿತು. ಸಂಘದ ಅಧ್ಯಕ್ಷರು ಮತ್ತು ಲೆಕ್ಕಾಧಿಕಾರಿ ಸಾಕ್ಷಿ ಹೇಳಿದರು ಮತ್ತು ಕಾರ್ಯದರ್ಶಿ

ಪ್ರಮಾಣೀಕೃತ ಹೇಳಿಕೆ ಸಲ್ಲಿಸಿದರು. ಈ ಪ್ರಕರಣದಲ್ಲಿ ದಾವಾ ದಾಖಸಿದ ಹಣ ಆಡಿಟ್ ವರದಿ ಆಧಾರದಿಂದಲ್ಲ ರೂ.842.70 ವನ್ನು ಕಡಿಮೆ ಜಮಾ ಮಾಡಲಾಗಿತ್ತು ಎಂದು ಸೇರಿ (1966–67 ರಿಂದ 67–68) ಈ ವಿಭಜನೆಯನ್ನು ಮೊದಲನೇ ಭಾರಿಗೆ ತಿಳಿಸಿದ್ದು ಇದರ ಅವಶ್ಯಕತೆ ಇಲ್ಲ. ಅರ್ಜಿದಾರ ಕಾರ್ಯದರ್ಶಿ ಮೊದಲನೇ ಬಾರಿ ತಕರಾರು ತೆಗೆದಿದ್ದ ಅವರ ಜೊತೆಗೆ ಬಾಕಿ ನೀಡ ಬೇಕೆಂದು ಪರೋಕ್ಷವಾಗಿ ಒಪ್ಪಿಕೊಂಡಿದ್ದ, ಅವನ ರಿಟ್ ಅರ್ಜಿ ತಿರಸ್ಕರಿಸಿತು. ಮಧ್ಯಸ್ತಿಗಾರರ ಆದೇಶದಲ್ಲಿ ಮಧ್ಯ ಪ್ರವೇಶ ಮಾಡಲಿಲ್ಲ. (1976 Indlaw Kar 79, AIR 1977 Kar 87)

144. ಒಂದು ಸಕ್ಕರೆ ಕಾರ್ಖಾನೆ ವ್ಯವಸಾಯ ಭೂಮಿಯನ್ನು ಕೃಷಿ ಉದ್ದೇಶಕ್ಕೆ (ಕೃಷಿಯೇತರ ಭೂಮಿ ಎಂದು ವರ್ಗಾವಣೆ ಹೊಂದಿದ ನಂತರ) ಬಳಸಿ ಬಂದ ಆದಾಯಕ್ಕೆ ಆದಾಯ ತೆರಿಗೆ ನೀಡಬೇಕು. (1976 Indlaw Kar 14, (1977) 107 ITR 712, 1976 (1) KLJ 238)

145. ನಾಮ ಪತ್ರ ತಿರಸ್ಕರಿಸಿದಾಗ, ಒಪ್ಪಂದದಲ್ಲಿ (ಸಂಘ ಮತ್ತು ಸಂಸ್ಥೆಯ ಜೊತೆ) ಭಾಗಿಯಾಗಿದ್ದನೆಂದು ಅಂತಹ ಪ್ರಸಂಗದಲ್ಲಿ ಕಲಂ 70 ರಲ್ಲಿ ದಾವಾ ದಾಖಲಿಸಬೇಕು. ಸಂವಿಧಾನದ ಅನುಚ್ಛೇದ 226 ರಲ್ಲಿ ಪರಿಹಾರ ನೀಡಲಾಗದು. ಏಕೆಂದರೆ ಮೌಖಿಕ ಮತ್ತು ಲಿಖಿತ ಹೇಳಿಕೆ, ಸಾಕ್ಷಿಗಳು/ದಾಖಲೆಗಳ ಪರಿಶೀಲನೆ ನಂತರವೇ ತೀರ್ಮಾನಿಸಬಹುದು. ರಿಟ್ ಮೂಲಕ ಅಲ್ಲ. (1975 Indlaw Kar 72, AIR 1976 Kar 1, 1975 (2) KLJ 312)

146. ನಾಮ ಪತ್ರ ತಿರಸ್ಕರಿಸುವಾಗ, ಸುಸ್ತಿದಾರನೆಂದು ತೀರ್ಮಾನಿಸಿದ ನಂತರವೇ ತಿರಸ್ಕರಿಸಬೇಕು. 05.08.1973 ರಂದು ಸಾಲ ಬಾಕಿಯಾಗಿದ್ದರೂ, ನಾಮ ಪತ್ರ 14.09.73 ರಂದು ಸಲ್ಲಿಸಿ, ದಿನಾಂಕ 17.09.73 ರಂದು ಪರಿಶೀಲನೆ ಮಾಡುವಾಗ, ನಿಯಮ 16(1)(ಎ) ಅನ್ವಯ ಸುಸ್ತಿದಾರನಾಗುವುದಿಲ್ಲ. ಆದ್ದರಿಂದ ನಾಮ ಪತ್ರ ಒಪ್ಪಿ ಚುನಾವಣೆಗೆ ಸ್ಪರ್ದಿಸಲು ಅವಕಾಶ ನೀಡಬೇಕು. (1974 Indlaw Kar 108, AIR 1975 Kar 30, 1974 (1) KLJ 436)

147. ಒಂದು ಸಕ್ಕರೆ ಕಾರ್ಖಾನೆಯ ಲಾಭಾಂಶವನ್ನು ತಿಳಿಯಲು, ಕೇಂದ್ರ ಸರ್ಕಾರ ಮತ್ತು ಕಾರ್ಖಾನೆಗೆ ಮಾತ್ರ ಸಂಬಂದಿಸಿದ್ದಲ್ಲ. ಸಂಘದ ಸದಸ್ಯರು ಕಬ್ಬು ಸರಬರಾಜು ಮಾಡಿದ್ದ ನಿಯಮ 5(3) ರನ್ವಯ ವಿನಾಯ್ತಿ ನೀಡುವಾಗ ಮತ್ತು ಹೆಚ್ಚುವರಿ ಬೆಲೆ ನಿಗದಿ ಪಡಿಸುವಾಗ, ಸರಬುದಾರರ ಹೇಳಿಕೆ ಅವಶ್ಯಕ. ಕಾರ್ಖಾನೆ ಲೆಕ್ಕ ಪತ್ರಗಳ ಲೆಕ್ಕ ಹಾಕುವಾಗ ಅನುಸರಿಸಿದ ನೀತಿ ಬಗ್ಗೆ ಸದಸ್ಯರಿಗೆ ತಿಳಿಯಬೇಕು. ಅಂದರೆ ಕಬ್ಬು ಸರಬುದಾರರಿಗೆ ನೋಟೀಸ್ ಜಾರಿ ಮಾಡಿಲ್ಲ ಅಥವಾ ಅವರ ಹೇಳಿಕೆ ಪಡೆದಿಲ್ಲ. ಇದು ಸರಿಯಾದ ಕ್ರಮವಲ್ಲ. ಸರಬುದಾರ ಸದಸ್ಯರು ತನ್ನ ಹೇಳಿಕೆ ನೀಡಲು ಬದ್ದರು ಮತ್ತು ಅದಕ್ಕೆ ಅವಕಾಶ ನೀಡಬೇಕು. (1970 Indlaw Kar 120, AIR 1970 Mys LJ 243, 1970 (1) KLJ 465)

148. ಸರ್ಕಾರ ಕಲಂ.54ರ ಅಧಿಕಾರ ಚಲಾಯಿಸುವ ಮೊದಲು, ಆ ಬ್ಯಾಂಕಿನ ನಿಯಂತ್ರಣ ತೆಗೆದುಕೊಳ್ಳುವ ಅವಶ್ಯಕತೆ ಇದೆ ಎಂಬ ತೀರ್ಮಾನಕ್ಕೆ ಬರಲು, ತಾತ್ವಿಕ ಸಕಾರಣಗಳು ಇರಬೇಕು ಮತ್ತು ಸರ್ಕಾರ ಒಂದು ಅಭಿಪ್ರಾಯಕ್ಕೆ ಬರಬೇಕು. ಸಾರ್ವಜನಿಕ ಹಣದ ಸದುಪವಾಗುತ್ತಿಲ್ಲವೆಂದು ತೀರ್ಮಾನಿಸಬೇಕು. ಕಲಂ 54ರ ನಿಯಂತ್ರಣ ಹೇರುವ ಮಾಡಲು ಬ್ಯಾಂಕಿನ ಉಪನಿಯಮ ಸಂಖ್ಯೆ.30 ಮತ್ತು ನೇಯ್ಗೆ ಸಹಕಾರ ಸಂಘಗಳ ಉಪನಿಯಮ ಸಂಖ್ಯೆ.28 ನ್ನು ತಿದ್ದುಪಡಿ ಮಾಡಿರುವುದು ಅಧಿಕಾರ ದುರುಪಯೋಗ ಮತ್ತು ಊರ್ಜಿತವಲ್ಲ. ಆದ್ದರಿಂದ ಉಪನಿಯಮಗಳ ತಿದ್ದುಪಡಿ ಅಸಿಂದು. ಇನ್ನಿತರ ವಿಷಯಗಳಲ್ಲಿ ಸರ್ಕಾರದ ಅಧಿಸೂಚನೆ (ಕಲಂ 54) ಸಿಂದು. (1969 Indlaw Kar 50, AIR 1971 Mys LJ 37, 1970 (1) KLJ 328)

149. ಸಹಾಯಕ ನಿಬಂಧಕರು ನಾಮ ನಿರ್ದೇಶನ ಮಾಡಿದ ಒಬ್ಬ ವ್ಯಕ್ತಿಯನ್ನು ಕಾರ್ಯದರ್ಶಿ ಎಂದು

ಆಯ್ಕೆಯಾದಾಗ, ಅದೇ ನಾಮ ನಿರ್ದೇಶನವನ್ನು ವಾಪಸ್ ಪಡೆಯಲಾಗಿದೆ ಎಂದು ಅದೇ ಅಧಿಕಾರಿ ಸೂಚಿಸಿದಾಗ, ಈ ರಿಟ್ ದಾಖಲಾಗಿದೆ. ನಿಯಮ 16(1)(ಸಿ) ಊರ್ಜಿತವೇ ಎಂಬುದನ್ನು ಪರಿಶೀಲಿಸಬೇಕಾಗಿದೆ. ನಾಮ ನಿರ್ದೇಶನ ಮಾಡಿದ ವ್ಯಕ್ತಿ ವೇತನ ಪಡೆಯುವ ಒಬ್ಬ ನೌಕರನಿದ್ದ, ಅವನು ಆಡಳಿತ ವ್ಯವಹಾರದಲ್ಲಿ ನಿರತನಾದರೆ, ಅವನಿಗೆ ವಹಿಸಿದ ಕೆಲಸ ನಿರ್ವಹಿಸಲು ಸಮಯದ ಅಭಾವ ಬರುತ್ತಿದೆ. ಆದ್ದರಿಂದ ವೇತನ ಪಡೆಯುವ ನೌಕರನ ನಾಮ ನಿರ್ದೇಶನ ವಾಪಸ್ ಪಡೆದಿರುವುದು ಸರಿಯಾದ ಕ್ರಮ. (1969 Indlaw Kar 74, AIR 1970 Mys LJ 100)

150. ಕ್ರಿಮಿನಲ್ ಪ್ರಕರಣ ದಾಖಲಿಸಲು ಸರ್ಕಾರದ ಪೂರ್ವಾನುಮತಿ ಅವಶ್ಯಕವೆಂಬ ತೀರ್ಮಾನಕ್ಕೆ ಬಂದಿದೆ. ಸಾರ್ವಜನಿಕ ಸೇವಕನನ್ನು ತೆಗೆಯಲು (ಸಿಆರ್‌ಪಿಸಿ ಕಲಂ 197) ಸರ್ಕಾರದ ಅನುಮತಿ ಅವಶ್ಯಕ, ಏಕೆಂದರೆ ಆಧಾರವಲ್ಲದ ದಾಖಲೆಗಳಿಂದ ಒಬ್ಬ ನೌಕರನನ್ನು ತೆಗೆದು ಹಾಕುವಾಗ ಸಾಕಷ್ಟು ಮುಂಜಾಗ್ರತೆ ಅವಶ್ಯಕ ಸಂಘದ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಆಡಿಟ್ ವರದಿಯ ಮೇಲೆ ಕಠಿಣ ನಿಲುವು ತೆಗೆದಿದ್ದ, ಆರೋಪಿ ನೌಕರನ ಮೇಲೆ ಕ್ರಮ ಜರುಗಿಸಲು ಸರ್ಕಾರದ ಪೂರ್ವಾನುಮತಿ ಅವಶ್ಯಕ. ಕಾರ್ಯದರ್ಶಿಯನ್ನು ಕೆಲಸದಿಂದ ತೆಗೆಯಲು, ಸರ್ಕಾರದ ಪೂರ್ವಾನುಮತಿ ಅವಶ್ಯಕ.

**ನೀತಿ : ಯಾವುದೇ ಸರ್ಕಾರದ ಅಧಿಕಾರಿಯನ್ನು ತೆಗೆದು ಹಾಕುವಾಗ, ಅವನು ಸಾರ್ವಜನಿಕ ಸೇವಕ, ಅವನು ಮಾಡಿದ ಕ್ರಿಮಿನಲ್ ಆರೋಪದ ಆಧಾರದ ಮೇಲೆ ತೆಗೆದು ಹಾಕಲು ಸರ್ಕಾರ, ರಾಜ್ಯ/ಕೇಂದ್ರದ ಒಪ್ಪಿಗೆ ಅವಶ್ಯಕ.** (1967 Indlaw Kar 126, AIR 1968 Mys LJ 243)

151. ಒಂದು ಸಗಟು ಗ್ರಾಹಕದ ಸಂಘ ಗ್ರಾಹಕ ವಸ್ತು ವಿತರಣೆ ಮಾಡುತ್ತಿದ್ದು, ಸರ್ಕಾರ ರೂ.15 ಲಕ್ಷ ಪಾಲು ಬಂಡವಾಳ ಹೊಂದಿದೆ. ಈ ಸಂಘ 1955 ರಲ್ಲಿ ಕಂಪ್ಲಿಯಲ್ಲಿ ಒಂದು ಸಹಕಾರ ಸಕ್ಕರೆ ಕಾರ್ಖಾನೆ ಸ್ಥಾಪಿಸಿತು. ಸರ್ಕಾರ ಕಲಂ 121 ಮತ್ತು ಕಲಂ 54 ರನ್ವಯ ಸಂಘದ ಆಡಳಿತವನ್ನು ನಿಯಂತ್ರಿಸಲು ಅಧಿಸೂಚನೆ ಹೊರಡಿಸಿದರು. ಇದಕ್ಕೆ ಪೂರಕವಾಗಿ ಸಂಘದ ಉಪನಿಯವನ್ನು 18(a)(V)ನ್ನು ತಿದ್ದುಪಡಿ ಮಾಡಿತು ಮತ್ತು ಅದರಂತೆ 6 ನಿರ್ದೇಶಕರನ್ನು ನಾಮ ನಿರ್ದೇಶನ ಮಾಡಿತು. ಇದನ್ನು ಪ್ರಶ್ನಿಸಿ ರಿಟ್ ದಾಖಲಿಸಿದಾಗ ನಾಮ ನಿರ್ದೇಶನ ಸರಿಯೆಂದು ಮತ್ತು ಈ ಅಧಿ ಸೂಚನೆ ವಿಧಾನ ಮಂಡಳದಲ್ಲಿ ಮಂಡಿಸಿಲ್ಲವೆಂದು ಆರೋಪಕ್ಕೆ ಈ ವಿಷಯ ತೀರ್ಮಾನಿಸಿದ ನಂತರ ವಿಧಾನ ಮಂಡಳದಲ್ಲಿ ಸಲ್ಲಿಸಲಾಗುವುದು ಎಂದು ಸರ್ಕಾರದ ವಕೀಲರು ಒಪ್ಪಿದರು. ಸರ್ಕಾರದ ಅಧಿಸೂಚನೆ ಸಿಂದು ಎಂದು ತೀರ್ಮಾನಿಸಿತು. (1967 Indlaw Kar 146, AIR 1967 Mys LJ 203)

152. ವಾರ್ಷಿಕ ಮಹಾಸಭೆಯಲ್ಲಿ (21.04.1984) 189 ಸದಸ್ಯರು ಹಾಜರಿದ್ದ ಅವರಲ್ಲಿ 89 ಸದಸ್ಯರು ಬೈಲಾ ತಿದ್ದುಪಡಿಗೆ ಒಪ್ಪಿಗೆ ಸೂಚಿಸಿದ್ದರೆ ಮತ್ತು 19 ಸದಸ್ಯರು ವಿರೋದಿಸಿದ್ದರೆ ಹಾಗೂ 35 ಸದಸ್ಯರು ಮತದಾನ ಮಾಡಲಿಲ್ಲ. ಆದ್ದರಿಂದ ಒಪ್ಪಿಗೆ ಪಡೆಯಲು 92 ಮತಗಳ ಅವಶ್ಯಕತೆ ಇತ್ತು. ಅಂದರೆ 2/3 ಅಂಶದ ಸದಸ್ಯರು ಮತ ಚಲಾಯಿಸಿದಾಗ ಮಾತ್ರ ತೀರ್ಮಾನ ಒಪ್ಪಿಗೆಯಾದಂತೆ. ಆದರೆ 89 ಸದಸ್ಯರು ಮಾತ್ರ ತೀರ್ಮಾನದ ಪರವಾಗಿ ಮತ ಚಲಾಯಿಸಿರುವುದರಿಂದ, ಇದು 2/3 ಅಂಶದ ಮತದಾನವಲ್ಲ. ಆದ್ದರಿಂದ ನಿಬಂಧಕರು ಉಪನಿಯಮ ತಿದ್ದುಪಡಿ ಮಾಡಿ ಹೊರಡಿಸಿದ ಆದೇಶ ತಪ್ಪು ಮತ್ತು ಕಿತ್ತು ಹಾಕಲಾಗಿದೆ. (1965 Indlaw Kar 104, AIR 1966 Mys 274)

153. ಆರೋಪಿಯ ಮೇಲೆ ಕ್ರಿಮಿನಲ್ ಮೊಕದ್ದಮ್ಮೆ ಹೂಡಲು ಇಲಾಖೆ ಒಪ್ಪಿಗೆ ಪಡೆಯದೆ, ಮತ್ತು ಸಮರ್ಪಕ ದಾಖಲೆ ಸಲ್ಲಿಸದೆ ದಾಖಲಿಸಿರುವುದು ತಪ್ಪು. ಆದ್ದರಿಂದ ವಜಾ ಮಾಡಬೇಕೆಂಬ ವಾದಕ್ಕೆ, ಕಾಯಿದೆ ಕಲಂ 29 ಜಿ (4) ಮತ್ತು (5) ರಲ್ಲಿ ಸಂಘದ ಮುಖ್ಯ ಕಾರ್ಯನಿರ್ವಾಹಕ

ಪ್ರಕರಣ ದಾಖಲಿಸಲು ಅವಕಾಶ ಇರುವುದರಿಂದ ಇಲಾಖೆ ಒಪ್ಪಿಗೆ ಅವಶ್ಯಕವಿಲ್ಲ. ಆದ್ದರಿಂದ ಕೆಳನ್ಯಾಯಾಲಯಗಳ ಆದೇಶ ಪರಿಶೀಲಿಸುವ ಅವಶ್ಯಕತೆ ಇಲ್ಲ. (2015 Indlaw Kar 436)

## ದಾವಾ ಮತ್ತು ಅಧಿಬಾರ ಅರ್ಜಿಗಳಿಗೆ ಸಂಬಂಧಪಟ್ಟ ತೀರ್ಪುಗಳು

### II. ಭಾರತೀಯ ಶ್ರೇಷ್ಠ ನ್ಯಾಯಾಲಯದ ತೀರ್ಪುಗಳು:

1. ಕಾಯಿದೆ, ನಿಯಮ ಮತ್ತು ಉಪನಿಯಮಗಳಲ್ಲಿ ಅವಕಾಶ ಇಲ್ಲದೇ ಇದ್ದರೂ, ಅವಶ್ವಾಸ ನಿರ್ಣಯವನ್ನು ಸಹಕಾರ ಕಾಯಿದೆಯಲ್ಲಿ ಸಲ್ಲಿಸಬಹುದೇ? ಗುಜರಾತ್ ಸಹಕಾರ ಕಾಯಿದೆಯಲ್ಲಿ ಅವಕಾಶವಿಲ್ಲದೇ ಇದ್ದರೂ ಸಭಾಧ್ಯಕ್ಷರ ಮೇಲೆ ಅವಶ್ವಾಸ ನಿರ್ಣಯ ಮಂಡಿಸಿ, ಅವರನ್ನು ತೆಗೆದು ಹಾಕಿದಾಗ, ಈ ಅರ್ಜಿ ದಾಖಲಾಗಿದೆ. ಇದಕ್ಕೆ ಪೂರಕವಾಗಿ ಸಹಕಾರಿ ರಚನೆ ಬಗ್ಗೆ ರೂಪಿಸಿರುವ ಸಹಕಾರದ ಏಳು ತತ್ವಗಳನ್ನು ಉಲ್ಲೇಖಿಸಿ, ಸಂವಿಧಾನಕ್ಕೆ 97ನೇ ತಿದ್ದುಪಡಿಯಿಂದ ಮಾಡಿದ ಅವಕಾಶಗಳನ್ನು ವಿಮರ್ಶಿಸಿ, ಸಂವಿಧಾನ ತಿದ್ದುಪಡಿಸಿ ಕಾರಣಗಳನ್ನು ಉಲ್ಲೇಖಿಸಿ, ಅದರಲ್ಲಿ ಅನುಚ್ಛೆದ 43ಬಿ, ಅನುಚ್ಛೇದ 234 ಝಡ್ಐ, 243 ಝಡ್ಟಿ ಗಳನ್ನು ಉಲ್ಲೇಖಿಸಿ, ಪಂಚಾಯಿತ್ ಕಾಯಿದೆಯಲ್ಲಿನ ಅವಕಾಶಗಳನ್ನು ಪರಾಮರ್ಶಿಸಿ ಶ್ರೇಷ್ಠ ನ್ಯಾಯಾಲಯದ (2011) 9 SCC 573/2011 Indlaw SC 481/(2014)7 SCC 633/2014 Indlaw SC 198/(2010) 12 SCC 1/2010 Indlaw SC 877/2010 3 SXX 571/2010 Indlaw SC 133/AIR 2002 Kerala 325/2002 Indlaw Kar 298/ILR (1975) AP 242/AIR 1982 Bombay 216/1981 Indlaw Mum 290/AIR 1991 Padh 149/1990 Indlaw PNH 139/(1982) 1 SCC 691/1982 Indlaw SC 110 ರ ತೀರ್ಪುಗಳನ್ನು ಆಧಾರವಾಗಿ ಪಡೆದು ಈ ಕೆಳಕಂಡ ತೀರ್ಮಾನ ನೀಡಿತು.
    1. 1/3 ಚುನಾಯಿತ ನಿರ್ದೇಶಕರು ಅವಶ್ವಾಸ ನಿರ್ಣಯ ಮಂಡಿಸಿದರೆ ಮತ್ತು ಆ ನಿರ್ಣಯಕ್ಕೆ ಶೇ.50% ಕ್ಕಿಂತ ಹೆಚ್ಚು ಸಂಖ್ಯೆ ನಿರ್ದೇಶಕರು ಅನುಮೋದಿಸಿದರೆ ಅವಿಶ್ವಾಸ ನಿರ್ಣಯ ಅಂಗೀಕಾರವಾಗುತ್ತದೆ.
    2. ಅವಿಶ್ವಾಸ ನಿರ್ಣಯವನ್ನು ಚುನಾಯಿತ ಮಂಡಳಿ ಆಯ್ಕೆಯಾದ ಎರಡು ವರ್ಷಗಳ ನಂತರ ಮಂಡಿಸತಕ್ಕದ್ದು.
    3. ಅವಿಶ್ವಾಸ ನಿರ್ಣಯ ಅಂಗೀಕಾರವಾಗದಿದ್ದರೆ ಮುಂದಿನ ಒಂದು ವರ್ಷದ ತನಕ ಮತ್ತೊಂದು ಅವಿಶ್ವಾಸ ನಿರ್ಣಯ ಮಂಡಿಸತಕ್ಕದ್ದಲ್ಲ.
    4. ಗುಜರಾತ್ ಉಚ್ಚನ್ಯಾಯಾಲಯದ ತೀರ್ಮಾನವನ್ನು ಎತ್ತು ಹಿಡಿಯುತ್ತಾ, ಆಂದ್ರ ಪ್ರದೇಶ, ಮುಂಬೈ, ಕೇರಳ, ಪಂಜಾಬ್ ಮತ್ತು ಹರ‍್ಯಾನ ತೀರ್ಪುಗಳು ಸರಿಯಾದ ತೀರ್ಮಾನಗಳಲ್ಲವೆಂದು ತೀರ್ಮಾನಿಸಿತು. (2015 Indlaw SC 397)
2. ಒಂದು ಮಹಾಮಂಡಳ ತನ್ನ ಸದಸ್ಯ ಸಂಘಕ್ಕೆ ಗ್ರಾಹಕ ವಸ್ತುಗಳನ್ನು ಸರಬರಾಜು ಮಾಡಿದ್ದು, ಬಾಕಿ ಇರುವ ಹಣ ಸುಸ್ತಿ ಆಗಿದೆ ಎಂದು ಅನರ್ಹತೆಗೊಳಿಸತಕ್ಕದ್ದಲ್ಲ. ಸಭಾ ನಡವಳಿಕೆಗಳಲ್ಲಿ ಸರಿಯಾಗಿ ದಾಖಲಿಸಿಲ್ಲವೆಂಬ ಕಾರಣದಿಂದ ಬಾಕಿಯನ್ನು ಸಾಲ ಬಾಕಿ ಎಂದು ತಿಳಿಯತಕ್ಕದ್ದಲ್ಲ. (1973 Indlaw SC 262, (1973) 1 SCC 593, AIR 1973 SC 1052, (1973 3 SCR 430)
3. ಉತ್ತರ ಪ್ರದೇಶದ ಸಹಕಾರ ಮಹಾ ಮಂಡಳ ಸಲ್ಲಿಸಿದ ರಿಟ್ ಅರ್ಜಿಯನ್ನು ವಜಾಗೊಳಿಸಿದ ನಂತರ, ಈ ವಿಶೇಷ ಅರ್ಜಿಸಲ್ಲಿಸಿದೆ. ಇದರಲ್ಲಿ ಮಹಾಮಂಡಳದ ಆಡಳಿತ ಮಂಡಳಿಗೆ 2/3 ಅಂಶದ ನಿರ್ದೇಶಕರನ್ನು ನಾಮ ನಿರ್ದೇಶನ ಮಾಡಿದೆ ಎಂಬ ಆಧಾರದ ಮೇಲೆ ಕಾಯಿದೆ ಕಲಂ 34 ರನ್ವಯ ಸರ್ಕಾರ ಮಹಾಮಂಡಳದ ಪಾಲು ಬಂಡವಾಳದಲ್ಲಿ ಶೇ.60 ರಷ್ಟು ಪಾಲು ಸರ್ಕಾರದ

ಭಾಗ ಎಂದಿದ್ದರೆ ಮಾತ್ರ. ಈ ರೀತ ಪರಿಶೀಲಿಸಿದಾಗ ಸರ್ಕಾರದ ಭಾಗ 60% ಇಲ್ಲದೇ ಇರುವುದರಿಂದ 2/3 ಅಂಶದ ನಿರ್ದೇಶಕರ ನಾಮ ನಿರ್ದೇಶನ ತಪ್ಪು ಆದ್ದರಿಂದ ಕಲಂ 34ರಡಿ ರಾಜ್ಯ ಸರ್ಕಾರ ಮಾಡಿದ ಆದೇಶ ಅಸಿಂದು. (1973 Indlaw SC 74, (1973) 1 SCC 398, AIR 1973 SC 1068, (1073) 3 SCR 402)

4. ಬಹು ರಾಜ್ಯ ಸಹಕಾರಿ ಕಾಯಿದೆಯಲ್ಲಿ ನೋಂದಾಯಿಸಲಾದ ಒಂದು ಸಹಕಾರ ಸಂಘ, ನೋಂದಾವಣೆಯಾದ ರಾಜ್ಯದ ಹೊರಗೆ ಶಾಖೆ ತೆರೆದಾಗ, ಆ ಹೊರ ರಾಜ್ಯದ ಶಾಖೆಗೆ ಸಂಬಂಧಪಟ್ಟ ವಿವಾದಗಳನ್ನು ತೀರ್ಮಾನಿಸಲು ನೋಂದಾವಣೆಯಾದ ರಾಜ್ಯ ಕಾಯಿದೆಯಲ್ಲಿ ಅವಕಾಶವಿಲ್ಲ. ಯಾವ ರಾಜ್ಯದಲ್ಲಿ ಶಾಖೆ ಇದೆಯೋ, ಆ ಶಾಖೆ ಹೊಂದಿದ ರಾಜ್ಯ ಕಾಯಿದೆಯಡಿ ಪ್ರಕರಣ ದಾಖಲಿಸಬೇಕು. ಅಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಕಾಯಿದೆಯಲ್ಲಿನ ನಿಬಂಧಕರು ಮೇಲ್ಮನವಿ ಸ್ವೀಕರಿಸಿ, ತೀರ್ಮಾನಿಸುವ ಅಧಿಕಾರ ಇಲ್ಲ. ಈ ಅಂಶವನ್ನು ಶ್ರೇಷ್ಠ ನ್ಯಾಯಾಲಯ (1971) 2 SCC 501, 1971 Indlaw SC 197 ರಲ್ಲಿ ತೀರ್ಮಾನಿಸಿದೆ. ಅದೇ ರೀತಿ ಬಾಂಬೆಯಲ್ಲಿ ನೋಂದಾಯಿಸಿದ ಸಹಕಾರ ಸಂಘ., ಮಂಗಳೂರಿನಲ್ಲಿ ಶಾಖೆ ತೆರೆದರೆ, ಆ ಶಾಖೆಗೆ ಸಂಬಂಧಪಟ್ಟ ಪ್ರಕರಣ ಮದ್ರಾಸ್ ಕಾಯಿದೆಯಡಿ ತೀರ್ಮಾನವಾಗತಕ್ಕದ್ದು ಎಂದು ತೀರ್ಮಾನಿಸಿದೆ. ಅದಕ್ಕೆ ಮೇಲ್ಮನವಿ ಸಲ್ಲಿಸಲು ಮದ್ರಾಸ್ ಕಾಯಿದೆಯಲ್ಲಿನ ಅವಕಾಶ ಪಡೆಯಬೇಕು. (1971 Indlaw SC 314, (1972) 4 SCC 600, AIR 1972 SC 1248, (1972) 2 SCR 162, 1972 UJ 204)

5. ಒಂದು ಸಹಕಾರ ಸಂಘ 1955ರಲ್ಲಿ ಪಂಜಾಬ್ ಕಾಯಿದೆಯಡಿ ನೋಂದಾವಣೆಯಾಯಿತು. 1956ರಲ್ಲಿ ರಾಜ್ಯ ಪುನರ್ ವಿಂಗಡಣೆಯಾದಾಗ, ಆ ಸಹಕಾರ ಸಂಘ ಬಹು ರಾಜ್ಯ ಕಾಯಿದೆಯಡಿ ನೋಂದಾವಣೆಯಾದಂತಾಗಿರುತ್ತದೆ. ಅಂತಹ ಸಂದರ್ಭದಲ್ಲಿ ನೋಂದಾವಣೆಯಾದ ರಾಜ್ಯದ ಹೊರ ರಾಜ್ಯದ ವಿವಾದಗಳನ್ನು ಪರಿಹರಿಸಲು ಯಾವ ರಾಜ್ಯದಲ್ಲಿ ಶಾಖೆ ಇದೆಯೋ, ಆ ರಾಜ್ಯ ಕಾಯಿದೆಯಡಿ ತೀರ್ಮಾನವಾಗಬೇಕು. ಕೇಂದ್ರ ಸರ್ಕಾರದ (ಬಹು ರಾಜ್ಯ ಕಾಯಿದೆ) ನಿಬಂಧಕರಿಗೆ ಮೇಲ್ಮನವಿ ಸ್ವೀಕರಿಸುವ ಅಧಿಕಾರ ಇಲ್ಲ. (1971 Indlaw SC 197, (1971) 2 SCC 500, AIR 1971 SC 2403, (1972) 1 SCR 44)

6. ಗುಜರಾತ್ ಸಹಕಾರ ಕಾಯಿದೆಯಲ್ಲಿ ಒಬ್ಬ ಸದಸ್ಯನನ್ನು ತೆಗೆದು ಹಾಕಲು (ಕಲಂ 36 (11)) ಆ ಉದ್ದೇಶಕ್ಕಾಗಿ ಕರೆದ ಸಾಮಾನ್ಯ ಸಭೆಯ 3/4 ಅಂಶದ ಸದಸ್ಯರು, ಸದಸ್ಯತನ ರದ್ದು ಪಡಿಸತಕ್ಕದ್ದು. ಆ ಸಂಬಂಧಪಟ್ಟ ಸದಸ್ಯರಿಗೆ ನೋಟೀಸ್ ಜಾರಿ ಮಾಡಿ ಅವಕಾಶ ಕಲ್ಪಿಸಿದ ನಂತರ ಮತ್ತು ಸಾಮಾನ್ಯ ಸಭೆಗೆ ಮನವಿ ಸಲ್ಲಿಸಲು ಅವಕಾಶ ನೀಡಿ ನಿಬಂಧಕರ ಒಪ್ಪಿಗೆ ಪಡೆದ ನಂತರ, ಸದಸ್ಯತ್ವದಿಂದ ತೆಗೆಯಬಹುದು ಮತ್ತು ನಿಬಂಧಕರು ಪ್ರಸ್ತಾವನೆ ಸ್ವೀಕರಿಸಿದ ಮೂರು ತಿಂಗಳೊಳಗೆ ಒಪ್ಪಿಗೆ ನೀಡಿ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಅವಕಾಶವಿದ್ದು, ಈ ಪ್ರಕರಣದಲ್ಲಿ, ಪ್ರಸ್ತಾವನೆ ಸಲ್ಲಿಸಿದ ಮೂರು ತಿಂಗಳೊಳಗಾಗಿ ಉಪನಿಬಂಧಕರು ಒಪ್ಪಿಗೆ ನೀಡಿಲ್ಲ. ಮೂರು ತಿಂಗಳ ನಂತರ ಒಪ್ಪಿಗೆ ನೀಡಿರುವುದು, ಅಧಿಕಾರ ಮೀರಿ ನೀಡಿದ ಒಪ್ಪಿಗೆಯಾದ್ದರಿಂದ ಅದು ಅಸಿಂಧು ಮೂರು ತಿಂಗಳ ಒಳಗೆ ಒಪ್ಪಿಗೆ ನೀಡಲು ಅಧಿಕಾರ ಇರುವುದರಿಂದ ನಿಬಂಧಕರ ಅಧಿಕಾರ ಮೂರು ತಿಂಗಳ ನಂತರ ನಿಂತು ಹೊಗುತ್ತಿದೆ. ಆ ಅಧಿಕಾರವನ್ನು ಚಲಾಯಿಸಲು ನಿಬಂಧಕನಿಗೆ ನಿರ್ಭಂದ ಇರತಕ್ಕದ್ದು. (1987 Indlaw SC 28708, (1987) 1 SCC 606, AIR 1987 SC 849, JT 1987 (1) SC 462, 1987 (1) Scale 348, 1987 (1) UJ 379)

7. ತಮಿಳುನಾಡು ಬಾಡಿಗೆ ಕಾಯಿದೆ 1960 ರಡಿ ಸಹಕಾರ ಸಂಘಗಳಿಗೆ ನೀಡಿದ ಅಧಿಸೂಚನೆಯ

ನಿಂದುತ್ವವನ್ನು ಪ್ರಶ್ನಿಸಿ, ಸಂವಿಧಾನದ ಅನುಚ್ಛೇದ 14ರ ವಿರುದ್ದ ಎಂದು ಪ್ರಶ್ನಿಸಿದಾಗ, ಈ ಪ್ರಕರಣ ದಾಖಲಿಸಲಾಗಿದೆ. ಈ ಬಗ್ಗೆ ವಿಮರ್ಷೆ ನಡೆಸುವಾಗ ಬಾಂಬೆ ಬಾಡಿಗೆ ಕಾಯಿದೆಯಡಿ ದಾಖಲಾಗಿದ್ದ ಪ್ರಕರಣದಲ್ಲಿ (1954) SCR 572/1953 Indlaw SC 51), ಗೃಹ ಮಂಡಳಿಗೆ ವಿನಾಯ್ತಿ ನೀಡಿದ್ದು, ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ನೀಡಲು ನಿರಾಕರಿಸಿದ್ದನ್ನು ಪ್ರಶ್ನಿಸಲಾಗಿತ್ತು. ಅದರಲ್ಲಿ ಗೃಹ ಮಂಡಳ ಸರ್ಕಾರದ ಒಂದು ಸಂಸ್ಥೆ, ಮಾಲೀಕರು, ಸರ್ಕಾರ, ಆದರೆ ಸಹಕಾರ ಸಂಘ ಒಂದು ಸದಸ್ಯ ಒಡೆತನದ ಸಂಸ್ಥೆ, ಲಾಭಗಳಿಸಿದಾಗ ಸದಸ್ಯರಿಗೆ ಹಂಚಲು ಅವಕಾಶ ಇದೆ. ಆದರೆ ಗೃಹ ಮಂಡಳಿಗೆ ಲಾಭ ನಷ್ಟದ ಪ್ರಮೇಯ ಇಲ್ಲ ಆದ್ದರಿಂದ ಆ ಎರಡೂ ಸಂಸ್ಥೆಗಳನ್ನು ಒಂದೇ ಎಂದು ಭಾವಿಸಲಾಗದು ಎಂದು ತೀರ್ಮಾನಿಸಿತ್ತು. ಸಹಕಾರ ಸಂಘಗಳು ಲಾಭಗಳಿಸಿದರೂ, ಲಾಭ ಹಂಚಿಕೆಯಲ್ಲಿ ಮಿತಿಯನ್ನು ನಿರ್ಧರಿಸಿದ್ದು ಅದನ್ನು ಮದರಾಸ್ ಬಾಡಿಗೆ ಕಾಯಿದೆಯಲ್ಲಿ ವಿನಾಯ್ತಿ ನೀಡಿರುವುದು ಸಂವಿಧಾನದ ಅನುಚ್ಛೇದ 14ಕ್ಕಿ ವಿರೋದವಲ್ಲ. ಮದರಾಸ್ ಕಾಯಿದೆಯಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ನೀಡಿದ ವಿನಾಯ್ತಿ (ಬಾಡಿಗೆ ಕಾಯಿದೆ) ಅನುಚ್ಛೇದ 14ರ ಉಲ್ಲಂಘನೆಯಲ್ಲ. (1984 Indlaw SC 247, (1985) 1 SCC 395, AIR 1985 SC 270, (1985) 2 SCR 416, 1985 (1) RCR (Rent) 218 1984 (2) Scale 961)

8. ಮಹಾರಾಷ್ಟ್ರ ಸಹಕಾರ ಕಾಯಿದೆಯಡಿ ನೋಂದಾಯಿಸಿದ ನಾಸಿರ್ ವ್ಯಾಪಾರಸ್ತರ ಸಹಕಾರ ಬ್ಯಾಂಕ್‌ನ ಆಡಳಿತ ಮಂಡಳಿ ಚುನಾವಣೆ ನಡೆಸಲು ಜಿಲ್ಲಾ ಕಲೆಕ್ಟರ್‌ಗೆ ಅಧಿಕಾರ ನೀಡಲಾಗಿತ್ತು. ಚುನಾವಣೆ ಪ್ರಕಟಣೆ ಹೊರಡಿಸುವಾಗ ಕಲಂ 73ಬಿ ಅನ್ವಯ ಮೀಸಲಾತಿ ಬಗ್ಗೆ ಪ್ರಕಟಣೆಯಲ್ಲಿ ಸೂಚಿಸಿಲ್ಲವಾದ್ದರಿಂದ ಚುನಾವಣಾ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕೆಂದು ಕಲಂ 144 ರಲ್ಲಿ ಪ್ರಕರಣ ದಾಖಲಿಸಿದಾಗ, ಕಲೆಕ್ಟರ್ ಚುನಾವಣ ಪ್ರಕಟಣೆ ಪ್ರಕಟಿಸುವಾಗ ಕಲಂ 73ಬಿ ಅನ್ವಯ ಮೀಸಲಾತಿಗೆ ಸೂಚನೆಯಲ್ಲಿ ನಮೂದಿಸಿರಲಿಲ್ಲ ಮತ್ತು ಮೀಸಲಾತಿ ಕ್ಷೇತ್ರಗಳು ಮತ್ತು ಮತದಾರ ಪಟ್ಟಿ ಇಲ್ಲವಾದ್ದರಿಂದ, ಚುನಾವಣೆಯನ್ನು ರದ್ದುಗೊಳಿಸಿ ಹೊಸದಾಗಿ ಚುನಾವಣೆ ನಡೆಸಲು ನಿರ್ದೇಶಿಸಿತು. ಉಚ್ಚನ್ಯಾಯಾಲಯದ ತೀರ್ಮಾನವನ್ನು ಶ್ರೇಷ್ಠ ನ್ಯಾಯಾಲಯ ಕಿತ್ತು ಹಾಕಿತು. (1983 Indlaw SC 159, (1984) 2 SCC 50, AIR 1984 SC 192)

9. ಹೊಸ ಜಿಲ್ಲೆಗಳ ಸ್ಥಾಪನೆ ಮಾಡಿದ ಸಂದರ್ಭದಲ್ಲಿ ಹಾಜಿಪುರ–ವೈಶಾಲಿ ಜಿಲ್ಲಾ ಬ್ಯಾಂಕ್‌ಗಳನ್ನು ನೊಂದಾಯಿಸಿದಾಗ, ಬೈಲಾ 29 ರನ್ವಯ ನಿಬಂಧಕರು ಮೊದಲ ಆಡಳಿತ ಮಂಡಳಿಯನ್ನು ಒಂದು ವರ್ಷ ಅವಧಿಗೆ ಮೀರದಂತೆ ಮತ್ತು ಗರಿಷ್ಠ ನಾಲ್ಕು ವರ್ಷದವರೆಗೆ ನಾಮ ನಿರ್ದೇಶನ ಮಾಡಲು ಅವಕಾಶ ಇರುವುದನ್ನು ಉಲ್ಲೇಖಿಸಿ, ನಿಬಂಧಕರು ಆರು ತಿಂಗಳ ಅವಧಿಗೆ ನಾಮ ನಿರ್ದೇಶನ ಮಾಡಿ 17 ನಿರ್ದೇಶಕರ ಮಂಡಳಿ ರಚಿಸಿ (ಅದರಲ್ಲಿ ಒಬ್ಬರು ಸರ್ಕಾರದ ಪ್ರತಿನಿದಿ), ಆರು ತಿಂಗಳೊಳಗಾಗಿ ಹೊಸದಾಗಿ ಚುನಾವಣೆ ನಡೆಸಲು ಕ್ರಮಕೈಗೊಳ್ಳುವಂತೆ, ಈ ಮಂಡಳಿಗೆ ನಿರ್ದೇಶನ ನೀಡಿದ್ದರು. ಚುನಾವಣೆ ನಡೆಸುವ ಬದಲು ಅರ್ಜಿದಾರರು ಬಿಹಾರ್ ರಾಜ್ಯದ ಮುಖ್ಯ ಮಂತ್ರಿಗಳನ್ನು ಸಂಪರ್ಕಿಸಿ, ಅಗಿಂದಾಗ್ಗೆ ಅವಧಿ ವಿಸ್ತರಿಸಲು ಸಹಕಾರ ಸಂಘದ ಮುಖಾಂತರ ನಿಬಂಧಕರಿಗೆ ನಿರ್ದೇಶನ ನೀಡಿದ್ದು, ನಿಬಂಧಕರ ಮತ್ತೆ ಅವಧಿಯನ್ನು ಆರು ತಿಂಗಳು ವಿಸ್ತರಿಸಿ ಆದೇಶ ಹೊರಡಿಸಿ, ಆ ಅವಧಿಯೊಳಗೆ ಚುನಾವಣೆ ನಡೆಸಲು ಸೂಚಿಸಿದರು. ಇದೇ ರೀತಿ ಅಗಿಂದಾಗ 23.10.1981 ರಿಂದ 30.11.1983 ರರವರೆವಿಗೆ ವಿಸ್ತರಿಸಿದರು. ಸಹಕಾರ ಸಚಿವರು "ಅನಧಿಕೃತ" ಟಿಪ್ಪಣಿ ಎಂದು ನಮೂದಿಸಿ, ನಾಮ ನಿರ್ದೇಶನ ಮಾಡಬೇಕಾದ 7 ಜನರ ಎಂದು ಪಟ್ಟಿ ಮತ್ತು ಹೆಚ್ಚುವರಿಯಾಗಿ 8 ಜನರ ಪಟ್ಟಿ ರವಾನಿಸಿದರು. ಮುಖ್ಯ ಮಂತ್ರಿಗಳು ಮತ್ತು ಸಹಕಾರ ಸಚಿವರು ತಮಗೆ ಇಲ್ಲದ ಅಧಿಕಾರವನ್ನು ಚಲಾಯಿಸಿದ್ದಾರೆ. ಈ ಬಗ್ಗೆ ವಿಮರ್ಷೆ ಮಾಡುತ್ತಾ, ಕಲಂ

65ಎ ನಲ್ಲಿರುವ ಅಧಿಕಾರ ಸೀಮಿತವಾಗಿದ್ದು, ನಿಬಂಧಕರ ಅಧಿಕಾರ ಚಲಾಯಿಸಿರುವುದು ಕಾನೂನಿಗೆ ವಿರುದ್ದ ಮತ್ತು ಕೈಗಾರಿಕಾ ಸಚಿವರು ಪಟ್ಟಿ ಕಳುಹಿಸಿ ನೇಮಿಸಲು ಸೂಚಿಸಿರುವುದಲ್ಲಿ ತಪ್ಪು ಎಂದು ತೀರ್ಮಾನಿದ್ದರ ಜೊತೆಗೆ, ನಿಬಂಧಕರು ತುರ್ತಾಗಿ ವೈಶಾಲಿ ಕೇಂದ್ರ ಸಹಕಾರ ಬ್ಯಾಂಕ್‌ನ ಮಂಡಳಿ ರದ್ದುಪಡಿಸಿ, ಒಬ್ಬ ಸಹಕಾರ ಇಲಾಖಾಧಿಕಾರಿಗೆ ಮಂಡಳಿ ಎಲ್ಲಾ ಅಧಿಕಾರಗಳನ್ನು ಚಲಾಯಿಸಲು, ಮಾಸಿಕ ಸಭೆ ಕರೆದು ಆಡಳಿತ ಮಂಡಳಿ ರಚನೆಗೆ ಕ್ರಮಕೈಗೊಳ್ಳಲು ನಿರ್ದೇಶಿಸಿತು. (1983 Indlaw SC 156, AIR 1984 SC 322, (1984) 2 SCC 41)

10. ಆಂದ್ರ ಪ್ರದೇಶ ಕಾಯಿದೆಯಡಿ, ಆಂದ್ರ ಪ್ರದೇಶ ಪರಿಶಿಷ್ಟ ಪಂಗಡದ ಸಹಕಾರ ಆರ್ಥಿಕ ಮತ್ತು ಅಭಿವೃದ್ಧಿ ಕಾರ್ಪೊರೇಷನ್ ನೊಂದಾಯಿಸಿ, ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ, ಖರೀದಿಸಿ ಮಾರಾಟ ಮಾಡುವ ಎಲ್ಲಾ ಅಧಿಕಾರಗಳನ್ನು ನೀಡಿತು. ಇದಕ್ಕಾಗಿ ನಿಯಮಗಳನ್ನು ರೂಪಿಸಿತು. ಈ ನಿಯಮಗಳ ರಚನೆಯಿಂದ ಅರಣ್ಯ ಉತ್ಪನ್ನಗಳನ್ನು ಏಕ ಸಾಮ್ಯತೆ ನೀಡಲು ತೀರ್ಮಾನಿಸಿರುವುದು ಮತ್ತು ಅರಣ್ಯ ಪ್ರದೇಶದ ಉತ್ಪನ್ನಗಳನ್ನು ಈ ಸಂಸ್ಥೆ ಏಕಸೌಮ್ಯತ್ವ ಪಡೆದಿರುವುದು ಪರಿಶಿಷ್ಟ ಪಂಗಡದ ಹಿತಾಸಕ್ತಿ ಕಾಪಾಡಲಾಗುವುದರಿಂದ, ಈ ನಿಯಮಗಳಲ್ಲಿ ಯಾವುದೇ ನ್ಯೂನತೆಗಳಲ್ಲಿ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ (ಸಿ.ಎ.1145/1971) ಮತ್ತು (ಎಲ್.ಪಿ.ಎ.45/1965) ಪ್ರಮಾಣ ಪತ್ರ ಮತ್ತು ನಿಷೇದಾಜ್ಞೆಯನ್ನು ರದ್ದುಗೊಳಿಸಿತು. (1983 Indlaw SC 326, (1983) 4 SCC 466, AIR 1983 SC 1290)

11. ಬಿಹಾರ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಪಾಟ್ನಾ ಪಟ್ಟಣ ಸಹಕಾರ ಬ್ಯಾಂಕಿನಲ್ಲಿ ನಡೆದ ಭಾರತಿಯಾ ರಿಸರ್ವ್ ಬ್ಯಾಂಕ್ ಮತ್ತು ಸಹಕಾರ ಇಲಾಖೆ ಆಡಿಟ್‌ನಲ್ಲಿ, ಬ್ಯಾಂಕಿನಲ್ಲಿ ನಡೆದಿರುವ ಆರ್ಥಿಕ ಅವ್ಯವಹಾರಗಳ ಬಗ್ಗೆ ಅಂದರೆ (1) ಸದಸ್ಯರಲ್ಲದವರಿಗೆ ಸಾಲ (2) ಸಾಲದ ಅರ್ಜಿ ಇರಲಾರದೆ ಸಾಲ ಮಂಜೂರಿ (3) ಆಸ್ತಿ ಅಡಮಾನ ಮಾಡಿಸಿಕ್ಕೊಳದೆ ಸಾಲ ನೀಡಿಕೆ (4) ಮಾರಾಟ ವಸ್ತುಗಳಿಂದ ವಸೂಲಾದ ಹಣ ಪಡೆಯದೆ ಅಲ್ಪಾವಧಿ ಸಾಲ ಮಂಜೂರಿ (ಅಡಮಾನ ಮಾಡಿಕೊಂಡ ಆಸ್ತಿ ಮಾರಾಟವಾದ ಹಣ ವಸೂಲಿ ಮಾಡಿಕ್ಕೊಳದೆ) (5) ಒಬ್ಬನೆ ವ್ಯಕ್ತಿಗೆ ವಿವಿದ ಹೆಸರಿನಲ್ಲಿ ಸಾಲ ನೀಡಿಕೆ (6) ಆಸ್ತಿತ್ವದಲ್ಲಿಲ್ಲದ ವ್ಯಕ್ತಿ/ಸಂಸ್ಥೆಗೆ ಸಾಲ ಮಂಜೂರಿಯಂತಹ ಗುರುತರ ಆರೋಪ ಕಂಡುಹಿಡಿದಿದ್ದರ ಮೇಲೆ, ಕ್ರಿಮಿನಲ್ ಪ್ರಕರಣ ದಾಖಲಿಸಲು ಸಹಕಾರ ಸಚಿವರು/ಮುಖ್ಯಮಂತ್ರಿಗಳು, ಕಾನೂನು ಇಲಾಖೆ/ಪೋಲೀಸ್ ಇಲಾಖೆ ಅಭಿಪ್ರಾಯದಂತೆ, ಒಪ್ಪಿಗೆ ನೀಡಿದ್ದರೂ (16.05.1975), ಆದಾದ ನಂತರ 14.05.1975 ರಂದು ಸಾಮಾನ್ಯ ಸಭೆ ನಡೆಸಿ ಬ್ಯಾಂಕ್ ವ್ಯವಹಾರ ನಡೆಸಿಕೊಂಡು ಮುಂದುವರಿಯಲಿ ಎಂಬ ಆದೇಶ ಹೊರಡಿಸಿ, 16.05.1975ರ ಆದೇಶದ ಹಿಂದೆ ಆದೇಶಿಸಲಾಗಿದೆ ಎಂಬಂತೆ 14.05.1975 ರಲ್ಲಿ ಮಾಡಿದ ಆದೇಶ (ತಿದ್ದಿ) ಆದೇಶಿಸಲಾಗಿದೆ. ಇದರಲ್ಲಿ ರಾಜ್ಯದ ಮುಖ್ಯಮಂತ್ರಿ ಆರೋಪ 2 ಎಂದಿದ್ದು, ಆರೋಪಿ 3 ಬ್ಯಾಂಕಿನ ಅಧ್ಯಕ್ಷರಿದ್ದರು. ಈ ಅವಧಿಯಲ್ಲಿ ರಾಜ್ಯ ಮಂತ್ರಿ ಮಂಡಳ ವಜಾ ಮಾಡಿ ರಾಜ್ಯಪಾಲಕರು ಅಧಿಕಾರ ವಹಿಸಿಕೊಂಡು ಕ್ರಿಮಿನಲ್ ಮೊಕದ್ದೊಮ್ಮೆ ದಾಖಲಿಸಲು ಒಪ್ಪಿಗೆ ನೀಡಿದ್ದು, ಪ್ರಕರಣ ವಿಚಾರಣೆ ನಡೆಯುತ್ತಿದ್ದಾಗ ಹಿಂದಿನ ಸರ್ಕಾರದ ಸಾರ್ವಜನಿಕ ಅಧಿಕಾರಿ (ಪಬ್ಲಿಕ್ ಪ್ರಾಸಿಕ್ಯೂಟರ್)ನ್ನು ಹಿಂದಿನ ವ್ಯಕ್ತಿಯನ್ನು ಹಿಂಪಡೆಯದೆ, ಎರಡನೇ ಆದೇಶ ಹೊರಡಿಸಿದ್ದು, ಅದನ್ನು ಅಸಿಂದು ಎಂದು ವಿವಿಧ ಶ್ರೇಷ್ಟ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸಿ ಅಸೂರ್ಜಿತಗೊಳಿಸಿದೆ. ಈ ಮದ್ಯ ಮುಖ್ಯಮಂತ್ರಿಗಳ ಸರ್ಕಾರದಿಂದ ಹೂಡಿದ ಪ್ರಕರಣ ವಾಪಸ್ ಪಡೆಯಲು ತೀರ್ಮಾನಿಸಿ, ಪತ್ರ ಬರೆದಿದ್ದನ್ನು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ. ಅಂತಿಮವಾಗಿ ಅವ್ಯವಹಾರದಲ್ಲಿ ಸಿಲುಕಿದ ಹಣ ರೂ.33,96,024.90 ಇದ್ದ (180 ಜನ) ಇದರಲ್ಲಿ 25,69,682.23, 106 ಜನರಿಂದ ವಸೂಲಾಗಿವೆ

ಎಂದು ಬಾಕಿ ಇರುವ ರೂ.8,31,337.67 ಬಾಕಿಗೆ ಡಿಕ್ರಿಯನ್ನು 64 ಜನರ ಮೇಲೆ ತೆಗೆದುಕೊಳ್ಳಲಾಗಿದೆ ಎಂದು ಉಲ್ಲೇಖಿಸಿದ್ದನು ಗಮನಿಸಿದೆ. ಆದರೆ 2ನೇ ಆರೋಪಿ (ಆಗಿನ ಮುಖ್ಯ ಮಂತ್ರಿಗಳು) ಮೇಲೆ ರಾಜಕೀಯ ಸೇಡಿನಿಂದ ಮತ್ತು ವ್ಯಯಕ್ತಿಕ ಕಾರಣಗಳಿಂದ ಪ್ರಕರಣ ದಾಖಲಾಗಿದೆ. ಆರೋಪಗಳಲ್ಲಿ ಸಾಬೀತಾಗುವಂತೆ ದಾಖಲೆಗಳ ಲಭ್ಯವಿಲ್ಲವಾದ್ದರಿಂದ ಮತ್ತು ಬಹಳಷ್ಟು ಮೊತ್ತ ವಸೂಲಾಗಿರುವುದರಿಂದ ಪ್ರಕರಣವನ್ನು ವಾಪಸ್ ಪಡೆಯಲು ರಾಜ್ಯ ಸರ್ಕಾರ ತೆಗೆದುಕೊಂಡ ಕ್ರಮವನ್ನು ಉಚ್ಚನ್ಯಾಯಾಲಯ ಎತ್ತಿ ಹಿಡಿದಿರುವುದನ್ನು ಒಪ್ಪಿ ಪ್ರಕರಣವನ್ನು ವಜಾ ಮಾಡಿತು. (1982 Indlaw SC 72, (1983) SCC (Cr) 224, AIR 1983 SC 194, (1983) 1 SCC 438)

## ದಾವಾ/ಅಧಿಭಾರ ಅರ್ಜಿ

1. ಮಹಾರಾಷ್ಟ್ರ ಸಹಕಾರಿ ಕಾಯಿದೆಯಡಿ, ಒಂದು ಸಂಘದ ಕಾರ್ಯದರ್ಶಿ ಹಣ ದುರುಪಯೋಗ ಮಾಡಿಕೊಂಡಿದ್ದು. ಇದರಲ್ಲಿ ನೌಕರರಿಂದ ಸಂಬಳದಲ್ಲಿ ಮುರಿದುಕೊಂಡು ಸಾಲ ನೀಡಿದ ಸಂಸ್ಥೆಗೆ ಪಾವತಿಸದೇ ಇದ್ದಾಗ ಪ್ರಕರಣ ದಾಖಲಿಸಿತು. ವಿಚಾರಣಾ ನ್ಯಾಯ ನೌಕರರಿಗೆ ಪೂರ್ಣ ಸಂಬಳ ಪಾವತಿಸಿಲ್ಲ ಭಾಗಶಃ ನೀಡಿದ ಸಂಬಳದಲ್ಲಿ ಕಂತುಗಳನ್ನು ಮುರಿದುಕೊಂಡಿದ್ದು, ಸಂಘದ ಹಣಕಾಸು ಸ್ಥಿತಿ ಸಮರ್ಪಕವಾಗಿಲ್ಲವಾದ್ದರಿಂದ ಕಂತು ಪಾವತಿಸಲು ಸಾಧ್ಯವಾಗಿಲ್ಲ ಹಾಗೂ ಪ್ರಕರಣ ದಾಖಲಿಸಲು 8 ವರ್ಷಗಳು ವಿಳಂಬವಾಗಿದ್ದು, ಆರೋಪದಿಂದ ವಿಮುಕ್ತಿಗೊಳಿಸಿತು. ಸಂಘವು ಈ ಆದೇಶದ ಮೇಲೆ ರಿಟ್ ದಾಖಲಿಸಿತು. ಇದರ ವಿಚಾರಣೆ ನಡೆಸಿ ಹಣಕಾಸು ತೊಂದರೆಯಿಂದ ಪಾವತಿಸಿಲ್ಲವೆಂದು ಮತ್ತು ಆರೋಪ ರುಜುವಾಗಿಲ್ಲವೆಂದು ವಜಾ ಮಾಡಿತು. ಆ ನಂತರ ಕ್ರಿಮಿನಲ್ ವಿಶೇಷ ಅರ್ಜಿ ಸಲ್ಲಿಸಿದಾಗ, ಈ ಪ್ರಕರಣ ದಾಖಲಾಗಿ 24 ವರ್ಷಗಳಾಗಿದ್ದು, ಮತ್ತು ಮರು ವಿಚಾರಣೆಗೆ ಕಳುಹಿಸುವುದು ಸೂಕ್ತವಲ್ಲವೆಂದು ಉಚ್ಚನ್ಯಾಯಾಲಯದ ಆದೇಶವನ್ನು ಕಿತ್ತುಹಾಕಿ, ವಿಚಾರಣೆ ನಡೆಸಿದ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿಯಿತು. ಆದರೆ ಸಂಘದ ಹಣ ದುರುಪಯೋಗವಾಗಿರುವುದನ್ನು ಗಮನಿಸಿ, ಮೇಲ್ಮನವಿ ಸಲ್ಲಿಸಿದಾಗ ಠೇವಣಿ ಮಾಡಿದ ರೂ.5.5 ಲಕ್ಷವನ್ನು ಸಂಘಕ್ಕೆ ಪಾವತಿಸಲು ಆದೇಶಿಸಿತು ಮತ್ತು ಈ ಪ್ರಕರಣ ಒಂದು ಸಿವಿಲ್ ಪ್ರಕರಣವಾಗುವಂತದ್ದು, ಕ್ರಿಮಿನಲ್ ಆಗುವುದಿಲ್ಲವೆಂದು ತೀರ್ಮಾನಿಸಿತು. (1983 Indlaw SC 1498, (1994) SCC (Cr) 407, (1994) 1 SCC (Supp) 543, AIR 1994 SC 583)
2. ಮಹಾರಾಷ್ಟ್ರ ಕಾಯಿದೆಯಡಿ ಒಂದು ಸಹಕಾರ ಸಕ್ಕರೆ ಕಾರ್ಖಾನೆ ಚುನಾವಣೆಗೆ ಸಂಬಂಧಪಟ್ಟಂತೆ ಇಬ್ಬರು ಸದಸ್ಯರು ಮತ್ತು ಸಂಘದ ಅಧ್ಯಕ್ಷರು ಸೇರಿ ಒಪ್ಪಂದ ಆದೇಶ ಪಡೆದು, ಚುನಾವಣೆ ಸಮರ್ಪಕವಾಗಿ ನಡೆಸದೆ, ನ್ಯಾಯಾಲಯವನ್ನು ತಪ್ಪುದಾರಿಗೆ ತರಲು ಪ್ರಯತ್ನಿಸಿದ್ದು, ಮತದಾರರ ಪಟ್ಟಿ ಪ್ರಕಟಿಸುವಾಗ ಅನುಸರಿಸಿದ ನೀತಿ ಸರಿಯಿಲ್ಲವಾದ್ದರಿಂದ, ಉಪನಿಬಂಧಕರು ನಡೆಸಿದ ಚುನಾವಣೆಯನ್ನು ಕಾನೂನು ಬಾಹಿರ ಎಂದು ಕಿತ್ತು ಹಾಕಿತು. ಜಿಲ್ಲಾ ಕಲೆಕ್ಟರ್ ತಯಾರಿಸಿದ ಅಂತಿಮ ಮತದಾರರ ಪಟ್ಟಿಯನ್ನು (30.06.1992) ಕಾನೂನು ಬಾಹಿರವೆಂದು, ಮತದಾರರ ಪಟ್ಟಿಯಲ್ಲಿ ಅಂದರೆ 17.12.1991 ರಂದು ತಯಾರಿಸಿದ ಮತದಾರರ ಪಟ್ಟಿ ಆಧಾರದ ಮೇಲೆ ಉಪನಿಬಂಧಕರು ಮರು ಚುನಾವಣೆ ನಡೆಸಲು ಆದೇಶಿಸಿತು ಮತ್ತು 27.04.1993 ರಂದು ನಡೆದ ಚುನಾವಣೆಯಲ್ಲಿ ರದ್ದುಗೊಳಿಸಿ, ಉಪನಿಬಂಧಕರಿಗೆ ಮರು ಚುನಾವಣೆ ನಡೆಸಲು ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. (1983 Indlaw SC 565, (1993) 4 SCC 216, AIR 1994 SC 1673)
3. ಮಹಾರಾಷ್ಟ ಸಹಕಾರ ಕಾಯಿದೆಯಡಿ ಒಂದು ಹಾಲು ಉತ್ಪಾದಕರ ಒಕ್ಕೂಟದ ಅವ್ಯವಹಾರದ ಮೇಲೆ, ಕಾರಣ ಕೇಳಿ ನೋಟೀಸ್ ಹೊರಡಿಸಿ, ವಿವರಣೆ ಪಡೆದು, ಮಂಡಳಿಯನ್ನು ರದ್ದು ಪಡಿಸಿ

ಆಡಳಿತಾಧಿಕಾರಿಯನ್ನು ನೇಮಿಸಿತು. ಈ ಆದೇಶದ ಮೇಲೆ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿತು. ಆ ಪ್ರಕರಣ ವಿಚಾರಣೆಯಲ್ಲಿದ್ದಾಗ ಹಿಂದಿನ ಆಡಳಿತ ಮಂಡಳಿ ಯಾವುದೇ ತಾತ್ವಿಕ ತೀರ್ಮಾನ ತೆಗೆದುಕೊಳ್ಳದಿರಲು ಆದೇಶಿಸಬೇಕೆಂದು ರಿಟ್ ಅರ್ಜಿ ದಾಖಲಿಸಿದಾಗ, ಅರ್ಜಿದಾರರು, ಮಂಡಳಿ ತಾತ್ವಿಕ ತೀರ್ಮಾನ ತೆಗೆದುಕೊಳ್ಳದಂತೆ ಮಾಡಿದ ಮನವಿಗೆ ಉಚ್ಚನ್ಯಾಯಾಲಯ, ಎರಡು ಪಕ್ಷಗಳ ಒಪ್ಪಂದದ ಮೇಲೆ ತೀರ್ಮಾನಿಸಬೇಕಿತ್ತು ಅದನ್ನು ಮಾಡದೇ ಆದೇಶಿಸಿದ್ದರಿಂದ, ಉಚ್ಚನ್ಯಾಯಾಲಯದ ತೀರ್ಮಾನವನ್ನು ರದ್ದುಗೊಳಿಸಿ, ಮರು ವಿಚಾರಣೆ ನಡೆಸಲು ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. (1983 Indlaw SC 555, (1993) 4 SCC 255, AIR 1993 SCW 2013)

4. ಹಿಮಾಚಲ್ ರಾಜ್ಯ ಕಾಯಿದೆಯಡಿ ನೊಂದಾಯಿಸಿದ ಒಂದು ಗ್ರಾಹಕ ಸಂಘ ಸಿಮ್ಲಾದಲ್ಲಿನ ಒಬ್ಬ ವ್ಯವಸ್ಥಾಪಕನನ್ನು ನೋಟೀಸ್ ಜಾರಿ ಮಾಡದೆ, ವಿಚಾರಣ ಮಾಡದೆ, ಆಡಳಿತಾಧಿಕಾರಿ ಅನುಮೋದನೆ ಇಲ್ಲದೆ ಕೆಲಸದಿಂದ ತೆಗೆದು ಹಾಕಿದ್ದನ್ನು ಪ್ರಶ್ನಿಸಿ, ಸಹಾಯಕ ನಿಬಂಧಕರ ಮುಂದೆ ದಾವಾ ದಾಖಲಿಸಿದಾಗ, ಏಳು ವರ್ಷಗಳ ನಂತರ ಸಹಾಯಕ ನಿಬಂಧಕರು, ತೆಗೆದು ಹಾಕಿದ ಆದೇಶವನ್ನು ರದ್ದುಗೊಳಿಸಿ, ಮರು ನೇಮಕ ಮಾಡಲು ಮತ್ತು ಬಾಕಿ ಸಂಬಳ ಪಾವತಿಸಲು ಆದೇಶಿಸಿತು. ಇದನ್ನು ಜಾರಿ ಮಾಡಲು ವಿವಿಧ ನ್ಯಾಯಾಲಯಗಳ ಮೊರೆ ಹೋದರೂ ಪ್ರಯೋಜನ ವಾಗಲಿಲ್ಲ. ಇಲಾಖಾಧಿಕಾರಿಗಳು ಜಾರಿ ಮಾಡುವಂತೆ ನಿರ್ದೇಶಿಸಿದರೂ, ಜಾರಿಯಾಗಲಿಲ್ಲ ಉಚ್ಚನ್ಯಾಯಾಲಯದಲ್ಲಿ ಆದೇಶಿಸಿದರು. ಆದರೂ ಆ ಆದೇಶವನ್ನು ಪ್ರಶ್ನಿಸಿ, ಶ್ರೇಷ್ಠ ನ್ಯಾಯಾಲಯದಲ್ಲಿ ಸಂಘವು ಪ್ರಶ್ನಿಸಿದಾಗ, ಸಂಘದ ಅಧಿಕಾರಿಗಳ ವರ್ತನೆಯಿಂದ ಸಂಘದ ಆರ್ಥಿಕ ಸ್ಥಿತಿ ಮೇಲೆ ಹೊರೆಯಾಗುತ್ತಿದೆ. 20 ವರ್ಷಗಳಿಂದ ನೌಕರರುಗಳಿಗೆ ಯಾವುದೇ ಪರಿಹಾರ ಪಡೆಯಲಾಗಿಲ್ಲ. ಅಧಿಕಾರಿಗಳಿಂದ ಬಾಕಿ ಸಂಬಳ ವಸೂಲಿ ಮಾಡಿ ಕೊಡುವಂತೆ ಆದೇಶಿಸಿತು. ಅಂದರೆ ಯಾರು ಆ ನೌಕರಳ ವಜಾ ಮಾಡಲು ಕಾರಣಕರ್ತರಾಗಿದ್ದರೊ ಅವರುಗಳ ಸಂಬಳದಿಂದ ಬಾಕಿ ಇರುವ ವೇತನ ವಸೂಲಿ ಮಾಡಲು ಶ್ರೇಷ್ಠನ್ಯಾಯಾಲಯ ಆದೇಶಿಸಿತು. (1983 Indlaw SC 1121, (1993) 3 SCC 214, AIR 1994 SC 23)

5. ಬಿಹಾರ ಸಹಕಾರ ಕಾಯಿದೆಯಡಿ ಒಂದು ಅಂಚೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘದ ಉಪನಿಯಮಗಳಲ್ಲಿ ತಿದ್ದುಪಡಿ ತಂದು ರಾಜ್ಯ ಮತ್ತು ಕೇಂದ್ರ ಸರ್ಕಾರದ ನೌಕರರನ್ನು ಸದಸ್ಯರನ್ನಾಗಿ ಸ್ವೀಕರಿಸಲು ತಿದ್ದುಪಡಿ ಮಾಡಿದ ನಂತರ, ಅರ್ಜಿದಾರ ಸದಸ್ಯನಾದ ನಂತರ (ಉಪನಿಯಮಗಳ ತಿದ್ದುಪಡಿ ನಿಬಂಧಕರ ಒಪ್ಪಿಗೆ ಪಡೆಯಲಿಲ್ಲ) ಅವನಿಂದ ಹಣ ಪಡೆದು ನಿವೇಶನ ಖರೀದಿಸಿದರೂ, ಅದನ್ನು ಸದಸ್ಯನಿಗೆ ನೋಂದಾಯಿಸಲಿಲ್ಲ. ಇದನ್ನು ಪ್ರಶ್ನಿಸಿ ನಿಬಂಧಕರ ಮುಂದೆ ದಾವಾ ದಾಖಲಿಸಿದಾಗ, ಅರ್ಜಿದಾರ ಸದಸ್ಯನಾಗಿ ಮುಂದುವರಿಯಲು ಅರ್ಹ ಎಂದು ತೀರ್ಮಾನಿಸಿದರು ಮತ್ತು ಆ ನಂತರ ನಿಬಂಧಕರು ಒಂದು ಪ್ರತ್ಯೇಕ ಆದೇಶದಂತೆ ನಿವೇಶನ ನೊಂದಾಯಿಸಲು ಸೂಚಿಸಿದರು ಮತ್ತು ಸಂಘದ ಉಪನಿಯಮಗಳ ತಿದ್ದುಪಡಿ ನೊಂದಾಯಿಸಲು ಮತ್ತು ಅರ್ಜಿದಾರನ ಹಿತಾಸಕ್ತಿ ಕಾಪಾಡಲು ಸೂಚಿಸಿದರು. ಈ ಆದೇಶವನ್ನು ಸಹಕಾರ ಸಚಿವರು ದೃಡೀಕರಿಸಿದ್ದರೆ. ಇದನ್ನು ಪ್ರಶ್ನಿಸಿ ಸಂಘವು ರಿಟ್ ದಾಖಲಿಸಿದಾಗ, ನಿಬಂಧಕರು ಮತ್ತು ಮಂತ್ರಿಗಳ ಆದೇಶವನ್ನು ಕಿತ್ತು ಹಾಕಿತು. ಅದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಉಚ್ಚನ್ಯಾಯಾಲಯದ ಆದೇಶವನ್ನು ಅಸಿಂದು ಎಂದು ತೀರ್ಮಾನಿಸಿ, ಅರ್ಜಿದಾರನು ನಿವೇಶನಕ್ಕೆ ಅರ್ಹನು ಎಂದು ತೀರ್ಮಾನಿಸಿ, ಈಗಾಗಲೇ ಕಟ್ಟಿರುವ ಹಣ ಮತ್ತು ಠೇವಣಿಗಳನ್ನು ಒಟ್ಟು ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಂಡು, ಇನ್ನು ಹಣ ಬರಬೇಕಾದರೆ ವಸೂಲಿ ಮಾಡಿಕೊಳ್ಳಲು ಆದೇಶಿಸಿತು.

(1991 Indlaw SC 719, (1993) 1 SCC (Supp) 71)

6. ಬಿಹಾರ ಸಹಕಾರ ಕಾಯಿದೆಯ, ಒಂದು ಮಾರಾಟ ಒಕ್ಕೂಟದ ವ್ಯವಹಾರದ ಬಗ್ಗೆ ನಿಬಂಧಕರು ವಿಚಾರಣೆ ನಡೆಸಿ ಅಧಿಭಾರ ಅರ್ಜಿ ದಾಖಲಿಸಿದಾಗ ವಸೂಲಾತಿಗೆ ಆದೇಶಿಸಿದರು. ಉಪನಿಬಂಧಕರು ಈ ಆದೇಶವನ್ನು ಕಿತ್ತು ಹಾಕಿದರು. ಇದನ್ನು ಪುನರ್ ವಿಮರ್ಷೆ ಮಾಡಿದಾಗ, ಸಹಾಯಕ ನಿಬಂಧಕರ ಆದೇಶವನ್ನು ಎತ್ತಿ ಹಿಡಿದು ಬಡ್ಡಿ ಸಮೇತ ಮರು ಪಾವತಿ ಮಾಡಲು ಆದೇಶಿಸಿತು. ಇದನ್ನು ಪ್ರಶ್ನಿಸಿ ರಿಟ್ ದಾಖಲಿಸಿದಾಗ ಅದನ್ನು ಉಚ್ಚನ್ಯಾಯಾಲಯ ವಜಾ ಮಾಡಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ – ಎರಡು ಅಂಶಗಳ ಬಗ್ಗೆ ವಾದಿಸಿದರು. (1) ಕಲಂ 56 ರನ್ವಯ ಸಹಯಾಕ ನಿಬಂಧಕರ ಆದೇಶದ ಮೇಲೆ ನಿಬಂಧಕರಿಗೆ ಪುನರ್ ಪರಿಶೀಲಿಸುವ ಅಧಿಕಾರ ಇಲ್ಲ ಮತ್ತು ಇದಕ್ಕೆ AIR 1976 patna 179/1975 Indlaw part 62 ತೀರ್ಪನ್ನು ಉಲ್ಲೇಖಿಸಿದರು. (2) ಪ್ರಥಮ ವಸೂಲಾತಿ ಆದೇಶ ಕಲಂ 40 ರಡಿ ನೀಡಿದ್ದ ಭಾಗಶಃ ಹಣ ಪಾವತಿಸಲು ಸೂಚಿಸಿತು. ಇದಕ್ಕೆ ಸಂಘವು ಮೇಲ್ಮನವಿ ಸರ್ಕಾರದಲ್ಲಿ ಬಾಕಿ ಇದೆ, ಆದ್ದರಿಂದ ಎರಡೂ ಕಡೆಯಿಂದ ತೊಂದರೆಯಾಗುತ್ತಿದೆ ಎಂದು ವಾದಿಸಿದರು. ಇದಕ್ಕೆ ಶ್ರೇಷ್ಠ ನ್ಯಾಯಾಲಯ ಕಲಂ 40 ರಡಿ ಪ್ರಕರಣ ಹಣ ದುರುಪಯೋಗ, ಅಶಿಸ್ತು, ಕರ್ತವ್ಯಚ್ಯುತಿ ಮತ್ತು ದುರುದ್ದೇಶದ ಆಧಾರದ ಮೇಲೆ ಕ್ರಮ ಜರುಗಿಸುವುದು. ಆದರೆ ಕಲಂ 48 ರಲ್ಲಿ ಇಂತಹ ಅವಶ್ಯಕತೆ ಇಲ್ಲ. ಆದ್ದರಿಂದ ಕಲಮ 40 ರಲ್ಲಿ ನಿಬಂಧಕರ ಅಧಿಕಾರ ಸೀಮಿತಗೊಳಿಸಲಾಗದು. ಉಪನಿಬಂಧಕರ ಆದೇಶ ಅಸಿಂದು ಆಗಿದ್ದ ಅದನ್ನು ಸರಿಪಡಿಸಲಾಗಿದೆ. ಆದ್ದರಿಂದ ಅರ್ಜಿ ತಿರಸ್ಕರಿಸಲಾಗಿದೆ. (1991 Indlaw SC 353, (1992) 1 SCC (Supp) 720, AIR 1991 SC 2132)

7. ದೆಹಲಿ ಸಹಕಾರ ಕಾಯಿದೆಯಡಿ ಒಂದು ಪುನರ್ ವಸತಿ ಸಹಕಾರ ಸಂಘಕ್ಕೆ ಸರ್ಕಾರ 60 ಎಕರೆ ಜಮೀನು ಮಂಜೂರಿ ಮಾಡಿದ್ದು, ಅನಂತರ ಅದನ್ನು ರದ್ದುಪಡಿಸಿತು. ಇದನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ದೆಹಲಿ ಅಭಿವೃದ್ಧಿ ಪ್ರಾಧಿಕಾರ ಮತ್ತು ಸಂಘ ಒಂದು ಒಪ್ಪಂದ ಮಾಡಿಕೊಂಡು, 45 ಎಕರೆ ಜಮೀನು ಮಂಜೂರಿಗೆ ಒಪ್ಪಿಗೆ ಪಡೆಯಿತು ಮತ್ತು ಸದಸ್ಯತ್ವದ ಅರ್ಜಿ ದಿನಾಂಕವನ್ನು 01.09.1980ಕ್ಕೆ ನಿಗದಿ ಪಡಿಸಿತು. ಈ ಮಧ್ಯೆ ನಿವೇಶನವನ್ನು ಜೇಷ್ಠತೆ ಆಧಾರದಲ್ಲಿ ಹಂಚುವ ಬಗ್ಗೆ ವಿವಾದ ವೇರ್ಪಟ್ಟಿತ್ತು, 15 ವ್ಯಕ್ತಿಗಳ ಸದಸ್ಯತ್ವ, ಪ್ರಮಾಣ ಪತ್ರದ ನ್ಯೂನತೆಯಿಂದ ಅಂಗೀಕಾರವಾಗಿಲ್ಲವೆಂದಾಗ, ಅವರ ಸದಸ್ಯತ್ವವನ್ನು ಅಮಾನತ್ತಿನಲ್ಲಿಡಲಾಗಿತ್ತು. ಈ ಮಧ್ಯೆ 28 ಜನರನ್ನು 17.11.1979 ರಿಂದ ಆಡಳಿತ ಮಂಡಳಿ ಅನುಮೋದಿಸಿತು ಮತ್ತು 15 ವ್ಯಕ್ತಿಗಳ ಅರ್ಜಿಯು ನ್ಯೂನತೆಯಿಂದ ತಡೆಹಿಡಿದಿದ್ದ ಸದಸ್ಯರಂದು ದೃಡೀಕರಿಸಿತು. ಅಂದರೆ 28 ಜನರು 15 ಸದಸ್ಯರಿಗಿಂತ ಕಿರಿಯರಾಗುತ್ತಾರೆ. ಇದನ್ನು ಉಚ್ಚನ್ಯಾಯಾಲಯ ದೃಡೀಕರಿಸಿದೆ. ಆಂತರಿಕ ಆದೇಶವನ್ನು ತೆರವುಗೊಳಿಸುತ್ತಿರುವುದರಿಂದ ಎಲ್ಲಾ ಅರ್ಹರಿಗೂ ಪರಿಹಾರಸಿಗುತ್ತಿದೆ ಎಂದು ಆದೇಶಿಸಿತು. (1991 Indlaw SC 784, (1991) 4 SCC 485, AIR 1991 SC 2160)

8. ಅಸ್ಸಾಂ ಸಹಕಾರ ಕಾಯಿದೆಯಡಿ ಒಂದು ಮಾರಾಟ ಸಹಕಾರ ಸಂಘ ಸದಸ್ಯ ಸಂಘಗಳ ಸದಸ್ಯರಿಂದ ಖರೀದಿ ಮಾಡಿದ ಆಹಾರೊತ್ಪನ್ನಗಳಿಗೆ ಆದಾಯ ತೆರಿಗೆ ಕಾಯಿದೆ ಕಲಂ 81(1)(ಸಿ) ಅನ್ವಯ ವಿನಾಯ್ತಿ ಕೇಳಿದಾಗ, ಮಾರಾಟ ಸಂಘ ತನ್ನ ಸದಸ್ಯರಿಂದ ಖರೀದಿ ಮಾಡಿಲ್ಲ. ಏಕೆಂದರೆ ಪ್ರಾಥಮಿಕ ಸಹಕಾರ ಸಂಘದ ಸದಸ್ಯರಿಂದ ಆಹಾರೊತ್ಪನ್ನ ಖರೀದಿಗೆ ಕಲಂ 81(1)(ಸಿ) ಅನ್ವಯ ವಿನಾಯಿಸಿಗುವುದಿಲ್ಲವೆಂದು ತೀರ್ಮಾನಿಸಿತು. (1993 Indlaw SC 928, (1994) 2 SCC 96, AIR 1993 SC 2575)

9. ದೆಹಲಿ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ

ಸಂಘದಲ್ಲಿ ಅವ್ಯವಹಾರ ನಡೆದಿದೆ ಎಂದು ಹೊಸದಾಗಿ ಚುನಾಯಿಸಲಾದ ಮಂಡಳಿ, ಹಿಂದಿನ ಆಡಳಿತ ಮಂಡಳಿ ಮೇಲೆ ಆರೋಪಿಸಿದಾಗ, ನಿಬಂಧಕರು ವಿಚಾರಣೆ ನಡೆಸಿದ ನಂತರ ದಾವಾ ದಾಖಲಿಸಿತು. ಆ ಆದೇಶವು ಏಕಪಕ್ಷೀಯ ಆದೇಶವಾಗಿತ್ತು. ಈ ಆದೇಶದಲ್ಲಿ ವ್ಯಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಹಿಂದಿನ ಆಡಳಿತ ಮಂಡಳಿಯನ್ನು ಜವಾಬ್ದಾರನ್ನಾಗಿ ಮಾಡಿತು. ಈ ಆದೇಶವನ್ನು ಸಹಕಾರ ನ್ಯಾಯಾಧಿಕರಣದಲ್ಲಿ ಪ್ರಶ್ನಿಸಿದಾಗ, ಮಧ್ಯಸ್ತಿಗಾರರ ಆದೇಶವನ್ನು ಎತ್ತಿ ಹಿಡಿದು ಮೇಲ್ಮನವಿ ತಿರಸ್ಕರಿಸಿತು. ಈ ಆದೇಶವನ್ನು ರಿಟ್ ಮೂಲಕ ಪ್ರಶ್ನಿಸಿದಾಗ ಅದನ್ನು ವಜಾ ಮಾಡಿತು. ಅರ್ಜಿದಾರನ ವಕೀಲರು ದೆಹಲಿ ಕಾಯಿದೆ ಕಲಂ 59 ರಲ್ಲಿ ಪ್ರಕರಣ ದಾಖಲಿಸುವ ಬದಲು ಕಲಂ 60 ರಲ್ಲಿ ದಾಖಲಿಸಿರುವುದು ತಪ್ಪು ಎಂದು ವಾದಿಸಿದರು (ಶ್ರೇಷ್ಠ ನ್ಯಾಯಾಲಯದಲ್ಲಿ) ಈ ಪ್ರಕರಣ ಇತ್ಯರ್ಥ ಪಡಿಸುವಾಗ ಈಗಾಗಲೇ ತೀರ್ಮಾನಿಸಿದ AIR 1976 63 Delhi 299/(1965) 1 SCR 186/1964 Indlaw SC 383 ಗಳನ್ನು ಪರಿಶೀಲಿಸಿ, ಮದ್ರಾಸ್ ಕಾಯಿದೆ ಕಲಂ 49 ಮತ್ತು ದೆಹಲಿ ಕಾಯಿದೆ ಕಲಂ 59 ಒಂದೇ ಇದ್ದು ವಿಶೇಷ ಮೇಲ್ಮನವಿಯನ್ನು ತಿರಸ್ಕರಿಸಿತು. (1991 Indlaw SC 779, (1991) 2 SCC (Supp) 215, AIR 1991 SC 2254)

10. ಬಿಹಾರ ಸಹಕಾರ ಕಾಯಿದೆ ಒಂದು ಮಾರಾಟ ಒಕ್ಕೂಟ ಒಬ್ಬ ವ್ಯವಸ್ಥಾಪಕನ ಮೇಲೆ ಕಲ್ಲಿದ್ದಲು ಕೊರತೆ ಎಂದು ಪ್ರಕರಣ ದಾಖಲಿಸಿದಾಗ ಸಹಾಯಕ ನಿಬಂಧಕರು ಅದನ್ನು ತಿರಸ್ಕರಿಸಿದರು. ಮೇಲ್ಮನವಿ ಮಾಡಿದಾಗ ಸಂಯುಕ್ತ ನಿಬಂಧಕರು ಆ ಮೇಲ್ಮನವಿ ಪುರಸ್ಕರಿಸಿ ವಸೂಲಾತಿಗೆ ಆದೇಶಿಸಿದರು. ರಿಟ್ ಅರ್ಜಿ ಸಲ್ಲಿಸಿದಾಗ, ಪ್ರಕರಣವನ್ನು ಕಲಂ 40 ರಲ್ಲಿ ದಾಖಲಿಸಬೇಕು, ಕಲಂ 48 ರಡಿಯಲ್ಲಿ ಅಲ್ಲ ಎಂದು ತೀರ್ಮಾನಿಸಲಾಯಿತು. ಅದರಂತೆ ಡಿಕ್ರಿಯನ್ನು ಕಾನೂನು ಬಾಹಿರ ಎಂದು ಕಿತ್ತು ಹಾಕಿತು. ಈ ಆದೇಶದ ಮೇಲೆ ವಿಶೇಷ ಅರ್ಜಿಯನ್ನು ಶ್ರೇಷ್ಠ ನ್ಯಾಯಾಲಯ ಸಲ್ಲಿಸಿದಾಗ ಉಚ್ಚನ್ಯಾಯಾಲಯದ ತೀರ್ಪನ್ನು ರದ್ದುಗೊಳಿಸಿ ಬಿಹಾರ್ ಕಾಯಿದೆಯ ಕಲಂ 40 ಮತ್ತು 48 ಮತ್ತು ದೆಹಲಿ ಕಾಯಿದೆಯಾ ಕಲಂ 59 ಮತ್ತು 60 ಒಂದೇ ರೀತಿ ಇದ್ದು. 1991 Indlaw SC 779 ತೀರ್ಮಾನ ಸಮರ್ಪಕವಾಗಿದೆ. ಆದ್ದರಿಂದ ಆ ತೀರ್ಮಾನ ಅನ್ವಯಿಸದು ಎಂಬ ಬಿಹಾರ್ ಉಚ್ಚನ್ಯಾಯಾಲಯದ ತೀರ್ಮಾನವನ್ನು ರದ್ದುಗೊಳಿಸಿ, ಮರು ವಿಚಾರಣೆ ಮಾಡಲು ಸೂಚಿಸಿತು. (1992 Indlaw SC 565, (1992) 4 SCC 196, AIR 1993 SC 1222)

11. ದೆಹಲಿ ಕಾಯಿದೆಯಡಿ ಗುಂಪು ಮನೆ ನಿರ್ಮಾಣ ಸಹಕಾರ ಸಂಘಗಳಿಗೆ ದೆಹಲಿ ಅಭಿವೃದ್ಧಿ ಪ್ರಾಧಿಕಾರ ತಾನು ವಶಪಡಿಸಿಕೊಂಡ ಜಮೀನಿನಲ್ಲಿ ಶೇ.60ನ್ನು ತಾನು ಪಡೆದು, ಉಳಿದ ಶೇ.40 ನ್ನು ಈ ಸಂಘಗಳಿಗೆ ನೀಡುವ ನೀತಿ 1983 ರಲ್ಲಿ ರೂಪಿಸಿತು. ಸಾಕಷ್ಟು ಜಮೀನು ಇಲ್ಲದೇ ಇದ್ದುದರಿಂದ ಗುಂಪು ಗೃಹ ನಿರ್ಮಾಣ ಸಂಘಗಳ ನೊಂದಣಿಯನ್ನು ನಿಬಂಧಕರು ಸಲ್ಲಿಸಿದರು. ಈ ನೀತಿ 1990 ರಲ್ಲಿ ಮಾರ್ಪಟಾದ 1983 ರ ನೀತಿಯನ್ನು ಪ್ರಶ್ನಿಸಿದಾಗ, ಸಂಘಗಳ ನೋಂದಣಿ ದಿನಾಂಕದಿಂದ ಜೇಷ್ಠತೆ ಪರಿಗಣಿಸಬೇಕೆಂದು ತೀರ್ಮಾನಿಸಿತು. ದೆಹಲಿ ಅಭಿವೃದ್ಧಿ ಪ್ರಾಧಿಕಾರದ ಪ್ರಕರಣೆಯಲ್ಲಿ ಮೊದಲು ಬಂದವರಿಗೆ ಪ್ರಾಶಸ್ತ್ಯ ಎಂಬ ನೀತಿಯನ್ನು ರದ್ದುಗೊಳಿಸಿ ಸಂಘಗಳ ನೋಂದಣಿ ದಿನಾಂಕದಂದೇ ಜೇಷ್ಠತಾಪಟ್ಟಿ ತಯಾರಿಸಬೇಕು ಮತ್ತು ಅಂತಹ ಸಂಘಗಳಲ್ಲಿ ಕನಿಷ್ಠ 60 ಸದಸ್ಯರು ಮತ್ತು ಗರಿಷ್ಟ 300 ಸದಸ್ಯರಿರಬೇಕೆಂಬ ನೀತಿಯನ್ನು ಆಧರಿಸಿ ಹಂಚಿಗೆ ಮಾಡಬಹುದೆಂಬ ನೀತಿ ಪುರಸ್ಕರಿಸಿತು. (1992 Indlaw SC 609, (1992) 4 SCC 477, AIR 1993 SC 155)

12. ಉತ್ತರಪ್ರದೇಶ ಕಾಯಿದೆ ಮತ್ತು ನಿಯಮಗಳಲ್ಲಿ ಒಂದು ಸಂಘದ ನೌಕರನು ತಾತ್ಪೂರ್ವಕವಾಗಿ ನೇಮಕವಾಗಿದ್ದು ಖಾಯಂ ಮಾಡಿದ ನಂತರ, ಆತನ ಸೇವೆ ಮತ್ತೊಮ್ಮೆ ಸೇರ್ಪಡೆಯಾದಂತೆ, ಅವನನ್ನು ಸೇವೆಯಿಂದ ವಜಾ ಮಾಡಿದಾಗ, ಒಂದು ತಿಂಗಳ ನೋಟೀಸ್ ಬದಲು ಒಂದು ತಿಂಗಳ

ಸಂಬಳ ಪಾವತಿಸಿದರೆ ಅದು ನಿಯಮ ಬಾಹಿರವಲ್ಲ. ಅದು ಸರಿ ಅಂದರೆ 1975ರ ನಿಯಮದಂತೆ ಅದು ಸರಿಯಾದ ಕ್ರಮ. ಈ ಪ್ರಕರಣದಲ್ಲಿ 1984 ರಲ್ಲಿ ನೊಡಿಸಿದ ಹೊಸ ನಿಯಮಗಳು ಅನ್ವಯಿಸದು. (1992 Indlaw SC 1096, (1992) 4 SCC 17, AIR 1992 SC 2093)

13. ರಾಜಾಸ್ತಾನ್ ಸಹಕಾರ ಕಾಯಿದೆಯಡಿ ಒಂದು ಪ್ರಾಧಿಕಾರ ಸಂಘದ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿದ್ದು ಆ ಸಂಘಗಳಿಗೆ ಆಡಳಿತಾಧಿಕಾರಿ ನೇಮಿಸುವ ಅವಶ್ಯಕತೆ ಇಲ್ಲವೆಂದು ತೀರ್ಮಾನಿಸಿದ್ದು, ಬ್ಯಾಂಕ್‌ಗಳ ಪ್ರಕರಣದಲ್ಲಿ ಚುನಾವಣೆ ಪ್ರಕಟಣೆ ಹೊರಡಿಸಿದ್ದು ಚುನಾವಣೆಯನ್ನು ಮುಂದೂಡಲು ಸರ್ಕಾರ ತೆಗೆದುಕೊಂಡ ತೀರ್ಮಾನ ಸರಿಯಾಗಿದ್ದು ಉಚ್ಚನ್ಯಾಯಾಲಯ ಎರಡನ್ನು ಒಂದೇ ಎಂದು ತೀರ್ಮಾನಿಸಿರುವುದು ತಪ್ಪು. ಆದ್ದರಿಂದ ಉಚ್ಚನ್ಯಾಯಾಲಯಗಳ ಆದೇಶವನ್ನು ಕಿತ್ತು ಹಾಕಿತು. ಅಂದರೆ ಅಂತಹ ಸಂಘಕ್ಕೆ ಆಡಳಿತಾಧಿಕಾರಿ ನೇಮಿಸಿರುವುದು ತಪ್ಪು ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (1992 Indlaw SC 462, (1993) 1 SCC (Supp) 556, AIR 1992 SC 1975)

14. ಮಹಾರಾಷ್ಟ್ರ ಸಹಕಾರ ಕಾಯಿದೆಯಡಿ ನಿಬಂಧಕರು ಮಂಡಳಿಯನ್ನು ರದ್ದುಪಡಿಸಲು ನೋಟೀಸ್ ನೀಡಿದರು, (ಇದಕ್ಕೆ ಪೂರ್ವದಲ್ಲಿ ಮೇಲ್ಮನವಿದಾರರು ಹೊಸದಾಗಿ ಚುನಾಯಿತರಾದರು, 6ನೇ ಎದರುರು ಅರ್ಜಿದಾರರ ಜೊತೆ) ಮತ್ತು ಆಡಳಿತಾಧಿಕಾರಿ ನೇಮಿಸಿದರು. ಇದನ್ನು ಪ್ರಶ್ನಿಸಿ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿದರು ಮತ್ತು ಸರ್ಕಾರ ಅದನ್ನು ತಿರಸ್ಕರಿಸಿತು. ಉಚ್ಚನ್ಯಾಯಾಲಯದ ಏಕ ಸದಸ್ಯ ಪೀಠ ಮತ್ತು ದ್ವಿಸದಸ್ಯತ್ವ ಪೀಠದ ಮುಂದೆ ಬಂದಾಗ ಮಾಡಿದ ಆದೇಶದ ಮೇಲೆ, ಈ ವಿಶೇಷ ಮನವಿ ಸಲ್ಲಿಸಲಾಗಿದೆ. ಎದುರು ಅರ್ಜಿದಾರರು ಉಚ್ಚನ್ಯಾಯಾಲಯದ ಆದೇಶವು ಮಾಡಿದ ಆದೇಶ ಒಂದು ಒಪ್ಪಂದದ ಮೇಲೆ ಆದ ಆದೇಶ ಎಂದು ಪ್ರತಿಪಾಧಿಸಿದರೂ, ಉಚ್ಚನ್ಯಾಯಾಲಯ ತನ್ನ ನಡವಳಿಕೆಗಳಲ್ಲಿ ಒಪ್ಪಂದದ ಆದೇಶ ಎಂದು ಎಲ್ಲೂ ದಾಖಲಿಸಿಲ್ಲ. ಸಂಘದ ವಿರುದ್ಧ ಗುರುತರ ಆರೋಪ ಮಾಡಿದ್ದು ಸತ್ಯವಲ್ಲ ಮತ್ತು ರಾಜಕೀಯ ಪ್ರಭಾವಕ್ಕೊಳಪಟ್ಟ ಆದೇಶ ಪಡೆಯಲಾಗಿದೆ ಎಂದು ವಾದಿಸಿದರು. ಮೇಲ್ಮನವಿದಾರರ ಒಪ್ಪಿಗೆ ಇರಲಾರದೆ, ಇದೆ ಎಂದು ದಾಖಲಿಸಿರುವುದು ಸರಿಯಾದ ಕ್ರಮವಲ್ಲ. ಉಚ್ಚನ್ಯಾಯಾಲಯ ಅದನ್ನು ದಾಖಲಿಸಿಲ್ಲ ವಾದ್ದರಿಂದ ಎರಡೂ ಪಕ್ಷಗಳ ಒಪ್ಪಿಗೆ ಮೇಲೆ ಆದೇಶಿಸಲಾಗಿದೆ. ಆದ್ದರಿಂದ ಪ್ರಕರಣ ಮತ್ತು ವಿಚಾರಣೆ ಮಾಡುವ ಅವಶ್ಯಕತೆ ಇದೆ. ಆದ್ದರಿಂದ ಆದೇಶವನ್ನು ಕಿತ್ತು ಹಾಕಿ, ಮರು ವಿಚಾರಣೆಗೆ ಆದೇಶಿಸಿತು. (1992 Indlaw SC 852, (1992) 3 SCC (Supp) 10)

15. ತಮಿಳನಾಡು ಕಾಯಿದೆಯಡಿ ಒಂದು ಸಹಕಾರ ಸಂಘದ ಆಡಳಿತವನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡರೆ, ಆ ಸಂಘವನ್ನು ರಾಜ್ಯ ಅಥವಾ ರಾಜ್ಯ ಸರ್ಕಾರದ ಒಂದು ಸಂಸ್ಥೆ ಎಂದು ಸಂವಿಧಾನದ ಅನುಚ್ಛೇದ 12ರಡಿ ಬರುವುದರ ಬಗ್ಗೆ ಸಂವಿಧಾನ ಪೀಠಕ್ಕೆ ವರ್ಗಾಯಿಸಲು ರಜಾ ಕಾಲದ ನ್ಯಾಯಾದೀಶರ ಆದೇಶವನ್ನು ಪರಿಗಣಿಸುವ ಅವಶ್ಯಕತೆಇಲ್ಲ. ಇದು ಅಂತಹ ಪ್ರಕರಣವಲ್ಲ ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (1993 Indlaw SC 324, (1992) 2 SCC (Supp) 104)

16. ಮಹಾರಾಷ್ಟ್ರ ಕಾಯಿದೆಯಡಿ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸಹಸದಸ್ಯರು (ಇಬ್ಬರು) ಮೂರನೇ ವ್ಯಕ್ತಿಯನ್ನು ಬಾಡಿಗೆದಾರನನ್ನಾಗಿ ಸೇರಿಸಿಕೊಂಡು ಹನ್ನೊಂದು ತಿಂಗಳ ಅವಧಿಗೆ (ಮುಂದುವರಿಸಲು ಅವಕಾಶ ಕಲ್ಪಿಸಿ) ಒಪ್ಪಂದ ಮಾಡಿಕೊಂಡರು. ಆದರೆ ಆ ವ್ಯಕ್ತಿ ಸದಸ್ಯನಾಗಿರಲಿಲ್ಲ. ಅಂದರೆ ಸಹಕಾರ ಕಾಯಿದೆ ಅವನಿಗೆ ಅನ್ವಯವಾಗುವುದಿಲ್ಲ. ಆದ್ದರಿಂದ ಅಂತಹ ಒಪ್ಪಂದ ಕಾನೂನು ಬಾಹಿರ. ಇದರ ಜೊತೆಗೆ ಕಾಯಿದೆ ಕಲಂ.91 ಸಂವಿಧಾನ ಬಾಹಿರ,

ಏಕೆಂದರೆ ಸದಸ್ಯರಲ್ಲಿದವರು ಸಹಕಾರ ಕಾನೂನಿನ ವ್ಯಾಪ್ತಿಗೆ ಸೇರಿಸಲಾಗದು. ಅಂದರೆ ಕನಿಷ್ಠ ನಾಮಮಾತ್ರ ಸದಸ್ಯರಾದರೂ ಆಗಿರಬೇಕು – ಸಹಕಾರ ಕಾಯಿದೆಯಲ್ಲಿ ತರಲು ಮೇಲ್ಮನವಿ ತಿರಸ್ಕರಿಸಿತು. (1991 Indlaw SC 532, (1991) 2 SCC 180, AIR 1991 SCW 779)

17. ಮಹಾರಾಷ್ಟ್ರ ಕಾಯಿದೆಯಲ್ಲಿ ಒಂದು ಸಹಕಾರ ಸಂಘದ ಸದಸ್ಯ, ಸದಸ್ಯನಲ್ಲದ ವ್ಯಕ್ತಿ, ಅವನ ಆಸ್ತಿಯನ್ನು ವರ್ಗಾವಣೆ ಮಾಡುವುದು ಸಹಕಾರ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ. (1990 Indlaw SC 513, (1991) 1 SCC 469, AIR 1991 SC 626)

18. ಬಿಹಾರ್ ಮತ್ತು ಒರಿಸ ಸಹಕಾರ ಕಾಯಿದೆಯಡಿ ಕಾಯಿದೆ ಕಲಂ.40 ಮತ್ತು 48 ರಡಿ ಕ್ರಮ ಜರುಗಿಸಿದರೆ, ಅದು ಒಂದೇ ಪ್ರಕರಣದಲ್ಲಿ ಎರಡು ಶಿಕ್ಷೇ ಎಂಬ ವ್ಯಾಪ್ತಿಗೆ ಬರುವುದಿಲ್ಲ ಕಲಂ.40 ರಲ್ಲಿ ಸ್ವಾತಂತ್ರ ಅಧಿಕಾರದ ಜೊತೆಗೆ ಕಲಂ 48ರಲ್ಲಿ ಸಿವಿಲ್ ಅಧಿಕಾರ ಚಲಾಯಿಸಲು ನಿಬಂಧಕರಿಗೆ ಅಧಿಕಾರ ಇದೆ. ಮೇಲ್ಮನವಿ ತಿರಸ್ಕರಿಸಲಾಯಿತು. (1991 Indlaw SC 353, (1992) 1 SCC (Supp) 720, AIR 1991 SC 2137)

19. ಮಹಾರಾಷ್ಟ್ರ ಸಹಕಾರ ಕಾಯಿದೆಯಡಿ ಒಂದು ಸಕ್ಕರೆ ಕಾರ್ಖಾನೆಯ ಅಧ್ಯಕ್ಷರನ್ನು ಅವಿಶ್ವಾಸ ನಿರ್ಣಯದಿಂದ ತೆಗೆದು ಹಾಕಲು, ಮನವಿ ಸಲ್ಲಿಸಿದಾಗ, ಸಂಯುಕ್ತ ನಿಬಂಧಕರು ವಿಶೇಷ ಆಡಳಿತ ಮಂಡಳಿ ಕರೆಯಲು ದಿನಾಂಕ 06.09.1989 ರಂದು ನೋಟೀಸ್ ಜಾರಿ ಮಾಡಿ, ದಿನಾಂಕ 25.09.1989 ನ್ನು ನಿಗದಿ ಪಡಿಸಿದರು. ಈ ಮಧ್ಯೆ ದಿನಾಂಕ 18.09.1989 ರಿಂದ ರಿಟ್ ಅರ್ಜಿ ಸಲ್ಲಿಸಿ, 10 ನಿರ್ದೇಶಕರು ಸಲ್ಲಿಸಿದ ಮನವಿಯನ್ನು ಪ್ರಶ್ನಿಸಿದಾಗ, ಕಲಂ 73–1ಡಿ ಅಡಿ ಮತ ಚಲಾಯಿಸುವ ಹಕ್ಕುಳ್ಳ ಸದಸ್ಯರೆಲ್ಲರನ್ನು ಸಭೆಗೆ ಆಹ್ವಾನಿಸಬೇಕೆಂದು ತೀರ್ಮಾನಿಸಿತು. ವಿಭಾಗೀಯ ಪೀಠವು ನಿಬಂಧಕರರ ನೋಟೀಸ್ ರದ್ದುಪಡಿಸುವ ಬದಲು ಕಲಂ 73–1ಡಿ ರಡಿ ಮತದಾನದ ಹಕ್ಕುಳ್ಳ ಎಲ್ಲಾ ನಿರ್ದೇಶಕರಿಗೂ ಕಳುಹಿಸಲು ಸೂಚಿಸಿದರು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಕಾಯಿದೆ ಕಲಂ 73–1ಡಿ, ನಿಯಮ 57–ಎ ಮತ್ತು ಕಾರ್ಖಾನೆಯ ಬೈಲಾ ನಂಬರ್ 29ನ್ನು ಪರಿಶೀಲಿಸಿ ಮಂಡಳಿಯ ನಿರ್ದೇಶಕರು ಕೆಲವು ಸಭೆಗಳಲ್ಲಿ ಭಾಗವಹಿಸಿ ಮತ ಚಲಾಯಿಸುವ ಅಧಿಕಾರ ಹೊಂದಿದ್ದರೂ ಹಣಕಾಸು ಪೂರೈಸುವ ಸಂಸ್ಥೆ ಮತ್ತು ಸರ್ಕಾರದಿಂದ ನಾಮ ನಿರ್ದೇಶನ ಹೊಂದಿದ ನಿರ್ದೇಶಕರು ಪದಾಧಿಕಾರಿಗಳ ಆಯ್ಕೆ ಅಥವಾ ಅವಿಶ್ವಾಸ ನಿರ್ಣಯ ಮಂಡನೆ ವಿಷಯದಲ್ಲಿ ಭಾಗವಹಿಸಲು ಅರ್ಹರಲ್ಲ. ಆದ್ದರಿಂದ ಅಂತಹ ನಿರ್ದೇಶಕರಿಗೆ ಅವಿಶ್ವಾಸ ನಿರ್ಣಯ ಮಂಡಿಸಿದ ಸಭೆಯಲ್ಲಿ ಭಾಗವಹಿಸಲು ನೋಟೀಸ್ ನೀಡಲು ಅವಶ್ಯಕವಿಲ್ಲ ಎಂದು ತೀರ್ಮಾನಿಸಿತು. (1990 Indlaw SC 715, (1990) 3 SCC 634, AIR 1990 SC 1023)

20. ಮಹಾರಾಷ್ಟ್ರ ಕಾಯಿದೆಯಲ್ಲಿ ಒಂದು ಜಿಲ್ಲಾ ಸಹಕಾರ ಸಂಘದ ಆಡಳಿತ ಮಂಡಳಿ ರಚನೆಗೆ ಚುನಾವಣೆ ನಡೆದಾಗ, ಸಾಲ ಪಡೆದ ಒಬ್ಬ ಆಯ್ಕೆಯಾದ ನಿರ್ದೇಶಕ, ಅವನು ಪಡೆದ ಸಾಲದ ಒಂದು ಅಥವಾ ಹೆಚ್ಚಿನ ಕಂತುಗಳ ಮರು ಪಾವತಿ ಮಾಡದೇ ಇದ್ದರೆ, ಅವನ್ನು ಕಲಂ 73 ಎಫ್ ಎಫ್ ಅನ್ವಯ ಅನರ್ಹತೆಗೊಳಗಾಗುತ್ತಾನೆ. ಅಂದರೆ ಅವನ್ನು ಆಯ್ಕೆಯಾದ ದಿನಾಂಕದಿಂದಲೇ ಅನರ್ಹತೆಗೊಳಗಾಗಿ, ಆ ಸ್ಥಾನ ಖಾಲಿಯಾಗಿದೆ ಎಂದು ಭಾವಿಸತಕ್ಕದ್ದು. (1991 Indlaw SC 539, (1991) 2 SCC 423)

21. ಮಹಾರಾಷ್ಟ್ರ ಕಾಯಿದೆಯಲ್ಲಿನ ಒಂದು ಸಹಕಾರ ಸಂಘದ ನೌಕರರಿಗೆ ಬೋನಸ್ ಪಾವತಿ ಮಾಡುವಾಗ, ಸಂಘವು ಹೂಡಿದ ಸಂಪನ್ಮೂಲವನ್ನು ಪರಿಗಣಿಸಿ ನಿರ್ಧರಿಸಬೇಕು. ಉಚ್ಚನ್ಯಾಯಾಲಯ 75–76 ರಿಂದ 77–78 ರವರೆವಿಗೆ ಶೇ.20% ರಂತೆ ಬೋನಸ್ ಪಾವತಿಸಲು ಆದೇಶಿಸಿರುವುದು ತಪ್ಪು. 75–76ನೇ ವರ್ಷಕ್ಕೆ ಶೇ.18.78% ದರದಲ್ಲಿ ಮತ್ತು 76–77 ಮತ್ತು 77–78

ಕ್ಕೆ ಶೇ.20% ರಷ್ಟು ಬೋನಸ್ ಪಾವತಿಸಲು, ಉಚ್ಚನ್ಯಾಯಾಲಯದ ಆದೇಶವನ್ನು ಮಾರ್ಪಡಿಸಿ ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. (1989 Indlaw SC 554, (1989) 3 SCC 89, AIR 1989 SC 1398)

22. ಗುಜರಾತ್ ಕಾಯಿದೆಯಲ್ಲಿ ಒಂದು ಹತ್ತಿ ಗಿರಣಿ ಪ್ರಕರಣದಲ್ಲಿ ಸದಸ್ಯರಿಂದ ಹತ್ತಿಯನ್ನು ಸಂಗ್ರಹಿಸಿ, ಅದನ್ನು ಸಂಸ್ಕರಿಸಿದ ನಂತರ ಮಾರಾಟ ಮಾಡಿದರೆ, ಅದು ವ್ಯವಸಾಯ ಉತ್ಪನ್ನವಾಗುವುದಿಲ್ಲವೆಂಬ ಆದಾಯ ತೆರಿಗೆ ಆಯುಕ್ತರ ತಕರಾರಲ್ಲ ಶ್ರೇಷ್ಠ ನ್ಯಾಯಾಲಯ ಪರಿಶೀಲಿಸಿ, ಕಾಯಿದೆ ಕಲಂ.81(1) ಕ್ಕೆ ವಿನಾಯ್ತಿ ನೀಡಲು ಅವಕಾಶ ವಿದ್ದು, ಸಂಸ್ಕರಿಸಿದ ನಂತರದ ಪರಂತು ಅನ್ವಯವಾಗದು. ಎಂದರೆ ವಿನಾಯ್ತಿ ನೀಡಿರುವುದು ಅನ್ವಯವಾಗುತ್ತದೆ. ಪರಂತುಕವಲ್ಲ ಎಂದು ತೀರ್ಮಾನಿಸಿತು. (1989 Indlaw SC 596, (1989) 2 SCC 679, AIR 1989 SC 1493)

23. ಉತ್ತರಪ್ರದೇಶ ಕಾಯಿದೆಯಡಿ ಒಂದು ಮಹಾಮಂಡಳ ಕಲ್ಲಿದ್ದಲು, ಸಕ್ಕರೆ ಮತ್ತಿತರ ವಸ್ತುಗಳ ವಿತರಣೆಯನ್ನು ಸದಸ್ಯ ಸಂಘಗಳ ಮುಖಾಂತರ ನಡೆಸಿದಾಗ, ಭದ್ರತೆಗಾಗಿ ನೀಡಿದ ಠೇವಣಿ ಮತ್ತು ಅದರ ಮೇಲೆ ಸ್ವೀಕರಿಸಿದ ಬಡ್ಡಿ ಕಲಂ 14(3) ರಡಿ ವಿನಾಯ್ತಿ ಇಲ್ಲ. ಆದರೆ ಸದಸ್ಯ ಸಂಘಗಳ ಈ ಠೇವಣಿ ಮೇಲೆ ಸ್ವೀಕರಿಸಿದ ಬಡ್ಡಿ ಕಲಂ 14(3)(iii) ರಡಿ ವಿನಾಯ್ತಿ ಇದೆ. (1989 Indlaw SC 749, (1989) 1 SCC 747, AIR 1989 SC 915)

24. ಉತ್ತರಪ್ರದೇಶ ಕಾಯಿದೆಯಡಿ ಒಂದು ಸಕ್ಕರೆ ಕಾರ್ಖಾನೆ ತನ್ನ ಉಪನಿಯಮಗಳನ್ನು ಪೂರ್ವಾನ್ವಯವಾಗುವಂತೆ ತಿದ್ದುಪಡಿ ಮಾಡಿ, ಸದಸ್ಯರಿಂದ ಸ್ವೀಕರಿಸಿದ ಕಬ್ಬಿನ ದರದಲ್ಲಿ ನಿರ್ಧಿಷ್ಟ ಪಡಿಸಿದ ಹಣವನ್ನು ಮುರಿದು ಸರ್ಕಾರದ ಪಾಲು ಬಂಡವಾಳ/ಸಾಲ ಮರು ಪಾವತಿಗೆ ಉಪಯೋಗಿಸುವ ನಿಧಿಗೆ ಜಮಾ ಮಾಡಿದಾಗ, ಅದು ಕರ ನಿಗದಿ ಪಡಿಸುವಾಗ, ಅನ್ವಯವಾಗದು. ಅಂದರೆ ಉಪನಿಯಮಗಳ ತಿದ್ದುಪಡಿಯಿಂದ ಆದಾಯ ತೆರಿಗೆ ವಿನಾಯ್ತಿ ಪಡೆಯಲಾಗದು. (1988 Indlaw SC 492, (1988) 3 SCC 553, AIR 1988 SC 1263)

25. ಉತ್ತರಪ್ರದೇಶ ಕಾಯಿದೆಯಲ್ಲಿ ಒಂದು ಒಕ್ಕೂಟದ ನೌಕರರ ಶಿಸ್ತು ಕ್ರಮಕ್ಕೆ ಒಳಪಡಿಸಲು ಸಂಘಗಳ ಸೇವಾ ಮಂಡಳಿ ರಚಿಸಿದಾಗ, ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಿಲ್ಲ. ನೌಕರರು ಮೇಲ್ಮನವಿ ಸಲ್ಲಿಸಲು ಉತ್ತರಪ್ರದೇಶ ಸಹಕಾರ ಕಾಯಿದೆಯಲ್ಲಿ, ಸರ್ಕಾರದ ಕಾನೂನು ಇಲಾಖೆ ಕಾರ್ಯದರ್ಶಿ ಮೇಲ್ಮನವಿ ಪ್ರಾಧಿಕರಣವೆಂದು ತೀರ್ಮಾನಿಸಬೇಕು ಎಂದು ಅರ್ಜಿದಾರರಿಗೆ ಪರಿಹಾರವನ್ನು ಶ್ರೇಷ್ಠ ನ್ಯಾಯಾಲಯ ನೀಡಿತು. (1987 Indlaw SC 28454, (1989) 2 SCC (supp) 498)

26. ಗುಜರಾತ್ ಕಾಯಿದೆಯಲ್ಲಿ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯನನ್ನು ಮಂಡಳಿ ತೀರ್ಮಾನದಂತೆ ತೆಗೆದುಹಾಕಿದ್ದು ಅದಕ್ಕೆ ನಿಬಂಧಕರು ಅನುಮೋದನೆ ನೀಡಿದ ನಂತರ, ಪ್ರತ್ಯೇಕ ಪ್ರಕರಣವನ್ನು ತೆಗೆದು ಹಾಕಿದ ಸದಸ್ಯ ಪ್ರಶ್ನಿಸಿದಾಗ, ಅಂತಹ ತೀರ್ಮಾನ ಮಾಡುವ ಪುನರ್‌ವಿಮರ್ಷಾ ಅರ್ಜಿಯ ಮೇಲೆ, ನ್ಯಾಯಾಧಿಕರಣ ಪುನರ್ ಪರಿಶೀಲಿಸಲು ನಿಬಂಧಕರಿಗೆ ಮರು ವರ್ಗಾವಣೆ ಮಾಡಿತು. ಅದನ್ನು ಪ್ರಶ್ನಿಸಿ ರಿಟ್ ದಾಖಲಿಸಿದಾಗ, ನಿಬಂಧಕರು ಒಮ್ಮೆ ತೆಗೆದುಕೊಂಡ ತೀರ್ಮಾನವನ್ನು ಪುನರ್‌ಪರಿಶೀಲನೆ ಮಾಡುವ ಅಧಿಕಾರ ಇಲ್ಲವೆಂದು ತೀರ್ಮಾನಿಸಿತು. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯದ ತೀರ್ಮಾನವನ್ನು ಎತ್ತಿ ಹಿಡಿದು, ನಿಬಂಧಕರು ಒಮ್ಮೆ ತೀರ್ಮಾನ ನೀಡಿದ ನಂತರ, ಪುನರ್‌ಪರಿಶೀಲನೆ ಮಾಡುವ ಅಧಿಕಾರ ಇಲ್ಲವೆಂದು ತೀರ್ಮಾನಿಸಿತು. (1987 Indlaw SC 28422, (1987) 3 SCC 425, AIR 1987 SC 1513)

27. ಉತ್ತರಪ್ರದೇಶ ಕಾಯಿದೆಯಲ್ಲಿ ಒಂದು ಸಂಘದಲ್ಲಿ ಹಣ ದುರುಪಯೋಗವಾದಾಗ, ಪ್ರಕರಣ ದಾಖಲಿಸಿ ಜವಾಬ್ದಾರನೆಂದು ತೀರ್ಮಾನಿಸಿತು. ಇದನ್ನು ಪ್ರಶ್ನಿಸಿದಾಗ, ಸಾಕಷ್ಟು ಅವಕಾಶ ನೀಡಿಲ್ಲವೆಂದು, ಮತ್ತು ಅವನಿಗೆ ಅವನ ಹೇಳಿಕೆ ಮತ್ತು ದಾಖಲೆ ಸಲ್ಲಿಸಲು ಅವಕಾಶ ನೀಡದೇ ಇದುದ್ದನ್ನು ಗಮನಿಸಿ ಮತ್ತು ಉಪನಿಬಂಧಕರು ವಸೂಲಾತಿ ಆದೇಶ ನೀಡಬೇಕೆಂದು ತೀರ್ಮಾನಿಸಿದಂತೆ ಕಾಣುತ್ತಿದ್ದುದರಿಂದ, ಅದು ಸರಿಯಲ್ಲ ಮತ್ತು ಸಿವಿಲ್ ನ್ಯಾಯಾಲಯದ ಅಧಿಕಾರವಿಲ್ಲವೆಂಬುದಕ್ಕೆ ಸ್ಪಷ್ಟವಾದ ಕಾನೂನಿನಲ್ಲಿ ನಿಷಿದ್ಧತೆ ಇಲ್ಲದೇ ಇದ್ದರೆ, ಅಂತಹ ಪ್ರಕರಣಗಳನ್ನು ವಿಚಾರಣೆ ಮಾಡಲು ಸಿವಿಲ್ ನ್ಯಾಯಾಲಯಕ್ಕೆ ಅಧಿಕಾರ ಇದೆ ಮತ್ತು ಇದು ನ್ಯಾಯಿತತ್ವಕ್ಕೆ ಪೂರಕ ವಾಗದೆ. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಡಿಕ್ರಿ ನೀಡಿರುವುದನ್ನು ಸಮರ್ಥನೆ ಮತ್ತು ಅವಶ್ಯಕವಿದ್ದರೆ ಮತ್ತೊಂದು ಪ್ರಕರಣ ದಾಖಲಿಸಿ ಆದೇಶ ಪಡೆಯಬಹುದೆಂದು ತೀರ್ಮಾನಿಸಿತು. (1969 Indlaw SC 492, (1969) 3 SCC 694)

28. ಬಾಂಬೆ ಸಹಕಾರ ಕಾಯಿದೆಯಡಿ ಒಂದು ಸಹಕಾರ ಸಂಘದ ನೌಕರನಿಗೆ ಗ್ರಾಚುಯಿಟಿ ಪಾವತಿ ಬಗ್ಗೆ ಹಳೆ ನಿಯಮಗಳಂತೆ ಕೊಡಬೇಕಾಗದ್ದ ಹೊಸ ನಿಯಮಗಳನ್ನು ರೂಪಿಸಿದಾಗ, ಹಳೆ ನಿಯಮಗಳನ್ನು ರದ್ದು ಪಡಿಸಿದ್ದರೂ, ಆ ಹಳೆಯ ನಿಯಮಗಳನ್ವಯವೇ ಪಾವತಿ ಮಾಡತಕ್ಕದ್ದು. ಅಂದರೆ ಆ ನೌಕರ ನಿವೃತ್ತಿ ಹೊಂದಿದಾಗ ಯಾವುದೇ ನಿಯಮಗಳು ಜಾರಿಯಲ್ಲಿ ಇಲ್ಲದೇ ಇದ್ದರೂ, ಹಳೆ ನಿಯಮಗಳು ಅನ್ವಯವಾಗತಕ್ಕದ್ದು. (1969 Indlaw SC 99, (1969) 2 SCC 713, AIR 1970 SC 1966)

29. ಮಹಾರಾಷ್ಟ್ರ ಕಾಯಿದೆಯಲ್ಲಿನ ಒಂದು ಸಂಘದ ಅವ್ಯವಹಾರದ ಮೇಲೆ ಕ್ರಿಮಿನಲ್ ಮೊಕದಮ್ಮೆ ದಾಖಲಿಸಲು ನಿಬಂಧಕರ ಪೂರ್ವಾನುಮತಿ ಅವಶ್ಯಕ. ಏಕೆಂದರೆ ನಿಬಂಧಕರ ಅಧಿಕಾರವನ್ನು ಸಹಕಾರ ಇಲಾಖೆ ಅಧಿಕಾರಿಗಳಿಗೆ ವರ್ಗಾಯಿಸಿದಾಗ, ಆ ಅಧಿಕಾರ ಮೂಲ ಅಧಿಕಾರವಲ್ಲ ನಿಬಂಧಕರ ಅಧಿಕಾರವನ್ನು ಕಾಯಿದೆಯಲ್ಲಿನ ಅಧಿಕಾರ ಚಲಾಯಿಸುತ್ತಾರೆ, ಅದರೆ ಅದರ ಅಧಿಕಾರವನ್ನು ಬೇರೆ ಅಧಿಕಾರಿಗಳಿಗೆ ವರ್ಗಾಯಿಸಿದಾಗ ಅದು ಮೂಲ ಅಧಿಕಾರವಲ್ಲ. ಸಹಕಾರ ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಕೆಲವು ಸಿವಿಲ್ ನ್ಯಾಯಾಲಯದ ಅಧಿಕಾರ ಚಲಾಯಿಸಿದರೂ, ಅದನ್ನು ನ್ಯಯಾಲಯ ಎಂದು ಹೇಳಲಾಗದು. ನ್ಯಾಯಾಲಯ ಎಂದರೆ ಸಿವಿಲ್ ಕಂದಾಯ ಮತ್ತು ಕ್ರಿಮಿನಲ್ ನ್ಯಾಯಾಲಯಗಳನ್ನು "ನ್ಯಾಯಾಲಯ" ಎಂದು ಕರೆಯಬಹುದು. ಆದರೆ ನಿಬಂಧಕರು ಮತ್ತು ಅವರ ಅಧಿಕಾರ ಚಲಾಯಿಸುವ ಪ್ರಾಧಿಕಾರಗಳು ನ್ಯಾಯಾಲಯವಾಗುವುದಿಲ್ಲ. (ನ್ಯಾಯಾಧಿಕರಣವೂ ಸೇರಿ). ಈ ಪ್ರಾಧಿಕಾರಗಳು ಪ್ರತಿಜ್ಞೆ ವಿಧಿ ನೀಡಿ ಹೇಳಿಕೆ ಪಡೆದರೂ, ಅವು ನ್ಯಾಯಾಲಯವಲ್ಲ. ಮಹಾರಾಷ್ಟ್ರ ಕಾಯಿದೆ ಕಲಂ.146(ಪಿ) ಮತ್ತು 148(3) ಮತ್ತು ಐಪಿಸಿ 465 ರಲ್ಲಿ ಪ್ರಕರಣ ದಾಖಲಿಸಲು ನಿಬಂಧಕರ ಪೂರ್ವಾನುಮತಿ ಅವಶ್ಯಕ. (1968 Indlaw SC 343, (1969) 1 SCC 167, AIR 1969 SC 724)

30. ಮಹಾರಾಷ್ಟ್ರ ಕಾಯಿದೆಯಲ್ಲಿ ಒಂದು ಸಂಘ, ಒಂದು ಆಸ್ತಿಯನ್ನು ಖರೀದಿ ಮಾಡಿಕೊಂಡ ನಂತರ, ಮಾರಾಟ ಮಾಡಿದ ವ್ಯಕ್ತಿ ಒಪ್ಪಂದದಂತೆ ಹಣ ಪಾವತಿ ಮಾಡದೇ ಇದ್ದಾಗ ಅಂತಹ ಪ್ರಕರಣ ನಿಬಂಧಕರ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ. ಈ ವಿಷಯ ಸಂಘದ ವ್ಯವಹಾರದ ಒಂದು ಭಾಗವಲ್ಲ. ಮಾರಾಟ ಮಾಡಿದ ವ್ಯಕ್ತಿ ಸಂಘದ ಸದಸ್ಯನಾಗಿದ್ದರೂ, ಅದನು ಮಾರಿದ ಆಸ್ತಿ ಸಂಘದ ಸದಸ್ಯನಾಗಿ ಅಲ್ಲ. ಆದ್ದರಿಂದ, ಈ ವಿವಾದ ನಿಬಂಧಕರ ವ್ಯಾಪ್ತಿಗೆ ಬರುವುದಿಲ್ಲ. (1968 Indlaw SC 309, (1969) 1 SCR 887, AIR 1969 SC 1320)

31. ಮಹಾರಾಷ್ಟ್ರ ಕಾಯಿದೆಯ ಒಂದು ಸಹಕಾರ ಬ್ಯಾಂಕ್ ತನ್ನ ಹಣ ಸರ್ಕಾರದಲ್ಲಿ ಹೂಡಿಕೆ

ಮಾಡಿದ ಶಾಸನಬದ್ಧ ಹೂಡಿಕೆಗಳು. ಆದಾಯ ತೆರಿಗೆ ಆಯುಕ್ತರು ನೀಡಿದ ಸುತ್ತೋಲೆಯಂತೆ ವಿನಾಯ್ತಿ ಪಡೆಯಲು ಅರ್ಹರು ಎಂದು ಉಚ್ಚನ್ಯಾಯಾಲಯದ ತೀರ್ಮಾನವನ್ನು ಶ್ರೇಷ್ಠ ನ್ಯಾಯಾಲಯ ಕಿತ್ತುಹಾಕಿತು. ಬ್ಯಾಂಕ್‌ನ ವ್ಯವಹಾರದಲ್ಲಿ ಬಂದ ವೆಚ್ಚಕೆ ವಿನಾಯ್ತಿ ಇಲ್ಲವೆಂದು ತೀರ್ಮಾನಿಸಿತು. (1967 Indlaw SC 360, (1968) 70 ITR 86)

32. ಮದ್ರಾಸ್ ಕಾಯಿದೆಯಡಿ ಒಂದು ಸಹಕಾರ ಅಡಮಾನ ಬ್ಯಾಂಕ್ ಪ್ರಕರಣದಲ್ಲಿ ಆದಾಯ ತೆರಿಗೆ ಪಾವತಿ ಬಗ್ಗೆ ಉಚ್ಚನ್ಯಾಯಾಲಯವು ದುಡಿಯುವ ಬಂಡವಾಳದಲ್ಲಿ, ವ್ಯವಹಾರದಿಂದ ಒಂದು ಬಡ್ಡಿ ಮತ್ತು ಸರ್ಕಾರದಲ್ಲಿ ಭದ್ರತೆಗಾಗಿ ಹೂಡಿದ ಹಣದಿಂದ ಬಂದ ಬಡ್ಡಿಯ ಆಧಾರದ ಮೇಲೆ ನಿರ್ಧರಿಸಬೇಕು. ಆದಾಯ ತೆರಿಗೆ ಕಾಯಿದೆ ಕಲಂ 4 (3) ರಂತೆ ವಿನಾಯ್ತಿ ಇದೆ ಎಂದು ತೀರ್ಮಾನಿಸಿ, ಬಂದು ಬಡ್ಡಿ ಹಣ ರೂ.13,578/– ಆದಾಯ ತೆರಿಗೆ ಪಾವತಿಸಬೇಕೆಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (1967 Indlaw SC 239, AIR 1969 SC 55)

33. ಬಿಹಾರ ಮತ್ತು ಒರಿಸ್ಸಾ ಸಹಕಾರ ಕಾಯಿದೆಯಲ್ಲಿನ ಒಂದು ಪ್ರಕರಣದಲ್ಲಿ ಸಹಕಾರ ಇಲಾಖೆಯ ಸಹಾಯಕ ನಿಬಂಧಕರು, ಒಂದು ನ್ಯಾಯಾಲಯವೇ ಮತ್ತು ಆ ನ್ಯಾಯಾಲಯವು ಉಚ್ಚ/ಶ್ರೇಷ್ಠ ನ್ಯಾಯಾಲಯದ ಅಧೀನ ನ್ಯಾಯಾಲಯವೇ, ಎಂಬ ಬಗ್ಗೆ ನ್ಯಾಯಾಲಯ ನಿಂದನೆ ಪ್ರಕರಣವನ್ನು ತೀರ್ಮಾನಿಸಿದಾಗ, ವಿವಿಧ ಉಚ್ಚ ನ್ಯಾಯಾಲಯಗಳು ಏನೇ ತೀರ್ಪು ನೀಡಿದ್ದರೂ, ಈ ಪ್ರಕರಣದಲ್ಲಿ ನಿಬಂಧಕರ ನ್ಯಾಯಾಲಯದ ತೀರ್ಮಾನ ಉಲ್ಲಂಗಿಸಿದರೆ, ಅದು ನ್ಯಾಯಾಲಯ ನಿಂದನೆಯಾಗುತ್ತಿದೆ ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. ಈ ಪ್ರಕರಣದಲ್ಲಿ ಈ ಕೆಳಕಂಡ ತೀರ್ಪುಗಳನ್ನು ಪರಿಶೀಲಿಸಿತು. (1) 1955 Indlaw SC 78 (2) (1952) 2 QB 413, 340 (3) 1909 (8) CLR 330, 357 (4) 1950 Indlaw SC 48 (5) 1955 Indlaw SC 76 (6) 1963 Indlaw Mum 52 (152) (7) 1951 Indlaw AU 20 (8) 1952 Indlaw Mad 171 (9) 1951 Indlaw PNH 58 (10) 1955 AIR Bomb 163 (11) 1956 AIR (All) 258 ಈ ಎಲ್ಲಾ ತೀರ್ಮಾನಗಳನ್ನು ವಿಂಗಡಿಸಿ, ಈ ಎಲ್ಲಾ ತೀರ್ಮಾನಗಳಲ್ಲಿ ಸಹಕಾರ ನ್ಯಾಯಾಲಯದ ಆದೇಶ ನ್ಯಾಯಾಲಯ ನಿಂದನೆ ಕಾಯಿದೆಯಡಿ ಬರುವುದಿಲ್ಲ ಎಂಬುದಕ್ಕೆ ಕಾರಣಗಳನ್ನು ನೀಡಿಲ್ಲ. ಶ್ರೇಷ್ಠ ನ್ಯಾಯಾಲಯ ಈ ಮೇಲ್ಕಂಡ ತೀರ್ಮಾನಗಳನ್ನು ಸಹಕಾರ ನ್ಯಾಯಾಲಯ ಒಂದು ನ್ಯಾಯಾಲಯ ಅಲ್ಲವೆಂಬುದಕ್ಕೆ ಯಾವುದೇ ಕಾರಣ ನೀಡಿಲ್ಲ. ಈ ಪ್ರಕರಣದಲ್ಲಿ ಸಹಕಾರ ನಿಬಂಧಕರು, ನಿಬಂಧಕರ ಎಲ್ಲಾ ಅಧಿಕಾರವನ್ನು ಹೊಂದಿದ್ದ, ನಿಬಂಧಕರ ಅಧಿಕಾರವನ್ನು ವರ್ಗಾಯಿಸುವ ಆದೇಶದಲ್ಲಿ ನಿಬಂಧಕರ ಎಲ್ಲಾ ಅಧಿಕಾರವನ್ನು ಹೊಂದಿರುವುದನ್ನು ಸ್ಪಷ್ಟ ಪಡಿಸುತ್ತದೆ. ಮತ್ತು ನಿಯಮ 68(10) ರಲ್ಲಿ ನಿಬಂಧಕರ ಮುಂದೆ ವಕೀಲರು ಹಾಜರಾಗಲು ಅವಕಾಶ ಕಲ್ಪಿಸಿದ್ದ ಇದರಿಂದ ಸಹಾಯಕ ನಿಬಂಧಕರು ನ್ಯಾಯಾಲಯ ಒಂದು ನ್ಯಾಯಾಲಯವೆಂದು ತೀರ್ಮಾನಿಸಬೇಕು. ಇದರ ಜೊತೆಗೆ ಉಚ್ಚನ್ಯಾಯಾಲಯದ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಇದೆಯೇ ಎಂಬುದರ ಬಗ್ಗೆ ಸಂವಿದಾನದ ಅನುಚ್ಚೇದ 235 (ಅದ್ಯಾಯ VI) ರಲ್ಲಿ ಜಿಲ್ಲಾ ನ್ಯಾಯಾಲಯ ಮತ್ತು ಅದರ ಕೆಳ ನ್ಯಾಯಾಲಯ ಎಂದು ತಿಳಿಸಿದ್ದು, ಅದರಲ್ಲಿ ಉಚ್ಚನ್ಯಾಯಾಲಯಗಳಿಗೆ ನ್ಯಾಯಾಲಯ ನಿಂದನೆ ಕಾಯಿದೆಯಲ್ಲಿ ಅಧಿಕಾರ ನೀಡಿದ್ದ ನ್ಯಾಯಾಲಯ ಎಂಬ ಅರ್ಥ ಭಡ್ತಿ ಮತ್ತು ವರ್ಗಾವಣೆಗೆ ಸಂಬಂಧಪಟ್ಟಂತೆ ಇದ್ದ, ಕಾನೂನಿನ ವಿಮರ್ಷೆ ಮಾಡುವಾಗಿನ ಅಧಿಕಾರಕ್ಕೆ ಸಂಬಂದಿಸಿದ್ದಲ್ಲ. ಈ ಪ್ರಕರಣದಲ್ಲಿ ಉಚ್ಚನ್ಯಾಯಾಲಯದ ನಿಯಂತ್ರಣ ಮತ್ತು ಮೇಲ್ವಿಚಾರಣೆ ಯಾವುದೇ ಪ್ರಾಧಿಕಾರದ ಆದೇಶದ ಮೇಲೆ ಮಧ್ಯ ಪ್ರವೇಶ ಮಾಡಲು ಅವಕಾಶವಿದ್ದು, ಅದು ನ್ಯಾಯಾಲಯದ ನಿಂದನೆ ವ್ಯಾಪ್ತಿಗೆ ಬರುತ್ತದೆ ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (1967 Indlaw SC 456, AIR

1967 SC 1494)

34. ರಾಜಾಸ್ತಾನ ಕಾಯಿದೆಯಲ್ಲಿ ಒಬ್ಬ ನೌಕರನ ಮೇಲೆ ಶಿಸ್ತು ಕ್ರಮ ಜರುಗಿಸಿ, ವಜಾ ಮಾಡಿದ ನಂತರ, ನ್ಯಾಯಾಧಿಕರಣ ಮರು ನೇಮಕಾತಿಗೆ ಆದೇಶಿಸಿತು. ಅದರ ಮೇಲೆ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ವಿಚಾರಣೆಗೆ ಗೈರು ಹಾಜರಿದ್ದರೆಂದು ಪ್ರಕರಣ ತೀರ್ಮಾನಿಸಿರುವುದು ಸರಿಯಲ್ಲವೆಂದು ಅಭಿಪ್ರಾಯ ವ್ಯಕ್ತ ಪಡಿಸಿದರು ಮತ್ತು ವಕೀಲರು, ಅದೇ ನೌಕರನ ಮೇಲೆ ಮರು ವಿಚಾರಣೆ ಮಾಡಿ, ಪರಿಹಾರದ ಬಗ್ಗೆ ನಡವಳಿಕೆಗಳು ನಡೆಯುತ್ತಿರುವುದರಿಂದ, ಆದೇಶ ಹೊರಡಿಸುವ ಅವಶ್ಯಕತೆ ಇಲ್ಲವೆಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (1967 Indlaw SC 16, AIR 1967 SC 1182)

35. ಉತ್ತರಪ್ರದೇಶ ಸಹಕಾರ ಮಹಾಮಂಡಳ ಒಂದು ಖಾಸಗಿ ಸಂಸ್ಥೆಯ ಜೊತೆ ಒಪ್ಪಂದ ಮಾಡಿಕೊಂಡು (ಮೂರು ವರ್ಷದ ಅವಧಿಗೆ) ಈ ಕೆಳಕಂಡಂತೆ ಉಲ್ಲೇಖಿಸಿತು. "ಈ ಒಪ್ಪಂದದಲ್ಲಿ ಶರತ್ತುಗಳನ್ನು ಜಾರಿ ಮಾಡುವಾಗ ವಿವಾದ ಏರ್ಪಟ್ಟರೆ, ಅದನ್ನು ಸಹಕಾರ ಸಂಘಗಳ ಕಾಯಿದೆ 1912 ರನ್ವಯ ಪರಿಹಾರ (ದಾವಾ) ಪಡೆಯಲು ಉಲ್ಲೇಖಿಸಲಾಯಿತು." ಮೂರು ವರ್ಷಗಳ ನಂತರ ಈ ಒಪ್ಪಂದವನ್ನು ರದ್ದು ಪಡಿಸಿ ಮಹಾಮಂಡಳ ಆದೇಶಿಸಿತು. ಇದನ್ನು ಪ್ರಶ್ನಿಸಿ ಒಪ್ಪಂದದ 28ನೇ ವಿಧಿ 1912ರ ಸಹಕಾರ ಕಾಯಿದೆಯಂತೆಯಲ್ಲ, ಇದು ಮಧ್ಯಸ್ತಿಗಾರರ ಕಾಯಿದೆ 1940 ರಂತೆ ನಡೆಯಬೇಕೆಂದು ವಾದಿಸಿತು. (ಕಲಂ 34) ಈ ವಾದವನ್ನು ಕೆಳ ನ್ಯಾಯಾಲಯ ಒಪ್ಪಿ ವಿಚಾರಣೆ ನಡೆಸುವಾಗ, ಮೇಲ್ಮನವಿ ಪ್ರಾಧಿಕಾರ ಅಂದರೆ ಉಚ್ಚನ್ಯಾಯಾಲಯ, ಕೆಳ ನ್ಯಾಯಾಲಯ ತನ್ನ ಆದೇಶದಲ್ಲಿ ಪರಿಶೀಲನೆ ನಡೆಸಿ, ತನ್ನ ವಿವೇಚನೆಯಂತೆ ಆದೇಶಿಸಿದ ಮೇಲೆ, ಸಾಮಾನ್ಯವಾಗಿ ಮಧ್ಯ ಪ್ರವೇಶ ಮಾಡಬಾರದು. ಮೇಲ್ಮನವಿ ಪ್ರಾಧಿಕಾರಗಳು ಈ ವಿವೇಚನೆಯನ್ನು ತನ್ನ ಮಟ್ಟದಲ್ಲಿ ಮತ್ತೋಮ್ಮೆ ಚಲಾಯಿಸಬಾರದು. ಇದಕ್ಕಾಗಿ ಕರ್ನಾಟಕದ ತೀರ್ಪುಗಳನ್ನು ಉಲ್ಲೇಖಿಸಿದೆ. (1) 1976 (2) MLJ 401 (3) AIR 1971 MYS 308 (4) 1971 (1) KLJ 317 (5) 1970 Indlaw Kar 104 (6) AIR 1971 Mys 217 (7) 1971 (1) KLJ 245 ಶ್ರೇಷ್ಠ ನ್ಯಾಯಾಲಯ, ತಡೆಯಾಜ್ಞೆ ಕೋರಿ (ಕೆಳ ನ್ಯಾಯಾಲಯದ ಆದೇಶಕ್ಕೆ) ಕೇಳಿದ್ದ ಪರಿಹಾರವನ್ನು ಉಚ್ಚನ್ಯಾಯಾಲಯ ಮಧ್ಯಪ್ರವೇಶ ಮಾಡಲು ಸಕಾರಣಗಳನ್ನು ನೀಡಿಲ್ಲ ಮತ್ತು ಮಧ್ಯಪ್ರವೇಶ ಮಾಡದೇ ಇರುವುದು ಸರಿ ಎಂದು ಪ್ರಕರಣವನ್ನು ವಜಾ ಮಾಡಿತು. (1966 Indlaw SC 90, AIR 1967 SC 249)

36. ಮದ್ರಾಸ್ ಸಹಕಾರ ಕಾಯಿದೆಯು ಒಂದು ಗೃಹ ನಿರ್ಮಾಣ ಸಹಕಾರ ಸಂಘ ತನ್ನ ಬಡಾವಣೆಯಲ್ಲಿ, ರಸ್ತೆ, ಆಟದ ಮೈದಾನ, ಉದ್ಯಾನವನ ಇತ್ಯಾದಿ ಸೌಲಭ್ಯಗಳನ್ನು ನಿರ್ಮಿಸಿದ್ದು, ಅವುಗಳ ನಿರ್ವಹಣೆಯನ್ನು ಗ್ರಾಮ ಪಂಚಾಯಿತಿಗೆ (ಹೊಸದಾಗಿ ಸೃಷ್ಟಿಯಾದ) ವರ್ಗಾಯಿಸಲು ತೀರ್ಮಾನಿಸಿತು. ಸಹಕಾರ ಸಂಘಕ್ಕೆ ಹೊಸದಾಗಿ ಚುನಾವಣೆ ನಡೆದು, ಮಂಡಳಿ ಅಸ್ತಿತ್ವಕ್ಕೆ ಬಂದ ನಂತರ, ಹಿಂದಿನ ಸಮಿತಿ ತೀರ್ಮಾನವನ್ನು ರದ್ದು ಪಡಿಸಿ, ಈ ನಿರ್ವಹಣೆ ಸಂಘವೇ ನಿರ್ವಹಿಸಲು ಮತ್ತು ಸಾರ್ವಜನಿಕರು ಈ ಸೌಲಭ್ಯ ಅನುಭವಿಸಲು ಅಧಿಕಾರವಿಲ್ಲವೆಂದು ತೀರ್ಮಾನಿಸಿತು. ಈ ತೀರ್ಮಾನವನ್ನು ಗ್ರಾಮ ಪಂಚಾಯಿತಿ ಪ್ರಶ್ನಿಸಿದಾಗ ಉಚ್ಚನ್ಯಾಯಾಲಯ ಭಾಗಶಃ ಒಪ್ಪಿ ರಸ್ತೆಗಳು ಮಾತ್ರ ಪಂಚಾಯಿತಿಗೆ ನಿರ್ವಹಣೆ ಮಾಡಲು ಆದೇಶಿಸಿತು. ಇದನ್ನು ಪ್ರಶ್ನಿಸಿದಾಗ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳ ವಾಸದ ಬಡಾವಣೆ ನಿರ್ಮಾಣ ಮಾಡುವಾಗ ಶಾಲೆ, ಮಾರುಕಟ್ಟೆ, ಸಿನಿಮಾ ಮಂದಿರ, ಆಸ್ಪತ್ರೆ, ಕ್ಲಬ್, ಪೂಜಾ ಸ್ಥಳಗಳು ಇತ್ಯಾದಿಗಳನ್ನು ನಿರ್ಮಿಸಿ, ನಿರ್ವಹಿಸಲು ಯೋಜನೆಯಲ್ಲಿ ಅವಕಾಶ ಇರುವುದರಿಂದ, ಸಹಕಾರ ಸಂಘದ ಅಧಿಕಾರ ಎಂಬ ವಾದ ಒಪ್ಪಲಾಗದು. ಏಕೆಂದರೆ ಪಂಚಾಯಿತ್ ಕಾಯಿದೆ ಕಲಂ.56 ರಲ್ಲಿ ಸಾರ್ವಜನಿಕ ಸೇವೆಗಳನ್ನು

ನಿರ್ವಹಣೆ ಮಾಡುವ ಜವಾಬ್ದಾರಿ ಪಂಚಾಯಿತಿಗೆ ಇದೆ, "ಯಾರೇ ಈ ಮೂಲ ಸೌಕರ್ಯ ನಿರ್ಮಾಣ ಮಾಡಿದ್ದರೂ", ಎಂದಿದ್ದರೂ. ಎಂದಿರುವುದರಿಂದ ಪಂಚಾಯಿತಿಗೆ ಅಧಿಕಾರ ಇದೆ. ಆದ್ದರಿಂದ ಉಚ್ಚನ್ಯಾಯಾಲಯದ ಆದೇಶವನ್ನು ವಿಮರ್ಶಿಸುವ ಅವಶ್ಯಕತೆ ಇಲ್ಲ ಎಂದು ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. (1966 Indlaw SC 333, AIR 1966 SC 1807)

37. ಮಹಾರಾಷ್ಟ್ರ ಸಹಕಾರ ಕಾಯಿದೆಯಲ್ಲಿ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಪ್ರಕರಣದಲ್ಲಿ ಸದಸ್ಯತ್ವಕ್ಕೆ ಅರ್ಜಿಯನ್ನು ಗೃಹ ನಿರ್ಮಾಣ ಸಹಕಾರ ಸಂಘ ತಿರಸ್ಕರಿಸಿದಾಗ, ಜಿಲ್ಲಾ ಉಪನಿಬಂಧಕರು ಸದಸ್ಯತ್ವ ತಿರಸ್ಕರಿಸಿದ್ದು ತಪ್ಪು ಎಂದು ತೀರ್ಮಾನಿಸಿದರು. ಅದನ್ನು ಪ್ರಶ್ನಿಸಿ ರಾಜ್ಯ ಸರ್ಕಾರಕ್ಕೆ ಕಲಂ 23(3) ರನ್ವಯ ಪುನರ್ ವಿಮರ್ಷಿಸಲು ಅರ್ಜಿ ಸಲ್ಲಿಸಿದಾಗ, ಉಪನಿಬಂಧಕರ ಆದೇಶ ಅಂತಿಮವಾಗಿದ್ದು, ಅದನ್ನು ಪುನರ್ ವಿಮರ್ಷಿಸುವ ಅಧಿಕಾರ ಸರ್ಕಾರಕ್ಕೆ ಇಲ್ಲ ಎಂದು ಹಿಂಬರಹ ನೀಡಿದರು. ಇದನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯದಲ್ಲಿ ಸಂಘವು ಪ್ರಶ್ನಿಸಿದಾಗ, ಸಂಘದ ನಿಲುವು ಸರಿಯಾದುದಲ್ಲ ಮತ್ತು ಒಂದು ಸಹಕಾರ ಸಂಘ ಸದಸ್ಯರಿಗೆ ಸೌಲಭ್ಯ ಕಲ್ಪಿಸಲು ಇದ್ದ ಅದನ್ನು ಸ್ವಂತ ಲಾಭಕ್ಕೆ ಉಪಯೋಗಿಸಲಾಗದು ಎಂದು ವಜಾ ಮಾಡಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಸಹಕಾರಿ ಸಂಘಗಳ ಕಾಯಿದೆ ಕಲಂ 23 ರನ್ವಯ ನೀಡಿದ ಆದೇಶ ಕಲಂ 154 ರಡಿ ಪುನರ್ ಪರಿಶೀಲಿಸಬಹುದು ಎಂದು ತೀರ್ಮಾನಕ್ಕೆ ಬಂದು, ಸರ್ಕಾರ ಪುನರ್ ವಿಮರ್ಷಿಸಲು ಅಧಿಕಾರ ಇದೆ ಎಂದು ತೀರ್ಮಾನಿಸಿತು. (1966 Indlaw SC 385, AIR 1966 SC 1449)

38. ಬಾಂಬೆ ಸಹಕಾರ ಕಾಯಿದೆಯಡಿ ಒಂದು ಗೃಹ ನಿರ್ಮಾಣ ಸಹಕಾರ ಸಂಘ ಒಂದು ದೊಡ್ಡ ಜಮೀನನ್ನು ಗುತ್ತಿಗೆಗೆ ಪಡೆದು 17 ನಿವೇಶನಗಳನ್ನಾಗಿ ಪರಿವರ್ತಿಸಿ, ಮನೆ ನಿರ್ಮಿಸಲು ಒಪ್ಪಿಗೆ ಕೊಟ್ಟಿತು. ಆ ನಂತರ ಸದಸ್ಯರಿಗೆ ಸಾಲ ನೀಡಿ ಸಾಲದ ಕಂತಿನ ಜೊತೆ ಮಾಸಿಕ ನಿವೇಶನ ಬಾಡಿಗೆ ರು.1/– ನ್ನು ನೀಡಲು ಒಪ್ಪಂದ ಮಾಡಿಕೊಂಡಿತು. ಒಪ್ಪಂದದಂತೆ ಕಂತು ಪಾವತಿಸದೇ ಇದ್ದುದರಿಂದ ನಿಬಂಧಕರ ಮುಂದೆ ಅರ್ಜಿ ಸಲ್ಲಿಸಿ ಮೂವರು ಮಧ್ಯಸ್ತಿಗಾರರು ಬಹುಮತ ತೀರ್ಪನ್ನು ಸಂಘದ ಪರವಾಗಿ ನೀಡಿತು. ಇದನ್ನು ಪ್ರಶ್ನಿಸಿ ಮೇಲ್ಮನವಿ ಪ್ರಾಧಿಕರಣಕ್ಕೆ ಅರ್ಜಿ ಸಲ್ಲಿಸಿ, ಮಾಲೀಕ ಬಾಡಿಗೆದಾರ ಎಂದು ವಾದಿಸಿದ್ದನ್ನು ತಿರಸ್ಕರಿಸಿತು. ಆ ನಂತರ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಬಾಡಿಗೆ ನಿಯಂತ್ರಣ ಕಾಯಿದೆಯಲ್ಲಿ, ಈ ವಿಷಯ ತೀರ್ಮಾನಿಸಬೇಕಾಗಿರುವುದರಿಂದ, ನಿಬಂಧಕರು ತೀರ್ಮಾನಿಸಿ ಆದೇಶಿಸಿರುವುದು ನಿಯಮ ಬಾಹಿರ ಎಂದು ತೀರ್ಮಾನಿಸಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಅದು ಪರಿಶೀಲಿಸಿದ ಅಂಶ ಅರ್ಜಿದಾರರು ಬಾಡಿಗೆದಾರರಲ್ಲ ಎಂಬ ವಿಷಯ ಪರಿಶೀಲಿಸಿ, ಅರ್ಜಿದಾರನನ್ನು ಬಾಡಿಗೆದಾರ ಎಂದು ಪರಿಗಣಿಸತಕ್ಕದ್ದಲ್ಲ, ಮತ್ತು ಈ ಹಿಂದೆ AIR 1958 SC 677 ನ ತೀರ್ಮಾನ ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂದು ಅರ್ಜಿಯನ್ನು ತಿರಸ್ಕರಿಸಿತು. ಅಂದರೆ ನಿಬಂಧಕರ ಕಾರ್ಯ ವ್ಯಾಪ್ತಿ ಇದೆ ಎಂದು ತೀರ್ಮಾನಿಸಿ, ಮನೆಯನ್ನು ಸಂಘದ ವಶಕ್ಕೆ ನೀಡಲು ಆದೇಶಿಸಿತು. (1963 Indlaw SC 190, AIR 1967 SC 369, 1964 Mah LJ 410)

39. ಬಿಹಾರ್ ಮತ್ತು ಒರಿಸ್ಸಾ ಕಾಯಿದೆಯಡಿ ಪಾಟ್ನಾ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಪ್ರಕರಣ ವಜಾ ಮಾಡಿದ್ದ ಮೇಲೆ, ವಿಶೇಷ ಮನವಿಯನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಸಲ್ಲಿಸಿದಾಗ, ಅರ್ಜಿದಾರ, ಸಹಕಾರ ಸಂಘದ ಸದಸ್ಯನಲ್ಲ ಮತ್ತು ಹಣಕಾಸು ಪೂರೈಸುವ ಸಂಸ್ಥೆಯೂ ಅಲ್ಲ. ಆದ್ದರಿಂದ ಕಾಯಿದೆ ಕಲಂ 48 ರಡಿ ಈ ಪ್ರಕರಣ ಬರುವುದಿಲ್ಲವೆಂದು ತೀರ್ಮಾನಿಸಿತು ಮತ್ತು ನಿಬಂಧಕರು ಪ್ರಕರಣವನ್ನು ವಿಚಾರಣೆಗೆ ಸ್ವೀಕರಿಸತಕ್ಕದ್ದಲ್ಲ. (1962 Indlaw SC 367, AIR 1962 SC

1367)

40. ಅಸಾಂ ಕಾಯಿದೆಯಲ್ಲಿ ಅಗತ್ಯ ವಸ್ತುಗಳ ವಿತರಣೆ ಕಾಯಿದೆ 1955 ರನ್ವಯ ಲೈಸನ್ಸ್‌ಗೆ ಅರ್ಜಿ ಹಾಕಿದ ಒಬ್ಬ ವ್ಯಕ್ತಿಗೆ ನೀಡಲಿಲ್ಲವೆಂದು ಪ್ರಶ್ನಿಸಿತ್ತು. ಈ ಮಧ್ಯೆ ಕಾಯಿದೆಗೆ ತಿದ್ದುಪಡಿ ತಂದು, ಸಹಕಾರ ಸಂಘಗಳಿಗೆ ಪ್ರಾಶಸ್ತ್ಯ ನೀಡಲು ಅವಕಾಶ ಕಲ್ಪಿಸಿತು. ಇದನ್ನು ತೀರ್ಮಾನಿಸುವಾಗ, ತಿದ್ದುಪಡಿ ಕಾಯಿದೆಯಲ್ಲಿ ಸಹಕಾರ ಸಂಘಗಳಿಗೆ ಪ್ರಾಶಸ್ತ್ಯ ನೀಡುವುದು ಒಂದು ಒಳ್ಳೆಯ ವ್ಯವಸ್ಥೆ. ಅದ್ದರಿಂದ ಅರ್ಜಿದಾರರಿಗೆ ಪರಿಹಾರ ನೀಡಲೇಬೇಕೆಂಬ ನೀತಿ ಸರಿಯಲ್ಲ. ಇದು ಸಂವಿಧಾನದ ಅನುಚ್ಛೇದ 14ಕ್ಕೆ ವಿರುದ್ಧವಾಗಿಲ್ಲ ಎಂದು ಮೂವರು ನ್ಯಾಯಾದೀಶರಲ್ಲಿ ಇಬ್ಬರು ಈ ತೀರ್ಪನ್ನು ನೀಡಿದರು. (1961 Indlaw SC 458, AIR 1962 SC 386)

41. ಅಜ್ಮೀರ್ ವಾಣಿಜ್ಯ ಸಹಕಾರ ಬ್ಯಾಂಕ್ ಪ್ರಕರಣದಲ್ಲಿ, ವ್ಯವಸ್ಥಾಪಕರು ಹಣ ದುರುಪಯೋಗ ಮಾಡಿಕೊಂಡಿದ್ದಾರೆಂದು (ರೂ.6,34,000) ಗುರುತಿಸಿ ನಿಬಂಧಕರಿಗೆ ವ್ಯವಹಾರವನ್ನು ನಿಲ್ಲಿಸಲು ಮನವಿ ಸಲ್ಲಿಸಬೇಕೆಂದು ತೀರ್ಮಾನಿಸಿದಾಗ, ಅದಕ್ಕೆ ನಿಬಂಧಕರು ಒಪ್ಪಿಗೆ ನೀಡಿದರು ಮತ್ತು ಒಬ್ಬ ನಿರೀಕ್ಷಕರನ್ನು ವಿಚಾರಣೆ ಮಾಡಲು ನೇಮಿಸಿದರು. ಇದರ ಜೊತೆಗೆ ಒಬ್ಬ ಸನ್ನದ್ದ ಲೆಕ್ಕಿಗರನ್ನು ನೇಮಿಸಿ ದುರುಪಯೋಗದ ಹಣ ನಿಗದಿ ಪಡಿಸಲು ಸೂಚಿಸಿದರು. ವಿಚಾರಣೆಯಿಂದ ರೂ.6,34,000.00 ದುರುಪಯೋಗ ವಾಗಿರುವುದನ್ನು ನಿಗದಿ ಪಡಿಸಿದ ನಂತರ, ಆಡಳಿತ ಮಂಡಳಿ ಸದಸ್ಯರಿಗೆ, ಮಂಡಳಿಯನ್ನು ರದ್ದುಪಡಿಸಬಾರಬೇಕೆಂದು ಕಾರಣಕೇಳಿ ನೋಟೀಸ್ ಹೊರಡಿಸಿದರು. ಆ ನಂತರ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಿದರು. ಈ ಅವಧಿಯಲ್ಲಿ ನಿಬಂಧಕರ ಬದಲಾವಣೆಯಾಗಿತ್ತು. ಈ ಮಧ್ಯ ದುರುಪಯೋಗದ ಹಣ ವಸೂಲಿ ಮಾಡಲು ಏಳು ಸದಸ್ಯರು ಪ್ರಕರಣ ದಾಖಲಿಸಿದರು. ಈ ಪ್ರಕರಣ ವಿಚಾರಣೆಗೆ ಬಂದಾಗ ನಿಬಂಧಕರು ಈ ಪ್ರಕರಣ ವಿಚಾರಣೆ ಮಾಡಲು ಅನರ್ಹರೆಂಬ ವಾದವನ್ನು ಎರಡು ಕಾರಣಗಳನ್ನು ನೀಡಿ ಮಂಡಿಸಲಾಯಿತು. (1) ನಿಬಂಧಕರು ಮಂಡಳಿಯನ್ನು ಅಮಾನತ್ತಿನಲ್ಲಿಡಲು ನೋಟೀಸ್ ನೀಡಿರುವುದು ಮತ್ತು (2) ಇಲಾಖೆಯು ಮುಖ್ಯಸ್ಥನಾಗಿ ಆಡಳಿತಾಂಗದ ಜವಾಬ್ದಾರಿಯಿಂದ ಅವರು ಪೂರ್ವಗ್ರಹ ಪೀಡಿತರು ಎಂದು ವಾದಿಸಲಾಯಿತು. ಈ ವಾದಾಂಶವನ್ನು ಶ್ರೇಷ್ಠ ನ್ಯಾಯಾಲಯ, ಈ ವಾದವನ್ನು ಪುರಸ್ಕರಿಸಲಿಲ್ಲ ಮತ್ತು ಈಗಾಗಲೇ ತೀರ್ಮಾನಿಸಿದ (1960) 1 SCR 580/1959 Indlaw SC 104 ರ ತೀರ್ಪನ್ನು ಉಲ್ಲೇಖಿಸಿ ವಾದವನ್ನು ತಿರಸ್ಕರಿಸಿತು. ನಿಬಂಧಕರು ಅನರ್ಹರು ಎಂಬುದಕ್ಕೆ ಕಾರಣಗಳಿಲ್ಲವೆಂದು ತೀರ್ಮಾನಿಸಿತು. (1961 Indlaw SC 311, AIR 1961 SC 1743)

42. ಹಿಮಾಚಲ್ ಸಹಕಾರ ಕಾಯಿದೆಯ ಒಂದು ಕೇಂದ್ರ ಸಹಕಾರ ಬ್ಯಾಂಕ್, ಆದಾಯ ತೆರಿಗೆ ಕಾಯಿದೆಯಲ್ಲಿ ಕರ ಪಾವತಿ ಬಗ್ಗೆ ಪ್ರಶ್ನಿಸಿದಾಗ, ಆದಾಯ ತೆರಿಗೆ ಕಾಯಿದೆ ಕಲಂ 66 (1) ನ್ನು ಉಲ್ಲೇಖಿಸಿ, ಒಂದು ಸಹಕಾರ ಸಂಘ ತನ್ನ ಸದಸ್ಯರ ಜೊತೆ ಮಾಡಿದ ವ್ಯವಹಾರಕ್ಕೆ ಕರ ಆಚರಣೆ ಇದೆ ಎಂಬ ಉಚ್ಚನ್ಯಾಯಾಲಯದ ತೀರ್ಮಾನವನ್ನು/ ಆದೇಶವನ್ನು ರದ್ದುಗೊಳಿಸಿ, ಕರ ವಿವಾಯ್ತಿ ಇದೆ ಎಂದು ತೀರ್ಮಾನಿಸಿತು. (ಶ್ರೇಷ್ಠ ನ್ಯಾಯಲಯ) (1960 Indlaw SC 334, AIR 1960 SC 1303)

43. ಉತ್ತರಪ್ರದೇಶದ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ನೋಂದಣಿ ಆದ ನಂತರ ಕೊಷಾಧಿಕಾರಿ ಬದಲಾವಣೆಯಾದ ಅಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ, ಹಣಕಾಸಿನ ಲೆಕ್ಕ ಪತ್ರಗಳನ್ನು ಸರಿಯಾಗಿ ವರ್ಗಾಯಿಸಿಲ್ಲವೆಂದು, ಸಂಘವು ಕಾರ್ಯಾರಂಭ ಮಾಡಿಲ್ಲವೆಂದು ಕೆಲವೇ ಸದಸ್ಯರಿಂದ ಪಾಲುಬಂಡವಾಳ ಸ್ವೀಕರಿಸಿದ ಬಗ್ಗೆ ಹೇಳಿಕೆ ಕೊಟ್ಟಾಗ, ಅದು ಕ್ರಿಮಿನಲ್ ಪ್ರಕರಣ ದಾಖಲಿಸಲಾಗುತ್ತಿದೆ. ಅದರ ವಿಚಾರಣ ಸಂದರ್ಭದಲ್ಲಿ, ಭಾಗಶಃ ವಿಷಯವನ್ನು

ಉಚ್ಚನ್ಯಾಯಾಲಯದ ತೀರ್ಮಾನಕ್ಕೆ ವರ್ಗಾಯಿಸಿರುವುದನ್ನು ಪುರಸ್ಕರಿಸಿ, ಮೂವರಿಂದ ಷೇರು ಹಣ ಸ್ವೀಕರಿಸಿರುವುದು ದೃಡಪಟ್ಟಿರುವುದಂದ ಶಿಕ್ಷೆಯನ್ನು ದೃಡೀಕರಿಸಿದಾಗ, ಅದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿತು. ಅದನ್ನು ಪರಿಶೀಲಿಸಿದ ಶ್ರೇಷ್ಠ ನ್ಯಾಯಾಲಯ ಕೆಳ ನ್ಯಾಯಾಲಯ, ಉಚ್ಚನ್ಯಾಯಾಲಯಕ್ಕೆ ಪೂರ್ಣ ಪ್ರಕರಣವನ್ನು ವರ್ಗಾಯಿಸಬೇಕೇ ಹೊರತು, ಭಾಗಶಃ ಅಲ್ಲ ಎಂದು ತೀರ್ಮಾನಿಸಿ/ಆರೋಪಿಗೆ ಶಿಕ್ಷೆ ನೀಡಿರುವುದು/ದೃಡೀಕರಿಸಿರುವುದು ತಪ್ಪು ಎಂದು, ಉಚ್ಚನ್ಯಾಯಾಲಯದ ತೀರ್ಪನ್ನು ವಜಾಗೊಳಿಸಿತು. (1955 Indlaw SC 30, AIR 1956 SC 149)

44. ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಸಹಕಾರ ಸಂಘದ ವ್ಯವಸ್ಥಾಪಕರು/ ಉಪವ್ಯವಸ್ಥಾಪಕರು ರೂ.5,76,000/– ಹಣ ದುರುಪಯೋಗ ಮಾಡಿಕೊಂಡಿದ್ದು, ಅದಕ್ಕೆ ಕ್ರಿಮಿನಲ್ ಮೊಕದಮ್ಮೆಯಲ್ಲಿ ದಾಖಲಿಸಿದಾಗ, ಇಬ್ಬರಿಗೂ ಒಂದು ವರ್ಷದ ಜೈಲು ವಾಸ ಮತ್ತು ರೂ.10,000/– ದಂಡ ವಿಧಿಸಿತು. ದಂಡ ಪಾವತಿಸದಿದ್ದರೆ, ಮೂರು ತಿಂಗಳು ಜೈಲು ಶಿಕ್ಷೆ ವಿಧಿಸಿತು. ಈ ಬಗ್ಗೆ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಆ ನ್ಯಾಯಾಲಯ ಪ್ರತಿಯೊಬ್ಬ ಆರೋಪಿಯ ರೂ.2,88,000/– ಜಮಾ ಮಾಡಲು ಸೂಚಿಸಿ, ಅವರು ಜಮಾ ಮಾಡಿದ ನಂತರ ವಿಚಾರಣೆ ನಡೆಸಿ, ಇಬ್ಬರಿಗೂ 64/52 ವರ್ಷಗಳಾಗಿದ್ದಲ್ಲಿ, ಅನಾರೋಗ್ಯದಿಂದ ನರಳುತ್ತಿದ್ದು, ಅವರ ಶಿಕ್ಷೆಯನ್ನು ಈಗಾಗಲೇ ಅನುಭವಸಿರುವ ಜೈಲು ಶಿಕ್ಷೆಯ ಸಾಕೆಂದು, ಈಗಾಗಲೇ ಬಿಡುಗಡೆಯಾಗದೇ ಇದ್ದರೆ ಬಿಡುಗಡೆ ಮಾಡಲು ಆದೇಶಿಸಿತು. ಆದರೆ ಇತರ ಪ್ರಕರಣಗಳಿಗೆ ಈ ಆದೇಶ ಅನ್ವಯಸುವುದಿಲ್ಲವೆಂದು ಆದೇಶಿಸಿತು. (2014 Indlaw SC 351, 2014 (4) Kar LJ 341)

45. ಆಂದ್ರಪ್ರದೇಶ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ ಸಂಘ ಸಂಘಕ್ಕೆ ಬೇಕಾದ ಜಮೀನು ಖರೀದಿಗೆ ಒಪ್ಪಂದ ಮಾಡಿಕೊಂಡಿದ್ದು, ಅದನ್ನು ಜಾರಿ ಮಾಡುವ ಸಂದರ್ಭದಲ್ಲಿ ವಿವಾದ ಉಂಟಾಗಿ ಪ್ರಕರಣ ದಾಖಲಿಸಿದಾಗ, ಜಮೀನು ಒಪ್ಪಂದ ಮಾಡಿಕೊಂಡ ವ್ಯಕ್ತಿ ತನ್ನ ಲಿಖಿತ ಹೇಳಿಕೆಯನ್ನು ಬದಲಾಯಿಸಲು ಒಪ್ಪಿಗೆ ಕೇಳಿದಾಗ, ಅದನ್ನು ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯಗಳು ತಿರಸ್ಕರಿಸಿದ ನಂತರ ಮತ್ತೊಂದು ಪ್ರಕರಣದಲ್ಲಿ ದಾಖಲಿಸಿ, (ಪುನರ್ ವಿಮರ್ಷೆ ಅರ್ಜಿ) ಅದನ್ನು ಪರಿಶೀಲಿಸುವ ಸಂದರ್ಭದಲ್ಲಿ ಉಚ್ಚ ನ್ಯಾಯಾಲಯ ಹಿಂದಿನ ಲಿಖಿತ ಹೇಳಿಕೆಯನ್ನು ಬದಲಾಯಿಸಿ ಹೊಸ ನಿಲುವು ತೆಗೆದುಕೊಳ್ಳಲಾಗದು ಎಂದು ತೀರ್ಮಾನಿಸಿತು. ಈ ತೀರ್ಮಾನವನ್ನು ಮತ್ತು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯದ ತೀರ್ಪನ್ನು ಸಮರ್ಥಿಸಿತು ಮತ್ತು ಮಧ್ಯಪ್ರವೇಶ ಮಾಡುವ ಅವಶ್ಯಕತೆ ಇಲ್ಲವೆಂದು ಪ್ರಕರಣ ವಜಾ ಮಾಡಿತು. (2013 Indlaw SC 252, AIR 2013 SC 3693, (2013) 9 SCC 349)

46. ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯಲ್ಲಿನ ಒಂದು ಗೃಹನಿರ್ಮಾಣ ಸಹಕಾರ ಸಂಘ ತನ್ನ ಸದಸ್ಯರಿಗೆ ಹಂಚಲು ಜಮೀನು ಸ್ವಾಧೀನ ಪಡಿಸಲು, ಕಂದಾಯ ಇಲಾಖೆ ಮುಖಾಂತರ ಹಣ ಪಾವತಿಸಿದಾಗ, ಅದನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದಾಗ, ಏಕ ಸದಸ್ಯ ಪೀಠ ವಜಾ ಮಾಡಿದ ನಂತರ, ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದರು (ಮಾಲೀಕರು). ಅದನ್ನು ಪರಿಶೀಲಿಸುವಾಗ ಕಾಯಿದೆ ಕಲಂ 3(ಎಚ್)(vi) ರನ್ವಯ ವಸತಿ ಯೋಜನೆ ಇಲ್ಲದೇ ಇದ್ದರೂ, ಇದೆ ಎಂದು ಅರ್ಥ್ಯಸಬಹುದು ಎಂದು ತೀರ್ಮಾನಿಸಿತು. ಆದರೆ ಮಾಲೀಕರಿಗೆ ನೋಟೀಸ್ ನೀಡಿಲ್ಲವೆಂದು ಪುರಸ್ಕರಿಸಿತು. ಇದನ್ನು ಪ್ರಶ್ನಿಸಿ ಸಹಕಾರ ಸಂಘ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಶ್ರೇಷ್ಠನ್ಯಾಯಾಲಯ ಉಚ್ಚನ್ಯಾಯಾಲಯದ ಕಲಂ 3(ಎಚ್)(vi) ರಲ್ಲಿ ಯೋಜನೆ ರೂಪಿಸಲಾಗಿದೆ ಎಂದು ತೀರ್ಮಾನವನ್ನು ಅನೂರ್ಜಿತಗೊಳಿಸಿತು ಮತ್ತು ಈ

ಭೂಸ್ವಾದೀನ ಪ್ರಕ್ರಿಯೇ ಸಾರ್ವಜನಿಕ ಉಪಯೋಗಕ್ಕೆ ಅಲ್ಲ ಎಂಬ ತೀರ್ಮಾನಕ್ಕೆ ಬಂದು ಸಂಘದ ವಿಶೇಷ ಮನವಿಯನ್ನು ತಿರಸ್ಕರಿಸಿತು. (2012 Indlaw SC 577, (2012) 3 SCC 727)

47. ಆಂದ್ರಪ್ರದೇಶ ಸಹಕಾರ ಕಾಯಿದೆ 1964 ರಲ್ಲಿ ನೋಂದಾಯಿಸಿದ ಹಾಲು ಉತ್ಪಾದಕ ಸಹಕಾರ ಸಂಘಗಳನ್ನು ಉದಾರೀಕೃತ 1995ರ ಕಾಯಿದೆಗೆ ಸಾರಾಸಗಟಾಗಿ ವರ್ಗಾಯಿಸಿರುವುದನ್ನು ಪ್ರಶ್ನಿಸಿದಾಗ, ಅದರಲ್ಲಿ ಪ್ರಶ್ನಿಸಲಾದ ಪ್ರಸಂಗವೆಂದರೆ ನ್ಯಾಯಾಲಯಗಳಲ್ಲಿ ನಿಯಮ ಸಮರ್ಪಕವಾಗಿ ಪಾಲಿಸಿಲ್ಲ ಮತ್ತು ವರ್ಗಾವಣೆ ನಿಯಮ ಬಾಹಿರ ಎಂದು ವಾದಿಸಲಾಯಿತು. ಹಳೆ ಕಾಯಿದೆಯಲ್ಲಿನ ಸಂಘಗಳು ಒಪ್ಪಂದದಂತೆ ಸರ್ಕಾರದ ಪಾಲುಹಣ ವಾಪಸ್ ಮಾಡುವುದು, ಸರ್ಕಾರದ ಸಹಾಯ ಧನ ನಿರಾಕರಿಸುವುದು ಎಂಬ ಶರತ್ತುಗಳಲ್ಲಿ ಸಮರ್ಪಕವಾಗಿ ಪಾಲಿಸಿಲ್ಲವೆಂದು ವಾಧಿಸಿದ್ದನ್ನು ಉಚ್ಚನ್ಯಾಯಾಲಯದ ಪುರಸ್ಕರಿಸಿ, 1995ರ ಕಾಯಿದೆ ವರ್ಗಾವಣೆ ಕಿತ್ತು ಹಾಕಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ನ್ಯಾಯಾಲಯ ಈ ರೀತಿ ರಾಜ್ಯ ಸರ್ಕಾರ ಕಾಯಿದೆಯ ವಿನಾಯ್ತಿ ನೀಡಲು ಅಥವಾ ನಿರ್ಭಂದ ಹೇರಲು ಅಧಿಕಾರ ಇದೆ ಮತ್ತು ಈ ಕಾನೂನು ಸಂವಿಧಾನದ ಅನುಚ್ಚೇದ 14ರ ವಿರುದ್ದವಲ್ಲವೆಂದು ಮತ್ತು ಇದು ಪ್ರಜಾಪ್ರಭುತ್ವದ ಮತ್ತು ಸಹಕಾರ ತತ್ವದಲ್ಲಿ ನೀಡಿದೆ ಎಂದು ಪ್ರಕರಣವನ್ನು ವಜಾ ಮಾಡಿತು. (2011 Indlaw SC 633, (2011) 9 SCC 286)

48. ಉತ್ತರಪ್ರದೇಶ ಸಹಕಾರ ಕಾಯಿದೆಯಲ್ಲಿ ನೌಕರರಿಗೆ ಸಂಬಂಧಪಟ್ಟಂತೆ ತಂದ ತಿದ್ದುಪಡಿಗಳ ನಂತರ, ಉತ್ತರಪ್ರದೇಶ ಕೈಗಾರಿಕಾ ವಿವಾದ ಕಾಯಿದೆ ವ್ಯಾಪ್ತಿ ನಿಂತು ಹೋಗುತ್ತಿದೆ. ಏಕೆಂದರೆ ಸಹಕಾರ ಕಾಯಿದೆ ಬೇರೆ ಕಾಯಿದೆಯಲ್ಲಿನ ಅವಕಾಶಗಳನ್ನು ಮೀರಿ ನಿಲ್ಲುತ್ತದೆ. ಅಂದರೆ ಸಹಕಾರ ಕಾಯಿದೆಯಲ್ಲಿ ನೌಕರರಿಗೆ ಸಂಬಂಧಪಟ್ಟಂತೆ ವಿವಾದಗಳನ್ನು ತೀರ್ಮಾನಿಸಲು ಅವಕಾಶ ಕಲ್ಪಿಸಿದ ನಂತರ ಬೇರೆ ಸಾಮಾನ್ಯ ಪ್ರಾಧಿಕಾರಗಳ ವ್ಯಾಪ್ತಿ ನಿಂತು ಹೋಗುತ್ತದೆ. (2007 Indlaw SC 663, (2007) 11 SCC 756, 2005 Indlaw SC 46, (2005) 2 SCC 638)

49. ಕರ್ನಾಟಕ ಸಹಕಾರ ಕಾಯಿದೆಯಲ್ಲಿನ ಒಂದು ಮಾರಾಟ ಸಂಘ ತನ್ನ ಹೂಡಿಕೆಗಳ ಮೇಲೆ ಗಳಿಸಿದ ಬಡ್ಡಿ ಆದಾಯ ತೆರಿಗೆ ಕಾಯಿದೆ ಕಲಂ 80ಪಿ(2)(ಎ)(i) ರಲ್ಲಿ ವಿನಾಯ್ತಿಗೆ ಅರ್ಹರೇ ಎಂಬ ಪ್ರಶ್ನೆಯನ್ನು ನ್ಯಾಯಾಧಿಕರಣ ಮತ್ತು ಉಚ್ಚನ್ಯಾಯಾಲಯಗಳು ಅನುಮೋದಿಸಿದವು. ಅದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಸಂಘವು ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯದ ತೀರ್ಪನ್ನು ಸಮರ್ಥಿಸುವುದರ ಜೊತೆಗೆ, ರೈತರಿಂದ ಖರೀದಿಸಿದ ಅಡಿಕೆಗೆ ಸಲ್ಲಿಸಬೇಕಾದ ಹಣ ಪಾವತಿ ಮಾಡದೆ, ಅದೇ ಹಣವನ್ನು ಬೇರೆ ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟು, ಅದರ ಮೋರೆ ಬಂದ ಬಡ್ಡಿಗೆ ವಿನಾಯ್ತಿ ಇಲ್ಲ. ಏಕೆಂದರೆ ಸಂಘದ ಉಪನಿಯಮಗಳಲ್ಲಿ ಈ ರೀತಿ ಒಂದು ಒಪ್ಪಿಗೆ ಸಂಘದ ಉದ್ದೇಶವಲ್ಲ. ಸದಸ್ಯರಿಗೆ ತುರ್ತಾಗಿ ಹಣ ಪಾವತಿಸದೆ ಲಾಭಗಳಿಸಲು ಉಪಯೋಗಿಸಿದ್ದ ಇದಕ್ಕೆ ವಿನಾಯ್ತಿ ಪಡೆಯಲಾಗದು. (2010 Indlaw SC 91, (2010) 3 SCC 223, AIR 2010 SC (Supp) 645)

50. ಸಹಕಾರ ನಿಬಂಧಕರ ಪ್ರಕರಣಗಳನ್ನು ನ್ಯಾಯಾಲಯ ಎಂದು ಪರಿಗಣಿಸುವ ಬಗ್ಗೆ ಮುಂಬೈ ಕಾಯಿದೆಯನ್ನು ವಿಮರ್ಷಿಸುವಾಗ ಶ್ರೇಷ್ಠ ನ್ಯಾಯಾಲಯ ನಿಬಂಧಕರು ಅಥವಾ ಇತರ ಅಧಿಕಾರಿಗಳಿಗೆ ವರ್ಗಾಯಿಸಿದಾಗ ಅಥವಾ ಮಧ್ಯಸ್ತಿಗಾರರಿಗೆ ವರ್ಗಾಯಿಸಿದಾಗ ಅಂತಹ ಪ್ರಾಧಿಕಾರಗಳುಸಿವಿಲ್ ನ್ಯಾಯಾಲಯಗಳಂತಾಗುವುದಿಲ್ಲ.

ಇದರ ಜೊತೆಗೆ ಮಹಾರಾಷ್ಟ್ರ ಸಹಕಾರ ಕಾಯಿದೆಯಲ್ಲಿ ಕಲಂ 95 ರಲ್ಲಿ ನೇಮಕವಾದ ಅಧಿಕಾರಿ ಸಿವಿಲ್ ನ್ಯಾಯಾಲಯವಾಗುವುದಿಲ್ಲ. ಅಂದರೆ ಸಿ.ಪಿ.ಸಿ ಕಲಂ 195 ರನ್ವಯ ನ್ಯಾಯಾಲಯದಲ್ಲಿ

ಯಾವುದೇ ಕಾಯಿದೆಯಲ್ಲಿನ ಎಲ್ಲಾ ನ್ಯಾಯಾಧಿಕರಣಗಳು ನ್ಯಾಯಾಲಯಗಳಾಗುವುದಿಲ್ಲ. ಆದರೆ ಎಲ್ಲಾ ನ್ಯಾಯಾಲಯದ ನ್ಯಾಯಾಧಿಕರಣಗಳಾಗುತ್ತವೆ. (2007 Indlaw SC 295, (2007) 6 SCC 236, 1961 Indlaw SC 372, 1992 Indlaw SC 889)

51. ಕರ್ನಾಟಕ ಸಹಕಾರಿ ಕಾಯಿದೆಯ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ನಿವೇಶನ ಮಾರಾಟ ಮಾಡಿದ ಬಗ್ಗೆ ಆಡಳಿತ ಮಂಡಳಿ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿತು. ಆ ಪ್ರಕರಣದಲ್ಲಿ ಆಡಳಿತ ಮಂಡಳಿ ಜಮೀನು ಖರೀದಿ ಮಾಡಿದ ರೈತರ ಮನವಿ ಪುರಸ್ಕರಿಸಿ 337" x 132" ಅಳತೆ ಜಮೀನನ್ನು ವಾಪಸ್ ಮಾಡಿದ ನಂತರ, ಮತ್ತೊಂದು ಮನವಿ ಬಂದ ಮೇಲೆ 30 x40 ರ ನಿವೇಶನವನ್ನು ನೋಂದಾಯಿಸಿತು. ಆ ನಿವೇಶನದ ಸಂಖ್ಯೆ 509 ಎಂದು ನಮೂದಿಸಿದ್ದರೂ, ಈಗಾಗಲೇ ಸಂಘವು ಶೈಲಜಾಸ್ವಾಮಿ ಎಂಬುವರಿಗೆ ನಿವೇಶನ ಸಂಖ್ಯೆ 142 ಎಂದು ನೋಂದಾಯಿಸಿತ್ತು. ಅದರ ಚಕ್ ಬಂದಿ ಮತ್ತು 509ರ ಚಕ್ ಬಂದಿ ಒಂದೇ ಇದ್ದು ಸಂಯುಕ್ತ ನಿಬಂಧಕರು ವಿಚಾರಣೆ ನಡೆಸಿ, ವರದಿ ಪಡೆದು, ಆಡಳಿತ ಮಂಡಳಿ ಮೋಸ ಮಾಡಿದೆ ಎಂದು ಮತ್ತು 30 x40 ರ ನಿವೇಶನ ದರವನ್ನು ರೂ.2,40,000.00 ಮಾರಾಟ ಮಾಡಿದ್ದು, ಅದೇ ನಿವೇಶನವನ್ನು ರೂ.28,00,000/– ಮಾರಾಟ ಮಾಡಿದ್ದು, ನೋಂದಾವಣಿಯನ್ನು ರೂ.10,20,000/– ಎಂದು ನಮೂದಿಸಿ ಸಂಘಕ್ಕೆ ನಷ್ಟ ಉಂಟು ಮಾಡಿದ್ದರೆಂದು ಕ್ರಿಮಿನಲ್ ಪ್ರಕರಣ ದಾಖಲಿಸಿತು. ಆಕ್ರಿಮಿನಲ್ ಪ್ರಕರಣ ಉಚ್ಚನ್ಯಾಯಾಲಯದ ಮುಂದೆ ವಿಚಾರಣೆಗೆ ಬಂದಾಗ ದಾಖಲೆಗಳನ್ನು ತೋರಿಸದೇ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ ಎಂದು ಪ್ರಕರಣವನ್ನು ಕಿತ್ತು ಹಾಕಿತು. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಶ್ರೇಷ್ಠ ನ್ಯಾಯಾಲಯ ಉಚ್ಚ ನ್ಯಾಯಾಲಯದ ತೀರ್ಮಾನವನ್ನು ಕಿತ್ತು ಹಾಕಿ, ಸಂಯುಕ್ತ ನಿಬಂಧಕರು ಶಾಸನ ಬದ್ಧವಾಗಿ ನಡೆಸಿದ ವಿಚಾರಣೆಯಲ್ಲಿ ಸಮರ್ಪಕ ದಾಖಲೆಗಳನ್ನು ಪರಿಶೀಲಿಸಿ ವರದಿ ಪಡೆದಿದ್ದು, ಕಲಂ 109 ರಡಿ ಕ್ರಿಮಿನಲ್ ಅಪರಾದವೆಂದು ತೀರ್ಮಾನಕ್ಕೆ ಬಂದಿದೆ. ಅಂದರೆ ಉಚ್ಚನ್ಯಾಯಾಲಯದ ವಿಚಾರಣ ವರದಿ ಅಂಶಗಳನ್ನು ಗಮನಿಸದೇ, ಕ್ರಿಮಿನಲ್ ಪ್ರಕರಣ ರದ್ದು ಪಡಿಸಿರುವುದು ತಪ್ಪು ಎಂದು ತಾತ್ವಿಕ ತೀರ್ಮಾನಕ್ಕೆ ಬಂದು, ಪ್ರಕರಣವನ್ನು ವಿಚಾರಣೆ ಮಾಡಬಹುದೆಂದು, ಅದರ ಅರ್ಹತೆ ಬಗ್ಗೆ ವಿಮರ್ಷೆ ಮಾಡದೇ, ಪ್ರಕರಣವನ್ನು ಪರಿಶೀಲಿಸಲು ಆದೇಶಿಸಿತು. (2009 Indlaw SC 491, (2009) 5 SCC 199, AIR 2009 SC 3288)

52. ಮಧ್ಯಪ್ರದೇಶ ಸಹಕಾರ ಕಾಯಿದೆಯ ರಾಜ್ಯ ಹಾಲು ಉತ್ಪಾದಕರ ಮಹಾ ಮಂಡಳ ನೌಕರನ್ನು ಖಾಯಂ ನಿವೃತ್ತಿ ಬಗ್ಗೆ ರಿಟ್ ದಾಖಲಿಸಿದಾಗ, ಏಕ ಸದಸ್ಯ ಪೀಠ 52 ನೌಕರರಲ್ಲಿ 16 ನೌಕರರ ಅರ್ಜಿ ಪುರಸ್ಕರಿಸಿತು. ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿದಾಗ ಅರ್ಜಿಗಳನ್ನು ವಜಾ ಮಾಡಿ ಶೇ.50% ರಷ್ಟು ಬಾಕಿ ಸಂಬಳ ಪಾವತಿಸಲು ಆದೇಶಿಸಿತು ಮತ್ತು ಏಕ ಸದಸ್ಯ ಪೀಠ ಉಳಿದ 36 ನೌಕರರ ಅರ್ಜಿಯನ್ನು ತಿರಸ್ಕರಿಸಿತ್ತು. ಅವುಗಳ ಮೇಲ್ಮನವಿಯನ್ನು ಪರಿಶೀಲಿಸಿದ ಪೀಠ ಶೇ.20% ಬಾಕಿ ಸಂಬಳ ಪಾವತಿಸಲು ಆದೇಶಿಸಿತು. ಈ ತೀರ್ಪುಗಳಲ್ಲಿ ಪರಿಗಣಿಸಬೇಕಾದ ಅಂಶವೇನೆಂದರೆ, ಸಹಕಾರ ಹಾಲು ಮಹಾಮಂಡಳವನ್ನು "ರಾಜ್ಯ" ಎಂಬ ಪದದಲ್ಲಿ ಬರುತ್ತಿದೆಯೇ ಎಂದು. ಇದನ್ನು ಶ್ರೇಷ್ಠ ನ್ಯಾಯಾಲಯ ಪಶು ಸಂಶೋದನಾ ಇಲಾಖೆ ನಿಯಂತ್ರಣದಲ್ಲಿ ಬರುತ್ತಿದ್ದು, ನಿರ್ದೇಶನಗಳನ್ನು ನೀಡುತ್ತಿತ್ತು. ಹೈನೋದ್ಯಮದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಈ ಮಹಾಮಂಡಳ ಸ್ಥಾಪಿಸಲಾಗಿದ್ದು, ರಾಜ್ಯ ಸರ್ಕಾರ ಮಾಡುವ ಕೆಲಸವನ್ನು ಮಾಡುತ್ತಿದ್ದು, ಇದನ್ನು "ರಾಜ್ಯ" ಎಂದು ಪರಿಗಣಿಸಬೇಕು ಮತ್ತು ಮೇಲ್ಮನವಿದಾರರು ಶ್ರೇಷ್ಠ ನ್ಯಾಯಾಲಯದಲ್ಲಿ ಬಾಕಿ ಸಂಬಳದ ಶೇ.100% ರಷ್ಟು ಬಾಕಿ ವೇತನ ಪಾವತಿಗೆ ತಿರಸ್ಕರಿಸಿ, ಉಚ್ಚನ್ಯಾಯಾಲಯ ನೀಡಿದ

ಶೇ.50% ರಷ್ಟು ಬಾಕಿ ವೇತನ ಪಾವತಿಸಲು ಪರಿಹಾರ ನೀಡಿದ್ದಾಗ, ಈಗ ಕೇಳಿರುವ ಶೇ.100% ಬಾಕಿ ವೇತನ ಪಾವತಿಗೆ ನೀಡಬೇಕಾಗಿಲ್ಲ ಮತ್ತು ನೌಕರನ್ನು ಖಾಯಂ ನಿವೃತ್ತಿ ನೀಡಿದ್ದ, ಯಾವುದೇ ಆರೋಪಗಳನ್ನು ಮಾಡಿಲ್ಲ. ಆದ್ದರಿಂದ ಮಹಾಮಂಡಳದ ವಿಶೇಷ ಅರ್ಜಿಯನ್ನು ವಜಾ ಮಾಡಿತು. (2009 Indlaw SC 532, (2009) 15 SCC 221)

53. ಮಹಾರಾಷ್ಟ್ರ ಸಹಕಾರ ಕಾಯಿದೆಯಲ್ಲಿ ಒಂದು ಸಹಕಾರ ಬ್ಯಾಂಕ್‌ನ ಆಡಳಿತ ಮಂಡಳಿಯನ್ನು ರದ್ದುಪಡಿಸಲು, ಆಡಳಿತಾಧಿಕಾರಿ ನೇಮಿಸಲು, ಭಾರತೀಯ ರಿಜರ್ವ್ ಬ್ಯಾಂಕ್ ಲಿಖಿತವಾಗಿ ನಿಬಂಧಕರಿಗೆ ತಿಳಿಸಿದರೆ, ನಿಬಂಧಕರು ಅದನ್ನು ಪ್ರಶ್ನಿಸದೆ ಆಡಳಿತಾಧಿಕಾರಿ ನೇಮಿಸಬೇಕು. ಅದಕ್ಕಾಗಿ ಆಡಳಿತ ಮಂಡಳಿ ನಿರ್ದೇಶಕರಿಗೆ ಕಾರಣಕೇಳಿ ನೋಟೀಸ್ ಕೊಡುವ ಅವಶ್ಯಕತೆ ಇಲ್ಲ. ಆ ರೀತಿ ಅವಕಾಶ ನೀಡಲ್ಲಿ ಎಂದು ಆಡಳಿತ ಮಂಡಳಿ ತಕರಾರು ತೆಗೆಯುವಂತಿಲ್ಲ, ಏಕೆಂದರೆ ಅದು ಒಂದು ಹಕ್ಕು ಅಲ್ಲ. (2008 Indlaw SC 31, (2008) 1 SCC 770, AIR 2008 SC 994)

54. ಕರ್ನಾಟಕ ಸಹಕಾರ ಕಾಯಿದೆಯ ಒಂದು ಸಕ್ಕರೆ ಕಾರ್ಖಾನೆ ಸ್ಥಾಪನೆ ಸಮಯದಲ್ಲಿ ನೀಡಿದ ಬ್ಯಾಂಕ್ ಗ್ಯಾರೆಂಟಿಯನ್ನು ನಗದೀಕರಿಸಲು, ಒಪ್ಪಂದದ ಒಂದು ಶರತ್ತಿನಂತೆ ಕಾರ್ಖಾನೆಯನ್ನು ಕಾರ್ಯಾಚರಣೆ ನಂತರ ಎಂದು ಶರತ್ತು ವಿಧಿಸಿದ್ದರೂ, ಅದನ್ನು ಜಾರಿ ಮಾಡಲಾಗದು, ಏಕೆಂದರೆ ಬ್ಯಾಂಕ್ ಗ್ಯಾರೆಂಟಿ ಯಾವುದೇ ಶರತ್ತಿಗೊಳ ಪಡುವುದಿಲ್ಲ. (2007 Indlaw SC 720, (2007) 6 SCC 470, AIR 2007 SC 2716)

55. ನಿಬಂಧಕರು ಅಥವಾ ಅವರ ಪ್ರತಿನಿಧಿ ವಿವಾದಗಳನ್ನು ಪರಿಹರಿಸಲು ನೇಮಕವಾದ ಪ್ರಾಧಿಕಾರಗಳು ನ್ಯಾಯಾಲಯಗಳಲ್ಲವೆಂದು ವಿವಿದ ತೀರ್ಪುಗಳ ಮುಖಾಂತರ ತೀರ್ಮಾನಿಸದೆ. 1961 Indlaw SC 372, 1962 (2) SCR 339, AIR 1969 SC 724, 1968 Indlaw SC 889, 1967 Indlaw SC 456, 1967 (3) SCR 163, 1961 Indlaw SC 372, (1969) 1 SCC 167, 1968 Indlaw SC 343, ಈ ಮೇಲ್ಕಂಡ ತೀರ್ಪುಗಳಲ್ಲಿ ಸಹಕಾರ ಪ್ರಾಧಿಕಾರಿಗಳು ನ್ಯಾಯಾಲಯಗಳಲ್ಲವೆಂದು ತೀರ್ಮಾನಿಸಿದೆ.

ಈ ಎಲ್ಲಾ ತೀರ್ಮಾನಗಳನ್ನು ಗಮನಿಸಿ ಮತ್ತು ಮಹಾರಾಷ್ಟ್ರ ಕಾಯಿದೆ, ಆಂದ್ರಪ್ರದೇಶ ಕಾಯಿದೆ ಮತ್ತು ಬಹುರಾಜ್ಯ ಸಹಕಾರ ಕಾಯಿದೆಯಲ್ಲಿನ ಅವಕಾಶಗಳಲ್ಲಿ "ಬ್ಯಾಂಕಿಂಗ್ ಕಂಪನಿ" ಎಂಬ ಬಗ್ಗೆ ರಾಜ್ಯ ಸರ್ಕಾರಗಳು ಕಾಯಿದೆ ಮಾಡಲು ಅವಕಾಶವಿದ್ದು, ಅವುಗಳಲ್ಲಿ ಈ ಪದ ಪ್ರಯೋಗದಿಂದ ನ್ಯಾಯಾಲಯ ಎಂಬು ಅರ್ಥ ಬರುವುದಿಲ್ಲವಾದ್ದರಿಂದ. ಈ ಬಗ್ಗೆ ಅಂತಿಮ ತೀರ್ಮಾನ ನೀಡಲು ಒಂದು ಸೂಕ್ತ ಪೀಠ ರಚಿಸಲು ಮೂವರು ಸದಸ್ಯರ ಶ್ರೇಷ್ಠ ನ್ಯಾಯಾಲಯದ ಪೀಠ, ಬಾರತೀಯ ಮುಖ್ಯ ನ್ಯಾಯಾಮೂರ್ತಿಗಳ ಮುಂದೆ ಮಂಡಿಸಲು ತೀರ್ಮಾನಿಸಿತು. (2007 Indlaw SC 295, (2007) 6 SCC 236, AIR 2007 SC 1584)

56. ಉತ್ತರಪ್ರದೇಶ ಕಾಯಿದೆಯಡಿ ರೂಪಿಸಿದ ಸೇವಾ ನಿಬಂಧನೆಗಳು, ಒಂದು ಜಿಲ್ಲಾ ಬ್ಯಾಂಕ್ ತನ್ನ 1999–2000 ದ ಒಪ್ಪಂದದನ್ವಯ ನೌಕರರಿಗೆ, ಎಕ್ಸ್–ಗ್ರೇಷಿಯ ಪಾವತಿಸಲು ತೀರ್ಮಾನಿಸಿತು. ಆದರೆ ನಿಯಮದಂತೆ ನಿಬಂಧಕರ ಒಪ್ಪಿಗೆ ಪಡೆಯಲಿಲ್ಲ. ಇದನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಈ ಪಾವತಿಯನ್ನು ದೃಡೀಕರಿಸಿತು. ಅಂದರೆ ಈ ವಿಚಾರ ತೀರ್ಮಾನಿಸಲು ಸಹಾಯಕ ಕಾರ್ಮಿಕ ಆಯುಕ್ತರ ಅಧಿಕಾರ ಮತ್ತು ಪರಿಹಾರ ನೀಡಿದ್ದನ್ನು ಎತ್ತಿ ಹಿಡಿಯಿತು. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಮಂಡಿಸಿದಾಗ "ಬೋನಸ್" ಪದ ಆಂಗ್ಲ ಡಿಕ್ಷನರಿಯಲ್ಲಿ ಅರ್ಥೈಸಿದಂತೆ ಒಂದು ಸಂಬಾವನೆ. ಆದರೆ ಈ ಪ್ರಕರಣದಲ್ಲಿ ಮಂಜೂರಿ ಮಾಡಿದ ಎಕ್ಸ್ ಗ್ರೇಷಿಯ, ಈ ಅರ್ಥವಿವರಣೆಯಲ್ಲಿ ಸೇರುವುದಿಲ್ಲ ಮತ್ತು ನಿಬಂಧನೆ 42 ರಲ್ಲಿನ ಇತರ ಭತ್ಯಗಳು ಎಂಬ

ಅರ್ಥದಲ್ಲಿ ಸೇರುತ್ತಿದೆ ಮತ್ತು ಇದಕ್ಕೆ ನಿಬಂಧಕರ ಒಪ್ಪಿಗೆ ಅವಶ್ಯಕ ಎಂಬುದರ ಜೊತೆಗೆ, ಉಚ್ಚನ್ಯಾಯಾಲಯ ಈ ರೀತಿ ವಿಮರ್ಷಿಸದೆ ತಪ್ಪು ನಿರ್ಧಾರ ತೆಗೆದುಕೊಂಡಿದೆ, ದಾಖಲೆಗಳನ್ನು ಸಮರ್ಪಕವಾಗಿ ಪರಿಶೀಲಿಸದೇ ತೆಗೆದುಕೊಂಡಿದ್ದು ಇದನ್ನು ತಿರಸ್ಕರಿಸಬೇಕು. ನಿಬಂಧಕರರಿಗೆ ಇರುವ ನಿಬಂಧನೆಗಳಲ್ಲಿನ ಅಧಿಕಾರ ಚಲಾಯಿಸಲು ಅಧಿಕಾರ ಇದೆ ಎಂದು ಉಚ್ಚನ್ಯಾಯಾಲಯ ತೀರ್ಮಾನವನ್ನು ರದ್ದುಗೊಳಿಸಿ, ಈಗಾಗಲೇ ನೌಕರರಿಗೆ ಪಾವತಿ ಮಾಡಿರುವ ಎಕ್ಸ್ ಗ್ರೇಷಿಯವನ್ನು ವಸೂಲಿ ಮಾಡಬೇಕಾಗಿಲ್ಲವೆಂದು ತೀರ್ಮಾನಿಸಿತು. (2007 Indlaw SC 663, (2007) 11 SCC 756, AIR 2007 SC (Supp) 425)

57. ಒಂದು ಬಹುರಾಜ್ಯ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಗುಜರಾತ್ ರಾಜ್ಯದ ಮಾಧವಪುರ ಸಹಕಾರ ಬ್ಯಾಂಕ್‌ನ ವ್ಯವಹಾರದಲ್ಲಿ ದಾಖಲಾದ ಕ್ರಿಮಿನಲ್ ಪ್ರಕರಣದಲ್ಲಿ, ಆಡಳಿತ ಮಂಡಳಿ ರದ್ದು ಪಡಿಸಿ, ಅವ್ಯವಹಾರಕ್ಕೆ ಸಂಬಂದಪಟ್ಟ ವ್ಯಕ್ತಿಗಳ ಮೇಲೆ ಪ್ರಕರಣ ದಾಖಲಿಸಿತು. ಅದರಲ್ಲಿ ಮಾಜಿ ವ್ಯವಸ್ಥಾಪಕರು ಎಫ್.ಐ.ಆರ್ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಅದನ್ನು ಪುರಸ್ಕರಿಸಲಿಲ್ಲ. ಅದನ್ನು ಮತ್ತೆ ವಿಶೇಷ ಅರ್ಜಿ ಮೂಲಕ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯ ಮತ್ತು ವಿಚಾರಣಾ ನ್ಯಾಯಾಲಯಗಳು ತೆಗೆದುಕೊಂಡ ತೀರ್ಮಾನದಲ್ಲಿ ಯಾವುದೇ ನ್ಯೂನತೆಗಳಲ್ಲಿ ಮತ್ತು ಆದೇಶಗಳು ಸಮರ್ಪಕವಾಗಿ ನೀಡಲಾಗದೆ ಎಂದು ಮಧ್ಯ ಪ್ರವೇಶಿಸಲಿಲ್ಲ, ಅಂದರೆ ಮಾಜಿ ವ್ಯವಸ್ಥಾಪಕ ನಿರ್ದೇಶಕರ ಅರ್ಜಿಯನ್ನು ವಜಾ ಮಾಡಿತು. (2006 Indlaw SC 163, (2006) 1 SCC 732, AIR 2006 SC 915)

58. ಗುಜರಾತ್ ರಾಜ್ಯದ ಒಂದು ಗೃಹ ನಿರ್ಮಾಣ ಸಹಕಾರ ಸಂಘ (ಹಿಂದಿನ ಬಾಂಬೆ ರಾಜ್ಯದ ಭಾಗವಿದ್ದಾಗ) ಪಾರ್ಸಿ ಜನಾಂಗಕ್ಕಾಗಿ ರಚಿಸಿಕೊಂಡ ಸಂಘದ ಸದಸ್ಯರಿಗೆ ಭೂಸ್ವಾದೀನ ಕಾಯಿದೆಯಲ್ಲಿ ಜಮೀನು ಪಡೆದು ಪಾರ್ಸಿ ಸದಸ್ಯರಿಗಾಗಿಯೇ ಎಂದು ಉಪನಿಯಮಗಳಿದ್ದರೂ, ಅದನ್ನು ಮುಕ್ತ ಸದಸ್ಯತ್ವ ಎಂಬ ನೀತಿ ಅನ್ವಯಿಸಿ ಉಚ್ಚ ನ್ಯಾಯಾಲಯ ನೀಡಿದ್ದ ತೀರ್ಪನ್ನು ಕಿತ್ತುಹಾಕಿ, ಪಾರ್ಸಿ ಜನಾಂಗಕ್ಕಾಗಿಯೇ ರಚಿಸಿದ ಉಪನಿಯಮಗಳನ್ನು ನಿಬಂಧಕರ ನೋಂದಾಯಿಸಿದ್ದು ಇದು ಯಾವುದೇ ಕಾಯಿದೆ ವಿರುದ್ದವಾಗಿಲ್ಲ ಮತ್ತು ಕಾಯಿದೆಯೇ ಒಂದು ಜನಾಂಗ, ಒಂದು ವ್ಯಕ್ತಿಪರ ಸಂಘಟನೆ ಅಥವಾ ಮಹಿಳೆಯೂ/ಮಹನೀರನಾಗಿ ಸಂಘ ರಚನೆ ಮಾಡಲು ನಿರ್ಭಂದವಿಲ್ಲ ಎಂದು ತೀರ್ಮಾನಿಸ, ಪಾರ್ಸಿ ಜನಾಂಗ ಎಂದು ಉಪನಿಯಮ 7 ರನ್ವಯ ನಿವೇಶನವನ್ನು ಪಾರ್ಸಿ ಜನರಿಗೆ ಹಂಚಲು ಇರುವ ಅವಕಾಶ ತಪ್ಪಿಲ್ಲ ಎಂದು ತೀರ್ಮಾನಿಸಿತು. (2005 Indlaw SC 331, (2005) 5 SCC 632, AIR 2005 SC 2306)

59. ಮಹಾರಾಷ್ಟ್ರ ಸಹಕಾರ ಕಾಯಿದೆಯ ಒಂದು ಸಕ್ಕರೆ ಕಾರ್ಖಾನೆ ತನ್ನ ಸದಸ್ಯರಿಂದ, ಕಟ್ಟಿನ ಹಣದಿಂದ ಮುರಿದುಕೊಂಡ ಹಿಂತಿರುಗಿಸುವ/ಹಿಂತಿರುಗಿಸದ ಠೇವಣಿ, ಆದಾಯ ತೆರಿಗೆ ಕಾಯಿದೆಯಲ್ಲಿ ಕರ ಆಕರಣೆ ಮಾಡಬಹುದೇ ಎಂಬ ಪ್ರಶ್ನೆಯನ್ನು, ಆದಾಯ ತೆರಿಗೆ ನ್ಯಾಯಾಧಿಕರಣ ಮತ್ತು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಮತ್ತು ಆದಾಯ ತೆರಿಗೆ ನ್ಯಾಯಾಧಿಕರಣ 15 ಪ್ರಶ್ನೆಗಳನ್ನು ಉಚ್ಚನ್ಯಾಯಾಲಯದ ಪರಿಶೀಲನೆಗೆ ರವಾನಿಸಿದಾಗ ಉಚ್ಚನ್ಯಾಯಾಲಯ ಸದಸ್ಯರಿಂದ ಹಿಂತಿರುಗಿಸುವ/ಹಿಂತಿರುಗಿಸದ ಠೇವಣಿಗಳು ವ್ಯವಹಾರದಲ್ಲಿ ತೊಡಗಿಸುವುದರಿಂದ ಅದು ಆದಾಯ ಆದರೆ, ಅಭಿವೃದ್ಧಿ ನಿಧಿ, ಕಟ್ಟಿ ಅಭಿವೃದ್ಧಿ ನಿಧಿ, ಮುಖ್ಯ ಮಂತ್ರಿ ಪರಿಹಾರ ನಿಧಿ, ವೈ.ಬಿ.ಪವಾಣ ಅವರ ಜ್ಞಾಪಕ ನಿಧಿಗಳಿಗೆ ಸಂಗ್ರಹಿಸಿದ ಹಣ ಆದಾಯ ತೆರಿಗೆ ಕಾಯಿದೆ ವ್ಯಾಪ್ತಿಗೆ ಬರುವುದಿಲ್ಲವೆಂದು ತೀರ್ಮಾನಿಸಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಲಯದಲ್ಲಿ ವಿಶೇಷ ಅರ್ಜಿ ಸಲ್ಲಿಸಿದಾಗ, ಶ್ರೇಷ್ಠ ನ್ಯಾಯಾಲಯ ಕಬ್ಬು ಅಭಿವೃದ್ಧಿ ನಿಧಿ ಆದಾಯ ಎಂದು ತೀರ್ಮಾನಿಸಿದರು. ಇದು ಅಂತಿಮವಲ್ಲ ಇದನ್ನು ಆದಾಯ ತೆರಿಗೆ ನ್ಯಾಯಾಧಿಕರಣ ಪುನಃ ಪರಿಶೀಲಿಸಬೇಕು ಹಾಗೂ

ಎರಿಯ ಅಭಿವೃದ್ಧ ನಿಧಿ ಬಗ್ಗೆ ಮರು ಪರಿಶೀಲಿಸಬೇಕು ಎಂದು ಸೂಚಿಸಿತು ಮತ್ತು ಆದಾಯ ತೆರಿಗೆ ಆಯುಕ್ತರು, ಕಬ್ಬು ಅಭಿವೃದ್ಧಿ ನಿಧಿಗೆ ಸಂಗ್ರಹವಾದ ಹಣ ಆದಾಯ ತೆರಿಗೆ ಕಾಯಿದೆಗೆ ಬರುತ್ತದೆ, ಉಳಿದಂತೆ ನ್ಯಾಯಾಧಿಕರಣ ಮರು ಪರಿಶೀಲಿಸಬೇಕು. ಇನ್ನುಳಿದ ವಿಷಯಗಳ ಮೇಲೆ ಸಲ್ಲಿಸಿದ್ದ ಮನವಿಯನ್ನು ವಜಾ ಮಾಡಿತು. ಅಂದರೆ ಆಯುಕ್ತರ ಮನವಿಯನ್ನು ಭಾಗಶಃ ಪುರಸ್ಕರಿಸಿತು. (2004 Indlaw SC 893, (2004) 12 SCC 1, AIR 2004 SC 4716)

60. ತಮಿಳುನಾಡು ಸಹಕಾರ ಸಂಘಗಳ ಕಾಯಿದೆಯಡಿ ಸಂಘಗಳು ಮತ್ತು ಭೂ ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ ನೇಮಕ ಮಾಡಿದ ಶೇ.39% ರನ್ನು ನೌಕರರನ್ನು, ಅರ್ಜಿ ಆಹ್ವಾನಿಸದೆ ಮತ್ತು ವಿದ್ಯಾರ್ಹತೆ ಇಲ್ಲದ ವ್ಯಕ್ತಿಗಳ ಸೇವೆಯನ್ನು ಖಾಯಂಗೊಳಿಸಲು ಹೊರಡಿಸಿದ ಸರ್ಕಾರಿ ಆದೇಶದ ಮೂಲಕ ಖಾಯಂಗೊಳಿಸಿದಾಗ, ಅವುಗಳನ್ನು ಉಚ್ಚನ್ಯಾಯಾಲಯ ಸಹಕಾರಿ ಸಂಘಗಳನ್ನು "ರಾಜ್ಯ" ಹೌದೊ, ಅಲ್ಲವೋ ಎಂಬುದನ್ನು ತೀರ್ಮಾನಿಸದೆ ರಾಜ್ಯ ಈ ಸಂಘಗಳ ಆಡಳಿತಾತ್ಮಕ ನಿಯಂತ್ರಣ ಹೊಂದಿಲ್ಲ, ಅಂದರೆ ಸಂಘಗಳ ದಿನ ನಿತ್ಯದ ವ್ಯವಹಾರದಲ್ಲಿ ಮಧ್ಯಪ್ರವೇಶ ಮಾಡುವಂತಿಲ್ಲ. ಈ ನೌಕರರಲ್ಲಿ ಖಾಯಂಗೊಳಿಸಿದಾಗ ಯಾವುದೇ ಹಣಕಾಸಿನ ನೆರವು ನೀಡಿಲ್ಲ ಮತ್ತು ನೌಕರರು ಬಹಳ ವರ್ಷಗಳು ಕೆಲಸ ನಿರ್ವಹಿಸಿದ್ದಾರೆಂಬ ಕಾರಣದಿಂದ ಖಾಯಂಗೊಳಿಸುವ ಅಧಿಕಾರ ಹೊಂದಿಲ್ಲ. ಆದ್ದರಿಂದ ದೀರ್ಘವಧಿ ಸೇವೆ ಮಾಡಿದ್ದಾರೆಂಬ ರಾಜ್ಯ ಸರ್ಕಾರದ ವಾದವನ್ನು ಮನ್ನಿಸಲಿಲ್ಲ ಮತ್ತು ಅರ್ಜಿ ಆಹ್ವಾನಿಸದೆ, ವಿದ್ಯಾರ್ಹತೆ ಇಲ್ಲದೆ ನೇಮಕ ಮಾಡಿರುವುದನ್ನು ದೃಢೀಕರಿಸಿರುವುದು ನ್ಯಯಾಬಾಹಿರ ಎಂದು ಉಚ್ಚನ್ಯಾಯಾಲಯ ತೀರ್ಮಾನವನ್ನು ಸಮರ್ಥಿಸಿ ವಿಶೇಷ ಅರ್ಜಿ ವಜಾ ಮಾಡಿತು. (2004 Indlaw SC 606, (2004) 7 SCC 112, AIR 2004 SC 4504)

61. ತಮಿಳುನಾಡು ಸಹಕಾರಿ ಕಾಯಿದೆಯಲ್ಲಿನ ಒಂದು ಪತ್ತಿನ ಸಂಘ, ತನ್ನ ಸದಸ್ಯರಿಂದ ಭತ್ತವನ್ನು ಅಡಮಾನವಿಟ್ಟ ಸಾಲ ಪಡೆದಿದ್ದ, ಆ ಸಾಲ ಮರುಪಾವತಿ ಮಾಡಲು ಸಂಘವು ನೋಟೀಸ್ ನೀಡಿದಾಗ, ಭತ್ತದ ಮಾರಾಟದ ದರ ಪಾವತಿಸಲು ಅಥವಾ ಭತ್ತ ಬಿಡುಗಡೆ ಮಾಡಲು ಕೇಳಿದ್ದನ್ನು, ಗ್ರಾಹಕರ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಅದನ್ನು ರಾಜ್ಯ ಗ್ರಾಹಕರ ಆಯೋಗ, ಸಂಘದ ವಾದವನ್ನು ಮನ್ನಿಸಿತು, ಅದನ್ನು ರಾಷ್ಟ್ರೀಯ ಆಯೋಗ ರಾಜ್ಯ ಆಯೋಗದ ಆದೇಶವನ್ನು ಕಿತ್ತು ಹಾಕಿ, ಗ್ರಾಹಕರ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಗೆ ಬರುತ್ತದೆ ಎಂದು ತೀರ್ಮಾನಿಸಿತು. ಅದನ್ನು ಪ್ರಶ್ನಿನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ವಿಶೇಷ ಮನವಿ ಸಲ್ಲಿಸಿದಾಗ ರಾಷ್ಟ್ರೀಯ ಆಯೋಗದ ಆದೇಶವನ್ನು ಎತ್ತಿಹಿಡಿದು, ಅಂದರೆ ಗ್ರಾಹಕರ ನ್ಯಾಯಾಲಯದಲ್ಲಿ ಪ್ರಶ್ನಿಸಬಹುದೆಂದು ತೀರ್ಮಾನಿಸಿ, ರಾಜ್ಯ ಗ್ರಾಹಕರ ಆಯೋಗ, ಅರ್ಜಿಯಲ್ಲಿ ಕೇಳಿದ್ದ ಇತರ ಪರಿಹಾರಗಳ ಬಗ್ಗೆ ತೀರ್ಮಾನಿಸಲು ಸೂಚಿಸಿತು. (2003 Indlaw SC 1251, (2004) 1 SCC 305, AIR 2004 SC 448)

62. ಕರ್ನಾಟಕ ಸಹಕಾರ ಕಾಯಿದೆಯಲ್ಲಿ ಒಂದು ಸಹಕಾರ ಬ್ಯಾಂಕ್, ತನ್ನ ಮೀಸಲು ನಿಧಿಯನ್ನು ಬೇರೆ ಬ್ಯಾಂಕಿನಲ್ಲಿ ಹೂಡಿ ಬಂದು ಬಡ್ಡಿ, ಆದಾಯ ತೆರಿಗೆ ಕಾಯಿದೆಯಲ್ಲಿ ಬರುವುದಿಲ್ಲ, ಏಕೆಂದರೆ ಮೀಸಲು ನಿಧಿಯನ್ನು ಬ್ಯಾಂಕಿನ ವ್ಯವಹಾರದಲ್ಲಿ, ಉಪಯೋಗಿಸಲು ಬರುವುದಿಲ್ಲ. ಆದರೆ ಬ್ಯಾಂಕಿಂಗ್ ಕಾಯಿದೆಯಡಿ ಬ್ಯಾಂಕ್ ಹೂಡಿಕೆ ಮಾಡಬೇಕೆಂದು ಶರತ್ತು ವಿಧಿಸಿದಾಗ, ಅದು ಬ್ಯಾಂಕಿಂಗ್ ವ್ಯವಹಾರಕ್ಕೆ ಸಂಬಂಧಪಟ್ಟಿದ್ದು ಅದು ಆದಾಯ ತೆರಿಗೆ ಕಾಯಿದೆಯಲ್ಲಿ ವಿನಾಯ್ತಿ ಸಿಗುವುದಿಲ್ಲ ಅಂದರೆ ಅಂತಹ ಆದಾಯ, ಕರ ಪಾವತಿ ವ್ಯಾಪ್ತಿಗೆ ಬರುತ್ತಿದೆ. (ಕಲಂ.80(2)(9)(i)) (2001 Indlaw SC 282, (2001) 7 SCC 654, AIR 2001 SC 3332)

63. ಉತ್ತರಪ್ರದೇಶ ಸಹಕಾರ ಕಾಯಿದೆಯ ಒಂದು ಭೂಅಭಿವೃದ್ಧಿ ಬ್ಯಾಂಕ್‌ನ ನೌಕರನನ್ನು ಅವಕಾಶ

ನೀಡದೆ ಮತ್ತು ಅಧಿಕಾರ ಇಲ್ಲದೆ ದೊಡ್ಡ ಪ್ರಮಾಣದ ಅವ್ಯವಹಾರವೆಂದು ವಜಾ ಮಾಡಿದಾಗ, ಅದನ್ನು ಕಾರ್ಯದರ್ಶಿಗೆ ಅಧಿಕಾರ ಇಲ್ಲದೆ ಇದ್ದರೂ, ವಜಾ ಮಾಡಿದ್ದನ್ನು ಪ್ರಶ್ನಿಸಿದಾಗ ಶ್ರೇಷ್ಠ ನ್ಯಾಯಾಲಯ ಆ ನೌಕರನ ಸೇವೆಯನ್ನು ಮುಂದುವರಿಸಲು ಆದೇಶಿಸಿ, 15.04.87 ರಿಂದ 09.09.92ರ ಮಧ್ಯ ಸಂಬಳ ಪಾವತಿಸುವ ಅವಶ್ಯಕತೆ ಇಲ್ಲವೆಂದು ಮತ್ತು ಆ ನೌಕರನಿಗೆ ಸೇವಾವಧಿ (ಹಿರಿತನ) ಮುಂದುವರಿಸಲು ಆದೇಶಿಸಿತು. (2001 Indlaw SC 20275, (2001) 3 SCC 323, AIR 2001 SC 1173)

64. ಕರ್ನಾಟಕ ಸಹಕಾರ ಕಾಯಿದೆಯಡಿ ಒಂದು ಗ್ರಾಹಕರ ಸಂಘದ ನೌಕರನ್ನು ಕಾರ್ಮಿಕ ನ್ಯಾಯಾಲಯ ಶೇ.25% ರಷ್ಟು ಬಾಕಿ ಸಂಬಳದ ಜೊತೆ ಮರು ನೇಮಕ ಮಾಡಿದ ಆದೇಶವನ್ನು ಸಮರ್ಥಿಸಿ ಉಚ್ಚನ್ಯಾಯಾಲಯ ನೀಡಿದ ಆದೇಶವನ್ನು ಪ್ರಶ್ನಿಸಿ, ಶ್ರೇಷ್ಠ ನ್ಯಾಯಾಲಯದ ಮುಂದೆ ವಿಶೇಷ ಮನವಿ ಸಲ್ಲಿಸಿದಾಗ, ಉಚ್ಚನ್ಯಾಯಾಲಯ ಆದೇಶವನ್ನು ಪರಿಶೀಲಿಸಿ, ಒಬ್ಬ, ನೌಕರ ಸ್ಪಷ್ಟ ಹಣಕಾಸು ಅವ್ಯವಹಾರ ಮಾಡಿದ ಬಗ್ಗೆ ದಾಖಲಿಸಿ ತೀರ್ಮಾನಕ್ಕೆ ಬಂದ ಮೇಲೆ, ಅವನ ಹಿಂದಿನ ಅವ್ಯವಹಾರದ ಬಗ್ಗೆ ಪರಿಶೀಲಿಸುವ ಅವಶ್ಯಕತೆ ಇಲ್ಲ. ಅಂದರೆ ಒಬ್ಬ ನೌಕರನ ಮೇಲೆ ಶಿಸ್ತು ಕ್ರಮವಾಗಿ ವಜಾ ಮಾಡಿದಾಗ ಅವನು ಈ ಪ್ರಕರಣಕ್ಕೆ ಹಿಂದೆ ದುರುಪಯೋಗ ಮಾಡಿದ ಬಗ್ಗೆ ಪರಿಶೀಲಿಸುವ ಅವಶ್ಯಕತೆ ಇಲ್ಲ. ಆದ್ದರಿಂದ ಕಾರ್ಮಿಕ ನ್ಯಾಯಾಲಯ ಮತ್ತು ಉಚ್ಚನ್ಯಾಯಾಲಯ ನೀಡಿದ ಆದೇಶವನ್ನು ಕಿತ್ತುಹಾಕಿ, ದುರುಪಯೋಗ ಮಾಡಿದ ಬಗ್ಗೆ ಸಾಬೀತಾಗಿದ್ದರೆ, ಹಿಂದಿನ ಪ್ರಕರಣ ಪರಿಶೀಲಿಸಬೇಕಿಲ್ಲ ಎಂದು ವಿಶೇಷ ಮೇಲ್ಮನವಿಯನ್ನು ಪುರಸ್ಕರಿಸಿತು. (2000 Indlaw SC 472, (2000) 7 SCC 517, AIR 2000 SC 3139)

65. ಕೇರಳ ಸಹಕಾರ ಸಂಘಗಳ ಕಾಯಿದೆಯಲ್ಲಿ ಒಂದು ಸಹಕಾರ ಸಂಘದ ಆಡಳಿತ ಮಂಡಳಿಯನ್ನು ನಿಬಂಧಕರು ರದ್ದು ಪಡಿಸಿ, ಆಡಳಿತಾಧಿಕಾರಿ ನೇಮಿಸಿದಾಗ, ಸಮಿತಿಯ ಎಲ್ಲ ಕೆಲಸಗಳನ್ನು ನಿರ್ವಹಿಸಲು ಅಧಿಕಾರವಿದ್ದರೂ, ಹೊಸದಾಗಿ ಸದಸ್ಯರನ್ನು ನೋಂದಾಯಿಸಿಕೊಳ್ಳಲು ಅಧಿಕಾರ ಇಲ್ಲ. ಆಡಳಿತಾಧಿಕಾರಿ, ಹೊಸ ಆಡಳಿತ ಮಂಡಳಿಗೆ ಚುನಾವಣೆ ಮಾಡಿ ಅಧಿಕಾರ ವರ್ಗಾಯಿಸುವ ಅಧಿಕಾರಿ ಮಾತ್ರ ಇದೆ. ಇದಕ್ಕೆ ಪೂರಕವಾಗಿ ಕರ್ನಾಟಕದ ಒಂದು ಪ್ರಕರಣ (ಯು.ಕೆ.ಕಾಂತರಾಜು ಪ್ರಕರಣ) 1997 Indlaw SC 2314 ನಲ್ಲಿ ಶ್ರೇಷ್ಠ ನ್ಯಾಯಾಲಯದ ಪ್ರಕರಣವನ್ನು ಉಲ್ಲೇಖಿಸಿ, ಆಡಳಿತಾಧಿಕಾರಿ, ಹೊಸದಾಗಿ ಸದಸ್ಯರನ್ನು ನೋಂದಾಯಿಸುವ ಅಧಿಕಾರ ಇಲ್ಲವೆಂದು ತೀರ್ಮಾನಿಸಿತು. (2000 Indlaw SC 446, (2000) 6 SCC 127, AIR 2000 SC 2378)

66. ಕರ್ನಾಟಕ ಸಹಕಾರ ಕಾಯಿದೆಯಲ್ಲಿ ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೀಡಿದ ಬಲ್ಕ ಹಂಚಿಕೆ ಮಾಡಿರುವುದು, ಬಿಡಿಎ ನಿಯಮಗಳ ಉಲ್ಲಂಘನೆಯಾಗಿದೆ, ಆದ್ದರಿಂದ ನಿವೇಶನ ಬಿಡುಗಡೆಯನ್ನು ರದ್ದು ಪಡಿಸಿ ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. (2000 Indlaw SC 589, (2000) 2 SCC 439, AIR 2000 SC 762)

67. ಕರ್ನಾಟಕ ಸಹಕಾರ ಕಾಯಿದೆಯಡಿ, ಒಂದು ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ, ಅರ್ಜಿದಾರರ ನಾಮಪತ್ರ ತಿರಸ್ಕರಿಸಲಾಗಿತ್ತು. ಚುನಾವಣೆಯಲ್ಲಿ ನಾಮಪತ್ರ ತಿರಸ್ಕರಿಸಿದ ಬಗ್ಗೆ ರಿಟ್ ದಾಖಲಿಸಿದಾಗ ಏಕಸದಸ್ಯ ಪೀಠ, ಸಹಕಾರ ಕಾಯಿದೆಯಲ್ಲಿ ಪರಿಹಾರ ಪಡೆಯಲು ಸೂಕ್ತ ವೇದಿಕೆಯಾಗಿರುವುದರಿಂದ ರಿಟ್ ತಿರಸ್ಕರಿಸಿತು. ಇದನ್ನು ಪ್ರಶ್ನಿಸಿ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದಾಗ, ನಾಮಪತ್ರ ತಿರಸ್ಕರಿಸಿರುವುದು ತಪ್ಪು ಎಂದು ಏಕಸದಸ್ಯ ಪೀಠದ ಆದೇಶ ಕಿತ್ತು ಹಾಕಿತ್ತು. ಇದನ್ನು ವಿಶೇಷ ಅರ್ಜಿ ಮೂಲಕ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಏಕಸದಸ್ಯ ಪೀಠದ ಆದೇಶವನ್ನು ಎತ್ತಿಹಿಡಿದು ವಿಭಾಗೀಯ ಪೀಠದ ಆದೇಶವನ್ನು ಕಿತ್ತು ಹಾಕಿತು.

ಅಂದರೆ ನಿಬಂಧಕರ ಮುಂದೆ ದಾವಾ ದಾಖಲಿಸಿ ಪರಿಹಾರ ಪಡೆಯಲು ಅವಕಾಶ ಉಪಯೋಗಿಸಿಕೊಳ್ಳಲು ಆದೇಶಿಸಿತು. (1998 Indlaw SC 1700, (1998) 4 SCC 529, AIR 1999 SC 1566)

68. ಮಧ್ಯ ಪ್ರದೇಶ ಕಾಯಿದೇಯಲ್ಲಿನ, ರಾಜ್ಯ ಅಪೆಕ್ಸ್ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಗೆ ಸಂಬಂಧಪಟ್ಟಂತೆ, ಅವಧಿ ಮುಗಿಯುವ 90 ದಿವಸಗಳ ಮೊದಲು ನಿಬಂಧಕರಿಗೆ ಚುನಾವಣೆ ನಡೆಸಲು ಮನವಿ ಸಲ್ಲಿಸಿದರೂ, ಮಾಡಲಿಲ್ಲ. ಈ ಮಧ್ಯ ಸರ್ಕಾರ ಅವಧಿ ಮುಗಿದ ಸಹಕಾರ ಸಂಘಗಳಿಗೆ ಆಡಳಿತಾಧಿಕಾರಿ ನೇವಿಸಲು ಸುಗ್ರೀವಾಜ್ಞೆ ಹೊರಡಿಸಿತು. ಈ ಸುಗ್ರೀವಾಜ್ಞೆಯನ್ನು ಉಚ್ಚನ್ಯಾಯಾಲಯ ರದ್ದುಗೊಳಿಸಿದ ನಂತರ, ಆಡಳಿತ ಮಂಡಳಿ ಅಧಿಕಾರ ವಹಿಸಿಕೊಂಡರೂ ಮತ್ತು ಸುಗ್ರೀವಾಜ್ಞೆಯನ್ನು ಕಾಯಿದೆ ಮಾಡಿದ ನಂತರ ಮತ್ತೆ ಆಡಳಿತಾಧಿಕಾರಿಗಳನ್ನು ನೇಮಿಸಲಾಯಿತು. ಇದನ್ನು ಪ್ರಶ್ನಿಸಿದಾಗ ಶ್ರೇಷ್ಠ ನ್ಯಾಯಾಲಯವು ರಾಜ್ಯ ಅಪೆಕ್ಸ್ ಬ್ಯಾಂಕ್‌ನ ಮಂಡಳಿ ರಚನೆ ಮಾಡಬೇಕಾದಾಗ, ಪ್ರಾಥಮಿಕ ಕೃಷಿ ಪತ್ತಿನ ಸಂಘ ಮತ್ತು ಜಿಲ್ಲಾ ಸಹಕಾರ ಬ್ಯಾಂಕ್‌ನ ಚುನಾವಣೆ ನಡೆದ ನಂತರವೇ ನಡೆಸಬೇಕು. ಇದು ಶಾಸನಭದ್ದ ಅವಕಾಶ. ಆದ್ದರಿಂದ, ಪ್ರಾಥಮಿಕ ಮತ್ತು ಜಿಲ್ಲಾ ಬ್ಯಾಂಕ್‌ಗಳ ಚುನಾವಣೆ ನಡೆಯುವ ತನಕ ಆಡಳಿತಾಧಿಕಾರಿ ನೇಮಕ ಮಾಡತಕ್ಕದ್ದಲ್ಲವೆಂದು ನಿರ್ದೇಶಿಸಿತು. (1997 Indlaw SC 3323, (1997) 6 SCC 678, AIR 1997 SC 3723)

69. ಆಂದ್ರಪ್ರದೇಶ ಕಾಯಿದೆಯಡಿ ಸಹಕಾರ ಸಂಘಗಳ ನೌಕರರು ಲೊಕಾಯುಕ್ತ ಕಾಯಿದೆಯಲ್ಲಿ ವಿಚಾರಣೆಗೊಳ ಪಡುತ್ತಾರೇಯೋ ಎಂಬ ವಿಷಯ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಸಹಕಾರ ಸಂಘಗಳ ನೌಕರರು/ರಾಜ್ಯ ರಸ್ತೆ ಸಾರಿಗೆ ನಿಗಮದ ನೌಕರರು ಲೊಕಾಯುಕ್ತ/ಉಪಲೊಕಾಯುಕ್ತ ಕಾಯಿದೆ ವ್ಯಾಪ್ತಿಗೆ ಬರುವುದಿಲ್ಲ ಎಂಬ ತೀರ್ಮಾನವನ್ನು ವಿಭಾಗೀಯ ಪೀಠ ಎತ್ತಿಹಿಡಿಯಿತು. ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ವಿಭಾಗೀಯ ಪೀಠದ ಆದೇಶವನ್ನು ಎತ್ತಿ ಹಿಡಿಯಿತು. ಅಂದರೆ ಆಂದ್ರಪ್ರದೇಶ ಲೊಕಾಯುಕ್ತ/ಉಪಲೊಕಾಯುಕ್ತ ವ್ಯಾಪ್ತಿಗೆ (1983ರ ಕಾಯಿದೆ) "ಸಾರ್ವಜನಿಕ ಸೇವಕರು" ಎಂಬ ಅರ್ಥದಲ್ಲಿ ಬರುವುದಿಲ್ಲವಾದ್ದರಿಂದ ಲೊಕಾಯುಕ್ತ/ಉಪಲೊಕಾಯುಕ್ತರು ವಿಚಾರಣೆ ನಡೆಸಲು ಅಧಿಕಾರ ಇಲ್ಲ. (ಕಲಂ 2(ಕೆ) 1983ರ ಕಾಯಿದೆ) (1996 Indlaw SC 2028, (1997) 9 SCC 42)

70. ಕರ್ನಾಟಕ ರಾಜ್ಯ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರಿಗೆ ಹಂಚಲು ಭೂಸ್ವಾಧೀನ ಆದೇಶ ಗೆಜೆಟ್ ಪ್ರಕಟಣೆ ಮೊದಲೇ, ಜಾಹಿರಾತು ಹೊರಡಿಸಿ, ಸ್ವಾಧೀನ ಪ್ರಕ್ರಿಯೆ ಮಾಡಿರುವುದು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಏಕಸದಸ್ಯ ಪೀಠ, ರಿಟ್‌ನಲ್ಲಿ ಪ್ರಸ್ತಾಪಿಸಿದ ಐದು ಅಂಶಗಳ ಬಗ್ಗೆ ಪರಿಶೀಲಿಸಿ ಆದೇಶಿಸಿದೆ, ಇದನ್ನು ವಿಭಾಗೀಯ ಪೀಠ ಸಮರ್ಪಿಸಿದೆ. ಅದನ್ನು ಪ್ರಶ್ನಿಸಿ, ವಿಶೇಷ ಮನವಿಯನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಗೆಜೆಟ್ ಪ್ರಕಟಣೆ ಪೂರ್ವದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಿರುವುದು ಒಂದು ನ್ಯೂನತೆ ಇದನ್ನು ಪರಿಹರಿಸಿಕೊಳ್ಳಲು ಅವಕಾಶ ಇದೆ ಎಂದು ಅರ್ಜಿ ವಜಾ ಮಾಡಿತು. (1996 Indlaw SC 2371, (1996) 9 SCC 128, AIR 1997 SC 503)

71. ಆಂದ್ರಪ್ರದೇಶದ ಒಂದು ಪಟ್ಟಣಾ ಬ್ಯಾಂಕಿನ ವ್ಯವಸ್ಥಾಪಕರು, ರೈತರಿಂದ ಪಡೆದ ರೂ.10,000/– ವನ್ನು ಬೆಳೆಸಾಲದ ಖಾತೆಗೆ ಜಮಾ ಮಾಡಲಿಲ್ಲ. (ಡಿಸೆಂಬರ್ 1986) ದಿನಾಂಕ 22.03.1986 ರಂದು ರೂ.11,517.50 ನ್ನು ಸಾಲಗಾರನ ಹೆಸರಿನಲ್ಲಿ ಬ್ಯಾಂಕಿಗೆ ಜಮಾ ಮಾಡಿದೆ, ಅಂದರೆ ಸಾಲಗಾರನ ಹೆಸರಿನಲ್ಲಿ ಮೂರು ತಿಂಗಳ ಅವಧಿಗೆ ಹಣ ದುರುಪಯೋಗ ಮಾಡಿಕೊಳ್ಳಲಾಗಿದೆ

ಎಂದು ಆರೋಪ ಹೊರಿಸಿ ವಿಚಾರಣೆ ನಡೆಸಿ, ಶಿಸ್ತು ಕ್ರಮದ ಪೂರಕ ವಜಾ ಮಾಡಿದಾಗ ಉಚ್ಚನ್ಯಾಯಾಲಯದಲ್ಲಿ ವಿಚಾರಣೆ ಮಾಡಿದಾಗ, ಆರೋಪಿ ನೌಕರನನ್ನು ಪರೀಕ್ಷಿಸಿಲ್ಲವೆಂದು ತೀರ್ಮಾನಿಸಿರುವುದನ್ನು ಬ್ಯಾಂಕ್ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯದ ತೀರ್ಮಾನ ಸರಿಯಿಲ್ಲ. ಸಾಕಷ್ಟು ಅವಕಾಶ ನೀಡಲಾಗಿದೆ, ಆದ್ದರಿಂದ ವಿಚಾರಣಾ ಅವಧಿಯಲ್ಲಿ ನೀಡಿದ ಅವಕಾಶ ಸಮರ್ಪಕವಾಗಿದೆ ಎಂದು ತೀರ್ಮಾನಿಸಿತು. (1996 Indlaw SC 693, (1996) 3 SCC 364, AIR 1966 SC 1669)

72. ಮದ್ಯಪ್ರದೇಶ ಸಹಕಾರ ಕಾಯಿದೆಯ ಒಂದು ಬ್ಯಾಂಕ್, ತನ್ನ ಕಾಯ್ದಿಟ್ಟ ನಿಧಿ/ಭವಿಷ್ಯ ನಿಧಿ ಹಣವನ್ನು ಸರ್ಕಾರದ ಭದ್ರತೆಯಲ್ಲಿ ಹೂಡಿದ್ದು, ಆ ಹೂಡಿಕೆಯಿಂದ ಬಂದ ಬಡ್ಡಿ, ಆದಾಯ ತೆರಿಗೆ ಕಾಯಿದೆ ವ್ಯಾಪ್ತಿಗೆ ಬರುತ್ತದೇಯೋ ಇಲ್ಲವೇ ಎಂಬ ಪ್ರಶ್ನೆ ಬಂದಾಗ, ಬಡ್ಡಿಯನ್ನು ಲಾಭ ನಷ್ಟ ಖಾತೆಗೆ ತೆಗೆದುಕೊಂಡ ನಂತರ, ಆ ಹಣ ಬ್ಯಾಂಕಿನ ವ್ಯವಹಾರದಲ್ಲಿ ತೊಡಗಿಸಿದಂತೆ ಆಗುತ್ತಿದೆ. ಈ ಹೂಡಿಕೆಯಿಂದ ಬಂದ ಬಡ್ಡಿ ಆದಾಯ ತೆರಿಗೆ ಕಾಯಿದೆಯಲ್ಲಿ ವಿನಾಯ್ತಿಗೆ ಅರ್ಹವಲ್ಲ, ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (1996 Indlaw SC 3486, (1996) 2 SCC 541)

73. ಕರ್ನಾಟಕ ಸಹಕಾರ ಕಾಯಿದೆಯ ಒಂದು ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಪಡೆದ ಸಾಲ ಮರುಪಾವತಿಸಿಲ್ಲವೆಂದು, ಸಾಲ ಪಡೆಯುವಾಗ ಕಾಯಿದೆ ಕಲಂ 33 ರಲ್ಲಿ ಚಾರ್ಜ್ ಸೃಷ್ಟಿಯಾಗಿದೆ ಎಂಬ ಉಚ್ಚನ್ಯಾಯಾಲಯದ ತೀರ್ಮಾನವನ್ನು ವಿಶೇಷ ಅರ್ಜಿ ಮೂಲಕ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, 06.02.1968 ರಲ್ಲಿ ಸಾಲ ದಾಖಲೆ ಮಂಡಿಸಲು ಸೂಚಿಸಿದರೂ ವಿವರ ನೀಡಲಿಲ್ಲ, ಆದರೆ ಸಂಘದ ಕಾರ್ಯದರ್ಶಿ ನೀಡಿದ ಹೇಳಿಕೆಯನ್ನು ಗಮನಿಸಿದಾಗ, ಸಾಲ ಬಾಕಿ ಇದ್ದ ಬಗ್ಗೆ ಯಾವುದೇ ಸಮರ್ಥನೀಯ ದಾಖಲೆ ಇಲ್ಲ. ಆದ್ದರಿಂದ ಉಚ್ಚನ್ಯಾಯಾಲಯ ಕಾಲಂ 33ರ ರುಣಭಾರದಡಿ ಬರುತ್ತಿದೆ ಎಂಬ ತೀರ್ಮಾನ ಸರಿಯಿಲ್ಲ. ಆದರೂ ಕಲಂ 33 ಈ ಪ್ರಕರಣದಲ್ಲಿ ಅನ್ವಯವಾಗುವ ಬಗ್ಗೆ ಯಾವುದೇ ಅಭಿಪ್ರಾಯ/ತೀರ್ಮಾನಕ್ಕೆ ಬರದೇ ಮೂಲ ನ್ಯಾಯಾಲಯಕ್ಕೆ ವಿಚಾರಣೆ ನಡೆಸಲು ಸೂಚಿಸಿತು. (1993 Indlaw SC 963, (1993) 3 SCC (Supp) 663, AIR 1994 SC 1238)

74. ಕರ್ನಾಟಕ ಸಹಕಾರ ಕಾಯಿದೆಯಡಿ ಒಂದು ಹಣ್ಣು ತರಕಾರಿ ಸಂಘದ ವಿಷಯದಲ್ಲಿ ಉಚ್ಚನ್ಯಾಯಾಲಯದ ತೀರ್ಪಿನಲ್ಲಿ ಸದಸ್ಯ ವಾಣಿಜ್ಯ ವ್ಯವಹಾರ ಮಾಡುತ್ತಿದ್ದಾನೆಂಬ ತೀರ್ಮಾನಕ್ಕೆ ಸಮರ್ಥನೀಯ ಕಾರಣವಿಲ್ಲವೆಂದು ಶ್ರೇಷ್ಠ ನ್ಯಾಯಾಲಯ ಪ್ರಕರಣವನ್ನು ವಜಾ ಮಾಡಿತು. (1992 Indlaw SC 993, (1993) 1 SCC (Supp) 96A, AIR 1997 SCW 119)

75. ಉತ್ತರಪ್ರದೇಶ ಸಹಕಾರ ಕಾಯಿದೆಯಲ್ಲಿನ ಒಂದು ಸಕ್ಕರೆ ಕಾರ್ಖಾನೆಯಲ್ಲಿ, ಒಬ್ಬ ನೌಕರನನ್ನು ಒಂದು ವರ್ಷದ ಪರೀಕ್ಷಾರ್ಹ ಅವಧಿಯ ನಂತರ, ಮತ್ತೊಂದು ವರ್ಷದ ಪರೀಕ್ಷಾರ್ಹ ಅವಧಿಗೆ ವಿಸ್ತರಿಸಿ, ಆ ಅವಧಿಯಲ್ಲಿ ನಂತರ ನೌಕರನನ್ನು ವಾಣಿಜ್ಯ ಅಧಿಕಾರಿ ಹುದ್ದೆಯಿಂದ ಅಧೀಕ್ಷಕ ಹುದ್ದೆಗೆ ಹಿಂಬಡ್ತಿ ನೀಡಿತು. ಪರೀಕ್ಷಾರ್ಹ ಅವಧಿಯಲ್ಲಿ ಆ ನೌಕರನ್ನು ವಜಾ ಮಾಡುವುವಾಗಲೀ ಅಥವಾ ಹಿಂಬಡ್ತಿ ನೀಡುವುದಾಗಲೀ ಮಾಡಲಿಲ್ಲ. ಅಂದರೆ, ಸೇವಾ ನಿಯಮಗಳಂತೆ ಎರಡು ವರ್ಷಗಳ ಪರೀಕ್ಷಾವಧಿ ಮುಗಿದ ಕೂಡಲೇ ಅವನು ಖಾಯಂ ನೌಕರನಾಗುತ್ತಾನೆ. ಆದ್ದರಿಂದ ಅವನ ಸೇವೆಯಿಂದ ಹಿಂಬಡ್ತಿ ಅಥವಾ ವಜಾ ಮಾಡಲಾಗದು. ಆದ್ದರಿಂದ ಅವನ ಹಿಂಬಡ್ತಿ ಆದೇಶ ಊರ್ಜಿತವಲ್ಲ ಎಂದು ತೀರ್ಮಾನಿಸಿತು. (1986 Indlaw SC 191, (1986) SCC (Supp) 95, AIR 1986 SC 1844)

76. ಪಂಜಾಬ್ ಸಹಕಾರ ಕಾಯಿದೆಯಲ್ಲಿ ಕಲಂ 13(1) ರಲ್ಲಿ ಸಹಕಾರ ಸಂಘಗಳನ್ನು

ಸಂಯೋಜನೆಯಂತೆ ಒಂದು ಗೂಡಿಸಿದ ಬಗ್ಗೆ ಸಂವಿಧಾನದ ಅನುಚ್ಛೇದ 31ಎ(1)(ಸಿ) ವಿರುದ್ಧವಿದೆ ಎಂದು ಪ್ರಶ್ನಿಸಿದಾಗ, ಈಗಾಗಲೇ ಈ ಬಗ್ಗೆ AIR 1978 AP 121/1977 Indlaw AP 127 (FB)/AIR 1978 Kavnatan 148/1978 Indlaw Kar 176 (FB)/1976 PLJ 302 (FB)/AIR 1968 Patna 211/1967 Indlaw PAT 70/ILR 1972 AP 1140 ತೀರ್ಪುಗಳನ್ನಾಧರಿಸಿ ಶ್ರೇಷ್ಠ ನ್ಯಾಯಾಲಯದ ಐವರು ಸದಸ್ಯರ ನ್ಯಾಯ ಪೀಠ, ಸಹಕಾರ ಸಂಘಗಳ ಸಂಯೋಜನೆ ಸಂವಿಧಾನದ ಅನುಚ್ಛೇದ 31ಎ(1)(ಸಿ) ಅನ್ವಯ ಕಲಂ 13(1) ಸಂವಿಧಾನ ಬಾಹಿರವಲ್ಲವೆಂದು ತೀರ್ಮಾನಿಸಿತು. ಅಂದರೆ ಶಾಶ್ವತ ಸಂಘಗಳ ಸಂಯೋಜನೆ ಸಂವಿಧಾನ ಬಾಹಿರವಲ್ಲ. (1985 Indlaw SC 206, (1985) 2 SCC 670, AIR 1985 SC 973)

77. ಬಾಂಬೆ ಸಹಕಾರ ಸಂಘಗಳ ಕಾಯಿದೆಯಡಿ ಒಂದು ಸಹಕಾರ ಸಂಘ ಅಗತ್ಯ ವಸ್ತುಗಳ ವಿತರಣೆ ಮಾಡುವ ಸಂದರ್ಭ ಸರ್ಕಾರ ನೇಮಕ ಮಾಡಿದ ಒಬ್ಬ ಅಧಿಕಾರಿ, ಸಂಘದಲ್ಲಿ ಕೆಲಸ ನಿರ್ವಹಿಸುವ ಅವಧಿಯಲ್ಲಿ "ಸಾರ್ವಜನಿಕ ನೇಮಕ" ಎಂಬ ಅರ್ಥದಲ್ಲಿ ಬರುವುದಿಲ್ಲ. ಅಂದರೆ ಸರ್ಕಾರ, ಅರೆ ಸರ್ಕಾರಿ/ಜಿಲ್ಲಾ ಪಂಚಾಯಿತ್/ನಿಗಮ/ಮಂಡಳಿ ಗಳಲ್ಲದೆ, ಸಹಕಾರ ಸಂಘಕ್ಕೆ ನಿಯೋಜಿಸಿದ ಸರ್ಕಾರಿ ಅಧಿಕಾರಿ ಸಂಬಳ ಸರ್ಕಾರ ಪಾವತಿಸದೇ ಇರುವುದರಿಂದ ಅವನ್ನು ಸಾರ್ವಜನಿಕ ಸೇವಕನಲ್ಲ. (1981 Indlaw SC 248, (1981) 3 SCC 431, AIR 1981 SC 1395)

78. ಉತ್ತರಪ್ರದೇಶದ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಜಮೀನು ಸ್ವಾಧೀನ ಪಡಿಸಿಕೊಳ್ಳುವ ಪ್ರಕರಣದಲ್ಲಿ ಉಚ್ಚನ್ಯಾಯಾಲಯದ ತೀರ್ಮಾನವನ್ನು ಎತ್ತಿಹಿಡಿಯುತ್ತಾ (ಬೇರೆ ಕಾರಣಗಳಿಂದ)
   1. ಸರ್ಕಾರವು ಸರ್ಕಾರದ ಜಮೀನನ್ನು ಸ್ವಾಧೀನ ಪಡಿಸಲಾಗದು.
   2. ಕೇಂದ್ರ ಸರ್ಕಾರ ಪುನರ್‌ವಸತಿ ಕಾಯಿದೆಯಡಿ ಸ್ವಾಧೀನ ಪಡಿಸಿಕೊಂಡ ಜಮೀನು ಸ್ವಾಧೀನ ಮಾಡಲಾಗದು.
   3. ಹಾಲೀ ಪ್ರಕರಣದಲ್ಲಿ ಸ್ವಾಧೀನ ಪಡಿಸಿಕೊಂಡದ್ದು ಕಾನೂನು ಬಾಹಿರ. ಜಿಲ್ಲಾಧಿಕಾರಿಗಳು ಕಲಂ 5ಎ ಅಡಿ ನೀಡಿದ ವರದಿಯಂತೆ ಸ್ವಾದೀನ ಸಾಧ್ಯವಿಲ್ಲ ಎಂದು ತೀರ್ಮಾನಿಸಿತು. ಗೃಹನಿರ್ಮಾಣ ಸಂಘದ ಅರ್ಜಿ ವಜಾ ಮಾಡಿತು. (1981 Indlaw SC 206, (1981) 2 SCC 352, AIR 1981 SC 866)

79. ಆಂದ್ರಪ್ರದೇಶ ಸಹಕಾರ ಕಾಯಿದೆಯಲ್ಲಿ ದಾವಾ ಪ್ರಕರಣ ದಾಖಲಿಸುವಾಗ "ಇನ್ನಾವುದೇ ವಿವಾದ" ಎಂದರೆ ನೌಕರರ ವಿವಾದ ಸೇರುವುದರ ಬಗ್ಗೆ ವಿಮರ್ಷೆ ಮಾಡಿ ಸಂಘದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಎಂದರೆ, ಅದು ನೌಕರರ ವಿವಾದ ಸೇರುವುದಿಲ್ಲ. ನೌಕರರಿಗೆ ಸಂಬಂಧಪಟ್ಟಂತೆ ನಿಬಂಧಕರ ಕಾರ್ಯವ್ಯಾಪ್ತಿಗೆ ಸಂಬಂಧಪಟ್ಟ ವಿಷಯವಲ್ಲ. ಅಂದರೆ ನೌಕರರನ್ನು ತೆಗೆದು ಹಾಕುವ ಅಥವಾ ಪುನರ್ ಸ್ಥಾಪಿಸುವ ಅಧಿಕಾರ ನಿಬಂಧಕರಿಗೆ ಇಲ್ಲಿ, ಇದು ಕಾರ್ಮಿಕ ನ್ಯಾಯಾಲಯದ ವ್ಯಾಪ್ತಿ ಎಂದು ತೀರ್ಮಾನಿಸಿತು.

   **ಸೂಚನೆ : ಈ ತೀರ್ಮಾನವನ್ನು ಕಾನೂನು ತಿದ್ದುಪಡಿಗಳ ನಂತರ ಶ್ರೇಷ್ಠ ನ್ಯಾಯಾಲಯ ನಿಬಂಧಕರ ಕಾರ್ಯವ್ಯಪ್ತಿಗೆ ಬರುತ್ತದೆ ಎಂದು ತೀರ್ಮಾನಿಸಿದೆ. ಅಂದರೆ ಈ ತೀರ್ಮಾನ ಈಗ ಸಿಂದುವಲ್ಲ.**

   (1979 Indlaw SC 291, (1979) 3 SCC 123, AIR 1979 SC 1203)

80. ಪಂಜಾಬ್ ಸಹಕಾರ ಕಾಯಿದೆಯ ರಾಜ್ಯ ಭೂಅಭಿವೃದ್ಧಿ ಬ್ಯಾಂಕಿನ ನೇಮಕಾತಿಗೆ ಸಂಬಂಧಪಟ್ಟಂತೆ, ರಿಟ್ ದಾಖಲಿಸುವ ಬಗ್ಗೆ, ಈ ಹಿಂದೆ ಸಹಕಾರ ಸಂಘ "ರಾಜ್ಯ" ಎಂಬ ವ್ಯಾಪ್ತಿಗೆ

ಬರುವುದಿಲ್ಲವೆಂದು ವಿಭಾಗೀಯ ಪೀಠ 1992 Indlaw SC 144 ನಲ್ಲಿ ತೀರ್ಮಾನ ನೀಡಿತ್ತು. ನೇರ ನೇಮಕಾತಿ ಮತ್ತು ಭಡ್ತಿ ಮೀಸಲಾತಿ ಬಗ್ಗೆ ವಿಮರ್ಷೆ ಮಾಡುವಾಗ ನಿಗದಿತ ಪ್ರಮಾಣ ನಿಗದಿ ಪಡಿಸಿದ್ದು ಅದನ್ನು ಪಾಲಿಸುವುದು ಬ್ಯಾಂಕಿನ ಕರ್ತವ್ಯ. ಈ ನೀತಿಯನ್ನು ಪರಾಮರ್ಷಿಸುವ ಅಗತ್ಯವಿಲ್ಲವೆಂದು ವಿಶೇಷ ಮನವಿಯನ್ನು ವಜಾಗೊಳಿಸಿತು. (1976 Indlaw SC 114, (1976) 3 SCC 828, AIR 1976 SC 2216)

81. ಕರ್ನಾಟಕ ಸಹಕಾರಿ ಕಾಯಿದೆಯಲ್ಲಿನ ಬಳ್ಳಾರಿ ಸಹಕಾರ ಬ್ಯಾಂಕಿನ ಆಡಳಿತ ಮಂಡಳಿ ಪದಾಧಿಕಾರಿಗಳನ್ನು ಕಲಂ 54 ಹಾಗೂ 121 ರ ಮುಖಾಂತರ ನಿಷ್ಕ್ರಯಗೊಳಿಸಿ ಹೊರಡಿಸಿದ ಆದೇಶಗಳು ಅಸಿಂದು ಎಂದು ಉಚ್ಚನ್ಯಾಯಾಲಯದ ತೀರ್ಮಾನವನ್ನು ಎತ್ತಿಹಿಡಿದು, ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. "ನಿಯಂತ್ರಣ" ಎಂಬ ಪದವನ್ನು ವಿಮರ್ಷಿಸಿ, ಕಲಂ 30 ರಲ್ಲಿ ಮಂಡಳಿಗೆ ನೋಟೀಸ್ ಜಾರಿ ಮಾಡಿ ಆಡಳಿತಾಧಿಕಾರಿ ನೇಮಿಸಬಹುದು. ಆದರೆ ಕಲಂ 54 ರಲ್ಲಿ ಬ್ಯಾಂಕಿನ ನಿಯಂತ್ರಣ ಪಡೆಯುವ ಮೂಲಕ ಪದಾಧಿಕಾರಿಗಳನ್ನು ಸಹ ತೆಗೆದು ಹಾಕಿದಾಗೆ ಇದು ಅಸಿಂದು ಎಂದು ತೀರ್ಮಾನಿಸಿತು. (1974 Indlaw SC 104, (1974) 2 SCC 498, AIR 1974 SC 1863)

**ಸೂಚನೆ : ಈಗ ಕಾಯಿದೆಯಲ್ಲಿ ಈ ಕಲಂ 54 ನ್ನು ಕೈಬಿಡಲಾಗಿದೆ.**

82. ಆಗ್ರಾ ಜಿಲ್ಲಾ ಸಹಕಾರ ಬ್ಯಾಂಕಿನ ಒಬ್ಬ ನೌಕರನನ್ನು ವಾರ್ಷಿಕ ಮಹಾಸಭೆಯ ಹಿಂದಿನ ದಿವಸ ತುರ್ತು ಆಡಳಿತ ಮಂಡಲಿ ಸಭೆ ಕರೆದು ವಜಾ ಮಾಡಲು ತೀರ್ಮಾನಿಸಿ ಜಾರಿ ಮಾಡಿತು. ನೌಕರನು ಇದನ್ನು ನಿಬಂಧಕರ ಮುಂದೆ ಪ್ರಶ್ನಿಸಿದಾಗ, ನಿಬಂಧಕರ, ನೋಟೀಸ್ ಜಾರಿ ಮಾಡಿದೆ, ಅಂದರೆ ಸ್ವಾಭಾವಿಕ ನ್ಯಾಯಾದನ್ವಯ ಅವಕಾಶ ನೀಡದೇ ತೆಗೆದು ಹಾಕಿರುವುದು ತಪ್ಪು ಎಂದು ವಜಾ ಆದೇಶವನ್ನು ರದ್ದು ಮಾಡಿ ಆದೇಶಿಸಿದರು. ಈ ಆದೇಶವನ್ನು ಒಂದು ವರ್ಷದ ನಂತರ ಹೊಸದಾಗಿ ಬಂದ ನಿಬಂಧಕರು ಯಾವುದೇ ಕಾರಣ ನೀಡದೆ ಹಿಂದಿನ ನಿಬಂಧಕರ ಆದೇಶವನ್ನು ಹಿಂಪಡೆದರು. ಈ ವಿಷಯವನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಬೇರೆ ಕಾರಣಗಳಿಂದ ಪುರಸ್ಕರಿಸಿದ್ದನ್ನು ಶ್ರೇಷ್ಠ ನ್ಯಾಯಾಲಯ ರದ್ದು ಪಡಿಸಿ, ಹೊಸದಾಗಿ ಬಂದ ನಿಬಂಧಕರ ಆದೇಶವನ್ನು ಮತ್ತು ಆ ನಂತರ ಅದರ ಆಧಾರದ ಮೇಲೆ ಆಡಳಿತಾಧಿಕಾರಿ ಹೊರಡಿಸಿದ ಎಲ್ಲಾ ಆದೇಶಗಳನ್ನು ರದ್ದು ಪಡಿಸಿತು ಮತ್ತು ನೌಕರನ್ನು ಎಲ್ಲಾ ಹಂತದ ಖರ್ಚನ್ನು ಭರಿಸಲು ಆದೇಶಿಸಿತು. (1976 Indlaw SC 114, (1976) 3 SCC 828, AIR 1976 SC 2216)

83. ಆಂದ್ರಪ್ರದೇಶ ಕಾಯಿದೆಯಡಿ, ಒಂದು ಸಂಸ್ಥೆಯ ನೌಕರನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಾಗ (ನೌಕರರ ಕ್ಷೇಮ ನಿಧಿ ಉದ್ದೇಶಕ್ಕೆ) ಒಂದು ವರ್ಷದ ಅವಧಿಯೊಳಗೆ ಕೆಲಸ ನಿರ್ವಹಿಸಿದ್ದರೆ, ಅದನ್ನು ಪರಿಗಣಿಸುವಂತಿಲ್ಲ. ಇದು ಕಲಂ.1(3)(ಎ) ನ ಅರ್ಥದಲ್ಲಿ ಬರುವುದಿಲ್ಲ. ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿಹಿಡಿಯುತ್ತಾ ಶ್ರೇಷ್ಠ ನ್ಯಾಯಾಲಯ ಪ್ರತಿ ವರ್ಷ ಜೂನ್ ನಿಂದ ಸೆಪ್ಟೆಂಬರ್ ವರೆಗೆ ನೀರು ಸರಬರಾಜು ಮಾಡಲು ನೇಮಿಸಿಕೊಂಡಿದ್ದರೆ ಮಾತ್ರ ಖಾಯಂ ನೌಕರ ಎಂದು ಪರಿಗಣಿಸಲು ಮಂಡಿಸಿದ ವಾದವನ್ನು ಉಚ್ಚನ್ಯಾಯಾಲಯ ಒಪ್ಪದೆ ಇರುವುದು ಸರಿಯಾದ ಕ್ರಮ. (1971 Indlaw SC 103, (1971) 2 SCC 68, AIR 1971 SC 1519)

84. ಆಂದ್ರಪ್ರದೇಶ ಕಾಯಿದೆಯಡಿ ಒಂದು ಸಂಘದ ಸೇವಾ ನಿಯಮಗಳನ್ನು ಬದಲಾವಣೆ ಮಾಡಿದಾಗ ಮತ್ತು ಉಪನಿಯಮಗಳ ತಿದ್ದುಪಡಿಯಂತೆ ಮಾರ್ಪಡಿಸಿದಾಗ, ಆ ವಿವಾದ ನಿಬಂಧಕರ ಕಾರ್ಯವ್ಯಾಪ್ತಿಗೆ ಬರುವುದಿಲ್ಲ. ಆದು ಔದ್ಯೋಗಿಕ ಕಾಯಿದೆ ವ್ಯಾಪ್ತಿಗೆ ಬರುತ್ತದೆ. ಕಾರ್ಮಿಕ ನ್ಯಾಯಾಲಯ ನೌಕರರ/ಮಾಲಿಕರ ಸೇವಾ ಸೌಲಭ್ಯಗಳ ಬಗ್ಗೆ ತೀರ್ಮಾನ ಮಾಡುವಾಗ,

ನಿಬಂಧಕರ ವ್ಯಾಪ್ತಿ ಇಲ್ಲ.

**ಸೂಚನೆ : ಈ ತೀರ್ಮಾನ ಈಗ ಅನ್ವಯವಾಗುವುದಿಲ್ಲ ಏಕೆಂದರೆ ಎಲ್ಲಾ ರಾಜ್ಯ ಸಹಕಾರ ಕಾಯಿದೆಯಲ್ಲಿ ಈಗ ಕಾರ್ಮಿಕ/ಕಂದಾಯ/ಸಿವಿಲ್ ನ್ಯಾಯಾಲಯಗಳ ವ್ಯಾಪ್ತಿ ಕಿತ್ತು ಹಾಕಿದೆ.**

(1969 Indlaw SC 341, (1969) 2 SCC 43, AIR 1970 SC 245)

85. ಪಂಜಾಬ್ ಕಾಯಿದೆ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರಿಗೆ ಅಗತ್ಯವಾದ ಜಮೀನು ಭೂಸ್ವಾದಿನ ಪಡಿಸಿಕೊಳ್ಳುವ ಬಗ್ಗೆ ಪಂಜಾಬ್ ಉಚ್ಚನ್ಯಾಯಾಲಯ ಪ್ರಕರಣವನ್ನು ವಜಾ ಮಾಡಿದಾಗ ವಿಶೇಷ ಮನವಿ ಮೂಲಕ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಭೂಸ್ವಾಧೀನ ಮಾಡಿದಾಗ, ಹಣ ಪಾವತಿ ಮಾಡುವಾಗ ಪೂರ್ತಿ ಅಥವಾ ಭಾಗಶಃ ಸಾರ್ವಜನಿಕ ನಿಧಿಯಿಂದ ಪಾವತಿ ಮಾಡಿರಬೇಕು. ಅಂದರೆ ಭೂಸ್ವಾಧೀನ ಪ್ರಕ್ರಿಯ ಪ್ರಾರಂಭಿಸಲು ಮುಕ್ತಾಯಗೊಳಿಸಲು ಸರ್ಕಾರದ ಹಣ/ಸಾರ್ವಜನಿಕ ನಿಧಿಯಿಂದ ಪೂರ್ತಿ ಅಥವಾ ಭಾಹಶಃ ಹಣ ಪಾವತಿ ಆದರೆ, ಕಾಯಿದೆ ಭಾಗ VII ಅನ್ವಯ ಹಣ ಸಂದಾಯವಾಗಬೇಕು ಎಂದು ಪ್ರಕರಣವನ್ನು ವಜಾ ಮಾಡಿತು. (1960 Indlaw SC 264, AIR 1961 SC 343, (1961) 2 SCR 459)

86. ಬಿಹಾರ್ ಸಹಕಾರ ಕಾಯಿದೆಯ ರಾಜ್ಯ ಸಹಕಾರ ಬ್ಯಾಂಕ್ ಪ್ರಕರಣದಲ್ಲಿ ಬ್ಯಾಂಕ್‌ಗಳು ಹೂಡಿದ ಠೇವಣಿ ಮೇಲೆ ಬಂದ ಬಡ್ಡಿ ಆದಾಯ ತೆರಿಗೆ ವ್ಯಾಪ್ತಿಗೆ ಬರುವುದಿಲ್ಲ ಎಂಬ ಉಚ್ಚನ್ಯಾಯಾಲಯದ ತೀರ್ಮಾನವನ್ನು ಅಂದರೆ ಅದು ವ್ಯವಹಾರದ ಮೇಲೆ ಬಂದ ಬಡ್ಡಿಯಲ್ಲವೆಂದು, ಮತ್ತು ಅದು ತೆರಿಗೆ ವಿನಾಯ್ತಿಗೆ ಬರುವುದಿಲ್ಲವೆಂಬ ತೀರ್ಮಾನವನ್ನು ರದ್ದುಗೊಳಿಸಿದ್ದ ಆದೇಶವನ್ನು ತಪ್ಪು ಎಂದು ತೀರ್ಮಾನಿಸಿ, ರಾಜ್ಯ ಸಹಕಾರ ಬ್ಯಾಂಕಿನ ವಿಶೇಷ ಮನವಿಯನ್ನು ಪುರಸ್ಕರಿಸಿತು. (1960 Indlaw SC 418, AIR 1960 SC 789, (1960) 3 SCR 58)

87. ಒಂದು ಸಹಕಾರ ಕೇಂದ್ರ ಬ್ಯಾಂಕಿನ ನೌಕರರ ಸೇವಾ ನಿಯಮಗಳ ಮಾರ್ಪಾಡು, ಆ ಬ್ಯಾಂಕಿನ "ವ್ಯವಹಾರ"ದಲ್ಲಿ ಬರುವುದಿಲ್ಲ. ಇದಕ್ಕೆ ಪೂರಕವಾಗಿ 1968 Indlaw SC 309/1969 Indlaw SC 341 ಅನ್ನು ಅನುಸರಿಸಲಾಗಿದೆ. (1981 Indlaw SC 498, (1981) 4 SCC 431, AIR 1982 SC 120)

88. ಉತ್ತರಪ್ರದೇಶ ಸಹಕಾರ ಕಾಯಿದೆಯಲ್ಲಿ ಪ್ರಕರಣದಲ್ಲಿ ಗೊದಾಮು ಪಾಲಕರನ್ನು ವಜಾ ಮಾಡಿದಾಗ, ಅಂತಹ ಸಂದರ್ಭದಲ್ಲಿ ಗೊದಾಮು ಪಾಲಕ ಅಧಿಕಾರಿ (ಮೇಲ್ವಿಚಾರಕ) ಅಲ್ಲದೇ ಇರುವುದರಿಂದ ಅದು ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತದೆ.

**ಸೂಚನೆ : ಈ ತೀರ್ಪು ಈಗ ಅನ್ವಯಿಸುವುದಿಲ್ಲ. ಏಕೆಂದರೆ ಶಿಸ್ತು ಕ್ರಮ ಸಹಕಾರ ಕಾಯಿದೆಯಲ್ಲಿ ಬರುತ್ತದೆ ಎಂದು ತೀರ್ಪುಗಳು ಇವೆ.**

(1980 Indlaw SC 68, AIR 1981 SC 152)

89. ಉತ್ತರಪ್ರದೇಶದ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಸಹಕಾರ ಸಂಸ್ಥೆ, ಬ್ಯಾಂಕಿಂಗ್ ವ್ಯವಹಾರ ಮಾಡಿದ ಕೂಡಲೇ ಅದು ಸಹಕಾರ ಸಂಘ ಅಲ್ಲ ಎಂದು ತಿಳಿಯತಕ್ಕದ್ದಲ್ಲ. ಒಂದು ಸಹಕಾರ ಸಂಸ್ಥೆ ಬ್ಯಾಂಕಿಂಗ್ ವ್ಯವಹಾರ ಮಾಡಿ ಬೇರೆ ಸಹಕಾರ ಸಂಘಗಳಿಗೆ ಹಣಕಾಸು ಪೂರೈಸುವ ವ್ಯವಸ್ಥೆ ಅವಶ್ಯಕ. ಆದರೆ, ಅದು ಬ್ಯಾಂಕಿಂಗ್ ಕೆಲಸ ಮಾಡಿದಾಕ್ಷಣ, ಕಾಯಿದೆಯಲ್ಲಿ ಸಹಕಾರ ಸಂಘವಾಗಿಯೂ ಮುಂದುವರಿಯುತ್ತಿದೆ ಮತ್ತು ಅದಕ್ಕೆ ಕಾನೂನಿನಲ್ಲಿ ನಿರ್ವಹಿಸಬೇಕಾದ ಕರ್ತವ್ಯ, ಜವಾಬ್ದಾರಿ ಮತ್ತು ನಿಯಂತ್ರಣ ಅನ್ವಯಿಸುತ್ತದೆ. (1980 Indlaw SC 472, (1980) 4 SCC 109)

90. ಒಂದು ಆಪೆಕ್ಸ್ ಸಂಘದ ಸದಸ್ಯತ್ವ ಮಧ್ಯವರ್ತಿ ಸಂಘಕ್ಕೆ ಸೀಮಿತ, ಅದರಂತೆ ಮಧ್ಯವರ್ತಿ ಸಂಘದ ಸದಸ್ಯತ್ವ ಪ್ರಾಥಮಿಕ ಸಂಘಕ್ಕೆ ಸೀಮಿತ. ಈ ಪ್ರಕರಣದಲ್ಲಿ ಪ್ರಾಥಮಿಕ ಸಂಘದ ಸದಸ್ಯವಿದ್ದು

ಅವನ್ನು ಮಧ್ಯವರ್ತಿ ಸಂಘದ ಸದಸ್ಯನಲ್ಲ. ಆದ್ದರಿಂದ, ತಕರಾರು ಸಲ್ಲಿಸಿ, ವಿವಾದ ಇತ್ಯರ್ಥ ಪಡಿಸಲು ಹಣವ್ಯಯ ಮಾಡುವ ಬದಲು, ಅರ್ಜಿ ದಾರನಿಗೆ ಎರಡು ಕಂತುಗಳಲ್ಲಿ ಹಣ ಪಾವತಿಸಲು ಸೂಚಿಸಿ, ಆ ಕಂತು ಪಾವತಿಸದೇ ಇದ್ದರೆ ಶೇ.12% ರ ಬಡ್ಡಿ ದರದೊಂದಿಗೆ ವಸೂಲಿ ಮಾಡಿಕೊಳ್ಳಲು ಸೂಚಿಸಿ, ಹಣ ಪಾವತಿಸಿದ ನಂತರ ಕ್ರಿಮಿನಲ್ ಮತ್ತು ಸಿವಿಲ್ ಪ್ರಕರಣ ಮುಕ್ತಾಯವಾಗುವುದೆಂದು ತೀರ್ಮಾನಿಸಿತು. (1980 Indlaw SC 519, AIR 1980 SC 1663)

91. ಮದ್ರಾಸ್ ಸಹಕಾರ ಕಾಯಿದೆ ಕಲಂ 60 ಎ ಸಿಂದುತ್ವದ ಬಗ್ಗೆ ಪ್ರಕರಣ ದಾಖಲಿಸಿತ್ತು. (ಇದು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ 121) ಈ ಪ್ರಕರಣವನ್ನು ಇತ್ಯರ್ಥ ಪಡಿಸಿ ಕೆಲವು ನಿರ್ದೇಶನ ನೀಡಲಾಗಿತ್ತು. ಈಗ ಕೆರಳ ರಾಜ್ಯ ಈ ವಿಷಯವನ್ನು ಮತ್ತೆ ಪ್ರಶ್ನಿಸಿದೆ. ಈ ತೀರ್ಪು ನೀಡುವಾಗ ಪರಿಶೀಲಿಸಿದ ತೀರ್ಮಾನಗಳು (1) 1954 Indlaw SC 135 (2) 1954 Indlaw SC 120 (3) 1958 Indlaw SC 25 (4) 1957 Indlaw SC 158 (5) 1961 Indlaw SC 70 (6) 1961 Indlaw SC 100 ಸಹಕಾರ ಕಾಯಿದೆ ಒಂದು ಸಮಾಜ ಸೇವಾ ಕಾಯಿದೆ, ಇದರಲ್ಲಿ ಸಂಘಗಳನ್ನು ಸ್ಥಾಪಿಸಿ, ಉಳಿತಾಯ, ಸ್ವಸಹಾಯದ ಮೂಲಕ ಸದಸ್ಯ ಆರ್ಥಿಕ ಬೆಳವಣಿಗೆಗೆ ರಚನೆ ಮಾಡಿದ್ದು. ಸಹಕಾರ ಕಾಯಿದೆ ವಿಸ್ತಾರವಾಗಿದ್ದು, ಎಲ್ಲಾ ವಿಷಯಗಳ ಆಗಾದತೆಯನ್ನು ಗಮನದಲ್ಲಿರಿಸಿಕೊಂಡು, ಕೆಲವು ಪ್ರಸಂಗದಲ್ಲಿ ವಿನಾಯ್ತಿ ನೀಡಲು ಅವಕಾಶವನ್ನು ಕಲಂ 60 ರಲ್ಲಿ ಕಲ್ಪಿಸಿದೆ. ಈ ಕಲಂನಲ್ಲಿ ನೀಡಿದ ಅವಕಾಶ ಕೆಲವು ಪ್ರಸಂಗದಲ್ಲಿ ವಿನಾಯ್ತಿ ಅವಶ್ಯಕ ಎಂದು ಸರ್ಕಾರ ಮನಗಂಡರೆ, ವಿನಾಯ್ತಿ ನೀಡಲು ಅವಕಾಶ ಕಲ್ಪಿಸಿದೆ. ಸಹಕಾರ ಕಾಯಿದೆ ಧ್ಯೆಯೋದ್ದೇಶಗಳನ್ನು ಈಡೇರಿಸಲು ಈ ಅವಕಾಶ ಕಲ್ಪಿಸಿದ್ದು, ಇದರ ಅವಶ್ಯಕತೆ ಬಗ್ಗೆ ಮತ್ತು ಇದು ಅಸಂವಿದಾನಿಕವಲ್ಲವೆಂದು ತೀರ್ಪಿತ್ತದೆ. (1979 Indlaw SC 301, (1980) 1 SCC 340, AIR 1980 SC 350, 1980 KLJ 112)

92. ಗುಜರಾತ್ ರಾಜ್ಯದ ಐದು ಸಹಕಾರ ಸಕ್ಕರೆ ಕಾರ್ಖಾನೆಗಳು, ಉತ್ತರಪ್ರದೇಶ ಸರ್ಕಾರ ಪುನರ್ ವಿಮರ್ಷೆ ಮಾಡಿದ ವೇತನ, ಭತ್ಯ ಮತ್ತಿತರ ಸೌಲತ್ತು ನೀಡುವ ಬಗ್ಗೆ, ಈ ಅರ್ಜಿ ಗುಜರಾತ್ ಉಚ್ಚನ್ಯಾಯಾಲಯ ಸಹಕಾರ ಸಕ್ಕರೆ ಕಾರ್ಖಾನೆಗಳು ತಯಾರಿಸುವ ಆರ್ಥಿಕ ತಃಖ್ತೆಗಳನ್ನು ತಯಾರಿಸುವಾಗ ಅನುಸರಿಸಬೇಕಾದ ನೀತಿ ಬಗ್ಗೆ ತಪ್ಪು ನಿರ್ಧಾರ ತೆಗೆದುಕೊಂಡಿದೆ ಮತ್ತು ಕಾರ್ಖಾನೆಗಳ ತಃಖ್ತೆಗಳಲ್ಲಿ ರೂಪಿಸಿದ ನೀತಿ ಪರಿಶೀಲಿಸಿ, ಲಾಭಾಂಶಕ್ಕೆ ಬರಬೇಕು. ಉತ್ತರಪ್ರದೇಶ ಸರ್ಕಾರದ ನೀತಿ ಪಾಲಿಸುತ್ತೇವೆಂಬ ನೀತಿ ತಪ್ಪು. ಇದಕ್ಕೆ ಪೂರಕವಾಗಿ ಹಿಂದಿನ ತೀರ್ಮಾನಗಳು ಅಂದರೆ (1)1952 Indlaw SC 67 (2) 1962 Indlaw SC 436 (3) 1967 Indlaw SC 132 (4) 1972 Indlaw SC 36 (5) 1978 Indlaw SC 31 (6) 1972 Indlaw SC 18ನ್ನು ಪರಿಶೀಲಿಸಿದೆ. ಇದರ ಜೊತೆಗೆ ಸಕ್ಕರೆ ಕಾರ್ಖಾನೆಗಳು ಗುಜರಾತ್ ಸಹಕಾರ ಕಾಯಿದೆ ಕಲಂ 66ನ್ನು ಪಾಲಿಸಬೇಕು ಅಂದರೆ, ಕೂಡಬೇಕಾಗದ ಬಡ್ಡಿ, ಸುಸ್ತಿ ಸಾಲ 6 ತಿಂಗಳಿಗಿಂತ ಹೆಚ್ಚಿರುವ, ನೌಕರ ಸಂಬಳ ಭತ್ಯ, ಗ್ರಾಚೂಯಿಟಿ, ಭವಿಷ್ಯ ನಿಧಿ, ಸಾಲಗಳ ಮೇಲಿನ ಅ ಸಾಲ ಮತ್ತು ಬಡ್ಡಿ, ಆಡಿಟ್ ಶುಲ್ಕ, ನಿರ್ವಹಣಾ ವೆಚ್ಚ, ಬಾಡಿಗೆ, ಟ್ಯಾಕ್ಸ್, ಡಿಪ್ರಿಸಿಯೇಷನ್ ಇನ್ನಿತರ ಖರ್ಚು ಆಧರಿಸಿ ಲಾಭಾಂಶ ತೀರ್ಮಾನಿಸಬೇಕು. ಇವುಗಳೆಲ್ಲವನ್ನು ಪರಿಶೀಲಿಸಿ ತೀರ್ಮಾನಿಸಬೇಕು. ಈ ಪ್ರಕರಣದಲ್ಲಿ ತೀರ್ಮಾನಿಸಬೇಕಾದ ಒಂದೇ ಅಂಶ, ತುಟ್ಟಿ ಭತ್ಯೆಯನ್ನು ರೂ.21/– ರಿಂದ ರೂ.40/– ಕ್ಕೆ ಹೆಚ್ಚಿಸುವ ಬಗ್ಗೆ ಸಹಕಾರ ಸಕ್ಕರೆ ಕಾರ್ಖಾನೆಗಳು, ಅಷ್ಟು ದುಸ್ತಿತಿಗೆ ಬಂದಿಲ್ಲವೆಂದು ಮತ್ತು ಇದರಿಂದ ಹೆಚ್ಚಿನ ಆರ್ಥಿಕ ಹೊರೆಯಾಗುವುದಿಲ್ಲವೆಂದು ಮತ್ತು ಇದಕ್ಕೆ ಪೂರಕವಾಗಿ ಕೈಗಾರಿಕಾ ನ್ಯಾಯಾಲಯ ನೀಡಿದ 100% ವರ್ಗೀಕರಿಸಿದ ತಮ್ಮ ಭತ್ಯ ಬದಲಾಗಿ 83 ಪೈಸೆ ನೀಡಲು ಅಂದರೆ ರೂ.21/– ರಿಂದ ರೂ.40/– ಕ್ಕೆ ಹೆಚ್ಚಿಸಲು ಸೂಚಿಸಿತು. (1979 Indlaw SC 314, (1979) 4 SCC 622, AIR 1980 SC 31)

93. ಚುನಾವಣೆಗೆ ಸಂಬಂಧಪಟ್ಟ ಪ್ರಕರಣಗಳಲ್ಲಿ ಆರೋಪ ಮಾಡಿದ ವ್ಯಕ್ತಿ ಯಾವುದೇ ಅನುಮಾನಗಳು ಇಲ್ಲದಷ್ಟು ದಾಖಲೆ, ಸಾಕ್ಷಿಗಳನ್ನು ಪೂರೈಸಿದಾಗ ಮಾತ್ರ ಅರ್ಜಿ ಪುರಸ್ಕರಿಸಬೇಕು ಚುನಾವಣೆ ದಿನಾಂಕದಂದು ಸದಸ್ಯರನ್ನು ಕರೆತರಲು ವಾಹನಗಳ ವ್ಯವಸ್ಥೆ ಮಾಡಲಾಗಿತ್ತು ಎಂಬುದನ್ನು ಸಾಬೀತು ಮಾಡಬೇಕು. ಸಾಕ್ಷ್ಯಾಧಾರಗಳನ್ನು ಒದಗಿಸಬೇಕು. ಆಯುಕ್ತರು ಚುನಾವಣೆಯನ್ನು ರದ್ದುಗೊಳಿಸಿರುವುದು ತಪ್ಪು ಎಂದು ಶ್ರೇಷ್ಠ ನ್ಯಾಯಾಲಯ ತೀರ್ಪಿಸುತ್ತದೆ. (1978 Indlaw SC 333, AIR 1978 SC 351, (1978) 1 SCC 504)

94. ಆಂದ್ರಪ್ರದೇಶ ಸಹಕಾರ ಕಾಯಿದೆಯಲ್ಲಿ, ನಿಬಂಧಕರ ಅಧಿಕಾರಗಳನ್ನು ಚಲಾಯಿಸುವಾಗ, ಅದಕ್ಕೆ ಸಂಬಂಧಪಟ್ಟ ಆದೇಶಗಳಲ್ಲಿ, ಉಪನಿಬಂಧಕರು ನಿಬಂಧಕರ ಕೆಳಗಿನ ಅಧಿಕಾರಿಯಾಗಿದ್ದರೂ, ನಿಬಂಧಕರ ಅಧಿಕಾರ ಚಲಾಯಿಸಲು ಕಲಂ 77ರಲ್ಲಿ ಉಪನಿಬಂಧಕರಿಗೆ ಅಧಿಕಾರ ನೀಡಿರಲಿಲ್ಲ. ಕಲಂ 76(2) ರಲ್ಲಿ ನಿಬಂಧಕರ ಅಧಿಕಾರ ಚಲಾಯಿಸಲು ಅಪರ ನಿಬಂಧಕರು, ಜಂಟಿ ನಿಬಂಧಕರು, ಜಿಲ್ಲಾ ಕಲೆಕ್ಟರ್ ಮತ್ತು ವಿಶೇಷ ದರ್ಜೆ ಉಪನಿಬಂಧಕರು (ಕಲೆಕ್ಟರ್ ಕಛೇರಿಯಲ್ಲಿ ಕೆಲಸ ನಿರ್ವಹಿಸಲು ನೇಮಿಸಿದ) ವ್ಯಕ್ತಿಗಳಿಗೆ ಮಾತ್ರ ನೀಡಲಾಗಿತ್ತು. ಉಪನಿಬಂಧಕರಿಗಲ್ಲ. ಆದರೆ ಈ ಉಪನಿಬಂಧಕರಿಗೆ ಕಲಂ 16 ಮತ್ತು 77ರ ಅಧಿಕಾರ ನೀಡಲಾಗಿತ್ತು. ಕಾಯಿದೆಯಲ್ಲಿ ನೋಟೀಸ್ ನೀಡಬೇಕು ಎಂದು ತಿಳಿಸಿಲ್ಲವಾದರೂ, ಯಾವ ವ್ಯಕ್ತಿಯ ಮೇಲೆ ಆರೋಪಗಳನ್ನು ಮಾಡಲಾಗಿದೆಯೋ, ಆ ವ್ಯಕ್ತಿಗೆ ಕನಿಷ್ಠ ತಿಳುವಳಿಕೆ ನೀಡುವ ಅವಶ್ಯಕತೆ ಇದೆ, ಎಂದರೆ ಒಂದು ಸಾಮಾನ್ಯ ನೋಟೀಸನ್ನಾದರು ನೀಡಬೇಕು. ನೀಡಿಲ್ಲವಾದ್ದರಿಂದ ಮೇಲ್ಮನವಿ ಪುರಸ್ಕರಿಸಲಾಯಿತು. (1977 Indlaw SC 107, AIR 1977 SC 2313, (1977) 4 SCC 337)

95. ನ್ಯಾಯಾಲಯ ನೇಮಿಸಿದ ಒಬ್ಬ ವ್ಯಕ್ತಿ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸಭೆಯನ್ನು ಕರೆಯಲು ಮತ್ತು ಸದಸ್ಯರ ಪಟ್ಟಿಯನ್ನು ಮರು ಪರಿಶೀಲಿಸಿ, ಸುಸ್ತಿದಾರ ಪಟ್ಟಿಯು ಸರಿಯಾಗಿ ತಯಾರಿಸಿದ ಬಗ್ಗೆ ಮರು ಪರಿಶೀಲಿಸಿ ನಿವೇಶನ ಪಡೆಯಲು ಅರ್ಹರ ಪಟ್ಟಿ ತಯಾರಿಸಲು ಸೂಚಿಸಿತು. ಅದರಂತೆ ತಯಾರಿಸಿದ ಪಟ್ಟಿಯನ್ನು ಎ.ಬಿ.ಡಿ.ಡಿ.ಇ ಎಂದು ವರ್ಗೀಕರಿಸಿ, ನಿವೇಶನ ಹಂಚಿಕೆಯನ್ನು ಒಂದು ಪಟ್ಟಿಯ ನಂತರ ಮತ್ತೊಂದು ಪಟ್ಟಿಗೆ ಹಿರಿತನದ ಆಧಾರದ ಮೇಲೆ ಮಂಜೂರಿ ಪತ್ರ ನೀಡಿ, ದಿಲ್ಲಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ನೀಡಿ, ಅವರು ತಿಳಿಸಿದ ಹಣವನ್ನು 15 ದಿವಸದೊಳಗೆ ಹಣ ಕಟ್ಟಿದರೆ, ನಿವೇಶನ ನೋಂದಾಯಿಸಿಕೊಡಲು ಸೂಚಿಸಿತು. (1976 Indlaw SC 254, (1977) 2 SCC 314, AIR 1977 SC 1900)

96. ಮಹಾರಾಷ್ಟ ಕಾಯಿದೆ ಕಲಂ 97 ರಡಿ, ಒಂದು ಗೃಹ ನಿರ್ಮಾಣ ಸಹಕಾರ ಸಂಘ ಅಡಮಾನ ಮಾಡಿದ ಆಸ್ತಿಯನ್ನು ನ್ಯಾಯಾಲಯದ ಮಧ್ಯಪ್ರವೇಶವಿಲ್ಲದೆ ಹರಾಜು ಹಾಕಬಹುದೆಂದು ಮತ್ತು ಹರಾಜಿನಲ್ಲಿಕೊಂಡ ವ್ಯಕ್ತಿ, ಆ ಆಸ್ತಿ ನೋಂದಾವಣೆ ಆಗುವ ತನಕ, ಯಾವುದೇ ಹಕ್ಕು ವರ್ಗಾವಣೆ ಕಾಯಿದೆ ಕಲಂ 69(3) ರಡಿ ಯಾವುದೇ ಹಕ್ಕನ್ನು ನೀಡುವುದಿಲ್ಲವೆಂಬ ತೀರ್ಪನ್ನು ಶ್ರೇಷ್ಠ ನ್ಯಾಯಾಲಯ ಎತ್ತಿ ಹಿಡಿಯಿತು ಮತ್ತು ಮದ್ರಾಸ್ ಉಚ್ಚನ್ಯಾಯಾಲಯದ ತೀರ್ಪು ILR (1967) 3 Madras 161 ಸರಿಯಾದ ತೀರ್ಪಲ್ಲವೆಂದು, ಬಾಂಬೆ ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಿತು. (1976 Indlaw SC 345, (1977) 3 SCC 247, AIR 1977 SC 774)

97. ಒರಿಸ್ಸಾ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಸಹಕಾರ ಸಂಘದ ನೌಕರನನ್ನು ನಿಬಂಧಕರು ವಜಾ ಮಾಡಿದಾಗ, ಅದರಲ್ಲಿ ಅವನ ನೇಮಕಾತಿ ಮಾಡಿದಾಗ, ನಿಬಂಧಕರು ಅಧ್ಯಕ್ಷತೆವಹಿಸಿದ ಸಭೆಯಲ್ಲಿ ನೇಮಕ ಮಾಡಿ 13 ವರ್ಷಗಳ ಸೇವೆಯಲ್ಲಿ ಮುಂದುವರಿಸಿದ ನಂತರ, ವಜಾ ಮಾಡಿದ ಆದೇಶ ಸರಿಯೇ? ಹಾಗೂ ಸಹಕಾರ ಸಂಘದಲ್ಲಿ ವಜಾ ಮಾಡಿದ ನೌಕರನಿಗೆ ರಿಟ್

ಅರ್ಜಿ ದಾಖಲಿಸಲು ಬರುವುದೇ ಎಂಬುದನ್ನು ಪರಿಶೀಲಿಸಿ, ಅದನ್ನು ಅಂಗೀಕರಿಸಿದ ಉಚ್ಚನ್ಯಾಯಾಲಯದ ತೀರ್ಪಿನ ವಿರುದ್ಧ ಶ್ರೇಷ್ಠ ನ್ಯಾಯಾಲಯಕ್ಕೆ ಅರ್ಜಿ. ಇದರಲ್ಲಿ ಪರಿಶೀಲಿಸಬೇಕಾದ ಅಂಶ, ನಿಬಂಧಕರ ಅಧ್ಯಕ್ಷತೆಯಲ್ಲಿ ನಡೆದ ನೇಮಕಾತಿಗೆ 13 ವರ್ಷಗಳವರೆವಿಗೆ, ಸುಮ್ಮನಿದ್ದು ಆ ನಂತರ ವಜಾ ಮಾಡಿದ ಆದೇಶ ತಪ್ಪು. ಏಕೆಂದರೆ ಅಂತಹ ವ್ಯಕ್ತಿ ನೇಮಕ ಮಾಡಲು ನಿಬಂಧಕರೇ ಒಪ್ಪಿಗೆ ನೀಡಿ (ವ್ಯಕ್ತಿಗೆ ಒಪ್ಪಿಗೆ ನೀಡುವ ಅಧಿಕಾರ ಇಲ್ಲದೇ ಇದ್ದರೂ) ಆ ನಂತಹ ತೆಗೆದಿದ್ದು ಸರಿಯಲ್ಲ ಎಂಬುದನ್ನು, ಎತ್ತಿ ಹಿಡಿದಿದ್ದರೂ, ಉಚ್ಚನ್ಯಾಯಾಲಯ ನೀಡಿದ ಕಾರಣಕ್ಕಲ್ಲ ಎಂದು ನಮೂದಿಸಿ, ರಿಟ್ ಅರ್ಜಿಯಲ್ಲಿ ಪ್ರಶ್ನಿಸಿದ ಅಂಶ ನಿಬಂಧಕರ ಆದೇಶದ ಸಿಂಧುತ್ವದ ಬಗ್ಗೆಯಾದ್ದರಿಂದ ಇದು ರಿಟ್ ಅರ್ಜಿಯ ಅಂಶ, ಆದರೆ ಸಹಕಾರ ಸಂಘ ನೇರವಾಗಿ ರಿಟ್ ದಾಖಲಿಸುವ ಬಗ್ಗೆ ಈ ಪ್ರಕರಣದಲ್ಲಿ ಪರಿಶೀಲಿಸಿಲ್ಲ. ಸಂಘದ ಮೇಲ್ಮನವಿ ವಜಾ ಮಾಡಿತು. (1976 Indlaw SC 627, (1977) 3 SCC 576, AIR 1977 SC 112)

98. ಶ್ರೇಷ್ಠ ನ್ಯಾಯಾಲಯ ಉತ್ತರಪ್ರದೇಶದ ಸಹಕಾರ ಕಾಯಿದೆಯಲ್ಲಿನ ಒಂದು ಚುನಾವಣೆ ಅರ್ಜಿ ಮೇಲೆ ತೀರ್ಮಾನಿಸುವಾಗ, ಚುನಾವಣಾ ನಿಯಮಗಳ ಬಗ್ಗೆ ಸೂತ್ರೋಲೆ ಇದ್ದರೂ ಸ್ಪಷ್ಟಿಕರಣ ಅಥವಾ ಮಾರ್ಗದರ್ಶನ ನೀಡುವ ಅಧಿಕಾರ ಇಲ್ಲ. ಒಬ್ಬ ಸದಸ್ಯನಿಗೆ ಒಂದೇ ಮತ ಎಂಬ ತತ್ವದಲ್ಲಿ, ವಿವಿಧ ಕ್ಷೇತ್ರಗಳಿದ್ದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಒಂದೊಂದು ಮತ ಎಂದು ಅರ್ಥ ಅಲ್ಲ. ಒಬ್ಬ ಸದಸ್ಯನಿಗೆ ಒಂದು ಮತ ಎಂದರೆ, ಚುನಾವಣೆ ನಡೆಯುವಾಗ ಒಬ್ಬ ಸದಸ್ಯ ಒಂದು ಮತವನ್ನು ಮಾತ್ರ ಚಲಾಯಿಸತಕ್ಕದ್ದು. (1972 Indlaw SC 90, (1972) 1 SCC 719, AIR 1972 SC 758)

99. ಅರಣ್ಯ ಉತ್ಪನ್ನಗಳಿಗೆ ಕೇರಳ ಸರ್ಕಾರ ಮಾರಾಟ ಮಾಡುವುದರ ಬಗ್ಗೆ ಕಲಂ 6 ರನ್ವಯ ವಿನಾಯ್ತಿ ನೀಡಲು ಅವಕಾಶವಿದ್ದು ಅದರಲ್ಲಿ ಸಹಕಾರ ಸಂಘಗಳ ಕಾಯಿದೆ ಕಲಂ 5 ರನ್ನು ಶರತ್ತುಗಳಿಗೊಳಪಟ್ಟ ವಿನಾಯ್ತಿ ನೀಡಲು ಅವಕಾಶ ಕಲ್ಪಿಸಿರುವುದನ್ನು ಪ್ರಶ್ನಿಸಿದಾಗ, ಅಂತಹ ಸಂಬಂಧಪಟ್ಟ ವಿನಾಯ್ತಿ ನೀಡಿದಾಗ ಅದು ಕಕ್ಷೀದಾರರಲ್ಲಿ ವಿಂಗಡಿಸಿದಂತಾಗುವುದಿಲ್ಲ. ಆದ್ದರಿಂದ ಸರ್ಕಾರದ ಸಂಸ್ಥೆಗಳಿಗೆ ಮತ್ತು ಸಹಕಾರ ಸಂಘಗಳಿಗೆ ನೀಡಿದ ವಿನಾಯ್ತಿಯಲ್ಲಿ ಯಾವುದೇ ಅನ್ಯಾಯ ಆಗಿಲ್ಲ, ಏಕೆಂದರೆ ಅದು ಸರ್ಕಾರದ ನೀತಿ ಸಾರ್ವಜನಿಕ ಹಿತಾಸಕ್ತಿ ಕಾಪಾಡಲು ರೂಪಿಸಿದ ನೀತಿ ಉಚ್ಚನ್ಯಾಯಾಲಯದ ತೀರ್ಮಾನವನ್ನು ಕಿತ್ತುಹಾಕಿ, ರಟ್ ಅರ್ಜಿ ವಜಾ ಮಾಡಿತು. (1986 Indlaw SC 296, (1986) 3 SCC 398, AIR 1986 SC 1541)

100. ಸರ್ಕಾರ ನೇಮಿಸಿದ ವಕೀಲರು (ಪಬ್ಲಿಕ್ ಪ್ರಾಸಿಕ್ಯೂಟರ್) ಕ್ರಿಮಿನಲ್ ಮೊಕದ್ದಮೇಯಲ್ಲಿ ಪ್ರಾರಂಭದಿಂದಲೂ ಗೈರು ಹಾಜರಾಗುತ್ತಿದ್ದು, ಅದೇ ಅವಧಿಯಲ್ಲಿ ಅಂತಹ ಸಾರ್ವಜನಿಕ ಪ್ರಾಸಿಕ್ಯೂಟರ್‌ನ ನೇಮಕಾತಿ ರದ್ದುಗೊಳಿಸದೆ ಮತ್ತೊಬ್ಬರನ್ನು ನೇಮಿಸಿದಾಗ, ಆ ವ್ಯಕ್ತಿ ಪ್ರಾರಂಭದಿಂದ ಪ್ರಕರಣದಲ್ಲಿ ಹಾಜರಾಗುತ್ತಿದ್ದು ಅಂತಹ ಪ್ರಸಂಗದಲ್ಲಿ ಎರಡನೇ ನೇಮಕಾತಿ ತಪ್ಪು ಎಂದು ತಿಳಿಯಲಾಗದು, ಅವನಿಗೆ ಅಧಿಕಾರ ಇದೆ ಎಂಬ ತೀರ್ಮಾನಕ್ಕೆ ಬರಬಹುದು. ಈ ನೀತಿ ಭಾರತೀಯ ನೀತಿಗನುಗುಣ ಇದೆ. (1982 Indlaw SC 72, (1983) SCC (Cr) 224, AIR 1983 SC 194)

101. ಒಂದು ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಈಗಾಗಲೇ ಒಂದು ಆಸ್ತಿ ಹೊಂದಿದ್ದರೆ, ಸದಸ್ಯತ್ವಕ್ಕೆ ಅನರ್ಹತೆ ಇರುವುದರಿಂದ, ಈಗಾಗಲೇ ಸದಸ್ಯನನ್ನಾಗಿ ಮಾಡಿಕೊಂಡಿದ್ದ ವ್ಯಕ್ತಿಯನ್ನು ಸದಸ್ಯತ್ವದಿಂದ ಕಿತ್ತು ಹಾಕಿರುವುದು ಸರಿಯಾದ ಕ್ರಮ. ಸಂಯುಕ್ತ ಕುಟುಂಬದ ಆಸ್ತಿಯಾಗಿದ್ದರೆ, ಅಂತಹ ಸಂದರ್ಭದಲ್ಲಿ ಈ ಶರತ್ತು ಅನ್ವಯವಾಗುವುದಿಲ್ಲ. ದಿಲ್ಲಿ ಸಹಕಾರ ಕಾಯಿದೆ ಮತ್ತು ನಿಯಮಗಳು 02.04.1973 ರಿಂದ ಜಾರಿಗೆ ಬಂದಿದ್ದು ನಿಯಮ 25(1)(ಸಿ) ಅನ್ವಯ ತೆಗೆದ ಕ್ರಮ

ಸರಿಯಿಲ್ಲವೆಂದು ಉಚ್ಚನ್ಯಾಯಾಲಯ ನೀಡಿದ ತೀರ್ಪನ್ನು ಶ್ರೇಷ್ಠ ನ್ಯಾಯಾಲಯ ಅನೂರ್ಜಿತಗೊಳಿಸಿ, ಸದಸ್ಯತ್ವದಿಂದ ತೆಗೆದು ಹಾಕಿರುವುದು ಸರಿ ಎಂದು ತೀರ್ಪಿಸಿದೆ. (2010 Indlaw SC 961)

102. ಒಂದು ಗೃಹನಿರ್ಮಾಣ ಸಹಕಾರ ಸಂಘದ ಸದಸ್ಯರನ್ನು ಕಿತ್ತು ಹಾಕಿದಾಗ, ಪ್ರಸ್ತಾವನೆ ಕಳುಹಿಸಿದ ನಂತರದ ಆರು ತಿಂಗಳೊಳಗೆ ನಿಬಂಧಕರು ಒಪ್ಪಿಗೆ ನೀಡಬೇಕೆಂಬ ಶರತ್ತಿನನ್ವಯ, ವಿಳಂಬವಾಗಿ ಪ್ರಸ್ತಾವನೆ ಸಲ್ಲಿಸಿದ್ದು ಅದನ್ನು ತೀರ್ಮಾನಿಸಲು ನಿಬಂಧಕರು 8 ವರ್ಷ ತೆಗೆದುಕೊಂಡರೆಂಬ ಕಾರಣದಿಂದ ಉಚ್ಚನ್ಯಾಯಾಲಯ ನಿಬಂಧಕರ ಮತ್ತು ಆಯುಕ್ತರ ಆದೇಶವನ್ನು ಕಿತ್ತು ಹಾಕಿದ್ದರು. ಅದನ್ನು ಶ್ರೇಷ್ಠ ನ್ಯಾಯಾಲಯ ಉಚ್ಚನ್ಯಾಯಾಲಯ ನಿಬಂಧಕರ ಆದೇಶದಲ್ಲಿ ನೀಡಿದ ಕಾರಣಗಳನ್ನು ಪರಿಶೀಲಿಸದೆ 8 ವರ್ಷಗಳ ನಂತರ ತೀರ್ಮಾನಿಸಲಾಗಿದೆ ಎಂದು ಆದೇಶಿಸದ ತೀರ್ಮಾನ ತಪ್ಪು ಎಂದು ಮತ್ತು ನಿಬಂಧಕರು ಹಾಗೂ ಆಯುಕ್ತರು ನೀಡಿದ ಆದೇಶ ಸರಿಯೆಂದು ತೀರ್ಮಾನಿಸಿತು. (2010 Indlaw SC 865, (2010) 13 SCC 336)

103. ಅರ್ಜಿದಾರರು ಈಗಾಗಲೇ ಸಾಲ ವಸೂಲಾತಿ ಪ್ರಾಧಿಕಾರ ಮತ್ತು ಗುಜರಾತ್ ಸಹಕಾರ ನ್ಯಾಯಾಧಿಕರಣದ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಈ ರಿಟ್ ಅರ್ಜಿ ಮುಖಾಂತರ ಶ್ರೇಷ್ಠ ನ್ಯಾಯಾಲಯ ಮಧ್ಯ ಪ್ರವೇಶ ಮಾಡುವುದಿಲ್ಲ. ಆದರೆ ಸಹಕಾರ ಬ್ಯಾಂಕಿನ ಮೇಲ್ಮನವಿಗಳು ತೀರ್ಮಾನವಾಗುವ ತನಕ ಸೆಕ್ಯೂರಿಟೇಷನ್ ಕಾಯಿದೆಯಲ್ಲಿ ವಸೂಲಾತಿ ಕ್ರಮ ಜರುಗಿಸತಕ್ಕದ್ದಲ್ಲ ಮತ್ತು ಈ ಪ್ರಕರಣಗಳನ್ನು ಮೂರು ತಿಂಗಳಲ್ಲಿ ತೀರ್ಮಾನ ಮಾಡಬೇಕೆಂದು ನಿರ್ದೇಶಿಸಿತು. (2015 Indlaw SC 206)

104. ಸೆಕ್ಯೂರಿಟೇಷನ್ ಕಾಯಿದೆಯಲ್ಲಿ ವಸೂಲಾತಿ ಕ್ರಮ ಜರುಗಿಸಿದಾಗ, ಸಾಲ ವಸೂಲಾತಿ ಪ್ರಾಧಿಕರಣದಲ್ಲಿ ಮೇಲ್ಮನವಿ ವಿಚಾರಣೆಯಲ್ಲಿದ್ದ, ಬ್ಯಾಂಕ್ ವಸೂಲಾತಿ ಕ್ರಮ ಜರುಗಿಸಬಾರದೆಂದು ಈಗಾಗಲೇ ಅರ್ಜಿದಾರರು ಜಮಾ ಮಾಡಿದ ರೂ.2.00 ಕೋಟಿಯನ್ನು ಸಾಲ ಖಾತೆಗೆ ಜಮಾ ಮಾಡಿಕೊಂಡು ಉಳಿದ ರೂ.65 ಲಕ್ಷವನ್ನು ಪ್ರಾಧಿಕರಣ ಆದೇಶದಂತೆ ಪಾವತಿ ಮಾಡಬೇಕಿಲ್ಲ ಮೇಲ್ಮನವಿ ಪ್ರಾಧಿಕರಣ ನೀಡಿದ ನಂತರ ವಸೂಲಾತಿ ಕ್ರಮ ಜರುಗಿಸತಕ್ಕದ್ದು. (2015 Indlaw SC 202)

105. ಒಬ್ಬ ವಕೀಲರನ್ನು, ನಿವೃತ್ತ ನ್ಯಾಯಾದೀಶರನ್ನು ಸೇರಿಸಿ, ಶಿಸ್ತು ಪ್ರಕರಣದ ವಿಚಾರಣೆಗೆ ನೇಮಿಸಿದಾಗ ಆರೋಪ ನೌಕರನು ವಕೀಲರ ಸಹಾಯ ಕೇಳಿದಾಗ ನಿರಾಕರಿಸಲಾಗದು. (2015 Indlaw SC 85)

106. ಒಂದು ಸಹಕಾರ ಬ್ಯಾಂಕ್ ತನ್ನ ಬ್ಯಾಂಕನ ಬೈಲಾದಲ್ಲಿರುವ ಅವಕಾಶಗಳ ವಿರುದ್ದ ಗುಜರಾತ್ ಸಹಕಾರ ನಿಯಮ 3–ಎ (8) ಸಿರಯಲ್ಲವೆಂದು ರಿಟ್ ಅರ್ಜಿ ಸಲ್ಲಿಸಿದಾಗ, ಕಾಯಿದೆಯಡಿ ಜಿಲ್ಲಾ ಕಲೆಕ್ಟರ್‌ಗೆ ಕ್ಷೇತ್ರಗಳ ವಿಂಗಡಣೆ ಮಾಡುವ ಅಧಿಕಾರ ನೀಡಿದ್ದು, ಅದು ಅಸಿಂದುವಲ್ಲ. ಪ್ರತಿನಿಧಿಗಳನ್ನು ಆಯ್ಕೆ ಮಾಡಲು, ಕ್ಷೇತ್ರ ವಿಂಗಡಣೆಯನ್ನು ಮಾಡಿದ್ದು ಸರಿ. ಉಪನಿಯಮಗಳು ನಿಯಮಕ್ಕಿಂತ ಹೆಚ್ಚಿಲ್ಲ. ಅಂದರೆ ಕಾಯಿದೆಯಲ್ಲಿ ಮತ್ತು ನಿಯಮದಲ್ಲಿ ಸೇರಿಸಿದ ಅವಕಾಶವನ್ನು ಸಹಕಾರ ಬ್ಯಾಂಕ್ ಅಳವಡಿಸಿಕೊಳ್ಳಬೇಕು. ಕಾಯಿದೆ ಮತ್ತು ನಿಯಮಗಳು, ಬ್ಯಾಂಕಿನ ಮೇಲ್ಮಟ್ಟದಲ್ಲಿ ಇರುತ್ತದೆ. ಆದ್ದರಿಂದ ರಿಟ್ ವಜಾಗೊಳಿಸಲಾಯಿತು.

**ನೀತಿ :– ಒಂದು ಸಹಕಾರ ಸಂಘಗಳ ಉಪನಿಯಮಗಳನ್ನು ಕಾಯಿದೆ ಮತ್ತು ನಿಯಮಗಳ ಮೇಲೆ ಪಾಲಿಸತಕ್ಕದ್ದಲ್ಲ. ಕಲೆಕ್ಟರ್‌ಗೆ ನೀಡಿದ ಅಧಿಕಾರವನ್ನು, ಅಂದರೆ ಕ್ಷೇತ್ರ ವಿಂಗಡಣೆ ಮಾಡಿದ್ದು, ಅದು ಶಾಸನ ಬದ್ದ ಅಧಿಕಾರ ಚಲಾವಣೆ, ಮಂಡಳಿ ಚುನಾವಣೆ ನಡೆಸುವಾಗ ಕ್ಷೇತ್ರ ವಿಂಗಡಣೆ ಅಧಿಕಾರ**

**ನೀಡಿದಾಗ, ಅದನ್ನು ಚಲಾಯಿಸಬೇಕು ಉಪನಿಯಮಗಳು, ನಿಯಮದಿಂದ ಕೆಳಸ್ತರದಲ್ಲಿರುವುದು.**
(2014 Indlaw SC 790, AIR 2015 SC 489)

107. ಕೇರಳ ಸಹಕಾರ ಕಾಯಿದೆಯಡಿ, ಒಂದು ಪ್ರಾಥಮಿಕ ಗ್ರಾಮ ಸೇವಾ ಬ್ಯಾಂಕ್ ತನಗೆ ಅವಶ್ಯಕ ಸಿಬ್ಬಂದಿ ನೇಮಕಾತಿಗೆ ಅರ್ಜಿ ಆಹ್ವಾನಿಸಿ ಕರೆದ ಪ್ರಕಟಣೆಗೆ ನಿಬಂಧಕರ ಸುತ್ತೋಲೆ ಪಾಲಿಸಿಲ್ಲವೆಂದು ರಿಟ್ ಅರ್ಜಿ ದಾಖಲಿಸಿದ್ದು, ಅದನ್ನು ಏಕ ಸದಸ್ಯ ಪೀಠ ಪುರಸ್ಕರಿಸಿ, ನಿಬಂಧಕರ ಸುತ್ತೋಲೆ ಮುಖಾಂತರ ಆರು ತಿಂಗಳ ಒಳಗಾಗಿ ಹೊಸ ಪ್ರಕಟಣೆ ಹೊರಡಿಸಿ ಆಯ್ಕೆ ಮಾಡಲು ಸೂಚಿಸಿತು. ಇದನ್ನು ವಿಭಾಗೀಯ ಪೀಠದ ಮುಂದೆ ಪುನರ್ ಪರಿಶೀಲನೆಗೆ ಅರ್ಜಿ ದಾಖಲಿಸಿದಾಗ ಏಕ ಸದಸ್ಯ ಪೀಠದ ಆದೇಶವನ್ನು ಎತ್ತಿ ಹಿಡಿಯಿತು. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಕೇರಳ ಉಚ್ಚನ್ಯಾಯಾಲಯಗಳ ಎರಡೂ ತೀರ್ಪನ್ನು ಎತ್ತಿ ಹಿಡಿಯಿತು. ಈ ರಿಟ್ ಅರ್ಜಿಯಲ್ಲಿ ಎರಡು ಪ್ರಶ್ನೆಗಳಿದ್ದವು. (1) ಲಿಖಿತ ಪರೀಕ್ಷೆಯನ್ನು ಒಂದು ಸಂಸ್ಥೆಯ ಲಿಖಿತ ಪರೀಕ್ಷೆ ಮೂಲಕ ನಡೆಸಬೇಕು. (2) ರಿಟ್ ಅರ್ಜಿಯನ್ನು ಸಲ್ಲಿಸಲು ಊರ್ಜಿತವಲ್ಲ ಏಕೆಂದರೆ ಕಾಯಿದೆ ಕಲಂ 69 ರಡಿ ಪರಿಹಾರ ಪಡೆಯಬಹುದೆಂದು ಇದಕ್ಕೆ (1) ಆಡಳಿತ ಮಂಡಳಿ ಒಂದು ಸಂಸ್ಥೆ ಮೂಲಕ ಲಿಖಿತ ಪರೀಕ್ಷೆ ನಡೆಸುವಬದಲು, ಅಧ್ಯಕ್ಷರು ಒಬ್ಬ ವ್ಯಕ್ತಿಯ ಮೂಲಕ ನಡೆಸಲು ತೀರ್ಮಾನಿಸಿದ್ದರು. (2) ಅರ್ಜಿದಾರರು ಇನ್ನು ಬ್ಯಾಂಕಿನ ನೌಕರರಾಗಿಲ್ಲವಾದ್ದರಿಂದ ಕಲಂ 69 ಅನ್ವಯವಾಗುವುದಿಲ್ಲ ಆದ್ದರಿಂದ ರಿಟ್ ಊರ್ಜಿತ. (2014 Indlaw SC 536, (2014) 9 SCC 294, AIR 2015 SC 489)

108. ಒಬ್ಬ ಸಾರ್ವಜನಿಕ ಸೇವಕ, ತನ್ನ ಕೆಲಸ ನಿರ್ವಹಿಸುವಾಗ ಮಾಡಿದ ಅಪರಾ ತಪರಾ ಪ್ರಕರಣದಲ್ಲಿ ಕಲಂ 406, 409 ಮತ್ತು 420 ಮತ್ತಿತರೆ ಕಲಂನಡಿ ಮಾಡಿದ ಅಪರಾದಗಳ ಮೇಲೆ ಕ್ರಿಮಿನಲ್ ಮೊಕದಮ್ಮೆ ದಾಖಲಿಸಲು ಸಿ.ಆರ್.ಪಿ.ಸಿ ಕಲಂ 197ರ ಪೂರ್ವಾನುಮತಿ ಅವಶ್ಯಕವಿಲ್ಲ. ಈ ಬಗ್ಗೆ ಸಾಕಷ್ಟು ತೀರ್ಪುಗಳನ್ನು ಶ್ರೇಷ್ಠ ಮತ್ತು ಉಚ್ಚನ್ಯಾಯಾಲಯಗಳು ಈಗಾಗಲೇ ನೀಡಿರುವುದರಿಂದ, ಉಚ್ಚನ್ಯಾಯಾಲಯದ ತೀರ್ಪಿಗೆ ಮಧ್ಯಪ್ರವೇಶ ಇಲ್ಲ. (ಬಿಹಾರ್ ಸಹಕಾರ ಕಾಯಿದೆ) (2014 Indlaw SC 438)

109. ಆಂದ್ರಪ್ರದೇಶ ಕಾಯಿದೆಯಡಿ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರಲ್ಲಿ ವಿವಾದವೇರ್ಪಟ್ಟಾಗ, ನಿಬಂಧಕರಿಗೆ ಒಬ್ಬ ಅಧಿಕಾರಿಯನ್ನು ಸಾಮಾನ್ಯ ಸಭೆ ಕರೆದು, ಸದಸ್ಯರಪಟ್ಟಿ ಪುರಸ್ಕರಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ಸೂಚಿಸಿತು. ಅದರಂತೆ ಸಭೆ ಕರೆಯುವಾಗ 37 ವ್ಯಕ್ತಿಗಳನ್ನು ದಿನಾಂಕ 03.10.1996 ರಲ್ಲಿ ಸದಸ್ಯರನ್ನಾಗಿ ತೀರ್ಮಾನಿಸಿದಾಗ, ಅವರು ಸದಸ್ಯರಾದಂತೆ. ಸಂಸ್ಥಾಪಕ ಸದಸ್ಯರು ಎಂಬ ಸದಸ್ಯರಿಗೆ ಪ್ರಾಶಸ್ತ್ಯ ಕೊಡುವ ಅವಶ್ಯಕತೆ ಇಲ್ಲ. ಉಪನಿಯಮಗಳಡಿ, ನಿವೇಶನಗಳನ್ನು ಹಂಚುವಾಗ, ಆ ನಿಯಮಗಳನ್ನು ಪಾಲಿಸಿ, ನಿವೇಶನ ಹಂಚಬೇಕು. (2014 Indlaw 747, (2014) 8 SCC 661, AIR 2014 SC 2680)

110. ಒಂದು ಸಂಘದ ಸದಸ್ಯರು 278 ಸದಸ್ಯರಿದ್ದು ಸಾಮಾನ್ಯ ಸಭೆಯಲ್ಲಿನ ಒಪ್ಪಿಗೆಯಂತೆ ಆಸ್ತಿಯನ್ನು ಮಾರಾಟ ಮಾಡಬೇಕೆಂದು ತೀರ್ಮಾನಿಸಿದ್ದನ್ನು 10 ಸದಸ್ಯರು ಪ್ರಶ್ನಿಸಿದರು. ಉಳಿದೆಲ್ಲ ಸದಸ್ಯರು ವ್ಯವಹಾರದಿಂದ ಹಿಂದೆ ಸರಿದರು. ಆ ಸಂದರ್ಭದಲ್ಲಿ ನಿಬಂಧಕರು ನೇಮಿಸಿದ ಆಡಳಿತಾಧಿಕಾರಿಗಳ ಮಂಡಳಿ ಮುಖಾಂತರ ಮಾರಾಟ ಮಾಡಿದಾಗ, ಅದನ್ನು ಅನೂರ್ಜಿತಗೊಳಿಸಲು 10 ಸದಸ್ಯರು ಪ್ರಶ್ನಿಸಿದ್ದು, ಈ ಹತ್ತು ಜನ ಸದಸ್ಯರು ಯಾವ ದಾಖಲೆಗಳನ್ನು ಸಲ್ಲಿಸದೆ ಸಾಮಾನ್ಯ ಸಭೆ ನಡವಳಿಕೆಗಳನ್ನು ಪ್ರಶ್ನಿಸುವುದು ತಪ್ಪು ಎಂದು ಮತ್ತು ಮಾರಾಟ ಮಾಡಿದ ಆಸ್ತಿ ಒಂದು ಎಕರೆಗೆ ಬೆಲೆ ರೂ.40/- ಲಕ್ಷಕ್ಕೆ ಆಗಿದ್ದರೂ, ನ್ಯಾಯಾಲಯದ ಮಧ್ಯಪ್ರವೇಶದಿಂದ ಇದನ್ನು ಒಂದು ಎಕರೆಗೆ ರೂ.70/- ಲಕ್ಷಕ್ಕೆ ಹೆಚ್ಚಿಸಿದ್ದು, ಸರ್ಕಾರ ನಿಗದಿ ಪಡಿಸಿದ ದರ ರೂ.12/-

ಲಕ್ಷ ಎಂದಿರುವುದರಿಂದ, ಇದನ್ನು ಅನೂರ್ಜಿತಗೊಳಿಸಲಾಗದು ಸಾಮಾನ್ಯ ಸಭೆ ತೀರ್ಮಾನವನ್ನು ಅನೂರ್ಜಿತಗೊಳಿಸಲಾಗದು. ಈ ಹತ್ತು ಜನ ಸದಸ್ಯರು ಯಾವುದೇ ಉದ್ದೇಶದಿಂದ ಇದನ್ನು ಪ್ರಶ್ನಿಸಿದ್ದರೂ, ಅವರ ಪರವಾದ ಯಾವುದೇ ದಾಖಲೆ ಸಲ್ಲಿಸಿಲ್ಲ. ಅದರ ಜೊತೆಗೆ ಮಾರಾಟದಲ್ಲಿ ಅವ್ಯವಹಾರ ನಡೆದಿದೆ ಎಂಬುದಕ್ಕೆ ಯಾವುದೇ ಪೂರಕ ದಾಖಲೆ ಸಲ್ಲಿಸಿಲ್ಲ. ಪ್ರಕರಣ ವಜಾ ಮಾಡಿತು. (2014 Indlaw SC 295, AIR 2014 SC 2018)

111. ಒಂದು ಗೃಹ ನಿರ್ಮಾಣ ಬಹುಮಹಡಿ ಕಟ್ಟಡದ ಮನೆಯನ್ನು ಖರೀದಿ ಮಾಡಿದ ಮೊದಲನೇ ಖರೀದಿ ಮಾಡಿದ ನಂತರ, ಮೂರನೆ ವ್ಯಕ್ತಿಗೆ ಮಾರಿದ್ದನ್ನು ಅಸಿಂದುಗೊಳಿಸಿ, ಮೊದಲು ಖರೀದಿ ಮಾಡಿದ ವ್ಯಕ್ತಿ ವಶಕ್ಕೆ ನೀಡಬೇಕೆಂದು ಮಧ್ಯಸ್ತಿಗಾರರ ತೀರ್ಪನ್ನು ಶ್ರೇಷ್ಠ ನ್ಯಾಯಾಲಯ ಎತ್ತಿ ಹಿಡಿದು, ನ್ಯಾಯಾಧಿಕರಣ ಮತ್ತು ಉಚ್ಚನ್ಯಾಯಾಲಯ ನೀಡಿದ ತೀರ್ಪನ್ನು ಅನೂರ್ಜಿತಗೊಳಿಸಿತು. (2014 Indlaw SC 77, (2014) 4 SCC 196, AIR 2014 SC 1304)

112. ಕೇರಳ ಸಹಕಾರ ಸಂಘಗಳು, ನಿಬಂಧಕರು 01.06.2006 ರಲ್ಲಿ ಹೊರಡಿಸಿದ ಸುತ್ತೋಲೆ ಪ್ರಕಾರ, "ಸಾರ್ವಜನಿಕ ಸಂಸ್ಥೆ" ಎಂದು ಹೊರಡಿಸಿದ್ದನ್ನು ಕೇರಳ ಉಚ್ಚನ್ಯಾಯಾಲಯ, ಏಕ ಸದಸ್ಯ ಪೀಠ ಸಮರ್ಥಿಸಿದ್ದನ್ನು ವಿಭಾಗೀಯ ಪೀಠ, ಮಾಹಿತಿ ಹಕ್ಕು ಕಾಯಿದೆಯಲ್ಲಿ ಬರಲು ಪ್ರತಿಯೊಂದು ಪ್ರಕರಣವನ್ನು ಪ್ರತ್ಯೇಕವಾಗಿ ನೋಡಬೇಕು ಎಂದಿದ್ದು, ಇದಕ್ಕೆ ಭಾರತೀಯ ಶ್ರೇಷ್ಠ ನ್ಯಾಯಾಲಯ ನಿಬಂಧಕರ ಸುತ್ತೋಲೆ, ಪ್ರತಿಯೊಂದು ಸಂಘ ರಾಜ್ಯದ/ನಿಬಂಧಕರ ಮಾಲೀಕತ್ವ/ನಿಯಂತ್ರಣ ಮತ್ತು ಹಣಕಾಸು ನೆರವನ್ನು ನೀಡಿದ ಬಗ್ಗೆ ಸಾಕ್ಷ್ಯಾದಾರಗಳು ಇಲ್ಲವಾದ್ದರಿಂದ ಕೇರಳ ಸಹಕಾರ ಸಂಘಗಳು ಮಾಹಿತಿ ಹಕ್ಕು ಕಾಯಿದೆಯಡಿ ಬರುವುದಿಲ್ಲ ಎಂದು ತೀರ್ಮಾನಿಸಿತು. (2013 Indlaw SC 663, AIR 2013 SC (Supp) 437, 2013 (4) KLT 232)

113. ಆಂದ್ರಪ್ರದೇಶ ಸಹಕಾರ ಕಾಯಿದೆ ಮತ್ತು ಆಂದ್ರಪ್ರದೇಶದ ಠೇವಣಿದಾರರ ಹಿತ ಕಾಯುವ ಕಾಯಿದೆ 1999 ರ ಕಲಂ 3, 5, 8 ಮತ್ತು 9 ಸಂವಿಧಾನದ ಅನುಚ್ಛೇದ 14 ಮತ್ತು 21ಕ್ಕೆ ವಿರುದ್ಧ ಎಂದು ಪ್ರಶ್ನಿಸಿದಾಗ ಈಗಾಗಲೇ ಈ ನ್ಯಾಯಾಲಯ ಈ ವಿಷಯವು 2011 Indlaw SC 200 ಮತ್ತು 2012 Indlaw SC 427 ರಲ್ಲಿ ತೀರ್ಮಾನಿಸಿದ್ದು. ಬ್ಯಾಂಕಿಂಗ್ ವ್ಯವಹಾರಕ್ಕೆ ಕೇಂದ್ರ ಸರ್ಕಾರಕ್ಕೆ ಮಾತ್ರ ಅಧಿಕಾರ ಎಂಬ ವಾದವನ್ನು, ರಾಜ್ಯ ಸರ್ಕಾರಗಳ ಕಾಯಿದೆ ಮಾಡಲು ಅಧಿಕಾರ ಇದೆ ಎಂದು ತೀರ್ಮಾನಿಸಿದ್ದನ್ನು ಉಲ್ಲೇಖಿಸಿ, ಮೇಲ್ಮನವಿಯನ್ನು ತಿರಸ್ಕರಿಸಿತು. (2013 Indlaw SC 589, AIR 2013 SC (Supp) 816, 2014 (1) DRTC 9)

114. ಒಂದು ಫ್ಲಾಟ್ ಮಾಲೀಕರ ಕಟ್ಟಡದಲ್ಲಿ ಸುಸ್ತಿ ದಾರನಾದಾಗ, ಅಂತಹ ಹಣ ವಸೂಲಾತಿಗೆ ಅಡಮಾನ ಮಾಡಿದ ಆಸ್ತಿಯನ್ನು ಜಪ್ತಿ ಮಾಡಿ ಮಾರಾಟ ಮಾಡುವುದು ತಪ್ಪು ಎಂದು ರಿಟ್ ಅರ್ಜಿ ದಾಖಲಿಸಿದಾಗ, ಏಕ ಸದಸ್ಯ ಪೀಠ ಮಾರಾಟಕ್ಕೆ ನಿರ್ಭಂದ ಹೇರಲು ನಿರಾಕರಿಸಿತು. ವಿಭಾಗೀಯ ಪೀಠ ಆ ತೀರ್ಮಾನವನ್ನು ದೃಡೀಕರಿಸಿತು. ಶ್ರೇಷ್ಠ ನ್ಯಾಯಾಲಯ, ಒಬ್ಬ ಆಸ್ತಿ ಮಾಲೀಕತ್ವದ ಆಸ್ತಿ ಮೇಲೆ ಸಾಲ ಪಡೆದು, ಮರು ಪಾವತಿ ಮಾಡದಿದ್ದರೆ, ಆಸ್ತಿ ಮಾರಾಟ ಮಾಡಲು ನಿರ್ಭಂದ ಇರತಕ್ಕದ್ದಲ್ಲ. ಆದರೆ ಆದರ ಮಾರುಕಟ್ಟೆ ದರ ವಾಗಿರಬೇಕು. ಅಥವಾ ಸುಸ್ತಿದಾರ ಮಾರಾಟವಾಗುವ ಮೊದಲು ಪೂರ್ತ ಸುಸ್ತಿ ಹಣ ಪಾವತಿಸಿ, ಆಸ್ತಿಯನ್ನು ಉಳಿಸಿಕೊಳ್ಳಬಹುದು. (2013 Indlaw SC 577, (2014) 1 SCC 635, 2014 (1) CLT (SC) 121)

115. ಒಬ್ಬ ಕಕ್ಷಿದಾರ (ಸಾಲಗಾರ) ಬಾಕಿ ಸಾಲು ತೀರಿಸಲು ಸಂಘದ ಜೊತೆ ಒಪ್ಪಂದ ಮಾಡಿಕೊಂಡು ರೂ.6,50,000.00 ಪಾವತಿ ಪಡೆದ ನಂತರ, ಆ ಸಾಲಗಾರನ ಆಸ್ತಿ ನಿರ್ವಹಣೆಗೆ ರಿಸಿವರ್ ನೇಮಿಸಲು ಉಪನಿಬಂಧಕರ ಮುಂದೆ ಅರ್ಜಿ ಸಲ್ಲಿಸಿದಾಗ, ಆ ಅರ್ಜಿ ಊರ್ಜಿತವಲ್ಲವೆಂದು ಮತ್ತು

ಒಪ್ಪಿಗೆ ಪತ್ರದಲ್ಲಿ ಬಾಕಿ ಹಣಕ್ಕೆ ರೂ.6,50,000.00 ಸ್ವೀಕರಿಸಿದ ನಂತರ ಆ ಪ್ರಕರಣದಲ್ಲಿ ಮುಂದುವರಿಯುತಕ್ಕದ್ದಲ್ಲ ಎಂದು ಮಧ್ಯಪ್ರದೇಶದ ಉಚ್ಚನ್ಯಾಯಾಲಯದ ತೀರ್ಪನ್ನು ದೃಡೀಕರಿಸಿತು. (2013 Indlaw SC 446, (2013) 7 SCC 559)

116. ಒಂದು ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಒಂದು ಫ್ಲಾಟ್ ಪಡೆದಿದ್ದು, ಅದು ಭಾಗಶಃ ಬಿದ್ದುಹೊದಾಗ, ರಿಪೇರಿ ಮಾಡಿಸಲು ಸಹಕಾರ ಸಂಘಕ್ಕೆ ಅರ್ಜಿ ಸಲ್ಲಿಸಬೇಕು. ಆ ಅರ್ಜಿಯನ್ನು ಪರಿಶೀಲಿಸಿ, ಆಯುಕ್ತರ ಒಪ್ಪಿಗೆ ಪಡೆಯುವುದು ಸಂಘದ ಕೆಲಸ. ಈ ಮಧ್ಯ ಸಹಕಾರ ನ್ಯಾಯಾಧಿಕರಣದ ಮುಂದೆ ಅರ್ಜಿಸಲ್ಲಿಸಿ, ರಿಪೇರಿ ಮಾಡಿಸಲು ಆದೇಶ ಪಡೆದ ನಂತರ, ಅದರ ಜಾರಿಗೆ ರಿಟ್ ಅರ್ಜಿ ಸಲ್ಲಿಸತಕ್ಕದ್ದಲ್ಲ. ಮಧ್ಯ ಪ್ರವೇಶ ಕಾಯಿದೆಯಲ್ಲಿ ಸಹಕಾರ ನ್ಯಾಯಾಧಿಕರಣದ ಆದೇಶವನ್ನು ಜಾರಿಗೆ ಅರ್ಜಿ ಹಾಕಬೇಕೇ ಹೊರತು, ರಿಟ್ ಅರ್ಜಿಯಲ್ಲಿ ಪರಿಹಾರವಿಲ್ಲ ಎಂಬ ಉಚ್ಚನ್ಯಾಯಾಲಯದ ತೀರ್ಪನ್ನು ದೃಢೀಕರಿಸಿ ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. (2013 Indlaw SC 583, (2013) 9 SCC 136)

117. ಮಧ್ಯ ಪ್ರವೇಶ ಸಹಕಾರ ಕಾಯಿದೆಯಡಿ ಒಂದು ಆಡಳಿತ ಮಂಡಳಿ ದಿನಾಂಕ 16.10.2007 ರಿಂದ ಅಧಿಕಾರ ವಹಿಸಿಕೊಂಡಿದ್ದು – ಅದೇ ಮಂಡಳಿ ದಿನಾಂಕ 15.10.2012ರ ತನಕ ಮುಂದುವರಿಯುತ್ತದೆ. ಈ ಮಧ್ಯೆ ದಿನಾಂಕ 30.09.2011 ರಂದು ಕಾನೂನಿಗೆ ವಿರುದ್ದವಾಗಿ ಮಂಡಳಿಯನ್ನು ರದ್ದು ಪಡಿಸಿ ಆದೇಶ ಹೊರಡಿಸಿದೆ. ಈ ಆದೇಶವನ್ನು ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ರದ್ದುಗೊಳಿಸಿದೆ. ಸಂಯುಕ್ತ ನಿಬಂಧಕರು ಆಡಳಿತಾಧಿಕಾರಿ ನೇಮಿಸಿದ್ದರು. ಕಾಯಿದೆ ಕಲಂ 53(1) ರನ್ನು ನ್ಯೂನತೆಗಳಿಗೆ ಆಡಳಿತಾಧಿಕಾರಿ ನೇಮಿಸಿದ್ದನ್ನು ಕಿತ್ತು ಹಾಕಿದ ನಂತರ ರಾಜ್ಯ ಸರ್ಕಾರ ಶ್ರೇಷ್ಠ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ಉಚ್ಚನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿತ್ತು. ಕಾಯಿದೆ ಕಲಂ 53ರ ಪರಂತುಕದಲ್ಲಿರುವಂತೆ, ನ್ಯಾಯಾ ಸಮ್ಮತವಲ್ಲದ ಮಂಡಳಿ ರದ್ದತಿ ಅವಧಿಯನ್ನು ಕಳೆದು ಐದು ವರ್ಷಗಳು ಆಡಳಿತ ಮಂಡಳಿ ಅಧಿಕಾರದಲ್ಲಿರತಕ್ಕದ್ದು, ಏಕೆಂದರೆ ಇದು ಕಾನೂನಿನಲ್ಲಿಯೇ ನೀಡಿದ ಅವಕಾಶ. ಅದರ ಶ್ರೇಷ್ಠ ನ್ಯಾಯಾಲಯ ಸಂಯುಕ್ತ ನಿಬಂಧಕರಿಗೆ ಆಡಳಿತಾಧಿಕಾರಿ ನೇಮಿಸಿದ ಅವಧಿಯನ್ನು ಕಳೆದು ಐದು ವರ್ಷಗಳ ಮಂಡಳಿ ಅವಧಿಗೆ ಅಧಿಕಾರ ನೀಡಲು ಆದೇಶಿಸಿತು. ರಾಜ್ಯ ಉಚ್ಚನ್ಯಾಯಾಲಯ ತನ್ನ ಆದೇಶದಲ್ಲಿ ಎಲ್ಲಾ ಅಂಶಗಳನ್ನು ಪರಿಗಣಿಸಿ ಆದೇಶಿಸಿತ್ತು ಮತ್ತು ಸಂಯುಕ್ತ ನಿಬಂಧಕರು ಮಂಡಳಿಯನ್ನು ರದ್ದು ಪಡಿಸುವಾಗ ತನ್ನ ಸ್ವಂತ ಅಭಿಪ್ರಾಯಕ್ಕೆ ಬರದೆ, ಹೊರಗಿನ ಒತ್ತಡಕ್ಕೆ ಮಣಿದು ಆದೇಶಿಸಿದೆ. ಇತ್ತೀಚಿನ ದಿನಗಳಲ್ಲಿ ಅಧಿಕಾರಿಗಳು ಈ ರೀತಿ ಹೊರಗಿನ ಪ್ರಭಾವಕ್ಕೆ ಆದೇಶ ಮಾಡುವ ಪ್ರವೃತ್ತಿ ಹೆಚ್ಚುತ್ತಿದೆ. ಈ ಪ್ರಕರಣದಲ್ಲಿ ಸಂಯುಕ್ತ ನಿಬಂಧಕರು ಹೊರಗಿನ ಪ್ರಭಾವಕ್ಕೆ ಮಣಿದು ಆದೇಶ ಮಾಡಿರುವುದಕ್ಕೆ ಸಾಕಷ್ಟು ಸಾಕ್ಷಿಗಳ ಲಾಭವಿದೆ ಮತ್ತು ಸಾಕಷ್ಟು ದೊಡ್ಡ ತಪ್ಪುಗಳಾಗಿವೆ ಎಂದಿದ್ದರೆ, ಆದೇಶ ಮಾಡಲು ಎರಡೂವರೆ ವರ್ಷಗಳ ಅವಧಿ ಅವಶ್ಯಕವಿರಲಿಲ್ಲ. ಮಧ್ಯ ಪ್ರವೇಶ ಸರ್ಕಾರ ಉಚ್ಚನ್ಯಾಯಾಲಯದ ವಿಭಾಗ ಪೀಠ ನೀಡಿದ ಆದೇಶ ಪಾಲಿಸಬೇಕಾಗಿತ್ತು. ಸಾರ್ವಜನಿಕರ ಹಣವನ್ನು ಖರ್ಚು ಮಾಡುವಾಗ ಚಿಂತಿಸಬೇಕು. ಪ್ರಜಾಪ್ರಭುತ್ವದಡಿ ರಚನೆಯಾದ ಸಂಸ್ಥೆಗಳನ್ನು ರದ್ದುಪಡಿಸಿ ಆಡಳಿತಕಾರಿ ನೇಮಿಸಿದ ನಂತರ, ರದ್ದು ಪಡಿಸಿದ ಮಂಡಳಿ ಸದಸ್ಯರು ಮುಂದಿನ ಚುನಾವಣೆಗೆ ಸ್ಪರ್ಧಿಸಲು ಅನರ್ಹತೆ ಹೊಂದುತ್ತಾರೆ. ಆದ್ದರಿಂದ ಅಧಿಕಾರಿಗಳು ತನ್ನ ಅಧಿಕಾರ ಚಲಾಯಿಸುವಾಗ, ತನ್ನ ಸ್ವಂತ ಅಭಿಪ್ರಾಯದಲ್ಲಿ ಮಂಡಳಿ ರದ್ದುಪಡಿಸುವ ತೀರ್ಮಾನಕ್ಕೆ ಬರಬೇಕು, ಪ್ರಭಾವಕ್ಕೊಳಗಾಗಿ ಆದೇಶಿಸಬಾರದು. (2013 Indlaw SC 320, (2013) 7 SCC 25, AIR 2013 SC 1921)

118. ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಮಹಾಸಭೆಯಲ್ಲಿ ಈಗ ಇರುವ 5.5 ಎಕರೆ

ಜಾಗದಲ್ಲಿ ಕೆಲವು ಮನೆಗಳು ಮಾತ್ರ ನಿರ್ಮಾಣವಾಗಿದ್ದು, ಪೂರ್ತಾ ಜಾಗವನ್ನು ಉಪಯೋಗಿಸಿಕೊಳ್ಳಲು, ಪುನರ್ ನಿರ್ಮಾಣ ಮಾಡಲು ತೀರ್ಮಾನಿಸಿತು. ಅದರಂತೆ ಒಬ್ಬ ಅಭಿವೃದ್ಧಿ ದಾರರು ರೂ.70 ಕೋಟಿ ಠೇವಣಿ ಇಟ್ಟಿದ್ದು, ತನಗೆ ನೀಡಲು ಮನವಿ ಸಲ್ಲಿಸಿದರು. ಈ ಮಧ್ಯ 15 ಸದಸ್ಯರು ರೂ.75 ಕೋಟಿಗೆ ಈ ಪ್ರಸ್ತಾವನೆ ವಿಸ್ತರಿಸಿದಾಗ ಉಚ್ಚನ್ಯಾಯಾಲಯ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಸಂಘದ ಕಾರ್ಯನ್ಯೂನ್ಯತೆಗೆ ಬರುತ್ತಿದೆ ಎಂದು ತೀರ್ಮಾನಿಸಿತು. ಇದನ್ನು ಪ್ರಶ್ನಿಸಿ ಅರ್ಜಿದಾರ 15 ಸದಸ್ಯರು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಇದು ವಿಚಾರಣೆ ಮಾಡುವಾಗ ಅರ್ಜಿದಾರರು ಈ ಮೇಲ್ಮನವಿ ಸಲ್ಲಿಸುವ ವೆಚ್ಚವನ್ನು ಸದಸ್ಯರು ಸೂಚಿಸಿದ ರೂ.75 ಕೋಟಿಗೆ ಒಪ್ಪಲು ತಯಾರಿದ್ದ ಮತ್ತೊಬ್ಬ ಅಭಿವೃದ್ಧಿದಾರ ಮತ್ತು ಈ ಅರ್ಜಿದಾರರು ತಮಗಿಲ್ಲದ ಹಕ್ಕನ್ನು ಸಂಭಾವನೆಯಿಂದ ಮಾಡದ್ದಲ್ಲವೆಂದು ತೀರ್ಮಾನಿಸಿ. ಈ ಅರ್ಜಿಯನ್ನು ವಜಾ ಮಾಡಿತು. (2013 Indlaw SC 164, (2013) 6 SCC 538, AIR 2013 SC 1398)

119. ಒಂದು ಸಕ್ಕರೆ ಸಹಕಾರ ಕಾರ್ಖಾನೆಯಲ್ಲಿ ಅನರ್ಹ ಸದಸ್ಯರು ಇದ್ದಾರೆಂದು ಆರೋಪಿಸಿ, ಸಕ್ಕರೆ ಆಯುಕ್ತರಿಗೆ ಅರ್ಜಿ ಸಲ್ಲಿಸಿದಾಗ, ಯಾವುದೇ ಕ್ರಮಕೈಗೊಳಲ್ಲಿದೆ ಇದ್ದುದಕ್ಕೆ ರಿಟ್ ಅರ್ಜಿ ದಾಖಲಿಸಿದಾಗ, ಉಚ್ಚನ್ಯಾಯಾಲಯ ಸಂಯುಕ್ತ ನಿಬಂಧಕರನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸೂಚಿಸಿತು. ಸಂಯುಕ್ತ ನಿಬಂಧಕರು 6617 ಅನರ್ಹ ಸದಸ್ಯರಿದ್ದಾರೆಂದು, ಅನರ್ಹತೆಗೊಳಿಸಿದರು. ಇದನ್ನು ಪ್ರಶ್ನಿಸಿ ಸಹಕಾರ ಸಚಿವರಿಗೆ ಮೇಲ್ಮನವಿ ಸಲ್ಲಿಸಿದಾಗ, ಸ್ವಹಿತಾ ಸಕ್ತಿ ಎಂದು, ಪ್ರಕರಣವನ್ನು ಇಲಾಖಾ ಕಾರ್ಯದರ್ಶಿಗೆ ವರ್ಗಾಯಿಸಿದರು. ಈ ತೀರ್ಮಾನವನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದಾಗ, ಸಹಕಾರ ಸಚಿವರು ಆದೇಶಿಸಿದ್ದನ್ನು ಮುಖ್ಯಮಂತ್ರಿಗಳು ತೀರ್ಮಾನಿಸಬೇಕು ಅಥವಾ ಮತ್ತೊಬ್ಬ ಮಂತ್ರಿಗೆ ರವಾನಿಸಬೇಕೆಂದು ತೀರ್ಮಾನಿಸಿತು. ಅದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಮೇಲ್ಮನವಿ ತೀರ್ಮಾನಿಸುವ ಅಧಿಕಾರ ಮುಖ್ಯಮಂತ್ರಿಗಳು ಮಾತ್ರ. ಅವರು ಆ ಪ್ರಕರಣವನ್ನು ಮತ್ತೊಬ್ಬ ಮಂತ್ರಿಗೆ ವರ್ಗಾಯಿಸಬಹುದು ಎಂಬ ತೀರ್ಮಾನವನ್ನು ಎತ್ತಿ ಹಿಡಿಯಿತು. ಈ ಪ್ರಕರಣ ತಿರಸ್ಕರಿಸಲಾಯಿತು. (2012 Indlaw SC 101, (2012) 4 SCC 781, AIR 2012 SC 1714)

120. ಮಹಾರಾಷ್ಟ್ರ ಸಹಕಾರ ಕಾಯಿದೆಯಲ್ಲಿ ನೊಂದಾಯಿಸಿದ ಒಂದು ಮಹಿಳಾ ಸಂಘ ಐ.ಸಿ.ಪಿ.ಎಸ್ ಯೋಜನೆಯಡಿ ಗುತ್ತಿಗೆ ನೀಡಲಾದ ಸಂಸ್ಥೆಗಳ ಅರ್ಹತೆ ಬಗ್ಗೆ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯ ಎದುರು ಅರ್ಜಿದಾರರಾದ 4 ರಿಂದ 6, ಅರ್ಹರಿದ್ದು ಸರ್ಕಾರದ ಯೋಜನೆಯಲ್ಲಿ ವಿಧಿಸಿರುವ ಎಲ್ಲಾ ಶರತ್ತುಗಳನ್ನು ಪೂರೈಸುತ್ತಿವೆ. ವ್ಯಕ್ತಿಗತ ತಯಾರಕರನ್ನು ಪರಿಗಣಿಸಿಲ್ಲ. ಮಕ್ಕಳ ಆರೋಗ್ಯದ ದೃಷ್ಟಿಯಿಂದ ಪೌಷ್ಟಿಕ ಆಹಾರ ನೀಡಲು, ಈಗ ಅನುಸರಿಸಿರುವ ನೀತಿ, ಉಚ್ಚ ನ್ಯಾಯಾಲಯದ ತೀರ್ಪನ್ನು ಅನರ್ಹಗೊಳಿಸಲಾಗದು. ತೀರ್ಪು ಸರಿಯಾಗಿದೆ ಎಂದು ಶ್ರೇಷ್ಠ ನ್ಯಾಯಾಲಯ ದೃಡೀಕರಿಸಿತು. (2011 Indlaw SC 661, (2011) 9 SCC 340)

121. ಮಹಾರಾಷ್ಟ್ರ ಕಾಯಿದೆಯಲ್ಲಿನ ಒಂದು ಬ್ಯಾಂಕ್‌ನಲ್ಲಿ ದುರುಪಯೋಗವಾಗಿದೆ ಎಂದು ಆಡಳಿತಾಧಿಕಾರಿ ನೇಮಿಸಿದ ನಂತರ, ಕೋಟಿಗಟ್ಟಲೆ ಹಣ ದುರುಪಯೋಗವಾಗಿರುವುದನ್ನು ಕಂಡು ಹಿಡಿದು, ಕ್ರಿಮಿನಲ್ ಮೊಕದಮ್ಮೆ ದಾಖಲಿಸಿದರು. ಆರೋಪಿಗಳು ಬೈಲ್ ಅರ್ಜಿ ಸಲ್ಲಿಸಿದರು. ನ್ಯಾಯಾಲಯ ಅರ್ಜಿಯನ್ನು ತಿರಸ್ಕರಿಸಿತು. ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಕಠಿಣ ಶರತ್ತುಗಳ ಮೇಲೆ ಬೈಲ್ ನೀಡಲಾಯಿತು ಮತ್ತು ಆರೋಪಿಗಳು ಭಾಗಶಃ ಹಣ ಪಾವತಿಸಲು ಸಮ್ಮತಿಸಿದ್ದು. ಶರತ್ತುಗಳನ್ನು ಪಾಲಿಸುತ್ತಿದ್ದರು. ಆದ್ದರಿಂದ ಬೈಲ್ ನೀಡಿದ ಬಗ್ಗೆ ಬ್ಯಾಂಕನಿದರು ಶ್ರೇಷ್ಠನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಕಠಿಣ ಶರತ್ತುಗಳನ್ನು ಪಾಲಿಸಿಲ್ಲವೆಂದು ಆರೋಪ

ಇಲ್ಲದಿರುವುದರಿಂದ ಮಧ್ಯಪ್ರವೇಶ ಮಾಡುವ ಅವಶ್ಯಕತೆ ಇಲ್ಲವೆಂದು ಶ್ರೇಷ್ಠನ್ಯಾಯಾಲಯ ಮೇಲ್ಮನವಿಯನ್ನು ವಜಾ ಮಾಡಿತು. (2009 Indlaw SC 2046, (2009) 8 SCC 727, AIR 2009 SC (Supp) 1965)

122. ಆಂದ್ರಪ್ರದೇಶ ಕಾಯಿದೆ – 1970 ರಿಂದ 1990ರ ಪ್ರಾರಂಭದ ಅವಧಿಯಲ್ಲಿ ಅಧಿಕಾರಿಗಳು ಮತ್ತು ಪ್ರಾಧಿಕಾರಗಳು ಸ್ವಜನ ಪಕ್ಷಪಾತ, ಲಂಚಗಳತನ ಮತ್ತು ಅನ್ಯಮಾರ್ಗದಿಂದ, ದಿನಗೂಲಿ, ಮಸ್ಟರ್‌ರೊಡ್, ಒಪ್ಪಂದದ ಆಧಾರದಲ್ಲಿ, ಅರೆ ಕಾಲಿಕ ಆದಾರದ ಮೇಲೆ ಅಸಿಯಂತ್ರಿತ ನೇಮಕ ಮಾಡಿಕೊಂಡು ಮುಂದೊಂದು ದಿನ, ಈ ಎಲ್ಲರನ್ನು ರಾಜ್ಯ ಸರ್ಕಾರ ಖಾಯಂಗೊಳಿಸುತ್ತದೆ ಎಂಬ ಕಾರಣದಿಂದ ಭರ್ತಿ ಮಾಡಿಕೊಂಡಿತು. ಆಂದ್ರಪ್ರದೇಶ ಸರ್ಕಾರ ಈ ಎಲ್ಲಾ ನೌಕರರನ್ನು ಖಾಯಂಗೊಳಿಸಲು ಸಾರ್ವಜನಿಕ ನೇಮಕಾತಿಯ ಸೇವೆ ಮತ್ತು ವೇತನ ದೃಡೀಕರಣ ಕಾಯಿದೆ 1994ನ್ನು ಜಾರಿಗೆ ತಂದಿತು. ಇದಕ್ಕೆ ಪೂರಕವಾಗಿ ಒಂದು ಅಧಿಸೂಚನೆ ಹೊರಡಿಸಿ 25.11.1993ಕ್ಕೆ ಪೂರ್ವದಲ್ಲಿ ಯಾವ ನೌಕರ ಸತತ ಐದು ವರ್ಷಗಳ ಸೇವೆ ಪೂರೈಸಿದ್ದರೆ, ಅವನನ್ನು ಖಾಯಂಗೊಳಿಸಲು ಆದೇಶಿಸಿತು. ಈ ಕಾಯಿದೆಗೆ (1994) 1998 ರಲ್ಲಿ ತಿದ್ದುಪಡಿ ಅಧಿಸೂಚನೆಯನ್ನು ಕಾಯಿದೆ ಭಾಗವಾಗಿ ಮಾಡಿತು. 1976 ರಿಂದ 1993 ರವರೆವಿಗೆ ರಾಜ್ಯ ಸರ್ಕಾರದ ನೌಕರರ ಸಂಖ್ಯೆ 82% ಗೆ ಏರಿತು ಮತ್ತು 1993–1994 ರಲ್ಲಿ ರಾಜ್ಯ ಸರ್ಕಾರ ತನ್ನ ಒಟ್ಟು ಆದಾಯದ ಶೇ.80 ನ್ನು ಈ ನೌಕರರ ಸಂಬಳ ಪಾವತಿಸಲು ಉಪಯೋಗಿಸಿತು. ಈ ಮಧ್ಯ ಕಲಂ 7 ರನ್ವಯ ಖಾಯಂಗೊಳಿಸಬಾರದೆಂಬ ಉದ್ದೇಶ ಇದ್ದರೂ, ಒತ್ತಡಕ್ಕೆ ಮಣಿದು ಅಧಿಸೂಚನೆ ಮುಖಾಂತರ ಖಾಯಂಗೊಳಿಸಲು ತೀರ್ಮಾನಿಸಿತು. ಈ ಅಧಿಸೂಚನೆಯಲ್ಲಿ “ಸತತವಾಗಿ ಐದು ವರ್ಷ ಎಂಬ ಪದಕ್ಕೆ ಬದಲಾಗಿ 25.11.1993 ಕ್ಕೆ ಯಾರು “ಐದು ವರ್ಷದ ಸೇವೆ ಸಲ್ಲಿಸಿದ್ದರೊ” ಎಂಬ ಪದ ಸೂಕ್ತ ಎಂದು ಸೂಚಿಸಿತು. ಅಂದರೆ ದಿನಾಂಕ 25.11.1993 ರಂದು ಗೆಜೇಟ್‌ನಲ್ಲಿ ಅಧಿಸೂಚನೆ ಮುದ್ರಿತವಾಗಿತ್ತು. ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ನೀಡಿದ ತೀರ್ಪು, ಅಂದರೆ 25.11.1993 ಕ್ಕೆ 5 ವರ್ಷ ಸೇವೆ ಮಾಡಿದ ನೌಕರರನ್ನು ಖಾಯಂಗೊಳಿಸಲು ನೀಡಿದ ಆದೇಶದಲ್ಲಿ ಯಾವುದೇ ನ್ಯೂನತೆ ಇಲ್ಲ ಮತ್ತು ತಿದ್ದುಪಡಿ ಕಾಯಿದೆ (1998) ರಲ್ಲಿ 19.08.1998 ರಲ್ಲಿ ಅರ್ಹರಾದ ನೌಕರನನ್ನು ಪರಿಗಣಿಸಬಹುದೆಂಬ ಅಂಶವನ್ನು ತಿರಸ್ಕರಿಸಿತು. ಅಂದರೆ 25.11.1993ಕ್ಕೆ 5 ವರ್ಷ ಸೇವೆ ಸಲ್ಲಿಸಿದ ನೌಕರರನ್ನು ಮಾತ್ರ ಖಾಯಂಗೊಳಿಸಲು ನೀಡಿದ ಆದೇಶವನ್ನು ದೃಡೀಕರಿಸಿತು. (2009 Indlaw SC 950, (2009) 8 SCC 431, AIR 2010 SC 3143)

123. ಮಹಾರಾಷ್ಟ್ರ ಕಾಯಿದೆಯಲ್ಲಿ ಒಂದು ಸಹಕಾರ ಸಂಘದ ಪ್ರಥಮ ಮಂಡಳಿ ನಾಮನಿರ್ದೇಶನವನ್ನು ಮೂರು ವರ್ಷದ ಅವಧಿಗೆ ಮಾಡಿ, ಅದನ್ನು (1994) 2002 ರವರೆಗೆ ಚುನಾವಣೆ ನಡೆಸದೆ ಮುಂದುವರಿಸಿತು. ಆನಂತರ ಆಡಳಿತಾಧಿಕಾರಿ ನೇಮಿಸಿ, ಆ ನಂತರ ಜವಳಿ ನಿರ್ದೇಶಕರು ಆಡಳಿತಗಾರರ ಒಂದು ಮಂಡಳಿ ರಚಿಸಿ 2009ರ ತನಕ ಚುನಾವಣೆ ನಡೆಸಲಿಲ್ಲ. ಇದನ್ನು ಪ್ರಶ್ನಿಸಿದಾಗ ಕಾಯಿದೆಯಲ್ಲಿ ನಿಗದಿ ಪಡಿಸಿದ ಅವಧಿಗೆ ಚುನಾವಣೆ ನಡೆಸುವುದು ನಿಬಂಧಕರ ಕೆಲಸ ಮತ್ತು ಆಡಳಿತಾಧಿಕಾರಿ ಅಥವಾ ಆಡಳಿತಾಧಿಕಾರಿಗಳ ಮಂಡಳಿಯಲ್ಲಿ ಕಾಯಿದೆಯಲ್ಲಿ ನಿಗದಿ ಪಡಿಸಿದ ಅವಧಿಗೆ ಮಾತ್ರ ಸೀಮಿತ ಎಂದು ಉಚ್ಚನ್ಯಾಯಾಲಯ ತೀರ್ಮಾನಿಸಿದ್ದನ್ನು ಶ್ರೇಷ್ಠ ನ್ಯಾಯಾಲಯ ದೃಢೀಕರಿಸಿತು. (2009 Indlaw SC 768)

124. ಉತ್ತರಪ್ರದೇಶವನ್ನು 2000 ದ ರಾಜ್ಯ ವಿಂಗಡಣೆ ಮಾಡಿದ ನಂತರ, ಉತ್ತರಪ್ರದೇಶ ಸಹಕಾರಿ ಸಂಸ್ಕರಣೆ ಮತ್ತು ಶೀತಲ ಗೃಹಗಳ ಮಹಾಮಂಡಳ, ರಾಜ್ಯ ಕಾಯಿದೆ ವ್ಯಾಪ್ತಿಯಲ್ಲಿ ಬರುತ್ತದೊ ಅಥವಾ ಬಹು ರಾಜ್ಯ ಕಾಯಿದೆಯಡಿ ಬರುತ್ತದೊ ಎಂಬುದಕ್ಕೆ, ಒಂದು ಸಂಘದ ಕಾರ್ಯವ್ಯಾಪ್ತಿ

ಒಂದು ರಾಜ್ಯಕ್ಕೆ ಸೀಮಿತವಾದರೆ ಮಾತ್ರ ಅದು ರಾಜ್ಯ ಕಾಯಿದೆಯಲ್ಲಿ ಬರುತ್ತಿದೆ. ಈ ಸಂಘ ಉತ್ತರಪ್ರದೇಶ ಮತ್ತು ಉತ್ತರಾಂಚಲ ರಾಜ್ಯಗಳ ವ್ಯಾಪ್ತಿಗೆ ಬರುತ್ತಿದ್ದು ಇದು ಒಂದು ರಾಜ್ಯ ಸಹಕಾರ ಕಾಯಿದೆಯಲ್ಲಿ ಬರುವುದಿಲ್ಲ. ಇದು ಬಹು ರಾಜ್ಯ ಸಹಕಾರ ಕಾಯಿದೆಯಡಿ ಬರುತ್ತಿದೆ. (2009 Indlaw SC 761, (2009) 16 SCC 157, AIR 2009 SC 2450)

125. ಗುಜರಾತ್ ಸಹಕಾರ ಸಂಘಗಳ ಕಾಯಿದೆಯಡಿ ನೋಂದಾಯಿಸಿದ ಒಂದು ಸಹಕಾರ ಬ್ಯಾಂಕ್ ಪ್ರಕರಣದಲ್ಲಿ ಕ್ರಿಮಿನಲ್ ಮೊಕದಮ್ಮೆ ದಾಖಲಿಸಿದ್ದು, ಅದನ್ನು ವಿಚಾರಣೆ ಮಾಡಲು ನ್ಯಾಯಾದೀಶರು ಪೋಲೀಸ್ ಅಧಿಕಾರಿಗೆ ಆದೇಶಿಸಿದ ನಂತರ, ಮತ್ತೊಂದು ಅರ್ಜಿ ಸಲ್ಲಿಸಿ, ಎರಡೂ ಪಕ್ಷಗಳ ಒಪ್ಪಂದ ಮಾಡಿಕೊಂಡಿದ್ದು ಪ್ರಕರಣವನ್ನು ಹಿಂಪಡಿಸಲು ಮನವಿ ಸಲ್ಲಿಸಿದ್ದನ್ನು ಒಪ್ಪಿ ಪ್ರಕರಣ ವಿಚಾರಣೆ ಮಾಡಬೇಕಾಗಿಲ್ಲವೆಂದು ಮಾಡಿದ ಆದೇಶವನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಪ್ರಕರಣ ದಾಖಲಿಸಿದ ಸಮಯದಲ್ಲಿ ಆಡಳಿತಾಧಿಕಾರಿ ಕಾರ್ಯನಿರ್ವಹಿಸುತ್ತಿದ್ದು, ನೇರವಾಗಿ ಉಪನಿಬಂಧಕರ ನಿಯಂತ್ರಣದಲ್ಲಿ ಕೆಲಸ ನಿರ್ವಹಿಸುತ್ತಿರುವುದರಿಂದ, ಕೇರಳ ನ್ಯಾಯಾಲಯದ ಆದೇಶವನ್ನು ರದ್ದು ಮಾಡಲು ಒಪ್ಪಲಿಲ್ಲ ಮತ್ತು ಈ ವಿಷಯಕ್ಕೆ ಸಂಬಂಧಪಟ್ಟಂತೆ ಈ ನ್ಯಾಯಾಲಯದ 2004 Indlaw SC 785 ನಲ್ಲಿನ ನೀತಿ ಅನ್ವಯವಾಗುತ್ತದೆ ಎಂಬುದನ್ನು ಒಪ್ಪಲಿಲ್ಲ. ಕೇರಳ ನ್ಯಾಯಾಲಯ ಒಮ್ಮೆ ಕ್ರಿಮಿನಲ್ ಪ್ರಕರಣ ದಾಖಲಿಸಿ, ವಿಚಾರಣೆ ನಡೆಸಲು ಸೂಚಿಸಿದ ನಂತರ ಪ್ರಕರಣ ವಾಪಸ್ ಪಡೆಯಲು ಸಲ್ಲಿಸಿದ ಅರ್ಜಿ ಪುರಸ್ಕರಿಸಿರುವುದು ತಪ್ಪು. ಅಂದರೆ ಕೇರಳ ನ್ಯಾಯಾಲಯ ಪ್ರಕರಣ ಮಾಡಿದ ಆದೇಶವನ್ನು ಕಿತ್ತು ಹಾಕಿ, ಅರ್ಹತೆ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತ ಪಡಿಸಲಿಲ್ಲ. (2009 Indlaw SC 603, (2009) 3 SCC (Cr) 76, AIR 2009 SC (Supp) 1446)

126. ಮಹಾರಾಷ್ಟ್ರ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಸಂಘಕ್ಕೆ ಕೈಗಾರಿಕಾ ವಸಾಹತು ನಿರ್ಮಿಸಲು ಜಮೀನನ್ನು ವಶಕ್ಕೆ ಪಡೆದುಕೊಡಲು ಭೂಸ್ವಾಧೀನಾಧಿಕಾರಿ ಮಾಡಿದ ಆದೇಶವನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ, ಎರಡೂ ಸಂಘಗಳು ಒಪ್ಪಿಗೆ ಪತ್ರ ನೀಡಿದ ನಂತರ, ಭೂಸ್ವಾಧೀನವನ್ನು ಒಪ್ಪಿಗೆ ನೀಡಿ ಆದೇಶಿಸಿತು. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಉಚ್ಚನ್ಯಾಯಾಲಯದ ಎರಡು ಆದೇಶಗಳನ್ನು (01.12.2006 ಮತ್ತು 04.04.2008) ರದ್ದು ಪಡಿಸಿ ಪ್ರಕರಣವನ್ನು ವಾಪಸ್ ಮಾಡಿತು ಮತ್ತು ಪ್ರಕರಣದ ಸತ್ಯಾತೆತೆಯ ಬಗ್ಗೆ ಯಾವುದೇ ಅಭಿಪ್ರಾಯಾ ತಿಳಿಸದೆ, ರಾಜ್ಯ ಸರ್ಕಾರ ತನ್ನ ಪ್ರಮಾಣ ಪತ್ರದಲ್ಲಿ ಸಿಳಿಸಿದ ವಿಷಯದ ಆಧಾರದ ಮೇಲೆ ಮರು ವಿಚಾರಣೆ ನಡೆಸಲು ಸೂಚಿಸಿತು. (2009 Indlaw SC 517, (2009) 12 SCC 652, AIR 2009 SC (Supp) 1666)

127. ಮಹಾರಾಷ್ಟ್ರ ಸಹಕಾರ ಕಾಯಿದೆ ವ್ಯಾಪ್ತಿ ವಿಚಾರಣೆ ಮಾಡುವ ಸಂದರ್ಭದಲ್ಲಿ, ಒಂದು ಬಹುರಾಷ್ಟ್ರೀಯ ಸಹಕಾರ ಸಂಘದ ವಿಷಯದಲ್ಲಿ ಮಹಾರಾಷ್ಟ್ರ ನಿಬಂಧಕರ ಸುತ್ತೋಲೆಯಲ್ಲಿ ಬಹು ರಾಜ್ಯ ಕಾಯಿದೆ ಈ ಪ್ರಕರಣದಲ್ಲಿ ಅನ್ವಯ ವಾಗುವುದಿಲ್ಲ ಎಂಬ ಅಂಶವನ್ನು ತೀರ್ಮಾನಿಸದೆ ಇರುವುದರಿಂದ, ಮತ್ತು ಬೇರೆ ಪ್ರಕರಣದಲ್ಲಿ ಬಹು ರಾಜ್ಯ ಕಾಯಿದೆ ಜಾರಿಯನ್ನು ತಡೆ ಹಿಡಿದಿದೆ ಎಂದು ತಿಳಿಸಿರುವುದರಿಂದ, ಎಂದಿರುವುದು ಈ ಪ್ರಕರಣಕ್ಕೆ ಅನ್ವಯವಾಗದೇ ಇದ್ದರೂ, ಆ ಬಗ್ಗೆ ತೀರ್ಮಾನಿಸಿಲ್ಲವಾದ್ದರಿಂದ, ಪ್ರಕರಣವನ್ನು ಉಚ್ಚನ್ಯಾಯಾಲಯ ತೀರ್ಮಾನಿಸಲು ಸೂಚಿಸಲಾಯಿತು. (2009 Indlaw SC 1619, (2009) 17 SCC 762)

128. ಸಹಕಾರ ಸಂಘ/ಬ್ಯಾಂಕ್‌ಗಳಲ್ಲಿ ಠೇವಣಿ ಮಾಡಿದ ಹಣವನ್ನು ಸಾಲ ನೀಡಲಾಗಿದೆ ಎಂದು ಅವಧಿ ಮುಕ್ತಾಯವಾದ ನೀಗದಿತ ಠೇವಣಿದಾರರ ಹಣ ವಾಪಸ್ ಕೊಡದೇ ಇದ್ದಾಗ ಉದ್ಭವಿಸಿದ

ಪ್ರಕರಣವನ್ನು ಪರಿಶೀಲಿಸುವಾಗ, ಸಹಕಾರ ಸಂಘಗಳ ಇಂಡಿಯನ್ ಬ್ಯಾಂಕ್‌ನಲ್ಲಿ ಇಟ್ಟಿದ್ದ ಠೇವಣಿ ವಾಪಸ್ ಮಾಡದೆ ಇದ್ದಾಗ, ಅಂತಹ ಸಹಕಾರ ಸಂಘಗಳ ಬಗ್ಗೆ ವಿವಾದಾದಲಿಲ್ಲದ ಸಹಕಾರ ಸಂಘ/ಬ್ಯಾಂಕ್‌ಗಳ ಬಗ್ಗೆ ಬ್ಯಾಂಕ್ ಮತ್ತು ಸಿ.ಬಿ.ಐ ಜೊತೆಯಲ್ಲಿ ಕುಳಿತು, ಪಟ್ಟಿ ಮಾಡಿ ವಿವಾದವಿಲ್ಲದ ಸಂಘ/ಬ್ಯಾಂಕ್ ಠೇವಣಿ ವಾಪಸ್ ನೀಡುವ ಬಗ್ಗೆ ತೀರ್ಮಾನಿಸಲು ಉಚ್ಚನ್ಯಾಯಾಲಯ ಸೂಚಿಸಿತ್ತು. ಇಂಡಿಯನ್ ಬ್ಯಾಂಕ್ ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಯಾವ ಸಂಘದ/ಬ್ಯಾಂಕಿನ ವಿಷಯದಲ್ಲಿ ವಿವಾದಗಳಿಲ್ಲವೋ ಅಂತಹ ಸಂಘ/ಬ್ಯಾಂಕ್ ಠೇವಣಿ ಮಾಡಿದ್ದು ಹಣವನ್ನು ಠೇವಣಿ ಅವಧಿ ಮುಗಿದ ಕೂಡಲೆ ಸಂಬಂಧಪಟ್ಟ ಸಂಘ/ಬ್ಯಾಂಕ್‌ಗೆ ಮರಳಿ ಪಡೆಯಲು ಸೂಚಿಸುವಂತೆ ನಿರ್ದೇಶನ ನೀಡಿತು. ಯಾವ ವಿಷಯದಲ್ಲಿ ವಿವಾದವಿದ್ದರೆ, ಸಂಬಂಧಪಟ್ಟ ಪ್ರಾಧಿಕಾರದ ಆದೇಶ ಪಡೆದ ನಂತರ ನೀಡಲು ಸೂಚಿಸಿತು. (2009 Indlaw SC 359, (2009) 2 SCC (Cr) 544, (2009) 4 SCC 629)

129. ಬಹು ರಾಜ್ಯ ಸಹಕಾರ ಕಾಯಿದೆಯಡಿ ಅಡಮಾನ ಮಾಡಿದ ಆಸ್ತಿ ಮಾರಾಟದ ಬಗ್ಗೆ, ರಿಟ್ ಅರ್ಜಿ ದಾಖಲಾದಾಗ ರೂ.6.04 ಕೋಟಿಗಳನ್ನು ಇನ್ನು ಮೂರು ತಿಂಗಳಲ್ಲಿ ಜಮಾ ಮಾಡಿದರೆ, ಯಥಾಸ್ಥಿತಿ ಕಾಪಾಡಲು ನಿರ್ದೇಶಿಸಿತು ಮತ್ತು ಆ ಹಣ ತುಂಬಿದ ನಂತರ, ಈ ರಿಟ್ ಅರ್ಜಿ ತೀರ್ಮಾನವಾಗುವ ತನಕ ಯಥಾಸ್ಥಿತಿ ಮುಂದುವರಿಯುತ್ತದೆಂದು ಆದೇಶಿಸಿತು. (2009 Indlaw SC 378, (2009) 13 SCC 748)

130. ಒಂದು ಗೃಹ ನಿರ್ಮಾಣ ಸಂಘದ ಸದಸ್ಯ ತಾನು ಬೇರೆ ನಿವೇಶನ ಪಡೆದಿರುವುದರಿಂದ, ತನ್ನ ಪಾಲು ಬಂಡವಾಳ ಮತ್ತು ಠೇವಣಿ ಹಿಂತಿರುಗಿಸಲು ಅರ್ಜಿ ಸಲ್ಲಿಸಿ, ಆ ನಂತರ ತನ್ನ ಮಗಳಿಗೆ ವರ್ಗಾಯಿಸಲು ಮನವಿ ಸಲ್ಲಿಸುತ್ತಾನೆ. ಈ ಮಧ್ಯೆ ಮತ್ತೊಬ್ಬ ವ್ಯಕ್ತಿಯನ್ನು ಸದಸ್ಯರನ್ನಾಗಿ ಸೇರಿಸಿಕೊಂಡಿದ್ದು, ಅವನು ರಿಟ್ ಅರ್ಜಿ ಸಲ್ಲಿಸಿದಾಗ, ಅವನಿಗೆ ಅರ್ಹತೆ ಇದೆ. ಏಕೆಂದರೆ ಮೊದಲ ಅರ್ಜಿದಾರ ಠೇವಣಿ ವಾಪಸ್ ನೀಡಲು ಕೇಳಿದ್ದು, ಎರಡನೇ ವ್ಯಕ್ತಿ ಅರ್ಹ ಎಂದು ತೀರ್ಮಾನಿಸಿತು. ಶ್ರೇಷ್ಠ ನ್ಯಾಯಾಲಯ, ಈ ವಿಷಯದಲ್ಲಿ ಮಧ್ಯ ಪ್ರವೇಶ ಮಾಡಿ, ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಲು ಉಚ್ಚನ್ಯಾಯಾಲಯ ವರ್ಗಾವಣೆ ಮಾಡಿತು. (2009 Indlaw SC 173, (2009) 14 SC 302)

131. ಸಹಕಾರ ಸಂಘಗಳು/ಬ್ಯಾಂಕ್‌ಗಳು ವಾಣಿಜ್ಯ ಬ್ಯಾಂಕ್‌ಗಳಲ್ಲಿ (ಏಜೆಂಟ್ ಮಾಲಿಕ) ಠೇವಣಿ ಪಡೆದಾಗ, ಅವಧಿ ಮುಗಿದ ನಂತರ ಠೇವಣಿ ವಾಪಸ್ ಮಾಡಲಿಲ್ಲ, ಏಕೆಂದರೆ ಈ ರೀತಿ ಸಂಗ್ರಹಿಸಿದ ಠೇವಣಿ ಹಣ ದುರುಪಯೋಗವಾಗಿದ್ದು ವಿಚಾರಣೆ ನಡೆಯುತ್ತಿದೆ ಎಂದು. ಆದರೆ, ಸಹಕಾರ ಬ್ಯಾಂಕ್‌ಗಳು ಠೇವಣಿ ಇಡುವುದು, ಅದರ ಸದಸ್ಯರ ಠೇವಣಿ ಹಣದಿಂದ, ಆ ಠೇವಣಿ ಅವಧಿ ಮುಗಿದಾಗ, ಅಥವಾ ಸಾಲ ವಿತರಣೆ ಮಾಡುವಾಗ, ಹಣದ ಅವಶ್ಯಕತೆ ಇರುವುದರಿಂದ, ಬ್ಯಾಂಕಿನಲ್ಲಿ ಹೂಡಿದ ಠೇವಣಿ ವಾಪಸ್ ಮಾಡದಿದ್ದರೆ, ವ್ಯವಹಾರ ಸ್ಥಗಿತಗೊಳುತ್ತಿದೆ. ಆದ್ದರಿಂದ ಠೇವಣಿ ಮಾಡಿದ ಹಣ ವಾಪಸ್ ಮಾಡಬೇಕು. ಅದಕ್ಕಾಗಿ ಅವ್ಯವಹಾರವಾಗಿದ್ದರೆ ಮೂಲ ಠೇವಣಿ ರಶೀತಿಯನ್ನು ತನ್ನ ವಷದಲ್ಲಿ ಇರಿಸಿಕೊಂಡು, ಹೊಸದಾಗಿ ಒಂದು ಠೇವಣಿ ರಶೀತಿ ನೀಡಿ, ಅಗತ್ಯವಾದ ಹಣವನ್ನು ಸಾಲ ರೂಪದಲ್ಲಿ ಮಂಜೂರಿ ಮಾಡಬಹುದು. ಅಂದರೆ ಭಾರತೀಯ ರಿಸರ್ವ್ ಬ್ಯಾಂಕ್ ವಿಚಾರಣೆ ಮುಗಿಸುವ ತನಕ ಈ ವ್ಯವಸ್ಥೆ ಮುಂದುವರಿಸತಕ್ಕದ್ದು.

ರಿಟ್ ಅರ್ಜಿ ದಾಖಲಿಸಲು ಯೋಗ್ಯವಲ್ಲವೆಂದು ಏಕ ಸದಸ್ಯ ಪೀಠ ತೀರ್ಮಾನಕ್ಕೆ ಬಂದ ಮೇಲೆ, ಮಂಡಳಿ ಚುನಾವಣೆ ನಡೆಸಲು ನೀಡಿದ ನಿರ್ದೇಶನ ತಪ್ಪು ಏಕೆಂದರೆ ರಿಟ್ ಕಾರ್ಯವ್ಯಾಪ್ತಿ ಇಲ್ಲವೆಂದ ಮೇಲೆ ಪ್ರಕರಣದ ಬಗ್ಗೆ ನಿರ್ದೇಶನ ನೀಡಲು, ಸಂವಿಧಾನ 12 ರಲ್ಲಿ ಅಧಿಕಾರ ಅನುಚ್ಛೇದ 12 ರಲ್ಲಿ

ಸೀಮಿತವಾದ ಅಧಿಕಾರ ಉಚ್ಚನ್ಯಾಯಾಲಯ ಪ್ರಶ್ನಿಸಬೇಕಾದ ಅಂಶ, ವ್ಯವಹಾರಗಳು ಸಮರ್ಪಕವಾಗಿ ನಡೆಯುತ್ತಿಲ್ಲವೇ ಎಂಬುದನ್ನು ಕೇಳಬೇಕು. ಈ ಪ್ರಕರಣದಲ್ಲಿ ನಿರ್ದೇಶನ ನೀಡಬಾರದಿತ್ತು. (2008 Indlaw SC 974, (2008) 12 SCC 541, AIR 2008 SC 2585)

132. ಸಕ್ಕರೆ ಆಯುಕ್ತರು ಮತ್ತು ನಿಬಂಧಕರು, ನೌಕರರ ಸೇವಾ ಷರತ್ತುಗಳನ್ನು ಬದಲಾಯಿಸುವಾಗ, ಅಂದರೆ ಸಕ್ಕರೆ ನುರಿಸುವ ಅವಧಿ 1ನೇ ಅಕ್ಟೋಬರ್ ನಿಂದ ಜುಲೈ ವರೆವಿಗೆ ಎಂದಿದ್ದನ್ನು, ಕಾರ್ಖಾನೆಗಳ ಕಬ್ಬು ನುರಿಸಲು ಪ್ರಾರಂಭಿಸಿದಾಗ ಮತ್ತು ಮುಕ್ತಾಯಗೊಳಿಸಿ ಅದನ್ನು 'ಕಬ್ಬು ನುರಿಸುವ ಅವಧಿ' ಎಂದು ಮಾರ್ಪಡಿಸಿದಾಗ, ಸಂಬಂಧಪಟ್ಟ ನೌಕರರಿಗೆ ನೋಟೀಸ್ ಕೊಡುವ ಅವಶ್ಯಕತೆ ಇಲ್ಲವೆಂದು ಉಚ್ಚನ್ಯಾಯಾಲಯ ತೀರ್ಮಾನಿಸಿದಾಗ ಅದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯ, ನೌಕರರು ಕೆಲಸ ಮಾಡುವ ಅವಧಿ ಬದಲಾವಣೆ ಆದಾಗ ಅದು ಸೇವಾ ಶರತ್ತಿಗೆ ಸಂಬಂಧಪಟ್ಟಿದ್ದು, ನೌಕರರಿಗೆ ನೋಟೀಸ್ ಕೊಡುವುದು ಅವಶ್ಯಕ ಎಂದು ತೀರ್ಮಾನಿಸಿತು. (2008 Indlaw SC 2545, (2008) 11 SCC 284, AIR 2009 SC (Supp) 554)

133. ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯತ್ವವನ್ನು ಬೇರೆ ವ್ಯಕ್ತಿಗೆ ವರ್ಗಾಯಿಸಲು ಅರ್ಜಿ ಪುರಸ್ಕರಿಸಿ, ನಿಬಂಧಕರ ಒಪ್ಪಿಗೆಗೆ ಕಳುಹಿಸಿತು. ನಿಬಂಧಕರು ನೋಟೀಸ್ ಜಾರಿ ಮಾಡಿ ಹಿಂದಿನ ವ್ಯಕ್ತಿಗೆ ಸದಸ್ಯತ್ವದಿಂದ ತೆಗೆದು ಹಾಕಬಾರಬೇಕೆಂದು ನೋಟೀಸ್ ಜಾರಿ ಮಾಡಿ, ಅದರಂತೆ ಆದೇಶಿಸಿತು. ನಿಬಂಧಕರ ಆದೇಶವನ್ನು ಸರ್ಕಾರ ಕಿತ್ತು ಹಾಕಿ, ಮೂಲ ಸದಸ್ಯನ ಸದಸ್ಯತ್ವವನ್ನು ಮರು ಸ್ಥಾಪಿಸಿತು. ಇದನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ನಿಬಂಧಕರಿಗೆ ಹೆಸರನ್ನು ಒಪ್ಪಲು ಸೂಚಿಸಿತು. ಆದರೆ ನಿಬಂಧಕರು ಆದೇಶಿಸದೆ ಇದ್ದುದರಿಂದ ನ್ಯಾಯಾಲಯಾ ನಿಂದನೆ ನೋಟೀಸ್ ಜಾರಿ ಮಾಡಿದ ಮೇಲೆ ನಿಬಂಧಕರು ಹೆಸರನ್ನು ಒಪ್ಪಿ, ನಿವೇಶನ ಹಂಚಿಕೆಯಲ್ಲಿ ಅವರ ಹೆಸರನ್ನು ಸೇರಿಸಲು ಸೂಚಿಸಿದ್ದನ್ನು ಮಂಡಿಸಿದರು ಮೂಲ ಅರ್ಜಿದಾರರು ಬೇರೆ ಒಂದು ನಿವೇಶನ ಹೊಂದಿರುವುದರಿಂದ, ಅವರು ಸದಸ್ಯತ್ವಕ್ಕೆ ಅನರ್ಹರು ಎಂದು ಆದೇಶಿಸಿದ್ದನ್ನು, ಶ್ರೇಷ್ಠ ನ್ಯಾಯಾಲಯದಲ್ಲಿ ಸಹಕಾರ ಸಂಘಗಳ ನಿಯಮ 17 ಮತ್ತು 87 ನ್ನು ಪರಿಶೀಲಿಸಿ, ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಿತು. (2007 Indlaw SC 1432, (2007) 13 SCC 603, AIR 2007 SC (Supp) 1146)

134. ಆದೇಶ ಮಾಡಿ 19.08.1998 ರಂದು ಸೇವೆ ಸಲ್ಲಿಸಿದ ಎಂದು ಸೇರಿಸಿದ್ದನ್ನು ನ್ಯಾಯಾಲಯ ಪರಿಶೀಲಿಸಿತು. ಉಚ್ಚನ್ಯಾಯಾಲಯ ದಿನಾಂಕ 25.11.1993 ಕ್ಕೆ ಯಾವ ನೌಕರ ಐದು ವರ್ಷಗಳ ಸೇವೆ ಸಲ್ಲಿಸಿದ್ದಾನೇ ಅವನನ್ನು ಖಾಯಂಗೊಳಿಸಿವುದನ್ನು ಎತ್ತಿ ಹಿಡಿದು 19.08.1998 ನ್ನು ಒಪ್ಪಲಿಲ್ಲ. ಶ್ರೇಷ್ಠ ನ್ಯಾಯಾಲಯ ಉಚ್ಚನ್ಯಾಯಾಲಯದ ವಿಭಾಗೀಯ ಪೀಠದ ಆದೇಶವನ್ನು ಸಮರ್ಥಿಸಿ ಆದೇಶಿಸಿತು. (2009 Indlaw SC 950, (2009) 8 SCC 431, AIR 2010 SC 3143)

135. ಮಹಾರಾಷ್ಟ್ರ ಸಹಕಾರ ಕಾಯಿದೆಯಲ್ಲಿ ನೋಂದಣಿಯಾದ ಒಂದು ಬ್ಯಾಂಕ್, ಬಹು ರಾಜ್ಯ ಕಾಯಿದೆಯಡಿ ನೊಂದಾಯಿಸಿದಾಗ, ಆ ಬ್ಯಾಂಕಿನ 11 ಜನ ನೌಕರರನ್ನು ವರ್ಗಾವಣೆ ಮಾಡಿದಾಗ ನೌಕರರ ಒಕ್ಕೂಟ, ಔದ್ಯೋಗಿಕ ನ್ಯಾಯಾಲಯದಲ್ಲಿ ಪ್ರಶ್ನಿಸಿತು. ಅದನ್ನು ವಿಚಾರಣೆ ಸಮಯದಲ್ಲಿ ಊರ್ಜಿತತೆ ಬಗ್ಗೆ ತೀರ್ಮಾನಿಸಿ, ಸಂಬಂಧಪಟ್ಟವರ ಮುಂದೆ ಪರಿಹಾರ ಪಡೆಯಲು ತೀರ್ಮಾನಿಸಿ ಅರ್ಜಿದಾರರಿಗೆ ವಾಪಸ್ ಮಾಡಿತು (ಬಹು ರಾಜ್ಯ ಕಾಯಿದೆಯಡಿ) ಇದನ್ನು ಪ್ರಶ್ನಿಸಿ ರಿಟ್ ಅರ್ಜಿ ದಾಖಲಿಸಿದಾಗ, ಬ್ಯಾಂಕಿಂಗ್ ಕಾಯಿದೆಯಡಿ "ಬ್ಯಾಂಕಿಂಗ್ ಕಂಪನಿ" ಎಂಬುದನ್ನು ನಿಗದಿ ಪಡಿಸಿದ್ದು ಸಹಕಾರ ಬ್ಯಾಂಕ್ ಆ ವ್ಯಾಪ್ತಿಗೆ ಬರುವುದಿಲ್ಲ ಎಂದು ತೀರ್ಮಾನಿಸಿತು. ಬ್ಯಾಂಕಿಂಗ್ ಕಾಯಿದೆಗೆ 1965 ರಲ್ಲಿ ತಂದ ತಿದ್ದುಪಡಿ ಕಾಯಿದೆ ಪರಿಗಣಿಸಬೇಕಾಗಿಲ್ಲವೆಂದು ತೀರ್ಮಾನಿಸಿತು. ಈ

ತೀರ್ಮಾನವವನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿಯಿತು. ಅಂದರೆ ನೌಕರ ವಿಷಯ ಔದ್ಯೋಗಿಕ ನ್ಯಾಯಾಲಯದಲ್ಲಿ ನಡೆಸುವಂತೆ ಆದೇಶಿಸಿತು. (2007 Indlaw SC 1008, (2007) 2 SCC (LS) 82, AIR 2007 SC 2320)

136. ಒಂದು ಹಾಲು ಉತ್ಪಾದಕ ಸಹಕಾರ ಸಂಘವನ್ನು "ಹಾಲು ಉತ್ಪಾದಕ" ಎಂದು ಕರೆಯಬಹುದೆ ಎಂಬ ವಿಷಯ ತೀರ್ಮಾನಕ್ಕೆ ಬಂದಾಗ, ಯಾವುದೇ ಒಂದು ಸಂಸ್ಥೆಯನ್ನು "ಹೈನುಗಾರಿಕೆ ಉದ್ಯಮ" ಎಂದು ಕರೆಯಬೇಕಾದರೆ, ಹಸು/ಎಮ್ಮೆಯನ್ನು ಸಾಕಿ ಹಾಲು ಉತ್ಪಾದನೆ ಕೆಲಸ ನಡೆಯುತ್ತಿದೆಯೋ, ಅದನ್ನು ಮಾತ್ರ "ಹೈನುಗಾರಿಕೆ ಉತ್ಪಾದಕ ಉದ್ಯಮ" ಎಂದು ಕರೆಯಬೇಕು. ಸಹಕಾರ ಸಂಘ ಹಾಲನ್ನು ಸಂಗ್ರಹಿಸಿ ಒಕ್ಕೂಟಕ್ಕೆ ಸರಬರಾಜು ಮಾಡುತ್ತಿದ್ದು, ಅದು ಉತ್ಪಾದಕ ಅಲ್ಲ. ಇದನ್ನು ಶ್ರೇಷ್ಠ ನ್ಯಾಯಾಲಯ ಊರ್ಜಿತಗೊಳಿಸಿತು. (2007 Indlaw SC 233, (2007) 9 SCC 301)

137. ಗುಜರಾತ್ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಸಹಕಾರ ಬ್ಯಾಂಕ್ ಸಾಲ ಮಂಜೂರು ಮಾಡಿ, ಮರು ಪಾವತಿಯಾಗದೇ ಇದ್ದುದಕ್ಕೆ ದಾವಾ ದಾಖಲಿಸಿ ಡಿಕ್ರಿ ಪಡೆದಿದ್ದರು. ಬಾರತೀಯ ರಿಸರ್ವ್ ಬ್ಯಾಂಕ್, ಶಾಸನ ಬದ್ಧ ವಿಚಾರಣೆ ನಡೆಸಿ, ಆರ್ಥಿಕ ನ್ಯೂನತೆಗಳ ಆಧಾರದ ಮೇಲೆ ಆಡಳಿತಾಧಿಕಾರಿ ನೇಮಿಸಲು ಏಕ ಸದಸ್ಯ ಪೀಠ ಆದೇಶಿಸಿತು. ಅರ್ಜಿಯಲ್ಲಿ ಆಡಳಿತಾಧಿಕಾರಿ ನೇಮಿಸಲು ಮನವಿ ಇಲ್ಲದಾಗ, ಆದೇಶಿಸಿತ್ತು. ಈ ಪ್ರಕರಣ ತೀರ್ಮಾನ ಮಾಡುವಾಗ ಈ ಹಿಂದೆ (2004) 2 SCC 463/2004 Indlaw SC 961 ರ ತೀರ್ಮಾನದಲ್ಲಿ ಗುಜರಾತ್ ಕಾಯಿದೆಯಲ್ಲಿನ ಕಲಂ 71 ರನ್ವಯ ಹಣ ಸಮರ್ಪಕವಾಗಿ ಉಪಯೋಗಿಸಿಲ್ಲವೆಂದು, ನಿಬಂಧಕರು ಮತ್ತು ಸರ್ಕಾರ ಕ್ರಮ ಜರುಗಿಸದೇ ಇದ್ದಾಗ, ರಿಟ್ ಅರ್ಜಿ ಮೂಲಕ ಪ್ರಶ್ನಿಸಿ, ನಿರ್ದೇಶಿಸಲು ಸೂಚಿಸಿದ್ದನ್ನು ಪ್ರಶ್ನಿಸಿದ ತೀರ್ಪನ್ನು ಉಲ್ಲೇಖಿಸಿ, ಶ್ರೇಷ್ಠ ನ್ಯಾಯಾಲಯ ಈ ಕೆಳಕಂಡಂತೆ ತೀರ್ಪಿತ್ತಿತು.

1. ಆಡಳಿತಾಧಿಕಾರಿ ಕೆಲಸ ಮುಂದುವರಿಯತಕ್ಕದ್ದು.
2. ಆಡಳಿತಾಧಿಕಾರಿ ಮುಂದಿನ ಆಡಳಿತ ಮಂಡಳಿ ರಚನೆಗೆ ಕ್ರಮ ಜರುಗಿಸತಕ್ಕದ್ದು – ಅಂದರೆ ಮೂರು ತಿಂಗಳೊಳಗಾಗಿ
3. ನಿಬಂಧಕರು ತನ್ನ ವಿಚಾರಣ ವರದಿ ಸ್ವಯಂ ಸಲ್ಲಿಕೆಯಿಂದ ಅಥವಾ ನ್ಯಾಯಾಲಯ ನೀಡಿದ ಆದೇಶದಂತೆ ಕ್ರಮ ಜರುಗಿಸತಕ್ಕದ್ದು.

(2007 Indlaw SC 318, (2007) 4 SCC 83, AIR 2007 SC (Supp) 1)

138. ಮಧ್ಯಪ್ರದೇಶ ಸಹಕಾರ ಕಾಯಿದೆಯಡಿ – ನೇಮಕಾತಿ ನಿಯಮಗಳ ಬಗ್ಗೆ ನಿಬಂಧಕರು ರೂಪಿಸಿರುವುದನ್ನು ಪ್ರಶ್ನಿಸಿದ್ದಕ್ಕೆ ಉಚ್ಚನ್ಯಾಯಾಲಯ, ನೇಮಕಾತಿ ಶರತ್ತುಗಳನ್ನು ವಿಧಿಸಿದ ನಿಬಂಧಕರ ಆದೇಶವನ್ನು ಕಿತ್ತು ಹಾಕಿದರು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ನಿಬಂಧಕರಿಗೆ ಕಲಂ 55 ರನ್ನು (1994 ರ ತಿದ್ದುಪಡಿ)ಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಜನಾಂಗ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಬೇಕೆಂಬ ಶರತ್ತು ವಿಧಿಸಲು ಅಧಿಕಾರ ಇದೆ. ಆದರೆ ಅಂತಹ ಪ್ರಸಂಗದಲ್ಲಿ ಸರ್ಕಾರದ ಷೇರು ಹಣ ಶೇ.51% ಕ್ಕಿಂತ ಹೆಚ್ಚಿರುವಾಗ ಮಾತ್ರ ಇತರ ಸಭೆಗಳಿಗೆ ಈ ನಿಯಮಗಳು ಅನ್ವಯಿಸುವುದಿಲ್ಲ. (2007 Indlaw SC 138, (2007) 12 SCC 529, AIR 2007 SC (Supp) 540)

139. ಬಾಂಬೆ ಸಹಕಾರ ಕಾಯಿದೆ ಕಲಂ 30(2) ರಡಿ ಒಬ್ಬ ಸದಸ್ಯನ ಷೇರು ಹಣ ವರ್ಗಾಯಿಸಬೇಕಾದರೆ ಈಗಾಗಲೇ ಸದಸ್ಯರಾಗಿರುವ ಒಂದು ಸಹಕಾರ ಸಂಘ, ಸದಸ್ಯ ಅಥವಾ ಒಬ್ಬ ಸದಸ್ಯನ ಅರ್ಜಿಯನ್ನು ಮಂಡಳಿ ಒಪ್ಪಿ ಸದಸ್ಯತ್ವ ನೀಡಿದಾಗ ಅಥವಾ ಕಲಂ 31ರಡಿ ಸದಸ್ಯ ಮರಣ ಹೊಂದಿದ್ದಾಗ, ಅವನ ಕಾನೂನು ವಾರಸುದಾರರಿಗೆ, ಅವನು ಸದಸ್ಯತ್ವಕ್ಕೆ ಅರ್ಜಿ ಹಾಕಿ,

ಸದಸ್ಯನಾದ ನಂತರ ವರ್ಗಾವಣೆ ಮಾಡತಕ್ಕದ್ದು. ಈ ಷೇರು ಹಣವನ್ನು ಯಾವುದೇ ನ್ಯಾಯಾಲಯದ ಆದೇಶದಿಂದ ಜಪ್ತಿ ಮಾಡತಕ್ಕದ್ದಲ್ಲ. (2007 Indlaw SC 6, (2007) 2 SCC 301, AIR 2007 SC 671)

140. ಪಂಜಾಬ್ ಸಹಕಾರ ಕಾಯಿದೆಯಡಿ ಒಂದು ಸಕ್ಕರೆ ಕಾರ್ಖಾನೆ, ಕಬ್ಬು ನುರಿಸುವ ಸಮಯದಲ್ಲಿ ದಿನಗೂಲಿ ಆಧಾರದ ಮೇಲೆ ನಿಯಮಿತ ಅವಧಿಗೆ ನೇಮಕ ಮಾಡುತ್ತಾರೆ ಒಬ್ಬ ನೌಕರರನ್ನು ಹಂಗಾಮು ಪ್ರಾರಂಭವಾದರೂ, ತನಗಿಂತ ಕಿರಿಯರನ್ನು ತೆಗೆದುಕೊಂಡಿದ್ದಾರೆಂದು ಪ್ರಶ್ನಿಸಿದಾಗ, ಕಾರ್ಮಿಕ ನ್ಯಾಯಾಲಯ, ಯಾವ ಅವಧಿಯಲ್ಲಿ, ಆ ನೌಕರನಿಗಿಂತ ಕಿರಿಯರನ್ನು ತೆಗೆದುಕೊಂಡ ಅವಧಿಗೆ, ಈ ಅರ್ಜಿದಾರರನ್ನು ಹಿಂದಿನ ಸಂಬಳ ಜೊತೆ ನೇಮಕ ಮಾಡಲು ಆದೇಶಿಸಿದರು. ಇದನ್ನು ರಿಟ್ ಮೂಲಕ ಪ್ರಶ್ನಿಸಿದಾಗ, ಈ ಅರ್ಜಿದಾರನ ಮೇಲೆ ವಿತರಣೆ ನಡೆಯುತ್ತಿರುವುದರಿಂದ, ಇವನಿಗಿಂತ ಕಿರಿಯರನ್ನು ನೇಮಿಸಲಾಗಿದೆ ಎಂಬುದನ್ನು ನೇಮಿಸಿಲ್ಲವೆಂದು ತೀರ್ಮಾನಿಸಿತು. ಈ ತೀರ್ಮಾನಿಸಲು (1995) 5 SCC 653/1995 Indlaw SC 1180/(2006) 2 SCC 794/2006 Indlaw SC 329/(2006) 6 SCC 516/2006 Indlaw SC 410/2006 Indlaw SC 713 ನ್ನು ಪರಿಶೀಲಿಸಿ ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿ, ಉಚ್ಚ ನ್ಯಾಯಾಲಯದ ತೀರ್ಮಾನಕ್ಕೆ ಮಧ್ಯಪ್ರವೇಶ ಮಾಡುವ ಅವಶ್ಯಕತೆ ಇಲ್ಲ ಎಂದು ತೀರ್ಮಾನಿಸಿತು. (2006 Indlaw SC 842, (2006) 13 SCC 28, AIR 2007 SC 288)

141. ಹರ್ಯಾನ ಸಹಕಾರ ಕಾಯಿದೆಯಡಿ ಒಂದು ಸಕ್ಕರೆ ಕಾರ್ಖಾನೆಯ ಲೆಕ್ಕಾಧಿಕಾರಿ, ಲೆಕ್ಕ ಪತ್ರಗಳ ನಿರ್ವಹಣೆಯಿಂದ ಆದ ನ್ಯೂನತೆಗಳಿಂದ, ಹಣದ ಅವ್ಯವಹಾರ ಆದ ಬಗ್ಗೆ ವಿಚಾರಣೆ ನಡೆಸಲು, ಎರಡು ಆರೋಪಪಟ್ಟಿ ತಯಾರಿಸಿ, ವಿಚಾರಣಾಧಿಕಾರಿ ವರದಿಯನ್ನು ಆಧರಿಸಿ, ವಜಾ ಮಾಡಿದಾಗ, ನಿಬಂಧಕರ ಮುಂದೆ ಪ್ರಶ್ನಿಸಿದರು. ನಿಬಂಧಕರು ಅರ್ಜಿಯನ್ನು ವಜಾ ಮಾಡಿದರು, ಅದನ್ನು ಪ್ರಶ್ನಿಸಿ ರಾಜ್ಯ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿದಾಗ, ಮರು ನೇಮಕಾತಿಗೆ ಆದೇಶಿಸಿತು. ಇದನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯಕ್ಕೆ ರಿಟ್ ಅರ್ಜಿಸಲ್ಲಿಸಿದಾಗ, ಅದನ್ನು ವಜಾ ಮಾಡಿತು. ಈ ವಿಷಯವನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿತು. ಇದನ್ನು ಪರಿಶೀಲಿಸಲು ಹಲವಾರು ಹಿಂದಿನ ತೀರ್ಪುಗಳನ್ನು ಪರಿಶೀಲಿಸಿ, ರಾಜ್ಯ ಸರ್ಕಾರಕ್ಕೆ ಮೇಲ್ಮನವಿ ಸ್ವೀಕರಿಸಲು ಅಧಿಕಾರವಿಲ್ಲ ಎಂಬ ಅಂಶವನ್ನು ಪರಿಶೀಲಿಸಿದೆ, ಸರ್ಕಾರದ ಆದೇಶವನ್ನು ಎತ್ತಿ ಹಿಡಿಯುತ್ತಿರುವುದು ತಪ್ಪು ಎಂದು ತೀರ್ಮಾನಿಸಿ, ಕಾಯಿದೆಯಡಿ ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲವೆಂದು ತೀರ್ಮಾನಿಸಿತು. (2006 Indlaw SC 1405, (2006) 12 SCC 404, AIR 2007 SC 340)

142. ಕರ್ನಾಟಕ ಸಹಕಾರ ಕಾಯಿದೆಯಲ್ಲಿ ನೋಂದಣಿಯಾದ ಒಂದು ಸಹಕಾರ ಸಕ್ಕರೆ ಕಾರ್ಖಾನೆ, ನೌಕರ ಜೊತೆ ಮಾಡಿಕೊಂಡ ಒಪ್ಪಂದವನ್ನು ಜಾರಿ ಮಾಡಲು ನಿರಾಕರಿಸಿದ್ದನ್ನು ಪ್ರಶ್ನಿಸಿ, ರಿಟ್ ಅರ್ಜಿ ದಾಖಲಿಸಿದಾಗ, ಉಚ್ಚನ್ಯಾಯಾಲಯ ರಿಟ್ ಊರ್ಜಿತವಲ್ಲವೆಂದು (2003) 8 SCC 639/2003 Indlaw SC 834/(2003) 10 SCC 733/2003 Indlaw SC 806/(2004) 5 SC 15/(2002) 5 SCC 111/2002Indlaw SC 322 ಆಧರಿಸಿ, ಊರ್ಜಿತವಲ್ಲವೆಂದು ತೀರ್ಪಿಕ್ಕಿತು. ಈ ಸಂದರ್ಭದಲ್ಲಿ ನೌಕರರನ್ನು ಈಗಾಗಲೇ ಕೆಲಸಕ್ಕೆ ಮರು ನೇಮಕ ಮಾಡಿರುವುದನ್ನು ಗಮನಕ್ಕೆ ತಂದ, ಜಾರಿ ಮಾಡಿರುವುದರಿಂದ ನ್ಯಾಯಾಲಯನಿಂದನೆ ಪ್ರಕರಣವನ್ನು ಕೈಬಿಡಲು ಸೂಚಿಸಿ ವಜಾ ಮಾಡಿತು ಮತ್ತು ಈ ಕಾರಣದಿಂದ ಈ ಪ್ರಕರಣವನ್ನು ಕೈಬಿಡಲು ತೀರ್ಮಾನಿಸಿ ಮತ್ತು ವಜಾ ಮಾಡಿತು. (2006 Indlaw SC 876, (2006) SCC 552)

143. ಒಂದು ವಾಣಿಜ್ಯ ಬ್ಯಾಂಕ್‌ನ್ನು ಕೇಂದ್ರ ಸರ್ಕಾರ, ವ್ಯವಹಾರ ನಿಯಂತ್ರಿಸಿ ಆದೇಶ ಹೊರಡಿಸಿತು.

ಅದರಂತೆ ಆ ಬ್ಯಾಂಕ್ ತನ್ನ ವ್ಯವಹಾರ ನಡೆಸುವಾಗ ಕೆಲವು ನಿಯಂತ್ರಣಗಳನ್ನು ವಿಧಿಸಿತು. ಇದನ್ನು ಪ್ರಶ್ನಿಸಿ ರಿಟ್ ಅರ್ಜಿ ದಾಖಲಿಸುವಾಗ, ಈ ಬ್ಯಾಂಕನ್ನು ಮತ್ತೊಂದು ಬ್ಯಾಂಕ್‌ನೊಂದಿಗೆ ವಿಲೀನಗೊಳಿಸಲು ಪ್ರಸ್ತಾವನೆ ಪರಿಶೀಲಿಸುವಾಗ ಫೆಡರಲ್ ಬ್ಯಾಂಕ್ ತನ್ನ ಪ್ರಸ್ತಾವನೆ ಸಲ್ಲಿಸಿತು. ಅದರ ಜೊತೆಗೆ ಸಿಟಿ ಬ್ಯಾಂಕ್ ಮತ್ತು ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಪ್ರಸ್ತಾವನೆ ಶರತ್ತು ಭದ್ದವಾಗಿದ್ದು, ಫೆಡರಲ್ ಬ್ಯಾಂಕ್ ಪ್ರಸ್ತಾವನೆಯನ್ನು ಒಪ್ಪಿತು. ಈ ಸಂದರ್ಭದಲ್ಲಿ ಸಾರಸ್ವಿತ ಸಹಕಾರ ಬ್ಯಾಂಕ್ ಸಹ ಪ್ರಸ್ತಾವನೆ ಸಲ್ಲಿಸಿ, ವಿಲೀನಕ್ಕೆ ವಿನಂತಿಸಿತ್ತು ಆದರೆ ಭಾರತೀಯ ರಿಜರ್ವ್ ಬ್ಯಾಂಕ್, ಸಾರಸತ್ವ ಸಹಕಾರ ಬ್ಯಾಂಕ್ ಬಹು ರಾಜ್ಯ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಲಾಗಿದ್ದು, ಕಾನೂನು ಸಲಹೆಯಂತೆ ಒಂದು ವಾಣಿಜ್ಯ ಬ್ಯಾಂಕ್‌ನನ್ನು ಸಹಕಾರ ಬ್ಯಾಂಕ್ ಜೋತೆ ವಿಲೀನಗೊಳಿಸಲು ಬ್ಯಾಂಕಿಂಗ್ ಕಾಯಿದೆ ಕಲಂ 45(4) ರಿಂದ 45(15) ರಲ್ಲಿನ ಅವಕಾಶದಂತೆ, ಸಹಕಾರ ಬ್ಯಾಂಕ್ "ಬ್ಯಾಂಕಿಂಗ್ ಕಂಪನಿ" ಎಂದು ಮತ್ತು ಬಹು ರಾಜ್ಯ ಕಾಯಿದೆ ಕಲಂ 17 ಮತ್ತು 18 ಹಾಗೂ ಕಲಂ 56 (ಝಡ್‌ಬಿ) ಅನ್ವಯ ಸಾಧ್ಯವಿಲ್ಲವೆಂದು ತೀರ್ಮಾನಿಸಿತು. (2006 Indlaw SC 1267, (2006) 10 SCC 645)

144. ಪಂಜಾಬ್ ಸಹಕಾರ ಕಾಯಿದೆಯಡಿ ಒಂದು ಸಕ್ಕರೆ ಕಾರ್ಖಾನೆ ನೌಕರರು ತುಟ್ಟಿಭತ್ಯ ಮತ್ತು ನಿಗದಿತ ಭತ್ಯಗಳ ಬಗ್ಗೆ ಪ್ರಕರಣ ದಾಖಲಿಸಿತು. ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಈ ವಿಷಯ ಸಂಘದ ವ್ಯವಹಾರಕ್ಕೆ ಸಂಬಂಧಪಟ್ಟ ವಿಷಯವಲ್ಲವೆಂದು ತೀರ್ಮಾನಿಸಿತು. ಇದನ್ನು ಮೇಲ್ಮನವಿ ಪ್ರಾಧಿಕಾರ ತಿರಸ್ಕರಿಸಿದ ಮೇಲೆ, ಈ ಪ್ರಕರಣ ದಾಖಲಾಗಿದೆ (ಎರಡನೇ ಮೇಲ್ಮನವಿ). ಉಚ್ಚನ್ಯಾಯಾಲಯ ಸಿವಿಲ್ ನ್ಯಾಯಾಲಯದ ಆದೇಶವನ್ನು ದೃಡೀಕರಿಸಿತು. ಇದನ್ನು ಪ್ರಶ್ನಿಸಿದಾಗ ಶ್ರೇಷ್ಠ ನ್ಯಾಯಾಲಯ, ಸಹಕಾರ ಸಂಘದ ಅಥವಾ ಅದರ ಅಧಿಕಾರಿಗಳನ್ನು ನ್ಯಾಯಾಲಯದ ಕಟುಕಟೆಯಲ್ಲಿ ಸಿವಿಲ್ ನ್ಯಾಯಾಲಯದ ಮುಂದೆ ತರಬಾರದು ಎಂದಿದ್ದರೂ, ಈ ಪ್ರಕರಣದಲ್ಲಿ ನಿಬಂಧಕರಿಗೆ ನೋಟೀಸ್ ಜಾರಿ ಮಾಡಿರುವುದನ್ನು ಪರಿಗಣಿಸಿ, ಉಚ್ಚನ್ಯಾಯಾಲಯದ ತೀರ್ಪಿನ ಮಧ್ಯಪ್ರವೇಶ ಅನವಶ್ಯಕ ಮತ್ತು ಉಚ್ಚನ್ಯಾಯಾಲಯದ ತೀರ್ಮಾನವನ್ನು ಎತ್ತಿಹಿಡಿಯಿತು. (2006 Indlaw SC 319, (2006) 6 SCC 80)

145. ಆಂದ್ರಪ್ರದೇಶ ಸಹಕಾರ ಕಾಯಿದೆಯಡಿ ಒಂದು ಗೃಹ ನಿರ್ಮಾಣ ಸಹಕಾರ ಸಂಘ ಒಬ್ಬ ಸದಸ್ಯನಿಂದ ಹಣ ಪಡೆದು, ದಾವಾ ದಾಖಲಿಸಲು ಮತ್ತು ಡಿಕ್ರಿ ಪಡೆದ ನಂತರ, ಅದನ್ನು ಜಾರಿ ಮಾಡಲು ಸಾಧ್ಯವಿಲ್ಲವೆಂದು ತಿಳಿದಿದ್ದರೂ, ಅವನನ್ನು ಪ್ರಚೋದಿಸಿ, ವಿವಿದ ನ್ಯಾಯಾಲಯಗಳಲ್ಲಿ ಪ್ರಶ್ನಿಸಲು ಮತ್ತು ಶ್ರೇಷ್ಠ ನ್ಯಾಯಾಲಯದ ಮುಂದೆ, ಸತ್ಯವಲ್ಲದ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ತಪ್ಪು ಮಾಡಲು ಪ್ರಯತ್ನಿಸುತ್ತಿರುವುದನ್ನು ಗಮನಿಸಿ, ಆ ಸಂಘದ ಆಡಳಿತ ಮಂಡಳಿ ಅಥವಾ ಆಡಳಿತಾಧಿಕಾರಿ ಮೇಲೆ ಶಿಸ್ತು ಕ್ರಮ ಜರುಗಿಸಲು ನಿರ್ದೇಶನ ನೀಡುವುದರ ಜೊತೆಗೆ, ಸಂಘವು ಅರ್ಜಿದಾರನಿಗೆ ರೂ.1,00,000/- ವನ್ನು ಪರಿಹಾರ ರೂಪದಲ್ಲಿ ಪಾವತಿಸಲು ಮತ್ತು ಅವರಿಂದ ಸ್ವೀಕರಿಸಿದ್ದ ಹಣಕ್ಕೆ ಶೇ.24% ರ ಬಡ್ಡಿ ಜೊತೆ ಮರು ಪಾವತಿ ಮಾಡಲು ಮತ್ತು ಪ್ರಕರಣದ ಎರಡನೇ ಎದುರು ದಾರರಿಗೆ ರೂ.1,00,000.00 ಪರಿಹಾರ ನೀಡಲು ಆದೇಶಿಸಿತು. (2006 Indlaw SC 650, (2006) 10 SCC 96)

146. ಮಹಾರಾಷ್ಟ್ರ ಕಾಯಿದೆಯಡಿ ನೋಂದಾಯಿಸಿದ ಒಂದು ಸಹಕಾರ ಸಂಘದ ಚುನಾವಣೆಗೆ ಸಂಬಂಧಪಟ್ಟ ಪ್ರಕರಣದಲ್ಲಿ ಒಂದು ಪ್ರಾಥಮಿಕ ಸಂಘದ ಹೆಸರನ್ನು ಕರಡು ಮತದಾರರ ಪಟ್ಟಿಯಲ್ಲಿ ಸೇರಿಸಲಿಲ್ಲ – ಜಿಲ್ಲಾ ಕಲೆಕ್ಟರ್, ಹೆಸರು ಇಲ್ಲದ್ದರಿಂದ ಮತದಾನದ ಹಕ್ಕು ಇಲ್ಲ ಎಂದು ತೀರ್ಮಾನಿಸಿದರು. ರಿಟ್ ಅರ್ಜಿ ದಾಖಲಿಸಿದಾಗ, ಅದನ್ನು ಕಲಂ 27 (3) ರನ್ನು ರಿಟ್

ಅರ್ಜಿಯನ್ನು ವಜಾ ಮಾಡಿತು. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ನಿಯಮ 4 ರನ್ವಯ (1971) ಕರಡು ಮತದಾರರ ಪಟ್ಟಿ ತಯಾರಿಸಿದಾಗ, ಎರಡು ವರ್ಷ ಸದಸ್ಯತ್ವ ಹೊಂದಿರುವ ಸಂಘದ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಬೇಕೆಂದಿರುವುದರಿಂದ, ಮತ್ತು ಪಾಲು ಬಂಡವಾಳದಲ್ಲಿ ಭಾಗಿಯಾಗಿರುವುದರಿಂದ, ಕರಡು ಮತದಾರರ ಪಟ್ಟಿಯಲ್ಲಿ ಅವರ ಹೆಸರು ಸೇರಿಸಬೇಕು ಮತ್ತು ಅವರಿಗೆ ಮತದಾನದ ಹಕ್ಕು ಇದೆ ಎಂದು ತೀರ್ಮಾನಿಸಿತು. ಮೇಲ್ಮನವಿಯನ್ನು ಪುರಸ್ಕರಿಸಲಾಯಿತು. (2006 Indlaw SC 1406, (2006) 5 SCC 250, AIR 2007 SC 347)

147. ಹಿಮಾಚಲ ಪ್ರದೇಶ ಸಹಕಾರ ಕಾಯಿದೆಯಡಿ ಒಂದು ಸಹಕಾರ ಸಂಘ ಸಂವಿಧಾನದ ಅನುಚ್ಛೇದ 12 ರನ್ವಯ "ರಾಜ್ಯ" ಎಂದು ಪರಿಗಣಿಸಬಹುದೇ ಎಂಬುದಕ್ಕೆ ರಾಜ್ಯ ಎಂದು ಪರಿಗಣಿಸಲಾಗದು ಎಂದು ತೀರ್ಮಾನಿಸಿತು. ಇದಕ್ಕೆ ಪೂರಕವಾಗಿ 1980 Indlaw SC 244/(1981) 1 SCC 722 ರನ್ವಯ ಸಹಕಾರ ಸಂಘವನ್ನು "ರಾಜ್ಯ" ಎಂದು ಪರಿಗಣಿಸಬೇಕಾದರೆ ಆರು ಸೂತ್ರಗಳನ್ನು ಪರಿಗಣಿಸಬೇಕು.

1. ಸಂಪೂರ್ಣ ಸರ್ಕಾರದ ಪಾಲು ಬಂಡವಾಳ ಹೂಡಿದ್ದಾರೆ.
2. ಹಣ ಸಹಾಯ ಒಂದು ಸಂಪೂರ್ಣ ವೆಚ್ಚವನ್ನು ಭರಿಸಲು ಸಾಧ್ಯವಾದಾಗ
3. ಆ ಸಂಸ್ಥೆ ಸರ್ಕಾರದ ಸಂಪೂರ್ಣ ಸಾರ್ವಭೌಮತ್ವ ಹೊಂದಿದ್ದರೆ.
4. ಸರ್ಕಾರದ ನಿಯಂತ್ರಣದಲ್ಲಿ ಕೆಲಸ ನಿರ್ವಹಿಸುತ್ತಿದ್ದರೆ.
5. ಸರ್ಕಾರ ಮಾಡುವ ಕೆಲಸವನ್ನು ಅಥವಾ ಅದಕ್ಕೆ ಸಮಾನವಾದ ಕೆಲಸ ನಿರ್ವಹಿಸುತ್ತಿದ್ದರೆ.
6. ಒಂದು ಸರ್ಕಾರದ ನೀತಿಯನ್ನು, ಅದರ ಕಾರ್ಯದ ಜೊತೆ ವರ್ಗಾಯಿಸಿದಾಗ.

ಈ ಮೇಲ್ಕಂಡ ಸೂತ್ರಗಳಲ್ಲಿ ಸಹಕಾರ ಸಂಘ ಬರದೇ ಇರುವುದರಿಂದ ಇದನ್ನು "ರಾಜ್ಯ" ಎಂದು ಪರಿಗಣಿಸಲಾಗದು. (2006 Indlaw SC 174)

148. ಹರಿಯಾಣ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಒಂದು ಸಹಕಾರ ಸಂಘಕ್ಕೆ ಸರ್ಕಾರದ ಒಬ್ಬ ಅಧಿಕಾರಿಯನ್ನು ವ್ಯವಸ್ಥಾಪಕ ನಿರ್ದೇಶಕರೆಂದು ನೇಮಿಸಿದಾಗ, ಅಂತಹ ವ್ಯಕ್ತಿಯ ಮೇಲೆ ಕ್ರಿಮಿನಲ್ ಪ್ರಕರಣ ಸಿಆರ್‌ಪಿಸಿ ಕಲಂ 197 ರಲ್ಲಿ ವಿನಾಯ್ತಿ ಪಡೆಯುತ್ತಾನೆಯೇ? ಹರಿಯಾಣ ಕಾಯಿದೆ ಕಲಂ 118 ರಲ್ಲಿ ನಿಬಂಧಕರ ಒಪ್ಪಿಗೆ ಇಲ್ಲದೆ ಕ್ರಿಮಿನಲ್ ಪ್ರಕರಣ ದಾಖಲಿಸತಕ್ಕದ್ದಲ್ಲವೆಂದು ಮತ್ತು ಕಲಂ 123 ರನ್ವಯ ಸಾರ್ವಜನಿಕ ನೇಮಕ ಎಂಬ ಅರ್ಥದಲ್ಲಿ ಸಮಾಪನಾಕಾರಿ, ಮಧ್ಯಸ್ತಿಗಾರ ಅಥವಾ ವಸೂಲಾಧಿಕಾರಿ ಬರುತ್ತಾರೆ. ಆದರೆ ಕಾನೂನಿನಲ್ಲಿ ಯಾವ ವ್ಯಕ್ತಿ "ಸಾರ್ವಜನಿಕ ಸೌವಕ" ಎಂಬುದನ್ನು ಸ್ಪಷ್ಟವಾಗಿ ನಮೂದಿಸಿರಬೇಕು. ಆದ್ದರಿಂದ ಸಿಆರ್‌ಪಿಸಿ ಕಲಂ 197 ರನ್ವಯ ವಿನಾಯ್ತಿಸಿಗುವುದಿಲ್ಲ. (2005 Indlaw SC 604, (2005) 13 SCC 213)

149. ಉತ್ತರ ಪ್ರದೇಶ ಕಾಯಿದೆಯಡಿ ಒಂದು ಸಹಕಾರ ಪ್ರಾಧಿಕಾರ ಒಬ್ಬ ನೌಕರನನ್ನು, ಅಮಾನತ್ತಿನಲ್ಲಿಟ್ಟು, ವಿಚಾರಣೆ ಮಾಡಿ ಬಿಡುಗಡೆ ಮಾಡಲು ತೀರ್ಮಾನಿಸಿದ್ದನ್ನು ಪ್ರಶ್ನಿಸಿ, ರಿಟ್ ಅರ್ಜಿ ದಾಖಲಿಸಿದಾಗ, ಅದನ್ನು ವಿಚಾರಣೆ ಮಾಡಿದ ಏಕ ಸದಸ್ಯ ಪೀಠ ಪರಿಗಣಿಸಿದ ಅಂಶ, ಅರ್ಜಿಯಲ್ಲಿ ಸಾಕಷ್ಟು ಅವಕಾಶ ನೀಡಿಲ್ಲವೆಂದು, ಅದಕ್ಕೆ ನೋಟೀಸ್ ಜಾರಿಯಾಗಿದ್ದು ದೈನಿಕ ಜಾಗರಣ ಪತ್ರಿಕೆಯಲ್ಲಿ ಪ್ರಕಟಿಸಿದ್ದ ಮತ್ತು ಅರ್ಜಿದಾರ, ಮೂರು ಆಂತರಿಕ ಅರ್ಜಿಗಳನ್ನು ಸಲ್ಲಿಸಿದ್ದು, ಅವಕಾಶ ನೀಡಲಾಗಿದೆ ಎಂದು ವಜಾ ಮಾಡಿದರು. ಅದನ್ನು ಪ್ರಶ್ನಿಸಿ, ವಿಭಾಗೀಯ ಪೀಠ, ಬಿಡುಗಡೆ ಮಾಡುವ ಪೂರ್ವದಲ್ಲಿ ನೀಡಿದ ನೋಟೀಸ್ ಉತ್ತರ ನೀಡದೇ ಇದ್ದರೂ ಮತ್ತು ಆದೇಶದಲ್ಲಿ ಕಲಂ 68 ಎಂದು ತಪ್ಪಾಗಿ ನಮೂದಿಸಿದ್ದು, ಏಕ ಸದಸ್ಯ ಪೀಠದ ಆದೇಶ ಅನೂರ್ಜಿತಗೊಳಿಸಿತು. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಏಕ ಸದಸ್ಯ ಪೀಠದ ಆದೇಶವನ್ನು ಎತ್ತಿ ಹಿಡಿದು,

ವಿಭಾಗೀಯ ಪೀಠದ ಆದೇಶ ರದ್ದು ಪಡಿಸಿತು. (2005 Indlaw SC 1334, (2005) 11 SCC 570)

150. ರಾಜಾಸ್ತಾನ್ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಒಂದು ಸಹಕಾರ ಸಂಘ, ಒಬ್ಬ ನೌಕರನನ್ನು 56 ವರ್ಷಗಳು ತುಂಬಿದ್ದು 27 ವರ್ಷಗಳ ಸೇವೆ ಸಲ್ಲಿಸಿದ್ದು, ಆ ಅವಧಿಯಲ್ಲಿ ಅವನು ಸಮರ್ಪಕ ಸೇವೆ ಸಲ್ಲಿಸಿಲ್ಲವೆಂದು ಶಾಶ್ವತ ನಿವೃತ್ತಿ ನೀಡಿತು. ಇದನ್ನು ಪ್ರಶ್ನಿಸಿ ಅಪರ ನಿಬಂಧಕರ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಅದರಲ್ಲಿ ಶಾಶ್ವತ ನಿವೃತ್ತಿಗೆ ನಿಬಂಧಕರ ಪೂರ್ವಾನುಮತಿ ಅವಶ್ಯಕವೆಂದು ಕಲಂ 128 ರಲ್ಲಿರುವುದನ್ನು ಉಲ್ಲೇಖಿಸಿ, ಮೇಲ್ಮನವಿ ಪುರಸ್ಕರಿಸಿದರು. ಅದಕ್ಕೆ ವಿರುದ್ಧವಾಗಿ ಸರ್ಕಾರಕ್ಕೆ ಪುನರ್ ವಿಮರ್ಷೆ ಅರ್ಜಿ ದಾಖಲಿಸಲಾಗಿದ್ದು ಆ ಬಗ್ಗೆ ರಿಟ್ ಅರ್ಜಿಯನ್ನು ದಾಖಲಿಸಿದ್ದು, ಕಲಂ 128 ರಲ್ಲಿ ಅಪರ ನಿಬಂಧಕರು ಅಧಿಕಾರ ಚಲಾಯಿಸಿದ ಮೇಲೆ, ಸರ್ಕಾರಕ್ಕೆ ಎರಡನೇ ವಿಮರ್ಷೆ ಅರ್ಜಿ ಊರ್ಜಿತವಲ್ಲ ಎಂಬ ಅಂಶವನ್ನು ವಿಭಾಗೀಯ ಪೀಠ, ಪುನರ್ ವಿಮರ್ಷೆ ಅರ್ಜಿಗೆ ಸಲ್ಲಿಸಲು ಎರಡೂ ಪ್ರಾಧಿಕಾರಗಳಿವೆ ಎಂದು, ಅಂದರೆ ಸರ್ಕಾರ ಮತ್ತು ನಿಬಂಧಕರು ಇದಕ್ಕೆ ಪೂರಕವಾಗಿ 25 QBD 391/25 QBD 304/1962 Indlaw SC 274/1958 LGR 165/1998 (7) SCC 162/1998 Indlaw SC 1176/(2003) 2 SCC 101/2002 Indlaw SC 2010/1998 Indlaw SC 1176 ನ ತೀರ್ಪುಗಳನ್ನು ಉಲ್ಲೇಖಿಸಿ, ಶ್ರೇಷ್ಠ ನ್ಯಾಯಾಲಯ, ಕಲಂ 124 ರನ್ವಯ ನಿಬಂಧಕರ ಆದೇಶಕ್ಕೆ ಸರ್ಕಾರ ಮೇಲ್ಮನವಿ ಪ್ರಾಧಿಕಾರ ಮತ್ತು ನಿಬಂಧಕರ ಅಧೀನ ಅಧಿಕಾರಿ ಮಾಡಿದ ಆದೇಶಕ್ಕೆ ನಿಬಂಧಕರು ಮೇಲ್ಮನವಿ ಪ್ರಾಧಿಕಾರ. ಆದರೆ ಅಧ್ಯಯ XIII ರನ್ವಯ ಎರಡು ಪ್ರಾಧಿಕಾರಗಳೂ ಮೇಲ್ಮನವಿ ಪ್ರಾಧಿಕಾರಗಳಾಗುತ್ತವೆ. ಆದ್ದರಿಂದ ಏಕ ಸದಸ್ಯ ಪೀಠದ ಆದೇಶದಲ್ಲಿ ಯಾವುದೇ ನ್ಯೂನತೆ ಇಲ್ಲವೆಂದು, ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (2005 Indlaw SC 6, (2005) SCC (L and S) 260, (2005) 2 SCC 334, AIR 2005 SC 773)

151. ಬಹುರಾಜ್ಯ ಕಾಯಿದೆ ಕಲಂ 75(3) ರನ್ವಯ ದಾವಾ ಪ್ರಕರಣ ದಾಖಲಿಸಿದಾಗ ವಿಳಂಬ ವಿನಾಯ್ತಿ ಬಗ್ಗೆ ನಿಬಂಧಕರಿಗೆ ಅರ್ಜಿ ಸಲ್ಲಿಸಿರಲಿ ಅಥವಾ ಸಲ್ಲಿಸದೇ ಇರಲಿ, ಸ್ವಯಂ ನಂಬಿಕೆ ಬಂದರೆ ವಿಳಂಬ ವಿನಾಯ್ತಿ ನೀಡಲು ಅಧಿಕಾರ ನಿಬಂಧಕರಿಗೆ ಇದೆ. (2004 Indlaw SC 858, (2004) 8 SCC 312)

152. ದೆಲ್ಲಿ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ ಸಂಘ ತನ್ನ ಮೂವರು ಸದಸ್ಯರಿಗೆ ಸುಸ್ತಿದಾರರೆಂದು ನೋಟೀಸ್ ನೀಡಿದಾಗ, ಸುಸ್ತಿದಾರರಲ್ಲವೆಂದು ಉಚ್ಚನ್ಯಾಯಾಲಯ ತೀರ್ಮಾನಿಸತಕ್ಕದ್ದಲ್ಲ. ಏಕೆಂದರೆ ಎದುರು ಅರ್ಜಿದಾರರಾದ ಮೂವರು, ನಿಬಂಧಕರ ಮುಂದೆ ಪರಿಹಾರ ಕೇಳಿ ದಾವಾ ದಾಖಲಿಸಿರುವುದರಿಂದ, ಮತ್ತು ಅದು ಶಾಸನ ಭದ್ದ ಪ್ರಾಧಿಕಾರವಾಗಿರುವುದರಿಂದ ಅದರ ತೀರ್ಮಾನದಲ್ಲಿ ಪರಿಹಾರ ಪಡೆಯಬೇಕು, ರಿಟ್ ಮೂಲಕ ಅಲ್ಲ ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (2004 Indlaw SC 272, (2004) 5 SCC 795, AIR 2004 SC 2521)

153. ವೆಸ್ಟ್‌ಬೆಂಗಾಳ ಕಾಯಿದೆಯಡಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಒಂದು ಬಹು ಮಹಡಿ ಕಟ್ಟದಲ್ಲಿ ನಿವಾಸ ಪಡೆದು, ನಾಮನಿರ್ದೇಶನ ಮಾಡದೆ ಮರಣ ಹೊಂದಿದಾಗ, ಅವನ ಕಾನೂನು ವಾರಸುದಾರರಿಗೆ ಇರುವ ಅಧಿಕಾರದ ಬಗ್ಗೆ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯ ಒಬ್ಬ ವಿಶೇಷಾಧಿಕಾರಿ ನೇಮಿಸಿದ್ದು, ಅವನು ಮೂರನೆ ವ್ಯಕ್ತಿಗೆ ಮನೆಯನ್ನು ವರ್ಗಾಯಿಸಿದ್ದು ತಪ್ಪು ಎಂದು ಮತ್ತು ನಾಮ ನಿರ್ದೇಶನ ಮಾಡದೇ ಮರಣ ಹೊಂದಿದಾಗ, ಅವನ ಆಸ್ತಿಯ ಹಕ್ಕು ಕಾನೂನು ವಾರಸುದಾರರಿಗೆ ಪ್ರಾಪ್ತಿಯಾಗುತ್ತದೆ ಎಂದು ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. (2004 Indlaw SC 344, (2004) 5 SCC 90, AIR 2004 SC 2271)

154. ಗುಜರಾತ್ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಒಂದು ಜಿಲ್ಲಾ ಸಹಕಾರ ಬ್ಯಾಂಕ್ ಕಾಯಿದೆ ಕಲಂ 71(1)(ಎ) ಯಿಂದ (ಎಫ್) ವರೆಗೆ ಬ್ಯಾಂಕಿನ ಸಂಪನ್ಮೂಲವನ್ನು ಮ್ಯೂಚುಯಲ್ ನಿಧಿಯಲ್ಲಿ ಹೂಡಲು ಅವಕಾಶವಿಲ್ಲದೇ ಇದ್ದರೂ, ಹೂಡಿದ್ದಕ್ಕೆ ವಿರುದ್ದವಾಗಿ ಕ್ರಮಕೈಗೊಳ್ಳದೆ ಇದ್ದಾಗ, ಉಚ್ಚನ್ಯಾಯಾಲಯ, ನಿಬಂಧಕರಿಗೆ ಬ್ಯಾಂಕಿನ ಮೇಲೆ ಕ್ರಮ ಜರುಗಿಸಲು ನಿರ್ದೇಶನ ನೀಡಿರುವುದರಲ್ಲಿ ಯಾವುದೇ ನ್ಯೂನತೆ ಇಲ್ಲ. ಅಂದರೆ ಕೇಂದ್ರ ಕಾಯಿದೆ ಮತ್ತು ರಾಜ್ಯ ಕಾಯಿದೆಯಲ್ಲಿ ಸೌಮ್ಯತೆ ಇಲ್ಲದೇ ಇದ್ದರೆ, ಯಾವ ಕಾಯಿದೆ ಸಿಂಧು ಎಂಬುದನ್ನು ಪರಿಶೀಲಿಸುವುದರ ಆಧಾರದ ಮೇಲೆ ಉಚ್ಚನ್ಯಾಯಾಲಯ ನಿಬಂಧಕರಿಗೆ ಬ್ಯಾಂಕಿನ ಮೇಲೆ ಕ್ರಮಕೈಗೊಳ್ಳಲು ಸೂಚಿಸಿದ್ದು ಸರಿ ಎಂದು ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. (2004 Indlaw SC 961, (2004) 2 SCC 463, AIR 2004 SC 1576)

155. ಹರ್ಯಾನ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ನೌಕರರಿಗೆ ಬೋನಸ್ ಪಾವತಿ ಬಗ್ಗೆ ಕೇಂದ್ರ ಭೂ ಬ್ಯಾಂಕಿನ ನೌಕರರಿಗೆ ಪಾವತಿ ಮಾಡುವ ದರದಲ್ಲಿಯೇ ಬೋನಸ್ ಪಾವತಿಸಲು ಕೇಳಿದಾಗ ಪ್ರಾಥಮಿಕ ಮತ್ತು ಕೇಂದ್ರ ಭೂ ಬ್ಯಾಂಕ್‌ಗಳ ಪ್ರತ್ಯೇಕ ಸಂಸ್ಥೆಗಳಾಗಿದ್ದು, ಅವುಗಳ ಆರ್ಥಿಕ ತಃಖ್ತೆಗಳು, ಲಾಭ/ನಷ್ಟ ಪ್ರತ್ಯೇಕವಾಗಿ ತಯಾರಿಸಿದ್ದು ಸೌಮ್ಯತೆ ಇರುವುದಿಲ್ಲ. ಬೋನಸ್ ಕಾಯಿದೆಯಲ್ಲಿ ಕನಿಷ್ಠ 8.33% ನಿಗದಿ ಪಡಿಸಿದ್ದು ಇದಕ್ಕಿಂತ ಹೆಚ್ಚಿಗೆ ಪಾವತಿಸಲು, ಲಾಭಾಂಶದ ಆಧಾರದ ಮೇಲೆ ನಿಗದಿ ಪಡಿಸಬೇಕು. ಪ್ರಾಥಮಿಕ ಭೂ ಬ್ಯಾಂಕ್‌ಗಳು ನಷ್ಟ ಅನುಭವಿಸುತ್ತಿದ್ದು, ಹೆಚ್ಚುವರಿ ಲಾಭಾಂಶ ಇಲ್ಲದೇ ಇರುವುದರಿಂದ, ಹೆಚ್ಚುವರಿ ಬೋನಸ್‌ಗೆ ಅವಕಾಶವಿಲ್ಲ. ಮೇಲ್ಮನವಿ ತಿರಸ್ಕರಿಸಲಾಯಿತು. (2003 Indlaw SC 1402, (2004) 1 SCC 574)

156. ಭಾರತೀಯ ರಿಜರ್ವ್ ಬ್ಯಾಂಕ್, ಒಂದು ಬ್ಯಾಂಕಿಗೆ ಲೆಸೆನ್ಸ್ ನೀಡುವಾಗ, ಕಲಂ 22 ರನ್ವಯ (ಆರ್‌ಬಿಐ ಕಾಯಿದೆ) ನ್ವಯ ಲೆಸೆನ್ಸ್ ನೀಡಬೇಕಾದರೆ, ಅದು ಒಂದು ರಾಜ್ಯ ಸರ್ಕಾರ ಬ್ಯಾಂಕ್, ಕೇಂದ್ರ ಸಹಕಾರ ಬ್ಯಾಂಕ್, ಪ್ರಾಥಮಿಕ ಸಹಕಾರ ಬ್ಯಾಂಕ್, ಆಗಿರಬೇಕು ಇದರ ಜೊತೆಗೆ ಸಹಕಾರ ರಾಜ್ಯ ವ್ಯಾಪ್ತಿಯಲ್ಲಿ ಬರುವುದರಿಂದ ರಾಜ್ಯ ಸರ್ಕಾರ ಕೇಂದ್ರ ಬ್ಯಾಂಕನ್ನು ಹೆಸರಿಸಬೇಕು. ನಬಾರ್ಡ್ ಕಾಯಿದೆಯಲ್ಲಿ, ಒಂದು ಬ್ಯಾಂಕನ್ನು ರಾಜ್ಯ ಸರ್ಕಾರ ರಾಜ್ಯ ಬ್ಯಾಂಕ್ ಎಂದು ಹೆಸರಿಸಬೇಕು. "ಬ್ಯಾಂಕ್" ಎಂದು ಲೆಸೆನ್ಸ್ ನೀಡ ಬೇಕಾದರೆ ಈ ನೀತಿ ಅನ್ವಯಿಸುತ್ತದೆ. ಇದಕ್ಕೆ ಪೂರಕವಾಗಿ (1970) SCC 248/1970 Indlaw SC 575/1957 Indlaw Mad 14 ಪರಿಶೀಲಿಸಿತು.

(2003 Indlaw SC 917, (2003) 11 SCC 66, AIR 2004 SC 141)

157. ಮಧ್ಯ ಪ್ರದೇಶ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಸಂಘ ನಾಗಪುರ (ಮಹಾರಾಷ್ಟ್ರ) ಹಾಲು ಯೋಜನಾಧಿಕಾರಿ ಜೊತೆ ಒಪ್ಪಂದ ಮಾಡಿಕೊಂಡಿದ್ದು – ವಿವಾದ ಏರ್ಪಟ್ಟಾಗ, ಮಧ್ಯಸ್ತಿಗಾರರಿಗೆ ವರ್ಗಾಯಿಸಲು ಒಪ್ಪಂದವಾಗಿದು, ಶರತ್ತು 19 ರನ್ವಯ ಆಯುಕ್ತರು ಹೈನುಗಾರಿಕೆಗೆ ವಹಿಸಿತು. ಇದನ್ನು ಪ್ರಶ್ನಿಸಿದಾಗ, ಜಿಲ್ಲಾ ನ್ಯಾಯಾದೀಶರು ಈ ಶರತ್ತು ತಪ್ಪು ಎಂದು ತೀರ್ಮಾನಿಸಿತು ಮತ್ತು ವಿವಾದ ತೀರ್ಮಾನಿಸಲು ಸೂಚಿಸಿದರು. ಇದನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಮಧ್ಯಪ್ರದೇಶ ಕಾಯಿದೆ, ಆ ರಾಜ್ಯ ವ್ಯಕ್ತಿಗೆ ಮಾತ್ರ ಸೀಮಿತ. ಜಿಲ್ಲಾ ನ್ಯಾಯಾಲಯದ ಆದೇಶವನ್ನು ಕಿತ್ತು ಹಾಕಿ, ಕಾಯಿದೆ ಕಲಂ 64 ಅನ್ವಯವಾಗದು ಎಂದು ತೀರ್ಪಿತ್ತಿತು. ಇದಕ್ಕೆ ಪೂರಕವಾಗಿ AIR (1988) Madras 167/1987 Indlaw Mad 106 ರಲ್ಲಿನ ತೀರ್ಮಾನವನ್ನು ಪರಿಶೀಲಿಸಿತು. ಕೇರಳ ಸಹಕಾರ ಕಾಯಿದೆಯಲ್ಲಿನ ಒಂದು ಸಂಘ ತಮಿಳುನಾಡುವಿನಲ್ಲಿ ಒಪ್ಪಂದ ಮಾಡಿಕೊಂಡಿರುವುದರಿಂದ, ತಮಿಳುನಾಡುವಿನಲ್ಲಿ ತೀರ್ಮಾನವಾಗಬೇಕು ಎಂಬುದನ್ನು ಎತ್ತಿ ಹಿಡಿಯಿತು. ಆದ್ದರಿಂದ ಮಧ್ಯಪ್ರದೇಶ ಸಹಕಾರ ಕಾಯಿದೆ ಕಲಂ 64ನ್ನು ಅನ್ವಯಿಸತಕ್ಕದ್ದಲ್ಲ. (2003

Indlaw SC 693, (2003) 7 SCC 529, AIR 2003 SC 3283)

158. ಪಂಜಾಬ್ ಸಹಕಾರಿ ಕಾಯಿದೆಯಡಿ ನೋಂದಾಯಿಸಿದ ಒಂದು ಜಿಲ್ಲಾ ಬ್ಯಾಂಕ್‌ನ ಕಾರಕೂನರು ಮತ್ತು ಬೆರಳಚ್ಚುಗಾರರ ನೇಮಕಾತಿ ಆದ ನ್ಯೂನತೆ ಸಂದರ್ಭದಲ್ಲಿ, ನಿಬಂಧಕರ ಲಿಖಿತ ನಿರ್ದೇಶನ ವಿದ್ದರೂ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿ ಪಟ್ಟಿ ಪ್ರಕರಣ ಹೊರಡಿಸದೇ ಇದ್ದಾಗ, ರಿಟ್‌ನಲ್ಲಿ ಪಲಿತಾಂಶ ಪ್ರಕಟಿಸುವಂತೆ ನಿರ್ದೇಶನ ನೀಡಿದ ಸಂದರ್ಭದಲ್ಲಿ, ತರಾತುರಿಯಲ್ಲಿ ಪ್ರಕಟಣೆ ಹೊರಡಿಸಿದ ನೇಮಕಾತಿ ಆದೇಶದವೇ ಶ್ರೇಷ್ಠ ನ್ಯಾಯಾಲಯುದಲ್ಲಿ ಪ್ರಶ್ನಿಸಿದರು, ಉಚ್ಚನ್ಯಾಯಾಲಯದ ವಿಭಾಗೀಯ ಪೀಠದ ಆದೇಶವನ್ನು ಕಿತ್ತು ಹಾಕಿ, ನೇಮಕಾತಿ ಪಟ್ಟಿಯನ್ನು ರದ್ದುಗೊಳಿಸಿ, ಹೊಸದಾಗಿ ಪ್ರಕಟಣೆ ಹೊರಡಿಸಿ, ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ನಿರ್ದೇಶನ ನೀಡಿದ್ದರ ಜೊತೆಗೆ,

1. ಈಗಾಗಲೆ ಅರ್ಜಿ ಹಾಕಿರುವ ವ್ಯಕ್ತಿಗಳಿಗೆ ಮತ್ತು ಅರ್ಜಿಯಲ್ಲಿ ಕೇಳದೆ, ವಯಸ್ಸಿನ ಮಿತಿ ವಿನಾಯ್ತಿ ನೀಡಿ ಲಿಖಿತ/ಮೌಖಿಕ ಪರೀಕ್ಷೆ ನಡೆಸಿ ಆಯ್ಕೆ ಮಾಡತಕ್ಕದ್ದು.
2. ಈಗಾಗಲೇ ಆಯ್ಕೆ ಪಟ್ಟಿ ಪ್ರಕಟಿಸಿದ ಅಭ್ಯರ್ತ್ರಿಗಳ ಪಟ್ಟಿ ಅನೂರ್ಜಿತಗೊಳಿಸಿ, ಅವರಿಗೆ ಯಾವುದೇ ಕಾನೂನಿನಡಿ ಪರಿಹಾರ ನೀಡಲಾಗದು ಎಂದು ತೀರ್ಮಾನಿಸಿತು.

(2003 Indlaw SC 647, (2003) 10 SCC 136, AIR 2003 SC 3103)

159. ಆಂದ್ರಪ್ರದೇಶ ಕಾಯಿದೆಯಡಿ ನೋಂದಾಯಿಸಿದ ಒಂದು ಸಹಕಾರ ಪಟ್ಟಣ ಬ್ಯಾಂಕಿನ ಪ್ರಕರಣದಲ್ಲಿ ಸಾಲ ಪಡೆದ ವ್ಯಕ್ತಿ, ಸಾಲ ಮರು ಪಾವತಿ ಮಾಡದೇ ಇದ್ದಾಗ, ನಿಬಂಧಕರ ಮುಂದೆ ಅರ್ಜಿ ದಾಖಲಿಸಿ, ಕಕ್ಷಿದಾರರ ಸೇರ್ಪಡೆ ಅರ್ಜಿ ಬಗ್ಗೆ ವಿಚಾರಣಾ ಸಂದರ್ಭದಲ್ಲಿ ರಿಟ್ ಅರ್ಜಿಯಲ್ಲಿ ಎಕ ಸದಸ್ಯ ಪೀಠದ ಮುಂದೆ ನಿಬಂಧಕರ ಆದೇಶ ಪ್ರಶ್ನಿಸಲಾಯಿತು. ಆ ಅರ್ಜಿ ವಜಾಗೊಂಡಿತು. ಆ ನಂತರ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದಾಗ, ಅರ್ಜಿಯನ್ನು ಊರ್ಜಿತಗೊಳಿಸಿದ ಆದೇಶಕ್ಕೆ ಶ್ರೇಷ್ಠ ನ್ಯಾಯಾಲಯದ ಮುಂದೆ ಮತ್ತು ಪ್ರಶ್ನಿಸಿದಾಗ ನಿಬಂಧಕರ ಮುಂದೆ ಹೆಚ್ಚುವರಿ ವ್ಯಕ್ತಿಗಳನ್ನು ಸೇರ್ಪಡೆ ಮತ್ತು ವಿಳಂಬದ ಬಗ್ಗೆ ವಿಚಾರಣೆ ನಡೆಸಿದಾಗ ಮಾತ್ರ ಊರ್ಜಿತತೆ ಮತ್ತು ವಿಳಂಬ ವಿನಾಯ್ತಿ ಬಗ್ಗೆ ತೀರ್ಮಾನಿಸಬಹುದು. ಅಂದರೆ ನಿಬಂಧಕರು ಮಾತ್ರ ಪ್ರಕರಣ ಊರ್ಜಿತತೆ, ಅರ್ಹತೆ, ವಿಳಂಬ ಎಂಬ ಅಂಶ ನಿರ್ಧರಿಸಬೇಕು. ಇದನ್ನು ಅನುಚ್ಛೇದ 226 ರಲ್ಲಿ ನಿರ್ಧರಿಸುವ ಅಂಶವಲ್ಲವೆಂದು ವಿಭಾಗೀಯ ಪೀಠದ ಆದೇಶವನ್ನು ಕಿತ್ತು ಹಾಕಿ, ನಿಬಂಧಕರ ಮುಂದೆ ಇರುವ ಪ್ರಕರಣ ಅರ್ಹತೆ ಮೇಲೆ ನಿರ್ಧರಿಸಲು ಆದೇಶಿಸಿತು. (2003 Indlaw SC 1527, (2008) 17 SCC 743)

160. ದಿಲ್ಲಿ ಸಹಕಾರ ಕಾಯಿದೆಯಲ್ಲಿ ಸದಸ್ಯರಿಗೆ ಹಂಚಲು 45 ಎಕರೆ ಜಮೀನು ಖರೀದಿ ಮಾಡಿ, ಒಪ್ಪಂದ ಮಾಡಿಕೊಂಡಿದ್ದು, ಆ ಒಪ್ಪಂದದಂತೆ ಹಂಚಿಕೆ ಮಾಡಬೇಕು. ಸದಸ್ಯರ ಅನರ್ಹತೆ ಅಥವಾ ಅರ್ಹತೆಯನ್ನು ದಿಲ್ಲಿ ಸಹಕಾರ ಕಾಯಿದೆಯಡಿ ತೀರ್ಮಾನಿಸತಕ್ಕದ್ದು. ಒಪ್ಪಂದದ ಜೊತೆ ಸಂಘದ ಉಪನಿಯಮ ಮತ್ತು ಶ್ರೇಷ್ಠ ನ್ಯಾಯಾಲಯದ ತೀರ್ಪನ್ನು ಗಮನದಲ್ಲಿರಿಸಿಕೊಳ್ಳಬೇಕು. (2003 Indlaw SC 314, (2003) 10 SCC 170, AIR 2003 SC 3996)

161. ದಿಲ್ಲಿ ಸಹಕಾರ ಕಾಯಿದೆಯಡಿ ನೋಂದಾಯಿತ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯನು ನಿವೇಶನ ಹಂಚಿಕೆ ಮಾಡಲು ದಾವಾ ದಾಖಲಿಸಿದಾಗ, ಮಧ್ಯಸ್ತಿಗಾರರು ಏಕ ಪಕ್ಷಿಯವಾಗಿ ನಿವೇಶನ ನೀಡಲು ಆದೇಶಿಸಿದ್ದನ್ನು ಪ್ರಶ್ನಿಸಿ ರಿಟ್ ದಾಖಲಿಸಿದಾಗ, ಮಧ್ಯಸ್ತಿಗಾರರ ಏಕ ಪಕ್ಷೀಯ ತೀರ್ಪನ್ನು ಕಿತ್ತು ಹಾಕಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದಾಗ, ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದು ಮಧ್ಯಸ್ತಿಗಾರರು ಏಕ ಪಕ್ಷೀಯ ತೀರ್ಮಾನ

ನೀಡಿದ ದಿನಾಂಕದಿಂದ, ವಿಚಾರಣೆ ಪುನಃ ಪ್ರಾರಂಭಿಸಿ ಆದೇಶಸತಕ್ಕದೆಂದು ನಿರ್ದೇಶಿಸಿತು. (2002 Indlaw SC 1589, (2002) 7 SCC 46, AIR 2002 SC 3062)

162. ಆಂಧ್ರಪ್ರದೇಶ ಸಹಕಾರ ಕಾಯಿದೆಯಲ್ಲಿ ನೋಂದಯಿಸಿದ ಒಂದು ಬ್ಯಾಂಕಿನ ನೌಕರ ನಿವೃತ್ತಿ ಹೊಂದಿದಾಗ, ಅವನು ಹಣ ದುರುಪಯೋಗ ಮಾಡಿಕೊಂಡಿರುವುದರಿಂದ, ಅವನ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಬಾಕಿ ಇರುವುದರಿಂದ ಅವನ ನಿವೃತ್ತಿ ಹಣಕಾಸು ಸೌಲಭ್ಯಗಳನ್ನು ತಡೆಹಿಡಿಯಲು ತೀರ್ಮಾನಿಸಿದಾಗ ರಿಟ್ ಅರ್ಜಿ ಸಲ್ಲಿಸಿ ಸೌಲಭ್ಯಗಳನ್ನು ತಡೆಹಿಡಿಯುವ ಬಗ್ಗೆ ಕಲಂ 51 ಮತ್ತು 60 ರನ್ವಯ ಅವಕಾಶವಿಲ್ಲ. ಆದ್ದರಿಂದ ತಡೆಹಿಡಿದಿರುವುದು ತಪ್ಪು ಎಂದು ತೀರ್ಮಾನಿಸಿತು ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದಾಗ, ಏಕ ಸದಸ್ಯ ಪೀಠದ ಆದೇಶವನ್ನು ಕಿತ್ತು ಹಾಕಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯಕ್ಕೆ ಅರ್ಜಿ ಹಾಕಿದಾಗ ಏಕ ಸದಸ್ಯ ಪೀಠದ ಆದೇಶವನ್ನು ಎತ್ತಿ ಹಿಡಿದು ವಿಭಾಗೀಯ ಪೀಠದ ಆದೇಶವನ್ನು ಕಿತ್ತು ಹಾಕಿತು. (2001 Indlaw SC 2584)

163. ಮಹಾರಾಷ್ಟ್ರ ಸಹಕಾರ ಕಾಯಿದೆಯಲ್ಲಿ ಒಂದು ಒಕ್ಕೂಟ ಸಹಕಾರಿಯು ಚುನಾವಣೆ ನಡೆಸುವ ಸಂದರ್ಭದಲ್ಲಿ, ಕರಡು ಮತದಾರರ ಪಟ್ಟಿ ತಯಾರಿಸಿ, ತಕರಾರು ಸಲ್ಲಿಸಲು ಅವಕಾಶ ಕಲ್ಪಿಸಿದ ಜಿಲ್ಲಾಧಿಕಾರಿಗಳ ಆದೇಶ ನೀಡಿದ ನಂತರ ಸರ್ಕಾರ ಚುನಾವಣೆಯನ್ನು ಮುಂದೂಡಿದ ನಂತರ ಈ ಸಂಘ ವಿನಾಯ್ತಿ ಪಡೆದು, ಮತದಾರರ ಪಟ್ಟಿ ಅಂತಿಮಗೊಳಿಸಿ, ಚುನಾವಣೆಯನ್ನು ನಡೆಸಿತು. ಉಚ್ಚನ್ಯಾಯಾಲಯದಲ್ಲಿ ರಿಟ್ ದಾಖಲಿಸಿದಾಗ, ಪಲಿತಾಂಶ ಪ್ರಕಟಿಸಲು ತಡೆಯಾಜ್ಞೆ ನೀಡಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯ ಅರ್ಜಿ ಸಲ್ಲಿಸಿದಾಗ, ಉಚ್ಚನ್ಯಾಯಾಲಯ ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ನಂತರ, ಅಂದರೆ ಮತದಾರರ ಪಟ್ಟಿ ತಯಾರಿಸುವುದು ಒಂದು ಮದ್ಯಂತರ ವ್ಯವಸ್ಥೆ. ಇದಕ್ಕೆ ರಿಟ್ ಮೂಲಕ ಪರಿಹಾರ ನೀಡಲಾಗದು. ಪಲಿತಾಂಶ ಪ್ರಕಟವಾದ ನಂತರ, ಯಾವುದೇ ವ್ಯಕ್ತಿ ಪ್ರಶ್ನಿಸಲು ಕಾಯಿದೆಯಲ್ಲಿ ಪರಿಹಾರ ಪಡೆಯಲು ಅವಕಾಶ ಇದೆ. ಆದ್ದರಿಂದ ರಿಟ್ ಪರಿಹಾರವಲ್ಲ. (2001 Indlaw SC 225, (2001) 8 SCC 509, AIR 2001 SC 3982)

164. ಗುಜರಾತ್ ಸಹಕಾರ ಸಂಘಗಳ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ ಸಂಘ ಸ್ಪೆಸಿಫಿಕ್ ಪರ್‌ಫಾರ್ಮ್‌ನ್ಸ್ ಕಾಯಿದೆಯಡಿ ಅಭಿವೃದ್ದಿದಾರರ ಮೇಲೆ ಪರಿಹಾರ ಪಡೆಯಲು ಸಿವಿಲ್ ದಾವೇ ಹೂಡಬಹುದೇ ಎಂಬುದಕ್ಕೆ ಉಚ್ಚನ್ಯಾಯಾಲಯ ಸಿವಿಲ್ ದಾವೆ ಹೂಡಲು ಬರುವುದಿಲ್ಲ ಏಕೆಂದರೆ ಅಭಿವೃದ್ದಿದಾರರ ಮತ್ತು ಸಹಕಾರ ಸಂಘದ ಜೊತೆ ಭೂ ವರ್ಗಾವಣೆ ಬಗ್ಗೆ ಸ್ಪಷ್ಟ ಒಪ್ಪಂದ ಇಲ್ಲದಿದ್ದಾಗ ಪ್ರಕರಣ ಊರ್ಜಿತವಲ್ಲ. (2001 Indlaw SC 21282)

165. ತಮಿಳುನಾಡು ಕಾಯಿದೆಯಡಿ, ಹಾಲು ಉತ್ಪಾದಕರ ಮಹಾಮಂಡಳ ನೇರವಾಗಿ ರಿಟ್ ದಾಖಲಿಸಬಹುದೇ ಎಂಬುದಕ್ಕೆ ಇಲ್ಲವೆಂದು ಉತ್ತರಿಸಿತು. ಮಹಾಮಂಡಳದ ಒಬ್ಬ ನೌಕರನನ್ನು ವರ್ಗಾವಣೆ ಮಾಡಿದ್ದನ್ನು ಪ್ರಶ್ನಿಸಿದಾಗ ಈ ತೀರ್ಮಾನ ನೀಡಿತು. ಇದರ ಜೊತೆ ಅಮಾನತ್ತು ಮಾಡಿದ ಸಂದರ್ಭದಲ್ಲಿಯೂ ರಿಟ್ ಮುಖಾಂತರ ಪ್ರಶ್ನಿಸಿದಾಗ ಪರಿಹಾರ ನೀಡಲಾಗದು, ಏಕೆಂದರೆ ಮಹಾಮಂಡಳ 'ರಾಜ್ಯ' ಎಂಬ ಅರ್ಥದಲ್ಲಿ ಬರುವುದಿಲ್ಲ. (2000 Indlaw SC 863)

**ಸೂಚನೆ : ಕರ್ನಾಟಕ ಹಾಲು ಮಹಾಮಂಡಳದ ನೌಕರರು ರಿಟ್ ದಾಖಲಿಸುವ ಬಗ್ಗೆ ----------- ಮತ್ತು ರಾಜ್ಯದ ತೀರ್ಮಾನದಲ್ಲಿ, ಮಹಾಮಂಡಳ ರಾಜ್ಯ ಸರ್ಕಾರದ ಕೆಲಸ ನಿರ್ವಹಿಸುತ್ತಿದ್ದು ಇದನ್ನು "ರಾಜ್ಯ" ಎಂದು ಪರಿಗಣಿಸಿ, ರಿಟ್ ದಾಖಲಿಸಲು ಪರಿಹಾರ ಪಡೆಯಲು ಅರ್ಹ ಎಂದು ತೀರ್ಮಾನವನ್ನು ಕಿತ್ತುಹಾಕಿ ದಂತಾಗುತ್ತದೆ.**

166. ಆಂಧ್ರಪ್ರದೇಶ ಕಾಯಿದೆಯಡಿ ಒಂದು ಮಹಿಳಾ ಸಹಕಾರ ಹಣಕಾಸು ಪಾಲಿಕೆಯ ನೌಕರರನ್ನು ಖಾಯಂ ಮಾಡಬಹುದೇ ಎಂಬುದರ ಬಗ್ಗೆ ತೀರ್ಮಾನಿಸುವಾಗ, ಅವರಿಗೆ ವೇತನ ಶ್ರೇಣಿ ನೀಡುವ

ಪ್ರಾಧಿಕಾರ ಆ ಹುದ್ದಗೆ ಅವಶ್ಯಕವಾದ ವಿದ್ಯಾರ್ಹತೆ, ಸೇವಾಹಿರಿತನ, ಅನುಭವದ ಆಧಾರದ ಮೇಲೆ ನಿಗದಿ ಮಾಡಬೇಕು. ಈ ಪ್ರಕ್ರಿಯೆಯನ್ನು ಮೂರು ತಿಂಗಳಲ್ಲಿ ಮುಕ್ತಾಯಗೊಳಿಸಲು ಸೂಚಿಸಿತು. (2000 Indlaw SC 3744, (2001) 9 SCC 517)

167. ಯಾವುದೇ ಕಾನೂನಿನಲ್ಲಿ ಎಲ್ಲಾ ಸಂದರ್ಭದಲ್ಲಿ ಅನುಸರಿಸಬೇಕಾದ ನೀತಿ ರೂಪಿಸಲಾಗದು. ಅದಕ್ಕಾಗಿ ಕಾಯಿದೆಯಲ್ಲಿ ವಿನಾಯ್ತಿ ನೀಡುವ ಅವಕಾಶ ಕಲ್ಪಿಸಿದೆ. ಶ್ರೇಷ್ಠ ನ್ಯಾಯಾಲಯ 1980 (2) SCR 260/1979 Indlaw SC 301 ರಲ್ಲಿ ಮದ್ರಾಸ್ ಸಹಕಾರ ಸಂಘಗಳ ಕಾಯಿದೆ ಕಲಂ 60ನ್ನು ಪರಿಶೀಲಿಸುವಾಗ ಸಹಕಾರ ಸಂಘಗಳ ಕಾಯಿದೆ ಕಲಂಗಳು ಕೆಲವು ವಿನಾಯ್ತಿ ನೀಡಿ/ಸೇರ್ಪಡೆ ಮಾಡಿ ಆದೇಶಿಸುವುದು ಅಸಂವಿಧಾನಿಕವಲ್ಲ. (ಖಂಡಿಕೆ 27 ಮತ್ತು 28) (2000 Indlaw SC 417, (2000) 7 SCC 425, AIR 2000 SC 3060)

168. ಮಹಾರಾಷ್ಟ್ರ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ನಿಬಂಧಕರು ಕೆಲವು ನಿರ್ದೇಶನ ನೀಡಿದ್ದನ್ನು (19.01.1985) ಪ್ರಶ್ನಿಸಿ ರಿಟ್ ದಾಖಲಿಸಿದಾಗ, ಗೃಹ ನಿರ್ಮಾಣ ಸಹಕಾರ ಸಂಘಗಳು, ಈ ನಿರ್ದೇಶನವನ್ನು (ಉಪನಿಯಮ ತಿದ್ದುಪಡಿ) ಪಾಲಿಸದೇ ಇದ್ದಾಗ, ಅದನ್ನು ಸರ್ಕಾರ ಪ್ರಶ್ನಿಸಿತು. ಇದಕ್ಕೆ ಸಂಘದ ಸದಸ್ಯರ ಹಿತಾಸಕ್ತಿಗೆ ಸೂಕ್ತವಲ್ಲದ ನಿರ್ದೇಶನ, ಹೊರಗಿನಿಂದ ಹೇರತಕ್ಕದ್ದಲ್ಲ ಎಂದು ತೀರ್ಪಿತ್ತಿತು. ಇದನ್ನು ಮತ್ತೆ ಪ್ರಶ್ನಿಸಿದಾಗ ಶ್ರೇಷ್ಠ ನ್ಯಾಯಾಲಯ ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಿತು. (2000 Indlaw SC 3919, (2000) 9 SCC 295)

169. ಪಂಜಾಬ್ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಒಂದು ಪ್ರಾಥಮಿಕ ಸಹಕಾರ ಸಂಘ, ಗೊಬ್ಬರ ನಿಯಂತ್ರಣ ಕಾಯಿದೆಯಲ್ಲಿ 'ವಿತರಕರೆ' (dealer) ಅರ್ಥದಲ್ಲಿ ಬರುತ್ತದೆಯೇ ಎಂಬ ಬಗ್ಗೆ ರಿಟ್ ಅರ್ಜಿದಾಖಲಿಸಿತು. ಸಂಘಗಳು ಲೈಸೆನ್ಸ್ ಪಡೆಯುವ ಅವಶ್ಯಕತೆ ಇಲ್ಲವೆಂದು ಪ್ರತಿಪಾದಿಸಿದಾಗ ಸಂಘಗಳು ವ್ಯಾಪಾರ ಮಾಡುತ್ತಿಲ್ಲ – ಅವರು ಗೊಬ್ಬರ ಖರೀದಿಸಿ ಸದಸ್ಯರಿಗೆ ವ್ಯವಸಾಯ ಮಾಡಲು ಹಂಚುತ್ತಿದ್ದು ಇದು ವ್ಯವಹಾರವಲ್ಲವೆಂದು ವಾದಿಸಿದಾಗ ಉಚ್ಚನ್ಯಾಯಾಲಯ ಸದಸ್ಯರಿಗೆ ಹಂಚಲು ಗೊಬ್ಬರ ಖರೀದಿ ಮಾಡುತ್ತಿದ್ದು ಅದು ವ್ಯಾಪಾರವಲ್ಲ ಎಂದು ತೀರ್ಮಾನಿಸಿತು. ಇದನ್ನು ಪ್ರಶ್ನಿಸಿದಾಗ ಉಪನಿಯಮಗಳಡಿ, ಗೊಬ್ಬರ ಖರೀದಿಸಿ, ಸದಸ್ಯರಿಗೆ ಮಾರಬೇಕೆಂದಿರುವುದರಿಂದ ಸದಸ್ಯರಲ್ಲದವರಿಗೆ ಮಾರತಕ್ಕದ್ದಲ್ಲ. ಆದ್ದರಿಂದ ಗೊಬ್ಬರ ನಿಯಂತ್ರಣ ಕಾಯಿದೆಯಡಿ ಪರವನಿಗೆ ಲೈಸೆನ್ಸ್ ಪಡೆಯುವ ಅವಶ್ಯಕತೆ ಇಲ್ಲ (ಗೊಬ್ಬರ ನಿಯಂತ್ರಣ ಆದೇಶ 1985ರ ನಿಬಂಧನೇ 7 ರನ್ವಯ) (2000 Indlaw SC 3967, (2000) 9 SCC 210)

170. ಕೇರಳ ಸಹಕಾರ ಸಂಘಗಳಡಿ ನೊಂದಾಯಿಸಿದ ಒಂದು ಸಂಘದ ನೇಮಕಾತಿಯಲ್ಲಿ ಕಲಂ 65 ರಡಿ ನಿಬಂಧಕರು ನಡೆಸಿದ ವಿಚಾರಣಾ ವರದಿಯಲ್ಲಿ ನ್ಯೂನತೆಗಳನ್ನು ಗುರುತಿಸಿದ್ದರು, ನೇಮಕಾತಿ ನ್ಯೂನತೆಗಳಿಂದ ಗುರುತಿಸಿದ್ದು, ವರದಿಯನ್ನು ದಾಖಲಿಸಿ ಸಾರ್ವಜನಿಕ ನೋಟೀಸ್ ನೀಡಿ ನೇಮಕಾತಿಯನ್ನು ಉಚ್ಚನ್ಯಾಯಾಲಯ ಊರ್ಜಿತಗೊಳಿಸಿತು. ಇದರಲ್ಲಿ ನೇಮಕಾತಿ ಮಾಡಿಕೊಂಡ ನೌಕರರನ್ನು ಕಕ್ಷಿದಾರರನ್ನು ಮಾಡಿರಲಿಲ್ಲ. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಸಂಬಂಧಪಟ್ಟ ನೌಕರರಿಗೆ ನೋಟೀಸ್ ಜಾರಿ ಮಾಡಿಲ್ಲ ಮತ್ತು ಅವರಿಗೆ ಅವಕಾಶ ನೀಡಿಲ್ಲವೆಂದು ಮತ್ತು ಮರು ವಿಚಾರಣೆ ಮಾಡಲು ಆದೇಶಿಸಿ ಉಚ್ಚನ್ಯಾಯಲಕ್ಕೆ ಮರಳಿಸಿತು. (1999 Indlaw SC 2118, (2000) 10 SCC 197)

171. ತಮಿಳುನಾಡು ಸಹಕಾರ ಕಾಯಿದೆಯಡಿ, ಮಾರಾಟ ಸಹಕಾರ ಸಂಘ ಸದಸ್ಯರಿಂದ ವಸ್ತುಗಳನ್ನು ಸಂಗ್ರಹಿಸಿ, ಬೇಡಿಕೆ ಗನುಸಾರ ಸರಬರಾಜು ಮಾಡುವುದು. ಈ ಸಹಕಾರ ಸಂಘ ವ್ಯವಹಾರ

ಮಾಡುವ ಸಂಸ್ಥೆಯಲ್ಲಿ, ಅಂದರೆ ಖರೀದಿ ಮತ್ತು ಮಾರಾಟ ಮಾಡುವ ಸಂಘವಲ್ಲ. ಸಂಘದ ವ್ಯವಹಾರದಲ್ಲಿ ಭಾಗವಹಿಸಿದ ಹವಾಲಿಗಳು/ದಿನಗೂಲಿ ನೌಕರರು, ತಾವು ಆ ಸಂಘದ ನೌಕರರೆಂದು ನ್ಯಾಯಾಧಿಕರಣದ ಮುಂದೆ ರುಜುವಾತು ಪಡಿಸಲು, ಅಶಕ್ತರಾದ್ದರಿಂದ, ಅರ್ಜಿಯನ್ನು ವಜಾ ಮಾಡಿತು. ಇದನ್ನು ಪ್ರಶ್ನಿಸಿ ರಿಟ್ ಅರ್ಜಿ ದಾಖಲಿಸಿದದಾಗ ನ್ಯಾಯಾಧಿಕರಣದ ಆದೇಶವನ್ನು ದೃಡೀಕರಿಸಿತು. ಇದನ್ನು ಪ್ರಶ್ನಿಸಿ ಒಕ್ಕೂಟ, ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಸಂಘದ ವ್ಯವಹಾರ ಖರೀದಿ/ಮಾರಾಟ ಮಾಡುವುದಲ್ಲವೆಂದು, ಮತ್ತು ಅರ್ಜಿದಾರರು ಸಂಘದ ನೌಕರರೆಂದು ರುಜುವಾತು ಪಡಿಸಲು ವಿಫಲರಾದ್ದರಿಂದ ನ್ಯಾಯಾಧಿಕರಣ ಮತ್ತು ಉಚ್ಚನ್ಯಾಯಾಲಯದ ತೀರ್ಮಾನಗಳಲ್ಲಿ ಯಾವುದೇ ನ್ಯೂನತೆ ಇಲ್ಲವೆಂದು ತೀರ್ಮಾನಿಸಿತು ಮತ್ತು ಅರ್ಜಿ ವಜಾ ಮಾಡಿತು. (2004 Indlaw SC 480, (2004) 3 SCC 514, AIR 2004 SC 1639)

172. ಬಹುರಾಜ್ಯ ಸಹಕಾರ ಕಾಯಿದೆಯ (ಇಫ್‌ಕೊ) ಒಂದು ಸಂಘ ಗೊಬ್ಬರ ತಯಾರಕರಾಗಿದ್ದು ಕೇಂದ್ರ ಸರ್ಕಾರ ವಿವಿದ ಬಗ್ಗೆಯ ಗೊಬ್ಬರಗಳಿಗೆ ವಿವಿದ ದರದ ಕರ ನಿಗದಿ ಪಡಿಸುತ್ತಿರುವುದನ್ನು ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯ ಪರಿಹಾರ ನೀಡದಿದ್ದಾಗ, ಶ್ರೇಷ್ಠ ನ್ಯಾಯಾಲಯದ ಮುಂದೆ ಮೇಲ್ಮನವಿ ಸಲ್ಲಿಸಿತು. ಅದನ್ನು ಇಲಾಖೆ ಹೊರಡಿಸಿದ ಕೋಷ್ಠಕದಲ್ಲಿ ದರ ನಿಗದಿ ಪಡಿಸಿದ್ದು, ವಿವಿದ ದೇಶಗಳಿಂದ ಆಮದು ಮಾಡಿಕೊಂಡಾಗ, ವಿವಿದ ಧರಗಳನ್ನು ನಿಗದಿ ಪಡಿಸಿದ್ದು, ಎರಡೂ ತೀರ್ಪುಗಳಲ್ಲಿ ಯಾವುದೇ ನ್ಯೂನತೆ ಇಲ್ಲದೇ ಇರುವುದರಿಂದ ಮೇಲ್ಮನವಿಯನ್ನು ವಜಾ ಮಾಡಿತು. (1999 Indlaw SC 196, (2000) 2 SCC 107, AIR 2000 SC 584)

173. ಮಹಾರಾಷ್ಟ್ರ ಸಹಕಾರ ಕಾಯಿದೆಯಡಿ ಉಪನಿಯಮ ತಿದ್ದುಪಡನೆ ಸಂಬಂಧಪಟ್ಟಂತೆ, ನ್ಯಾಯಾಧಿಕರಣ ಮೇಲ್ಮನವಿ ಪ್ರಾಧಿಕಾರಣವಲ್ಲ. ಮೇಲ್ಮನವಿ ಮಾಡಬೇಕಾದ್ದ ಬೇರೆ ಪ್ರಾಧಿಕಾರದಲ್ಲಿ. ಉಪನಿಯಮದ ತಿದ್ದುಪಡಿ ಕಾನೂನು ಪ್ರಕಾರ ವಿದ್ದರೆ ಅದನ್ನು ಅಂಗೀಕರಿಸುವುದು ನಿಬಂಧಕರು. ಕಾನೂನಿಗೆ ವಿರುದ್ದವಾಗಿದ್ದರೆ, ಅದರಲ್ಲಿ ಮತದಾರರ ಪಟ್ಟಿ ತಯಾರಿಸಲು ರೂಪಿಸಿದ ನಿಯಮ ಸಮರ್ಪಕವಾಗಿಲ್ಲದಿದ್ದರೆ, ಅದನ್ನು ತಿರಸ್ಕರಿಸಬೇಕು. ನಿಯಮಕ್ಕೆ ವಿರುದ್ದ ತಯಾರಿಸಿದ ಮತದಾರರಪಟ್ಟಿ ಆಧಾರದ ಮೇಲೆ ಚುನಾವಣೆ ಸರಿಯಲ್ಲ. ಉಪನಿಯಮದ ತಿದ್ದುಪಡಿಗೆ ಅನುಸರಿಸಬೇಕಾದ ನಿಯಮ ಪಾಲಿಸಿಲ್ಲವಾದ್ದರಿಂದ ಮೇಲ್ಮನವಿ ಪ್ರಾಧಿಕಾರ ಮತ್ತು ಉಚ್ಚನ್ಯಾಯಾಲಯದ ಆದೇಶದಲ್ಲಿ ಯಾವುದೇ ನ್ಯೂನತೆ ಇಲ್ಲ ಎಂದು ಮೇಲ್ಮನವಿಯಲ್ಲಿ ತಿರಸ್ಕರಿಸಿತು. (2003 Indlaw SC 1003, (2004) 1 SCC 133, AIR 2004 SC 1329)

174. ಉತ್ತರಪ್ರದೇಶದ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಸಂಘದ ಕಾರ್ಯದರ್ಶಿ ಹಣ ದುರುಪಯೋಗ ಮಾಡಿದ್ದಾರೆಂದು ದಾವಾ ಹಾಕಿ, ಡಿಕ್ರಿ ಪಡೆದ ನಂತರ, ಅದನ್ನು ರಿಟ್ ಮುಖಾಂತರ ಅರ್ಜಿ ಸಲ್ಲಿಸಿದಾಗ, ಆ ಅರ್ಜಿಯನ್ನು ವಜಾ ಮಾಡಿತು. ಶ್ರೇಷ್ಠ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸಿದಾಗ ಕಲಂ 70ನ್ನು ಪರಿಶೀಲಿಸಿ ಉಚ್ಚನ್ಯಾಯಾಲಯ ತೀರ್ಪನ್ನು ಎತ್ತಿ ಹಿಡಿಯಿತು. (2002 Indlaw SC 2323, (2009) 16 SCC 247)

175. ಪಂಜಾಬ್ ಮತ್ತು ಹರ್ಯಾನ ರಾಜ್ಯ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಒಂದು ಬ್ಯಾಂಕಿನ ನೌಕರನ ಮೇಲೆ ಆಡಿಟ್ ವರದಿಯಲ್ಲಿ ಹಣ ದುರುಪಯೋಗದ ಬಗ್ಗೆ ಕ್ರಮ ಜರುಗಿಸಿ ಒಬ್ಬ/ನೌಕರನ ಮೇಲೆ ಶಿಸ್ತು ಕ್ರಮ ಜರುಗಿಸಿ ವರದಿಯ ಮೇಲೆ ಅವನನ್ನು ವಜಾ ಮಾಡಿತು. ಅದನ್ನು ಪ್ರಶ್ನಿಸಿ ನಿಬಂಧಕರ ಮುಂದೆ ಪ್ರಕರಣ ದಾಖಲಿಸಿದಾಗ, ನಿಬಂಧಕರು ದಾಖಲೆಗಳನ್ನು ಪರಿಶೀಲಿಸಿ, ಹಣ ದುರುಪಯೋಗ ಆ ಅವಧಿಯಲ್ಲಿ ಆಗಿಲ್ಲವೆಂದು, ಅವನನ್ನು ಕೆಲಸಕ್ಕೆ ಮರುಸ್ಥಾಪಿಸಿ ವಜಾ

ಅರ್ಜಿಯನ್ನು ಕಿತ್ತು ಹಾಕಿತು. ಇದನ್ನು ರಿಟ್ ಅರ್ಜಿ ಮೂಲಕ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯ, ಮೇಲ್ಮನವಿ ಪ್ರಾಧಿಕಾರದ ಆದೇಶದಲ್ಲಿ ಮೇಲ್ನೋಟಕ್ಕೆ ಯಾವುದೇ ನ್ಯೂನತೆ ಇಲ್ಲವೆಂದು ವಜಾ ಮಾಡಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಉಚ್ಚನ್ಯಾಯಾಲಯ ಕೆಳ ನ್ಯಯಾದೀಕರಣದ ಆದೇಶವನ್ನು ಪರಿಶೀಲಿಸುವಾಗ, ಕಾನೂನು ಮತ್ತು ನಿಯಮಗಳಲ್ಲಿ ಪಾಲಿಸಿಲ್ಲವೆಂದು ಗಮನಿಸಿದಾಗ ಮಾತ್ರ ಮಧ್ಯಪ್ರವೇಶ ಮಾಡಬೇಕು. ಉಚ್ಚನ್ಯಾಯಾಲಯ ಮತ್ತು ಪ್ರಾಧಿಕಾರದ ಆದೇಶದಲ್ಲಿ ತಪ್ಪಿಲ್ಲವೆಂದು ತೀರ್ಮಾನಿಸಿದಾಗ, ಮಧ್ಯಪ್ರವೇಶದ ಅವಶ್ಯಕತೆ ಇಲ್ಲ. ಪ್ರಕರಣ ವಜಾ ಮಾಡಿತು. (2001 Indlaw SC 21336, (2010) 15 SCC 517)

176. ಬಹುರಾಜ್ಯ ಸಹಕಾರ ಸಂಘಗಳ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಸಂಘದ ಅಧ್ಯಕ್ಷ ಮತ್ತೊಂದು ಬಹುರಾಜ್ಯ ಕಾಯಿದೆಯಲ್ಲಿ ಅಧ್ಯಕ್ಷನಾಗಿ ಆಯ್ಕೆಯಾದಾಗ, ಮತ್ತೊಂದು ಬಹುರಾಜ್ಯ ಸಹಕಾರ ಸಂಘ ಇದನ್ನು ರಿಟ್ ಅರ್ಜಿಯಲ್ಲಿ ಪ್ರಶ್ನಿಸಿದಾಗ, ಕಾಯಿದೆ ಕಲಂ 36 ಮತ್ತು 37 ರಲ್ಲಿ ಒಂದು ಬಹುರಾಜ್ಯ ಕಾಯಿದೆಯಲ್ಲಿ ಒಂದು ಸಂಘಕ್ಕಿಂತ ಹೆಚ್ಚು ಸಂಘಗಳಲ್ಲಿ ಪದಾಧಿಕಾರಿಯಾಗಲು ನಿರ್ಬಂದ ವಿರುವುದನ್ನು ಪ್ರಶ್ನಿಸಿದರು. ಇದನ್ನು ಉಚ್ಚನ್ಯಾಯಾಲಯ ವಜಾ ಮಾಡಿತು. ಇದನ್ನು ಪ್ರಶ್ನಿಸಿ ಶ್ರೇಷ್ಠನ್ಯಾಯಾಲಯ ಪ್ರಶ್ನಿಸಿದರು. ಶ್ರೇಷ್ಠ ನ್ಯಾಯಾಲಯ ಕಲಂ 36 ಮತ್ತು 37 ರಲ್ಲಿ ಇರುವ ಅವಕಾಶಕ್ಕೆ ಕಲಂ 99(2) ನ್ನು ಉಪಯೋಗಿಸಿ ಕೇಂದ್ರ ಸರ್ಕಾರ ನೀಡಿದ ವಿನಾಯ್ತಿ ಅಸಿಂದು ಮತ್ತು ಮೂಲ ಕಾನೂನಿನ ವಿಷಯಕ್ಕೆ ವಿರುದ್ದ ಎಂದು ತೀರ್ಮಾನಿಸಿತು. ಅಂದರೆ ಕೇಂದ್ರ ಸರ್ಕಾರ ಕಲಂ 36 ಮತ್ತು 37ಕ್ಕೆ ವಿನಾಯ್ತಿ ನೀಡಲು ಕಲಂ 99(2) ಉಪಯೋಗ ಅಸಿಂದು ಎಂದು ತೀರ್ಮಾನಿಸಿತು. (1999 Indlaw SC 589, (1999) 6 SCC 141, AIR 1999 SC 2402)

177. ಆಸಾಂ ಸಹಕಾರ ಕಾಯಿದೆಯಡಿ, ಒಂದು ಮೀನುಗಾರಿಕೆ ಆದ್ಯತೆ ಮೇಲೆ, ಪರಿಶಿಷ್ಟ ಜಾತಿ ಮತ್ತು ಪ್ರಕಟಿಸಿದ ವರ್ಗಕ್ಕೆ ಪ್ರಾಶಸ್ತ್ಯ ನೀಡಿರುವುದನ್ನು ಪ್ರಶ್ನಿಸಿತು. ಅಂದರೆ ನಿಯಮಗಳ 6ನೇ ನಿಯಮದಡಿ ಹೊರಡಿಸಿದ ಆದೇಶ ತಪ್ಪೆಂದು ಪ್ರತಿಪಾದಿಸಿದಾಗ, ರಿಟ್ ಅರ್ಜಿ ಮೂಲಕ ಪರಿಹಾರಕೇಳಲಾಯಿತು. ಉಚ್ಚನ್ಯಾಯಾಲಯ ಪರಿಶಿಷ್ಟ ಜಾತಿ/ಜನಾಂಗದ ಸದಸ್ಯರು ವ್ಯಾಪ್ತಿಯಿಂದ ಹೊರಗೆ ಹೊದ ನಂತರ ಅಧಿಕಾರಗಳನ್ನು ಪಡೆಯಲು ಅರ್ಹರಲ್ಲವೆಂದು ವಜಾ ಮಾಡಿತು ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಕ್ಕೆ ಮೇಲ್ಮನವಿ ಸಲ್ಲಿಸಿದಾಗ, ಕೆಳ ನ್ಯಾಯಾಲಯದ (ಏಕ ಸದಸ್ಯ ಪೀಠ) ತೀರ್ಮಾನ ಮಾಡುವಾಗ ನ್ಯಾಯಸಮ್ಮತ ನೀತಿ ಅನುಸರಿಸಿದ್ದು. ವಿಭಾಗೀಯ ಪೀಠದ ಆದೇಶವನ್ನು ಕಿತ್ತು ಹಾಕಿ, ಏಕ ಸದಸ್ಯ ಪೀಠದ ಆದೇಶವನ್ನು ಎತ್ತಿ ಹಿಡಿಯಿತು. ಅಂದರೆ ಪರಿಶಿಷ್ಟ ಜಾತಿ/ವರ್ಗದ ಸದಸ್ಯರು ವ್ಯಾಪ್ತಿಯಿಂದ ಹೊರಗಿದ್ದರೂ, ಅವರ ಹಕ್ಕನ್ನು ಮೊಟಕುಗೊಳಿಸಲಾಗದು. ಸರ್ಕಾರದ ಆದೇಶ ಮತ್ತು ಏಕ ಸದಸ್ಯ ಪೀಠದ ಆದೇಶದಲ್ಲಿ ನ್ಯೂನತೆ ಇಲ್ಲ ಎಂದು ತೀರ್ಮಾನಿಸಿತು. (1999 Indlaw SC 1039, (1999) 3 SCC 626, AIR 1999 SC 1758)

178. ಪಂಜಾಬ್ ಸಹಕಾರ ಕಾಯಿದೆಯಡಿಯಲ್ಲಿ ನೋಂದಾಯಿಸಿದ ಒಂದು ಸಂಘದ ನೌಕರರ ಮೇಲೆ ಮತ್ತೊಂದು ಸಹಕಾರ ಸಂಘದ ಮೇಲೆ ದಾವಾ ದಾಖಲಿಸಬಹುದೇ ಮತ್ತು ಇದು ಕಲಂ 55(1)(ಬಿ) ಬರುತ್ತಿದೆಯೇ ಎಂಬ ಪ್ರಶ್ನೆಗೆ ಈ ಸಂಘದ ದಾವಾ ಪ್ರಕರಣವನ್ನು ಮದ್ಯಸ್ತಿಗಾರರಾಗಿ, ನಿಬಂಧಕರು ವಹಿಸಿರುವುದನ್ನು ಪ್ರಶ್ನಿಸಿ ರಿಟ್ ಅರ್ಜಿ ದಾಖಲಿಸಿದಾಗ, ಉಚ್ಚನ್ಯಾಯಾಲಯ ಸಂಬಂಧಪಟ್ಟ ನೌಕರ ಒಂದು ಸಂಘದ ಮಾರಾಟಾಧಿಕಾರಿಯಾಗಿದ್ದು ಎರಡನೇ ಸಂಘದ ಸದಸ್ಯನಾಗಿದ್ದನು. ಹಣ ಸ್ವೀಕರಿಸಿದ ನಂತರ ಆ ಹಣವನ್ನು ಎರಡನೇ ಸಂಘಕ್ಕೆ ವರ್ಗಾಯಿಸಬೇಕು. ಅದ್ದರಿಂದ ಇದು ಕಲಂ 55ರಲ್ಲಿ ಬರುತ್ತದೆ ಎಂದು ತೀರ್ಮಾನಿಸಿ, 1969 1 SCR 1968/1968 Indlaw SC 309 ರಲ್ಲಿನ ತೀರ್ಮಾನದಲ್ಲಿ ತಿಳಿಸಿದ ಸಂದರ್ಭಕ್ಕೆ ಈ ಪ್ರಕರಣಕ್ಕೂ ವ್ಯತ್ಯಾಸವಿದೆ.

ಆದ್ದರಿಂದ ಆ ತೀರ್ಮಾನ ಈ ತೀರ್ಮಾನಕ್ಕೆ ಅನ್ವಯಿಸದು. ಆದ್ದರಿಂದ ಮೇಲ್ಮನವಿಯನ್ನು ತಿರಸ್ಕರಿಸಿತು. (1999 Indlaw SC 1022, (1999) 3 SCC 296, AIR 1999 SC 1214)

179. ಆಂಧ್ರಪ್ರದೇಶ ಸಹಕಾರ ಕಾಯಿದೆಯಡಿ ಒಂದು ಭೂ ಅಭಿವೃದ್ಧಿ ಬ್ಯಾಂಕ್ ಟ್ರಾಕ್ಟರ್ ಖರೀದಿ ಪಶು ಸಂಗೋಪನೆಯಲ್ಲಿ ಎಂದು ವರ್ಗೀಕರಿಸಬಹುದೇ? ಒಂದು ಬ್ಯಾಂಕ್ ಕಲಂ 85 ರನ್ವಯ ನಿಗದಿತ ಉದ್ದೇಶಕ್ಕೆ ಸಾಲ ಕೊಡಲು ಅವಕಾಶ ಇದೆ ಹಾಗೂ ಇದು ಪಶು ಸಂಗೋಪನೆಗಾಗಿ ಟ್ರಾಕ್ಟರ್ ಖರೀದಿ ಎಂದು ನಮೂದಿಸುವುದಿಲ್ಲ. ಚರ/ಸ್ಥಿರಾಸ್ತಿ ಎಂದು ವಿಭಾಗಿಸಿ, ಕಲಂ 103ರಲ್ಲಿ ಸಾಲ ನೀಡುವುದಿಲ್ಲ. ಸಾಲ ನೀಡಿದಾಗ, ಆಸ್ತಿಯನ್ನು ಬ್ಯಾಂಕಿನ ಹೆಸರಿಗೆ ದಾಖಲಿಸಿದ್ದು. ಅದನ್ನು ಮಾರಿ ಸಾಲ ವಸೂಲಿ ಮಾಡಿಕೊಳ್ಳುವ ಅಧಿಕಾರ ಬ್ಯಾಂಕ್‌ಗೆ ಇದೆ. ಕಲಂ 85 ಮತ್ತು ಕಲಂ 103 ಮತ್ತು ಕಲಂ 60ನ್ನು ಉಚ್ಚನ್ಯಾಯಾಲಯ ಸಮರ್ಥನೀಯವಾಗಿ ವಿಮರ್ಶಿಸಿಲ್ಲ ಆದ್ದರಿಂದ ಉಚ್ಚನ್ಯಾಯಾಲಯ ಆದೇಶ ಊರ್ಜಿತವಲ್ಲ ಎಂದು ಮೇಲ್ಮನವಿಯನ್ನು ಪುರಸ್ಕರಿಸಿತು. ಅಂದರೆ ಉಚ್ಚನ್ಯಾಯಾಲಯದ ಆದೇಶದಲ್ಲಿ ಪಶು ಸಂಗೋಪನೆಗೆ ಟ್ರಾಕ್ಟರ್ ಸಾಲ ನೀಡಲು ಅವಕಾಶವಿಲ್ಲ ಎಂಬ ತೀರ್ಪನ್ನು ಕಿತ್ತು ಹಾಕಿತು. (1999 Indlaw SC 914, (1999) 3 SCC 158)

180. ದಿಲ್ಲಿ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡುವಾಗ, ಸದಸ್ಯತನದ ಹಿರಿತನ ಆದಾರವೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ, ಸದಸ್ಯರ ಹಿರಿತನವೇ ಆಧಾರವಾಗಬೇಕಿಲ್ಲ. ಸಂಘವು ಕಂತುಗಳನ್ನು ಅವಧಿಗೆ ಅನುಗುಣವಾಗಿ ಪಾವತಿ ಮಾಡಿದ ಸದಸ್ಯರಿಗೆ ಎಂದು ಸಂಘ ನಿಯಮ ರೂಪಿಸಿಕೊಂಡರೆ, ಅದು ಕಾನೂನುಬಾಹಿರವಲ್ಲ. ನ್ಯಾಯಾಧಿಕರಣ ಮತ್ತು ಉಚ್ಚನ್ಯಾಯಾಲಯ, ಕಂತಿನ ಹಣದ ಬೇಡಿಕೆ ನೋಟೀಸ್ ತಲುಪಿದ ಬಗ್ಗೆ ಪರಿಶೀಲಿಸಿಲ್ಲವಾದ್ದರಿಂದ, ಅದನ್ನು ಪರಿಶೀಲಿಸಲು ಸೂಚಿಸಿ, ನ್ಯಾಯಾಧಿಕರಣಕ್ಕೆ ವಾಪಸ್ ಕಳುಹಿಸಿತು ಮತ್ತು ಸದಸ್ಯರಿಗೆ ನೋಟೀಸ್ ಜಾರಿಯಾಗಿದ್ದರೆ, ಅಂತಹ ಸದಸ್ಯರಿಗೆ ಯಾವುದೇ ಸೌಲತ್ತು ಲಭ್ಯವಿಲ್ಲ ಎಂಬ ಅಂಶವನ್ನು ತೀರ್ಮಾನಿಸಲು ಸೂಚಿಸಿತು. ಅಂದರೆ ಸದಸ್ಯರ ಹಿರಿತನವೇ ಆಧಾರವಾಗುವುದಿಲ್ಲ. (1998 Indlaw SC 1031, (1998) 6 SCC 39, AIR 1998 SC 2410)

181. ಮಹಾರಾಷ್ಟ್ರ ಸಹಕಾರ ಕಾಯಿದೆಯಡಿ, ಸದಸ್ಯೇತರ ವ್ಯಕ್ತಿಯ ಜೊತೆ ಮಾಡಿದ ವ್ಯವಹಾರ, ಸಂಘದ ವ್ಯಾಪಾರಕ್ಕೆ ಸಂಬಂಧಪಟ್ಟ ವಿಷಯವಲ್ಲ, ಏಕೆಂದರೆ ಸದಸ್ಯರಿಗಾಗಿ ರಚಿಸಿಕೊಂಡ ಸಂಘ. ಆ ಕಾರಣಕ್ಕಾಗಿ ವಿವಾದ ಏರ್ಪಟ್ಟಾಗ ಅದು ಕಾಯಿದೆ ಕಲಂ 91(ಸಿ) ಅಡಿ ವಿವಾದ ವಾಗುವುದಿಲ್ಲ. (1998 Indlaw SC 1539, (1998) 4 SCC 527, AIR 1999 SC 846)

182. ಗುಜರಾತ್ ಕಾಯಿದೆಯಡಿ ಒಂದು ಸಂಘ, ಒಂದು ಹೋಟೇಲ್‌ಗೆ ಬಾಡಿಗೆ ನೀಡಿದ ಸ್ಥಳಕ್ಕೆ ಬಾಡಿಗೆ ಪಡೆಯುತ್ತಿದ್ದು, ಆ ಹೋಟೇಲ್‌ಗೆ (14ನೇ ಮಹಡಿ) ಬರುವ ಪ್ರತಿ ವ್ಯಕ್ತಿಗೆ ರೂ.1/– ರಂದು ವಸೂಲಿ ಮಾಡಿದ ಹಣವನ್ನು ಬಾಡಿಗೆ ಎಂದು ಪರಿಗಣಿಸುವ ಬಗ್ಗೆ ಕರ ನಿಗದಿ ಪಡಿಸುವ ಪ್ರಾಧಿಕಾರ ಶೇ.50% ರಷ್ಟನ್ನು ಸೇರಿಸಿ ಬಾಡಿಗೆ ನಿಗದಿ ಬಗ್ಗೆ ಮಾಡಿದ ಆದೇಶ ಸರಿಯಲ್ಲವೆಂದು ತೀರ್ಮಾನಿಸಿದ ಆದೇಶವನ್ನು ತಪ್ಪು ಎಂದು ತೀರ್ಮಾನಿಸಿ, ಕರ ನಿಗದಿ ಪಡಿಸಿದ ಪ್ರಾಧಿಕಾರದ ಆದೇಶವನ್ನು ಎತ್ತಿ ಹಿಡಿಯಿತು. (1997 Indlaw SC 2713, (1998) 1 SCC 497, AIR 1998 SC 482)

183. ಮಹಾರಾಷ್ಟ್ರ ಕಾಯಿದೆಯಲ್ಲಿ ಒಂದು ಸಹಕಾರ ಸಂಘ ಒಬ್ಬ ಸದಸ್ಯನ್ನು ವಜಾ ಮಾಡಲು ತೀರ್ಮಾನಿಸಿ, ಸಹಾಯಕ ನಿಬಂಧಕರ ಒಪ್ಪಿಗೆ ಕೇಳಿದಾಗ, ಅದನ್ನು ತಿರಸ್ಕರಿಸಲಾಯಿತು. ಮೇಲ್ಮನವಿಯನ್ನು ಸಂಯುಕ್ತ ನಿಬಂಧಕರ ಮುಂದೆ ಸಲ್ಲಿಸಿ ಬಾಕಿ ಇದ್ದಾಗ, ಸದಸ್ಯನ ಸಾವು ಸಂಬವಿಸಿದ್ದು, ಮೇಲ್ಮನವಿ ವಜಾ ಮಾಡಿದರೆ, ಪ್ರಕರಣದಲ್ಲಿ ಏನೂ ಉಳಿಯುವುದಿಲ್ಲ. ಸದಸ್ಯನ

ಮರಣ ಪ್ರಕರಣದ ಸ್ವೀಕಾರ ಅರ್ಹತೆ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ಮೇಲ್ಮನವಿ ಪುರಸ್ಕರಿಸಲ್ಪಟ್ಟರೆ ಮತ್ತು ಸಹಾಯಕ ನಿಬಂಧಕರ ಆದೇಶ ಕಿತ್ತು ಹಾಕಿದರೆ ಹಾಗೂ ಸಂಯುಕ್ತ ನಿಬಂಧಕರು ಸದಸ್ಯತ್ವದಿಂದ ವಜಾ ಮಾಡಿದ ಆದೇಶ ಒಪ್ಪಿಗೆ ನೀಡಿದರೆ, ಸಂಘವು ತೆಗೆದುಕೊಂಡ ವಜಾ ಆದೇಶ ತೀರ್ಮಾನದ ದಿನಾಂಕದಿಂದ ಜಾರಿಗೆ ಬರುತ್ತದೆ. ಕಾನೂನು ವಾರಸುದಾರರಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಮೇಲ್ಮನವಿ ವಜಾ ಮಾಡಿದರೆ, ಸದಸ್ಯ ತನ್ನ ಸದಸ್ಯತ್ವದಲ್ಲಿ ಮುಂದುವರಿದಿದ್ದು ಕಾನೂನು ವಾರಸುದಾರರು ಆ ಸಂಘದ ಸದಸ್ಯತ್ವ ಪಡೆಯುತ್ತಾರೆ. ಎಂದು ಪ್ರಕರಣ ವಾಪಸ್ ಮಾಡಲಾಯಿತು. (1997 Indlaw SC 1628, (1998) 9 SCC 629)

184. ಮಧ್ಯಪ್ರದೇಶ ಸಹಕಾರ ಕಾಯಿದೆಯಡಿ, ಒಂದು ಕೇಂದ್ರ ಬ್ಯಾಂಕ್‌ನ ನೌಕರ, ಒಂದು ಸೇವಾ ಸಹಕಾರ ಸಂಘದ ಸಕ್ಕರೆ ವಿತರಣೆ ಬಗ್ಗೆ ಆದ ನ್ಯೂನತೆಗೆ ಕ್ರಿಮಿನಲ್ ಪ್ರಕರಣವಾದ, ಆ ನೌಕರನಿಗೆ ಶಿಕ್ಷೆಯಾಗಿ ಒಂದು ವರ್ಷ ಜೈಲು ವಾಸ ಮತ್ತು ದಂಡ ವಿಧಿಸಿತು. ಮೇಲ್ಮನವಿ ಸಲ್ಲಿಸಿದಾಗ, ಅದು ವಜಾಗೊಂಡಿತು ಮತ್ತು ಉಚ್ಚನ್ಯಾಯಾಲಯದಲ್ಲಿ ರಿಟ್ ದಾಖಲಿಸಿದಾಗ, ಆರೋಪವನ್ನು ರುಜುವಾತು ಮಾಡಲು ಸಾಕ್ಷ್ಯಾಧಾರಗಳ ಆಧಾರದ ಮೇಲೆ ರಿಟ್ ಅರ್ಜಿ ಪುರಸ್ಕರಿಸಿತು. ಈ ಮಧ್ಯ ನೌಕರನ ಮೇಲೆ ಶಿಸ್ತು ಕ್ರಮ ಜರುಗಿಸಿ, ಅವನನ್ನು ಸೇವೆಯಿಂದ ವಜಾಗೊಳಿಸಿತು. ಕ್ರಿಮಿನಲ್ ಪ್ರಕರಣ ವಜಾ ಆದ ಕಾರಣ, ನೌಕರನನ್ನು ಮತ್ತು ಸೇವೆಗೆ ಸೇರಿಸಿಕೊಂಡು ನಂತರ ವಜಾ ಮಾಡಿದ ನಂತರದ ಸೇವೆಗೆ (ಮರು ಸೇರ್ಪಡೆಗೆ ಮೊದಲು) ವೇತನ ಪಾವತಿ ಮಾಡದೇ ಇದ್ದಾಗ, ರಿಟ್ ಅರ್ಜಿ ಸಲ್ಲಿಸಿದಾಗ, ಆ ಅರ್ಜಿಯನ್ನು ತಿರಸ್ಕರಿಸಿತು. ಆ ನಂತರ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಹಿಂದಿನ ಬಾಕಿ ಹಣ ಪಾವತಿ ಮಾಡುವುದು ಬ್ಯಾಂಕಿನ ಉಪನಿಯಮ (11) ರನ್ವಯ ಬ್ಯಾಂಕ್‌ಗೆ ಸೇರಿದ್ದು. ಬಾಕಿ ವೇತನ ಪಾವತಿ ಮಾಡುವುದು ಬ್ಯಾಂಕಿನ ನಿಯಮದಂತೆ, ಆ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತಿದ್ದು, ಹಿಂದಿನ ಸಂಬಳ ಬಾಕಿ ಪಾವತಿಸುವ ಅವಶ್ಯಕತೆ ಇಲ್ಲವೆಂದು ತೀರ್ಮಾನಿಸಿದ್ದನ್ನು ಉಚ್ಚನ್ಯಾಯಾಲಯ ಸಮರ್ಥಿಸಿದ್ದು, ಆ ಆದೇಶದಲ್ಲಿ ಯಾವುದೇ ಮಧ್ಯಪ್ರವೇಶದ ಅವಶ್ಯಕತೆ ಇಲ್ಲವೆಂದು ಶ್ರೇಷ್ಠ ನ್ಯಾಯಾಲಯ ಪ್ರಕರಣವನ್ನು ವಜಾ ಮಾಡಿತು. (1997 Indlaw SC 1270, (1998) 2 SCC 291)

185. ಪಂಜಾಬ್ ಸಹಕಾರ ಕಾಯಿದೆಯಡಿ ಒಂದು ಸಂಘದ ವ್ಯವಸ್ಥಾಪಕ ನಿರ್ದೇಶಕರು, ಆಡಳಿತ ಮಂಡಳಿಯ ತೀರ್ಮಾನ ಇಲ್ಲದೆ, ಪ್ರಕರಣ ದಾಖಲಿಸಬಹುದೇ ಎಂಬ ವಿಷಯದಲ್ಲಿ (ಕ್ರಿಮಿನಲ್ ಮೊಕದಮ್ಮೆ) ಜಿಲ್ಲಾ ನ್ಯಾಯಾದೀಶರ ಮುಂದೆ ಪ್ರಶ್ನಿಸಿದಾಗ, ಪ್ರಕರಣ ವಿಳಂಬವಾಗಿರುವುದನ್ನು ಗಮನಿಸಿ ವಜಾ ಮಾಡಿತು. ಈ ತೀರ್ಪನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ವಿಳಂಬವನ್ನು ಮನ್ನಿಸಿ, ಪ್ರಕರಣವನ್ನು ವಿಚಾರಣೆ ಮಾಡಲು ಕೆಳ ನ್ಯಾಯಾಲಯಕ್ಕೆ ವರ್ಗಾಯಿಸಿತು. ಕೆಳ ನ್ಯಾಯಾಲಯ ವಿಚಾರಣೆ ಮಾಡಿ ಅದನ್ನು ವಜಾ ಮಾಡಿತು. ವ್ಯವಸ್ಥಾಪಕ ನಿರ್ದೇಶಕರು ಎರಡನೇ ಮೇಲ್ಮನವಿಯನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಇದಕ್ಕೆ ಉಚ್ಚನ್ಯಾಯಾಲಯ, ವ್ಯವಸ್ಥಾಪಕ ನಿರ್ದೇಶಕರಿಗೆ ಪ್ರಕರಣ ದಾಖಲಿಸಲು ಅಧಿಕಾರ ಇಲ್ಲವೆಂದು ವಜಾ ಮಾಡಿತು. ಇದನ್ನು ಪ್ರಶ್ನಿಸಿ, ವ್ಯವಸ್ಥಾಪಕ ನಿರ್ದೇಶಕರಿಗೆ ಸ್ವತಂತ್ರವಾಗಿ ಪ್ರಕರಣ ದಾಖಲಿಸುವ ಅಧಿಕಾರದ ಬಗ್ಗೆ ವಿಮರ್ಶಿಸಿ ಬ್ಯಾಂಕಿನ ಉಪನಿಯಮ 46 ರಡಿ, ಪ್ರಕರಣ ದಾಖಲಿಸಲು, ವಾಪಸ್ ಪಡೆಯಲು, ಕೈಬಿಡಲು ಮತ್ತು ಮಾರ್ಪಡಿಸಲು ಅಧಿಕಾರ ಹೊಂದಿದ್ದು. ಉಚ್ಚನ್ಯಾಯಾಲಯದ ತೀರ್ಪನ್ನು ಕಿತ್ತು ಹಾಕಿ, ಪ್ರಕರಣ ಇತ್ಯರ್ಥ ಪಡಿಸಲು ನಿರ್ದೇಶಿಸಿತು. (1997 Indlaw SC 2919, (1997) 7 SCC 758, AIR 1998 SC 271)

186. ಹರ್ಯಾನ ಸಹಕಾರ ಕಾಯಿದೆಯಡಿ, ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು,

ಕಾರ್ಯದರ್ಶಿ ಮತ್ತು ಕೋಷಾಧಿಕಾರಿಗಳು ಹಣ ದುರುಪಯೋಗದ ಬಗ್ಗೆ ಪ್ರಕರಣ ದಾಖಲಿಸಿದಾಗ, ನಿಬಂಧಕರು ವಿಚಾರಣೆ ಮಾಡಿ ಮೂವರೂ ಹಣ ಪಾವತಿ ಮಾಡಲು ಸಾಮೂಹಿಕ ಮತ್ತು ವ್ಯಕ್ತಿಗತ ಜವಾಬ್ದಾರಿ ನಿಗದಿ ಪಡಿಸಿ ಆದೇಶಿಸಿತು. ಉಚ್ಚನ್ಯಾಯಾಲಯ ಅಧ್ಯಕ್ಷರು ತನ್ನ ಜವಾಬ್ದಾರಿ ಬಗ್ಗೆ ಪ್ರಶ್ನಿಸಿ ರಿಟ್ ದಾಖಲಿಸಿದರು. ಅದನ್ನು ವಜಾ ಮಾಡಿದ ನಂತರ, ವಿಶೇಷ ಅರ್ಜಿ ಮೂಲಕ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಸಂಘದ ಉಪನಿಯಮಗಳಡಿ, ಜವಾಬ್ದಾರಿಯನ್ನು ಕಾರ್ಯದರ್ಶಿ ಮತ್ತು ಕೋಷಾಧಿಕಾರಿಗಳಿಗೆ ನಿಗದಿಪಡಿಸಿದ್ದರೂ, ಅಧ್ಯಕ್ಷರು ಸಂಘದ ಮೇಲ್ವಿಚಾರಕರಾಗಿ ಮತ್ತು ಮುಖ್ಯಸ್ತರಾಗಿ ಜವಾಬ್ದಾರಿ ಹೊಂದಿದ್ದಾನೆ. ಆದ್ದರಿಂದ ಅಧ್ಯಕ್ಷರನ್ನು ಜವಾಬ್ದಾರರನ್ನಾಗಿ ಮಾಡಿರುವುದನ್ನು ಮತ್ತು ಉಚ್ಚನ್ಯಾಯಾಲಯದ ತೀರ್ಮಾನವನ್ನು ಎತ್ತಿ ಹಿಡಿಯಿತು. (1997 Indlaw SC 1003, (1997) 10 SCC 752, AIR 1997 SC 2778)

187. ರಾಜಾಸ್ತಾನ್ ಸಹಕಾರ ಕಾಯಿದೆಯಡಿ, ಒಂದು ಸಂಘ ಒಬ್ಬ ನೌಕರನ್ನು ನೋಟೀಸ್ ನೀಡದೆ ವಜಾ ಮಾಡಿದ್ದನ್ನು ಪ್ರಶ್ನಿಸಿದಾಗ, ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆ 1958ರ ಕಲಂ 28 ಎ ಕಲಂ ನಡಿ ಯಾವುದೇ ನೌಕರನ್ನು ವಜಾ/ಬಿಡುಗಡೆ ಮಾಡಲು ಒಂದು ತಿಂಗಳ ನೋಟೀಸ್ ಅಥವಾ ಒಂದು ತಿಂಗಳ ಮುಂಗಡ ಸಂಬಳ ಪಾವತಿಸದೆ ಮಾಡತಕ್ಕದ್ದಲ್ಲ ಎಂದಿದ್ದು, ರಾಜಸ್ತಾನ್ ಸಹಕಾರ ನಿಯಮ 20(ಡಿ) ಅಡಿ ಯಾವುದೇ ಒಬ್ಬ ನೌಕರನನ್ನು ಒಂದು ಅವಧಿಗೆ ಅಥವಾ ದಿನಾಂಕದಂದು ಸೇವೆಯಿಂದ ಬಿಡುಗಡೆ ಮಾಡಬಹುದು ಎಂದಿರುವುದನ್ನು ಪರಿಶೀಲಿಸಿ, ಈ ಎರಡು ವಿರೋಧಾಬಾಸದ ಅಂಶವಿದ್ದು, ಒಬ್ಬ ನೌಕರನ್ನು ತೆಗೆಯಬೇಕಾದರೆ, ಅಂಗಡಿ ಮತ್ತು ವ್ಯವಹಾರ ಸಂಸ್ಥೆ ಕಾಯಿದೆ ಕಲಂ 28ಎ ಅಡಿ ನಿರ್ಬಂಧಿಸಿರುವುದರಿಂದ, ಆಡಳಿತ ಮಂಡಳಿ ಈ ಬಗ್ಗೆ ಯಾವುದೇ ಕ್ರಿಯೆ ನಡೆಸದೆ ಇದ್ದುದರಿಂದ, ತೆಗೆದು ಹಾಕಿದ ನೌಕರನ್ನು ಮರು ನೇಮಕ ಮತ್ತು ಸಂಬಳ ಪಾವತಿಗೆ ಆದೇಶಿಸಿತು. (1997 Indlaw SC 436, (1997) 6 SCC 29, AIR 1997 SC 2687)

188. ಗುಜರಾತ್ ಸಹಕಾರ ಕಾಯಿದೆಯಲ್ಲಿ ಒಂದು ಹಾಲು ಒಕ್ಕೂಟದ ಪದಾಧಿಕಾರಿಗಳ ಆಯ್ಕೆಗೆ ಜಿಲ್ಲಾ ಕಲೆಕ್ಟರ್ ನೋಟೀಸ್ ನೀಡಿದಾಗ, ಕಾಯಿದೆ ಕಲಂ 74ಸಿ ಮತ್ತು 145(2) ರಡಿ ಮಂಡಳಿ ಅವಧಿ ಮೂರು ವರ್ಷಗಳಿದ್ದು, ಪದಾಧಿಕಾರಿಗಳ ಅವಧಿ ಮೂರು ವರ್ಷಗಳಿರಬೇಕು ಎಂಬುದನ್ನು ಗಮನಿಸಿದರೂ, ಒಕ್ಕೂಟದ ಬೈಲಾ 40.1 ರನ್ನು ವಾರ್ಷಿಕ ಸಾಮಾನ್ಯ ಸಭೆ ನಡೆದ ಒಂದು ತಿಂಗಳೊಳಗಾಗಿ ಮಂಡಳಿ ಸಭೆ ಕರೆದು ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಒಂದು ವರ್ಷದ ಅವಧಿಗೆ ಆಯ್ಕೆ ಮಾಡಲು ಅವಕಾಶ ಇರುವುದನ್ನು ಗಮನಿಸಿ, ಜಿಲ್ಲಾ ಕಲೆಕ್ಟರ್ ನೀಡಿದ ನೋಟೀಸ್ ಸರಿಯಾಗಿದೆ ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (1997 Indlaw SC 1120, (1997) 9 SCC 612, AIR 1997 SC 2273)

189. ವೆಸ್ಟ್‌ಬೆಂಗಾಳ ಸಹಕಾರಿ ಕಾಯಿದೆಯಡಿ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಫ್ಲ್ಯಾಟ್‌ಗೆ ನಾಮನಿರ್ದೇಶನ ಮಾಡಿದಾಗ, ಅಂತಹ ವ್ಯಕ್ತಿ ಆ ಫ್ಲ್ಯಾಟ್ ವಶಕ್ಕೆ ಪಡೆಯುವ ಅಧಿಕಾರ ಮಾತ್ರ. ಆ ನಾಮನಿರ್ದೇಶನ ಸಮರ್ಪಕ ಮತ್ತು ಜಾರಿಯಲ್ಲಿದೆಯೇ ಎಂಬುದನ್ನು ಪರಿಶೀಲಿಸಬೇಕು. ಇದರಿಂದ ಆ ಫ್ಲ್ಯಾಟ್ ಮೇಲೆ ಕಾನೂನು ಭದ್ದ ವಾರಸುದಾರರು ಯಾರೆಂಬುವುದನ್ನು ಪ್ರತ್ಯೇಕ ನಿರ್ಧರಿಸಬೇಕು. ಕಾಯಿದೆ ಕಲಂ 70 ರನ್ವಯ ನಾಮನಿರ್ದೇಶನ ವ್ಯಕ್ತಿ ಫ್ಲ್ಯಾಟ್‌ನ್ನು ತನ್ನ ವಶಕ್ಕೆ ಪಡೆಯುವ ಹಕ್ಕು ಮಾತ್ರ ಪ್ರಾಪ್ತವಾಗುತ್ತಿದೆ. ಕಾನೂನು ವಾರಸುದಾರರು ಯಾರೆಂಬುದನ್ನು ಪ್ರತ್ಯೇಕ ಪ್ರಕರಣ ಮತ್ತು ಪ್ರತ್ಯೇಕ ನ್ಯಾಯಾಲಯ ತೀರ್ಮಾನಿಸಬೇಕು. ಆದರೆ ನಾಮ ನಿರ್ದೇಶನ ಈ ಫ್ಲ್ಯಾಟ್ ನೀಡುವಾಗ ಊರ್ಜಿತವೇ ಎಂಬುದನ್ನು ಮಾತ್ರ ನೋಡಬೇಕು. ಈ ಪ್ರಕರಣದಲ್ಲಿ ಫ್ಲ್ಯಾಟ್

ಹಕ್ಕುದಾರರು ಯಾರೆಂದು ತೀರ್ಮಾನಿಸಲಾಗದು. (1997 Indlaw SC 2213, (1997) 10 SCC 344)

190. ಉತ್ತರ ಪ್ರದೇಶ ಕಾಯಿದೆಯಡಿ, ಒಂದು ಮಹಾಮಂಡಳ ಆದಾಯ ತೆರಿಗೆ ಕಾಯಿದೆ 1961ರ ಕಲಂ 80ಪಿ(2)(ಎ)(i) ರನ್ನು ವಿನಾಯ್ತಿ ಪಡೆಯುತ್ತಿದೆಯೇ? ಮಹಾಮಂಡಳದ ಸದಸ್ಯರು ಪ್ರಾಥಮಿಕ ಸಹಕಾರ ಸಂಘಗಳು, ಆ ಪ್ರಾಥಮಿಕ ಸಹಕಾರ ಸಂಘದ ಸದಸ್ಯರಿಗೆ ವ್ಯವಸಾಯ ಉತ್ಪನ್ನಗಳನ್ನು ಬೆಳೆಯಲು ಒಂದು ಖಾಸಗಿ ಸಂಸ್ಥೆ ಜೊತೆ ಒಪ್ಪಂದ ಮಾಡಿಕೊಂಡು ಪಂಪ್‌ಸೆಟ್ ಖರೀದಿಸಲು ಸಾಲ ನೀಡಿದ ಏಳು ದಿವಸಗಳಲ್ಲಿ ಪಾವತಿ ಮಾಡುವುದಾಗಿ ಒಪ್ಪಂದ ಮಾಡಿಕೊಂಡು, ಕಲಂ 80ಪಿ(2)(ಎ)(i) ರಡಿ ವಿನಾಯ್ತಿ ಕೇಳಿದಾಗ, ಅದನ್ನು ಪರಿಶೀಲಿಸಿ, ಪ್ರಾಥಮಿಕ ಸಂಘದ ಸದಸ್ಯರು ಮಹಾಮಂಡಳದ ಸದಸ್ಯರಲ್ಲಿ ಮತ್ತು ಅವರು ಉತ್ಪಾದಿಸಿದ ವಸ್ತುಗಳನ್ನು ಖರೀದಿ ಮಾಡಿದರೆ ಮಹಾಮಂಡಳದ ಸದಸ್ಯರಿಂದ ಖರೀದಿ ಎಂದು ಪರಿಗಣಿಸಲಾಗದು. ವ್ಯಾಪರಸ್ತರಿಂದ ಖರೀದಿ ಮಾಡಿದಂತಾಗುತ್ತದೆ. ಆದ್ದರಿಂದ ಆದಾಯ ತೆರಿಗೆ ಕಾಯಿದೆ ಕಲಂ 80ಪಿ(2)(ಎ)(i) ರನ್ವಯ ವಿನಾಯ್ತಿ ನೀಡಲಾಗದು ಎಂದು ಉಚ್ಚನ್ಯಾಯಾಲಯದ ತೀರ್ಮಾನದಲ್ಲಿ ಮಧ್ಯಪ್ರವೇಶ ಮಾಡುವ ಅವಶ್ಯಕತೆ ಇಲ್ಲ. (1997 Indlaw SC 2791, (1997) 11 SCC 287, AIR 1999 SC 1597)

191. ಉತ್ತರಪ್ರದೇಶ ಕಾಯಿದೆಯಲ್ಲಿ, ಆಡಳಿತ ಮಂಡಳಿಯಲ್ಲಿ ಹಿಂದುಳಿದ ಮತ್ತು ಮಹಿಳೆಯರಿಗೆ ಮೀಸಲಾತಿ ಪಡೆಯದಿದ್ದರೆ, ಕಾಯಿದೆಯಲ್ಲಿ ಆ ವರ್ಗದ ಸದಸ್ಯರನ್ನು ನಾಮ ನಿರ್ದೇಶನ ಮಾಡಿ ತುಂಬುವುದು ಒಂದು ವಿಧ ಮತ್ತು ಕಾಯಿದೆಯಡಿ ಆಡಳಿತ ಮಂಡಳಿ ರಚನೆಯಲ್ಲಿ ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ ಸ್ಥಾನ ಮೀಸಲಾತಿ ನೀಡಿದರೆ, ಅದು ಸಂವಿಧಾನದ ಅನುಚ್ಛೇದ 19(1)(ಸಿ) ನಡಿ ಅಸಂವಿಧಾನಿಕವಾಗುವುದಿಲ್ಲ. ರಾಜ್ಯ ಸರ್ಕಾರ ಇಂತಹ ತಿದ್ದುಪಡಿ ಮಾಡಿ ಮೀಸಲಾತಿ ನೀಡುವುದು. ಉಚ್ಚನ್ಯಾಯಾಲಯದ ತೀರ್ಪನ್ನು ಕಿತ್ತುಹಾಕಿ, ಸಹಕಾರ ಕಾಯಿದೆಯಲ್ಲಿ ಮೀಸಲಾತಿ ನೀಡಿರುವುದನ್ನು ಎತ್ತಿ ಹಿಡಿಯಿತು. (1997 Indlaw SC 2275, (1997) 3 SCC 681, AIR 1997 SC 1413)

192. ಆಂದ್ರಪ್ರದೇಶ ಸಹಕಾರ ಕಾಯಿದೆಯಲ್ಲಿ ನಿಬಂಧಕರ ಕೆಲವು ಅಧಿಕಾರಗಳನ್ನು ಅಬಕಾರಿ ಅಧೀಕ್ಷಕರಿಗೆ ನೀಡಿದ್ದು, ಒಂದು ಸಂಘದ ಸದಸ್ಯರನ್ನು ಅನರ್ಹತೆಗೊಳಿಸಲು ಅಧಿಕಾರದ ಬಗ್ಗೆ, ರಿಟ್ ಮೂಲಕ ಪ್ರಶ್ನಿಸಿದಾಗ, ಸದಸ್ಯರನ್ನು ಸ್ವೀಕರಿಸುವಾಗ (ಕಲಂ 19 ರನ್ವಯ) ಕಲಂ 21 ರಲ್ಲಿ ನಿರ್ಧರಿಸಿರುವ ಅನರ್ಹತೆಯನ್ನು ಗಮನಿಸಬೇಕು. ಒಬ್ಬ ವ್ಯಕ್ತಿ ಸದಸ್ಯನಾಗಲು ಅರ್ಹನಲ್ಲದಿದ್ದರೆ ಅಂತಹ ವ್ಯಕ್ತಿಯನ್ನು ಕಲಂ 19 ರನ್ವಯ ಸದಸ್ಯನನ್ನಾಗಿ ಸೇರಿಸಿಕೊಳ್ಳಲಾಗದು. (ಕರ್ನಾಟಕ ಸಹಕಾರ ಕಾಯಿದೆ ಕಲಂ 16 ಮತ್ತು 17ಕ್ಕೆ ಸಮಾನ) ನಿಬಂಧಕರ ಅಧಿಕಾರವನ್ನು ಅಬಕಾರಿ ಅಧೀಕ್ಷಕರಿಗೆ ನೀಡಿದ ನಂತರ ಕಲಂ 20 ರನ್ವಯ ಅನರ್ಹ ವ್ಯಕ್ತಿಯನ್ನು ಸದಸ್ಯತ್ವದಿಂದ ತೆಗೆದು ಹಾಕುವ ಅಧಿಕಾರ ಇದೆ. ಈ ತೀರ್ಮಾನವನ್ನು ಉಚ್ಚನ್ಯಾಯಾಲಯ ತೆಗೆದುಕೊಂಡಿದ್ದು ಅದರಲ್ಲಿ ಯಾವುದೇ ನ್ಯೂನತೆ ಇಲ್ಲವಾದ್ದರಿಂದ, ಮದ್ಯಪ್ರವೇಶ ಮಾಡಲು ಶ್ರೇಷ್ಠ ನ್ಯಾಯಾಲಯ ನಿರಾಕರಿಸಿ, ಪ್ರಕರಣ ವಜಾ ಮಾಡಿತು. (1997 Indlaw SC 2243, (1997) 2 SCC 695, AIR 1997 SC 1021)

193. ಉತ್ತರ ಪ್ರದೇಶ ಸಹಕಾರ ಕಾಯಿದೆಯಲ್ಲಿ ಒಂದು ಸಂಘದ ನೌಕರನನ್ನು ಸೇವೆಯಿಂದ ವಜಾ ಮಾಡಿದಾಗ ಅದನ್ನು ಪ್ರಶ್ನಿಸಿ ರಿಟ್ ದಾಖಲಿಸಿದರೆ, ಅದು ಊರ್ಜಿತವೇ? ಎಂಬ ಪ್ರಶ್ನೆಗೆ, ಉತ್ತರಿಸಿತ್ತ, ಸಂವಿಧಾನದ ಅನುಚ್ಛೇದ 226ರಲ್ಲಿ ರಿಟ್ ಅರ್ಜಿ ದಾಖಲಿಸುವ ಬಗ್ಗೆ ಚರ್ಚಿಸಬೇಕಾಗಿಲ್ಲ. ಉತ್ತರಿಸಬೇಕಾದ ಅಂಶ ಒಂದು ಸಂಘದ ಕಾರ್ಯದರ್ಶಿಯನ್ನು ಕೆಲಸದಿಂದ ತೆಗೆದು ಹಾಕಿದಾಗ, ಆ ವ್ಯಕ್ತಿ ರಿಟ್ ದಾಖಲಿಸಿದರೆ, ಅದು ಊರ್ಜಿತವೇ ಎಂಬುದು. ಕಾಯಿದೆ ಕಲಂ 38ರಲ್ಲಿ ಒಂದು ಸಂಘದ ನೌಕರನನ್ನು ನಿಬಂಧಕರು ಸಮಿತಿಗೆ ಸೂಚಿಸಿದರೂ ತೆಗೆದು ಹಾಕದಿದ್ದರೆ,

ನಿಬಂಧಕರೇ ಆ ನೌಕರರನ್ನು ತೆಗೆದು ಹಾಕಲು ಅಧಿಕಾರ ನೀಡಿದೆ. ಈ ಪ್ರಕರಣದಲ್ಲಿ ಸಮಿತಿಯೇ ತೆಗೆದು ಹಾಕಿದೆ. ಕಲಂ 38(2) ರಲ್ಲಿ ನೀಡಿರುವ ಅಧಿಕಾರ ಕಾನೂನಿನಲ್ಲಿ ನೀಡಿರುವುದರಿಂದ, ಅಂತಹ ಆದೇಶದ ಮೇಲೆ ರಿಟ್ ಊರ್ಜಿತ. ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿಹಿಡಿದು ಪ್ರಕರಣವನ್ನು ಶ್ರೇಷ್ಠ ನ್ಯಾಯಾಲಯ ವಜಾ ಮಾಡಿತು. (1997 Indlaw SC 2593, (1997) 11 SCC 144)

194. ತಮಿಳುನಾಡು ಸಹಕಾರ ಕಾಯಿದೆಯಡಿ ನೋಂದಾಯಿಸಿದ ಒಂದು ಕೈಗಾರಿಕಾ ವಸಾಹತು, ಪಂಚಾಯಿತ್‌ನಿಂದ ಅಭಿವೃದ್ಧಿ ಪಡಿಸಲು ಜಮೀನು ಪಡೆದು ನಿರ್ಮಾಣ ಮಾಡಿದ ನಂತರ, ಆ ಬಡಾವಣೆಯ ರಸ್ತೆಗಳು ಸಂಘಕ್ಕೆ ಸೇರುತ್ತಿವೇಯೇ ಅಥವಾ ಪಂಚಾಯಿತ್‌ಗೆ ಸೇರುತ್ತಿವೆಯೋ ಎಂಬ ಪ್ರಶ್ನೆಗೆ, ತಮಿಳುನಾಡು ಪಂಚಾಯಿತಿ ಕಾಯಿದೆ ಕಲಂ 175 ರನ್ವಯ ರಸ್ತೆಗಳು, ಮಾರುಕಟ್ಟೆ, ಭಾವಿ, ಕೆರೆಗಳು, ಮತ್ತಿತರ ಅಗತ್ಯಗಳ ಸ್ವಾದೀನ ಪಂಚಾಯಿತ್‌ಗೆ ನಿಗದಿ ಪಡಿಸಿರುವುದರಿಂದ, ಸಹಕಾರ ಸಂಘ ತನ್ನ ವಸಾಹತಿನ/ಬಡಾವಣೆಯ ರಸ್ತೆಗಳನ್ನು ನಿರ್ವಹಿಸುವ ಅಧಿಕಾರ ಇಲ್ಲ ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (1996 Indlaw SC 2022, (1998) 8 SCC 528)

195. ಉತ್ತರಪ್ರದೇಶ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಒಂದು ಸಂಘ ತಾನು ನೀಡಿದ ಸಾಲ ವಸೂಲಾತಿಗೆ, ಕಲಂ 39 ರಡಿ ನೀಡಿದ ಭದ್ರತೆ ಆಸ್ತಿಯನ್ನು ಮಾರಾಟ ಮಾಡಬಹುದೇ? ಸಾಲ ನೀಡಿರುವುದು ಬೀಜ ಮತ್ತು ಗೊಬ್ಬರ ಖರೀದಿಗೆ, ಎಂಬ ಅಂಶವನ್ನು ಪರಿಶೀಲಿಸಿ ಉಚ್ಚನ್ಯಾಯಾಲಯ ಭದ್ರತೆ ಆಧಾರದ ಮೇಲೆ ಸ್ಥಿರಾಸ್ತಿ ಮಾರಾಟ ಮಾಡಲು ಬರುವುದಿಲ್ಲ. ಆ ರೀತಿ ಮಾರಾಟ ಮಾಡಬೇಕಾದರೆ. ದಾವಾ ಪ್ರಕರಣ ದಾಖಲಿಸಿ ಡಿಕ್ರಿ ಪಡೆದರೆ ಮಾತ್ರ ಆಸ್ತಿ ಹರಾಜು/ಮಾರಾಟ ಮಾಡಬಹುದು. ಕಲಂ 39 ಮತ್ತು ಕಲಂ 91 ರಲ್ಲಿ ಭದ್ರತೆ ಕೊಟ್ಟಾಗ ಅನುಸರಿಸಬೇಕಾದ ನೀತಿ. ಕಾನೂನಾತ್ಮಕವಾಗಿ ಭದ್ರತೆ ನೀಡಿದ್ದರೆ ಮಾತ್ರ, ಆಸ್ತಿ ಮಾರಾಟ ಮಾಡಬಹುದು. ಆದ್ದರಿಂದ ಉಚ್ಚನ್ಯಾಯಾಲಯ ನೀಡಿದ ಆದೇಶ ಸಮರ್ಪಕವಾಗಿದೆ ಎಂದು ಶ್ರೇಷ್ಠ ನ್ಯಾಯಾಲಯ ಪ್ರಕರಣವನ್ನು ವಜಾ ಮಾಡಿತು. (1996 Indlaw SC 1624, (1997) 2 SCC 682)

196. ಬಹುರಾಜ್ಯ ಸಹಕಾರ ಕಾಯಿದೆಯಡಿ ನೋಂದಾಯಿತವಾದ, ಗೋವಾ ರಾಜ್ಯ ಸಹಕಾರ ಬ್ಯಾಂಕ್, ತನ್ನ ಬೈಲಾವನ್ನು ತಿದ್ದುಪಡಿ ಮಾಡಿ ಚುನಾವಣೆ ನಡೆಸುವಾಗ ಅನುಸರಿಸಬೇಕಾದ ನಿಯಮವನ್ನು ಅನುಬಂಧ 2 ರಿಂದ 7 ರಂತೆ ಮಾಡಲು ತೀರ್ಮಾನಿಸಿದ್ದು, ಉಚ್ಚನ್ಯಾಯಾಲಯ ತೀರ್ಮಾನ ಮಾಡುವಾಗ ಉಪನಿಯಮಗಳ ತಿದ್ದುಪಡಿಯನ್ನು ನಿಬಂಧಕರು ಒಪ್ಪಿದ್ದಾರೆಂಬ ಅಭಿಪ್ರಾಯಕ್ಕೆ ಎಂದು ತೀರ್ಮಾನಿಸಿದೆ. ಕೇಂದ್ರ ನಿಬಂಧಕರಿಗೆ ಪ್ರಮಾಣ ಪತ್ರ ಸಲ್ಲಿಸಲು ಸೂಚಿಸಿದಾಗ, ನಿಬಂಧಕರು 6–9–1994 ರಂದು ತಿದ್ದುಪಡಿ ಮಾಡಲಾಗಿದೆ ಎಂದು ಸಲ್ಲಿಸಿದ ನಂತರ ಆಡಳಿತ ಮಂಡಳಿ ರಚನೆ ಬಗ್ಗೆ ಪರಿಶೀಲಿಸಿದ್ದು. ಆ ನಂತರ ದಿನಾಂಕ 8–2–1996 ರಂದು ಮತ್ತು ಉಪನಿಯಮಗಳನ್ನು ತಿದ್ದುಪಡಿ ಮಾಡಿ ಅದರಲ್ಲಿ ಬಹುರಾಜ್ಯ ಕಾಯಿದೆಯಡಿ ಗೋವಾ ರಾಜ್ಯ ಸಹಕಾರ ಬ್ಯಾಂಕ್ ಎಂದು ನೋಂದಾಯಿಸುವುದನ್ನು ಗಮನಿಸಿದೆ. ಉಚ್ಚನ್ಯಾಯಾಲಯದ ತೀರ್ಪನ್ನು ರದ್ದುಗೊಳಿಸಿ, ಹೊಸದಾಗಿ ಬಹುರಾಜ್ಯ ಕಾಯಿದೆ ಅನುಬಂಧದಂತೆ ಚುನಾವಣೆ ಮಾಡಲು ನಿರ್ದೇಶನ ನೀಡಿತು. (1996 Indlaw SC 1520, AIR 1996 SC 1801)

197. ಮಧ್ಯಪ್ರದೇಶ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಬ್ಯಾಂಕ್‌ನ ನೌಕರನ್ನು ತೆಗೆದು ಹಾಕಿದ ನಂತರ (ವಿಚಾರಣೆ ನಡೆಸಿ) ಕಾರ್ಮಿಕ ನ್ಯಾಯಾಲಯದಲ್ಲಿ ಮರು ನೇಮಕಾತಿ ಮತ್ತು ಸಂಬಳ ಪಾವತಿಗೆ ಆದೇಶಿಸಿದರು. ಈ ಆದೇಶವನ್ನು ಉಚ್ಚನ್ಯಾಯಾಲಯ ರದ್ದುಗೊಳಿಸಿತು.

ಈ ಆದೇಶಕ್ಕೆ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಕೈಗಾರಿಕ ವಿವಾದ ಕಾಯಿದೆ 1947 ಕಲಂ 10(1)(ಡಿ) ಮತ್ತು ಮಧ್ಯಪ್ರದೇಶ ಸಹಕಾರ ಕಾಯಿದೆ ಕಲಂ 93 ರನ್ವಯ, ಕಾರ್ಮಿಕ ನ್ಯಾಯಾಲಯದಲ್ಲಿ ಹೂಡಿದ ಪ್ರಕರಣ ಸರಿ ಇದೆ ಎಂದು ಮತ್ತೊಂದು ಉಚ್ಚನ್ಯಾಯಾಲಯದ ತೀರ್ಪಿನಲ್ಲಿ ಇದಕ್ಕೆ ಪೂರಕವಾದ ತೀರ್ಪು ನೀಡಿದೆ ರಾಷ್ಟ್ರೀಯ ಕದನ್ ಮಜದೂರು ಸಹಕಾರ ಸಮಿತಿ ನಿಯಮ ಮತ್ತು ಕಾರ್ಮಿಕ ನ್ಯಾಯಾದೀಕರಣದ ಪ್ರಕರಣ ಉಲ್ಲೇಖಿಸಿದಾಗ, ಈ ಪ್ರಕರಣಕೂ ಹಾಲಿ ಪ್ರಕರಣಕ್ಕೂ, ವ್ಯತ್ಯಾಸವಿದೆ ಎಂದು ಮೇಲ್ಮನವಿಯನ್ನು ವಜಾ ಮಾಡಿತು. (1996 Indlaw SC 2085, (1997) 9 SCC 354)

198. ಪಂಜಾಬ್ ಸಹಕಾರ ಕಾಯಿದೆ ಮತ್ತು ಉತ್ತರಪ್ರದೇಶ ಜಾದ್ಯೋಗಿತ ವಿವಾದ ಕಾಯಿದೆ 1947 ರಡಿ ಒಪ್ಪಂದ ಮಾಡಿಕೊಂಡಾಗ (ತುಟ್ಟಿ ಭತ್ಯ ಪಾವತಿ ಬಗ್ಗೆ) ಆ ಒಪ್ಪಂದದ ಊರ್ಜಿತತೆ ಬಗ್ಗೆ ವಿವಾದ ಏರ್ಪಟ್ಟಾಗ, ಒಪ್ಪಂದದ ಅವಧಿಯನ್ನು ಮುಂದುವರಿಸುತ್ತಾರೆಂದರು, ಕಾಯಿದೆಯಲ್ಲಿ ಮಾಡಿದ ತಿದ್ದುಪಡಿಗಳಿಗೆ, ಒಪ್ಪಂದ ಪೂರಕವಾಗಿದ್ದರೆ ಮಾತ್ರ ಅದನ್ನು ಜಾರಿ ಮಾಡಬಹುದು. ಒಪ್ಪಂದ ಕಾನೂನು ತಿದ್ದುಪಡಿಗೆ ವಿರುದ್ದವಾಗಿದ್ದರೆ, ಕಾನೂನಿನ ಅಂಶಗಳನ್ನು ಪಾಲಿಸಬೇಕು ಒಪ್ಪಂದವನ್ನು ಜಾರಿ ಮಾಡಲಾಗದು. (1996 Indlaw SC 3860, 1997 (2) LLJ 631)

199. ಪಂಜಾಬ್ ಸಹಕಾರ ಕಾಯಿದೆಯಡಿ, ಕೇಂದ್ರ ಸಹಕಾರ ಬ್ಯಾಂಕ್, ತನ್ನ ನೌಕರ ಜೊತೆ ಒಪ್ಪಂದ ಮಾಡಿಕೊಂಡಿದ್ದು (ದಿನಾಂಕ 28–5–73) 4 ವರ್ಷದ ಅವಧಿ ನಿಗದಿ ಪಡಿಸಿದರು. (31–3–1977) ಅದನ್ನು ಮುಂದುವರಿಸಲು ತೀರ್ಮಾನಿಸಿದರು. ಈ ಮಧ್ಯ ಸಹಕಾರ ಕಾಯಿದೆ ಕಲಂ 84–ಬಿ ಸೇರಿಸಿ, ಸಹಕಾರ ಸಂಸ್ಥೆ ನೌಕರರು ಸರ್ಕಾರದ ನೌಕರರಿಗೆ ನೀಡುವ ತುಟ್ಟಿ ಭತ್ಯಗಿಂತ ಹೆಚ್ಚು ಭತ್ಯ ತೆಗೆದುಕೊಳ್ಳತಕ್ಕದ್ದಲ್ಲವೆಂದು ಶರತ್ತು ವಿಧಿಸಿತ್ತು. ಈ ಸಮಯದಲ್ಲಿ ಬ್ಯಾಂಕ್ ನೌಕರರಿಗೆ ತುಟ್ಟಿ ಭತ್ಯೆ ಶರತ್ತು ಜಾದೊಗಿಕ ಕಾಯಿದೆ ಕಲಂ 19 ರನ್ವಯ ಸೇವಾ ಶರತ್ತುಗಳನ್ನು ಬದಲಾವಣೆ ಮಾಡಲಾಗದು ಎಂದು ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯದ ವಿಭಾಗೀಯ ಪೀಠ, ಒಪ್ಪಂದದ ಶರತ್ತುಗಳನ್ನು ಬದಲಾವಣೆ ಮಾಡಲಾಗದು ಎಂಬ ತೀರ್ಮಾನವನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ನೌಕರರು ಮತ್ತು ಬ್ಯಾಂಕ್ ಒಪ್ಪಂದ ಮಾಡಿಕೊಂಡಾಗ, ಆ ಒಪ್ಪಂದ ಇಬ್ಬರಿಗೇ ಬಂದನಕಾರಿ. ಆದರೆ, ಈ ಒಪ್ಪಂದದಿಂದ ಶಾಸನ ಸಭೆ ಕಾನೂನು ಮಾಡುವುದು ಮತ್ತು ತಿದ್ದುಪಡಿ ಮಾಡುವ ಅಧಿಕಾರವನ್ನು ತಡೆಹಿಡಿಯಲಾಗದು. ಅಂದರೆ ಕಾನೂನು ತಿದ್ದುಪಡಿಯಾದಾಗ ಆ ತಿದ್ದುಪಡಿಗೆ ವಿರುದ್ದವಾಗಿ ಒಪ್ಪಂದ ಮಾಡಿಕೊಂಡಿದ್ದರೆ, ಆ ಒಪ್ಪಂದ ಅಸಿಂದುವಾಗುತ್ತದೆ. ಒಪ್ಪಂದ ಕಾನೂನಿಗೆ ವಿರುದ್ದವಾಗಿದ್ದರೆ ಅದನ್ನು ಮುಂದುವರಿಸಲಾಗದು, ಜಾದ್ಯೋಗಿಕ ಕಾಯಿದೆ ಕಲಂ 19(2) ಒಪ್ಪಂದವನ್ನು ಮುಂದುವರಿಸುವ ಬಗ್ಗೆ ಮಾತ್ರ, ಅವಕಾಶ ಕಲ್ಪಿಸುತ್ತದೆ, ಮತ್ತು ಅದನ್ನು ಕಾನೂನಿನ ತಿದ್ದುಪಡಿಗೆ ವಿರುದ್ದ ಬಂದಿಸುವುದಿಲ್ಲ. (1996 Indlaw SC 1281, (1996) 11 SCC 202, AIR 1996 SC 3944)

200. ಬಹು ರಾಜ್ಯ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಹರಿಜನ ಜಾದ್ಯೋಗಿಕ ಸಂಘದಲ್ಲಿ ಶೇ.80% ರಷ್ಟು ಹರಿಜನ ಶೇ.20% ರಷ್ಟು ಇತರರನ್ನು ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳಲು ಅವಕಾಶ ವಿದ್ದು, ಅದಕ್ಕಾಗಿ 2 ಎಕರೆ ಜಮೀನನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿತು. ಪ್ರಾರಂಭದಲ್ಲಿ 28 ಪರಿಶಿಷ್ಟ ಜಾತಿ ಮತ್ತು 5 ಇತರ ಹಿಂದುಳಿದ ಪಂಗಡದ ಸದಸ್ಯರಿದ್ದರು. ಒಟ್ಟಾಗಿ 112 ಸದಸ್ಯರನ್ನು ಹೊಂದಲು ಅವಕಾಶ ಮಾಡಿದ್ದು. ಅಂದರೆ 90 ಪರಿಶಿಷ್ಟ ಜಾತಿ ಮತ್ತು 22 ಇತರರು ಇರಬಹುದು. ಅದ್ಯಕ್ಷರ ಸದಸ್ಯತ್ವಕ್ಕೆ ಅರ್ಜಿ ಆಹ್ವಾನಿಸಿದಾಗ 78 ಅರ್ಜಿ ಸ್ವೀಕೃತವಾಗಿದ್ದು ಆ ಅರ್ಜಿಗಳನ್ನು ಸದಸ್ಯತ್ವಕ್ಕೆ ಸ್ವೀಕರಿಸಲು ನಿಬಂಧಕರು ಸೂಚನೆ ನೀಡಿದರು. ಇದನ್ನು ಪ್ರಶ್ನಿಸಿ

ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ನಿಬಂಧಕರ ನಿರ್ದೇಶನ ಪಾಲಿಸುವಂತೆ ತೀರ್ಮಾನಿಸಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದಾಗ, ಸಂಘದ ಉದ್ದೇಶ ಪರಿಶಿಷ್ಟ ಜಾತಿಗೆ ಪ್ರಾಶಸ್ತ್ಯ ಕೊಡುವುದಿದ್ದು ನಿಬಂಧಕರ ಮತ್ತು ಉಚ್ಚನ್ಯಾಯಾಲಯದ ತೀರ್ಮಾನ ಅಸಿಂದು ಎಂದು ತೀರ್ಮಾನಿಸಿ, ಉಪನಿಯಮದಲ್ಲಿನಂತೆ ಪರಿಶಿಷ್ಟ ಜಾತಿಗೆ ಪ್ರಾಶಸ್ತ್ಯ ನೀಡಬೇಕು. ಆದ್ದರಿಂದ 78 ಅರ್ಜಿಗಳಲ್ಲಿ ಪರಿಶಿಷ್ಟಜಾತಿಗೆ ಸೇರಿದ ಅರ್ಜಿಗಳನ್ನು ಪರಿಶೀಲಿಸಿ ಅಂಗೀಕರಿಸಲು ನಿರ್ದೇಶಿಸಿತು. (1996 Indlaw SC 3633, (1996) 9 SCC 300, AIR 1996 SC 2151)

201. ರಾಜಾಸ್ತಾನ್ ಸಹಕಾರಿ ಕಾಯಿದೆಯಲ್ಲಿ "ಸಾಮಾನ್ಯ ಸೇವಾ ಪ್ರಾಧಿಕಾರ"ಕ್ಕೆ ಅವಕಾಶ ಕಲ್ಪಿಸಿದ್ದು, ಅದಕ್ಕೆ ಪೂರಕವಾಗಿ ಸೇವಾ ನಿಯಮಗಳನ್ನು ರಚಿಸಿತ್ತು. ಇದು ನಿಬಂಧಕರಿಗೆ ನೀಡಿದ ಅಧಿಕಾರ (ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಾಗಿ). ಈ ಪ್ರಾಧಿಕಾರ ಒಂದು ಸಹಕಾರ ಸಂಘವಲ್ಲ. ನಿಬಂಧಕರು ಒಂದು ಹುದ್ದೆಗೆ ಅವಶ್ಯಕವಾದ ವಿದ್ಯಾರ್ಹತೆ ಮತ್ತು ಅರ್ಹತೆಯನ್ನು ನಿಗದಿ ಪಡಿಸುವ ಅಧಿಕಾರ ಮಾತ್ರ ಇದೆ. ಅವರಿಗೆ ನೇಮಕಾತಿ ಮಾಡುವ, ನಿಧಿ ಸೃಷ್ಟಿಸುವ, ಮತ್ತು ಬ್ಯಾಂಕಿನ ನಿಯಮದಲ್ಲಿ ಬರುವ ವೇತನ ಕಾರ್ಯದರ್ಶಿ ನೇಮಿಸುವ ಅಧಿಕಾರ ಇಲ್ಲ. ಉಚ್ಚನ್ಯಾಯಾಲಯ ನೀಡಿದ ತೀರ್ಮಾನ ಸಾಮಾನ್ಯ ಸೇವಾ ಪ್ರಾಧಿಕಾರ, ಒಂದು ಸಹಕಾರ ಸಂಘವಲ್ಲ ಮತ್ತು ನಿಬಂಧಕರು ನಿಯಮ ರೂಪಿಸಲು ಅಧಿಕಾರ ಇಲ್ಲ ಎಂಬುದನ್ನು ಪುರಸ್ಕರಿಸಿತು. ಅಂದರೆ ಪ್ರಾಥಮಿಕ ಸಂಘವು ಕಾರ್ಯದರ್ಶಿ ನೇಮಿಸುವಾಗ ವಿದ್ಯಾರ್ಹತೆ, ನಿಬಂಧಕರು ನಿಗದಿ ಪಡಿಸಿದಂತೆ ಇರತಕ್ಕದ್ದು. ಸಾಮಾನ್ಯ ಸೇವಾ ಪ್ರಾಧಿಕಾರ ನೇಮಿಸಿದ ನೌಕರರು ಪ್ರಾಥಮಿಕ ಸಂಘದ ನೌಕರರಲ್ಲ. (1996 Indlaw SC 2569, (1996) 8 SCC 391)

202. ರಾಜಸ್ತಾನ್ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಒಂದು ಜಿಲ್ಲಾ ಬ್ಯಾಂಕ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಾಲ ಮಂಜೂರಿ ಮಾಡುತ್ತಿದ್ದು, ಪ್ರಾಥಮಿಕ ಸಂಘದ ವ್ಯವಸ್ಥಾಪಕ ಹಣ ದುರುಪಯೋಗ ಮಾಡಿಕೊಂಡಾಗ, ಅವನ ಮೇಲೆ ಹಣ ದುರುಪಯೋಗದ ಆರೋಪದ ಮೇಲೆ ಶಿಸ್ತು ಕ್ರಮವಾಗಿ ಅಮಾನತ್ತುಗೊಳಿಸಿ, ಆರೋಪಪಟ್ಟಿ ತಯಾರಿಸಿ, ಜಾರಿ ಮಾಡಿದ ನಂತರ, ವಿಚಾರಣಾಧಿಕಾರಿ ನೀಡಿದ ವರದಿಯ ಆಧಾರದ ಮೇಲೆ ವಜಾ ಗೊಳಿಸಲಾಯಿತು. ಇದನ್ನು ಪ್ರಶ್ನಿಸಿ ಸಿವಿಲ್ ನ್ಯಾಯಾಲಯ ಪ್ರಕರಣ ದಾಖಲಿಸಿ, ಪ್ರಾಥಮಿಕ ಸಂಘವನ್ನು ಎದುರು ಅರ್ಜಿದಾರರನ್ನಾಗಿ ಮಾಡಿದರು. ಈ ಮಧ್ಯ ರಾಜಸ್ತಾನ ಅಂಗಡಿ, ಮತ್ತು ವಾಣಿಜ್ಯ ಕಾಯಿದೆಯಡಿ ಪ್ರತ್ಯೇಕ ಪ್ರಕರಣ ದಾಖಲಿಸಿದರು. ಅದರಲ್ಲಿ ವಿಳಂಬ ವಿನಾಯ್ತಿ ಬಗ್ಗೆ ಪ್ರಶ್ನಿಸಿದಾಗ, ಅರ್ಜಿದಾರ ನೌಕರ ಆದೇಶದ ಪ್ರತಿಯನ್ನು ದಿನಾಂಕ 02–01–1985 ರಲ್ಲಿ ಪಡೆದಿದ್ದು – (ಆದೇಶದ ದಿನಾಂಕ 1–7–1983) ವಿಳಂಬವಾಗಿಲ್ಲವೆಂದು. ಆರೋಪಿತ ನೌಕರ ಹಣ ತುಂಬಲು ಒಪ್ಪಿದ್ದು, ಇದರ ಆಧಾರದ ಮೇಲೆ ಪ್ರಕರಣ ತೀರ್ಮಾನ ಮಾಡಬೇಕಾಗಿತ್ತು ಮತ್ತು ಪ್ರಾಥಮಿಕ ಸಂಘ ದುರುಪಯೋಗದ ಬಗ್ಗೆ ಪ್ರತಿಪಾದಿಸಿ ಆದೇಶ ಪಡೆಯಬಹುದಾಗಿತ್ತು. ಇದಕ್ಕೆ ಬದಲಾಗಿ ವಿವಿದ ನ್ಯಾಯಾಲಯಗಳಲ್ಲಿ ಪ್ರಕರಣ ನಡೆಸುತ್ತಾ ಸಮಸ್ಯೆಯನ್ನು ಕ್ಲಿಷ್ಟಕರವಾಗಿ ಮಾಡಿದೆ. ಅಂದರೆ ಸಿವಿಲ್ ನ್ಯಾಯಾಲಯ, ಅಂಗಡಿ/ವಾಣಿಜ್ಯ ಮಳಿಗೆ ಕಾಯಿದೆ, ರಿಟ್ ಅರ್ಜಿ ಮೂಲಕ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಿಲ್ಲ. ಇದೇ ನ್ಯಾಯಾಲಯದ AIR 1989 SC 1185/1989 Indlaw SC 20 ರಲ್ಲಿ ತೀರ್ಮಾನಿಸಿದ ಪ್ರಕರಣದಲ್ಲಿ ರುಜು ವಾತಾದ ಆರೋಪ ಮಾಡಿ ಶಿಕ್ಷೆ ಪ್ರಮಾಣದ ಬಗ್ಗೆ ಇದ್ದ, ಈ ಪ್ರಕರಣಕ್ಕೆ ಅನ್ವಯಿಸಿದು. ಇದರಲ್ಲಿ ಆರೋಪ ರುಜು ವಾತಾದ ಬಗ್ಗೆ ಯಾವುದೇ ದಾಖಲೆ/ತೀರ್ಮಾನವಾಗಿಲ್ಲ, ಆದ್ದರಿಂದ ಶಿಕ್ಷೆ ನೀಡುವುದು ಸೂಕ್ತವಲ್ಲ, ಸಂಘದ ಮೇಲ್ಮನವಿಯನ್ನು ಶ್ರೇಷ್ಠ ನ್ಯಾಯಾಲಯ ತಿರಸ್ಕರಿಸಿತು. (1996 Indlaw SC 3995, (1996) 2 SCC 1)

203. ರೈಲ್ವೆ ನೌಕರರು ಮತ್ತು ರೈಲ್ವೆ ನೌಕರರ ಸಹಕಾರ ಗೆಲ್ಸಾರ್, ಒಂದೇ ಸೇವಾ ನಿಯಮವೆಂದು ಭಾವಿಸತಕ್ಕದ್ದಲ್ಲ. ರೈಲ್ವೆ ಇಲಾಖೆ ತನ್ನ ನೌಕರ ಕ್ಷೇಮಾವದಿ ವೃದ್ಧಿಗೆ ಒಂದು ಸಹಕಾರ ಸ್ಟೋರ್ ಸ್ಥಾಪಿಸಿದಾಗ, ಅದು ಒಂದು ಸಹಕಾರ ಸಂಘ. ಆ ಸಂಘದ ನೌಕರರು ರೈಲ್ವೆ ನೌಕರರಲ್ಲಿ, ನೀಡುವ ಭಡ್ತಿ, ವೇತನ, ವೇತನ ಶ್ರೇಣಿ, ವಾರ್ಷಿಕ ಭಡ್ತಿ ಇತ್ಯಾದಿ ಸೌಲತ್ತುಗಳು ಪಡೆಯಲು ಅರ್ಹರಲ್ಲ, ಏಕೆಂದರೆ, ಸಹಕಾರ ಸಂಘ ನೌಕರರು ರೈಲ್ವೆ ನೌಕರರಲ್ಲಿ ಅವರಿಗೆ ಪ್ರತ್ಯೇಕ ಸೇವಾ ನಿಯಮಗಳು ರಚನೆಯಾಗಬೇಕು. (1995 Indlaw SC 1919, (1996) 2 SCC 258, AIR 1996 SC 2590)

204. ಪಂಜಾಬ್ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಸಂಘದ ನೌಕರ ಮರಣ ಹೊಂದಿದ್ದಾಗ, ಅವನ ವಾರಸುದಾರರ ಜವಾಬ್ದಾರಿ ನಿಗದಿ ಪಡಿಸುವಾಗ, ಹಣ ದುರುಪಯೋಗ ಮಾಡಿಕೊಂಡಿದ್ದ ಬಗ್ಗೆ ದಾವಾ ದಾಖಲಿಸಿ ದುರುಪಯೋಗವಾದ ಹಣಕ್ಕೆ ಕಾನೂನು ವಾರಸುದಾರರು ಜವಾಬ್ದಾರೆಂದು ಬಾಕಿ ಹಣಕ್ಕೆ 16% ಬಡ್ಡಿ ಮತ್ತು ಶೇ.2% ಪ್ರಕರಣದ ಖರ್ಚೆಂದು ನಿಗದಿ ಪಡಿಸಿದಾಗ, ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯ ಮಧ್ಯಸ್ತಿಗಾರರ ಆದೇಶವನ್ನು ಎತ್ತಿ ಹಿಡಿಯಿತು ಮತ್ತು ರಿಟ್ ವಜಾ ಮಾಡಿತು. ಇದನ್ನು ಪ್ರಶ್ನಿನಿಸಿ ಶ್ರೇಷ್ಠ ನ್ಯಾಯಾಲಯ ಪ್ರಶ್ನಿಸಿದಾಗ ಕಾನೂನು ವಾರಸುದಾರರನ್ನು ಜವಾಬ್ದಾರರನ್ನಾಗಿ ಮಾಡಲಾಗದು. ಇದೇ ಪ್ರಕರಣವನ್ನು ಮತ್ತೊಮ್ಮೆ ಪ್ರಶ್ನಿಸಿದರೆ ಅದು ರೆಸಜುಡಿಕೆಲಾ ಆಗುವುದಿಲ್ಲ. (1995 Indlaw SC 784, (1996) 7 SCC 32)

205. ಮಹಾರಾಷ್ಟ್ರ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ, ಸಕ್ಕರೆ ಕಾರ್ಖಾನೆಗಳು ಸಹಕಾರ ಸಂಘದ ಸದಸ್ಯರು ಸರಬರಾಜು ಮಾಡಿದ ಕಬ್ಬು ಮತ್ತು ಸಹಕಾರ ಸಂಘಗಳ ಸದಸ್ಯರಲ್ಲದ ವ್ಯಕ್ತಿಗಳಿಗೆ ದರ ನಿಗದಿ ಪಡಿಸಿದಾಗ, ಸಹಕಾರ ಸಂಘದ ಸದಸ್ಯರಿಗೆ ಕೇಂದ್ರ ಸರ್ಕಾರ ನಿಗದಿ ಪಡಿಸಿದ ದರದಲ್ಲಿ ಪಾವತಿ ಮಾಡಬೇಕು. ಯಾವುದೇ ಸಹಕಾರ ಸಂಘದ ಸದಸ್ಯರಲ್ಲಿದ ವ್ಯಕ್ತಿಗಳಿಗೆ ಒಪ್ಪಂದದ ದರದಲ್ಲಿ ಪಾವತಿ ಮಾಡುವ ವ್ಯವಸ್ಥೆಯಲ್ಲಿ ವ್ಯತ್ಯಾಸ ಇರುವುದನ್ನು ಪ್ರಶ್ನಿಸಿದಾಗ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ತನ್ನ ತೀರ್ಮಾನದಲ್ಲಿ (1) ಸಹಕಾರ ಸಂಘದ ಸದಸ್ಯರಲ್ಲದ ವ್ಯಕ್ತಿಗಳು ಸರಬರಾಜು ಮಾಡಿದ ಕಬ್ಬಿಗೆ ಮಾರುಕಟ್ಟೆ ದರದಲ್ಲಿ ಲೆಕ್ಕ ಹಾಕಿ ಪಾವತಿಸತಕ್ಕದ್ದು. (2) ಮಾರುಕಟ್ಟೆ ದರೆ ಎಂದರೆ ಕಾರ್ಖಾನೆ ಮತ್ತು ಕಬ್ಬು ಸರಬರಾಜು ಮಾಡುವ ವ್ಯಕ್ತಿ ಮಾಡಿಕೊಂಡ ಒಪ್ಪಂದದ ದರದಲ್ಲಿ ವಿವಾದವೇರ್ಪಟ್ಟರೆ ಒಂದು ಪ್ರಾಧಿಕಾರ ಇದನ್ನು ನಿಗದಿ ಪಡಿಸತಕ್ಕದ್ದು. (3) ಕಬ್ಬುದರ ಪಾವತಿ ಮಾಡುವಾಗ ಯಾವುದೇ ರೀತಿ ಕಡಿತ ಮಾಡತಕ್ಕದ್ದಲ್ಲ. ಅಂದರೆ ಸರಬರಾಜು ಮಾಡಿದ ವ್ಯಕ್ತಿಯ ಅನುಮತಿ ಇಲ್ಲದೆ. ಈ ತೀರ್ಮಾನಕ್ಕೆ ಎರಡು ಪ್ರಮುಖ ಕಾರಣಗಳನ್ನು ನೀಡಿದೆ (1) ಸಹಕಾರ ಸಂಘದ ಸದಸ್ಯರಲ್ಲಿದವರು ಸರ್ಕಾರ ನಿಗದಿ ಪಡಿಸಿದ ದರಕ್ಕೆ ಭದ್ದರಲ್ಲ (2) ಸರ್ಕಾರ ಸದಸ್ಯರಲ್ಲದವರನ್ನು ದರ ನಿಗದಿ ಮಾಡುವಾಗ ಅಭಿಪ್ರಾಯ ಕೇಳುವುದಿಲ್ಲ. ಸರ್ಕಾರ ಈ ನೀತಿ ಅನುಸರಿಸುವುದು ಸಾರ್ವಜನಿಕರಿಗೆ ಸಕ್ಕರೆ ಸರಬರಾಜು ಮಾಡಲು ಅನುಸರಿಸುವ ಒಂದು ನೀತಿ. ಶ್ರೇಷ್ಠ ನ್ಯಾಯಾಲಯ ತನ್ನ ತೀರ್ಪಿನಲ್ಲಿ ರಾಜ್ಯ ಸರ್ಕಾರ ಪ್ರತಿ ಹಂಗಾಮಿನಲ್ಲಿ ದರ ನಿಗದಿ ಪಡಿಸುವ ಮೊದಲು ಒಂದು ತಂತ್ರಜ್ಞರ ಸಮಿತಿ ರಚಿಸಿ, ಆ ವರದಿ ಆಧಾರದ ಮೇಲೆ ದರ ನಿಗದಿ ಪಡಿಸುವುದು – ದರ ನಿಗದಿ ಪಡಿಸುವಾಗ ಸಕ್ಕರೆ ಉತ್ಪಾದನೆಯನ್ನು ಆಧರಿಸಬೇಕು. ಸದಸ್ಯೇತರರಿಗೆ ನ್ಯಾಯಾಲಯ ನಿಗದಿ ಪಡಿಸಿದ ದರ ರೂ.600/– ಸಮರ್ಪಕವೇ ಎಂಬುದನ್ನು ಪರಿಶೀಲಿಸಬೇಕು. ಇದರ ಜೊತೆಗೆ ಸಕ್ಕರೆ ಕಾರ್ಖಾನೆಗಳ ಬೈಲಾ 65 ರಂತೆ ದರ ನಿಗದಿ ಸದಸ್ಯೇತರರಿಗೂ ಅನ್ವಯಿಸಬೇಕೆ ಮತ್ತು ನ್ಯಾಯಾಲಯದ ತೀರ್ಮಾನದಂತೆ ರೂ.600/– ದರವನ್ನು ಸದಸ್ಯೇತರರಿಗೆ ಕೊಡಲು ಸೂಚಿಸಿದರೂ, ಆ ವ್ಯಕ್ತಿ ರೂ.145/–ಕ್ಕೆ ಬ್ಯಾಂಕ್ ಗ್ಯಾರೆಂಟಿ

ಕೊಡಬೇಕೆಂದು ಶರತ್ತು ವಿಧಿಸಿತು. ಆದರೆ ಹಣ ಪಾವತಿಸಿದ ನಂತರ (ರೂ.600/–) ಅದನ್ನು ವಾಪಸ್ ಪಡೆಯಲು ಕಾರ್ಯಾನೆಗಳ ಕ್ರಮ ಜರುಗಿಸತಕ್ಕದ್ದಲ್ಲವೆಂದು ಆದೇಶಿಸಿತು. ಈ ನಿರ್ದೇಶನ ಸದಸ್ಯೇತರರಿಗೆ ಅನ್ವಯಿಸತಕ್ಕದ್ದು ಮತ್ತು ಸಂವಿದಾನದ ಅನುಚ್ಛೇದ 14 ಮತ್ತು 19ಕ್ಕೆ ವಿರುದ್ಧವಲ್ಲವೆಂದು ತೀರ್ಮಾನಿಸಿತು. (1995 Indlaw SC 1023, (1995) 3 SCC 475, AIR 1995 SCW 2338)

206. ಪಂಜಾಬ್ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಭೂ ಅಡಮಾನ ಬ್ಯಾಂಕ್, ತನ್ನ ನೌಕರ ಮೇಲೆ ಶಿಸ್ತು ಕ್ರಮ ಜರುಗಿಸಿ, ಎರಡು ವಾರ್ಷಿಕ ವೇತನ ನಿಲ್ಲಿಸಿದ ಬಗ್ಗೆ ವಿವಾದವೇರ್ಪಟ್ಟಿತು. ಈ ಶಿಕ್ಷೆ ವಿಧಿಸುವಾಗ ಆರೋಪ ಪಟ್ಟಿಯನ್ನು ನೀಡಿ, ವಿವರಣೆ ನೀಡಲು ಅವಕಾಶ ನೀಡಲಿಗಿತ್ತು, ಇದನ್ನು ಪರಿಶೀಲಿಸಿದ ನಂತರ ಆಡಳಿತ ಮಂಡಳಿ ಒಂದು ಕಾರಣಕೇಳುವ ನೋಟೀಸ್ ಜಾರಿ ಮಾಡಿ, ಅದಕ್ಕೆ ಉತ್ತರ ಪಡೆದು, ಎರಡು ಮಾಸಿಕ ವೇತನ ಭಡ್ತಿ ನಿಲ್ಲಿಸಿದೆ. ಸಿವಿಲ್ ನ್ಯಾಯಾಲಯದಲ್ಲಿ ಇದನ್ನು ಪ್ರಶ್ನಿಸಿದಾಗ, ವಜಾ ಮಾಡಿತು. ಅದರ ಮೇಲೆ ಮೇಲ್ಮನವಿ ಸಲ್ಲಿಸಿದಾಗ, ಅದನ್ನು ಒಪ್ಪಿ ಪುನಃ ಸಿವಿಲ್ ನ್ಯಾಯಾಲಯದ ವಿಚಾರಣೆ ಮಾಡಲು ಸೂಚಿಸಿತು. ಈ ಮಧ್ಯೆ ಬ್ಯಾಂಕ್ ರಿಟ್ ಅನ್ನು ದಾಖಲಿಸಿದಾಗ ಸಿವಿಲ್ ದಾವೆ ಹೂಡಲಾಗಿದು ಎಂದು ತೀರ್ಮಾನಿಸಿತ್ತು. ಈ ತೀರ್ಮಾನದ ಮೇಲೆ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಗೆ ಬಂದಿತು. ಶ್ರೇಷ್ಠ ನ್ಯಾಯಾಲಯ ಒಂದು ಭೂ ಬ್ಯಾಂಕ್‌ನ್ನು ಸರ್ಕಾರ ಎಂದು ತೀರ್ಮಾನಿಸುವ ಅವಶ್ಯಕತೆ ಇಲ್ಲ. ಶಿಕ್ಷೆಯ ನೀಡಿದ ಬಗ್ಗೆ ವಿಮರ್ಶಿಸಬೇಕಾದ ಅಂಶ ಇರುವುದಿಲ್ಲ. ಪ್ರಕರಣ ವಜಾ ಮಾಡಿತು. (1995 Indlaw SC 2220, (1995) 3 SCC (Supp) 573)

207. ಆಂದ್ರಪ್ರದೇಶ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಸಂಘದ ಸದಸ್ಯರು, ರೈಲ್ವೆ ನೌಕರರು ತಮ್ಮ ಸೇವಾ ಶರತ್ತುಗಳನ್ನು ರಾಜ್ಯ ಸರ್ಕಾರ ಹೊರಡಿಸಿದ ಅಧಿಸೂಚನೆಯಂತೆ ಪರಿಶಿಷ್ಟ ಜಾತಿ/ಪಂಗಡದ ನೌಕರನಿಗೆ ಮೀಸಲಾತಿ ನೀತಿ ಅನುಸರಿಸಿ ನೀಡಿತು. ಈ ಅಧಿಸೂಚನೆಯಲ್ಲಿ ಭಡ್ತಿ ನೀಡುವ ಬಗ್ಗೆಯೂ ಸೂಚಿಸಲಾಗಿತ್ತು. ಇದನ್ನು ಸಹಕಾರಿ ಕಾಯಿದೆ ಕಲಂ 16ರಲ್ಲಿ ಊರ್ಜಿತ ಎಂದು ಉಚ್ಚನ್ಯಾಯಾಲಯ ತೀರ್ಮಾನಿಸಿತು. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಉಚ್ಚನ್ಯಾಯಾಲಯ, ಭಡ್ತಿ ನೀಡುವಾಗಲು ಈ ಮೀಸಲಾತಿ ಅನ್ವಯವಾಗುತ್ತಿದೆ ಎಂದು ತೀರ್ಮಾನಿಸಿರುವುದು ತಪ್ಪು ಎಂದು ತೀರ್ಮಾನಿಸಿ ಏಕ ಸದಸ್ಯ ಪೀಠ ಮತ್ತು ವಿಭಾಗೀಯ ಪೀಠ ನೀಡಿದ ತೀರ್ಪುಗಳನ್ನು ರದ್ದುಗೊಳಿಸಿ. ನೇಮಕಾತಿಯಲ್ಲಿ ಮಾತ್ರ ಮೀಸಲಾತಿ ಇದ್ದು, ಭಡ್ತಿ ಸಂದರ್ಭದಲ್ಲಿ ಮೀಸಲಾತಿ ಇಲ್ಲ ಎಂದು ತೀರ್ಮಾನಿಸಿತು. (1998 Indlaw SC 1363, (1998) 2 SCC 580, AIR 1998 SC 703)

208. ಹರ್ಯಾನ ಕಾಯಿದೆಯಡಿ ಒಂದು ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿ ಮತ್ತು ಕೊಷಾಧಿಕಾರಿಗಳ ಮೇಲೆ ಹಣ ದುರುಪಯೋಗವೆಂದು ಕ್ರಿಮಿನಲ್ ಮತ್ತು ಸಿವಿಲ್ ಪ್ರಕರಣ ದಾಖಲಿಸಿದಾಗ, ಸಿವಿಲ್ ಪ್ರಕರಣದಲ್ಲಿ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಕೋಷಾಧಿಕಾರಿ ಮೇಲೆ ಜಂಟಿಯಾಗಿ ಮತ್ತು ವ್ಯಯಕ್ತಿಕವಾಗಿ ಜವಾಬ್ದಾರಿ ನಿಗದಿ ಪಡಿಸಲಾಯಿತು. ಮೇಲ್ಮನವಿ ಸಲ್ಲಿಸಿದಾಗ ಇದನ್ನು ದೃಡೀಕರಿಸಲಾಯಿತು. ಇದನ್ನು ವಿಶೇಷ ಅರ್ಜಿ ಮೂಲಕ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಸಂಘದ ವ್ಯವಹಾರದಲ್ಲಿ ಲೆಕ್ಕಕೆ ತೆಗೆದುಕೊಳ್ಳದ ಹಣದ ಆಧಾರದ ಮೇಲೆ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣ ದಾಖಲಾಗಿದೆ. ಸಂಘ ಅಧ್ಯಕ್ಷರು, ವ್ಯವಹಾರದ ಮೇಲ್ವಿಚಾರಣಾ ಜವಾಬ್ದಾರಿ ಹೊತ್ತಿದ್ದು, ದುರುಪಯೋಗವಾದರೆ, ಅದು ಅದನು ಬೇಜವಾಬ್ದಾರಿಯು ಸೇರುತ್ತಿದೆ. ಅಂದರೆ ಅದನ್ನು ಜವಾಬ್ದಾರನಾಗುತ್ತಾನೆ. ಕ್ರಿಮಿನಲ್ ಮೊಕದಮ್ಮೆ ವಿಚಾರಣ ನಡೆಯುತ್ತಿದೆ, ಆದರೆ

ಅಧಿಭಾರ ಆ ಜವಾಬ್ದಾರಿ ಅಧ್ಯಕ್ಷನೂ ಭಾಗಿ ಎಂದು ತೀರ್ಮಾನಿಸಿತು. (1997 Indlaw SC 1003, (1997) 10 SCC 753, AIR 1997 SC 2778)

209. ದಿಲ್ಲಿ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ ಸಂಘವು ಒಬ್ಬ ಗುತ್ತಿಗೆದಾರನ ಜೊತೆ ಒಪ್ಪಂದ ಮಾಡಿಕೊಂಡಾಗ, ಹೆಚ್ಚುವರಿ ಕೆಲಸ ನಿರ್ವಹಿಸಲು, ಒಪ್ಪಂದದಲ್ಲಿ ಮುಂದುವರಿಸಿದರೆ ಕಾಯಿದೆ ಕಲಂ 20ರನ್ನು ಪ್ರಕರಣ ಊರ್ಜಿತ. ಅಂದರೆ ಒಪ್ಪಂದದ ಶರತ್ತು 32 ರನ್ವಯ ಹೆಚ್ಚುವರಿ ಕೆಲಸವೂ ಈ ಒಪ್ಪಂದದಲ್ಲಿ ಸೇರುತ್ತದೆ. (1996 Indlaw SC 2965, (1996) 9 SCC 492, AIR 1996 SC 2443)

210. ಮಧ್ಯ ಪ್ರದೇಶ ಸಹಕಾರ ಕಾಯಿದೆ ಕಲಂ 50ಎ ನ್ನು ತಿದ್ದುಪಡಿ ಮಾಡಿತು. ಮತ್ತು ನಿಯಮಗಳಡಿ ಸಹಕಾರಿ ಸಂಘಗಳ ಆಡಿಟ್ ಫಿ ಹೆಚ್ಚು ಮಾಡುವ ಬಗ್ಗೆ ವಿವಾದವೆದ್ದಾಗ, ಅದನ್ನು ರಾಜ್ಯ ವಿಧಾನ ಮಂಡಳದಲ್ಲಿ ಮಂಡಿಸದೇ ಇದ್ದಾಗ, ಅದು ಅನ್ವಯವಾಗದು. ಉಚ್ಚನ್ಯಾಯಾಲಯ, ಕಲಂ 95 ರನ್ವಯ ನಿಯಮ ರೂಪಿಸುವ ಅಧಿಕಾರವನ್ನು ಮತ್ತು ಅದು ವಿಧಾನ ಮಂಡಳದಲ್ಲಿ ಮಂಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ ಎಂಬುದನ್ನು ಪರಿಗಣಿಸದೇ ಆದೇಶಿಸಿದೆ. ಈ ವಿಷಯವನ್ನು ಉಚ್ಚನ್ಯಾಯಾಲಯದ ಮರು ವಿಮರ್ಷೆ ಮಾಡಬೇಕು ಮತ್ತು ತಾನು ನೀಡಿದ ಹೆಚ್ಚುವರಿ ಆಡಿಟ್ ಫಿಯನ್ನು ವಾಪಸ್ ಮಾಡಲು ಮಾಡಿದ ಆದೇಶವನ್ನು ಪುನ ವಿಮರ್ಶಿಸಬೇಕು. ಮೇಲ್ಮನವಿಯನ್ನು ಪುರಸ್ಕರಿಸಲು ಸೂಚಿಸಿತು. (ರಾಜ್ಯ ಸರ್ಕಾರ ಈ ವಿಶೇಷ ಮನವಿಯನ್ನು ಸಲ್ಲಿಸಿತ್ತು) (1995 Indlaw SC 1496, (1996) 7 SCC 81)

211. ಬಿಹಾರ್ ಸಹಕಾರ ಕಾಯಿದೆಯಲ್ಲಿ ಚುನಾವಣೆ ಮೂರು ವರ್ಷಕ್ಕೆ ಮಂಡಳಿ ಅವಧಿ ನಿಗದಿ ಪಡಿಸಿದೆ. ಆದರೆ ಮೂರು ವರ್ಷದ ಅವಧಿ ನಿಗದಿ ಪಡಿಸುವಾಗ ರಾಜ್ಯ ಸರ್ಕಾರ ತಾನು ಹೂಡಿದ ಪಾಲು ಬಂಡವಾಳದ ಆಧಾರದ ಮೇಲೆ ನಾಮನಿರ್ದೇಶನ ಮಾಡಲು ಅವಕಾಶ ಇರುವಂತೆ ಮಂಡಳಿ ರಚನೆಯಾಗುತ್ತಿದೆ. ಅಂದರೆ ಆಡಳಿತ ಮಂಡಳಿ ಚುನಾವಣೆ ಮಂಡಳಿಯು ಎಲ್ಲಾ ಸದಸ್ಯರನ್ನು ಆಯ್ಕೆ ಮಾಡುವುದಿಲ್ಲ ಸರ್ಕಾರ ಈ ಕೆಳಕಂಡಂತೆ ನಾಮನಿರ್ದೇಶನ ಮಾಡುವ ಅಧಿಕಾರ ಇದೆ.

| | **ಪಾಲು ಬಂಡವಾಳದ ಪ್ರಮಾಣ** | **ನಾಮನಿರ್ದೇಶನ ಮಾಡುವ ಸಂಖ್ಯೆ** |
|---|---|---|
| 1 | ಶೇ 30% ರಿಂದ 50% | 1/3 ಮಂಡಳಿ ಸಂಖ್ಯೆ |
| 2 | ಶೇ 50% ರಿಂದ 60% | ಅಧ್ಯಕ್ಷರು ಸೇರಿ 50% ಸದಸ್ಯರು |
| 3 | ಶೇ 60% ಕ್ಕಿಂತ ಹೆಚ್ಚು | ಅಧ್ಯಕ್ಷರು ಸೇರಿ 2/3 ಸದಸ್ಯರು |

212. ಮಂಡಳಿ ರಚನೆಯಾಗುವುದು ಸರ್ಕಾರ ನಾಮನಿರ್ದೇಶನ ಮಾಡಿದ ನಂತರ. ಈ ಪ್ರಕರಣದಲ್ಲಿ

ಚುನಾವಣೆ 1991ರ ಮಾರ್ಚ್ 5ಕ್ಕೆ ನಡೆದಿದ್ದರೂ ಅದರ ಅವಧಿ 31.03.1993ಕ್ಕೆ ಮುಕ್ತಾಯವಾಗಬೇಕು. ಆದರೆ ಈ ಪ್ರಕರಣದಲ್ಲಿ 05.07.1994ಕ್ಕೆ ಹೊಸ ಚುನಾವಣೆ ನಡೆಸತಕ್ಕದ್ದು ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (1995 Indlaw SC 559, (1995) 1 SCC (Supp) 340, AIR 1995 SCW 836)

213. ಮಹಾರಾಷ್ಟ್ರ ಮತ್ತು ಗುಜರಾತ್ ಮಾರಾಟ ತೆರಿಗೆ ಕಾಯಿದೆಯಲ್ಲಿ ಸಕ್ಕರೆ ಕಾರ್ಖಾನೆ ಸದಸ್ಯರಿಂದ ಖರೀದಿ ಮಾಡಿದ ಕಬ್ಬಿಗೆ, ತೆರಿಗೆ ಪಾವತಿ ಮಾಡುವ ಬಗ್ಗೆ ಉಚ್ಚನ್ಯಾಯಾಲಯ, ಸಹಕಾರ ಸಕ್ಕರೆ ಕಾರ್ಖಾನೆ ಉಪನಿಯಮಗಳಲ್ಲಿ ಸದಸ್ಯರು ಮತ್ತು ಸದಸ್ಯೇತರರಿಂದ ಖರೀದಿ ಮಾಡಿ ಸಂಸ್ಕರಿಸಿ ಸಕ್ಕರೆ ಮಾರಾಟ ಮಾಡುತ್ತಿದ್ದು, ಇದನ್ನು ಕೃಷಿ ಉತ್ಪನ್ನದಿಂದ ಬಂದ ಆದಾಯವೆಂದು ವಿನಾಯ್ತಿ ನೀಡಲಾಗದು. ಸದಸ್ಯರಿಂದ ಪಡೆದ ಕಬ್ಬು ಖರೀದಿ ಮಾಡಿದ್ದು, ಆಡಳಿತ ಮಂಡಳಿ ಕಬ್ಬಿನ ದರ ನಿಗದಿ ಪಡಿಸುವ ಅಧಿಕಾರ ಹೊಂದಿದ್ದು, ಮಾರಾಟ ಕಾಯಿದೆಯಲ್ಲಿ ಕರ ಪಾವತಿ ಮಾಡಬೇಕು ಎಂಬ ವಿಭಾಗೀಯ ಪೀಠದ ಆದೇಶದಲ್ಲಿ ಯಾವುದೇ ನ್ಯೂನತೆ ಇಲ್ಲ ಎಂದು ಆ ತೀರ್ಮಾನವನ್ನು ಎತ್ತಿ ಹಿಡಿಯಿತು. (1994 Indlaw SC 1761, (1995) 1 SCC (Supp) 8, AIR 1995 SC 572)

214. ಬಿಹಾರ ಮತ್ತು ಒರಿಸ್ಸಾ ಸಹಕಾರಿ ಕಾಯಿದೆಯಲ್ಲಿ, ನಿಬಂಧಕರ ಒಂದು ಆದೇಶದ ಮೇಲೆ ಮೇಲ್ಮನವಿ ಪ್ರಾಧಿಕರಣದ ಅಧಿಕಾರ ಹೊಂದಿದ್ದಾರೆ – ಒಂದು ದಾವಾ ಪ್ರಕರಣವನ್ನು ನಿಬಂಧಕರೇ ನಿರ್ಧರಿಸಬಹುದು ಅಥವಾ ಮಧ್ಯಸ್ತಿಗಾರನಿಗೆ ವರ್ಗಾಯಿಸಬಹುದು. ಆ ಆದೇಶದ ಮೇಲೆ (ಕಲಂ 48 (6) ರಡಿ ಮೇಲ್ಮನವಿ ಸಲ್ಲಿಸಬಹುದು ಮತ್ತು ಅದೇ ರೀತಿ ಕಲಂ 56 ರಡಿ ಪುನರ್ ವಿಮರ್ಷೆ ಮಾಡಲು ಅವಕಾಶ ಇದೆ. ಈ ಅಧಿಕಾರ ಮೇಲ್ಮನವಿಯಲ್ಲದೆ, ಹೆಚ್ಚುವರಿಯಾಗಿ ನೀಡಿದ ಅಧಿಕಾರ. ಉಚ್ಚನ್ಯಾಯಾಲಯದ ಆದೇಶ ಎತ್ತಿ ಹಿಡಿಯಿತು. (1995 Indlaw SC 1106, (1995) 4 SCC (Supp) 647)

215. ಮಹಾರಾಷ್ಟ್ರ ಕಾಯಿದೆಯಡಿ ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ತನ್ನ ಸ್ತಿರಾಸ್ತಿಯನ್ನು ಮಾರಾಟ ಮಾಡಲು ಅಧಿಕಾರ ಆಡಳಿತ ಮಂಡಳಿ ನೀಡಿದಂತೆ, ಮಾರಾಟ ಮಾಡಿದ ಕ್ರಮವನ್ನು ಪ್ರಶ್ನಿಸಿದಾಗ, ಅದನ್ನು ಸರಿಯಾದ ಕ್ರಮವೆಂದು ತೀರ್ಮಾನಿಸಿತು ಮತ್ತು ಇದನ್ನು ಕಲಂ 72 ರನ್ವಯ ಪ್ರಶ್ನಿಸತಕ್ಕದ್ದಲ್ಲ, ಎರಡನೆಯದಾಗಿ ಈ ಮಾರಾಟಕ್ಕೆ ಮೊದಲು ಸಕ್ಕರೆ ನಿರ್ದೇಶಕರ ಪೂರ್ವಾನುಮತಿ ಪಡೆಯಬೇಕಾಗಿತ್ತು ಎಂಬುದಕ್ಕೆ, ನ್ಯಾಯಾಲಯಕ್ಕೆ ಕಾನೂನಿನ ನಿಬಂಧನೆಗಳ ಬಗ್ಗೆ ಯಾವುದೇ ಮಾಹಿತಿ, ಅಂದರೆ ನಿರ್ಬಂಧದ ಬಗ್ಗೆ ದಾಖಲೆ ನೀಡಿಲ್ಲವಾದ್ದರಿಂದ, ನಿರ್ದೇಶಕರ ಒಪ್ಪಿಗೆ ಅವಶ್ಯಕವಿಲ್ಲ. ಸಂಘದ ಉಪನಿಯಮ 43 (XIX) ರನ್ವಯ ಇದು ಊರ್ಜಿತ. (1994 Indlaw SC 768, (1998) 8 SCC 678)

216. ಆಂದ್ರಪ್ರದೇಶ ಕಾಯಿದೆಯ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸಣ್ಣ ರೈತರು ಎಂದು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಜಮೀನು ನೀಡಿ, ಸರ್ಕಾರದ ಖರ್ಚಿನಲ್ಲಿ ನೀಡುವುದು ನಿಯಮ ಬಾಹಿರ ಮತ್ತು ಅಂತಹ ಸದಸ್ಯರಿಗೆ ಒಂದು ನಿವೇಶನಕ್ಕಿಂತ ಹೆಚ್ಚಾಗಿ ಹಂಚಿಕೆ ಮಾಡುತ್ತಿರುವುದೂ ಸಹ ನಿಯಮ ಬಾಹಿರ. ಸರ್ಕಾರ ಅಥವಾ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದೆ ಎಂದು ಭೂ ಹಂಚಿಕೆ ರದ್ದುಪಡಿಸಿತು. (1994 Indlaw SC 1392, (1994) 4 SCC 675)

217. ದಿಲ್ಲಿ ಸಹಕಾರ ಸಂಘಗಳ ಕಾಯಿದೆಯಡಿ ಒಂದು ಗೃಹ ನಿರ್ಮಾಣ ಸಂಘದ ಸದಸ್ಯನನ್ನು ಸಾಮಾನ್ಯ ಸಭೆಯಲ್ಲಿ ವಜಾ ಮಾಡಿತು ಮತ್ತು ಅದಕ್ಕೆ ನಿಬಂಧಕರ ಒಪ್ಪಿಗೆ ಪಡೆಯಿತು. ಸಂಘವು ಬಾಕಿ ಹಣ ಪಾವತಿಸಲು ನೀಡಿದ್ದ ನೋಟೀಸ್ ಮೇಲೆ ರಿಟ್ ಅರ್ಜಿ ಸಲ್ಲಿಸಿದಾಗ ಅದನ್ನು ವಜಾ ಮಾಡಿತು. ಆದರೆ ಸದಸ್ಯತ್ವದಿಂದ ತೆಗೆದು ಹಾಕಿದ ವಿಷಯವನ್ನು ಪ್ರಶ್ನಿಸಲಿಲ್ಲ. ರಿಟ್ ಅರ್ಜಿ ವಜಾ

ಮಾಡಿದ ನಂತರ ಅನುಚ್ಛೇದ 136ರಲ್ಲಿ ವಿಶೇಷ ಅರ್ಜಿ ಸಲ್ಲಿಸುವ ಬದಲು ಅನುಚ್ಛೇದ 32ರಲ್ಲಿ ಸಲ್ಲಿಸಿದ್ದು, ಇದರಲ್ಲಿ ರಿಟ್ ಅರ್ಜಿ ವಜಾ ಆದ ಬಗ್ಗೆ ತಿಳಿಸಲಿಲ್ಲ. ಆದ್ದರಿಂದ ನ್ಯಾಯಾಲಯವನ್ನು ತಪ್ಪುದಾರಿಗೆ ಎಳೆಯಲು ಪ್ರಯತ್ನ. ಆದ್ದರಿಂದ ರಿಟ್ ಅರ್ಜಿ ಊರ್ಜಿತವಲ್ಲ. ಪರಿಹಾರ ಕೇಳಿ ಸಂಘಕ್ಕೆ ಅರ್ಜಿ ಸಲ್ಲಿಸಿದರೆ, ಪರಿಶೀಲಿಸಲು ಸೂಚಿಸಿದರು. (1994 Indlaw SC 451, (1994) 4 SCC 332)

218. ಮಹಾರಾಷ್ಟ್ರ ಕಾಯಿದೆಯಡಿ ಮಾರಾಟ ಮಹಾಮಂಡಳದ ಸುಗ್ಗಿ ಸಮಯದಲ್ಲಿ ನೇಮಿಸಿದ ಕೆಲಸಗಾರರು ಖಾಯಂ ಮಾಡಲು ನಿರಾಕರಿಸಿದಾಗ, ಅದನ್ನು ನ್ಯಾಯಾಧಿಕರಣ 240 ದಿವಸ ಕೆಲಸ ಮಾಡಿದ ಸುಗ್ಗಿ ಕಾಲಿದ ನೌಕರರನ್ನು ಖಾಯಂ ಮಾಡಲು ಸೂಚಿಸಿತು. ಮಾದರಿ ಸೇವಾ ನಿಯಮಗಳಡಿ ಸೀಸನಲ್ ನೌಕರರು ಖಾಯಂ ನೌಕರಲ್ಲ ಮತ್ತು ಅವರನ್ನು ಒಂದು ವರ್ಷದ ಅವಧಿಯಲ್ಲಿ 240 ದಿವಸಗಳಾಗದಂತೆ ನಿಯಂತ್ರಿಸಲಾಗುತ್ತಿದೆ. ಆದ್ದರಿಂದ ಆ ನೌಕರರನ್ನು 240 ಮುಗಿದಿದ್ದರೆ ಖಾಯಂ ಮಾಡಬೇಕೆಂಬ ಆದೇಶ ಸರಿಯಲ್ಲ. ಅಂದರೆ ಸೀಸನಲ್ ನೌಕರನ್ನು 240 ದಿನ ಕೆಲಸ ಮಾಡಿದ್ದರೂ ಅವರನ್ನು ಖಾಯಂ ಮಾಡಲಾಗದು. (1994 Indlaw SC 1275, (1994) 3 SCC (Supp) 385, AIR 1994 SC 1046)

219. ತಮಿಳುನಾಡು ಸಹಕಾರ ಕಾಯಿದೆಯಡಿ ಒಂದು ಮಾರಾಟ ಸಂಘದ ನಿರ್ದೇಶಕರು ದುರುಪಯೋಗ ಮಾಡಿಕೊಂಡಿದ್ದು ವಿಚಾರಣೆಯಿಂದ ರುಜುವಾತಾದ ಮೇಲೆ, ಅಧಿಭಾರ ಅರ್ಜಿ ದಾಖಲಿಸಿತು. ನಿಬಂಧಕರು 14 ನಿರ್ದೇಶಕರು ಜವಾಬ್ದಾರರೆಂದು ಆದೇಶಿಸಿತು. ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿಯನ್ನು ವಜಾ ಮಾಡಿತು. ರಿಟ್ ಅರ್ಜಿ ಸಲ್ಲಿಸಿದಾಗ ಉಚ್ಚನ್ಯಾಯಾಲಯ ತನ್ನ ತೀರ್ಮಾನದಲ್ಲಿ ಮೇಲ್ಮನವಿ ಪ್ರಾಧಿಕಾರ ಖರೀದಿ ಮಾಡುವಾಗ ನಿಯಮ ಪಾಲಿಸಿದ್ದಾರೆಯೇ ಮತ್ತು ಒಳ್ಳೆ ಮನಸ್ಸಿನಿಂದ ವ್ಯವಹಾರ ಮಾಡಿದ್ದಾರೆಯೇ ಎಂದು ಪರಿಶೀಲಿಸಿಲ್ಲ. ಇದಕ್ಕೆ ಪೂರಕ ಆರೋಪ ಮಂಡಿಸುವಾಗ ನಿರ್ದೇಶಕರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಪ್ರತೋರಿಸಿದ್ದಾರೆಯೇ ಎಂಬುದರ ಜೊತೆಗೆ, ಉದ್ದೇಶ ಪೂರಕವಾಗಿ ನಷ್ಟ ಮಾಡಿದ್ದಾರೆ ಎಂದು ದೃಡಪಡಿಸಲು ದಾಖಲೆಗಳನ್ನು ಸಲ್ಲಿಸಿ ರುಜುವಾತು ಪಡಿಸಬೇಕು. ಉಚ್ಚನ್ಯಾಯಾಲಯದ ತೀರ್ಪಿನಲ್ಲಿ ನೀಡಿರುವ ಕಾರಣಗಳನ್ನು ಪುಷ್ಟೀಕರಿಸಲು ಯಾವುದೇ ಆದಾರ ಇಲ್ಲವೆಂದು ತೀರ್ಮಾನಿಸಿದರು ಮತ್ತು ನಿರ್ದೇಶಕರ ಜವಾಬ್ದಾರಿ ನಿಗದಿ ಪಡಿಸಿರುವುದನ್ನು ಕಿತ್ತು ಹಾಕಿತು. ಶ್ರೇಷ್ಠ ನ್ಯಾಯಾಲಯ ಈ ತೀರ್ಮಾನದಲ್ಲಿ ನ್ಯೂನತೆ ಇಲ್ಲವೆಂದು ವಜಾ ಮಾಡಿತು. ಅಂದರೆ ನಿರ್ದೇಶಕರು ಉದ್ದೇಶ ಪೂರ್ವಕವಾಗಿ ನಷ್ಟ ಮಾಡಿದ್ದಾರೆಂದು ನಿರೂಪಿಸಲು ದಾಖಲೆಗಳು ಸಮರ್ಪಕವಾಗಿಲ್ಲವೆಂದು ವಜಾ ಮಾಡಿತು. (1993 Indlaw SC 518, (1994) 3 SCC (Supp) 134)

220. ಕಲಂ 64ರ ವಿಚಾರಣೆ ನಂತರ, ಜಂಟಿ ನಿಬಂಧಕರು ಕಲಂ 68 ರಲ್ಲಿ ನಿರ್ದೇಶನ ನೀಡಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದ್ದರು. ಸಂಘವು ಯಾವುದೇ ರೀತಿ ಅನುಸರಣಾ ಕ್ರಮ ಜರುಗಿಸುತ್ತಿಲ್ಲವೆಂದು, ಅನುಪಾಲನೆಗೆ ಆದೇಶಿಸಬೇಕೆಂದು ರಿಟ್ ಅರ್ಜಿ ಸಲ್ಲಿಸಿದಾಗ, ಸಂಘ ಸಲ್ಲಿಸದ ವರದಿಯನ್ನು ಪರಿಶೀಲಿಸಿ, ಸಂಘವು ಸದಸ್ಯರ ಹಿತಕ್ಕಾಗಿ ದುಡಿಯಬೇಕೆಂದು ಸೂಚಿಸಿತು. ಆ ನಂತರ ಅರ್ಜಿದಾರರು ರಿಟ್ ವಾಪಸ್ ಪಡೆಯಲು ಅನುಮತಿ ಕೇಳಿದ್ದನ್ನು ಮನ್ನಿಸಿ, ವಾಪಸ್ ಪಡೆದಿದೆ ಎಂದು ತೀರ್ಪಿತ್ತಿದೆ. (2013 Indlaw Kar 951)

221. ಅರ್ಜಿದಾರರ ಅರ್ಜಿಯನ್ನು ವಿಚಾರಣಾ ನ್ಯಾಯಾಲಯ ವಜಾಗೊಳಿಸಿದ್ದನ್ನು ಪ್ರಶ್ನಿಸಿ ರಿಟ್ ದಾಖಲಿಸಲಾಗಿದೆ. ಈ ನ್ಯಾಯಾಲಯ ILR 1990 Kar 151 ರ ತೀರ್ಪಿನಲ್ಲಿ ಕಲಂ 125 ರಡಿ ನಿಬಂಧಕರಿಗೆ ನೋಟೀಸ್ ಜಾರಿ ಮಾಡಿಲ್ಲವೆಂದು, ಅರ್ಜಿಯನ್ನು ವಾಪಸ್ ಮಾಡಬೇಕು ಎಂದು

ತೀರ್ಪನ್ನು ಎತ್ತಿ ಹಿಡಿದು, ಕೆಳ ನ್ಯಾಯಾಲಯ ಅರ್ಜಿ ವಜಾಗೊಳಿಸಿದ್ದು ಅನೂರ್ಜಿತ ಎಂದು ತೀರ್ಮಾನಿಸಿ, ಈಗಲೂ ಕಲಂ 125ರ ನೋಟೀಸ್ ನೀಡಲು ಅವಕಾಶ ಇರುವುದರಿಂದ, ಅರ್ಜಿದಾರರ ಅರ್ಜಿಯನ್ನು ವಾಪಸ್ ಮಾಡಲು ಆದೇಶಿಸಿತು. (2012 Indlaw Kar 2194)

222. ಕಾನೂನಿನಲ್ಲಿ ತಂದ ತಿದ್ದುಪಡಿ, ಯಾವ ದಿನಾಂಕದಿಂದ ಜಾರಿಗೆ ಬರುತ್ತದೆ ಎಂಬುದನ್ನು ವಿಭಾಗೀಯ ಪೀಠ ನಿರ್ಧರಿಸಿದೆ. ಅಂದರೆ ರಾಜ್ಯ ಸರ್ಕಾರ ತನ್ನ ತಕರಾರು ಸಲ್ಲಿಸುವಾಗ ತಿದ್ದುಪಡಿ ಆದ ದಿನಾಂಕದಿಂದ ಜಾರಿಗೆ ಬರುತ್ತದೆ ಎಂದು ತಿಳಿಸಿ ಲಿಖಿತವಾಗಿ ಸಲ್ಲಿಸಿದಾಗ, ವಿಭಾಗೀಯ ಪೀಠ ಈಗಾಗಲೇ ಇದನ್ನು ತೀರ್ಮಾನಿಸಿರುವುದರಿಂದ, ಈ ನ್ಯಾಯ ಪೀಠ (ಏಕ ಸದಸ್ಯ ಪೀಠ) ಅದನ್ನು ಪುನಃ ಪರಿಶೀಲಿಸಲಾಗದು. ಏಕೆಂದರೆ ಅದು ವಿಭಾಗೀಯ ಪೀಠದ ತೀರ್ಮಾನ. ವಿಭಾಗೀಯ ಪೀಠ ಯಾವುದೇ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಹೊಂದಿದೆ. ಅಂದರೆ ಕಾನೂನಿಗೆ ತಂದ ತಿದ್ದುಪಡಿ ಜಾರಿಗೆ ಬರುವುದು ತಿದ್ದುಪಡಿ ಯಾದ ದಿನಾಂಕದಿಂದ ಮತ್ತು ಪೂರ್ವಾನ್ವಯ ದಿನಾಂಕದಿಂದಲ್ಲ ಎಂದಿರುವುದು ಏಕ ಸದಸ್ಯ ಪೀಠ ತೀರ್ಮಾನಿಸುವ ವಿಷಯ ಅಲ್ಲ. (2012 Indlaw Kar 2875, 2013 (1) KLJ 320)

223. ಸಿವಿಲ್ ನ್ಯಾಯಾಲಯದಲ್ಲಿ ಎರಡನೇ ದಾವಾ ದಾಖಲಿಸಲು ವಿಳಂಬವಾದಾಗ ವಿನಾಯ್ತಿ ನೀಡಬಹುದೆ ಎಂಬ ಪ್ರಶ್ನೆಗೆ, ಮೊದಲನೇ ದಾವಾ ಪ್ರಕರಣ, ಬೇರೆ ನ್ಯಾಯಾಲಯದಲ್ಲಿ, (ಸಂಬಂಧ ಪಡದ ಮತ್ತೊಂದು ನ್ಯಾಯಾಲಯದಲ್ಲಿ ದಾಖಲಿಸಿದ್ದ) ಕಾರಣದಿಂದ, ವಿಳಂಬ ವಿನಾಯ್ತಿ ನೀಡಬಹುದು – ಮೊದಲನೇ ಪ್ರಕರಣ ಬಾಕಿ ಇದ್ದು ಸಮಯವನ್ನು ವಿಳಂಬ ವಿನಾಯ್ತಿಗೆ ಪರಿಗಣಿಸಿ, ವಿನಾಯ್ತಿ ನೀಡಬಹುದು. ಆದರೆ ಮೊದಲನೇ ಪ್ರಕರಣವನ್ನು ವಾಪಸ್ ಪಡೆಯಲೇ ಬೇಕೆಂಬ ಶರತ್ತು ವಿಧಿಸಲಾಗದು. (1997 Indlaw Kar 246, AIR 1998 Kar 20, 1997 (3) KLJ 622)

224. ದೆಲ್ಲಿ ಸಹಕಾರಿ ಕಾಯಿದೆಯು ಒಂದು ಸಂಘದ ಸಾಮಾನ್ಯ ಸಭೆಯಲ್ಲಿ ಒಬ್ಬ ಸದಸ್ಯನನ್ನು ವಜಾ ಮಾಡಿತು ಮತ್ತು ಅದನ್ನು ನಿಬಂಧಕರು ಒಪ್ಪಿಗೆ ನೀಡಿದರು. ಈ ತೀರ್ಮಾನದ ಮೇಲೆ ರಿಟ್ ದಾಖಲಿಸಬಹುದೇ? ಸದಸ್ಯನ್ನು ಹಣ ಪಾವತಿಸಲು ಸಂಘದಿಂದ ನೋಟೀಸ್ ನೀಡಿದರೂ ಹಣ ಪಾವತಿಸದೇ ಇದ್ದಾಗ, ಈ ಕ್ರಮ ಜರುಗಿಸಿತ್ತು. ಅರ್ಜಿದಾರರು ರಿಟ್ ಅರ್ಜಿ ದಾಖಲಿಸಿ ಪರಿಹಾರ ಕೇಳಿದಾಗ ಅದನ್ನು ವಜಾ ಮಾಡಿತ್ತು. ಅದನ್ನು ಅನುಚ್ಛೇದ 136 ರಡಿ ಪ್ರಶ್ನಿಸದೆ, ಅನುಚ್ಛೇದ 32 ರಡಿ ರಿಟ್ ದಾಖಲಿಸಿತು. ನ್ಯಾಯಾಲಯವನ್ನು ತಪ್ಪುದಾರಿಗೆ ಎಳೆಯಲು ಪ್ರಯತ್ನ ನಡೆಸಿದ್ದು ತಪ್ಪು. ವಜಾ ಮಾಡಿದ ವಿಷಯವನ್ನು ಪ್ರಶ್ನಿಸಿರಲಿಲ್ಲವಾದ್ದರಿಂದ, ಮತ್ತು ಅರ್ಜಿದಾರರು ಈ ಬಗ್ಗೆ ವಾದ ಮಂಡಿಸಲು ಬಿಡಲಿಲ್ಲ, ವಿಶೇಷ ಅರ್ಜಿಯನ್ನು ಊರ್ಜಿತವಲ್ಲವೆಂದು ವಜಾ ಮಾಡಿತು ಮತ್ತು ಅರ್ಜಿದಾರರು ಸಂಘಕ್ಕೆ ಲಿಖಿತ ಅರ್ಜಿಕೊಟ್ಟ ಪರಿಹಾರ ಕೇಳಿದರೆ ಅದನ್ನು ಸಂಘ ಪರಿಶೀಲಿಸಲು ಸೂಚಿಸಿತು. (1994 Indlaw SC 451, (1994) 4 SCC 332)

# ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ ತೀರ್ಮಾನಗಳು:

ಸಹಕಾರ ಸಂಘದ ನಿಬಂಧಕರು ಕಾಯಿದೆ ಕಲಂ 129ಎ ಅನ್ವಯ ಮಾದರಿ ಉಪನಿಯಮಗಳನ್ನು ರಚಿಸಿ ಜಾರಿ ಮಾಡಿದ್ದಾರೆ. ಅದನ್ನು ಈಗಲೂ ಕಲಂ 30ಬಿ ಯನ್ನು ಉಪಯೋಗಿಸಿ ಉಪನಿಯಮಗಳ ತಿದ್ದುಪಡಿ ಮಾಡುತ್ತಿದ್ದಾರೆ. ಇವುಗಳಲ್ಲಿ ಸೂಚಿಸಿದ ಪ್ರಮುಖ ವಿಷಯಗಳು (1) ಸದಸ್ಯರು ನಿವೇಶನ ಪಡೆಯಲು ಅವರು ಪಾವತಿಸಿದ ಮುಂಗಡದ ಆಧಾರದ ಮೇಲೆ ಜೇಷ್ಠತಾ ಪಟ್ಟಿಯನ್ನು ನಿಬಂಧಕರ ಒಪ್ಪಿಗೆ ಪಡೆದ ನಂತರವೇ ಹಂಚುವುದು. (2) ಪ್ರತಿಯೊಬ್ಬ ನಿವೇಶನ ಪಡೆಯುವ ವ್ಯಕ್ತಿ ತನ್ನ ಮತ್ತು ತನ್ನ ಕುಟುಂಬದ ಸದಸ್ಯರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ನಿವೇಶನಾ ಮನೆ ಹೊಂದಿಲ್ಲವೆಂಬ ಪ್ರಮಾಣ ಪತ್ರ ಸಲ್ಲಿಸಿದ ನಂತರ, ಅದರ ನೈಜತೆಯನ್ನು ದೃಡೀಕರಿಸಿಕೊಳ್ಳುವುದು. (3) ಸಹಸದಸ್ಯರ ಪ್ರಮಾಣವನ್ನು ಶೇ.15% ಮೀರದಂತೆ ಸದಸ್ಯತ್ವ ನೀಡುವುದು ಮತ್ತು ನಿವೇಶನ ಹಂಚಿಕೆಯನ್ನು ಮಾಡುವುದು. (4) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರ ಸೇರ್ಪಡೆ ಮತ್ತು ನಿವೇಶನ ನೀಡಲು ಮೀಸಲಾತಿ. ಈ ಮೇಲ್ಕಂಡ ಪ್ರಮುಖ ನಾಲ್ಕು ಅಂಶಗಳನ್ನು ಪಾಲಿಸಲಾಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸುವ ವ್ಯಯದಾನ ನಿಬಂಧಕರ ಕಛೇರಿಗೆ ಇಲ್ಲ. ಹಾಗೂ ಇದರ ಸತ್ಯಾತೆಯನ್ನು ಈವರೆವಿಗೂ ಮಾಡಿಲ್ಲ. ಲಿಖಿತ ಆರೋಪಗಳು ಬಂದಾಗ, ಆಯ್ಕೆ ಮಾಡಿದ ಪ್ರಸಂಗಗಳಲ್ಲಿ ವಿಚಾರಣೆ ನಡೆಸಿ ವಿರಳವಾಗಿ ಕ್ರಮಕೈಗೊಳ್ಳುತ್ತದೆ – ಇಲಾಖೆ.

ಸರ್ಕಾರ ಸಹಸದಸ್ಯರ ಮಿತಿಯಲ್ಲಿ ಕೆಲ ಸಮಯ ವಿನಾಯ್ತಿ ನೀಡಲು ಮುಂದೆ ಬಂದಿದೆ. ಅಂದರೆ ಗೃಹ ನಿರ್ಮಾಣ ಸರ್ಕಾರ ಸಂಘಗಳನ್ನು ನಿಯಂತ್ರಿಸಲು ಪ್ರಾಮಾಣಿಕ ಪ್ರಯತ್ನ ನಡೆದಿಲ್ಲ. ಅನರ್ಹರಿಗೆ ನಿವೇಶನ, ಜೇಷ್ಠತೆ ಪಾಲಿಸದೇ ಇದ್ದರೂ ಕ್ರಮವಿಲ್ಲದ ಪ್ರಕರಣಗಳ ಮೇಲೆ ಕ್ರಮ ಜರುಗಿಸುತ್ತಿಲ್ಲ. ಈ ವಿಷಯಗಳ ಬಗ್ಗೆ ನ್ಯಾಯಾಲಯದ ತೀರ್ಪುಗಳು ಇಲ್ಲವೇ ಇಲ್ಲ ಎಂದರೆ ತಪ್ಪಾಗುವುದಿಲ್ಲ. ಏಕೆಂದರೆ ಈ ವಿಷಯಗಳ ಬಗ್ಗೆ ಇಲಾಖೆ/ಸಾರ್ವಜನಿಕರು ಪ್ರಶ್ನಿಸುವುದೇ ಇಲ್ಲ. ಆದ್ದರಿಂದ ಗೃಹ ನಿರ್ಮಾಣ ಸಹಕಾರ ಸಂಘಗಳ ಕಾರ್ಯನಿರ್ವಹಣೆ ಬಗ್ಗೆ ತೀರ್ಪುಗಳು ಬರಲು ಸಾಧ್ಯವಿಲ್ಲ. ಬಹಳಷ್ಟು ನ್ಯಾಯಾಲಯದ ತೀರ್ಮಾನಗಳು ಭೂಮಿ ಖರೀದಿ, ಭೂಸ್ವಾದೀನ ಎಂಬ ಬಗ್ಗೆ ತೀರ್ಮಾನಗಳು ಹೆಚ್ಚು. ಅವುಗಳನ್ನು ಸಂಕ್ಷಿಪ್ತಾವಾಗಿ ನೀಡುವ ಈ ಪ್ರಯತ್ನ.

1. ಒಂದು ಸಂಘದ ಆಸ್ತಿ ಮಾಲೀಕತ್ವದ ಬಗ್ಗೆ ವಿವಾದ ಬಂದಾಗ, ಅದನ್ನು ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಹಕಾರ ಕಾಯಿದೆ ಕಲಂ 125 ರಲ್ಲಿ ನಿಬಂಧಕರಿಗೆ ನೋಟೀಸ್ ನೀಡುವ ಬಗ್ಗೆ ಮತ್ತು ವಿವಾದ ಊರ್ಜಿತವಲ್ಲವೆಂದು ಮತ್ತು ಹೆಚ್ಚುವರಿ ಸಾಕ್ಷಿ ದಾಖಲೆಗಳನ್ನು ಸಲ್ಲಿಸಲು ವಿಳಂಬವಾಗಿ ಸಲ್ಲಿಸಿದ ಬಗ್ಗೆ ವಿಮರ್ಷಿಸಲಾಯಿತು. ಹೆಚ್ಚುವರಿ ಸಾಕ್ಷಿ ಮತ್ತು ದಾಖಲೆಯನ್ನು ಪ್ರಕರಣ ವಿಚಾರಣೆ ಸಮಯದಲ್ಲಿ ಸಲ್ಲಿಸದೆ, ವಿಳಂಬವಾಗಿ ಸಲ್ಲಿಸಲು ಕೇಳಿದಾಗ, ಅದನ್ನು ಮಾನ್ಯ ಮಾಡತಕ್ಕದ್ದಲ್ಲ ಮತ್ತು ಅದನ್ನು ಒಪ್ಪಬೇಕೆಂದು ಕೇಳುವ ಹಕ್ಕು ಇರತಕ್ಕದ್ದಲ್ಲ. ಸಂಘವು ಸಲ್ಲಿಸಿದ ದಾಖಲೆಗಳಲ್ಲಿ ಕಂದಾಯ ಇಲಾಖೆ ನೀಡಿದ ಆರ್.ಟಿ.ಸಿ, ಮ್ಯುಟೇಷನ್ ದಾಖಲೆಗಳು ಎದುರು ಅರ್ಜಿದಾರರ ಹೆಸರಿನಲ್ಲಿದೆ ಮತ್ತು ಪೋಟೋಗಳನ್ನು ಸಲ್ಲಿಸಿದ್ದು, ಅದು ಪ್ರಶ್ನಿಸಲಾದ ಜಮೀನಿನದಲ್ಲವೆಂದು ಯಾವದೇ ದಾಖಲೆ ಸಲ್ಲಿಸಿಲ್ಲ ಮತ್ತು ಅದು ಅಂತಿಮ ವಾದಂತಾಗಿದೆ. ಆದ್ದರಿಂದ ರಿಟ್ ಅರ್ಜಿದಾರರು ಹೆಚ್ಚುವರಿ ದಾಖಲೆ ಸಾಕ್ಷಿಗಳು ಇದ್ದರೆ ಅದನ್ನು ಪ್ರಕರಣದಲ್ಲಿ ಸಲ್ಲಿಸಿ ದಾವಾ ದಾಖಲಿಸಲು ಸೂಚಿಸಿತು. ಆದ್ದರಿಂದ ಸಂಘ ಸಲ್ಲಿಸಿದ ಮೇಲ್ಮನವಿಯನ್ನು ತಿರಸ್ಕರಿಸಿತು. (2014 Indlaw Kar 1221)
2. ಸಂಘವು ನಿವೇಶನ ಅಭಿವೃದ್ದಿ ಪಡಿಸಿ, ಸಾರ್ವಜನಿಕ ಸೇವೆಗೆ ಮೀಸಲಾದ ನಿವೇಶನಗಳನ್ನು

ಬಿಡಿಎ ಗೆ ವರ್ಗಾಯಿಸಿತು. ಈ ನಿವೇಶನಗಳನ್ನು ಸಾರ್ವಜನಿಕ ಉದ್ದೇಶಕ್ಕೆ ನೀಡದೆ, ಮುಖ್ಯ ಮಂತ್ರಿಗಳು ಸೂಚಿಸಿದ ವ್ಯಕ್ತಿಗೆ ಮತ್ತು ಗ್ರಂಥಾಲಯ ಇಲಾಖೆಗೆ ನೀಡಿದ ಬಗ್ಗೆ ತಕರಾರು ಬಂದಾಗ, ನಿಯಮಗಳಿಗೆ ವಿರುದ್ದವಾಗಿ ಹಂಚಿಕೆ ಮಾಡಿದ್ದ ತಪ್ಪು ಎಂದು ವಾದಿಸಿದಾಗ ಅದನ್ನು 30 ವರ್ಷಗಳ ಅವಧಿಗೆ ಬಾಡಿಗೆ ಬೇಲೆ ನೀಡಿದ್ದ ಕಟ್ಟಡ ನಿರ್ಮಾಣ ಮಾಡಿರುವುದರಿಂದ, ಇಷ್ಟು ವಿಳಂಬ ಮಾಡಿ ತಕರಾರು ಸಲ್ಲಿಸಿರುವುದರಿಂದ ಮೇಲ್ಮನವಿಯನ್ನು ತಿರಸ್ಕರಿಸಲಾಯಿತು. (2013 Indlaw Kar 1812)

3. ನಿವೇಶನವನ್ನು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಮೀಸಲಿಟ್ಟಾಗ, ಅಂತಹ ನಿವೇಶನವನ್ನು ಬೇರೆ ವರ್ಗಕ್ಕೆ ನೀಡತಕ್ಕದ್ದಲ್ಲ. ಆರ್ಥಿಕ ಮಿತಿ ಅರ್ಥ್ಯಸುವಾಗ ಕುಟುಂಬದ ಆದಾಯವನ್ನು ಲೆಕ್ಕಕೆ ತೆಗೆದುಕೊಳ್ಳಬೇಕು. ಅಂದರೆ ಅರ್ಜಿದಾರರ ವಾರ್ಷಿಕ ಆದಾಯ ರೂ.11,800/– ಕ್ಕಿಂತ ಕಡಿಮೆ ಇದ್ದರೂ, ಅವಳ ಗಂಡ ಗಳಿಸಿದ ಆದಾಯವನ್ನು ಲೆಕ್ಕಕೆ ತೆಗೆದುಕೊಂಡು ನಿವೇಶನ ಹಂಚಬೇಕು. ಇಲ್ಲವಾದರೆ ಮೀಸಲಾತಿ ನಿಯಮಗಳನ್ನು ಮುರಿದಂತೆ ಆಗುತ್ತದೆ. ಆದ್ದರಿಂದ ರಿಟ್ ಅರ್ಜಿ ವಜಾಗೊಳಿಸಲಾಯಿತು. (2013 Indlaw Kar 1927)

4. ಆಡಳಿತ ಮಂಡಳಿ ಅವಧಿ ಮುಗಿದು ಹೊಸ ಚುನಾವಣೆ ಪ್ರಕ್ರಿಯೆ ಪ್ರಾರಂಭಿಸಿದಾಗ, ಅರ್ಜಿದಾರನ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಟ್ಟಿದಲ್ಲಿ (ಸದಸ್ಯತ್ವ ತೆಗೆದು ಹಾಕಿದ್ದರಿಂದ) ಪ್ರಶ್ನಿಸಿ ರಿಟ್ ದಾಖಲಿಸಿದಾಗ, ಸದಸ್ಯತ್ವ ತೆಗೆದು ಹಾಕುವಾಗ ಯಾವುದೇ ವಿಚಾರಣೆ ಅಥವಾ ನೋಟೀಸ್ ನೀಡಿಲ್ಲವೆಂದು, ಆದ್ದರಿಂದ ಸದಸ್ಯತ್ವ ತೆಗೆದದ್ದು ಸರಿಯಲ್ಲವೆಂದು, ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಿ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕೇಳಿದಾಗ, ಸಹಕಾರ ಸಂಘ ರಾಜ್ಯ ಎಂದು ಒಪ್ಪಲಾಗದು ಆದ್ದರಿಂದ ರಿಟ್ ಅರ್ಜಿ ಮುಖಾಂತರ ಪರಿಹಾರ ನೀಡಲಾಗದು ಅರ್ಜಿದಾರ ಮತ್ತು ಸಂಘದ ವಿವಾದವಾದ್ದರಿಂದ ಸಹಕಾರ ಕಾಯಿದೆಯಲ್ಲಿ ಪರಿಹಾರ ಪಡೆಯತಕ್ಕದ್ದು. ರಿಟ್ ಮುಖಾಂತರ ಅಲ್ಲ. (2013 Indlaw Kar 1180)

5. ಕಲಂ 64ರ ವಿಚಾರಣೆ ನಂತರ, ಜಂಟಿ ನಿಬಂಧಕರು ಕಲಂ 68 ರಲ್ಲಿ ನಿರ್ದೇಶನ ನೀಡಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದ್ದರು. ಸಂಘವು ಯಾವುದೇ ರೀತಿ ಅನುಸರಣಾ ಕ್ರಮ ಜರುಗಿಸುತ್ತಿಲ್ಲವೆಂದು, ಅನುಪಾಲನೆಗೆ ಆದೇಶಿಸಬೇಕೆಂದು ರಿಟ್ ಅರ್ಜಿ ಸಲ್ಲಿಸಿದಾಗ, ಸಂಘ ಸಲ್ಲಿಸದ ವರದಿಯನ್ನು ಪರಿಶೀಲಿಸಿ, ಸಂಘವು ಸದಸ್ಯರ ಹಿತಕ್ಕಾಗಿ ದುಡಿಯಬೇಕೆಂದು ಸೂಚಿಸಿತು. ಆ ನಂತರ ಅರ್ಜಿದಾರರು ರಿಟ್ ವಾಪಸ್ ಪಡೆಯಲು ಅನುಮತಿ ಕೇಳಿದ್ದನ್ನು ಮನ್ನಿಸಿ, ವಾಪಸ್ ಪಡೆದಿದೆ ಎಂದು ತೀರ್ಪಿತ್ತಿದೆ. (2013 Indlaw Kar 951)

6. ಬಡಾವಣೆ ನಿರ್ಮಾಣ ಮಾಡುವಾಗ ಸಾರ್ವಜನಿಕ ಉಪಯೋಗಕ್ಕೆ ನಿಗದಿ ಪಡಿಸಿದ ನಿವೇಶನವನ್ನು ನಿಯಮ ಬಾಹಿರವಾಗಿ ಬೇರೆ ವ್ಯಕ್ತಿ/ಸಂಸ್ಥೆಗಳಿಗೆ ನೀಡತಕ್ಕದ್ದಲ್ಲ. ನಿವೇಶನೆ ಹಂಚಿಕೆ ನಿಯಮ ಪಾಲಿಸಿಲ್ಲವಾದ್ದರಿಂದ ಎದುರು ಅರ್ಜಿದಾರರಿಗೆ ಬಡಾವಣೆಯಲ್ಲಿ ನೀಡಿದ (5) ನಿವೇಶನಗಳು ರದ್ದುಪಡಿಸಿ, ಬಿ.ಡಿ.ಎ ನೀತಿ ನಿಯಮ ಪಾಲಿಸದೆ ಮಾರಾಟ ಮಾಡಿರುವುದು ಕಾನೂನು ಬಾಹಿರ ಎಂದು ರದ್ದುಗೊಳಿಸಿತು. (2013 Indlaw Kar 799, 2013 (6) KLJ 25)

7. ಜಮೀನು ಸ್ವಾದೀನ ಪಡಿಸಿಕೊಳ್ಳಲು ಅಂತಿಮ ಆದೇಶ (6(1) ರ ಆದೇಶ) ಮಾಡಿದ ನಂತರ, ಅದರಲ್ಲಿ 23 ವರ್ಷಗಳ ನಂತರ, ಮತ್ತು ಈಗಾಗಲೇ ವಿಭಾಗೀಯ ಪೀಠ ತೀರ್ಪು ನೀಡಿರುವುದರಿಂದ, ಇದನ್ನು ಪುನಃ ಪರಿಶೀಲಿಸಲಾಗದು. ತೀರ್ಮಾನವಾಗಿರುವ ವಿಷಯವನ್ನು ಮತ್ತೊಮ್ಮೆ ಈ ನ್ಯಾಯಾಲಯ ಮರು ಪರಿಶೀಲಿಸಲಾಗದು. ಅಂತಿಮಗೊಳಿಸುವ ಸಂದರ್ಭದಲ್ಲಿ ಸಣ್ಣಪುಟ್ಟ ತಪ್ಪುಗಳಾಗಿವೆ ಎಂದು ಈಗ ಮಧ್ಯಪ್ರವೇಶ ಮಾಡಲಾಗದು. ಈ ಬಗ್ಗೆ 2010 Indlaw SC 408 ನ್ನು ಅನುಸರಿಸಲಾಯಿತು ಮತ್ತು ಅಂತಿಮಗೊಂಡ ವಿಷಯವನ್ನು ಮತ್ತೆ ಮತ್ತೆ ಪುನರ್

ಪರಿಶೀಲಿಸಲಾಗದು. (2013 Indlaw Kar 799, 2013 (6) KLJ 25)

8. ಬೈಲಾ 10 ರನ್ವಯ ಸದಸ್ಯರು ತಮ್ಮ ಹೆಸರಿನಲ್ಲಿರುವ ನಿವೇಶನವನ್ನು ಮೂರನೆ ವ್ಯಕ್ತಿಗೆ ಮಾರಲು ಹಕ್ಕಿದೆ ಮತ್ತು ಇದಕ್ಕೆ ತಗಲುವ ಶುಲ್ಕವನ್ನು ಪಾವತಿಸಿ ನೋಂದಾಯಿಸಿದಾಗ, ಅದು ಖರೀದಿಸಿದ ವ್ಯಕ್ತಿಯ ಆಸ್ತಿಯಾಗುತ್ತದೆ. ಸಂಬಂಧಪಟ್ಟ ಅಧಿಕಾರಿ ಶುಲ್ಕ ಮತ್ತು ನೋಂದಣಿ ಶುಲ್ಕ ಎಷ್ಟು ಎಂಬುದನ್ನು ನಿಗದಿ ಪಡಿಸಬೇಕು ಮತ್ತು ಕಡಿಮೆ ಪಾವತಿಯಾಗಿದ್ದರೆ ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡುವ ಅಧಿಕಾರ ಇದೆ. ಇದಕ್ಕೆ ದಂಡ ಸೇರಿಸಿ ವಸೂಲಿ ಮಾಡಬಹುದು. ಆದರೆ ಈ ಪ್ರಸಂಗದಲ್ಲಿ 1987 ರಲ್ಲಿ ಮಾರಾಟವಾಗಿದ್ದು ಹೆಚ್ಚುವರಿ ಶುಲ್ಕವನ್ನು 5 ವರ್ಷದೊಳಗಾಗಿ ಕೇಳಬೇಕು. ಅದರೆ 2004 ರಲ್ಲಿ ಹೆಚ್ಚುವರಿ ಶುಲ್ಕ ವಸೂಲಿಗೆ ನೋಟೀಸ್ ಜಾರಿಗೆ ವಿಳಂಬವಾಗಿದ್ದರಿಂದ ಹೆಚ್ಚುವರಿ ವಸೂಲಾತಿ ಸಾಧ್ಯವಿಲ್ಲ. (2013 Indlaw Kar 283, 2013 (4) KLJ 247)

9. ಅರ್ಜಿದಾರರ ಅರ್ಜಿಯನ್ನು ವಿಚಾರಣಾ ನ್ಯಾಯಾಲಯ ವಜಾಗೊಳಿಸಿದ್ದನ್ನು ಪ್ರಶ್ನಿಸಿ ರಿಟ್ ದಾಖಲಿಸಲಾಗಿದೆ. ಈ ನ್ಯಾಯಾಲಯ ILR 1990 Kar 151 ರ ತೀರ್ಪಿನಲ್ಲಿ ಕಲಂ 125 ರಡಿ ನಿಬಂಧಕರಿಗೆ ನೋಟೀಸ್ ಜಾರಿ ಮಾಡಿಲ್ಲವೆಂದು, ಅರ್ಜಿಯನ್ನು ವಾಪಸ್ ಮಾಡಬೇಕು ಎಂದು ತೀರ್ಪನ್ನು ಎತ್ತಿ ಹಿಡಿದು, ಕೆಳ ನ್ಯಾಯಾಲಯ ಅರ್ಜಿ ವಜಾಗೊಳಿಸಿದ್ದು ಅನೂರ್ಜಿತ ಎಂದು ತೀರ್ಮಾನಿಸಿ, ಈಗಲೂ ಕಲಂ 125ರ ನೋಟೀಸ್ ನೀಡಲು ಅವಕಾಶ ಇರುವುದರಿಂದ, ಅರ್ಜಿದಾರರ ಅರ್ಜಿಯನ್ನು ವಾಪಸ್ ಮಾಡಲು ಆದೇಶಿಸಿತು. (2012 Indlaw Kar 2194)

10. ಕಾನೂನಿನಲ್ಲಿ ತಂದ ತಿದ್ದುಪಡಿ, ಯಾವ ದಿನಾಂಕದಿಂದ ಜಾರಿಗೆ ಬರುತ್ತದೆ ಎಂಬುದನ್ನು ವಿಭಾಗೀಯ ಪೀಠ ನಿರ್ಧರಿಸಿದೆ. ಅಂದರೆ ರಾಜ್ಯ ಸರ್ಕಾರ ತನ್ನ ತಕರಾರು ಸಲ್ಲಿಸುವಾಗ ತಿದ್ದುಪಡಿ ಆದ ದಿನಾಂಕದಿಂದ ಜಾರಿಗೆ ಬರುತ್ತದೆ ಎಂದು ತಿಳಿಸಿ ಲಿಖಿತವಾಗಿ ಸಲ್ಲಿಸಿದಾಗ, ವಿಭಾಗೀಯ ಪೀಠ ಈಗಾಗಲೇ ಇದನ್ನು ತೀರ್ಮಾನಿಸಿರುವುದರಿಂದ, ಈ ನ್ಯಾಯ ಪೀಠ (ಏಕ ಸದಸ್ಯ ಪೀಠ) ಅದನ್ನು ಪುನಃ ಪರಿಶೀಲಿಸಲಾಗದು. ಏಕೆಂದರೆ ಅದು ವಿಭಾಗೀಯ ಪೀಠದ ತೀರ್ಮಾನ. ವಿಭಾಗೀಯ ಪೀಠ ಯಾವುದೇ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಹೊಂದಿದೆ. ಅಂದರೆ ಕಾನೂನಿಗೆ ತಂದ ತಿದ್ದುಪಡಿ ಜಾರಿಗೆ ಬರುವುದು ತಿದ್ದುಪಡಿ ಯಾದ ದಿನಾಂಕದಿಂದ ಮತ್ತು ಪೂರ್ವಾನ್ವಯ ದಿನಾಂಕದಿಂದಲ್ಲ ಎಂದಿರುವುದು ಏಕ ಸದಸ್ಯ ಪೀಠ ತೀರ್ಮಾನಿಸುವ ವಿಷಯ ಅಲ್ಲ. (2012 Indlaw Kar 2875, 2013 (1) KLJ 320)

11. ಶ್ರೇಷ್ಠ ನ್ಯಾಯಾಲಯ ತನ್ನ ತೀರ್ಪಿನಲ್ಲಿ [(2012) 3 SCC 727 ರಲ್ಲಿ] ಮಧ್ಯವರ್ತಿಗಳನ್ನು ನೇಮಿಸಿ ಜಮೀನು ಖರೀದಿ ಮಾಡಲಾಗಿದೆ, ಆ ಅವಧಿಯೂ ದಾಖಲೆ/ವ್ಯಕ್ತಿಗಳನ್ನು ವ್ಯವಸ್ಥಿತವಾಗಿ ಖರೀದಿಸಿರುವುದರಿಂದ, ಸದಸ್ಯರಿಗೆ ಮಾರಾಟ ಮಾಡಿದ ನಿವೇಶನದಲ್ಲಿ ಹಲವಾರು ಸದಸ್ಯರು ಮನೆ ನಿರ್ಮಾಣ ಮಾಡಿರಬಹುದು. ಆದ್ದರಿಂದ ಸಂಘವು ಮತ್ತು ಮಾಲೀಕರ ಜೊತೆ ಮಾರುಕಟ್ಟೆ ದರದಲ್ಲಿ ಅದೇ ಜಮೀನನ್ನು ಖರೀದಿ ಮಾಡಲು ವ್ಯವಹರಿಸಬಹುದು. ಅಂದರೆ ಜಮೀನಿನ ಮಾಲೀಕರು ಒಪ್ಪಿದರೆ, ಸಂಘವು ಅದೇ ಜಮೀನನ್ನು ಮಾರುಕಟ್ಟೆ ದರದಲ್ಲಿ ಖರೀದಿಸಲು ಮುಂದಾಗಬಹುದು. ಆದ್ದರಿಂದ ಖಾಲಿ ಇರುವ ಜಮೀನನ್ನು ಭೂಮಾಲೀಕರಿಗೆ ವಾಪಸ್ ನೀಡಲು ಆದೇಶಿಸಲಾಯಿತು. ಸದಸ್ಯರಿಗೆ ನಿವೇಶನ ಹಂಚಿದ್ದರೂ ಖಾಲಿ ಜಮೀನನ್ನು ಮಾಲೀಕರಿಗೆ ಮರಳಿಸಲು ಆದೇಶಿಸಲಾಯಿತು. (2012 Indlaw Kar 1669)

12. ಗೃಹ ನಿರ್ಮಾಣ ಸಹಕಾರ ಸಂಘ ವ್ಯವಸಾಯ ಜಮೀನನ್ನು ಖರೀದಿ ಒಪ್ಪಂದ ಮಾಡಿಕೊಂಡು, ಭೂಪರಿವರ್ತನೆ ಮಾಡಿ, ಸಂಘದ ಹೆಸರಿಗೆ ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿದ್ದು, (24.11.1985), ಒಪ್ಪಂದ ಮಾಡಿಕೊಂಡ ವ್ಯಕ್ತಿ ದಿನಾಂಕ 9.1.1988 ರಂದು ಮರಣ ಹೊಂದಿದ

ಮೇಲೆ, ಅವನ ಕಾನೂನು ವಾರಸದಾರರು ಒಪ್ಪಂದ ಜಾರಿಗೆ ಭದ್ದರಾಗಿರುತ್ತಾರೆ. ಈ ಮದ್ಯ 10ನೇ ಎದುರುದಾರರು, ತಾನು ಜಮೀನು ಖರೀದಿ ಮಾಡಿದ್ದು, ನಿವೇಶನ ಅಭಿವೃದ್ಧಿ ಮಾಡಿ ಮಾರಾಟ ಮಾಡಲು ಕ್ರಮ ಜರುಗಿಸುತ್ತಿದ್ದು, ತಮ್ಮ ಹಕನ್ನು ಪ್ರತಿ ಪಾದಿಸಿದಾಗ, ವಿವಾದದಲ್ಲಿರುವ ಆಸ್ತಿ ಸಹಕಾರ ಸಂಘದ ವಶದಲ್ಲಿದೆ ಮತ್ತು ಮೂಲ ದಾಖಲೆಗಳು, ಸಂಘದ ವಷದಲ್ಲಿದ್ದು, 10ನೇ ಎದುರು ಅರ್ಜಿದಾರರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ತಮ್ಮ ಹಕ್ಕು ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ, 10ನೇ ಎದುರುದಾರರು ಯಾವುದೇ ಹಕ್ಕನ್ನು ಪ್ರತಿಪಾದಿಸಲು ಪ್ರಯತ್ನಿಸಿರುವುದು ವ್ಯರ್ಥ. ಅರ್ಜಿದಾರ ಸಹಕಾರ ಸಂಘ ತನ್ನ ದಾಖಲೆಗಳ ಮುಖಾಂತರ ತನ್ನ ಹಕ್ಕನ್ನು ಪ್ರತಿ ಪಾದಿಸಿರುವುದರಿಂದ ಜಮೀನು ಅವರ ವಶದಲ್ಲಿರುವುದನ್ನು ನಿರೂಪಿಸಿದೆ. (2011 Indlaw Kar 534)

13. ಉಪನಿಬಂಧಕರು ಒಬ್ಬ ಸದಸ್ಯನ ದಾವಾ ಪ್ರಕರಣದಲ್ಲಿ, ಗೃಹ ನಿರ್ಮಾಣ ಸಹಕಾರ ಸಂಘಕ್ಕೆ 30x40 ರ ನಿವೇಶನ ನೋಂದಾಯಿಸಲು ನಿರ್ದೇಶನ ನೀಡಿದ ನಂತರ, ಸಂಘವು ಅದನ್ನು ಜಾರಿ ಮಾಡದೇ ಇದ್ದಾಗ, ತೀರ್ಪನ್ನು ಜಾರಿ ಮಾಡಲು ಅರ್ಜಿ ಸ್ವೀಕರಿಸಿ, ಜಾರಿ ಮಾಡಲು ವಸೂಲಾತಿ ಅಧಿಕಾರಿ ಮುಂದೆ ಅರ್ಜಿ ಸಲ್ಲಿಸಿದಾಗ, ಆ ಅರ್ಜಿಯನ್ನು ವಸೂಲಾಧಿಕಾರಿ ವಜಾ ಮಾಡುತ್ತಾರೆ. ಆ ವಜಾ ಮಾಡಿದ ಅರ್ಜಿ ಮೇಲೆ ಕಲಂ 106ರಲ್ಲಿ ಉಪನಿಬಂಧಕರ ಮುಂದೆ ಮೇಲ್ಮನವಿ ಸಲ್ಲಿಸಿದಾಗ, ಈ ಮದ್ಯೆ ಸಂಬಂಧಪಟ್ಟ ನಿವೇಶನವನ್ನು ಸಾರ್ವಜನಿಕ ಪ್ರಕರಣೆ ಮೂಲಕ ಮಾರಾಟ ಮಾಡಿದ್ದು, ಅದನ್ನು ನೋಂದಾಯಿಸಲಾದ ನಂತರ, ಮೇಲ್ಮನವಿ ಪ್ರಾಧಿಕಾರ, ಮಾರಾಟವನ್ನು ರದ್ದುಗೊಳಿಸಿ, ನಿವೇಶನ ನೋಂದಾವಣೆಯನ್ನು ಕಿತ್ತು ಹಾಕಿತು. ಈ ಸಂದರ್ಭದಲ್ಲಿ ಎರಡು ಪಕ್ಷದವರು ರಿಟ್ ಅರ್ಜಿ ದಾಖಲಿಸಿದಾಗ, ಏಕ ಸದಸ್ಯ ಪೀಠ ನಿಬಂದಕರ ಅಧಿಕಾರವನ್ನು ಸಹಾಯಕ ನಿಬಂಧಕರು ಚಲಾಯಿಸಿದಾಗ, ಮೇಲ್ಮನವಿ ಸರ್ಕಾರಕ್ಕೆ ಇರಬೇಕೇ ಹೊರತು ಉಪನಿಬಂಧಕರಿಗಲ್ಲ ಎಂದು ಪ್ರತಿಪಾಧಿಸಿದಾಗ, ಈ ವಿಷಯವನ್ನು ಪೂರ್ಣ ಪೀಠಕ್ಕೆ ವರ್ಗಾಯಿಸಿತು. ಇದಕ್ಕೆ ಪೂರಕವಾಗಿ 1979 (2) KLJ 50ನ್ನು ಉಲ್ಲೇಖಿಸಿ, ಈ ತೀರ್ಪು ಕಾನೂನು ಸರಿಯಾದ ವಿಮರ್ಶೆಯಲ್ಲಿ, ಕಲಂ 2ಎ ನಲ್ಲಿ ಅರ್ಥ ವಿವರಣೆಯಲ್ಲಿ ನಿಬಂಧಕರ ಅಧಿಕಾರ ವರ್ಗಾವಣೆಗೂ, ಕಲಂ 106 ರಲ್ಲಿ ಮೇಲಾಧಿಕಾರಿ ಎಂಬ ಉಪಯೋಗಕ್ಕೂ ವ್ಯತ್ಯಾಸವಿದ್ದು. ಮೇಲ್ಕಂಡ ತೀರ್ಪು ಕಾನೂನ್ವಯ ಇಲ್ಲ. ಅಂದರೆ ಕಲಂ 106 ರಲ್ಲಿ ಉಪನಿಬಂಧಕರಿಗೆ ಮೇಲ್ಮನವಿ ಸ್ವೀಕರಿಸಲು ಅಧಿಕಾರ ಇಲ್ಲ ಎಂಬುದು ಸರಿಯಾದ ತೀರ್ಪಿಲ್ಲ. ಉಪನಿಂಬಂಧಕರು ಸಹಾಯಕ ನಿಬಂಧಕರ ಮೇಲಾಧಿಕಾರಿಯಾದ್ದರಿಂದ, ಅವರಿಗೆ ಮೇಲ್ಮನವಿ ಸ್ವೀಕರಿಸಿ ತೀರ್ಮಾನಿಸಲು ಅಧಿಕಾರ ಇದೆ. ಅಂದರೆ ನಿವೇಶನ ಮಂಜೂರಿ ಮಾಡಲು ನೀಡಿದ ಆದೇಶಕ್ಕೆ ವಿರುದ್ದವಾಗಿ ಮಾರಾಟಾಧಿಕಾರಿ ವಜಾ ಮಾಡಿದ ಆದೇಶವನ್ನು ಉಪನಿಬಂಧಕರು ಸ್ವೀಕರಿಸಿ ತೀರ್ಮಾನ ನೀಡಬಹುದು – ನಿವೇಶನ ಮಾರಾಟ ಮಾಡಿದ್ದನ್ನು ಕಿತ್ತುಹಾಕಿ, ಅರ್ಜಿದಾರನ ಹೆಸರಿಗೆ ಮಂಜೂರಿ ಮಾಡಿ ನೋಂದಾಯಿಸಲು ಆದೇಶಿಸಬಹುದು. (2011 Indlaw Kar 539)

14. ಒಂದು ಬಹು ಮಹಡಿ ವಸತಿ ಸಮುಚ್ಚಯ ಗೃಹ ನಿರ್ಮಾಣ ಸಹಕಾರ ಸಂಘದ ವಿಚಾರಣೆಗೆ (ಕಲಂ 64) ಕಾರಣ ಕೇಳುವ ನೋಟೀಸ್ ನೀಡಿದಾಗ, ವಸತಿ ಪಡೆದ ಸದಸ್ಯರು, ತಮ್ಮ ಹೇಳಿಕೆ /ಸಾಕ್ಷಿ ಸಲ್ಲಿಸಲು ವಕೀಲರನ್ನು ನೇಮಿಸಿಕೊಳ್ಳಲು ಅನುಮತಿ ಕೇಳಿದಾಗ, ಅದನ್ನು ತಿರಸ್ಕರಿಸಿದ್ದು, ವಿಚಾರಣಾಧಿಕಾರಿ, ಸದಸ್ಯರ ವಿರುದ್ದ ದಾವಿಸುವುದು ಎಂಬ ವಿಷಯದ ಆಧಾರದಲ್ಲಿ ರಿಟ್ ಅರ್ಜಿ ದಾಖಲಿಸಿದಾಗ, ವಿಚಾರಣೆ ಮುಕ್ತಾಯವಾಗಿ ಹಲವು ಆರೋಪಗಳು ರುಜು ವಾತಾಗಿರುವುದರಿಂದ ಮತ್ತು ಈಗಾಗಲೇ ಕಲಂ 68 ರಲ್ಲಿ ನ್ಯೂನತೆಗಳನ್ನು ಸರಿ ಪಡಿಸಲು ಆದೇಶಿಸಿರುವುದರಿಂದ, ಮತ್ತು

ಸಂಘವು ಈಗಾಗಲೇ ಅನುಪಾಲನಾ ವರದಿಯನ್ನು ಸಲ್ಲಿಸಿರುವುದರಿಂದ, ಕಲಂ 30ರಡಿ ಮತ್ತೊಮ್ಮೆ ನೋಟೀಸ್ ಕೊಡುವ ಅವಶ್ಯಕತೆ ಇಲ್ಲ. ಈ ನ್ಯಾಯಾಲಯದ ILR 2000 Kar 2341 ರ ತೀರ್ಪಿನಂತೆ ಕರಣ ಕೇಳುವ ನೋಟೀಸ್‌ಗೆ ಮಧ್ಯಪ್ರವೇಶ ಮಾಡಬಹುದೆಂದು ತೀರ್ಮಾನಿಸಿಲ್ಲ. ಆದ್ದರಿಂದ ನಿಬಂಧಕರು ನೀಡಿದ ಕಾರಣ ಕೇಳುವ ನೋಟೀಸ್‌ಗೆ ಮಧ್ಯಪ್ರವೇಶ ಮಾಡಬಾರದು. (2012 Indlaw Kar 2852, 2013 (1) KLJ 37)

15. ಒಂದು ಸಂಘ ಒಂದು ನಿವೇಶನ (ಎ–1893) ದಿನಾಂಕ 19.01.1996 (20.01.1996 ರಂದು ನೋಂದಾಯಿಸಲಾಗಿದೆ) ಒಬ್ಬ ಸದಸ್ಯನಿಗೆ ಮಾರಾಟ ಮಾಡಿ, ಅದೇ ನಿವೇಶನವನ್ನು ಮತ್ತೊಬ್ಬ ವ್ಯಕ್ತಿಗೆ ದಿನಾಂಕ 15.05.1996 (19.07.1997 ರಂದು ನೊಂದಾಯಿಸಲಾಗಿದೆ) ನೋಂದಾಯಿಸಿದಾಗ ಅರ್ಜಿದಾರರು ನಿವೇಶನ ನನ್ನದೆಂದು ಪ್ರತಿ ಪಾದಿಸಿದಾಗ, ಈ ರಿಟ್ ಅರ್ಜಿ ದಾಖಲಿಸಿದೆ. ಮೇಲ್ಮನವಿ ಪ್ರಾಧಿಕರಣ ಅರ್ಜಿದಾರರಿಗೆ ನಿವೇಶನ ಸಂಖ್ಯೆ 1900ನ್ನು ನೀಡಲಾಗಿದೆ, ( ಆ ನಂತರ 1893 ಎಂದು ತಿದ್ದಲಾಗಿದೆ) ಆದ್ದರಿಂದ ಅರ್ಜಿದಾರರಿಗೆ ನಿವೇಶನ ಎ–1893ರ ಮೇಲೆ ಯಾವುದೇ ಅಧಿಕಾರ ಇಲ್ಲವೆಂದು ತೀರ್ಪಿತ್ತಿದ್ದನ್ನು ರಿಟ್ ಅರ್ಜಿ ವಜಾ ಮಾಡಿ, ಸಹಕಾರಿ ಸಂಘ ಮೇಲ್ಮನವಿ ಪ್ರಾಧಿಕರಣದ ಮುಂದೆ, ಸುಳ್ಳು ದಾಖಲೆಗಳನ್ನು ನೀಡಿ, ತಾನು ಮಾಡಿದ ತಪ್ಪನ್ನು ಮುಚ್ಚಿ ಹಾಕಲು ಪ್ರಯತ್ನ ನಡೆಸಿರುವುದನು, ಮತ್ತು ವಿಚಾರಣೆ ಮಾಡಿ ತೀರ್ಮಾನ ಮಾಡಲು ನಿರ್ದೇಶಿಸಿದೆ. ಅರ್ಜಿದಾರರಿಗೆ ರೂ.5000/– ದಂಡ ವಿಧಿಸಿ, ನಾಲ್ಕು ವಾರಗಳಲ್ಲಿ ಪಾವತಿಸಲು, ಮತ್ತು ಪಾವತಿಸದಿದ್ದರೆ ಸಿವಿಲ್ ನ್ಯಾಯಾಲಯದಲ್ಲಿ ಜಾರಿ ಮಾಡಿ ವಸೂಲಿ ಮಾಡಿಕೊಳ್ಳಲು ಆದೇಶಿಸಲಾಯಿತು. (2008 Indlaw Kar 436, 2009 (3) KLJ 555)

16. ಅಭಿವೃದ್ಧಿ ನಕ್ಷೆಯನ್ನು ತಯಾರಿಸಿ, ಆ ನಕ್ಷೆಯಲ್ಲಿ ಸಾರ್ವಜನಿಕ ಉದ್ದೇಶಕ್ಕೆ ನಿಗದಿ ಪಡಿಸಿದ ನಿವೇಶನಗಳೆಂದು ಗುರುತಿಸಿದಾಗ, ನಿಯಮದಂತೆ ಅವುಗಳನ್ನು ಅರ್ಹ ಸಂಸ್ಥೆಗಳಿಗೆ ಹಂಚಬಹುದು. ಆದರೆ ನಕ್ಷೆಯನ್ನು 82–83 ರಲ್ಲಿ ತಯಾರಿಸಿದ್ದು ಬಿಡಿಎ ಠರಾವು ಸಂಖ್ಯೆ 629 ನ್ನು ದಿನಾಂಕ 21.06.1980 ರಲ್ಲಿ ಮಾಡಿದ್ದ ಈ ಮಧ್ಯ ಸಾರ್ವಜನಿಕ ಉದ್ದೇಶಕ್ಕೆ ನಿಗದಿ ಪಡಿಸಿದ ಜಮೀನನ್ನು, ಭೂಮಾಲೀಕರಿಗೆ ಮರು ವರ್ಗಾಯಿಸಲು ಬಿಡಿಎ ತೀರ್ಮಾನ ತೆಗೆದುಕೊಂಡ ನಂತರ, ಅದೇ ನಿವೇಶನವನ್ನು ಸಾರ್ವಜನಿಕ ಉದ್ದೇಶಕ್ಕೆಂದು 1983ರಲ್ಲಿ ಹಂಚಿಕೆ ಮಾಡಲು ಬರುವುದಿಲ್ಲ. (2008 Indlaw Kar 360, 2009 (1) KLJ 658)

17. ಎರಡು ಗೃಹ ನಿರ್ಮಾಣ ಸಹಕಾರ ಸಂಘಗಳು, ಬಹು ಮಹಡಿ ವಸತಿ ಕಟ್ಟಡಗಳನ್ನು ನಿರ್ಮಿಸಿದವು. (96+66) ಮೊದಲನೇ ಸಂಘ 99 ವರ್ಷದ ಗುತ್ತಿಗೆ ಮೇಲೆ ಮತ್ತೊಂದು ಸಂಘ ಖರೀದಿ ಮಾಡಿದ ಜಮೀನನ್ನು ವಸತಿ ಸಮುಚ್ಚಯ ನಿರ್ಮಾಣ ಮಾಡಿದಾಗ, ಗುತ್ತಿಗೆ ಆಧಾರದ ಮೇಲೆ ಪಡೆದ ಮನೆ/ಸದಸ್ಯರು ಮಾರಾಟ ಶುಲ್ಕ ಪಾವತಿ ಮಾಡಲು ನೋಂದಣಿ ಇಲಾಖೆಯಿಂದ ನೋಟೀಸ್ ಬಂದಾಗ, ವಾಸ ಮಾಡಲು ಮಾತ್ರ ಅವಕಾಶವಿದ್ದು ಖರೀದಿ ಪತ್ರ ಪಡೆಯದೇ ಇದ್ದುದರಿಂದ, ಸ್ಟಾಂಪ್ ಶುಲ್ಕ ಪಾವತಿಸುವುದು ಇಲ್ಲ, ಏಕೆಂದರೆ ಸದಸ್ಯರ ಹೆಸರಿಗೆ ಮನೆ ಮಾರಾಟವಾಗಿಲ್ಲ, ಅಂತಹ ಸಂದರ್ಭದಲ್ಲಿ ವಿವಿದ ತೀರ್ಪುಗಳನ್ನಾಧರಿಸಿ ತೀರ್ಪಿತ್ತಿದೆ. ಗೃಹ ನಿರ್ಮಾಣ ಸಹಕಾರಿ ಸಂಘಗಳ ಸ್ಟ್ಯಾಂಪ್ ಶುಲ್ಕ ಪಾವತಿಸುವ ಅವಶ್ಯಕತೆ ಇಲ್ಲವೆಂದು ದಿನಾಂಕ 01.04.2001 ರವರೆವಿಗೆ ಅವಕಾಶ ಇತ್ತು (ಕಲಂ 38) ಈ ಎರಡೂ ಸಂಘವನ್ನು 1980 ಮತ್ತು 1970 ರಲ್ಲಿ ನೊಂದಾಯಿಸಲಾಗಿತ್ತು ಮತ್ತು ಈ ಸ್ಟ್ಯಾಂಪ್ ಶುಲ್ಕ ಪಾವತಿಸಲು 01.04.2001 ರ ಪೂರ್ವದಲ್ಲಿ ಅವಕಾಶ ಇರಲಿಲ್ಲವಾದ್ದರಿಂದ, ಶುಲ್ಕ ಪಾವತಿಸಲು ಆದೇಶಿಸಬಾರದೆಂಬ ಮನವಿಗೆ, ಈಗ ಸಹಕಾರ ಸಂಘಗಳು ಕೊಟ್ಟಿರುವ ದಾಖಲೆಗಳಲ್ಲಿ, ವಸತಿ ಸದಸ್ಯರಿಗೆ ಮನೆ ಅಧಿಕಾರ ನೀಡಲಾಗಿದೆ ಎಂದು

ಅರ್ಥೈಸಬಹುದಾಗಿದ್ದು, ಅವರು ಸ್ಟ್ಯಾಂಪ್ ಶುಲ್ಕ ಪಾವತಿಸಲು ಭಾದ್ಯರು ಎಂಬ ತೀರ್ಮಾನಕ್ಕೆ ಬಂದು, ಮಾರುಕಟ್ಟೆದರವನ್ನು ನಿಗದಿ ಪಡಿಸಿ, ಸ್ಟ್ಯಾಂಪ್ ಶುಲ್ಕ ದರ ನಿಗದಿ ಪಡಿಸಲು ಆದೇಶಿಸಿತು. (2008 Indlaw Kar 12, 2008 (3) KLJ 377)

18. ಅರ್ಜಿದಾರ ಸಂಘ, ನಿವೇಶನ ಸಂಖ್ಯೆ 79 ಸಂಘದ ಹೆಸರಿನಲ್ಲಿದೆ ಮತ್ತು ಇದನ್ನು 11.03.74 ರಂದು ಮಾರಾಟ ಮಾಡಿದ ನೀಡಿ 15.10.75 ರಂದು ಪ್ರಮಾಣ ಪತ್ರ ನೀಡಲಾಯಿತು. ಖರೀದಿ ಮಾಡಿದ ವ್ಯಕ್ತಿ ದಿನಾಂಕ 22.11.1980 ರಂದು ಮತ್ತೊಬ್ಬ ವ್ಯಕ್ತಿಗೆ ಮಾರಾಟ ಮಾಡಿದ್ದು, ಅವನ ವಶಕ್ಕೆ ನಿವೇಶನ ನೀಡಲಾಯಿತು. ಆ ದಿನದಿಂದ ಮೂರನೇ ಖರೀದಿ ದಾರನ ವಶದಲ್ಲಿ ನಿವೇಶನ ಇದೆ ಎಂದು ವಾದಿಸಿದರು. ಈ ಮಧ್ಯ 11.03.74 ರಿಂದ ಎರಡನೇ ಮಾರಾಟವನ್ನು ರದ್ದುಗೊಳಿಸಿ, ನಿಬಂಧಕರಿಗೆ ಕಲಂ 125 ರಲ್ಲಿ ನೋಟೀಸ್ ನೀಡಿದೆ ಮತ್ತು ಮಾರಾಟ ರದ್ದಾದ ಪತ್ರವನ್ನು ನೋಂದಾಯಿಸಲಾಗಿದೆ. ಮಾರಾಟ ರದ್ದು ಮಾಡಿದ ದಾಖಲೆಯನ್ನು ದಿನಾಂಕ 05.06.1981 ರಂದು ನೋಂದಾಯಿಸಲಾಗಿದೆ. ಖರೀದಿ ಮಾಡಿದ ಮೂರು ವ್ಯಕ್ತಿಗಳು ಸಂಘದ ಸದಸ್ಯರಲ್ಲ. ಆದ್ದರಿಂದ ಮಾರಾಟ ಅಸಿಂದು ಎಂದು ವಾದಿಸಿದ್ದು. ಈ ಬಗ್ಗೆ ಶ್ರೇಷ್ಠ ನ್ಯಾಯಾಲಯದಲ್ಲಿ ವಿಶೇಷ ಅರ್ಜಿ ಸಲ್ಲಿಸಿದ್ದು, ಇದನ್ನು ಮರು ವಿಚಾರಣ ಮಾಡಲು ಉಚ್ಚನ್ಯಾಯಾಲಯಕ್ಕೆ ಆದೇಶಿಸಿದ ನಂತರ, ಈ ತೀರ್ಪು ಮೂಲ ದಾಖಲೆ ಮತ್ತು ಮೌಖಿಕ ಹೇಳಿಕೆಗಳನ್ನು ಪರಿಶೀಲಿಸಿ, ಮೂಲ ಅರ್ಜಿದಾರ ಕಾನೂನು ಭದ್ದವಾಗಿ ನಿವ---- ವಶದಲ್ಲಿ ಇರುವುದರಿಂದ, ಮತ್ತು ಮಾರಾಟ ರದ್ದಾದ ಬಗ್ಗೆ ಮಾರಾಟ ರದ್ದು ಮಾಡಿ ನೋಂದಾಯಿಸಿರುವುದರಿಂದ, ಅವನೇ ನಿಜವಾದ ಹಕ್ಕುದಾರ, ಸಹಕಾರ ಸಂಘವಲ್ಲ ಎಂದು ತೀರ್ಮಾನಿಸಿತು. (2007 Indlaw Kar 545, 2009 (2) KLJ 291)

19. ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯ ಕೆಲವು ಮಾಹಿತಿಯನ್ನು ಕೇಳಿ ಸಂಘಕ್ಕೆ ಅರ್ಜಿ ಕೊಟ್ಟಾಗ ಆ ಅಜಿಯನ್ನು ಸಂಘ ತಿರಸ್ಕರಿಸಿತು. ಆ ತಿರಸ್ಕಾರ ಹಿಂಬರಹದ ಮೇಲೆ, ಮಾಹಿತಿ ಹಕ್ಕು ಕಾಯಿದೆಯಡಿ, ಮಾಹಿತಿ ಆಯುಕ್ತಿರಿಗೆ ಅರ್ಜಿ ಸಲ್ಲಿಸಿದಾಗ, ಆ ಅರ್ಜಿಯನ್ನು ಗೃಹ ನಿರ್ಮಾಣ ಸಹಕಾರ ಸಂಘ ಸಾರ್ವಜನಿಕ ಸಂಸ್ಥೆ ಎಂಬ ವರ್ಗದಲ್ಲಿ ಬರುವುದಿಲ್ಲ ಆದ್ದರಿಂದ ಅರ್ಜಿಯನ್ನು ತಿರಸ್ಕರಿಸಿತು. ಇದನ್ನು ಪ್ರಶ್ನಿಸಿ ರಿಟ್ ಅರ್ಜಿ ದಾಖಲಿಸಿದಾಗ, ಮೂಲ ಪ್ರಶ್ನೆ ಬದಲಾಗಿ ಮಾಹಿತಿ ಆಯೋಗವನ್ನು ಕಕ್ಷಿದಾರರನ್ನಾಗಿ ಮಾಡಬಹುದೇ ಎಂಬ ಅಂಶವನ್ನು ತೀರ್ಮಾನಿಸಲು ಮುಂದಾಯಿತು. 1962 Indlaw SC 479 ರಲ್ಲಿ ಯಾವುದೇ ಮೇಲ್ಮನವಿ ಪ್ರಾಧಿಕಾರವನ್ನು ಕಕ್ಷಿದಾರರನ್ನಾಗಿ ಮಾಡದಿದ್ದರೆ, ಆದೇಶ ಜಾರಿ ಮಾಡದೆ ಇದ್ದರೆ, ನ್ಯಾಯಾಲಯ ನಿಂದನೆಗೆ ಭದ್ದರಾಗುವುದಿಲ್ಲ ಆದ್ದರಿಂದ ನ್ಯಾಯಾಧಿಕರಣವನ್ನು ಕಕ್ಷಿದಾರರನ್ನಾಗಿ ಮಾಡಬೇಕು ಎಂಬುದನ್ನು ಉಲ್ಲೇಖಿಸಿ, 1998 Indlaw SC 1957/1999 Indlaw SC 963 ರಲ್ಲಿ ತೀರ್ಪಿನಲ್ಲಿ ಕೆಳ ನ್ಯಾಯಾಲಯಗಳನ್ನು ಕಕ್ಷಿದಾರರನ್ನಾಗಿ ಮಾಡುವ ಅವಶ್ಯಕತೆ ಇಲ್ಲವೆಂಬ ಶ್ರೇಷ್ಠ ನ್ಯಾಯಾಲಯ ತೀರ್ಪನ್ನು ಉಲ್ಲೇಖಿಸಿ, ಈ ಪ್ರಕರಣದಲ್ಲಿ ಮಾಹಿತಿ ಆಯೋಗ ಕೆಳ ನ್ಯಾಯಾಲಯದಲ್ಲಿ, ಅದು ಒಂದು ಸ್ವಾತಂತ್ರ ವ್ಯವಸ್ಥೆ ಆದ್ದರಿಂದ ಅ ಆಯೋಗವನ್ನು ಕಕ್ಷಿದಾರರನ್ನಾಗಿ ಮಾಡದೇ ಇದ್ದರೆ, ಈ ನ್ಯಾಯಾಲಯ ನೀಡಿದ ಆದೇಶಕ್ಕೆ ಭದ್ದರನ್ನಾಗಿ ಮಾಡಲು ಬರುವುದಿಲ್ಲವೆಂದು, ಮಾಹಿತಿ ಆಯೋಗಕ್ಕೆ, ಆಯೋಗ ಸಲ್ಲಿಸಿದ್ದ ಕೈಬಿಡುವ ಪ್ರಸ್ತಾವನೆ ತಿರಸ್ಕರಿಸಿ ಕಕ್ಷಿದಾರರನ್ನಾಗಿ ಮಾಡಲು ಆದೇಶಿಸಿತು. (2007 Indlaw Kar 312, AIR 2007 Kar 136, 2008 (1) KLJ 672)

20. ಬಿ.ಡಿ.ಎ ಮುಖಾಂತರ ಜಮೀನು ಸ್ವಾಧೀನದ ಮುಖಾಂತರ ವಶಕ್ಕೆ ಪಡೆದ ನಂತರ, ಆ ಜಮೀನನ್ನು ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ವಹಿಸಬೇಕಾದರೆ ಕಲಂ 38ಬಿ ಅನ್ವಯ ಸರ್ಕಾರದ ಪೂರ್ವಾನುಮತಿ ಅವಶ್ಯಕ. ಈ ತಿದ್ದುಪಡಿಯನ್ನು ದಿನಾಂಕ 20.12.1975 ರಲ್ಲಿ ಮಾಡಿದ್ದರೂ, ಇದು

ಪೂರ್ವಾನುವಯವಾಗುತ್ತದೆ. ಜಮೀನನ್ನು ದಿನಾಂಕ 22.01.1983 ರಲ್ಲಿ ವಹಿಸಿಕೊಡಲಾಯಿತು. ಅರ್ಜಿದಾರರು ಈ ನ್ಯಾಯಾಲಯಕ್ಕೆ ಅಗಿಂದಾಗೆ ಪ್ರಕರಣ ದಾಖಲಿಸುತ್ತಿದ್ದು. ಪ್ರಕರಣ ದಾಖಲಿಸಲು ವಿಳಂಬ ಮಾಡಿದ್ದು, ತೊಡಕುಂಟಾದ ಕೂಡಲೆ ಪ್ರಶ್ನಿಸದೇ ಇರುವುದರಿಂದ, ಅವರು ಭೂಮಿಯನ್ನು ಬಿಡಿಎ ವಶಕ್ಕೆ ಪಡೆದದ್ದನ್ನು ತುರ್ತಾಗಿ ಪ್ರಶ್ನಿಸಿಲ್ಲವಾದ್ದರಿಂದ ಆ ಹಕ್ಕನ್ನು ಬಿಟ್ಟುಕೊಟ್ಟಂತಾಗುತ್ತದೆ. (2007 Indlaw Kar 81, 2007 (5) KLJ 200)

21. ಗೃಹ ನಿರ್ಮಾಣ ಸಹಕಾರ ಸಂಘಗಳು ಕಾಯಿದೆ ಕಲಂ 38ರ ತಿದ್ದುಪಡಿ ಪ್ರಶ್ನಿಸಿ ರಿಟ್ ಮೇಲ್ಮನವಿ ಸಲ್ಲಿಸಿದ್ದು, ಆ ನಂತರ ಜಂಟಿ ಮೆಮೊ ಸಲ್ಲಿಸಿ, ಈ ಮೇಲ್ಮನವಿ ವಾಪಸ್ ಪಡೆಯಲು ವಿನಂತಿಸಿದಾಗ, ರಿಟ್ ಮೇಲ್ಮನವಿ ವಾಪಸ್ ಪಡೆಯಲಾಗಿದೆ ಎಂದು ತೀರ್ಮಾನಿಸಿತು. (2005 Indlaw Kar 333, 2007 (4) KLJ 645)

22. ಭೂಸ್ವಾದೀನ ಪಡೆಸಿಕೊಂಡ ನಂತರ, ಭೂಮಾಲೀಕರು ಸ್ವಾರ್ಥಕ್ಕಾಗಿ ಅದೇ ಜಮೀನನ್ನು ಸಾರ್ವಜನಿಕರಿಗೆ ಖಾಸಗಿಯಾಗಿ ಮಾರಾಟ ಮಾಡಿ ಮೊಸ ಮಾಡಬಹುದು. ಏಕೆಂದರೆ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾದ ಕೂಡಲೆ, ಭೂಮಿಯ ಬೆಲೆ ಏರಿಕೆಯಾಗುವುದರಿಂದ, ಅದರ ಪ್ರಯೋಜನ ಪಡೆಯಲು ಅಡ್ಡದಾರಿ ಹಿಡಿಯುತ್ತಾರೆ. ಆ ರೀತಿ ನಿವೇಶನ ಪಡೆದ ವ್ಯಕ್ತಿಗಳು ಮನೆಯನ್ನು ನಿರ್ಮಿಸಿರಬಹುದು. ಈ ರೀತಿಯಾಗಲು ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಗುವುದೆ ಮುಖ್ಯ ಕಾರಣ. ಭೂಸ್ವಾಧೀನವಾದ ಕೂಡಲೆ ಆ ಜಮೀನು ಸರ್ಕಾರದ ವಶದಲ್ಲಿದ್ದು, ಅದನ್ನು ಸಹಕಾರ ಸಂಘಗಳಿಗೆ ವರ್ಗಾಯಿಸುತ್ತದೆ. ಸಂಘಗಳು ಈ ರೀತಿ ಅವ್ಯವಹಾರ ನಡೆದಾಗ ಸಿವಿಲ್ ನ್ಯಾಯಾಗಳಿಂದ ಪರಿಹಾರ ಪಡೆಯಬೇಕು. (2006 Indlaw Kar 167, 2006 (4) KLJ 234, 2007 (3) KLJ 517)

23. 1988 ರವರೆವಿಗೆ ಸಂಘದ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಬಗ್ಗೆ ವಿವಾದಗಳಿರಲಿಲ್ಲ ಮೂಲ ಉಪನಿಯಮಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವ್ಯಕ್ತಿಗಳು ಮಾತ್ರ ಸದಸ್ಯರಾಗಬಹುದೆಂದಿತ್ತು. ಈ ವರ್ಗದ ಸದಸ್ಯರಲ್ಲದೇ ಬೇರೆ ವರ್ಗದ ಸದಸ್ಯರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಪ್ರಾರಂಭಿಸಿದರು, ಅದರಂತೆ ಸಂಘದ ಹೆಸರನ್ನು ಬದಲಾವಣೆ ಮಾಡುವ ಅವಶ್ಯಕತೆ ಇತ್ತು. ನಿಬಂಧಕರು ಕಲಂ 12(5) ರಡಿ ಉಪನಿಯಮಗಳನ್ನು ತಿದ್ದುಪಡಿ ಮಾಡಲು, ಅಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವ್ಯಕ್ತಿಗಳಿಗೆ ಮಾತ್ರ ಸದಸ್ಯತ್ವ ನೀಡಲು ನೋಟೀಸ್ ನೀಡಿದ್ದು, ಬೈಲಾ ತಿದ್ದುಪಡಿ ಮಾಡಿದ ನಂತರ, ಈ ಮಧ್ಯೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವ್ಯಕ್ತಿಗಳಲ್ಲದ ಸದಸ್ಯರನ್ನು ಸಂಘದ ವ್ಯವಹಾರದಿಂದ ಹೊರಗಡಬೇಕು. ಈ ರೀತಿ ಮಾಡಿದಾಗ ಇದು ಎರಡು ಸಹಕಾರ ಸಂಘಗಳು ಎಂದು ತಿಳಿಯತಕ್ಕದ್ದಲ್ಲ. ಆದರೆ ಕೆಲವು ನಿರ್ದೇಶಕರು ಬೇರೆ ಬೇರೆ ವಿಳಾಸದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂಬುದು ತಪ್ಪು. ಆದ್ದರಿಂದ ಕಲಮ 70 ರಲ್ಲಿ ಈ ಪ್ರಕರಣ ಇತ್ಯರ್ಥ ಪಡಿಸಲಾಗದು. ಅಂದರೆ ಒಂದು ವಿವಾದವಿದೆ ಎಂದರೆ, ಎರಡು ಪಕ್ಷಗಳಿರಬೇಕು. ಈ ಪ್ರಕರಣದಲ್ಲಿ ಸಂಘ ಒಂದೇ ಇರುವುದರಿಂದ ಇದು ಕಲಂ 70ರಲ್ಲಿ ಊರ್ಜಿತವಲ್ಲ. ಈ ಬಗ್ಗೆ ಉಚ್ಚನ್ಯಾಯಾಲಯ ನಿಬಂಧಕರಿಗೆ ನಿರ್ದೇಶನ ನೀಡಿ, ಆಡಳಿತ ಮಂಡಳಿ ರದ್ದು ಪಡಿಸಿ (ಎರಡು ವಾರಗಳೂ) ಆಡಳಿತಾಧಿಕಾರಿ ನೇಮಿಸಿ, ಹೊಸ ಮಂಡಳಿ ರಚನೆಗೆ ಕ್ರಮಕೈಗೊಳಲು ನಿರ್ದೇಶಿಸಿದರು. ಈ ಪ್ರಕರಣಕ್ಕೆ ಕಾರಣರಾದ ಎರಡನೆ ಅರ್ಜಿದಾರರು ಮತ್ತು 4ನೇ ಎದುರು ಅರ್ಜಿದಾರನ್ನು ಚುನಾವಣೆಯಿಂದ ಹೊರಗಿಡಲು ಸೂಚಿಸಿತು. ಎರಡನೇ ಅರ್ಜಿದಾರರು ಮಾರಾಟ ರದ್ದುಪಡಿಸಿದ ಮಾರಾಟವನ್ನು ರದ್ದು ಪಡಿಸಿ ಉಪನೋಂದಣಾಧಿಕಾರಿಗೆ ಮಾರಾಟ ರದ್ದು ಪಡಿಸಿದ ದಾಖಲೆಗಳಲ್ಲಿ ಕೈಬಿಡಲು ಸೂಚಿಸಿತು. ಹೊಸ ಆಡಳಿತ ಮಂಡಳಿ ಹಿಂದಿನ ಮಂಡಳಿ ತೆಗೆದುಕೊಂಡ

ತೀರ್ಮಾನಗಳನ್ನು ಮರು ಪರಿಶೀಲಿಸಬಹುದೆಂದು ಸೂಚಿಸಿತು. (2006 Indlaw Kar 43, 2006 (2) KLJ 265)

24. ಏಕ ಸದಸ್ಯ ಪೀಠ ಸಹಕಾರ ಸಂಘದ ಪರವಾಗಿ ಭೂಸ್ವಾದೀನ ಮಾಡಲು ಸಂಪುಟದ ಒಪ್ಪಿಗೆ ಇಲ್ಲದೆ ಇದ್ದುದರಿಂದ ಮತ್ತು ಸಹಕಾರ ಸಂಘಗಳಿಗೆ ನೇರವಾಗಿ ಭೂಮಾಲೀಕರಿಂದ ಜಮೀನು ಖರೀದಿಸಲು ಕ್ರಮ ಜರುಗಿಸಿ, ಅದು ಯಶಸ್ವಿಯಾಗದೇ ಇದ್ದರೆ, ಸರ್ಕಾರಕ್ಕೆ ಮನವಿ ಸಲ್ಲಿಸಿದರೆ (ಯೋಜನೆಯೊಂದಿಗೆ) ಭೂಸ್ವಾಧೀನ ಮಾಡಿಕೊಳ್ಳಬಹುದೆಂದು ಸೂಚಿಸಿತ್ತು. ಆದರೆ ಸಹಕಾರ ಸಂಘಗಳು ಬಡಾವಣೆ ರಚಿಸಿ, ಸದಸ್ಯರಿಗೆ ಹಂಚಲು ಪ್ರಸ್ತಾವನೆ ಸಲ್ಲಿಸಿದಾಗ, ಸಂಪುಟದ ಟಿಪ್ಪಣಿಯನ್ನು ತಪ್ಪಾಗಿ ಗ್ರಹಿಸಿ ಸೂತ್ತೋಲೆ ಹೊರಡಿಸಲಾಗಿದೆ ಇದು ಸರಿಯಲ್ಲ. ಮೂವರು ಸದಸ್ಯರ ಸಮಿತಿ ರಚಿಸಿ, ಆ ಸಮಿತಿ, ಬೇಡಿಕೆಯನ್ನು ಪರಿಶೀಲಿಸಿದ ನಂತರ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಸೂಚಿಸಿತು. ಸಂಘಗಳು ಮೊದಲ ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ಜಮೀನನ್ನು ಭೂಸ್ವಾಧೀನಾ ಪಡಿಸಿಕೊಳ್ಳಲು ಮನವಿ ಸಲ್ಲಿಸಿದರೆ, ಅದನ್ನು ಯೋಜನೆ ರೂಪದಲ್ಲಿ ಸಲ್ಲಿಸಿದೆ ಎಂದು ಪರಿಗಣಿಸಿ ಭೂಸ್ವಾಧೀನ ಪ್ರಕ್ರಿಯೆ ನಡೆಸುವುದು. ಅದರಂತೆ 6(1)ರ ನೋಟಿಫಿಕೇಷನ್ ಹೊರಡಿಸಿದ ನಂತರ ಭೂಮಾಲೀಕರು ಪ್ರಶ್ನಿಸಿಲ್ಲವಾದ್ದರಿಂದ ರಿಟ್ ಅರ್ಜಿಗಳನ್ನು ವಜಾ ಮಾಡಲಾಯಿತು. (2005 Indlaw Kar 83, 2006 (1) KLJ 233)

25. ಗೃಹ ನಿರ್ಮಾಣ ಸಂಘದ ಸಾರ್ವಜನಿಕ ಸೇವಾ ನಿವೇಶನವನ್ನು ಬಿಡಿಎ ಗೆ ವರ್ಗಾಯಿಸಬೇಕು. ಆ ನಂತರ ಬಿಡಿಎ ಅದರ ನಿಯಮ 2(ಬಿ) ನಂತೆ ಮತ್ತು ಬಿ.ಡಿ.ಎ ಕಾಯಿದೆ ಕಲಂ 32(5) ರಂತೆ ನೋಂದಾಯಿತ ಸಂಸ್ಥೆಗಳಿಗೆ ನೀಡಬಹುದು. ಸಹಕಾರ ಸಂಘಗಳ ಸಿ.ಎ ನಿವೇಶನಗಳನ್ನು ಸ್ವಯಂ ಸ್ಫೂರ್ತಿಯಿಂದ ಬಿಡಿಎ ವಶಕ್ಕೆ ತೆಗೆದುಕೊಳ್ಳಬಹುದೆಂಬ ವಾದವನ್ನು ತಿರಸ್ಕರಿಸಲಾಯಿತು ಮತ್ತು ಸಂಬಂಧಪಟ್ಟ ಸಹಕಾರ ಸಂಘ ತನ್ನ ಅಧಿಕಾರವನ್ನು ಬಿಟ್ಟುಕೊಟ್ಟು ಬಿಡಿಎ ಗೆ ವರ್ಗಾಯಿಸಿದ ನಂತರವೆ, ಬಿಡಿಎ ಸಾರ್ವಜನಿಕ ಸಂಸ್ಥೆಗಳಿಗೆ ನೋಂದಾಯಿಸಲು ಅಧಿಕಾರ ಇದೆ. ಆದ್ದರಿಂದ ಅರ್ಜಿದಾರ ಸಹಕಾರ ಸಂಘ ಸಿ.ಎ ನಿವೇಶನಗಳನ್ನು ಬಿಡಿಎ ಗೆ ವರ್ಗಾಯಿಸಬೇಕು, ಆ ನಂತರ ಬಿಡಿಎ ಹಂಚಿಕೆ ಮಾಡಬಹುದು. (2005 Indlaw Kar 214, 2006 (4) KLJ 598)

26. ಕರ್ನಾಟಕ ಸ್ಟ್ಯಾಂಪ್ ಶುಲ್ಕ ಕಾಯಿದೆ 1957 ಕಲಂ 20 ಮತ್ತು ಕರ್ನಾಟಕ ಸಹಕಾರ ಕಾಯಿದೆ, ಕಲಂ 38ರಲ್ಲಿ ಸಹಕಾರ ಸಂಘಗಳಿಗೆ ನೀಡಿದು ಶುಲ್ಕ ವಿನಾಯ್ತಿಯನ್ನು ರಾಜ್ಯ ಸರ್ಕಾರ ವಿಧಾನ ಮಂಡಳದಲ್ಲಿ ತಿದ್ದುಪಡಿ ಮಾಡುವ ಅಧಿಕಾರ ಇದೆ. ವಿಧಾನ ಮಂಡಳ ಕಾಯಿದೆಗೆ ತಿದ್ದುಪಡಿ ತರಲಾಗದು ಎಂದು ತಿಳಿಯತಕ್ಕದ್ದಲ್ಲ. ವಿನಾಯ್ತಿಯನ್ನು ಈಗಾಗಲೇ ಕೊಟ್ಟಿದ್ದನ್ನು ಕಿತ್ತು ಹಾಕಲು ಅಧಿಕಾರ ಇದೆ, ಅಂದರೆ ಯಾರಿಗೆ ವಿನಾಯ್ತಿ ಕೊಡಬೇಕೆಂದು ತೀರ್ಮಾನಿಸಿದ್ದಾಗ, ಅವರಿಗೆ ಶುಲ್ಕ ಪಾವತಿಸಲು ಅಸಕ್ತರು ಎಂದು ನೀಡಿದ್ದು, ಅವರು ಶಕ್ತರು ಎಂದು ತೀರ್ಮಾನಿಸಿದಾಗ ಆ ವಿನಾಯ್ತಿಯನ್ನು ತೆಗೆದು ಹಾಕುವುದು ಅದರ ಅಧಿಕಾರ. ವಿನಾಯ್ತಿ ಕೇಳುವುದು ಒಂದು ಹಕ್ಕಲ್ಲ. ಯಾವ ವರ್ಗದ ಸದಸ್ಯರಿಗೆ ಶುಲ್ಕ ವಿನಾಯ್ತಿ ನೀಡಬೇಕೆಂದು ಸರ್ಕಾರ ತೀರ್ಮಾನಿಸಬಹುದು. ಸಂವಿಧಾನದ ಅನುಚ್ಛೇದ 14 ವಿರುದ್ಧವಲ್ಲ. ವಿನಾಯ್ತಿಯನ್ನು ಪುನಃ ನೀಡಲು ಅವಶ್ಯಕ ಇಲ್ಲವೆಂದು ವಿಧಾನ ಮಂಡಳ ತೀರ್ಮಾನಿಸಬಹುದು. ಮೇಲ್ಮನವಿ ಸಲ್ಲಿಸುವಾಗ ಶೇ.50% ರಷ್ಟು ಹಣ ಪಾವತಿಸಿ ಶರತ್ತು ಅಸಂವಿಧಾನಿಕವಲ್ಲ. ಮೇಲ್ಮನವಿ ಒಂದು ಮೂಲ ಭೂತಹಕಲ್ಲ. ಶೇ.50% ರಷ್ಟು ಹಣ ಪಾವತಿಸಲು ಶರತ್ತು ಮೇಲ್ಮನವಿ ಸಲ್ಲಿಸುವುದನ್ನು ತಪ್ಪಿಸಲು ಎಂದು ತಿಳಿಯತಕ್ಕದ್ದಲ್ಲ ಮತ್ತು ಮೇಲ್ಮನವಿ ಒಂದು ಮೂಲ ಭೂತ ಹಕ್ಕಲ್ಲವಾದ್ದರಿಂದ ಇದು ಅಸಂವಿಧಾನಿಕವಲ್ಲ. (2002 Indlaw Kar 208, AIR 2002 Kar 237, 2002 (3) KLJ 74)

27. ಸಿವಿಲ್ ನ್ಯಾಯಾಲಯದಲ್ಲಿ ಎರಡನೇ ದಾವಾ ದಾಖಲಿಸಲು ವಿಳಂಬವಾದಾಗ ವಿನಾಯ್ತಿ ನೀಡಬಹುದೆ ಎಂಬ ಪ್ರಶ್ನೆಗೆ, ಮೊದಲನೇ ದಾವಾ ಪ್ರಕರಣ, ಬೇರೆ ನ್ಯಾಯಾಲಯದಲ್ಲಿ, (ಸಂಬಂಧ ಪಡದ ಮತ್ತೊಂದು ನ್ಯಾಯಾಲಯದಲ್ಲಿ ದಾಖಲಿಸಿದ್ದ) ಕಾರಣದಿಂದ, ವಿಳಂಬ ವಿನಾಯ್ತಿ ನೀಡಬಹುದು – ಮೊದಲನೇ ಪ್ರಕರಣ ಬಾಕಿ ಇದ್ದು ಸಮಯವನ್ನು ವಿಳಂಬ ವಿನಾಯ್ತಿಗೆ ಪರಿಗಣಿಸಿ, ವಿನಾಯ್ತಿ ನೀಡಬಹುದು. ಆದರೆ ಮೊದಲನೇ ಪ್ರಕರಣವನ್ನು ವಾಪಸ್ ಪಡೆಯಲೇ ಬೇಕೆಂಬ ಶರತ್ತು ವಿಧಿಸಲಾಗದು. (1997 Indlaw Kar 246, AIR 1998 Kar 20, 1997 (3) KLJ 622)

28. ಗೃಹ ಸಾಲ ಪಡೆದು ಬಹು ಮಹಡಿ ವಾಸದ ಸಮೂಚ್ಚಯದಲ್ಲಿ ವಾಸಿಸುವ ಆಸ್ತಿಯನ್ನು, ಜಪ್ತಿ ಮಾಡಿ ಮಾರಾಟ ಮಾಡಬಹುದೇ ಎಂಬ ಪ್ರಶ್ನೆಗೆ, ಮಹಾರಾಷ್ಟ್ರ ಸಹಕಾರ ಸಂಘಗಳ ಕಾಯಿದೆಯಡಿ ಪರಿಶೀಲಿಸಿ, ಸಾಲಗಾರ ಸದಸ್ಯನ ಆಸ್ತಿ ಯನ್ನು (ಅಂದರೆ ಪ್ಲಾಟ್) ಜಪ್ತಿ ಮಾಡಿ ಮಾರಾಟ ಮಾಡಬಹುದು (ಕಲಂ 60). ಈ ತೀರ್ಮಾನವನ್ನು ಮಹಾರಾಷ್ಟ್ರ ಉಚ್ಚನ್ಯಾಯಾಲಯ ನೀಡಿದ್ದ ತೀರ್ಪನ್ನು ಕಿತ್ತುಹಾಕಿ, ಸಾಲಗಾರನ ಬಹು ಮಹಡಿ ಕಟ್ಟಡ ಆಸ್ತಿ (ಸಂಖ್ಯೆ 9) ನ್ನು ಜಪ್ತಿ ಮಾಡಿ ಮಾರಾಟ ಮಾಡಬಹುದು ಎಂದು ತೀರ್ಮಾನಿಸಿತು. (1975 Indlaw SC 178, (1975) 2 SCC 105, AIR 1975 SC 1470, 1975 Bom LR 549, (1975) Supp SCR 270)

29. ಗೃಹ ನಿರ್ಮಾಣ ಸಹಕಾರ ಸಂಘಗಳು ಗೃಹೊಪಯೋಗಕ್ಕೆ ಬಳಸಿದ ಜಾಗ, ಬಾಡಿಗೆ ನಿಯಂತ್ರಣ ಕಾಯಿದೆ ವ್ಯಾಪ್ತಿಗೆ ಬರುವುದಿಲ್ಲ ಮತ್ತು ಸೆಸ್ ಪಾವತಿಸಲು ಕೇಳಬಾರದು. ಬಹು ಮಹಡಿ ಕಟ್ಟಡದ ಮನೆಯನ್ನು ಗುತ್ತಿಗೆ/ವಹಿಸಿದ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ (ಮಹಾರಾಷ್ಟ ಸಹಕಾರ ಕಾಯಿದೆಯಡಿ) ಅನ್ವಯಿಸುವುದು ಸರಿಯಲ್ಲ, ಏಕೆಂದರೆ ಮನೆ ಮಾಲೀಕನನ್ನು ಬಾಡಿಗೆ ದಾರನಿಗೆ ಹೊಲಿಕೆ ಸಲ್ಲದು. ಅಂದರೆ ವ್ಯಕ್ತಿ ನಿರ್ಮಿಸಿದ ಮನೆಗೆ ನಿಗದಿ ಪಡಿಸುವ ಸೆಸ್ ದರದಂತೆ ಪರಿಗಣಿಸತಕ್ಕದ್ದಲ್ಲ. ಇದಕ್ಕೆ ಪೂರಕವಾಗಿ (1961) 3 SCR 77/1960 Indlaw SC 235/(1963) 1 SCR 220/1962 Indlaw SC 407/1962 Indlaw SC 115/(1963) SCR 809/1962 Indlaw SC 350/(1967) 3 SCR 28/1967 Indlaw SC 460/(1963) 1 SCR 404/1962 Indlaw SC 350 ತೀರ್ಪುಗಳನ್ನು ಗಣನೆಗೆ ತೆಗೆದುಕೊಂಡು ತೀರ್ಮಾನಿಸಿತು. (1971 Indlaw SC 498, (1972) 1 SCC 70, AIR 1972 SC 845, 1971 RCR (Rent) 991, (1972) 2 SCR 257)

30. ಮದರಾಸ್ ಬಾಡಿಗೆ ಕಾಯಿದೆ 1960 ರಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ, ಬಾಡಿಗೆ ಕಾಯಿದೆಯಿಂದ ವಿನಾಯ್ತಿ ನೀಡಿರುವುದು, ಸಂವಿಧಾನದ ಅನುಚ್ಛೇದ 14ರ ಉಲ್ಲಂಘನೆಯಾಗುವುದಿಲ್ಲ. ಬಾಂಬೆ ಬಾಡಿಗೆ ಕಾಯಿದೆಯಲ್ಲಿ ಗೃಹ ಮಂಡಳಿಗೆ ನೀಡಿದ ವಿನಾಯ್ತಿಯನ್ನು ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ವಿಸ್ತರಿಸಲು ನಿರಾಕರಿಸಿದ ಪ್ರಕರಣ ಅನ್ವಯ ವಾಗದು. (1984 Indlaw SC 247, (1985) 1 SCC 395, AIR 1985 SC 270)

31. ಒಂದು ಸಂಘದ ಸದಸ್ಯ, ಸಂಘದ ಒಪ್ಪಿಗೆ ಇಲ್ಲದೆ ಮತ್ತೊಬ್ಬ ವ್ಯಕ್ತಿಗೆ ಬಾಡಿಗೆ ನೀಡ ಬಾರದೆಂದು ನಿಬಂದನೆಗಳ ವಿರುದ್ಧ, ಬಾಡಿಗೆ ನೀಡಿದ್ದರಿಂದ ಮತ್ತು ಅಂತಹ ವ್ಯಕ್ತಿ ಸಂಘದ ನಾಮಮಾತ್ರ ಸದಸ್ಯನಾಗಿರಬೇಕಾದ್ದರಿಂದ, ಈ ವಿವಾದ ಈ ಸಂಘವು ಒಂದು ಅನುಭವದಾರ ಸಹ ಮಾಲೀಕತ್ವದ ಗೃಹ ನಿರ್ಮಾಣ ಸಹಕಾರ ಸಂಘವಾಗಿದ್ದು, "ವ್ಯವಹಾರ" ಎಂಬುದರಲ್ಲಿ ಬಾಡಿಗೆ ನೀಡುವ ನಾಮಮಾತ್ರ ಸದಸ್ಯ, ಮಹಾರಾಷ್ಟ್ರ ಸಹಕಾರ ಕಾಯಿದೆ ಕಲಂ 91(1) ರಲ್ಲಿ ಬರುತ್ತಾನೆ. ಈ ತೀರ್ಪು ನೀಡುವಾಗ ಉಲ್ಲೇಖಿಸಿರುವ (1) 1968 Indlaw SC 309 ಮತ್ತು (2) 1972 Indlaw SC 137ನ ತೀರ್ಪುಗಳನ್ನು ಅನುಸರಿಸಬೇಕಾಗಿಲ್ಲ ಏಕೆಂದರೆ ಮೊದಲನೇ ಪ್ರಕರಣ ಒಂದು ಸಹಕಾರ ಬ್ಯಾಂಕ್

ತನ್ನ ಕಟ್ಟಡವನ್ನು ಬಾಡಿಗೆ ನೀಡಿದ ಪ್ರಕರಣ ಮತ್ತು ಎರಡನೆಯದು. ಒಬ್ಬ ಮಾಲೀಕ ಸದಸ್ಯ ಮತ್ತೊಬ್ಬ ಸದಸ್ಯನಿಗೆ ಬಾಡಿಗೆ ನೀಡಿದಾಗಿನ ಪ್ರಸಂಗದ ಪ್ರಕರಣ ಈ ಪ್ರಕರಣದಲ್ಲಿ ಒಬ್ಬ ಸದಸ್ಯ, ನಾಮಮಾತ್ರ ಸದಸ್ಯನಲ್ಲದ ವ್ಯಕ್ತಿಗೆ ಸಂಘದ ಪೂರ್ವಾನುಮತಿ ಮತ್ತು ನಾಮಮಾತ್ರ ಸದಸ್ಯರನ್ನಾಗಿ ಮಾಡದೆ ಬಾಡಿಗೆ ನೀಡಿರುವುದು ನಿಬಂಧನೆಗಳ ವಿರುದ್ಧ. (1982 Indlaw SC 122, (1982) 2 SCC 244, AIR 1982 SC 1097)

32. ಮಹಾರಾಷ್ಟ್ರ ಸಹಕಾರ ಸಂಘಗಳ ಕಾಯಿದೆಯಡಿ, ಒಂದು ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಸದಸ್ಯ ಸಂಘವನ್ನು ಮಾಲೀಕ ಮತ್ತು ಬಾಡಿಗೆದಾರರ ಮಧ್ಯ ವಿವಾದ ವಿದ್ದರೆ ಸಹಕಾರ ಕಾಯಿದೆಯಲ್ಲಿ ಬರುತ್ತದೆ ಮತ್ತು ಅದನ್ನು ಮಧ್ಯಸ್ತಿಗಾರರು ತೀರ್ಮಾನ ಮಾಡಬಹುದು. (1963 Indlaw SC 190)

33. ನ್ಯಾಯಾಲಯ 29.08.1974 ರಿಂದ ಅಧ್ಯಕ್ಷರಿಗೆ (ದೇಬಿಬ್ರತ್ ಮುಖರ್ಜಿ)ಗೆ ಮಹಾಸಭೆ ಕರೆಯಲು ಅಧಿಕಾರ ನೀಡಿ, ಆ ಸಭೆ ಉದ್ದೇಶಕ್ಕೆ, ಸದಸ್ಯರ, ಸುಸ್ತಿದಾರರ ಮತ್ತು ಅರ್ಹರನ್ನು ಗುರುತಿಸಬೇಕು, ತಪ್ಪಾಗಿ ಸುಸ್ತಿದಾರನೆಂದು ಸೇರಿಸಿದ ವ್ಯಕ್ತಿಯನ್ನು ಪಟ್ಟಿಯಲ್ಲಿ ಸೇರಿಸಿ ಸಭೆ ಕರೆಯಲು ಸೂಚಿಸಿದರು (ಈ ಪ್ರಕರಣದಲ್ಲಿ ಬಾಂಬೆ ಸಹಕಾರ ಸಂಘದ ಕಾಯಿದೆ 1925, ದಿಲ್ಲಿಯಲ್ಲಿ ಅನ್ವಯಿಸಲಾಗಿತ್ತು) ಬಾಂಬೆ ಕಾಯಿದೆ ದಿಲ್ಲಿ ಸಹಕಾರ ಸಂಘಕ್ಕೆ ಅನ್ವಯವಾಗುವ ಬಗ್ಗೆ ತಕರಾರು ಸಲ್ಲಿಸಲಾಗಿತ್ತು. ಈ ರೀತಿ ನಡೆಸಿದ ಸಾಮಾನ್ಯ ಸಭೆಯಲ್ಲಿ ನಿವೇಶನಗಳನ್ನು ಹಂಚಲು, ಅರ್ಹ ಸದಸ್ಯರ ಪಟ್ಟಿ ಮಾಡಿ (ಎ,ಬಿ,ಸಿ,ಡಿ,ಇ) ಆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದಾಗ, ಒಂದನೇ ಪಟ್ಟಿಯಲ್ಲಿನ ವ್ಯಕ್ತಿಗಳಿಗೆ ಹಂಚಿದ ನಂತರ 'ಬಿ' ಪಟ್ಟಿ ಸದಸ್ಯರ, ಆ ನಂತರ 'ಸಿ' ಪಟ್ಟಿಯಂತೆ ನಿವೇಶನ ಮಂಜೂರಿ ಮಾಡಿ ಪತ್ರ ನೀಡಿ, ಆ ಪಟ್ಟಿಯನ್ನು ದಿಲ್ಲಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು. ದಿಲ್ಲಿ ಅಭಿವೃದ್ಧಿ ಪ್ರಾಧಿಕಾರ, ಅಂತಹ ವ್ಯಕ್ತಿಗಳಿಗೆ, ಎಷ್ಟು ಹಣ ಪಾವತಿಸಬೇಕೆಂದು ತಿಳಿಸಿದ 15 ದಿವಸದೊಳಗೆ, ಹಣ ಪಾವತಿಸಿದರೆ ನೋಂದಾಯಿಸಿ ಕೊಡಲು ನ್ಯಾಯಾಲಯ ಸೂಚಿಸಿತು. ಯಾರು ಹಣವನ್ನು ತುಂಬುವುದಿಲ್ಲವೊ ಅವರಿಗೆ ನಿವೇಶನ ಹಂಚಿಕೆ ರದ್ದಾದಂತೆ ಎಂದು ತಿಳಿಸಿತು. ಈ ಕೆಲಸಕ್ಕೆ ಅಧ್ಯಕ್ಷರನ್ನಾಗಿ ನೇಮಿಸಿದ ಮುಖರ್ಜಿಯವರಿಗೆ ರೂ.45,000/– ಗೌರವ ಧನ ಪಾವತಿಸಲು ಸೂಚಿಸಿತು. (1976 Indlaw SC 254, (1977) 2 SCC 314, AIR 1977 SC 1900)

34. ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಅಡಮಾನ ಮಾಡಿದ ಆಸ್ತಿ ನ್ಯಾಯಾಲಯದ ಆದೇಶವಿಲ್ಲದೇ ಮಾರಾಟ ಮಾಡುವ ಅಧಿಕಾರ ಸಂಘಕ್ಕೆ ಇದೆ. ಆ ರೀತಿ ಹರಾಜಿನ ಮೂಲಕ ಮಾರಾಟ ಮಾಡಿದಾಗ ಅದು ನೋಂದಣಿ ಆಗುವ ತನಕ ಅದು ಒಂದು ಒಪ್ಪಂದ, ಮಾರಾಟವಲ್ಲ, ಅದನ್ನು ರದ್ದುಗೊಳಿಸಬಹುದು. ಇದಕ್ಕೆ ಪೂರಕವಾಗಿ ಮಹಾರಾಷ್ಟ್ರ ಕಾಯಿದೆ ಕಲಂ 97 ರಡಿ ಬರುತ್ತಿದ್ದು. ಖರೀದಿದಾರನಿಗೆ ಹರಾಜಿನಲ್ಲಿ ನೀಡಿದ ಆಸ್ತಿ ಮಾರಾಟವಲ್ಲಿ, ಅದು ಒಂದು ಒಪ್ಪಂದ ಎಂಬುದನ್ನು, ಇದು ಆಸ್ತಿ ವರ್ಗಾವಣೆ ಕಾಯಿದೆ ಕಲಂ 69(3) ರಡಿ ಬರುವುದಿಲ್ಲವೆಂದು ವಜಾ ಮಾಡಿತು. ಶ್ರೇಷ್ಠ ನ್ಯಾಯಾಲಯ ಬಾಂಬೆ ಉಚ್ಚನ್ಯಾಯಾಲಯದ ತೀರ್ಪನ್ನು ಸಮರ್ಥಿಸಿ, ಈ ಬಗ್ಗೆ ಮದ್ರಾಸ್ ಉಚ್ಚನ್ಯಾಯಾಲಯದ ತೀರ್ಪು ILR (1967) 3 ಮದ್ರಾಸ್ 161 ತೀರ್ಪು ಸರಿಯಾದ ತೀರ್ಪಿಲ್ಲವೆಂದು ತೀರ್ಮಾನಿಸಿತು. (1976 Indlaw SC 345, (1977) 3 SCC 247, AIR 1977 SC 774)

35. ಒಂದು ಗೃಹ ನಿರ್ಮಾಣ ಸಂಘದಲ್ಲಿ ಸದಸ್ಯತ್ವ ಪಡೆದ ನಂತರ, ಅದೇ ವ್ಯಕ್ತಿ ಮತ್ತೊಂದು ಆಸ್ತಿಯನ್ನು ಹೊಂದಿದ್ದಾನೆಂದು ಅವನ ಸದಸ್ಯತ್ವವನ್ನು ರದ್ದು ಗೊಳಿಸಲಾಯಿತು. ಏಕೆಂದರೆ ನಿಯಮ 25(1)(ಸಿ) ಅನ್ವಯ ಯಾವುದೇ ವ್ಯಕ್ತಿ ಒಂದು ಆಸ್ತಿಯನ್ನು ಹೊಂದಿದ್ದರೆ, ಅಂತಹ ವ್ಯಕ್ತಿ

ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯತ್ವ ನೀಡಲಾಗದು, ಎಂದು ತೀರ್ಮಾನಿಸಿತು. ಇದರ ಜೊತೆಗೆ ದೆಲ್ಲಿ ಸಹಕಾರ ಕಾಯಿದೆ ಕಲಂ 36(1) ರನ್ನು ಸತತ ಸುಸ್ತಿ ದಾರನೆಂದು ಸದಸ್ಯತ್ವದಿಂದ ತೆಗೆದು, ನಿಬಂಧಕರ ಒಪ್ಪಿಗೆ ಪಡೆಯಲಾಯಿತು. ಈ ಬಗ್ಗೆ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದಾಗ ಆ ಆಸ್ತಿಯನ್ನು ನರ್ಸಿಂಗ್ ಹೋಮ್ ನಡೆಸುತ್ತಿದ್ದು ಅದು ನಿಯಮ 25 ರಡಿ ಬರುವುದಿಲ್ಲ ಎಂದು ಸದಸ್ಯತ್ವದಿಂದ ತೆಗೆದು ಹಾಕಿದ ತೀರ್ಮಾನವನ್ನು ರದ್ದುಗೊಳಿಸಿತು. ಶ್ರೇಷ್ಠ ನ್ಯಾಯಾಲಯ ನಿಯಮ 25(2) ನಿಯಮ ಜಾರಿಗೆ ಬಂದ ದಿನಾಂಕದಿಂದ ಅದನ್ನು ಪಾಲಿಸಬೇಕು. ಸದಸ್ಯತ್ವ ನಿಂತು ಹೋಗುವ ಬಗ್ಗೆ, ನಿಯಮ ಜಾರಿಗೆ ಬಂದ ದಿನ 2.4.1973. ಸಂಘದ ಉಪನಿಯಮ 8 (Vii) ರನ್ವಯ ಈ ಅನರ್ಹತೆ ಅನ್ವಯವಾಗುತ್ತದೆ. ಅಂದರೆ ಒಂದು ಆಸ್ತಿ ಹೊಂದಿದ್ದರೆ, ಅಂತಹ ವ್ಯಕ್ತಿ ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯತ್ವಕ್ಕೆ ಅರ್ಹನಲ್ಲ. ಇದು ಉಪನಿಯಮ ಮತ್ತು ದಿಲ್ಲಿ ಸಹಕಾರ ಕಾಯಿದೆ ಅಥವಾ ನಿಯಮದಡಿ ರಚನೆಯಾಗಿದ್ದು, ಇದು ಊರ್ಜಿತ. **"ಸದಸ್ಯತ್ವಕ್ಕೆ ಅರ್ಹತೆ"** ಎಂಬ ಪದ ಪ್ರಯೋಗ ಮಾಡಿರುವುದರಿಂದ, ಸದಸ್ಯತ್ವಕ್ಕೆ ಅನರ್ಹ ಎಂದಿದೆ. ಒಟ್ಟು ಕುಟುಂಬದಲ್ಲಿ ಖರೀದಿಸಿದ ಆಸ್ತಿಯಲ್ಲಿ ಎಲ್ಲಾ ಕುಟುಂಬದ ಸದಸ್ಯರಿಗೆ ಭಾಗ ಇರುವುದರಿಂದ ಅದು ಸಂಘದಲ್ಲಿ ಸದಸ್ಯತ್ವಕ್ಕೆ ಅನರ್ಹತೆ ಆಗುವುದಿಲ್ಲ. (2010 Indlaw SC 961)

36. ಒಬ್ಬ ಸದಸ್ಯನನ್ನು, ಸಂಘ ಕಿತ್ತು ಹಾಕಿದಾಗ, ಅದನ್ನು ನಿಬಂಧಕರು ಆರು ತಿಂಗಳೊಳಗಾಗಿ (ಪ್ರಸ್ತಾವನೆ ಬಂದ) ಒಪ್ಪಿಗೆ ನೀಡಬೇಕೆಂದು ಶರತ್ತಿನನ್ವಯ ಪ್ರಸ್ತಾವನೆ ಸಲ್ಲಿಸಿದಾಗ, ಆ ಪ್ರಸ್ತಾವನೆಯನ್ನು 6 ತಿಂಗಳ ನಂತರ ನಿಬಂಧಕರು, ಸದಸ್ಯತ್ವ ತೆಗೆದು ಹಾಕಿದ್ದನ್ನು ತಿರಸ್ಕರಿಸಿದರು. ಮೇಲ್ಮನವಿಯಲ್ಲೂ ಅದು ತಿರಸ್ಕಾರಗೊಂಡಾಗ ಸಂಘ ರಿಟ್ ಅರ್ಜಿ ಸಲ್ಲಿಸಿತು. ಆಯುಕ್ತರು ಮೇಲ್ಮನವಿ ಪರಿಶೀಲಿಸುವಾಗ, ಸಂಘವು ಪ್ರಸ್ತಾವನೆ ಸಲ್ಲಿಸುವಾಗ, ವಿಳಂಬವಾಗಿದ್ದು, ನಿಬಂಧಕರು ಈ ವಿಷಯವನ್ನು ಸಮರ್ಥವಾಗಿ ಪರಿಶೀಲಿಸಿದ್ದಾರೆ. ನಿಬಂಧಕರ ಆದೇಶವನ್ನು ಎತ್ತಿ ಹಿಡಿದಿದ್ದಾರೆ. ಉಚ್ಚನ್ಯಾಯಾಲಯ ನಿಬಂಧಕರು ನೀಡಿದ ಕಾರಣಗಳ ಮೇಲೆ ಯಾವುದೇ ಪರಿಶೀಲನೆ ನಡೆಸದೆ ಹಳೆಯ ವಿಷಯಗಳನ್ನು ತೆಗೆದುಕೊಂಡು, ನಿಬಂಧಕರು ತೀರ್ಮಾನ ತೆಗೆದುಕೊಳ್ಳಲು ಎಂಟು ವರ್ಷ ತೆಗೆದುಕೊಂಡಿದ್ದಾರೆಂಬ ಕಾರಣ ನೀಡಿ ತೀರ್ಮಾನಿಸಿದ್ದು ತಿರಸ್ಕರಿಸಿದಕ್ಕೆ ಕಾರಣಗಳಿರಲಿಲ್ಲ. ಆದ್ದರಿಂದ ಉಚ್ಚನ್ಯಾಯಾಲಯದ ತೀರ್ಮಾನವನ್ನು ಕಿತ್ತು ಹಾಕಿ ನಿಬಂಧಕರು ಮತ್ತು ಆಯುಕ್ತರು ನೀಡಿದ ತೀರ್ಪನ್ನು ಎತ್ತಿಹಿಡಿದೆ. ಅಂದರೆ ಸದಸ್ಯತ್ವದಿಂದ ತೆಗೆದು ಹಾಕಿರುವುದು ತಪ್ಪು ಎಂದು ತೀರ್ಮಾನಿಸಿತು. (2010 Indlaw SC 865, (2010) 13 SCC 336)

37. ಸಂಘದ ಉದ್ದೇಶ ಸದಸ್ಯರಿಗೆ ನಿವೇಶನ ಹಂಚುವುದಾಗಿದ್ದು, ಇದು ಸಹಕಾರ ತತ್ವಗಳಡಿ, ಸಂಘದ ಎಲ್ಲಾ ಸದಸ್ಯರಿಗೂ ಲಭ್ಯವಾಗಬೇಕು. 37 ವ್ಯಕ್ತಿಗಳನ್ನು 3.10.1996 ರಲ್ಲಿ ಸದಸ್ಯರನ್ನಾಗಿ ಸೇರಿಸಿಕೊಂಡಿದ್ದು ಅದು ಅಂತಿಮವಾಗದೆ. ಜಮೀನು ಖರೀದಿ ಸಂಘ ಮಾಡಿದ್ದು, ಅದನ್ನು ಸದಸ್ಯರಿಗೆ ಹಂಚುವ ಜವಾಬ್ದಾರಿ ಮತ್ತು ಇದಕ್ಕೆ ಸಂಬಂಧಪಟ್ಟಂತೆ ಉಚ್ಚನ್ಯಾಯಾಲಯ ಎಲ್ಲವನ್ನು ಪರಿಶೀಲಿಸಿ, ಅಂದರೆ, ಉಪನಿಯಮಗಳ ಮತ್ತು ಅವುಗಳ ವಿಮರ್ಷೆ, ಮಾಡಿದ್ದು ಮತ್ತು ಆಂದ್ರಪ್ರದೇಶದ ನಿಬಂಧಕರ ವರದಿಯನ್ನು ಪರಿಶೀಲಿಸಿದೆ. ಈ ದಾಖಲೆಗಳು ಈ ನ್ಯಾಯಾಲಯದಲ್ಲಿ ಸಲ್ಲಿಕೆಯಾಗಿದೆ. ಆದ್ದರಿಂದ ಸಂಸ್ಥಾಪಕ ಸದಸ್ಯರು, ಆ ನಂತರ ಸೇರಿಸಿಕೊಂಡ ಸದಸ್ಯರ ಪ್ರಾಶಸ್ತ್ಯ ಕೊಡಬೇಕೆಂಬ ಏಕಸದಸ್ಯ ಪೀಠ ಮಾಡಿದ ಆದೇಶ ಸರಿಯಲ್ಲ. ಇದರಿಂದ ಅಂತಹ ಸದಸ್ಯರಿಗೆ ಯಾವುದೇ ಪ್ರಾಶಸ್ತ್ಯ ಲಭ್ಯವಾಗುವುದಿಲ್ಲ. ಸಂಘದ ಉಪನಿಯಮದಂತೆ, ಸಂಸ್ಥಾಪಕ ಸದಸ್ಯರು ಎಂಬುದನ್ನು ನೋಡದೆ ಉಪನಿಯಮಗಳಡಿ ಹಂಚಿಕೆ ಮಾಡತಕ್ಕದ್ದು. 37 ಸದಸ್ಯರ ಸದಸ್ಯತ್ವ ಈಗಾಗಲೇ ನ್ಯಾಯಾಲಯಗಳು ದೃಢೀಕರಿಸಿದೆ. ಆದ್ದರಿಂದ ಉಚ್ಚನ್ಯಾಯಾಲಯ

ತೀರ್ಮಾನವನ್ನು ಅನೂರ್ಜಿತಗೊಳಿಸಿದೆ. (2014 Indlaw SC 747, (2014) 8 SCC 661, AIR 2014 SC 2680)

38. ವೆಸ್ಟ್‌ಬೆಂಗಾಲ್ ಸಹಕಾರ ಕಾಯಿದೆಯಡಿ, ಒಂದು ಬಹು ಮಹಡಿ ಕಟ್ಟಡದ ಮನೆಯನ್ನು ಹಾಲಿ ಸದಸ್ಯರಿಂದ ಮತ್ತೊಬ್ಬರಿಗೆ ವರ್ಗಾವಣೆ ಮಾಡಿಕೊಡಲು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ, ಆ ನಂತರ ವರ್ಗಾವಣೆ ಪಡೆದ ವ್ಯಕ್ತಿ ಮತ್ತೊಬರಿಗೆ ವರ್ಗಾಯಿಸಲು ಕೊಟ್ಟ ಮನವಿ ಆಧಾರದ ಮೇಲೆ ವಹಿಸಿಕೊಡಲಾಗಿತ್ತು. ಇದನ್ನು ಪ್ರಶ್ನಿಸಿದ ಸಂದರ್ಭದಲ್ಲಿ ವಧ್ಯಸ್ತಿಗಾರರು ಖರೀದಿ ಮಾಡಿದ ವ್ಯಕ್ತಿ ಮೂರನೆ ವ್ಯಕ್ತಿ ವಶಕ್ಕೆ ನೀಡಿದ ಮನೆಯನ್ನು ವಾಪಸ್ ಮೊದಲನೇ ಖರೀದಿ ದಾರರಿಗೆ ವಹಿಸಿಕೊಡಲು ಆದೇಶವನ್ನು, ನ್ಯಾಯಾಧಿಕರಣ ಮತ್ತು ಉಚ್ಚನ್ಯಾಯಾಲಯ ಒಪ್ಪಿರಲಿಲ್ಲ. ಅದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಈ ಕೆಳಕಂಡ ಪರಿಹಾರ ನೀಡಿತು.

ಮೂರನೇ ಖರೀದಿದಾರರ ಬಗ್ಗೆ ಸಾಕಷ್ಟು ವಿಷಯ ಈಗಾಗಲೇ ಚರ್ಚಿಸಿದು, ಸಮಾನತೆ, ನ್ಯಾಯಿಕ ಮತ್ತು ಸತ್ಯತೆ ಪರಿಶೀಲಿಸಿ, ಮೂರನೇ ಖರೀದಿದಾರರು ಮೊದಲನೇ ಖರೀದಿದಾರರಿಗೆ ಮನೆಯನ್ನು ಸುಪರ್ದಿಗೆ ನೀಡಲು ಆದೇಶಿಸಿತು. ನ್ಯಾಯಾಧಿಕರಣದ ದಿನಾಂಕ 16.05.2002 ಮತ್ತು ಉಚ್ಚನ್ಯಾಯಾಲಯದ ತೀರ್ಪು ದಿನಾಂಕ 14.02.2006 ನ್ನು ಕಿತ್ತು ಹಾಕಿ, ಮಧ್ಯಸ್ತಗಾರರು ತೀರ್ಮಾನಿಸಿದಂತೆ 50 ಮನೆಯನ್ನು ಮೊದಲನೇ ಖರೀದಿದಾರ ವಶಕ್ಕೆ ನೀಡಲು ಆದೇಶಿಸಿತು. (2014 Indlaw SC 77, (2014) 4 SCC 196, AIR 2014 SC 1304)

39. ಪ್ಲಾಟ್ ಮಾಲೀಕ ಸುಸ್ತಿದಾರನಾದಾಗ, ಅಂದರೆ ಅರ್ಜಿದಾರ ಮಾಲೀಕನಾಗದ್ದು, ಜಪ್ತಿ ಮಾಡಲು ನಿರ್ಬಂಧಿಸಬೇಕೆಂದು ರಿಟ್ ಅರ್ಜಿ ಸಲ್ಲಿಸಿದಾಗ, ಏಕ ಸದಸ್ಯ ಪೀಠ ಮಧ್ಯಪ್ರವೇಶಿಸಲು ನಿರಾಕರಿಸಿತು, ಅದನ್ನು ಪ್ರಶ್ನಿಸಿದಾಗ ವಿಭಾಗೀಯ ಪೀಠ ಅದೇ ತೀರ್ಮಾನವನ್ನು ದೃಢೀಕರಿಸಿತು. ಯಾವುದೇ ಕಾಯಿದೆ ಒಬ್ಬ ವ್ಯಕ್ತಿಯ ಆಸ್ತಿಯನ್ನು ವರ್ಗಾವಣೆ ಮಾಡಲು ನಿರ್ಬಂಧಿಸುವುದಿಲ್ಲ. ಆ ರೀತಿ ನಿರ್ಬಂಧ ಹೇರಿದರೆ, ಅದು ಅಲ್ಲೋಲಕಲ್ಲೋಲ ಮಾಡುವುದರ ಜೊತೆಗೆ, ಅನುಮಾನಗಳನ್ನು ಸೃಷ್ಟಿಸುತ್ತದೆ. ಆದ್ದರಿಂದ ಮಾರಾಟಕ್ಕೆ ನೀಡಿದ ವಾರಂಟ್‌ನಲ್ಲಿ ಯಾವುದೇ ತಪ್ಪು ಇಲ್ಲ. ಆದರೆ ಆಸ್ತಿ ಮಾಲೀಕ ಮಾರಾಟವಾಗುವ ಮೊದಲು ಸಾಲವನ್ನು ಚುಕ್ತ ಮಾಡಲು ಹಕ್ಕುಳವನಾಗಿದ್ದಾನೆ ಮತ್ತು ಅವನು ಮಾರಾಟ ಮಾಡುವಾಗ ಮಾರುಕಟ್ಟೆ ದರಕ್ಕಿಂತ ಕಡಿಮೆಗೆ ಮಾರಾಟ ಮಾಡತಕ್ಕದ್ದಲ್ಲ. ಮೇಲ್ಮನವಿ ತಿರಸ್ಕರಿಸಿತು. (2013 Indlaw SC 577, (2014) 1 SCC 635, 2014 (1) CLT (SC) 121)

40. ಅರ್ಜಿದಾರನು ಒಂದು ಹೊಂದಾಣಿಕೆ ಪತ್ರ ತಯಾರಿಸಿ ರೂ.6,50,000.00 ಪಾವತಿಸಿದ ನಂತರ, ಒಬ್ಬ ರಿಸೀವರ್ ನೇಮಕ ಮಾಡಬೇಕೆಂಬ ಸಂಘದ ಅರ್ಜಿ ಪುರಸ್ಕರಿಸತಕ್ಕದ್ದಲ್ಲ. ಏಕೆಂದರೆ ರೂ.6,50,000/– ಪಾವತಿಯಾದರೆ ವ್ಯವಹಾರ ಚುಕ್ತ ಆದಂತೆ, ಅದಕ್ಕೆ ಸಂಘವು ಒಪ್ಪಿ ಸಹಿ ಮಾಡಿದೆ ನಂತರ ಪುನಃ ಆಸ್ತಿ ನಿರ್ವಹಣೆಗೆ ರಿಸಿವರ್ ನೇಮಿಸುವ ಅರ್ಜಿ ಪುರಸ್ಕರಿಸತಕ್ಕದ್ದಲ್ಲ. ಮಧ್ಯಪ್ರದೇಶದ ಉಚ್ಚನ್ಯಾಯಾಲಯದ ತೀರ್ಪನ್ನು ದೃಡೀಕರಿಸಿತು. (2013 Indlaw SC 446, (2013) 7 SCC 559)

41. ಒಂದು ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಫ್ಲಾಟ್ ಪಡೆದ ವ್ಯಕ್ತಿ ಮನೆ ಬಿದ್ದುಹೊದಾಗ, ಅದನ್ನು ರಿಪೇರಿ ಮಾಡಿ ಕೊಡಲು ಮನವಿ ಸಲ್ಲಿಸಿದ್ದು, ಅದಕ್ಕೆ ಸಂಘ ಆಯುಕ್ತರ ಒಪ್ಪಿಗೆ ಕೇಳಬೇಕು. ಈ ಮಧ್ಯ ಫ್ಲಾಟ್ ಮಾಲೀಕ ಸಹಕಾರ ಮೇಲ್ಮನವಿ ಪ್ರಾಧೀಕರಣದಲ್ಲಿ ಅರ್ಜಿ ಸಲ್ಲಿಸಿ, ರಿಪೇರಿಗೆ ಆದೇಶ ಪಡೆದಿದ್ದು ಅದನ್ನು ಜಾರಿ ಮಾಡಲು ಸಹಕಾರ ಕಾಯಿದೆಯಲ್ಲಿ ಅವಕಾಶ ಪಡೆಯುವ ಬದಲು ರಿಟ್ ಅರ್ಜಿ ದಾಖಲಿಸಿರುವುದು ತಪ್ಪು ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ರಿಟ್ ಅರ್ಜಿ ತಿರಸ್ಕರಿಸಿರುವುದು ಸರಿಯಾಗಿದೆ. ಆದ್ದರಿಂದ ರಿಟ್ ಮುಖಾಂತರ ಪರಿಹಾರ ನೀಡಲಾಗದು,

ಸಹಕಾರ ನ್ಯಾಯಾಧಿಕರಣ ನೀಡಿದ ತೀರ್ಪನ್ನು ಜಾರಿಗೆ ಅರ್ಜಿ ಸಲ್ಲಿಸತಕ್ಕದ್ದು. (2013 Indlaw SC 583, (2013) 9 SCC 136)

42. ಬಾಂಬೆ ಕ್ಯಾತೊಲಿಕ್ ಗೃಹ ನಿರ್ಮಾಣ ಸಹಕಾರ ಸಂಘದ ಸಾಮಾನ್ಯ ಸಭೆಯಲ್ಲಿ, ಹಾಲಿ ಇರುವ ಮನೆಗಳನ್ನು (5.5 ಎಕರೆ) ಕೆಡವಿ ಪೂರ್ಣ ಜಾಗವನ್ನು ಉಪಯೋಗಿಸಿ ಹೊಸ ವಸತಿ ಸಂಕೀರ್ಣ ನಿರ್ಮಿಸಲು ತೀರ್ಮಾನಿಸಿತು. ಇದಕ್ಕೆ ಪೂರಕವಾಗಿ ತೀರ್ಮಾನ ಜಾರಿ ಮಾಡಲು "ಎಕ್ಸ ಮನೆ ಅಭಿವೃದ್ಧಿದಾರರು" ರೂ.70 ಕೋಟಿ ಹಣವನ್ನು ಠೇವಣಿಸಿದ್ದು, ತಾನು ಕೆಲಸ ವಹಿಸಿಕೊಳ್ಳಲು ತಯಾರಿರುವುದಾಗಿ ಮುಂದೆ ಬಂದಾಗ, ಸಂಘದ 15 ಸದಸ್ಯರು, ಈ ತೀರ್ಮಾನ ಮಾಡುವ ಮೊದಲು ತಾವು ರೂ.75 ಕೋಟಿ ಠೇವಣಿ ಇಡಲು ತಯಾರೆಂದು ಮೌಖಿಕವಾಗಿ ತಿಳಿಸಿದಾಗ, ಈ ಬಗ್ಗೆ ಉಚ್ಚನ್ಯಾಯಾಲಯ ಯಾರಿಗೆ ಅಭಿವೃದ್ಧಿ ಮಾಡಲು ಆದೇಶ ನೀಡಬೇಕೆಂಬುದು, ಸಂಘದ ತೀರ್ಮಾನ ಮತ್ತು ಇದನ್ನು 15 ಮೇಲ್ಮನವಿದಾರರ ಅಧಿಕಾರವಲ್ಲ ಎಂದು ತೀರ್ಪಿತ್ತಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಪರಿಶೀಲಿಸಿದ ಅಂಶ, ಈ ಮೇಲ್ಮನವಿ ಸಲ್ಲಿಸಲು ದಾವಾ ಹಣವನ್ನು "ವೈ ಅಭಿವೃದ್ಧಿದಾರರು" ನೀಡಿರುವುದನ್ನು ಮತ್ತು ಹಣ ಪಾವತಿಸಲು ಸಹ ಅದೇ ವೈ ಅಭಿವೃದ್ಧಿದಾರರೇ ತಯಾರಿರುವುದಾಗಿ ತಿಳಿಸಿದನ್ನು ಗಮನಿಸಿ, ಈ 15 ಅರ್ಜಿದಾರರು, ಅಧಿಕಾರ ಇಲ್ಲದೇ ಇದ್ದರೂ, ಮಹಾಸಭೆ ತೀರ್ಮಾನಕ್ಕೆ ಬದ್ದರಾಗಿದೇ ಎಂಬುದನ್ನು ಒಪ್ಪದಂತಾಗಿ, ಉಚ್ಚನ್ಯಾಯಾಲಯ ನೀಡಿದ ತೀರ್ಪಿನಂತೆ ಸಂಘವು ಯಾರಿಗೆ ಗುತ್ತಿಗೆ ನೀಡಬೇಕೆಂದು ತೀರ್ಮಾನಿಸತಕ್ಕದ್ದು ಎಂದು ತೀರ್ಪಿತ್ತಿದೆ. (2013 Indlaw SC 164, (2013) 6 SCC 538, AIR 2013 SC 1398)

43. ಎರಡು ಮೂಲ ಪ್ರಕರಣ ದಾಖಲಾದಾಗ, (ಮಹಾರಾಷ್ಟ್ರ ಕಾಯಿದೆಯಡಿ) ಯಥಾಸ್ಥಿತಿ ಕಾಪಾಡಲು ಆದೇಶಿಸಿತು, ಅದನ್ನು ಪ್ರಶ್ನಿಸಿ ವಿಭಾಗೀಯ ಪೀಠ ಈ ಪ್ರಕರಣ ಊರ್ಜಿತವೆ ಎಂಬ ಪ್ರಶ್ನೆ ಇದ್ದು, ಇದನ್ನು ವಜಾಗೊಳಿಸಲು – ಊರ್ಜಿತವಲ್ಲವೆಂದು ವಿಭಾಗೀಯ ಪೀಠದ ಆದೇಶ ಸರಿಯಲ್ಲವೆಂದು ಪ್ರಶ್ನಿಸಿದಾಗ – ವಿಭಾಗೀಯ ಪೀಠದ ಆದೇಶ ಸರಿಯಲ್ಲವೆಂದು ಇದನ್ನು ಪುನಃ ವಿಭಾಗೀಯ ಪೀಠ ಮರು ಪರಿಶೀಲಿಸಲು ಆದೇಶಿಸಿತು. (2012 Indlaw SC 61, (2012) 5 SCC 642, AIR 2012 SC 1438)

44. ಸಂಘದ ಸದಸ್ಯರಲ್ಲಿ ಮಾಲೀಕರು, ಬಾಡಿಗೆ ದಾರರು, ಮನೆ ಪಡೆದವರು, ಅನುಭವದಾರರು ಇತರೆ ಸದಸ್ಯರಿದ್ದರು. ಅವರಲ್ಲಿ ಅನುಭವದಾರರಿಗೆ ನಿವೇಶನ ಸಂಖ್ಯೆ 22 ಮತ್ತು 23 ನ್ನು ಸಾಮಾನ್ಯ ಸಭೆಯಲ್ಲಿ ಮಾರಾಟ ಮಾಡಲು ತೀರ್ಮಾನಿಸಿದರು. ಇದನ್ನು ಪ್ರಶ್ನಿಸಿದಾಗ ರಿಟ್ ಅರ್ಜಿ ಊರ್ಜಿತವೇ ಎಂದು ಪ್ರಶ್ನಿಸಿತು. ಊರ್ಜಿತವಲ್ಲವೆಂದು ಉಚ್ಚನ್ಯಾಯಾಲಯ ತೀರ್ಮಾನಿಸಿತು. ಇದರ ಜೊತೆಗೆ ಸಹಕಾರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು ಸಾಮಾನ್ಯ ಸಭೆ ನಡಾವಳಿಕೆಗಳನ್ನು ಪ್ರಶ್ನಿಸಿದ್ದು ಅದರಲ್ಲಿ ಸಂಖ್ಯೆ 22 ಮತ್ತು 23 ಕಕ್ಷಿದಾರರಿರಲಿಲ್ಲ ಆದ್ದರಿಂದ ಆ ಆದೇಶ ಇವರಿಗೆ ಅನ್ವಯಿಸದು. ಶ್ರೇಷ್ಠ ನ್ಯಾಯಾಲಯ ಉಚ್ಚನ್ಯಾಯಾಲಯದ ತೀರ್ಮಾನವನ್ನು ರದ್ದುಗೊಳಿಸಿ, ತೀರ್ಮಾನಿಸಬೇಕಾದ ಅಂಶವೆಂದರೆ, ಉಚ್ಚನ್ಯಾಯಾಲಯ ಪ್ರಕರಣವನ್ನು ತೀರ್ಮಾನಿಸಲು ಅಧಿಕಾರ ಇಲ್ಲ ಎಂಬುದು ಸರಿಯಲ್ಲ ಮತ್ತು ಇದರ ಜೊತೆಗೆ ಅರ್ಜಿದಾರರು ಸಂಘದ ಉಪನಿಯಮಗಳಲ್ಲಿರುವ ಅರ್ಹತೆ ಮತ್ತು ಅನರ್ಹತೆ ಬಗ್ಗೆ ಪರಿಶೀಲಿಸಿ ಆದೇಶಿಸಬೇಕು ಎಂದು, ಅಂತರಿಕ ಆದೇಶದ ಬಗ್ಗೆ ಮರು ಪರಿಶೀಲಿಸಲು ಸೂಚಿಸಿತು. (2012 Indlaw SC 463)

45. ಒಬ್ಬ ವ್ಯಕ್ತಿಯನ್ನು ಸದಸ್ಯರನ್ನಾಗಿ ಮಾಡಿಕೊಂಡ ನಂತರ, ಆ ಸದಸ್ಯ ಸಂಘಕ್ಕೆ ಒಂದು ಪತ್ರ ಬರೆದು ತನಗೆ ಬೇರೆ ಪ್ರಾಧಿಕಾರದಿಂದ ಒಂದು ನಿವೇಶನ ಖರೀದಿಸಿದ್ದು, ತಾನು ಪಾವತಿಸಿದ ಪಾಲು

ಬಂಡವಾಳ ಮತ್ತು ಠೇವಣಿಯನ್ನು ವಾಪಸ್ ಮಾಡಲು ವಿನಂತಿಸಿ, ಆ ನಂತರ ತನ್ನ ಮಗಳಿಗೆ ವರ್ಗಾಯಿಸಲು ಕೇಳಿದ್ದರು. ಪ್ರಮಾಣ ಪತ್ರ ಸಲ್ಲಿಸಲು ಆಡಳಿತಾಧಿಕಾರಿ ಕೇಳಿದಾಗ, ಅದನ್ನು ಸಲ್ಲಿಸಿಲ್ಲ ಮತ್ತು ನಿವೇಶನ ನೀಡಲು ನಿರಾಕರಿಸಿದರು. ಈ ಮಧ್ಯ ಮತ್ತೊಬ್ಬ ವ್ಯಕ್ತಿಯ ಸದಸ್ಯತ್ವ ಒಪ್ಪಿರುವ ವ್ಯಕ್ತಿಗೆ ನಿವೇಶನ ಪಡೆಯಲು ಹಕ್ಕಿದೆ ಎಂದು, ಒಂದು ರಿಟ್ ಅರ್ಜಿಯಲ್ಲಿ ಉಚ್ಚನ್ಯಾಯಾಲಯ ಆದೇಶಿಸಿತು. ಈ ತೀರ್ಪಿನ ಮೇಲೆ ಮೂಲ ಅರ್ಜಿದಾರರು ಮುಂಗಡ ಹಣ ವಾಪಸ್ ಮಾಡಲು ಮತ್ತೆ ತನ್ನ ಹಣ ವರ್ಗಾಯಿಸಲು ಕೇಳಿರುವ ಅರ್ಜಿ ಊರ್ಜಿತವಲ್ಲ ಎಂದ ಅರ್ಜಿ ತಿರಸ್ಕರಿಸಲಾಯಿತು. ಉಚ್ಚನ್ಯಾಯಾಲಯ ಆದೇಶವನ್ನು ಮರು ಪರಿಶೀಲಿಸಬೇಕೆಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಕ್ಕೆ ಒಂದು, ವಾಪಸ್ ಉಚ್ಚನ್ಯಾಯಾಲಯಕ್ಕೆ ರವಾನಿಸಿತು. (2009 Indlaw SC 173, (2009) 14 SCC 302)

46. ಒಂದು ಸಂಘ, ಒಬ್ಬ ಸದಸ್ಯನ ಸದಸ್ಯತ್ವವನ್ನು ಮತ್ತೊಬ್ಬರಿಗೆ ವರ್ಗಾಯಿಸಿದಾಗ, ಅದನ್ನು ಒಪ್ಪಿಗೆಗಾಗಿ ನಿಬಂಧಕರಿಗೆ ಕಳುಹಿಸಿದರು. ನಿಬಂಧಕರು ಮೂಲ ಸದಸ್ಯನಿಗೆ, ಸದಸ್ಯತ್ವದಿಂದ ತೆಗೆದು ಹಾಕ ಬಾರಬೇಕೆಂದು ನೋಟೀಸ್ ನೀಡಿದರು. ಅದರಂತೆ ಆದೇಶ ಮಾಡಿದರು. ರಾಜ್ಯ ಸರ್ಕಾರ ತೆಗೆದು ಹಾಕಿದ ಸದಸ್ಯತ್ವವನ್ನು ಮರು ಸ್ಥಾಪಿಸಿದರು. ಈ ಆದೇಶದ ಮೇಲೆ ರಿಟ್ ಅರ್ಜಿ ದಾಖಲಿಸಿತು. ಅದಕ್ಕೆ ಆದೇಶ ಮಾಡುವಂತೆ ನಿಬಂಧಕರಿಗೆ ಆದೇಶಿಸಿತು. ಆದೇಶ ನೀಡಲಿಲ್ಲ ವಾದ್ದರಿಂದ ನ್ಯಾಯಾಲಯ ನಿಂದನೆ ನೋಟೀಸ್ ಜಾರಿ ಮಾಡಿತು. ಆ ಸಂದರ್ಭದಲ್ಲಿ ನಿಬಂಧಕರು ಹೆಸರನ್ನು ದೃಡೀಕರಿಸಿ ನಿವೇಶನ ಹಂಚಿಕೆ ಸಮಯದಲ್ಲ ಅವರ ಹೆಸರನ್ನು ಸೇರಿಸಲು ಸೂಚಿಸಿರುವುದನ್ನು ಮಂಡಿಸಿತು. ವಿಭಾಗೀಯ ಪೀಠ, ಅ ವ್ಯಕ್ತಿಯ ಹೆಸರಿನಲ್ಲಿ ಮತ್ತೊಂದು ನಿವೇಶನ ಇರುವುದರಿಂದ, ಅನರ್ಹತೆಗಳಿಸಿದ್ದು, ಅವನ್ನು ಸದಸ್ಯತ್ವಕ್ಕೆ ಅನರ್ಹನೆಂದು ತಿಳಿಸಿತು. ಶ್ರೇಷ್ಠ ನ್ಯಾಯಾಲಯ ದಿಲ್ಲಿ ಸಹಕಾರ ಸಂಘಗಳ ನಿಯಮ 17 ಮತ್ತು 87 ನ್ನು ಪರಿಶೀಲಿಸಿ ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿಹಿಡಿಯಿತು. (2007 Indlaw SC 1432, (2007) 13 SCC 603, AIR 2007 SC (Supp) 1146)

47. ಒಂದು ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನೌಕರರಲ್ಲಿದ್ದ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಮಾಡಿಕೊಳ್ಳಲು ತಿದ್ದುಪಡಿ ಮಾಡಿ ಸಂಬಂಧಪಟ್ಟ ನಿಬಂಧಕರಿಗೆ ಕೇಳುಹಿಸಿತ್ತು. ತಿದ್ದುಪಡಿಗೆ ಪೂರ್ವದಲ್ಲಿ ಸಂಘದ ಆಡಳಿತ ಮಂಡಳಿ ಮೇಲೆ ಆರೋಪಗಳು ಕೊಟ್ಟ ಬಂದಿದ್ದು, ವಿಚಾರಣಾ ನಡೆಸಿ, ಆ ವರದಿ ಆಧಾರದ ಮೇಲೆ ಆಡಳಿತ ಮಂಡಳಿಯನ್ನು ಅಮಾನತ್ತು ಮಾಡಿತು. ಇದನ್ನು ಪ್ರಶ್ನಿಸಿ ರಿಟ್ ದಾಖಲಿಸಿದಾಗ, ಆ ರಿಟ್ ಅರ್ಜಿ ವಜಾ ಮಾಡಲಾಯಿತು. ಇದರ ಮೇಲೆ ಮತ್ತೆ ಮೇಲ್ಮನವಿ ಸಲ್ಲಿಸಿದಾಗ, ನಿಬಂಧಕರು ಮತ್ತೊಮ್ಮೆ ವಿಚಾರಣೆ ಮಾಡಲು ಆದೇಶಿಸಿತು. ಕಾನೂನಿನಲ್ಲಿ ನಿಬಂಧಕರಿಗೆ ಅಧಿಕಾರ ನೀಡಿದ್ದು – ಅದರಂತೆ ಆದೇಶ ಮಾಡುವ ಅಧಿಕಾರ ನಿಬಂಧಕರಿಗೆ ಇದೆ. ಇದರ ಜೊತೆಗೆ ಮೊದಲನೇ ವಿಚಾರಣಾ ವರದಿಯನ್ನು ಪರಿಗಣಿಸದೆ, ನಿವೃತ್ತ ಉಚ್ಚನ್ಯಾಯಾಲಯದ ನ್ಯಾಯಾಧೀಶರಾದ ವಿಕ್ರಮಾದಿತ್ಯ ಪ್ರಸಾದ್ ಅವರ ವರದಿಯನ್ನು ಗಮನಿಸಿ ಆದೇಶ ಮಾಡುವಾಗ ಸ್ವತಂತ್ರ ಅಭಿಪ್ರಾಯಕ್ಕೆ ಬಂದು ಆದೇಶಿಸಲು ಸೂಚಿಸಿತು ಮತ್ತು ಈ ವರದಿಯನ್ನು ಒಪ್ಪಲಾಗಿದೆಯೆ ಇಲ್ಲವೇ ಎಂಬುದರ ಬಗ್ಗೆ ತೀರ್ಮಾನಿಸಲು ಶ್ರೇಷ್ಠನ್ಯಾಯಾಲಯ ಸೂಚಿಸಿತು. – (ಜಾರ್ಕಂಡ್ ಸಹಕಾರ ಕಾಯಿದೆ). (2007 Indlaw SC 1649, (2007) 14 SCC 102)

48. ಆಂದ್ರಪ್ರದೇಶ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯನು ಪಡೆದ ಆದೇಶವನ್ನು ಜಾರಿ ಮಾಡಲು ಸಾಧ್ಯವಿಲ್ಲವೆಂದು ತಿಳಿದಿದ್ದರೂ, ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಿಸಲು ಪ್ರಚೋದಿಸಿತು. ಇದರ ಜೊತೆಗೆ ಶ್ರೇಷ್ಠ

ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದಾಗಲೂ, ಸಹಕಾರ ಸಂಘ ತಪ್ಪು ಮಾಹಿತಿ ಆಧಾರದ ಮೇಲೆ ಹೇಳಿಕೆ ಸಲ್ಲಿಸಿತು. ಆಡಳಿತ ಮಂಡಳಿ ಅಥವಾ ಆಡಳಿತಾಧಿಕಾರಿ ಯಾರೇ ಇದ್ದರೂ ಅವರ ಮೇಲೆ ಕ್ರಮ ಜರುಗಿಸುವ ಜವಾಬ್ದಾರ ನಿಬಂಧಕರು ತೆಗೆದುಕೊಳ್ಳಬೇಕು. ಇದರ ಜೊತೆಗೆ ಅರ್ಜಿದಾರನ್ನು ಪಾವತಿಸಿದ್ದು ಹಣಕ್ಕೆ ಶೇ.24% ರ ಬಡ್ಡಿ ದರದಲ್ಲಿ ವಾಪಸ್ ಮಾಡುವಂತೆ ಆದೇಶಿಸಿದ ನಂತರವೂ, ಸಂಘವು ಅರ್ಜಿದಾರನಿಗೆ ರೂ.1.00 ಲಕ್ಷವನ್ನು ಪರಿಹಾರ ರೂಪದಲ್ಲಿ ಪಾವತಿಸುವುದರ ಜೊತೆಗೆ, ಎರಡನೇ ಎದುರು ಅರ್ಜಿದಾರನಿಗೂ ರೂ.1,00,000.00 ಪರಿಹಾರ ನೀಡಲು ಆದೇಶಿಸಿತು. ಮತ್ತು ಮೇಲ್ಮನವಿಯನ್ನು ತಿರಸ್ಕರಿಸಿತು. (2006 Indlaw SC 650, (2006) 10 SCC 96)

49. ದೆಲ್ಲಿ ಸಹಕಾರ ಕಾಯಿದೆಯ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಚುನಾವಣೆಗೆ ಸಂಬಂಧಪಟ್ಟಂತೆ, ಒಬ್ಬ ಸದಸ್ಯ ಸುಸ್ತಿದಾರನೇ, ಅಲ್ಲವೇ ಎಂಬುದನ್ನು ರಿಟ್ ಮೂಲಕ ಪರಿಹಾರ ನೀಡಲಾಗದು. ಉಚ್ಚನ್ಯಾಯಾಲಯ ಎದುರು ಅರ್ಜಿದಾರರು (1 ರಿಂದ 3) ಸುಸ್ತಿದಾರರು ಎಂದು ವಾದ ಮನ್ನಿಸತಕ್ಕದ್ದಲ್ಲ ಎಂದು ತೀರ್ಮಾನಿಸಿತು. ಈ ಮೂವರು ಎದುರು ಅರ್ಜಿದಾರರು ನಿಬಂಧಕರ ಮುಂದೆ ದಾವಾ ಪ್ರಕರಣ ದಾಖಲಿಸಿ ಪರಿಹಾರ ಕೇಳಿದ್ದು, ಅದೇ ಸರಿಯಾದ ಪ್ರಧಿಕಾರ. ಉಚ್ಚನ್ಯಾಯಾಲಯ ಈ ವಿಷಯವನ್ನು ಪರಿಗಣಿಸಿ, ಸುಸ್ತಿದಾರರಲ್ಲವೆಂದು ದೃಡೀಕರಿಸಿ ಪರಿಹಾರ ಪಡೆಯ ಬಹುದಾದ ಅಂಶವನ್ನು ಪರಿಶೀಲಿಸಬೇಕು ಮತ್ತು ಇದನ್ನು ಸಿವಿಲ್ ಜವಾಬ್ದಾರಿ ಎಂದು ತೀರ್ಮಾನಿಸತಕ್ಕದ್ದಲ್ಲ. (2004 Indlaw SC 275, (2004) 5 SCC 795, AIR 2004 SC 2521)

50. ವೆಸ್ಟ್‌ಬೆಂಗಾಲ್ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಬಹುಮಹಡಿ ಕಟ್ಟದಲ್ಲಿ ಹಂಚಿದ ಮನೆಗಳನ್ನು ವಂಶ ಪಾರಂಪಕವಾಗಿ ಮತ್ತು ವರ್ಗಾಯಿಸುವ ಮೂಲಕ ಬದಲಾವಣೆ ಮಾಡಬಹುದೇ? ಒಂದು ಸಂಘದ ಸದಸ್ಯ, ನಾಮನಿರ್ದೇಶನ ಮಾಡಿ ಮರಣ ಹೊಂದಿದಾಗ, ಅವನ ಆಸ್ತಿಯು ಅವನ ಕಾನೂನು ವಾರಸುದಾರರಿಗೆ ಪ್ರಾಪ್ತವಾಗುತ್ತದೆ. ಅದು ಕಲಂ 85(3) ಮತ್ತು ನಿಯಮ 135(5)ರ ನಿರ್ಬಂಧಗಳು ಇಂತಹ ಪ್ರಕರಣಗಳು ಅನ್ವಯವಾಗುವುದಿಲ್ಲ. ಈ ವಿಷಯವನ್ನು ಆಡಳಿತ ಮಂಡಳಿ ಯಾರು ಕಾನೂನು ವಾರಸುದಾರರು (ನಾಮನಿರ್ದೇಶನ ಇಲ್ಲದಿದ್ದಾಗ) ಯಾರು ಎಂಬುದನ್ನು ನಿರ್ಧರಿಸತಕ್ಕದ್ದು. ಉಚ್ಚನ್ಯಾಯಾಲಯ ನೇಮಿಸಿದ ಲೆಕ್ಕಾಧಿಕಾರಿ, ಮೂರನೆ ವ್ಯಕ್ತಿಗೆ ವರ್ಗಾವಣೆ ಮಾಡಿರುವುದು ತಪ್ಪು ಎಂದು ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. (2004 Indlaw SC 344, (2004) 5 SCC 90, AIR 2004 SC 2271)

51. ದೆಲ್ಲಿ ಸಹಕಾರ ಸಂಘಗಳ ಕಾಯಿದೆಯಲ್ಲಿ ನೋಂದಾಯಿಸಿದ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ. ಸದಸ್ಯರಿಗೆ ಹಂಚಲು 45 ಎಕರೆ ಜಮೀನು ಖರೀದಿಸಿ ಒಪ್ಪಂದ ಮಾಡಿಕೊಂಡಿದ್ದು. ಆ ಒಪ್ಪಂದದಂತೆ ಸರ್ಕಾರದ ಪುನರ್ ವಸತಿ ಇಲಾಖೆ ನೌಕರರಿಗೆ ಹಂಚಬೇಕು. ಸದಸ್ಯನ ಅರ್ಹತೆ ಮತ್ತು ಅನರ್ಹತೆಯನ್ನು ದಿಲ್ಲಿ ಸಹಕಾರ ಕಾಯಿದೆಯಡಿ ಪರಿಶೀಲಿಸಬೇಕು. ಸಂಘದ ಬೈಲಾ ಮತ್ತು ಒಪ್ಪಂದದ ಜೊತೆ ಶ್ರೇಷ್ಠ ನ್ಯಾಯಾಲಯದ ತೀರ್ಪಿನಂತೆ ನಿವೇಶನ ಹಂಚಬೇಕು. ಒಪ್ಪಂದವನ್ನು ಬಿಟ್ಟು ಬೇರೆ ರೀತಿ ಸಂಘ ಕಾರ್ಯನಿರ್ವಹಿಸತಕ್ಕದ್ದಲ್ಲ. (2003 Indlaw SC 314, (2003) 10 SCC 170, AIR 2003 SC 3996)

52. ದಿಲ್ಲಿ ಸಹಕಾರ ಕಾಯಿದೆಯಡಿಯಲ್ಲಿ ನಿವೇಶನ ಹಂಚಿಕೆ ಬಗ್ಗೆ ದಾವಾ ಪ್ರಕರಣ ದಾಖಲಿಸಿದಾಗ, ಆ ಪ್ರಕರಣವನ್ನು ಮಧ್ಯಸ್ತಗಾರರಿಗೆ ವರ್ಗಾಯಿಸಿದ್ದನ್ನು ಪ್ರಶ್ನಿಸಿ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿತು. ಮಧ್ಯಸ್ತಗಾರರು ಏಕ ಪಕ್ಷೀಯ ತೀರ್ಪು ನೀಡಿತು ಮತ್ತು ಅರ್ಜಿದಾರರಿಗೆ ನಿವೇಶನ

ಹಂಚಿಕೆ ಮಾಡಲು ಆದೇಶಿಸಿದರು. ಜಾರಿ ಪ್ರಾಧಿಕಾರ, ಹಂಚಿಕೆಯಾದ ನಿವೇಶನ ಜಪ್ತಿ ಮಾಡಲು ಆದೇಶಿಸಿತು. ಈ ಜಪ್ತಿ ಆದೇಶವನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯದಲ್ಲಿ ರಿಟ್ ದಾಖಲಿಸಿದ್ದು. ಈ ಪ್ರಕರಣ ವಿಚಾರಣೆ ಮಾಡಿ ಮಧ್ಯಸ್ತಗಾರರ ಆದೇಶವನ್ನು ಕಿತ್ತು ಹಾಕಿತು. ಅರ್ಜಿದಾರ ಇದನ್ನು ಪ್ರಶ್ನಿಸಿದಾಗ, ಶ್ರೇಷ್ಠ ನ್ಯಾಯಾಲಯ ಏಕ ಪಕ್ಷೀಯ ತೀರ್ಪನ್ನು ಕಿತ್ತು ಹಾಕಿ, ಮತ್ತೊಬ್ಬ ಮಧ್ಯಸ್ತಗಾರರು ಯಾವ ದಿನದಂದು ಏಕ ಪಕ್ಷೀಯ ತೀರ್ಪು ನೀಡಲಾಗಿತ್ತು, ಆ ದಿನದಿಂದ ಮತ್ತು ಪ್ರಕರಣ ವಿಚಾರಣೆ ಮಾಡಿ ತೀರ್ಮಾನ ನೀಡಬೇಕೆಂದು ಶ್ರೇಷ್ಠ ನ್ಯಾಯಾಲಯ ನಿರ್ದೇಶಿಸಿತು. (2002 Indlaw SC 1589, (2002) 7 SCC 46, AIR 2002 SC 3062)

53. ಗುಜರಾತ್ ಕಾಯಿದೆಯಡಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಂಘ ನಿವೇಶನ ಅಭಿವೃದ್ಧಿದಾರನ ಮೇಲೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಲು ಬರುವುದಿಲ್ಲವೆಂದು, ಏಕೆಂದರೆ ಇಬ್ಬರ ಮಧ್ಯ ಜಮೀನು ಮಾಲೀಕತ್ವದ ಬಗ್ಗೆ ಯಾವುದೇ ಒಪ್ಪಂದವಾಗಿಲ್ಲ. ಸ್ಪೆಸಿಫಿಕ್ ಪರ್‌ಫಾರ್ಮೆನ್ಸ್ ಕಾಯಿದೆಯಲ್ಲಿ ಪರಿಹಾರ ಪಡೆಯಲಾಗದು. (2001 Indlaw SC 21282)

54. ಮಹಾರಾಷ್ಟ್ರ ಕಾಯಿದೆಯಲ್ಲಿ ನಿಬಂಧಕರು ಉಪನಿಯಮಗಳ ತಿದ್ದುಪಡಿಗೆ (19.01.1985) ನಿರ್ದೇಶನ ನೀಡಿದಾಗ ಗೃಹ ನಿರ್ಮಾಣ ಸಹಕಾರ ಸಂಘಗಳು ತಿದ್ದುಪಡಿ ಮಾಡದೇ ಇದ್ದಾಗ, ರಾಜ್ಯ ಸರ್ಕಾರ ರಿಟ್ ದಾಖಲಿಸಿ ನಿರ್ದೇಶನ ಸಮರ್ಥಿಸಿದಾಗ, ಉಚ್ಚನ್ಯಾಯಾಲಯ, ಈ ನಿರ್ದೇಶನ ಸದಸ್ಯರ ಹಿತಾಸಕ್ತಿಗೆ ವಿರುದ್ಧವಾಗಿದ್ದರೆ ಅದನ್ನು ಪಾಲಿಸಬೇಕಾಗಿಲ್ಲವೆಂದು ತೀರ್ಪಿತ್ತಿತು. ಇದನ್ನು ಶ್ರೇಷ್ಠನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿಹಿಡಿದು ಸದಸ್ಯರ ಹಿತಾಸಕ್ತಿ ಮುಖ್ಯವೆಂದು, ಹೊರಗಿನ ಪ್ರಾಧಿಕಾರ, ನಿರ್ದೇಶನ ಅದಕ್ಕೆ ವಿರುದ್ಧವಾಗಿದ್ದರೆ ಅದು ಸಮರ್ಥನೀಯವಲ್ಲ. (2000 Indlaw SC 3919, (2000) 9 SCC 295)

55. ದಿಲ್ಲಿ ಸಹಕಾರ ಕಾಯಿದೆಯಡಿ, ಡಿಡಿಎ ಐದು ಎಕರೆ ಮಾತ್ರ ನೀಡಿದ್ದು, ಅದರಂತೆ ಸದಸ್ಯರಿಗೆ ನೋಟೀಸ್ ನೀಡಿತ್ತು. ಆ ನಂತರ 7.7 ಎಕರೆ ಜಮೀನು ಬಿಡುಗಡೆ ಮಾಡಿ ಸದಸ್ಯರಿಗೆ ಹೆಚ್ಚುವರಿ ಸುಮಾರು ಶೇ.2.25 ಲಕ್ಷ ಪಾವತಿಸಲು ನೋಟೀಸ್ ನೀಡಿತು. ಅದರಂತೆ ಅರ್ಜಿದಾರರು ಶೇ.85,000/- ಮಾತ್ರ ಪಾವತಿಸಿದ್ದರು ಉಳಿದಲ್ಲಿ 1.37 ಲಕ್ಷ ಪಾವತಿಸಲು 30 ದಿವಸಗಳ ಅವಧಿ ನೀಡಿ ನೋಟೀಸ್ ನೀಡಿತು. ಯಾರು ಹಣ ಪಾವತಿ ಮಾಡುವುದಿಲ್ಲವೋ ಅವರನ್ನು ಸದಸ್ಯತನದಿಂದ ಅಮಾನತ್ತು ಮಾಡಲು ತೀರ್ಮಾನಿಸಿತು. ಇದನ್ನು ನ್ಯಾಯಾಧಿಕರಣ ಮತ್ತು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಇದಕ್ಕೆ ಬಾಕಿ ಹಣ ಪಾವತಿಸದ ಬಗ್ಗೆ ನೋಟೀಸ್ ಜಾರಿಯಾದ ಬಗ್ಗೆ ನ್ಯಾಯಾಧಿಕರಣ ಮತ್ತು ಉಚ್ಚನ್ಯಾಯಾಲಯ ಪರಿಶೀಲಿಸದೇ ಇರುವುದರಿಂದ, ಮತ್ತು ನೋಟೀಸ್ ತಲುಪಿದ್ದರೆ, ಅರ್ಜಿದಾರರು ಯಾವುದೇ ಪರಿಹಾರಕ್ಕೆ ಅರ್ಹರಲ್ಲ ಎಂಬುದನ್ನು ತೀರ್ಮಾನಿಸಲು ಸೂಚಿಸಿ, ನ್ಯಾಯಾಧಿಕರಣಕ್ಕೆ ಶ್ರೇಷ್ಠ ನ್ಯಾಯಾಲಯ ಪ್ರಕರಣವನ್ನು ವಾಪಸ್ ಕಳುಹಿಸಿತು. ಅಂದರೆ ಸದಸ್ಯರು ತನ್ನ ಸದಸ್ಯತನದ ಹಿರಿತನವೇ ಆಧಾರ ಎಂಬ ನೀತಿ ಅನ್ವಯಿಸುತ್ತದೆಯೇ ಎಂಬ ಅಂಶ ಮತ್ತು ಸಂಘ ತನ್ನ ನಿಯಮಗಳನ್ನು ರೂಪಿಸುವಾಗ ರಚಿಸಿದ ನಿಯಮಗಳು ಸೀಮಿತವಾಗುತ್ತದೆ ಮತ್ತು ಸದಸ್ಯತನದ ಹಿರಿತನ ಆಧಾರವಾಗುವುದಿಲ್ಲ. (1998 Indlaw SC 1031, (1998) 6 SCC 39, AIR 1998 SC 2410)

56. ವೆಸ್ಟ್ ಬೆಂಗಾಳ ಕಾಯಿದೆಯಡಿ ಒಂದು ಗೃಹ ನಿರ್ಮಾಣ ಸಹಕಾರ ಸಂಘ ಒಬ್ಬ ಮೃತ ವ್ಯಕ್ತಿ ನಾಮನಿರ್ದೇಶನ ಮಾಡಿದ ವ್ಯಕ್ತಿಗೆ ಫ್ಲಾಟ್‌ನ್ನು ವಹಿಸಿಕೊಡಬೇಕು. ಅಂದರೆ, ಆ ನಾಮನಿರ್ದೇಶನ ಸಮರ್ಪಕವಾಗಿದ್ದರೆ, ಫ್ಲಾಟ್‌ನ್ನು ತನ್ನ ವಶಕ್ಕೆ ಪಡೆಯಬಹುದು. ಆದರೆ, ಈ ಪ್ರಕರಣದಲ್ಲಿ ಫ್ಲಾಟ್ ಅಧಿಕಾರ ಯಾರಿಗೆ ಇದೆ ಎಂಬುದನ್ನು ಪ್ರತ್ಯೇಕ ಪ್ರಕರಣ ಮತ್ತು ಪ್ರತ್ಯೇಕ ಪ್ರಾಧಿಕಾರ ನಿರ್ಧರಿಸಬೇಕು.

ಗೃಹ ನಿರ್ಮಾಣ ಸಂಘ ನೋಡಬೇಕಾದ ಅಂಶವೇನೆಂದರೆ, ನಾಮನಿರ್ದೇಶನ ಊರ್ಜಿತವಾಗಿದೆಯೇ ಎಂಬುದು ಮಾತ್ರ ಪರಿಶೀಲಿಸಬೇಕಾದ ಅಂಶ. ಆದ್ದರಿಂದ ನಾಮ ನಿರ್ದೇಶಕ ವ್ಯಕ್ತಿಗೆ ಫ್ಲಾಟ್ ತನ್ನ ವಶಕ್ಕೆ ಪಡೆಯುವ ಅಧಿಕಾರ ಇದೆ. (1997 Indlaw SC 2213, (1997) 10 SCC 344)

57. ಬಹು ರಾಜ್ಯ ಸಹಕಾರಿ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಪರಿಶಿಷ್ಟ ಜಾತಿ ಜಾದ್ಯೋಗಿಕ ಸಹಕಾರ ಸಂಘದ ಬೈಲಾದಲ್ಲಿ ಶೇ.80% ಪರಿಶಿಷ್ಟ ಜಾತಿ ಮತ್ತು ಶೇ.20 ರಷ್ಟು ಇನ್ನಿತರ ಸದಸ್ಯರಿಗೆ ಅವಕಾಶ ವಿದ್ದು ಕೇಂದ್ರ ಸರ್ಕಾರ ಎರಡು ಎಕರೆ ಜಮೀನು ಮಂಜೂರಿ ಮಾಡಿತು. ಹಾಲಿ 28 ಪರಿಶಿಷ್ಟ ಜಾತಿ ಮತ್ತು 5 ಇನ್ನಿತರರು ಸದಸ್ಯರಿದ್ದು ಹೊಸದಾಗಿ ಸದಸ್ಯತ್ವ ನೀಡಲು ಅರ್ಜಿ ಆಹ್ವಾನಿಸಿದಾಗ 78 ಅರ್ಜಿಗಳು ಸ್ವೀಕೃತವಾದವು ಸಂಘದ ಉದ್ದೇಶದಂತೆ 112 ಸದಸ್ಯರನ್ನು ಹೊಂದಬಹುದಾಗಿದ್ದು. ಅದರಲ್ಲಿ 90 ಪರಿಶಿಷ್ಟ ಜಾತಿ ಮತ್ತು 22 ಇತರರು ಇರಲು ಅವಕಾಶ ಇರುವುದರಿಂದ, 78 ಅರ್ಜಿಗಳನ್ನು ಸ್ವೀಕರಿಸಿ, ಸದಸ್ಯತ್ವ ನೀಡಲು ನಿಬಂಧಕರು ಅದನ್ನು ಪ್ರಶ್ನಿಸಿ ರಿಟ್ ಸಲ್ಲಿಸಿದಾಗ ಉಚ್ಚನ್ಯಾಯಾಲಯ ನಿಬಂಧಕರ ನಿರ್ದೇಶನವನ್ನು ಪಾಲಿಸಲು ಆದೇಶಿಸಿತು. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಸಂಘದ ಮೂಲ ಉದ್ದೇಶ ಪರಿಶಿಷ್ಟ ಜಾತಿ ವ್ಯಕ್ತಿಗಳಿಗೆ ಸೌಲಭ್ಯ ಕಲ್ಪಿಸಬೇಕಾಗಿದ್ದು. ಇದಕ್ಕೆ ವಿರುದ್ದವಾಗಿ 78 ಅರ್ಜಿದಾರನು ಸ್ವೀಕರಿಸಲು ನಿಬಂಧಕರ ಆದೇಶ ಮತ್ತು ಉಚ್ಚನ್ಯಾಯಾಲಯದ ತೀರ್ಮಾನವನ್ನು ಕಿತ್ತು ಹಾಕಿ, 78 ಅರ್ಜಿಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಸದಸ್ಯರ ಅರ್ಜಿಯನ್ನು ಪರಿಶೀಲಿಸಿ, ಸದಸ್ಯತ್ವ ನೀಡಲು ನಿರ್ದೇಶಿಸಿತು. (1996 Indlaw SC 3633, (1996) 9 SCC 300, AIR 1996 SC 2151)

58. ದೆಹಲಿ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ ಸಂಘ ತನ್ನ ಅಭಿವೃದ್ಧಿ ಕಾರ್ಯದಲ್ಲಿ, ಅಭಿವೃದ್ಧಿ ಸಂಸ್ಥೆ ಜೊತೆ ಮಾಡಿಕೊಂಡ ಒಪ್ಪಂದದ ಬಗ್ಗೆ ವಿವಾದವೆದ್ದಾಗ ಉಚ್ಚನ್ಯಾಯಾಲಯದಲ್ಲಿ ಮಧ್ಯಸ್ಥಗಾರರ ನೇಮಕಾತಿ ಬಗ್ಗೆ ಶರತ್ತುಗಳನ್ನು ಪರಿಶೀಲಿಸಿ, ದಿಲ್ಲಿ ಕಾಯಿದೆ ಕಲಂ 60 ಅನ್ವಯವಾಗುತ್ತದೆ ಮತ್ತು ಕಲಂ 93 ರಲ್ಲಿನ ನಿರ್ಬಂಧ ಅನ್ವಯವಾಗುತ್ತದೆ. ಒಪ್ಪಂದದ 7ನೇ ಶರತ್ತಿನನ್ವಯ ಕಲಂ 20 ರಲ್ಲಿ ಪ್ರಕರಣ ಊರ್ಜಿತವಲ್ಲ, ಆದ್ದರಿಂದ ಪ್ರಕರಣ ವಜಾ ಮಾಡಬೇಕು ಎಂದು ಮತ್ತು ಒಪ್ಪಂದದ ಶರತ್ತು 32 ರಲ್ಲಿನ ಒಪ್ಪಂದದಂತೆ ಕೆಲಸ ನಡೆಯುತ್ತಿದ್ದಾಗ, ಹೆಚ್ಚುವರಿ ಕೆಲಸವೂ ಕೂಡ ಮೂಲ ಒಪ್ಪಂದದಂತೆ ಮುಂದುವರಿಯತಕ್ಕದ್ದು. ಆದ್ದರಿಂದ ಕಾಯಿದೆ ಕಲಂ 20 ರನ್ನು ಪ್ರಕರಣ ಊರ್ಜಿತ ಎಂದು ವಿಶೇಷ ಮನವಿ ತಿರಸ್ಕರಿಸಿತು. (1996 Indlaw SC 2965, (1996) 9 SCC 492, AIR 1996 SC 2443)

59. ಆಂದ್ರಪ್ರದೇಶ ಕಾಯಿದೆಯು ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸಣ್ಣ ರೈತರ ಅನುಕೂಲಕ್ಕಾಗಿ ಭೂಸ್ವಾಧೀನ ಕಾಯಿದೆಯಲ್ಲಿ ವಶಪಡಿಸಿಕೊಂಡು ನೀಡುವುದು, ಸರ್ಕಾರದಿಂದ ರೂ.100/– ಪಾವತಿಸಿವುದು ನಿಯಮಬಾಹಿರ ಮತ್ತು ಅಧಿಕಾರ ದುರುಪಯೋಗ. ಗೃಹ ನಿರ್ಮಾಣ ಸಹಕಾರ ಸಂಘ ಸರ್ಕಾರಿ ಸಂಸ್ಥೆಯಲ್ಲ. ಇದು ಒಂದು ಖಾಸಗಿ ಸಂಸ್ಥೆ ಮತ್ತು ಅದರ ಸದಸ್ಯರು ಒಂದಕ್ಕಿಂತ ಹೆಚ್ಚು ನಿವೇಶನ ಹೊಂದಿದ್ದರೆ ಅದಕ್ಕಾಗಿ ಸರ್ಕಾರದ ಹಣ ಪಾವತಿಸಿ ಭೂಸ್ವಾದೀನ ಮಾಡುವುದು ನಿಯಮ ಬಾಹಿರ ವಿಶೇಷ ಅರ್ಜಿಯನ್ನು ವಜಾ ಮಾಡಿತು. (1994 Indlaw SC 1392, (1994) 4 SCC 675)

60. ದೆಲ್ಲಿ ಸಹಕಾರಿ ಕಾಯಿದೆಯು ಒಂದು ಸಂಘದ ಸಾಮಾನ್ಯ ಸಭೆಯಲ್ಲಿ ಒಬ್ಬ ಸದಸ್ಯನನ್ನು ವಜಾ ಮಾಡಿತು ಮತ್ತು ಅದನ್ನು ನಿಬಂಧಕರು ಒಪ್ಪಿಗೆ ನೀಡಿದರು. ಈ ತೀರ್ಮಾನದ ಮೇಲೆ ರಿಟ್ ದಾಖಲಿಸಬಹುದೇ? ಸದಸ್ಯನ್ನು ಹಣ ಪಾವತಿಸಲು ಸಂಘದಿಂದ ನೋಟೀಸ್ ನೀಡಿದರೂ ಹಣ

ಪಾವತಿಸದೇ ಇದ್ದಾಗ, ಈ ಕ್ರಮ ಜರುಗಿಸಿತ್ತು. ಅರ್ಜಿದಾರರು ರಿಟ್ ಅರ್ಜಿ ದಾಖಲಿಸಿ ಪರಿಹಾರ ಕೇಳಿದಾಗ ಅದನ್ನು ವಜಾ ಮಾಡಿತ್ತು. ಅದನ್ನು ಅನುಚ್ಛೇದ 136 ರಡಿ ಪ್ರಶ್ನಿಸದೆ, ಅನುಚ್ಛೇದ 32 ರಡಿ ರಿಟ್ ದಾಖಲಿಸಿತು. ನ್ಯಾಯಾಲಯವನ್ನು ತಪ್ಪುದಾರಿಗೆ ಎಳೆಯಲು ಪ್ರಯತ್ನ ನಡೆಸಿದ್ದು ತಪ್ಪು. ವಜಾ ಮಾಡಿದ ವಿಷಯವನ್ನು ಪ್ರಶ್ನಿಸಿರಲಿಲ್ಲವಾದ್ದರಿಂದ, ಮತ್ತು ಅರ್ಜಿದಾರರು ಈ ಬಗ್ಗೆ ವಾದ ಮಂಡಿಸಲು ಬಿಡಲಿಲ್ಲ, ವಿಶೇಷ ಅರ್ಜಿಯನ್ನು ಊರ್ಜಿತವಲ್ಲವೆಂದು ವಜಾ ಮಾಡಿತು ಮತ್ತು ಅರ್ಜಿದಾರರು ಸಂಘಕ್ಕೆ ಲಿಖಿತ ಅರ್ಜಿಕೊಟ್ಟ ಪರಿಹಾರ ಕೇಳಿದರೆ ಅದನ್ನು ಸಂಘ ಪರಿಶೀಲಿಸಲು ಸೂಚಿಸಿತು. (1994 Indlaw SC 451, (1994) 4 SCC 332)

61. ಬಿಹಾರ ಕಾಯಿದೆಯಲ್ಲಿ ಒಂದು ಅಂಚೆ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಉಪನಿಯಮಗಳಲ್ಲಿ ಠರಾವಿನ ಮೂಲಕ ತಿದ್ದುಪಡಿ ಮಾಡಿ (ನಿಬಂಧಕರ ಒಪ್ಪಿಗೆಗೆ ಕಳುಹಿಸಿದೆ) ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರರನ್ನು ಸದಸ್ಯರನ್ನಾಗಿ ಮಾಡಿಕ್ಕೊಳಲು ಪ್ರಾರಂಭಿಸಿತು. ಅದರಂತೆ ಅರ್ಜಿದಾರನಿಂದ ಹಣ ಪಡೆದು ಜಮೀನು ಖರೀದಿಸಿ, ಮನೆ ನಿರ್ಮಾಣ ಮಾಡಿದರೂ, ಆ ಮನೆಯನ್ನು ನೋಂದಾಯಿಸಲಿಲ್ಲ, ಇದನ್ನು ಪ್ರಶ್ನಿಸಿ ಸಹಾಯಕ ನಿಬಂಧಕರ ಮುಂದೆ ದಾವಾ ದಾಖಲಿಸಿದಾಗ, ತಿದ್ದುಪಡಿಯಾದ ಠರಾವಿನ ಆಧಾರದ ಮೇಲೆ ಅವನನ್ನು ಸದಸ್ಯನಾಗಿ ಮುಂದುವರಿಯಬಹುದೆಂದು ಆದೇಶಿಸಿದರು. ಇದನ್ನು ನಿಬಂಧಕರು ಮತ್ತು ಸಹಕಾರ ಸಚಿವರು ದೃಡೀಕರಿಸಿದರು. ಇದನ್ನು ಪ್ರಶ್ನಿಸಿ, ರಿಟ್ ಅರ್ಜಿ ದಾಖಲಿಸಿದಾಗ, ಉಚ್ಚನ್ಯಾಯಾಲಯ ನಿಬಂಧಕರು ಮತ್ತು ಮಂತ್ರಿಗಳ ಆದೇಶವನ್ನು ರದ್ದುಗೊಳಿಸಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಅರ್ಜಿದಾರ ಸದಸ್ಯ ಮನೆ ಪಡೆಯಲು ಅರ್ಹ ಎಂದು ಈಗಾಗಲೆ ಪಾವತಿಸಿರುವ ಹಣ, ಠೇವಣಿಯನ್ನು ಹೊಂದಾಣಿಕೆ ಮಾಡಿಕೊಂಡು, ಇನ್ನು ಬಾಕಿ ಇದ್ದರೆ ಅದನ್ನು ಅರ್ಜಿದಾರನಿಂದ ಪಡೆದು ಮನೆ ನೋಂದಾಯಿಸಿಕೊಡಲು ಆದೇಶಿಸಿತು. (1991 Indlaw SC 719, (1993) 1 SCC (Supp) 71)

62. ದೆಹಲಿ ಸಹಕಾರಿ ಕಾಯಿದೆಯಡಿ ಒಂದು ಪುನರ್ ವಸತಿ ಸಹಕಾರ ಸಂಘಕ್ಕೆ ಕೇಂದ್ರ ಸರ್ಕಾರ 60 ಎಕರೆ ಜಮೀನು ಮಂಜೂರಿ ಮಾಡಿತು, ಆ ನಂತರ ಅದನ್ನು ರದ್ದು ಪಡಿಸಿತು. ಇದನ್ನು ಪ್ರಶ್ನಿಸಿ ರಿಟ್ ಅರ್ಜಿ ದಾಖಲಿಸಿದಾಗ, ದೆಹಲಿ ಅಭಿವೃದ್ಧಿ ಪ್ರಾಧಿಕಾರ ಮತ್ತು ಸಂಘವು ಒಂದು ಒಡಂಬಡಿಕೆ ಮಾಡಿಕೊಂಡು 45 ಎಕರೆ ಜಮೀನಿನ ಮಂಜೂರಿ ಮಾಡಲಾಯಿತು. ಭೂ ಅಭಿವೃದ್ಧಿ ಪಡಿಸಿ, ನಿವೇಶನ ಹಂಚಿಕೆ ಮಾಡುವ ಸಂದರ್ಭದಲ್ಲಿ ಜೇಷ್ಠತೆ ನಿರ್ಧರಿಸುವಾಗ, ಆಡಳಿತ ಮಂಡಳಿ ದಿನಾಂಕ 17.11.1979 ರಂದು 28 ವ್ಯಕ್ತಿಗಳನ್ನು ಸದಸ್ಯರನ್ನಾಗಿ ಸೇರಿಸಿಕೊಂಡಿತು ಮತ್ತು ಈ ಹಿಂದೆ ಪ್ರಮಾಣ ಪತ್ರದ ನ್ಯೂನತೆ ಆಧಾರದ ಮೇಲೆ ತಡೆಹಿಡಿಯಲಾಗಿದ್ದ 15 ಸದಸ್ಯರನ್ನು ದೃಢೀಕರಿಸಿತು. ಜೇಷ್ಠತೆ ಪ್ರಶ್ನಿಸಿದಾಗ ಈ 15 ಸದಸ್ಯರು ಅದೇ ದಿನ ಸದಸ್ಯತ್ವ ಪಡೆದ 28 ಸದಸ್ಯರಿಗಿಂತ ಹಿರಿಯರು ಎಂದು ತೀರ್ಮಾನಿಸಿತು. (ರಿಟ್ ಅರ್ಜಿಯಲ್ಲಿ) ಇದನ್ನು ಪ್ರಶ್ನಿಸಿದಾಗ ಶ್ರೇಷ್ಠ ನ್ಯಾಯಾಲಯ, ಆಂತರಿಕ ಅರ್ಜಿಗೆ ತಡೆಯಾಜ್ಞೆ ನೀಡಿತ್ತು. ಅದನ್ನು ಅಂತಿಮವಾಗಿ ತೆರವುಗೊಳಿಸಿದ ನಂತರ ಉಚ್ಚನ್ಯಾಯಾಲಯದ ಆದೇಶ ಜಾರಿಯಾಗುತ್ತಿದೆ. ಅಂದರೆ ಜೇಷ್ಠತಾ ಪಟ್ಟಿ ಅಂತಿಮಗೊಂಡಿದೆ. (1991 Indlaw SC 784, (1991) 4 SCC 485, AIR 1991 SC 2160)

63. ದೆಹಲಿ ಕಾಯಿದೆಯಡಿ ಒಂದು ಗೃಹ ನಿರ್ಮಾಣ ಸಹಕಾರ ಸಂಘ ಬಹುಮಹಡಿ ಕಟ್ಟಡ ನಿರ್ಮಾಣಕ್ಕೆ ಬೇಕಾದ ವಸ್ತುಗಳನ್ನು ಖರೀದಿ ಮಾಡುವಾಗ ನಿರ್ಮಾಣವಾದ ಒಂದು ವಿವಾದದ ಬಗ್ಗೆ ಹೊಸದಾಗಿ ಚುನಾಯಿತವಾದ ಸಮಿತಿ ಹಿಂದಿನ ಆಡಳಿತ ಮಂಡಳಿ ಮೇಲೆ ಆರೋಪಿಸಿದಾಗ, ನಿಬಂಧಕರು ವಿಚಾರಣೆ ಮಾಡಿ, ಮಧ್ಯಸ್ತಗಾರರ ತೀರ್ಮಾನಕ್ಕೆ ಪ್ರಕರಣ ವರ್ಗಾಯಿಸಿದಾಗ,

ವಿಚಾರಣೆ ಮಾಡಿ ಏಕಪಕ್ಷೀಯ ತೀರ್ಪಿತ್ತಿರು. ಅದನ್ನು ಪ್ರಶ್ನಿಸಿ ಸಹಕಾರ ಮೇಲ್ಮನವಿ ಪ್ರಾಧಿಕರಣಕ್ಕೆ ಮೇಲ್ಮನವಿ ಸಲ್ಲಿಸಿದಾಗ ಅದನ್ನು ವಜಾ ಮಾಡಿತು. ಇದನ್ನು ಮತ್ತೆ ರಿಟ್ ಮೂಲಕ ಪ್ರಶ್ನಿಸಿದಾಗ, ಅದೂ ಸಹ ರಿಟ್ ವಜಾ ಮಾಡಿತು. ವಿಶೇಷ ಅರ್ಜಿ ಮೂಲಕ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಅದರಲ್ಲಿ ದೆಹಲಿ ಕಾಯಿದೆ ಕಲಂ 59 ರಲ್ಲಿ ಪ್ರಕರಣ ದಾಖಲಿಸುವ ಬದಲು 60 ರಲ್ಲಿ ದಾಖಲಿಸಲಾಗಿದೆ ಎಂದು ವಾದಿಸಿದಾಗ ಮದ್ರಾಸ್ ಸಹಕಾರ ಕಾಯಿದೆ ಕಲಂ 49 ಮತ್ತು ದೆಹಲಿ ಕಾಯಿದೆ ಕಲಂ 59 ಒಂದೇ ರೀತಿ ಇದ್ದು ಈಗಾಗಲೇ ಈ ನ್ಯಾಯಾಲಯ ನೀಡಿದ 1964 Indlaw SC 383, (1965) 1 SCR 186 ನಲ್ಲಿರುವಂತೆ ಸಮರ್ಥಿಸಿ ವಿಶೇಷ ಅರ್ಜಿ ವಜಾ ಮಾಡಿತು. (1991 Indlaw SC 779, (1991) 2 SCC (Supp) 215, AIR 1991 SC 2254)

64. ದೆಹಲಿ ಸಹಕಾರ ಕಾಯಿದೆಯಡಿ ನೋಂದಾಯಿಸಿದ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ (ಗುಂಪು ಮನೆ ನಿರ್ಮಾಣ) ಜಮೀನು ಹಂಚಿಕೆ ಮಾಡಲು ರಚಿತವಾದ ಸಂಘಗಳ ನೋಂದಾವಣೆಗೆ ನಿಬಂಧಕರು ತಾತ್ವಿಕವಾಗಿ ನೋಂದಾಯಿಸುವುದನ್ನು ನಿಲ್ಲಿಸಿದರು. ಅಂದರೆ ಕನಿಷ್ಠ 60 ಸದಸ್ಯರು ಮತ್ತು ಗರಿಷ್ಠ 300 ಸದಸ್ಯರ ಸಂಘ ನೋಂದಾಯಿಸಲು, ದೆಲ್ಲಿ ಅಭಿವೃದ್ಧಿ ಪ್ರಾಧಿಕಾರ ತಾವು ವಶಪಡಿಸಿಕೊಂಡ ಜಮೀನಿನ ಶೇ.60ನ್ನು ತನ್ನ ವಶದಲ್ಲಿ ಇಟ್ಟುಕೊಂಡ ಉಳಿದ ಶೇ.40ನ್ನು ಗುಂಪು ಮನೆ ನಿರ್ಮಾಣ ಸಂಘಗಳಿಗೆ ನೀಡಲು ತಾತ್ವಿಕ ಒಪ್ಪಿಗೆ ನೀಡಿದ ನಂತರ, ಮತ್ತೆ ಸಂಘಗಳ ನೋಂದಾವಣೆ ಮಾಡಲು ಅವಕಾಶ ನೀಡಿತು. ಇದನ್ನು ರಿಟ್ ಮೂಲಕ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ದೆಹಲಿ ಅಭಿವೃದ್ಧಿ ಪ್ರಾಧಿಕಾರದ ಮೊದಲು ಬಂದವರಿಗೆ ಪ್ರಾಶಸ್ತ್ಯ ಎಂಬ ತತ್ವವನ್ನು ಪುರಸ್ಕರಿಸದೇ ಗುಂಪು ನಿರ್ಮಾಣ ಸಂಘಗಳ ನೋಂದಣಿ ದಿನಾಂಕದ ಜೇಷ್ಠತಾ ಪಟ್ಟಿ ಆಧಾರದಲ್ಲಿ ಜಮೀನು ಹಂಚಿಕೆ ಮಾಡಬೇಕೆಂದು ಸೂಚಿಸಿತು. ಇದು 16.07.1983ರ ನೀತಿಯಂತೆ ಮತ್ತು ಈ ನೀತಿಯಲ್ಲಿ 20.01.1990 ಕ್ಕೆ ಹೊಸ ನೀತಿ ರೂಪಿಸಿದಾಗ, ಆ ನೀತಿ ಅನುಸರಿಸಬೇಕು. ಜೇಷ್ಠತೆಯನ್ನು ಯಾವಾಗಲೂ ಗುಂಪು ಸಂಘದ ನೋಂದಣಿ ದಿನಾಂಕದ ಆಧಾರದ ಮೇಲೆ ನಿರ್ಧರಿಸಬೇಕು. ಈ ನೀತಿಯನ್ನು ಪ್ರಶ್ನಿಸಲು ಯಾರು ಅರ್ಹರು ಅಥವಾ ಅಲ್ಲಿ ಎಂಬುವ ಪ್ರಶ್ನೆಯನ್ನು ಈ ಅರ್ಜಿಯನ್ನು ವಿಮರ್ಶಿಸುವ ಅವಶ್ಯಕತೆ ಇಲ್ಲ. ಉಚ್ಚನ್ಯಾಯಾಲಯದ ಆದೇಶವನ್ನು ಎತ್ತಿಹಿಡಿಯಿತು. (1992 Indlaw SC 609, (1992) 4 SCC 477, AIR 1993 SC 155)

65. ಮಹಾರಾಷ್ಟ್ರ ಕಾಯಿದೆಯ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಇಬ್ಬರು ಸದಸ್ಯರು ಬಾಡಿಗೆ ದಾರರಾಗಿದ್ದು ಮೂರನೇ ವ್ಯಕ್ತಿಯ ಜೊತೆ ಹನ್ನೊಂದು ತಿಂಗಳ ಒಪ್ಪಂದ ಮಾಡಿಕೊಂಡು (ಆ ಒಪ್ಪಂದ ಮುಂದುವರಿಸಲು) ಬಾಡಿಗೆ ನೀಡಿರುವುದು ನಿಯಮ ಬಾಹಿರ. ಅಂದರೆ ಸದಸ್ಯನಲ್ಲಿದ ವ್ಯಕ್ತಿ ಜೊತೆ ಸಂಬಂಧ ಸಹಕಾರ ಸಂಘದ ವ್ಯವಹಾರವಾಗುವುದಿಲ್ಲ ಮತ್ತು ಈ ರೀತಿ ಕಲಂ 91 ರಡಿ ಅವಕಾಶ ಸಂವಿಧಾನ ಬಾಹಿರ ಎಂಬು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿ ವಿಶೇಷ ಮನವಿ ತಿರಸ್ಕರಿಸಿತು. (1991 Indlaw SC 532, (1991) 3 SCC 180, AIR 1991 SCW 779)

66. ಮಹಾರಾಷ್ಟ್ರ ಕಾಯಿದೆಯಲ್ಲಿ ಒಂದು ಆಸ್ತಿಯನ್ನು ಒಬ್ಬ ಸದಸ್ಯ, ಸದಸ್ಯನಲ್ಲದ ವ್ಯಕ್ತಿಗೆ ವರ್ಗಾವಣೆ ಮಾಡುವುದು ಸಹಕಾರ ನ್ಯಾಯಾಲಯದ ವ್ಯಕ್ತಿಯಲ್ಲಿ ಬರುವುದಿಲ್ಲ. (1990 Indlaw SC 513, (1991) 1 SCC 469, AIR 1991 SC 626)

67. ಮಹಾರಾಷ್ಟ್ರ ಸಹಕಾರ ಕಾಯಿದೆಯಲ್ಲಿ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಮನೆಯಿಂದ ಖಾಲಿ ಮಾಡಿಸಲು ಸಹಕಾರ ನ್ಯಾಯಾಲಯದ ಅಧಿಕಾರ ಇಲ್ಲ. ಅಂದರೆ ಮಹಾರಾಷ್ಟ್ರ ಬಾಡಿಗೆ ಕಾಯಿದೆಯಡಿ ಅಂತಹ ವ್ಯಕ್ತಿ ಬಾಡಿಗೆ ದಾರನಾಗುತ್ತಾನೆ. ಆದ್ದರಿಂದ ಸಹಕಾರ ಕಾಯಿದೆ ಕಲಂ 91(1) ರಲ್ಲಿ ಊರ್ಜಿತವಲ್ಲ. ಮೇಲ್ಮನವಿ ಪುರಸ್ಕರಿಸಲಾಯಿತು. (1990 Indlaw SC 847,

(1990) 2 SCC 288, AIR 1990 SC 1563)

68. ಗುಜರಾತ್ ಸಹಕಾರ ಕಾಯಿದೆಯು ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಒಬ್ಬ ಸದಸ್ಯನನ್ನು ಸದಸ್ಯತ್ವದಿಂದ ವಜಾ ಮಾಡಲು ತೀರ್ಮಾನಿಸಿತು. ಈ ತೀರ್ಮಾನವನ್ನು ನಿಬಂಧಕರು ಅನುಮೋದಿಸಿದರು. ಇದನ್ನು ಪ್ರಶ್ನಿಸಿ ದಾವಾ ದಾಖಲಿಸಿದಾಗ ಮಧ್ಯಸ್ತಗಾರರು ಪ್ರಕರಣವನ್ನು ವಜಾ ಮಾಡಿದರು. ಇದನ್ನು ನ್ಯಾಯಾಧಿಕರಣಕ್ಕೆ ಮೇಲ್ಮನವಿ ಸಲ್ಲಿಸಿದಾಗ, ಪ್ರಕರಣವನ್ನು ಮರು ವಿಚಾರಣೆಗೆ ನಿಬಂಧಕರಿಗೆ ಕಳುಹಿಸಿತು. ಇದನ್ನು ಜಿಲ್ಲಾ ಉಪನಿಬಂಧಕರು ವಿಚಾರಣೆ ಮಾಡುವಾಗ, ಮೊದಲನೇ ತೀರ್ಮಾನದಂತೆ, ಸದಸ್ಯನನ್ನು ವಜಾ ಮಾಡಿದ ನಂತರ ಮೇಲ್ಮನವಿ ಸಲ್ಲಿಸದೇ ದಾವಾ ದಾಖಲಿಸಿರುವುದು ತಪ್ಪು ಎಂದು, ಈ ಪ್ರಕರಣ ಊರ್ಜಿತವಲ್ಲವೆಂದು ತೀರ್ಮಾನಿಸಿದರು. ಇದನ್ನು ಮತ್ತೆ ನ್ಯಾಯಾಧಿಕರಣದಲ್ಲಿ ಅರ್ಜಿಯಲ್ಲಿ ಪರಿಷ್ಕರಣ ಪ್ರಶ್ನಿಸಿದಾಗ, ಮರು ವಿಚಾರಣೆಗೆ ಆದೇಶಿಸಿತು. ಇದನ್ನು ಉಚ್ಚನ್ಯಾಯಾಲಯದದಲ್ಲಿ ಪ್ರಶ್ನಿಸಿದಾಗ ನ್ಯಾಯಾಧಿಕರಣ ತಪ್ಪು ಮಾಡಿದೆ ಎಂದು ಮತ್ತು ಕಲಂ 96(11) ರಡಿ ನ್ಯಾಯಾಧಿಕರಣ ಪುನರ್ ಪರಿಶೀಲನಾ ಅರ್ಜಿ ವಿಚಾರಣೆ ಮಾಡುವ ಅಧಿಕಾರ ಇಲ್ಲವೆಂದು ತೀರ್ಮಾನಿಸಿತು. ಇದಕ್ಕೆ ಪೂರಕವಾಗಿ ಮೂಲದ ಅರ್ಜಿಯನ್ನು ನ್ಯಾಯಾಧಿಕರಣ ನಿಬಂಧಕರಿಗೆ ವರ್ಗಾಯಿಸಿ ಮರು ವಿಚಾರಣೆ ಮಾಡಿದ ಆದೇಶ ಸರಿ ಮತ್ತು ನಿಬಂಧಕರು ತಾನು ಮಾಡಿದ ಆದೇಶವನ್ನು ಪುನಃ ಮರು ಪರಿಶೀಲಿಸುವ ಅಧಿಕಾರ ಹೊಂದಿಲ್ಲವೆಂಬ ತೀರ್ಮಾನವನ್ನು ಎತ್ತಿ ಹಿಡಿಯಿತು. ಇದನ್ನು ಶ್ರೇಷ್ಠ ನ್ಯಾಯಾಲಯದದಲ್ಲಿ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದು, ನಿಬಂಧಕರು ತನ್ನ ಮೂಲ ತೀರ್ಪನ್ನು ಪುನರ್ ಪರಿಶೀಲನೆ ಮಾಡುವ ಅಧಿಕಾರ ಇಲ್ಲ ಎಂದು ತೀರ್ಮಾನಿಸಿತು. (1987 Indlaw SC 28422, (1987) 3 SCC 425, AIR 1987 SC 1513)

69. ಮದ್ರಾಸ್ ಸಹಕಾರ ಕಾಯಿದೆಯಡಿ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಬಡಾವಣೆಯಲ್ಲಿ ನಿರ್ಮಿಸಿದ ಮೂಲ ಸೌಕರ್ಯಗಳಾದ, ರಸ್ತೆ, ಉದ್ಯಾನವನ, ಆಟದ ಮೈದಾನವನ್ನು ಪಂಚಾಯಿತಿಗೆ ವಹಿಸಲು ತೀರ್ಮಾನಿಸಿತು. ಹೊಸದಾಗಿ ಚುನಾವಣೆ ನಡೆದು, ಈ ತೀರ್ಮಾನವನ್ನು ರದ್ದು ಪಡಿಸಿ, ಸಹಕಾರ ಸಂಘವೇ ನಿರ್ವಹಿಸಲು ತೀರ್ಮಾನಿಸಿತು. ಇದನ್ನು ಪ್ರಶ್ನಿಸಿದಾಗ, ಪಂಚಾಯಿತ್‌ಗೆ ರಸ್ತೆ ನಿರ್ವಹಣೆ ಮಾಡುವ ಅಧಿಕಾರ ಇದೇ ಎಂದು ಭಾಗಶಃ ಪರಿಹಾರ ನೀಡಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದದಲ್ಲಿ ಪ್ರಶ್ನಿಸಿದಾಗ ಪಂಚಾಯಿತ್ ಕಾಯಿದೆ ಕಲಂ 56 ರಲ್ಲಿ ಮೂಲ ಸೌಕರ್ಯ ಯಾರೇ ನಿರ್ಮಿಸಿದರು ಪಂಚಾಯಿತ್ ನಿರ್ವಹಣೆ ಮಾಡಲು ಅಧಿಕಾರ ಇರುವುದನ್ನು ಪ್ರಸ್ತಾಪಿಸಿ ಉಚ್ಚನ್ಯಾಯಾಲಯದ ಆದೇಶವನ್ನು ಪುನರ್ ಪರಿಶೀಲಿಸಲು ಶ್ರೇಷ್ಠನ್ಯಾಯಾಲಯ ತಿರಸ್ಕರಿಸಿತು. (1966 Indlaw SC 333, AIR 1966 SC 1807)

70. ಮಹಾರಾಷ್ಟ್ರ ಕಾಯಿದೆಯಲ್ಲಿ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯತ್ವಕ್ಕೆ ಅರ್ಜಿ ಕೊಟ್ಟ ಸದಸ್ಯತ್ವ ನೀಡದಿದ್ದಾಗ, ಉಪನಿಬಂಧಕರ ಮುಂದೆ ಪ್ರಕರಣ ದಾಖಲಿಸಿ, ಸಂಘದ ನಿರ್ಧಾರ ತಪ್ಪು ಎಂದು ತೀರ್ಮಾನಿಸಿದ ನಂತರ ರಾಜ್ಯ ಸರ್ಕಾರಕ್ಕೆ ಸಂಘ ಮೇಲ್ಮನವಿಯನ್ನು ಕಲಂ 23(3) ರಲ್ಲಿ ಸಲ್ಲಿಸಿದಾಗ, ತನಗೆ ವ್ಯಾಪ್ತಿ ಇಲ್ಲವೆಂದು ಮತ್ತು ಉಪನಿಬಂಧಕರ ಆದೇಶ ಅಂತಿಮವೆಂದು ತೀರ್ಮಾನಿಸಿ ಹಿಂಬರಹ ನೀಡಿತು. ಇದನ್ನು ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯ, ಸಂಘದ ನೀಲುವು ಸರಿಯಲ್ಲ. ಸಂಘದ ಸೌಲತ್ತುಗಳನ್ನು ಸ್ವಂತಕ್ಕೆ ಬಳಸಲಾಗದು ಎಂದು ವಜಾ ಮಾಡಿತು. ಇದನ್ನು ಶ್ರೇಷ್ಠ ನ್ಯಾಯಾಲಯದದಲ್ಲಿ ಪ್ರಶ್ನಿಸಿದಾಗ, ಕಲಂ 23(3)ರ ಆದೇಶ ಅಂತಿಮವಾಗಿದ್ದರೂ, ಕಲಂ 154 ರಲ್ಲಿ ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ಕಿತ್ತು ಹಾಕಿಲ್ಲ. ಆದ್ದರಿಂದ ರಾಜ್ಯ ಸರ್ಕಾರದ ತೀರ್ಮಾನ ಸರಿಯಲ್ಲವೆಂದು ತೀರ್ಮಾನಿಸಿತು. (1966 Indlaw SC 385, AIR 1966 SC 1449)

71. ಬಾಂಬೆ ಕಾಯಿದೆಯಲ್ಲಿ ಒಂದು ಗೃಹ ನಿರ್ಮಾಣ ಸಹಕಾರ ಸಂಘ ಒಂದು ದೊಡ್ಡ ನಿವೇಶನವನ್ನು ಗುತ್ತಿಗೆ ಪಡೆದು 17 ನಿವೇಶನಗಳನ್ನು ಮಾಡಿ ಸದಸ್ಯರಿಗೆ ಮನೆ ನಿರ್ಮಿಸಿಕೊಳ್ಳಲು ಸಾಲ ನೀಡಿ, ವಾರ್ಷಿಕ ನಿವೇಶನ ಬಾಡಿಗೆ ರೂ.1/– ನ್ನು ನಿಗದಿ ಪಡಿಸಿತು. ಮಾಸಿಕ ಕಂತುಗಳ ಪಾವತಿ ಮಾಡದಿದ್ದರೆ, ನಿರ್ಮಾಣ ಮಾಡಿದ ಮನೆಯನ್ನು ಖಾಲಿ ಮಾಡುವ ಒಪ್ಪಂದದ ಮೇಲೆ ಸಾಲ ನೀಡಿತು. ಕಂತುಗಳು ಪಾವತಿ ಮಾಡದೇ ಇದ್ದುದರಿಂದ ನಿಬಂಧಕರ ಮುಂದೆ ಮಧ್ಯಸ್ತಿಗಾರ ನೇಮಕ ಮಾಡಲು ಮನವಿಯನ್ನು ಆಧರಿಸಿ ನಿಬಂಧಕರು ಮೂವರು ಸದಸ್ಯರನ್ನು ನೇಮಿಸಿತು. ತೀರ್ಮಾನದಲ್ಲಿ ಮನೆ ಖಾಲಿ ಮಾಡಲು ನಿರ್ದೇಶಿಸಿತು. ಇದನ್ನು ಪ್ರಶ್ನಿಸಿ ನ್ಯಾಯಾಧಿಕರಣಕ್ಕೆ ಮೇಲ್ಮನವಿ ಸಲ್ಲಿಸಿ ಈ ಪ್ರಕರಣ ಮಾಲೀಕ ಬಾಡಿಗೆದಾರ ಎಂದು ಪರಿಶೀಲಿಸಬೇಕು ಮತ್ತು ಬಾಡಿಗೆ ಕಾಯಿದೆಯಲ್ಲಿ ಬರುತ್ತದೆ ಎಂದು ಪ್ರಶ್ನಿಸಿದಾಗ, ಅದನ್ನು ಪರಿಶೀಲಿಸಿ ಅರ್ಜಿ ವಜಾ ಮಾಡಿತು. ಇದನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದಾಗ, ಬಾಡಿಗೆ ಕಾಯಿದೆಯಡಿ ಬರುತ್ತಿದೆ ಎಂದು ನಿಬಂಧಕರ ಆದೇಶ ಕಿತ್ತು ಹಾಕಿದರು. ಆದರೆ ಅದಕ್ಕೆ ಪೂರ್ವದಲ್ಲಿ, ನಿಬಂಧಕರ ಆದೇಶವನ್ನು ಜಾರಿ ಮಾಡಲು ಅರ್ಜಿ ಸಲ್ಲಿಸಿದಾಗ, ಅದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲಿಲ್ಲ ಪ್ರಕರಣ ದಾಖಲಿಸಿದಾಗ, ಈ ಪ್ರಕರಣದಲ್ಲಿ ತೀರ್ಮಾನಿಸಬೇಕಾದ ಪ್ರಶ್ನೆ ಅರ್ಜಿದಾರರು ಬಾಡಿಗೆದಾರರೇ ಎಂದು. ಇದನ್ನು ಪರಿಶೀಲಿಸಿ, ಮತ್ತು ಈ ಹಿಂದಿನ ತೀರ್ಮಾನ. AIR 1958 SC 677 ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲವೆಂದು, ನಿಬಂಧಕರ ಅಧಿಕಾರ ವ್ಯಾಪ್ತಿ ಅಭಾದಿತ ಎಂದು ತೀರ್ಮಾನಿಸಿ, ಪ್ರಕರಣವನ್ನು ವಜಾ ಮಾಡಿತ್ತು. (1963 Indlaw SC 190, AIR 1967 SC 369, 1964 Mah LJ 410)

72. ಆಂಧ್ರ ಪ್ರದೇಶದ ಸಹಕಾರ ಕಾಯಿದೆಯಲ್ಲಿನ ಒಂದು ಗೃಹ ನಿರ್ಮಾಣ ಸಹಕಾರ ಸಂಘ, ತನ್ನ ಸದಸ್ಯರಿಗೆ ಹಂಚಿಕೆ ಮಾಡಲು, ಜಮೀನು ಖರೀದಿ ಒಪ್ಪಂದ ಮಾಡಿಕೊಂಡು, ಅದನ್ನು ಜಾರಿ ಮಾಡುವ ಸಂದರ್ಭದಲ್ಲಿ ಆದ ವಿವಾದದಲ್ಲಿ, ಜಮೀನು ಮಾರಿದ ವ್ಯಕ್ತಿ ತನ್ನ ಲಿಖಿತ ಹೇಳಿಕೆಯನ್ನು, ಸಿವಿಲ್ ನ್ಯಾಯಾಲಯದಲ್ಲಿ ಬದಲಾಯಿಸಲು ಅನುಮತಿ ಕೋರಿ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಅದನ್ನು ತಿರಸ್ಕರಿಸಲಾಯಿತು. ಅದನ್ನು ಶ್ರೇಷ್ಠನ್ಯಾಯಾಲಯದಲ್ಲಿ ವಿಶೇಷ ಮನವಿಯಲ್ಲಿಯೂ ತಿರಸ್ಕರಿಸಲಾಯಿತು. ಆ ನಂತರ ಜಮೀನು ಒಪ್ಪಂದ ಮಾಡಿಕೊಂಡಾಗ ಉಚ್ಚನ್ಯಾಯಾಲಯದಲ್ಲಿ ಪುನರ್ ವಿಮರ್ಷೆ ಅರ್ಜಿ ಸಲ್ಲಿಸಿದಾಗಲೂ ಅದನ್ನು ತಿರಸ್ಕರಿಸಿತು ಮತ್ತು ವಿಶೇಷ ಮನವಿಯನ್ನು ಶ್ರೇಷ್ಠನ್ಯಾಯಾಲಯದಲ್ಲಿ ಸಲ್ಲಿಸಿದಾಗ, ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಿತು. ಅಂದರೆ ಒಮ್ಮೆ ಲಿಖಿತ ಹೇಳಿಕೆಯನ್ನು ವಿಚಾರಣಾ ನ್ಯಾಯಾಲಯದಲ್ಲಿ ಸಲ್ಲಿಸಿದ ನಂತರ, ತನ್ನ ಅನುಕೂಲಕ್ಕೆ ಅದನ್ನು ಬದಲಾಯಿಸಲು ಒಪ್ಪಿಗೆ ನೀಡಲು ನ್ಯಾಯಾಲಯಗಳು ತಿರಸ್ಕರಿಸಿದವು. (2013 Indlaw SC 252, AIR 2013 SC 3693, (2013) 9 SCC 349)

73. ಕರ್ನಾಟಕ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಂಘಕ್ಕೆ ಬೇಕಾದ ಜಮೀನು ಕಂದಾಯ ಇಲಾಖೆ ಮುಖಾಂತರ ಸ್ವಾಧೀನ ಪಡಿಸಿಕೊಂಡು ನೀಡಲು ಹಣ ಪಾವತಿಸಿ, ಕಾಗದ ಪತ್ರಗಳಲ್ಲಿ ತನ್ನ ವಶಕ್ಕೆ ಪಡೆಯಿತು. ಆದರೆ ಆ ಜಮೀನು ಬೌತಿಕವಾಗಿ ಜಮೀನು ಮಾಲೀಕರ ವಶದಲ್ಲಿಯೇ ಮುಂದುವರಿಯಿತು. ಜಮೀನು ಮಾಲೀಕರ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಏಕ ಸದಸ್ಯಪೀಠ ವಜಾ ಮಾಡಿತು ಮತ್ತು ವಿಭಾಗೀಯ ಪೀಠ ಜಮೀನು ಸ್ವಾದೀನ ಪಡಿಸಿಕೊಳ್ಳುವ ಪೂರ್ವದಲ್ಲಿ ರಾಜ್ಯ ಸರ್ಕಾರ ಒಂದು ಯೋಜನೆ ರೂಪಿಸಿಲ್ಲವಾದರೂ ಕಲಂ.3(ಎಚ್)(VI) ರನ್ವಯ ಅದು ಸಾರ್ವಜನಿಕ ಉದ್ದೇಶಕ್ಕಾಗಿ ಎಂದು ಅರ್ಥೈಸಬಹುದು ಎಂದು ತೀರ್ಮಾನಿಸಿತು. ಆದರೆ ಜಮೀನು ಮಾಲೀಕರಿಗೆ ನೋಟೀಸ್ ಜಾರಿ ಮಾಡಿದೇ ಸ್ವಾದೀನ ಪ್ರಕ್ರಿಯೆ

ಮಾಡಿ, ಸರ್ಕಾರಕ್ಕೆ ವರದಿ ಸಲ್ಲಿಸಿರುವುದರಿಂದ ಅದು ಅಸಿಂದು ಎಂದು ತೀರ್ಮಾನಿಸಿತು. ಇದನ್ನು ಪ್ರಶ್ನಿಸಿ ಸಂಘವು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯದ ಕಲಂ.3(ಎಚ್)(VI) ನಿಯಮ ಪಾಲಿಸಲಾಗದೆ ಎಂದು ಭಾವಿಸಬಹುದಾಗಿದೆ ಎಂಬ ತೀರ್ಮಾನವನ್ನು ಕಿತ್ತುಹಾಕಿತು ಮತ್ತು ಸ್ವಾದೀನ ಪ್ರಕ್ರಿಯೆ ರದ್ದುಗೊಳಿಸಿತು. (2012 Indlaw SC 577, (2012) 3 SCC 727)

74. ಗುಜರಾತ್ ಸಹಕಾರ ಕಾಯಿದೆ (ಹಿಂದಿನ ಬಾಂಬೆ ರಾಜ್ಯದ ಭಾಗವಾಗಿತ್ತು) ಒಂದು ಗೃಹ ನಿರ್ಮಾಣ ಸಹಕಾರ ಸಂಘ ತನ್ನ ಸದಸ್ಯರಿಗೆ ಹಂಚಲು ಭೂಸ್ವಾಧೀನ ಕಾಯಿದೆಯಲ್ಲಿ ಸ್ವಾದೀನಕ್ಕೆ ಪಡೆದು ಹಂಚುವಾಗ ಉಪನಿಯಮಗಳಲ್ಲಿ ನಿರ್ಧರಿಸಿದ ಸದಸ್ಯರಿಗೆ ಮಾತ್ರ ಹಂಚಲು ಕಲ್ಪಿಸಿದ್ದ ಅವಕಾಶದ ಬಗ್ಗೆ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಅದರಲ್ಲಿ ಒಬ್ಬ ಸದಸ್ಯ ಕಟ್ಟಡವನ್ನು ಒಡೆದು ಹೊಸ ಕಟ್ಟಡ ನಿರ್ಮಾಣ ಮಾಡಲು ಕೇಳಿದಕ್ಕೆ ಒಪ್ಪಿಗೆ ನೀಡಿದಾಗ, ನಿರ್ಮಾಣ ಮಾಡಿದ ಕಟ್ಟಡಗಳನ್ನು ಪಾರ್ಸಿ ಜನಾಂಗದ ಸದಸ್ಯರಿಗೆ ಮಾತ್ರ ನೀಡಲು ಸೂಚಿಸಿತು. ಇದನ್ನು ನಿಬಂಧಕರ ಒಪ್ಪಿಗೆಯಲ್ಲಿ ಉಪನಿಯಮಗಳಲ್ಲಿನ ಅವಕಾಶದಂತೆ ನೀಡಲು ಸೂಚಿಸಿದರು. ಉಚ್ಚನ್ಯಾಯಾಲಯ ಈ ಶರತ್ತನ್ನು ಒಪ್ಪಲಿಲ್ಲ. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಒಂದು ಸಹಕಾರ ಸಂಘ ಸದಸ್ಯರ ಜೊತೆ ಮಾಡಿಕೊಂಡ ಉಪನಿಯಮಗಳ ಕಾಯಿದೆಯಾಗುವುದಿಲ್ಲ. ಅದು ಒಂದು ಒಪ್ಪಂದವಾಗುತ್ತದೆ. ಉಪನಿಯಮಗಳಡಿ ಸದಸ್ಯತ್ವಕ್ಕೆ ಅರ್ಹತೆಯನ್ನು ನಿಗದಿ ಪಡಿಸಬಹುದು. ಇದು ಒಂದು ಮೂಲ ಭೂತ ಹಕ್ಕಿನ ಪ್ರಶ್ನೆಯಲ್ಲಿ (AIR 1970 SC 245, 1969 Indlaw SC 341) ಸಂಘಗಳ ಕಾಯಿದೆಯಡಿ ಮಾಡಿಕೊಂಡ ನಿಬಂಧನೆಗಳಂತೆ ಎಂದು ಅರ್ಥೈಸಿತು. ಉಚ್ಚನ್ಯಾಯಾಲಯದ ತೀರ್ಮಾನ ಸರಿಯಿಲ್ಲವೆಂದು ಮತ್ತು ಬೈಲಾ ಸಂಖ್ಯೆ 7ನ್ನು ನಿರಾಕರಿಸುವಂತಿಲ್ಲ. ಏಕೆಂದರೆ ಇದನ್ನು ನಿಬಂಧಕರು ನೋಂದಾಯಿಸಿದ್ದಾರೆ, ಮತ್ತು ಇದನ್ನು ಒಂದು ಸಾರ್ವಜನಿಕ ನೀತಿ ಎಂದು ಪರಿಗಣಿಸಬೇಕು ಮತ್ತು ಇದನ್ನು ಸದಸ್ಯರು ನಿರಾಕರಿಸುವಂತಿಲ್ಲ. ಒಂದು ಸಹಕಾರ ಸಂಘವು ಸ್ಥಾಪನೆ ಮಾಡುವಾಗ ವೃತ್ತಿ ಪರರು ಸೇರಿ, ಒಂದು ಜನಾಂಗದವರು, ಹೆಂಗಸರಿಗಾಗಿ/ಗಂಡಸರಿಗಾಗಿ, ರಚನೆ ಮಾಡಬಾರದೆಂದು ಕಾನೂನಿನ ನಿರ್ಬಂಧಗಳು ಇಲ್ಲ. ಈ ಸಂಘದ ಉಪನಿಯಮದಲ್ಲಿ ಪಾರ್ಸಿ ಜನಾಂಗಕ್ಕೆ ಸೀಮಿತಗೊಳಿಸಿರುವುದು, ರಚಿಸಿಕೊಂಡಿದ್ದು. ಇದು ನಿಯಮ ಬಾಹಿರವಲ್ಲ. ಆದ್ದರಿಂದ ಉಚ್ಚನ್ಯಾಯಾಲಯ "ಮುಕ್ತ ಸದಸ್ಯತ್ವ" ಎಂಬ ಹೆಸರಿನಲ್ಲಿ ನೀಡಿದ ತೀರ್ಪನ್ನು ಕಿತ್ತುಹಾಕಿ, ವಿಶೇಷ ಮನವಿ ಪುರಸ್ಕರಿಸಿ, ಪಾರ್ಸಿ ಜನಾಂಗಕ್ಕೆ ಮೀಸಲಾತಿ ತಪ್ಪಿಲ್ಲ ಎಂದು ತೀರ್ಮಾನಿಸಿತು. (2005 Indlaw SC 331, (2005) 5 SCC 632, AIR 2005 SC 2306)

75. ಕರ್ನಾಟಕದ ಸಹಕಾರ ಕಾಯಿದೆಯಲ್ಲಿ ಶಾಸಕರ ಗೃಹ ನಿರ್ಮಾಣ ಸಂಘಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂಜೂರು ಮಾಡಿದ ಬಳಿಕ, ಮಂಜೂರಾತಿ ಬಗ್ಗೆ ಪ್ರಶ್ನಿಸಿದಾಗ, ಅದರಲ್ಲಿ ಹಿರಿತನವನ್ನು ಕಾಪಾಡದೆ ಬಿಡಿಎ ನಿಯಮಗಳನ್ನು ಪಾಲಿಸದೆ ಹಂಚಿಕೆ ಮಾಡಿರುವುದು ತಪ್ಪು ಮತ್ತು ಅಂತಹ ನಿವೇಶನ ಹಂಚಿಕೆ ರದ್ದು ಪಡಿಸುವುದು ಎಂದು ತೀರ್ಮಾನಿಸಿತು. (2000 Indlaw SC 589, (2000) 2 SCC 439, AIR 2000 SC 767)

76. ಕರ್ನಾಟಕ ಸಹಕಾರ ಸಂಘದ ಒಂದು ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಬೇಕಾದ, ಜಮೀನು ಭೂಸ್ವಾಧೀನ ಮಾಡಲು ಗೆಜೆಟ್ ಪ್ರಕಟಣೆ ಪೂರ್ವದಲ್ಲಿ, ಭೂಸ್ವಾಧೀನಾಧಿಕಾರಿ ಪ್ರಕಟಣೆ ಹೊರಡಿಸಿರುವುದು ನ್ಯಾಯ ಬಾಹಿರ ಎಂದು ಪ್ರಶ್ನಿಸಿದಾಗ ಏಕ ಸದಸ್ಯ ಪೀಠ ಐದು ವಿಷಯಗಳನ್ನು ಪ್ರಸ್ತಾಪಿಸಿದ್ದು. ಎಲ್ಲಾ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದೆ, ಮತ್ತು ವಿಭಾಗೀಯ ಪೀಠ ಇದನ್ನು ಸಮರ್ಪಿಸಿದೆ ಆ ನಂತರ ವಿಶೇಷ ಅರ್ಜಿ ಮೂಲಕ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಗೆಜೆಟ್

ಪ್ರಕಟಣೆಗೇ ಪೂರ್ವದಲ್ಲಿಯೇ ಪ್ರಕಟಣೆ ಹೊರಡಿಸಿರುವುದು ಒಂದು ನ್ಯೂನತೆ, ಅದು ನ್ಯಾಯ ಬಾಹಿರವಲ್ಲ. ಆದ್ದರಿಂದ, ಈ ನ್ಯೂನತೆಯನ್ನು ಸರಿಪಡಿಸಿಕೊಳ್ಳಲು ಅವಕಾಶ ಇದೆ. ಇದು ಅಸಂವಿಧಾನಿಕವಲ್ಲ ಎಂದು ತೀರ್ಮಾನಿಸಿತು. (1996 Indlaw SC 2371, (1997) 9 SCC 128, AIR 1997 SC 503)

77. ಉತ್ತರಪ್ರದೇಶದ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಜಮೀನು ಸ್ವಾಧೀನ ಪಡಿಸಿಕೊಳ್ಳುವ ಪ್ರಕರಣದಲ್ಲಿ ಉಚ್ಚನ್ಯಾಯಾಲಯದ ತೀರ್ಮಾನವನ್ನು ಎತ್ತಿಹಿಡಿಯುತ್ತಾ (ಬೇರೆ ಕಾರಣಗಳಿಂದ)
   1. ಸರ್ಕಾರವು ಸರ್ಕಾರದ ಜಮೀನನ್ನು ಸ್ವಾಧೀನ ಪಡಿಸಲಾಗದು.
   2. ಕೇಂದ್ರ ಸರ್ಕಾರ ಪುನರ್‌ವಸತಿ ಕಾಯಿದೆಯಡಿ ಸ್ವಾಧೀನ ಪಡಿಸಿಕೊಂಡ ಜಮೀನು ಸ್ವಾಧೀನ ಮಾಡಲಾಗದು.
   3. ಹಾಲೀ ಪ್ರಕರಣದಲ್ಲಿ ಸ್ವಾಧೀನ ಪಡಿಸಿಕೊಂಡದ್ದು ಕಾನೂನು ಬಾಹಿರ. ಜಿಲ್ಲಾಧಿಕಾರಿಗಳು ಕಲಂ 5ಎ ಅಡಿ ನೀಡಿದ ವರದಿಯಂತೆ ಸ್ವಾದೀನ ಸಾಧ್ಯವಿಲ್ಲ ಎಂದು ತೀರ್ಮಾನಿಸಿತು. ಗೃಹನಿರ್ಮಾಣ ಸಂಘದ ಅರ್ಜಿ ವಜಾ ಮಾಡಿತು. Indlaw SC 206, (1981) 2 SCC 352, AIR 1981 SC 866)

78. ಪಂಜಾಬ್ ಕಾಯಿದೆ ಒಂದು ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರಿಗೆ ಅಗತ್ಯವಾದ ಜಮೀನು ಭೂಸ್ವಾದಿನ ಪಡಿಸಿಕೊಳ್ಳುವ ಬಗ್ಗೆ ಪಂಜಾಬ್ ಉಚ್ಚನ್ಯಾಯಾಲಯ ಪ್ರಕರಣವನ್ನು ವಜಾ ಮಾಡಿದಾಗ ವಿಶೇಷ ಮನವಿ ಮೂಲಕ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಭೂಸ್ವಾಧೀನ ಮಾಡಿದಾಗ, ಹಣ ಪಾವತಿ ಮಾಡುವಾಗ ಪೂರ್ತಿ ಅಥವಾ ಭಾಗಶಃ ಸಾರ್ವಜನಿಕ ನಿಧಿಯಿಂದ ಪಾವತಿ ಮಾಡಿರಬೇಕು. ಅಂದರೆ ಭೂಸ್ವಾಧೀನ ಪ್ರಕ್ರಿಯ ಪ್ರಾರಂಭಿಸಲು ಮುಕ್ತಾಯಗೊಳಿಸಲು ಸರ್ಕಾರದ ಹಣ/ಸಾರ್ವಜನಿಕ ನಿಧಿಯಿಂದ ಪೂರ್ತಿ ಅಥವಾ ಭಾಹಶಃ ಹಣ ಪಾವತಿ ಆದರೆ, ಕಾಯಿದೆ ಭಾಗ VII ಅನ್ವಯ ಹಣ ಸಂದಾಯವಾಗಬೇಕು ಎಂದು ಪ್ರಕರಣವನ್ನು ವಜಾ ಮಾಡಿತು. (1960 Indlaw SC 264, AIR 1961 SC 343, (1961) 2 SCR 459)

79. ದಿಲ್ಲಿ ಸಹಕಾರ ಸಂಘಗಳ ಕಾಯಿದೆಯಲ್ಲಿ ನೊಂದಾವಣೆಯಾದ ಒಂದು ಗೃಹ ನಿರ್ಮಾಣ ಸಹಕಾರ ಸಂಘ ಮೂವರು ಸದಸ್ಯರಿಗೆ ಸುಸ್ತಿದಾರರೆಂದು ನೋಟೀಸ್ ನೀಡಿದಾಗ, ಅದಕ್ಕೆ ಪರಿಹಾರವಾಗಿ ಅವರು ನಿಬಂಧಕರ ಮುಂದೆ ದಾವಾ ದಾಖಲಿಸಿದ್ದು ಅದರಲ್ಲಿ ಅವರು ಪರಿಹಾರ ಪಡೆಯಬೇಕು. ರಿಟ್ ಅರ್ಜಿ ಮುಖಾಂತರ ಪರಿಹಾರ ನೀಡಲಾಗದು. ಇದನ್ನು ಉಚ್ಚನ್ಯಾಯಾಲಯ ಪರಿಗಣಿಸಿ ಆದೇಶಿಸಬೇಕು ಎಂದು ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. (2004 Indlaw SC 272, (2004) 5 SCC 795, AIR 2004 SC 2521)

## ಸಹಕಾರ ಸಂಘಗಳ ನೌಕರರ ಶಿಸ್ತುಕ್ರಮ/ಸೇವಾ ನಿಯಮಗಳ ಮೇಲಿನ ತೀರ್ಪುಗಳ ಸಾರಾಂಶ

ಒಂದು ಸಹಕಾರ ಸಂಘವನ್ನು ಹುಟ್ಟುಹಾಕುವುದು, ಸಮಾನ ಮನಸ್ಕರು ತಮ್ಮ ಆರ್ಥಿಕ ಬೆಳವಣಿಗೆಗಾಗಿ, ತಮ್ಮ ಸಂಪನ್ಮೂಲವನ್ನು ಕ್ರೋಡಿಕರಿಸಿಕೊಂಡು ರಚನೆ ಮಾಡಿದ ಸಂಸ್ಥೆ. ಸಂಸ್ಥೆಯನ್ನು ಹುಟ್ಟುಹಾಕಿದ ನಂತರ ಸದಸ್ಯರಿಗೆ ಬೇಕಾದ ಸೌಲಭ್ಯ/ಸೌಲತ್ತುಗಳನ್ನು ನೀಡಲು ಸಂಘ ನೇಮಿಸಿಕೊಂಡ ವ್ಯಕ್ತಿಗಳೇ ನೌಕರರು. ಈ ನೌಕರರಿಗೆ ಸೌಲಭ್ಯ/ಸೌಲತ್ತುಗಳನ್ನು ಪಡೆಯಲು, ಸದಸ್ಯರಿಗೆ ಪೂರ್ಣ ಪ್ರಮಾಣದ ಸೌಲತ್ತುಗಳನ್ನು ಸಲ್ಲಿಸಿದ ನಂತರ ಪಡೆಯಬೇಕು. ಅಂದರೆ ಸಂಘದ ಸಂಪನ್ಮೂಲವನ್ನು

ವೃದ್ಧಿಸಿ, ಸದಸ್ಯರಿಗೆ ಸೌಲಭ್ಯ ಕಲ್ಪಿಸಿದ ನಂತರ, ನೌಕರರ ಆರ್ಥಿಕ ಸೌಲತ್ತು ಕೇಳಬೇಕು. ಈ ರೀತಿ ಯೋಚಿಸಿದಾಗಲೇ ಒಂದು ಸಂಘ/ಸಂಸ್ಥೆಯನ್ನು ಕಟ್ಟಿ ಅಭಿವೃದ್ಧಿ ಪಡಿಸಿದವರು ಸಾರ್ಥಕ ಎಂದು ತಿಳಿಯಬೇಕು.

ಆದರೆ ಇತ್ತೀಚಿನ ದಿನಗಳಲ್ಲಿ ನೌಕರರಿಗೆ ಸೌಲತ್ತು ಕಲ್ಪಿಸಲಿಕ್ಕಾಗಿಯೇ ಒಂದು ಸಂಘ ಕಟ್ಟಲಾಗಿದೆ ಎಂಬ ಭಾವನೆ ಬೆಳೆಯುತ್ತಿದೆ. ಇದಕ್ಕೆ ಒಂದು ಪೂರಕ ಉದಾಹರಣೆ ಕೊಡುವುದಾದರೆ, ನಮ್ಮ ರಾಜ್ಯದಲ್ಲಿ ತಾಲ್ಲೋಕಿಗೊಂದು ಮಾರಾಟ ಸಹಕಾರ ಸಂಘ ಸ್ಥಾಪಿಸಲಾಗಿದೆ. ಸರ್ಕಾರದ ಆಹಾರ ಸಂಗ್ರಹಣ ನೀತಿ ಬದಲಾವಣೆಯಿಂದ, ಈ ಸಂಘಗಳು ನಿಶ್ಕ್ರಯಗೊಂಡಿವೆ. ವ್ಯವಹಾರವನ್ನು ವೈವಿದ್ಯಮಯಗೊಳಿಸಲು, ಆಡಳಿತ ಮಂಡಳಿ ಆಸಕ್ತಿ/ತಿಳುವಳಿಕೆ ಇಲ್ಲದ್ದರಿಂದ ಶೇ.90 ರಷ್ಟು ಸಂಘಗಳು ಕಾರ್ಯನಿರ್ವಹಿಸುತ್ತಿಲ್ಲ. ಅಂದರೆ ಸದಸ್ಯರಿಗೆ ಯಾವುದೇ ಸೌಲಭ್ಯ/ಸೌಲತ್ತು ಸಿಗುತ್ತಿಲ್ಲ/ಪಡೆಯುತ್ತಿಲ್ಲ. ಆದರೆ ಪ್ರತಿಯೊಂದು ಸಹಕಾರ ಸಂಘದಲ್ಲಿ ಕೆಲವು ನೌಕರರು (ಸ್ಥಿರಾಸ್ತಿಯನ್ನು ನೋಡಿಕೊಳ್ಳಲು) ಸೇವೆಯಲ್ಲಿ ಮುಂದುವರಿದಿದ್ದಾರೆ. ಅವರಿಗೆ ಸಂಬಳ ಕೊಡಲು ಸಂಘದ ಆಸ್ತಿಯನ್ನು ಮಾರಾಟ ಮಾಡಿ ಸಂಬಳ ಕೊಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಚುನಾಯಿತ ಮಂಡಳಿ ಜವಾಬ್ದಾರಿ ಎಂದು ತಿಳಿದರೂ, ಆ ಮಂಡಳಿ ನೇಮಿಸಿದ ನೌಕರರ ಬೇಜವಾಬ್ದಾರಿ ಅಥವಾ ಜವಾಬ್ದಾರಿ ಇಲ್ಲದ ನಡವಳಿಕೆಯಿಂದ ನಿಶ್ಕ್ರಯಗೊಂಡಿದ್ದರೂ, ಅಂತಹ ನೌಕರರು ಸೇವೆಯಲ್ಲಿ ಮುಂದುವರಿಯುತ್ತಿದ್ದಾರೆ. ಇದಕ್ಕೆ ಇನ್ನೊಂದು ಮುಖವನ್ನು ಸಹ ಗಮನಿಸಬೇಕು. ಈ ಹಿಂದೆ ಸರ್ಕಾರದಿಂದ ನೌಕರರ ನೇಮಕಾತಿ ಬಗ್ಗೆ ಸ್ಪಷ್ಟವಾದ ನಿಯಮಗಳನ್ನು ರೂಪಿಸಿರಲಿಲ್ಲ. ಆಡಳಿತ ಮಂಡಳಿ ಅವರ ಸಂಬಂಧಿಗಳಿಗೆ ಕೆಲಸ ಕೊಡುವ ಹುಮ್ಮಸ್ಸಿನಿಂದ, ಪಾರದರ್ಶಕ ನೀತಿ ಮತ್ತು ವ್ಯಕ್ತಿ ಪರತೆ ಪಾಲಿಸದೆ, ನೇಮಕ ಮಾಡುವಾಗ ಅರ್ಹತೆ ಇಲ್ಲದ ವ್ಯಕ್ತಿಗಳನ್ನು ಸೇವೆಗೆ ಸೇರಿಸಿಕೊಂಡು, ಅವರಿಂದ ಕೆಲಸ ತೆಗೆದುಕೊಳ್ಳಲಾಗದೇ ಇದ್ದರೂ ಶಿಸ್ತು ಕ್ರಮ ಜರುಗಿಸಲು ಸಮರ್ಥರಾಗದೇ ಅಂತಹ ವ್ಯಕ್ತಿಗಳನ್ನು ಮುಂದುವರಿಸಿದಾಗ, ಅವರಿಗೆ ಕೆಲಸ ಮಾಡದೇ ಇದ್ದರೂ, ಸಂಬಳ ಕೊಡುವ ಜವಾಬ್ದಾರಿ ನಿರ್ವಹಿಸಬೇಕು. ಇಂತಹ ಸ್ಥಿತಿಯಲ್ಲಿ ಸದಸ್ಯರ ಸೌಲತ್ತು ಕೊಡದೆ, ನೌಕರರಿಗಾಗಿಯೇ ಸಂಘ ಸ್ಥಾಪನೆಯಾಗಿದೆ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ.

ಆದರೂ ಶಿಸ್ತು ಕ್ರಮ, ಹಣ ದುರುಪಯೋಗ, ಅಕ್ರಮಗಳು, ಸೇವಾ ಶರತ್ತುಗಳ ಉಲ್ಲಂಘನೆ, ಸಂದರ್ಭದಲ್ಲಿ ಆಡಳಿತ ಮಂಡಳಿ ಮತ್ತು ನೌಕರರ ಮೇಲೆ ವಿವಾದಗಳ ಏರ್ಪಟ್ಟಾಗ, ಅವುಗಳ ಪರಿಹಾರಕ್ಕಾಗಿ ಸಹಕಾರ ಕಾಯಿದೆ ಕಲಂ 69, 70, 70ಎ, 71, 103, 105, 106, 107 ಮತ್ತು 108 ರಲ್ಲಿ ಪರಿಹಾರ ಕಂಡುಕೊಳ್ಳಲು ನಿಬಂಧಕರು, ಸರ್ಕಾರ, ನ್ಯಾಯಾಧಿಕರಣ ಹಾಗೂ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯಗಳು ಪರಿಹಾರ ನೀಡಲು ಮಾಡಿದ ಆದೇಶಗಳು ಪೂರ್ಣ ಪಾಠವನ್ನು ಪಡೆದು, ತಿಳಿದುಕೊಳ್ಳಲು ಮತ್ತು ಒಂದೇ ಕಡೆ, ಸಹಕಾರ ಸಂಘಗಳ ಸೇವಾ ನಿಯಮಗಳ ತೀರ್ಪುಗಳು ಲಭ್ಯವಾಗಲೆಂದು ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯಗಳ ತೀರ್ಪುಗಳ ಸಂಕ್ಷಿಪ್ತ ಟಿಪ್ಪಣಿಯನ್ನು ತಯಾರಿಸಿದೆ.

## ಸಹಕಾರಿ ನೌಕರರ ಸೇವಾ ನಿಯಮ/ಶಿಸ್ತು ಕ್ರಮಗಳ ಬಗ್ಗೆ ತೀರ್ಪು

1. ಜಿಲ್ಲಾ ಬ್ಯಾಂಕಿನ ಸಾಮಾನ್ಯ ಶ್ರೇಣಿ ಪ್ರಾಧಿಕಾರ, ತನ್ನ ನೌಕರರನ್ನು ವರ್ಗಾವಣೆ ಮಾಡುವಾಗ, ಯಾವ ಸಂಘಕ್ಕೆ ವರ್ಗಾವಣೆ ಮಾಡಬೇಕೊ, ಆ ಸಂಘ ಸಾಮಾನ್ಯ ಶ್ರೇಣಿ ಪ್ರಾಧಿಕಾರದ ವ್ಯಾಪ್ತಿಗೆ ಬರುತ್ತದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಿಲ್ಲ. ಯಾವ ಸಂಘಕ್ಕೆ ಕಾರ್ಯದರ್ಶಿಯಾಗಿ ನೇಮಕ ಮಾಡಿತ್ತೊ ಆ ಸಂಘ, ಆ ವ್ಯಕ್ತಿಯನ್ನೆ ಸೇವೆಗೆ ಸೇರಿಸಿಕೊಳ್ಳಲಿಲ್ಲವೋ, ಆ ಸಂದರ್ಭದಲ್ಲಿ ಬೇರೆ ವ್ಯವಸ್ಥೆ ಮಾಡುವುದು ನೇಮಕ ಪ್ರಾಧಿಕಾರದ ಕೆಲಸ. ಕಾರ್ಯದರ್ಶಿಯನ್ನು ಯಾವ

ಸಂಘದಿಂದ ವರ್ಗಾವಣೆ ಮಾಡಿದೆಯೋ, ಆ ಸಂಘದಲ್ಲಿ ಅವನು ಗೈರು ಹಾಜರಾಗಿದ್ದಾರೆಂದು ವಜಾ ಮಾಡಿದ ಆದೇಶ ಸಮರ್ಪಕವಾಗಿಲ್ಲ, ಏಕೆಂದರೆ ಆತ ಹಣ ದುರುಪಯೋಗ ಮಾಡಿಕೊಂಡಿಲ್ಲ. ಗೈರು ಹಾಜರಿಯ ಆಧಾರದ ಮೇಲೆ ವಜಾಗೊಳಿಸಿರುವ ಶಿಕ್ಷೆ ಪ್ರಮಾಣ ಹೆಚ್ಚು. ಲಘು ಶಿಕ್ಷೆಯನ್ನು ಕೊಡುವ ಬದಲು ವಜಾ ಮಾಡಿದೆ. ಸಂಯುಕ್ತ ನಿಬಂಧಕರು ವಜಾ ಆದೇಶವನ್ನು ಕಿತ್ತುಹಾಕಿ ಕೆಲವು ಸೌಲತ್ತುಗಳ ಜೊತೆ ಮರು ನೇಮಕ ಮಾಡಿರುವುದಲ್ಲಿ ಯಾವುದೇ ಕಾನೂನು ಮತ್ತು ನಿಯಮ ಉಲ್ಲಂಘನೆಯಾಗಿಲ್ಲ. ಆದ್ದರಿಂದ ಮಧ್ಯಪ್ರವೇಶ ಮಾಡುವ ಅವಶ್ಯಕತೆ ಇಲ್ಲ. (2015 Indlaw Kar 281)

2. ನೌಕರಿಗೆ ಬೇಕಾದ ಅರ್ಹತೆ ನಿಗದಿ ಮಾಡಿರುವುದು ಸಮರ್ಪಕವಲ್ಲ ಎಂಬ ಕಾರಣದಿಂದ, ಈ ಪ್ರಕರಣ ಉಚ್ಚನ್ಯಾಯಾಲಯದಲ್ಲಿ ದಾಖಲಾಗಿದೆ. ಏಕೆಂದರೆ, ಅರ್ಹತೆ ನ್ಯಾಯಭದ್ದವೇ ಅಲ್ಲವೇ ಅಥವಾ ಅದು ಸಂವಿಧಾನ ಉಲ್ಲಂಘನೆ ಎಂಬ ಪ್ರಶ್ನೆ ಎದ್ದಾಗ, ಸಹಕಾರ ನ್ಯಾಯಾಲಯ, ಆ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಇಲ್ಲ. ಆದ್ದರಿಂದ ರಿಟ್ ಅರ್ಜಿ ದಾಖಲಿಸಿರುವುದು ಸರಿಯಾದ ಕ್ರಮ. ಭಡ್ತಿ ಕೊಡುವ ಸಂದರ್ಭದಲ್ಲಿ ವಿಶ್ವಾವಿದ್ಯಾನಿಲಯದ ಡಿಗ್ರಿ ಅವಶ್ಯಕವೆಂದು ನಿಗದಿ ಪಡಿಸಿರುವುದನ್ನು ಆಡಳಿತ ಮಂಡಳಿ ತೀರ್ಮಾನ. ವಿದ್ಯಾರ್ಹತೆ ಭಡ್ತಿ ಹೊಂದಿದ ವ್ಯಕ್ತಿ ನಿರ್ವಹಿಸಬೇಕಾದ ಕೆಲಸದ ಆಧಾರದ ಮೇಲೆ ನಿಗದಿ ಮಾಡಬಹುದು. ಈ ನ್ಯಾಯಾಲಯ ವಿದ್ಯಾರ್ಹತೆ ಬಗ್ಗೆ ತೀರ್ಮಾನಿಸುವಂತಿಲ್ಲ. ಈ ಬಗ್ಗೆ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯ ಸಾಕಷ್ಟು ತೀರ್ಪುಗಳನ್ನು ನೀಡಿದೆ. (1) (2011) 9 SCC 645, (2) 2011 Indlaw SC 617, (3) (1990) 1 SCC 288, (4) 1989 Indlaw SC 352, (5) (2003) 2 SCC 632, (6) 2002 Indlaw SC 1524. ಆದ್ದರಿಂದ ವಿದ್ಯಾರ್ಹತೆ ಮಂಡಳಿ ನಿಗದಿ ಪಡಿಸುವ ಅರ್ಹತೆ. ಭಡ್ತಿ ಕೊಡುವ ಸಂದರ್ಭದಲ್ಲಿ, ಭಡ್ತಿ ಹೊಂದಿದ ಹುದ್ದೆಗೆ ಅವಶ್ಯಕವಾದ ವಿದ್ಯಾರ್ಹತೆ ನಿಗದಿ ಪಡಿಸುವ ಅಧಿಕಾರ ಮಂಡಳಿಗೆ ಇದೆ. ಇದನ್ನು ಪರಿಶೀಲಿಸುವ ಅವಶ್ಯಕತೆ ಇಲ್ಲ. (2015 Indlaw Kar 294)

3. ಕ್ರಿಮಿನಲ್ ಪ್ರಕರಣ ದಾಖಲಿಸುವಾಗ, ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಅಧಿಕಾರವಿಲ್ಲ ಎಂಬುದನ್ನು ಪ್ರಶ್ನಿಸಲಾಗಿತ್ತು. ನಿಬಂಧಕರು ಮತ್ತು ಮೇಲ್ಮನವಿ ಪ್ರಾಧಿಕಾರ ಕಾಯಿದೆ ಮತ್ತು ದಾಖಲೆಗಳನ್ನು ಪರಿಶೀಲಿಸಿ ಮತ್ತು ಮರು ಪರಿಶೀಲಿಸಿ, ಕಾಯಿದೆ ಕಲಂ 29ಜಿ(4) ಮತ್ತು (5) ರಡಿ ಸಂಘದ ಮುಖ್ಯ ಕಾರ್ಯನಿರ್ವಾಹಕನಿಗೆ ಪ್ರಕರಣ ದಾಖಲಿಸಲು ಅಧಿಕಾರ ನೀಡಲಾಗಿರುವುದರಿಂದ, ಕೆಳ ನ್ಯಾಯಾಲಯಗಳು ಯಾವುದೆ ನಿಯಮ ಉಲ್ಲಂಘಿಸಿಲ್ಲ. ಮಧ್ಯಪ್ರವೇಶ ಮಾಡುವ ಅವಶ್ಯಕತೆ ಇಲ್ಲ. (2015 Indlaw Kar 436)

4. ನೌಕರಿಗೆ ಗ್ರ್ಯಾಚುಯಿಟಿ ಮಂಜೂರಿ ಮಾಡುವಾಗ, ಅವರಿಗೆ ಅನುಕೂಲವಾಗಿರುವುದನ್ನು ಕೇಳಬಹುದು. ಆದರೆ ಅದು ಯಾವುದೇ ಒಪ್ಪಂದದ ಭಾಗವಾಗಿದ್ದಾಗ, ಸೇವಾ ನಿಯಮಗಳನ್ನು ಪರಿಶೀಲಿಸಿದಾಗ, ನಿಯಮ 18(4) ರಲ್ಲಿ ನಮೂದಿಸಿದ ರೀತಿಯಲ್ಲಿ ಗ್ರ್ಯಾಚುಯಿಟಿ ಲೆಕ್ಕಹಾಕಿ ವ್ಯತ್ಯಾಸದ ಹಣವನ್ನು ಪಾವತಿ ಮಾಡಲು ಆದೇಶಿಸಿದೆ. ಪ್ರಕರಣ ದಾಖಲಿಸಲು ವಿಳಂಬ ಮತ್ತು ತಪ್ಪುಗಳಿಂದ ಕೂಡಿದೆ, ಆದ್ದರಿಂದ ಹೆಚ್ಚುವರಿ ಹಣಕ್ಕೆ ಬಡ್ಡಿ ಕೊಡುವ ಅವಶ್ಯಕತೆ ಇಲ್ಲ. ಬ್ಯಾಂಕ್ ನೌಕರರಿಗೆ ಬಾಕಿ ಹಣಕ್ಕೆ ಬಡ್ಡಿ ಕೇಳುವ ಅಧಿಕಾರ ಇಲ್ಲ. (2014 Indlaw Kar 1377)

5. ಕೆಲಸಗಾರರಿಗೆ ಕನಿಷ್ಠ ವೇತನ ಪಾವತಿ ಬಗ್ಗೆ ಹೂಡಿದ ಪ್ರಕರಣದಲ್ಲಿ ಏಕ ಸದಸ್ಯ ಪೀಠ 5 ಪಟ್ಟು ಬಾಕಿ ಮೇಲೆ ದಂಡ ವಿಧಿಸಲು ಮಾಡಿದ್ದ ಆದೇಶವನ್ನು ಕಿತ್ತುಹಾಕಿ, ಕನಿಷ್ಠ ವೇತನ ಪಾವತಿ ಪ್ರಾಧಿಕಾರಕ್ಕೆ ರೂ.42,101/– ನ್ನು ಪಾವತಿ ಮಾಡಲು ಆದೇಶಿಸಿದೆ. ಅರ್ಜಿದಾರ ಸಹಕಾರ ಸಂಘ ಸಮಾಜ ಸೇವೆಗೆ ತೊಡಗಿಸಿಕೊಂಡಿದ್ದು ವ್ಯಯಕ್ತಿಕ ಲಾಭಕ್ಕೆ ಅಲ್ಲ. ಆದ್ದರಿಂದ 5 ಪಟ್ಟು ದಂಡ

ವಿಧಿಸಿರುವುದು ತಪ್ಪು. (2014 Indlaw Kar 2069, 2014 (143) FLR 394)

6. ಅರ್ಜಿದಾರ ನೌಕರನಿಗೆ ಆರೋಪ ಪಟ್ಟಿಯನ್ನು ನೀಡಿ, ವಿಚಾರಣಾಧಿಕಾರಿ ನೇಮಿಸಿ ವರದಿ ಪಡೆದು ನಕಲನ್ನು ನೌಕರನಿಗೆ ನೀಡಿ, ಆಡಳಿತ ಮಂಡಳಿ ತೀರ್ಮಾನದಂತೆ ಕೆಲಸದಿಂದ ವಜಾ ಮಾಡಲಾಗಿದ್ದುದನ್ನು ಪ್ರಶ್ನಿಸಿ ರಿಟ್ ದಾಖಲಿಸಿದೆ. ವಜಾ ಮಾಡಿದ ಆದೇಶ ನ್ಯಾಯ ಸಮ್ಮತವಾಗಿದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಲು ಸಹಕಾರ ಕಾಯಿದೆಯಲ್ಲಿಯೇ ಸಮರ್ಪಕ ಅವಕಾಶ ಇರುವುದರಿಂದ, ಈ ನ್ಯಾಯಾಲಯ ಮಧ್ಯಪ್ರವೇಶ ಅವಶ್ಯಕತವಿಲ್ಲ ಸಹಕಾರ ನ್ಯಾಯಾಲಯ ಈ ಪ್ರಕರಣದಲ್ಲಿ ಎತ್ತಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿ ತೀರ್ಮಾನ ಮಾಡುವ ಅಧಿಕಾರ ಇದೆ. ಈ ಪ್ರಕರಣದಲ್ಲಿ ಈ ನ್ಯಾಯಾಲಯ ಪರಿಶೀಲಿಸಿದ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳದೆ, ಸಹಕಾರ ನ್ಯಾಯಾಲಯ ತೀರ್ಮಾನ ಮಾಡತಕ್ಕದ್ದು. (2014 Indlaw Kar 1995, 2014 (5) KLJ 430)

7. ಖಾಯಂ ನಿವೃತ್ತಿ ನೀಡಿದ ಒಬ್ಬ ನೌಕರನ್ನು ಕಲಂ 70ರಡಿ ಸಲ್ಲಿಸಿದ ದಾವಾ ಪ್ರಕರಣದಲ್ಲಿ ಸಹಕಾರ ನ್ಯಾಯಾಲಯ ಮತ್ತು ಮೇಲ್ಮನವಿ ಪ್ರಾಧಿಕರಣ, ಮಧ್ಯಪ್ರವೇಶಿಸಲಿಲ್ಲ ಮತ್ತು ಈ ನ್ಯಾಯಾಲಯದ ಏಕ ಸದಸ್ಯ ಪೀಠ ಅರ್ಜಿದಾರರ ಪರಿಹಾರವನ್ನು ಮಂಜೂರಿ ಮಾಡಿತ್ತು. (ILR 2001 Kar 14) ಪ್ರಕರಣವನ್ನು ಇಲಾಖಾ ಮಧ್ಯಸ್ಥಿಗಾರರಿಗೆ ಮರು ಪರಿಶೀಲನೆ ನಡೆಸುವಾಗ ಎರಡೂ ಪಕ್ಷಗಳು ಹೊಂದಾಣಿಕ್ಕೆ ಪತ್ರಗಳನ್ನು ಕೊಟ್ಟ ಪ್ರಕರಣ ಇತ್ಯರ್ಥ ಪಡಿಸಲಾಗಿತ್ತು. ಇದನ್ನು ಪ್ರಶ್ನಿಸಿ ಆ ಆದೇಶವನ್ನು ಕಿತ್ತು ಹಾಕಲು ನೊಂದ ನೌಕರ ಈ ಪ್ರಕರಣ ದಾಖಲಿಸಿದ್ದಾರೆ.

ಅರ್ಜಿದಾರನು ಹೊಂದಾಣಿಕೆ ಪತ್ರಕ್ಕೆ ಸಹಿ ಮಾಡಿ, ರೂ.2,30,000.00 ಪರಿಹಾರ ಪಡೆದಿದ್ದು, ಇನ್ನಾವುದೆ ಪಾವತಿಗೆ/ಅಥವಾ ಬೇಡಿಕೆ ಇಲ್ಲವೆಂದು ಪ್ರಮಾಣಿಸಿದಾಗ, ಹೆಚ್ಚುವರಿ ಪರಿಹಾರಕ್ಕೆ ಅರ್ಹನಲ್ಲ. ನ್ಯಾಯಾಧಿಕರಣ ತನ್ನ ಆದೇಶದಲ್ಲಿ ಯಾವುದೇ ತಪ್ಪು ಮಾಡಿಲ್ಲ. ಅರ್ಜಿ ತಿರಸ್ಕರಿಸಲಾಗದು. (2014 Indlaw Kar 1844, 2014 (3) KLJ 222)

8. ಅರ್ಜಿದಾರ ಸಹಕಾರ ಒಕ್ಕೂಟ, ಕೆಲವು ನೌಕರ ಮೇಲೆ ಅಶಿಸ್ತಿಗೆ ಸಂಬಂಧಪಟ್ಟಂತೆ ವಿಚಾರಣೆಗೆ ಆದೇಶಿಸಿ, ವಿಚಾರಣೆ ಸಮಯದಲ್ಲಿ ಆರೋಪಿ ನೌಕರರು ದಾಖಲೆಗಳ ಆಧಾರದ ಮೇಲೆ ತಪ್ಪೊಪ್ಪಿಗೆ ನೀಡಿದ್ದರು. ಅದರ ಆಧಾರದ ಮೇಲೆ ವ್ಯವಸ್ಥಾಪಕ ನಿರ್ದೇಶಕರು ಕಾರಣಕೇಳಿದ ನೋಟೀಸ್ ನೀಡಿ, ನೌಕರನ್ನು ಸೇವೆಯಿಂದ ವಜಾ ಮಾಡಿದ್ದರು. ಅದನ್ನು ಉಪನಿಬಂಧಕರ ಮುಂದೆ ವಿಚಾರಣೆಗೆ ಬಂದಾಗ ವಜಾ ಆದೇಶ ನ್ಯಾಯ ಸಮ್ಮತವಾಗಿಲ್ಲವೆಂದು ತೀರ್ಮಾನಿಸಿ ಶಿಕ್ಷೆ ಪ್ರಮಾಣ ಹೆಚ್ಚಾಯಿತು ಎಂದು ಎಲ್ಲಾ ನೌಕರನನ್ನು ಮರು ನೇಮಕ ಮಾಡಲು ಆದೇಶಿಸಿದ್ದರು.

ಈ ರಿಟ್ ಅರ್ಜಿಯಲ್ಲಿ ಸಾಕ್ಷಿಗಳನ್ನು ಮರು ಪರಿಶೀಲಿಸಲಾಗದು. ನ್ಯಾಯಾಧಿಕರಣದ ಆದೇಶದಲ್ಲಿ ಯಾವುದೇ ನ್ಯೂನತೆ ಇಲ್ಲ. ಸಹಕಾರ ಒಕ್ಕೂಟ, ನೌಕರನ್ನು ತೆಗೆದ ಸಂದರ್ಭದಲ್ಲಿ ಒಕ್ಕೂಟವನ್ನು ಮುಚ್ಚಲಾಗಿತ್ತು ಎಂದು ಸಾಬೀತು ಪಡಿಸಿಲ್ಲ ಮತ್ತು ನೌಕರನ್ನು ಮರು ನೇಮಕ ಮಾಡಲು ಸಾಧ್ಯವಿಲ್ಲ ಎಂದು ಸಾಬೀತುಪಡಿಸಿಲ್ಲವಾದ್ದರಿಂದ ಮರು ನೇಮಕಾತಿ ಆದೇಶವನ್ನು ಹಿಂಪಡೆಯಲಾಗದು. (2014 Indlaw Kar 1769, 2014 (4) KLJ 35)

9. ಸಂವಿಧಾನದ ಅನುಚ್ಛೇದ 226ರಲ್ಲಿ ಪ್ರಕರಣ ಸ್ವೀಕರಿಸುವಾಗ, ವಿಶೇಷ ಪ್ರಸಂಗದಲ್ಲಿ ಮಾತ್ರ ಮಧ್ಯಪ್ರವೇಶಿಸಬೇಕು. ಸಹಕಾರ ಕಾಯಿದೆ ಕಲಂ 70ರಲ್ಲಿ ಪ್ರಕರಣ ವಿಚಾರಣೆಗೆ ಅವಕಾಶವಿದ್ದು, ಸ್ವಾಭಾವಿಕ ನ್ಯಾಯದನ್ವಯ ಅವಕಾಶ ಕಲ್ಪಿಸಲಾಗಿದೆ ಎಂದು ಪರಿಶೀಲಿಸಬೇಕು/ವಿಚಾರಣೆ ಮಾಡಬೇಕು.

ಶ್ರೇಷ್ಠ ನ್ಯಾಯಾಲಯ, ವಿವಿಧ ಕಾಯಿದೆಗಳಲ್ಲಿ ವಿಚಾರಣೆಗೆ ಅವಕಾಶ ಇರುವಾಗ ಅವುಗಳಡಿ ಪರಿಹಾರ

ಕಂಡುಕೊಳ್ಳಬೇಕು ಎಂದು ಶ್ರೇಷ್ಠ ನ್ಯಾಯಾಲಯ ಪ್ರಕರಣ (2004) 4 SCC 268/2004 Indlaw SC 179 ರಡಿ ನಿರ್ದೇಶಿಸಿದೆ. ಈ ನೀತಿಯನ್ನು ಸಾಮಾನ್ಯವಾಗಿ ಪಾಲಿಸಬೇಕು. (2014 Indlaw Kar 1836, 2014 (3) KLJ 134)

10. ಕಾಯಿದೆಯಲ್ಲಿ ವಿವಾದ ಪರಿಹರಿಸಿಕೊಳ್ಳಲು ಅವಕಾಶ ಇದ್ದರೆ, ಉಚ್ಚನ್ಯಾಯಾಲಯ ನೇರವಾಗಿ ರಿಟ್ ಅರ್ಜಿಯನ್ನು ಅನುಚ್ಛೇದ 226 ರಲ್ಲಿ ಪುರಸ್ಕರಿಸಬಾರದು. ಕಾನೂನನ್ನು ನೀತಿ ನಿಯಮಗಳನ್ನು ಪಾಲಿಸುವ ಬದಲು, ವಾಮ ಮಾರ್ಗದಲ್ಲಿ ರಿಟ್ ಮೂಲಕ ಪರಿಹಾರ ಕೇಳಬಾರದು. (2013 Indlaw Kar 2598, 2014 (2) BC 625, 2014 (2) DRTC 243, 2014 (1) KLJ 571)

11. ಕರ್ನಾಟಕ ಮೇಲ್ಮನವಿ ಪ್ರಾಧಿಕರಣ, ಆಂತರಿಕ ಅರ್ಜಿ ಮೇಲೆ, ಆದೇಶ ಮಾಡಿದರೆ, ಪ್ರಕರಣದ ಮೂಲ ಬೇಡಿಕೆ ಮೇಲೆ ಅಭಿಪ್ರಾಯ ವ್ಯಕ್ತ ಪಡಿಸಬೇಕಾಗುತ್ತದೆಂದು, ಆಂತರಿಕ ಅರ್ಜಿ ಮೇಲೆ ಆದೇಶ ನೀಡಲು ನಿರಾಕರಿಸಿರುವುದು ತಪ್ಪು. ನ್ಯಾಯಾಧಿಕರಣ ಪರಿಶೀಲಿಸಬೇಕಾದ ಅಂಶ ಮೇಲ್ನೋಟಕ್ಕೆ ತಡೆಯಾಜ್ಞೆ ನೀಡಬೇಕೇ ಅಥವಾ ಬೇಡವೇ ಎಂಬುದನ್ನು ಮಾತ್ರ ಪರಿಶೀಲಿಸಬೇಕು. ಈ ರೀತಿ ತಡೆಯಾಜ್ಞೆ ನೀಡದೆ ಇರುವುದರಿಂದ ನಿರ್ದೇಶಕರ ಮೇಲೆ ಕಲಂ 29ಸಿ ಅನ್ವಯ ನೋಟೀಸ್ ಜಾರಿ ಮಾಡಲಾಗಿರುವುದನ್ನು ಪರಿಗಣಿಸಿ, ನ್ಯಾಯಾಧಿಕರಣಕ್ಕೆ ಆಂತರಿಕ ಅರ್ಜಿ ಮೇಲೆ ತಡೆಯಾಜ್ಞೆ ನೀಡಬೇಕೇ ಬೇಡವೇ ಎಂದು, ನಿರ್ಧಿಷ್ಟ, ಅವಧಿಯೊಳಗೆ ಆದೇಶಿಸಬೇಕು ಎಂದು ಹಾಜರಾಗಬೇಕಾದ ದಿನಾಂಕವನ್ನು ಅರ್ಜಿ ದಾರರಿಗೆ ಸೂಚಿಸಲಾಗಿದೆ. (2013 Indlaw Kar 1181)

12. ಶಿಸ್ತು ಕ್ರಮ ಕೈಗೊಂಡಾಗ ವಿಚಾರಣಾಧಿಕಾರಿ ಮೇಲೆ ವಿಶ್ವಾಸವಿಲ್ಲವೆಂದು ಅರ್ಜಿ ಸಲ್ಲಿಸಿದಾಗ, ಆ ಅರ್ಜಿಯನ್ನು ವಿಚಾರಣಾಧಿಕಾರಿ ತಿರಸ್ಕರಿಸಿದ ನಂತರ, ನಿಬಂಧಕರ ಮುಂದೆ ಕಲಂ.70 ರಲ್ಲಿ ದಾವಾ ಪ್ರಕರಣ ದಾಖಲಿಸಿದಾಗ, ಅಥವಾ ಪ್ರಕರಣವನ್ನು ವಿಚಾರಣೆ ಮಾಡುವಾಗ, ತನ್ನ ವ್ಯಾಪ್ತಿಗೆ ಬರುವುದಿಲ್ಲವೆಂದು ಪ್ರಕರಣವನ್ನು ವಜಾ ಮಾಡಿರುವುದು ನಿಯಮ ಬಾಹಿರ. ಪ್ರಕರಣವನ್ನು ಅರ್ಜಿದಾರನಿಗೆ ವಾಪಸ್ ಮಾಡಬೇಕಾಗಿತ್ತು. ಏಕೆಂದರೆ, ಆ ಪ್ರಕರಣವನ್ನು ಜಂಟಿ ನಿಬಂಧಕರ ಮುಂದೆ ದಾಖಲಿಸಲು ಆದೇಶಿಸುವ ಬದಲು ವಜಾ ಮಾಡಿರುವುದು ತಪ್ಪು. ಪ್ರಕರಣ ತನ್ನ ವ್ಯಾಪ್ತಿಗೆ ಬರುವುದಿಲ್ಲವೆಂದು ತೀರ್ಮಾನಿಸಿ, ಅರ್ಜಿದಾರನಿಗೆ ಮರಳಿಸಬೇಕೇ ಹೊರತು ವಜಾ ಮಾಡತಕ್ಕದ್ದಲ್ಲ. (2013 Indlaw Kar 2712, 2014 (1) KLJ 85)

13. ಒಬ್ಬ ನೌಕರನನ್ನು ವಜಾ ಮಾಡಿದ ನಂತರ ಅದನ್ನು ಕಾರ್ಮಿಕ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ, ಆ ಪ್ರಕರಣ ತನ್ನ ಕಾರ್ಯ ವ್ಯಾಪ್ತಿಗೆ ಬರುವುದಿಲ್ಲವೆಂದು ತೀರ್ಪಿತ್ತಿತು. ಕಲಂ 70 ರಲ್ಲಿ ಪ್ರಕರಣ ದಾಖಲಿಸಿ, ವಿಳಂಬ ವಿನಾಯ್ತಿ ಅರ್ಜಿ ವಿಚಾರಣಾ ಸಮಯದಲ್ಲಿ ಏಕಪಕ್ಷೀಯ ಆದೇಶ ಮಾಡಿ, ವಿನಾಯ್ತಿ ನೀಡಲಾದ ಆದೇಶವನ್ನು, ನ್ಯಾಯಾಧಿಕರಣದ ಮುಂದೆ ಪ್ರಶ್ನಿಸಿದಾಗ, ಆದೇಶವನ್ನು ರದ್ದುಗೊಳಿಸಿ ಮತ್ತು ನ್ಯಾಯಾಧಿಕರಣ ಎರಡು ಪಕ್ಷಗಳ ಸಾಕ್ಷೀ ವಿಚಾರಣೆ ಮಾಡಿ ಆದೇಶಿಸಲು ನಿರ್ದೇಶನ ನೀಡದೇ ಇದ್ದುದು ಅನೂರ್ಜಿತ. ಆದ್ದರಿಂದ ಮಧ್ಯಸ್ತಗಾರ ಎರಡೂ ಪಕ್ಷಗಳ ಹೇಳಿಕೆ ದಾಖಲಿಸಿ ಆದೇಶ ಮಾಡಲು ನಿರ್ದೇಶಿಸಲಾಯಿತು. (2013 Indlaw Kar 978)

14. ಕ್ರಿಮಿನಲ್ ಮೊಕದ್ದೊಮ್ಮೆ ಹೂಡಲು, ಸಹಕಾರ ಇಲಾಖಾಧಿಕಾರಿ, ಎರವಲು ಸೇವೆ ಮೇಲೆ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುವಾಗ, ಹಣ ದುರುಪಯೋಗದ ಆಧಾರದ ಮೇಲೆ, ಒಪ್ಪಿಗೆ ಕೇಳಿದಾಗ, ಆ ಪ್ರಕರಣದಲ್ಲಿ ಒಪ್ಪಿಗೆ ಕೊಡುವ ಅವಶ್ಯಕತೆ ಇದೇಯೇ ಇಲ್ಲವೇ ಎಂಬುದನ್ನು ಮೊದಲು ತೀರ್ಮಾನಿಸದೆ, ಕಾರಣ ಕೇಳುವ ನೋಟೀಸ್ ಜಾರಿ ಮಾಡಿರುವುದು ಸರಿಯಾದ ಕ್ರಮವಲ್ಲ. ಕ್ರಿಮಿನಲ್ ಮೊಕದ್ದೊಮ್ಮೆ ಹೂಡಲು ಇಲಾಖೆ ಒಪ್ಪಿಗೆ ಬೇಕೇ ಬೇಡವೇ ಎಂಬುದನ್ನು

ಮೊದಲು ತೀರ್ಮಾನಿಸತಕ್ಕದ್ದೆಂದು ಮರು ಆದೇಶ ಮಾಡಲು ನಿರ್ದೇಶಿಸಲಾಗಿದೆ. (2013 Indlaw Kar 1769, 2014 (1) KLJ 329)

15. ಮಧ್ಯಸ್ತಿಗಾರರು ವಜಾ ಮಾಡಿದ ನೌಕರನನ್ನು ಪುನಃ ನೇಮಿಸಿಕೊಳ್ಳಲು ಆದೇಶಿಸಿದ್ದು ಅದಕ್ಕೆ ಮೇಲ್ಮನವಿ ಸಲ್ಲಿಸಿದಾಗ, ನ್ಯಾಯಾಧಿಕರಣ ತನ್ನ ಆದೇಶದಲ್ಲಿ ದಾಖಲೆ/ಸಾಕ್ಷಿಗಳನ್ನು ಸಮರ್ಪಕವಾಗಿ ಪರಿಶೀಲಿಸದೆ ಆದೇಶಿಸಿರುವುದು ಸರಿಯಲ್ಲವೆಂದು, ಮಾಡಿದ ಆದೇಶ ಸಮರ್ಥನೀಯವಲ್ಲ ಮತ್ತು ಸಮರ್ಪಕ ಆದೇಶವಲ್ಲವೆಂದು, ಮರು ವಿಚಾರಣೆಗೆ ಆದೇಶಿಸಿರುವುದು ತಪ್ಪು. ಏಕೆಂದರೆ ಮರು ವಿಚಾರಣೆಯಿಂದ ಪ್ರಕರಣದ ತೀರ್ಮಾನ ವಿಳಂಬವಾಗುತ್ತದೆ. ಆದ್ದರಿಂದ ನ್ಯಾಯಾಧಿಕರಣ ಸಾಕ್ಷಿ/ದಾಖಲೆಗಳು ಲಭ್ಯವಿದ್ದಾಗ, ಆ ಆಧಾರದ ಮೇಲೆ ಆದೇಶಿಸಬೇಕು. ನ್ಯಾಯಾಧಿಕರಣದ ಆದೇಶ ಕಾನೂನಿನ ತೊಡಕಿನಿಂದ ಕೂಡಿದೆ ಹಾಗೂ ಅದು ತಪ್ಪು ಆದೇಶ. ಆದ್ದರಿಂದ ನ್ಯಾಯಾಧಿಕರಣ ಆದೇಶ ಕಿತ್ತು ಹಾಕಿತು. (2013 Indlaw Kar 44, 2013 (2) KLJ 505)

16. ಸರ್ಕಾರ ಕಲಂ.30ಬಿ(1) ರಂತೆ ಸಹಕಾರ ಸಂಘಗಳು ನೇಮಕ ಮಾಡುವಾಗ ಅನುಸರಿಸಬೇಕಾದ ನೀತಿಯನ್ನು 13.06.2011 ರಂದು ಹೊರಡಿಸಿದ್ದು. ಆದೇಶ ಕಲಂ.2(ಬಿ)(2) ಅನ್ವಯ ನಿಗದಿ ಪಡಿಸಿದ ಸಂಘಗಳಿಗೆ ಅನ್ವಯವಾಗುತ್ತಿದೆ. ಅದರೆ ಕಲಂ.2(ಬಿ)(2) ರ ಸಂಘಗಳಲ್ಲದೇ ಬೇರೆ ಸಹಕಾರ ಸಂಘಗಳು ಇವೆ. ಸರ್ಕಾರದ ಆದೇಶ ಕಲಂ.2(ಬಿ)(2) ರನ್ವಯ ನೋಂದಾಯಿಸಲಾದ ಸಾಲ ನೀಡುವ ಸಂಸ್ಥೆ/ಬ್ಯಾಂಕ್‌ಗಳಿಗೆ ಅನ್ವಯವಾಗುವುದಿಲ್ಲ. (Agricultural credit structure) (ಕಲಂ 98E) (2012 Indlaw Kar 2271)

17. ಅರ್ಜಿದಾರ ಬ್ಯಾಂಕ್ ಸರ್ಕಾರ ನಿಗದಿ ಪಡಿಸಿರುವ ನೇಮಕಾತಿ ನಿಯಮಗಳನ್ನು ಪಾಲಿಸುತ್ತಿದ್ದು – ಮೀಸಲಾತಿ ನಿಯಮಗಳನ್ನು ಪಾಲಿಸುತ್ತಿದೆ. ಸರ್ಕಾರ, ಅರ್ಜಿದಾರರು ಅನುಸರಿಸುತ್ತಿರುವ ನೇಮಕಾತಿ ನೀತಿ ಸರಿಇಲ್ಲ ಅಥವಾ ಪಾರದರ್ಶಕ ನೀತಿ ಅನುಸರಿಸಿಲ್ಲವೆಂದು ದೂರುತ್ತಿಲ್ಲ ಮತ್ತು ಮೀಸಲಾತಿ ನೀತಿಯನ್ನು ಪಾಲಿಸುತ್ತಿಲ್ಲವೆಂದಲ್ಲಿ, ಈಗಿನ ನೇಮಕಾತಿ ಶರತ್ತುಗಳನ್ನು ಪರಿಶೀಲಿಸಿದಾಗ ಸಹಕಾರ ಬ್ಯಾಂಕ್‌ನ ನೇಮಕಾತಿಯ ವ್ಯವಹಾರದಲ್ಲಿ ಸರ್ಕಾರದ ಮಧ್ಯಪ್ರವೇಶವೆಂದು ಕಲಂ 98 ಇ ನಲ್ಲಿ ನೀಡಿದ ನೀತಿ ನಿಯಮಕ್ಕೆ ವಿರುದ್ದವಾಗಿದೆ. ಸರ್ಕಾರ ಕಲಂ.30ಬಿ ಅಡಿ ನೀಡುವ ಆದೇಶ ಸಾರ್ವಜನಿಕ ಹಿತಾಸಕ್ತಿಯಿಂದ ನೀಡಿದ್ದು, ಈ ನೀತಿಯು ಕಲಂ.2(ಬಿ)(2) ರಲ್ಲಿ ನಿರ್ಧರಿಸಿದ ಸಾಲ ನೀಡುವ ವ್ಯವಸ್ಥೆ ಸಂಸ್ಥೆಗಳಿಗೆ ಅನ್ವಯವಾಗುವುದಿಲ್ಲ. (2012 Indlaw Kar 2864, 2013 (1) KLJ 651)

18. ಅಕ್ರಮವಾಗಿ ನೇಮಕವಾದ ಒಬ್ಬ ನೌಕರನ ಹೆಸರು ಸೇವಾ ಹಿರಿತನದ ಪಟ್ಟಿಯಲ್ಲಿ ಹೆಸರು ಇದೇ ಎಂಬ ಕಾರಣದಿಂದಲೇ ಭಡ್ತಿಗೆ ಪರಿಗಣಿಸಲಾಗದು. ನೇಮಕಾತಿ ಸಕ್ರಮಗಾಗಿ ನಡೆದು ಸೇವಾ ಹಿರಿತನ ಪಟ್ಟಿಯಲ್ಲಿ ಇದ್ದವರಿಗೆ ಮಾತ್ರ ಭಡ್ತಿಗೆ ಅರ್ಹರು ಎಂಬ ಅಂಶವನ್ನು ಸಂಯುಕ್ತ ನಿಬಂಧಕರು ಪರಿಗಣಿಸದೆ ಆದೇಶಿಸಿರುವುದು ತಪ್ಪು. ಆ ವ್ಯಕ್ತಿಯ ನೇಮಕಾತಿ ನಿಯಮಾನುಸಾರ ನಡೆದಿದೆಯೇ ಎಂಬ ಅಂಶವನ್ನು ಪರಿಗಣಿಸಬೇಕು. (2009 Indlaw Kar 346, 2010 (1) KLJ 100)

19. ಅರ್ಜಿದಾರ ವ್ಯಕ್ತಿ ಪ್ರಭಾರ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ ಹಣ ದುರುಪಯೋಗದ ಆಧಾರದ ಮೇಲೆ ಕಾರಣ ಕೇಳುವ ನೋಟೀಸ್ ನೀಡಲಾಗಿತ್ತು. ಅದಕ್ಕೆ ಅವನ ನಿರಾಕರಣೆ ಉತ್ತರ ಪಡೆದು, ಆರೋಪ ಪಟ್ಟಿ ಹೊರಿಸಿ ವಿಚಾರಣಾ ಕ್ರಮ ಜರುಗಿಸಿ, ವಿಚಾರಣಾ ವರದಿಯ ಆಧಾರದ ಮೇಲೆ ಶಾಶ್ವತ ನಿವೃತ್ತಿ ಮಾಡುವ ಆದೇಶವನ್ನು ಶಿಸ್ತು ಪ್ರಾಧಿಕಾರ ಆದೇಶ ಹೊರಡಿಸಿತು. (ಸಾಮಾನ್ಯ ಸೇವಾ ಪ್ರಾಧಿಕಾರ). ಈ ಆದೇಶವನ್ನು ರಿಟ್ ಮೂಲಕ ಪ್ರಶ್ನಿಸಿದಾಗ ಆ ಅರ್ಜಿಯನ್ನು ವಜಾ ಮಾಡಲಾಗಿತ್ತು. ಶಾಶ್ವತ ನಿವೃತ್ತಿ ಮಾಡುವಾಗ ಆರೋಪಗಳು ತೀವ್ರವಾಗಿದ್ದು ದೊಡ್ಡ ಪ್ರಮಾಣದ

ಶಿಕ್ಷೆ ಕೊಟ್ಟಿರುವುದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದೆ. ಇದರ ವಿಚಾರಣೆ ಮಾಡುವಾಗ ಗಮನಿಸಿದುದೇನೆಂದರೆ ಆರೋಪ ಪಟ್ಟಿ ಹೊರಡಿಸುವುದರಿಂದ ಹಿಡಿದು, ಖಾಯಂ ನಿವೃತ್ತಿ ಆದೇಶದವರೆಗೆ ನ್ಯಾಯ ಸಮ್ಮತ ವಿಧಾನ ಅನುಸರಿಸಿಲ್ಲ, ಆದ್ದರಿಂದ ನಿವೃತ್ತಿ ಆದೇಶವನ್ನು ಕಿತ್ತುಹಾಕಿ, ಆ ದಿನದಿಂದ ಮರು ನೇಮಕ ಮಾಡುವ ತನಕ ಸಾಮಾನ್ಯ ಸೇವಾ ಪ್ರಾಧಿಕಾರ ಮತ್ತಿತರರು, ಪೂರ್ಣ ವೇತನ ನೀಡತಕ್ಕದ್ದು. ಇದಕ್ಕೆ ಸಂಬಂಧಪಟ್ಟಂತೆ ಶ್ರೇಷ್ಠ ನ್ಯಾಯಾಲಯ ರೂಪ ಚಂದ್ರ ಪ್ರಕರಣದಲ್ಲಿ ನೀಡಿದ ನೀತಿ ಆದೇಶವನ್ನು ಪಾಲಿಸತಕ್ಕದ್ದು. (2008 Indlaw SC 1991/2009 1 SCC (Loas) 398, (2009) 2 SCC 570, AIR 2008 SC (Supp) 921, JT 2009 (2) SC 176) (2009 Indlaw Kar 617, 2011 (3) KLJ 69)

20. ಅರ್ಜಿದಾರ ನೌಕರನಿಗೆ ವಿಚಾರಣಾ ವರದಿಯನ್ನು ಆಧರಿಸಿ, ಎರಡನೇ ನೋಟೀಸ್ ನೀಡಿದಾಗ, ಪ್ರಕ್ರಿಯೆ ಮುಗಿಯುವ ಮೊದಲೇ ಕಲಂ 70ರಡಿ ದಾವಾ ಪ್ರಕರಣ ದಾಖಲಾದಾಗ, ಅಂತರಿಕ ಅರ್ಜಿಯ ಆಧಾರದ ಮೇಲೆ ತಡೆಯಾಜ್ಞೆ ಪಡೆದರು. ಈ ಅರ್ಜಿಯ ಮೇಲೆ ಮರು ಪರಿಶೀಲಿಸಲು ಅರ್ಜಿ ಸಲ್ಲಿಸಿದಾಗ ಮೇಲ್ಮನವಿ ಪ್ರಾಧಿಕರಣ ಅಂತರಿಕ ಅರ್ಜಿಯ ಆದೇಶವನ್ನು ವಜಾ ಮಾಡಿ ಮುಂದಿನ ಕ್ರಮ ಜರುಗಿಸಲು ಮುಂದಾದಾಗ, ಈ ರಿಟ್ ಅರ್ಜಿ ದಾಖಲಿಸಲಾಗಿದೆ. ಸಂಯುಕ್ತ ನಿಬಂಧಕರು ತಡೆಯಾಜ್ಞೆ ನೀಡಿರುವುದು ತಪ್ಪು ಮತ್ತು ಪ್ರಕರಣದ ತಿವ್ರತೆ ಬಗ್ಗೆ ಮತ್ತು ಅರ್ಹತೆ ಬಗ್ಗೆ ಪರಿಶೀಲಿಸಬಾರದು. ಯಾವುದೇ ಪ್ರಾಧಿಕಾರ ಅಥವ ಉಚ್ಚನ್ಯಾಯಾಲಯ ವಿಚಾರಣೆ ನಡೆಸುತ್ತಿರುವ ಬಗ್ಗೆ ಅಥವಾ ಕ್ರಮ ಜರುಗಿಸುವ ಪ್ರಸಂಗದಲ್ಲಿ, ಅದರಲ್ಲೂ ಕಾರಣ ಕೇಳುವ ನೋಟೀಸ್ ನೀಡಿ ಕ್ರಮ ಜರುಗಿಸುತ್ತಿರುವಾಗ, ಅಂದರೆ ಮಧ್ಯಂತರ ಅವಧಿಯಲ್ಲಿ ಮಧ್ಯಪ್ರವೇಶಿಸಬಾರದು. ಈ ವಿಷಯವನ್ನು ನ್ಯಾಯಾಲಯ ಬಹಳಷ್ಟು ಆದೇಶಗಳಲ್ಲಿ ಸೂಚಿಸಿದೆ. ಆದ್ದರಿಂದ ಶಿಸ್ತು ಕ್ರಮದ ಮಧ್ಯಂತರ ಅವಧಿಯಲ್ಲಿ ಮಧ್ಯಪ್ರವೇಶ ಮಾಡಬಾರದು. (2008 Indlaw Kar 221, 2008 (6) KLJ 696)

21. ಇಬ್ಬರು ಸರ್ಕಾರಿ ಅಧಿಕಾರಿಗಳ ಸಹಕಾರ ಸಂಘದ ಸೇವೆಯಲ್ಲಿದ್ದಾಗ, ಆ ಇಬ್ಬರು ವ್ಯಯಕ್ತಿಕ ವ್ಯಾಪ್ತಿಯಲ್ಲಿ ಪರಿಹಾರ ಕೇಳುವಾಗ, ಅವು ಕಾಯಿದೆ ಕಲಂ 70ರಡಿ ಯಾವುದೇ ರೀತಿ ಪರಿಹಾರ ಕೇಳಲು ಅವಕಾಶವಿಲ್ಲ. ಶ್ರೇಷ್ಠ ನ್ಯಾಯಾಲಯ ಈ ಬಗ್ಗೆ ಮಾರ್ಗದರ್ಶ ನಿರ್ದೇಶನಗಳನ್ನು ನೀಡಿದೆ. ಸಿವಿಲ್ ನ್ಯಾಯಾಲಯದಲ್ಲಿ ವೈಯಕ್ತಿಕ ಪರಿಹಾರ ಕೇಳಲು ಅವಕಾಶ ಇದೆ. ಒಬ್ಬ ಕಿರಿಯ ಅಧಿಕಾರಿ, ಹಿರಿಯ ಅಧಿಕಾರಿ ಮೇಲೆ, ಅದರಲ್ಲಿ ಇಬ್ಬರು ಅಧಿಕಾರಿಗಳು ಸರ್ಕಾರಿ ಅಧಿಕಾರಿಗಳಾಗಿರುವುದರಿಂದ, ಪ್ರಕರಣದ ಊರ್ಜಿತತೆ ಬಗ್ಗೆ ತೀರ್ಮಾನಿಸಬೇಕು ಹಾಗೂ ಈ ಪರಿಹಾರವನ್ನು ಆಡಳಿತ ನ್ಯಾಯಾಧಿಕರಣದಲ್ಲಿ ಕೇಳಲು ಬರುವುದಿಲ್ಲ. ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕೇಳಬೇಕು. (2007 Indlaw Kar 345, 2008 (2) KLJ 505)

22. ಅರ್ಜಿದಾರ ಬ್ಯಾಂಕ್ (ತಾಲ್ಲೂಕು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್) ಹಣ ದುರುಪಯೋಗದ ಆಧಾರದ ಮೇಲೆ, ಶಿಸ್ತು ಕ್ರಮ ಜರುಗಿಸಿ 29.01.1977 ರಕ್ಕೆ ವಜಾ ಆದೇಶ ಮಾಡಿತು. ಅದೇ ಸಮಯದಲ್ಲಿ ಸಾಮಾನ್ಯ ಸೇವಾ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಾಗ, ವಜಾ ಆದೇಶವನ್ನು ಕಿತ್ತು ಹಾಕಲು ನೌಕರ ಅರ್ಜಿ ಸಲ್ಲಿಸಿದಾಗ, ಆ ಅರ್ಜಿಯನ್ನು ಪುರಸ್ಕರಿಸಿ ವಜಾ ಆದೇಶವನ್ನು ತಡೆ ಹಿಡಿಯಿತು. ಅರ್ಜಿದಾರ ಬ್ಯಾಂಕ್ ಉಚ್ಚನ್ಯಾಯಾಲಯಕ್ಕೆ ರಿಟ್ ಸಂಖ್ಯೆ.42580/1982 ಸಲ್ಲಿಸಿತು. (1986 (1) KLJ 381) ಸಾಮಾನ್ಯ ಸೇವಾ ಪ್ರಾಧಿಕಾರದ ಆದೇಶವನ್ನು ಕಿತ್ತು ಹಾಕಿತು. ಈ ತೀರ್ಮಾನವನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಎಸ್.ಎಲ್.ಪಿ 5748/1986 ರಲ್ಲಿ ಪ್ರಶ್ನಿಸಲಾಯಿತು. (ಆ ನಂತರ ಈ ಅರ್ಜಿಯನ್ನು ಸಿವಿಲ್ ಮೇಲ್ಮನವಿ 2582/1986 ಎಂದು ನೊಂದಾಯಿಸಿತು) ಉಚ್ಚನ್ಯಾಯಾಲಯದ ಆದೇಶವನ್ನು ಶ್ರೇಷ್ಠ

ನ್ಯಾಯಾಲಯ ಎತ್ತಿ ಹಿಡಿಯಿತು. ಈ ಸ್ಥಿತಿ ಇದ್ದಾಗ, ವಜಾಗೊಂಡ ನೌಕರ ಸಾಮಾನ್ಯ ಸೇವಾ ಪ್ರಾಧಿಕಾರಕ್ಕೆ ತನ್ನ ಸೇವೆಗೆ ಗ್ರ್ಯಾಚುಯಿಟಿ ಪಾವತಿಸಲು ಅರ್ಜಿ ಕೊಟ್ಟಾಗ, ಸಾಮಾನ್ಯ ಸೇವಾ ಪ್ರಾಧಿಕಾರ ರೂ.49,908/– ಪಾವತಿಸಲು ಆದೇಶಿಸಿತು. ಪಾವತಿಸದೇ ಇದ್ದಾಗ ನೌಕರರು ನಿಬಂಧಕರ ಮುಂದೆ ದಾವಾ ದಾಖಲಿಸಿ ರೂ.1,43,355/– ಪಾವತಿ ಮಾಡುವಂತೆ ಆದೇಶ ಪಡೆದರು. ಈ ಆದೇಶವನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕರಣ ದೃಡೀಕರಿಸಿತು. ಈ ಆದೇಶ ಪ್ರಶ್ನಿಸಿ ಈ ರಿಟ್ ಸಲ್ಲಿಸಲಾಗಿದೆ. ಗ್ರ್ಯಾಚುಯಿಟಿ ಕೇಳುವಾಗ, ಈ ನಿಧಿಯ ನಿಯಂತ್ರಣಾಧಿಕಾರಿಗಳ ಮುಂದೆ ಅರ್ಜಿ ಸಲ್ಲಿಸಬೇಕೇ ಹೊರತು, ಕಲಂ 70ರ ದಾವಾ ಪ್ರಕರಣದಲ್ಲಿ ಪರಿಹಾರ ಕೇಳತಕ್ಕದ್ದಲ್ಲ. ಈ ತೀರ್ಮಾನಕ್ಕೆ ಶ್ರೇಷ್ಠ ನ್ಯಾಯಾಲಯದ 1979 Indlaw SC 75 ಆಧರಿಸಲಾಗಿದೆ. (2006 Indlaw Kar 337, 2007 (1) KLJ 211)

23. ಅರ್ಜಿದಾರರನ್ನು ಆಂತರಿಕ ನೇಮಕಾತಿ ಮುಖಾಂತರ ಕಾನೂನು ಅಧಿಕಾರಿಯಾಗಿ 6 ನೌಕರರನ್ನು ನೇಮಿಸಿಕೊಳ್ಳಲಾಯಿತು. ಕಾನೂನು ಅಧಿಕಾರಿಗಳಿಗೆ ಸಂಬಳವನ್ನು ನಿಗದಿ ಪಡಿಸಿದಾಗ, ಆ ನೌಕರರು ಬ್ಯಾಂಕ್ ಸೇವೆಯಲ್ಲಿ ಪಡೆಯುತ್ತಿದ್ದ ವ್ಯಯಕ್ತಿಕ ವೇತನ ಕೊಡಲಿಲ್ಲ. ಇದನ್ನು ಪ್ರಶ್ನಿಸಿ ಕಲಂ 70ರಲ್ಲಿ ಅಪರ ನಿಬಂಧಕರ ಮುಂದೆ ದಾವಾ ದಾಖಲಿಸಿದಾಗ ಅದನ್ನು ತಿರಸ್ಕರಿಸಲಾಯಿತು. ಅದಕ್ಕಾಗಿ ಈ ರಿಟ್ ಅರ್ಜಿ. ಆಂತರಿಕ ನೇಮಕಾತಿಗೆ ಪ್ರಕಟಣೆ ಹೊರಡಿಸಿದಾಗ "ಹಾಲಿ ಸಂಬಳವನ್ನು ಮುಂದುವರಿಸಲಾಗುವುದು" ಎಂದಿದ್ದು, ನೇಮಕಾತಿ ಆದೇಶ ನೀಡುವಾಗ "ಮೂಲ ವೇತನ"ವನ್ನು ಕೊಡುವುದಾಗಿ ಆದೇಶಿಸಿದೆ ಎಂಬ ಅಂಶ ಗಮನಿಸಬೇಕು. ಈ ರಿಟ್ ಅರ್ಜಿ ಪರಿಹಾರ ಮುಖಾಂತರ ಬ್ಯಾಂಕ್ "ವೈಯಕ್ತಿಕ ಸಂಬಳ" ಕೊಡದೇ ಇರಲು ಕಾರಣ ಇಲ್ಲ. ಆದ್ದರಿಂದ ಮೂಲ ವೇತನ ಮತ್ತು ವ್ಯಯಕ್ತಿಕ ವೇತನ ಕೊಡಿಸಿ, ವೇತನ ಶ್ರೇಣಿ ನಿಗದಿ ಪಡಿಸಲು ಆದೇಶಿಸಿತು. (2006 Indlaw Kar 113, 2006 (3) KLJ 548)

24. ಒಪ್ಪಂದದ ಆಧಾರದ ನೌಕರನನ್ನು ಹಾಲು ಒಕ್ಕೂಟಗಳು ಮತ್ತು ಹಾಲು ಮಹಾಮಂಡಳ ಖಾಯಂಗೊಳಿಸಲು ನಿರಾಕರಿಸಿದಾಗ, ನೌಕರರ ಮಹಾ ಮಂಡಳ ನಿಬಂಧಕರ ಮುಂದೆ ಕಲಂ 70 ರನ್ವಯ ದಾವಾ ದಾಖಲಿಸಿದಾಗ, ಅರ್ಜಿದಾರ ನೌಕರರ ಮಹಾಮಂಡಳ, ಒಂದು ಸಹಕಾರ ಸಂಘವಲ್ಲ ಮತ್ತು ಇದು ಒಂದು ನೌಕರ ಸಂಘಗಳ ಒಂದು ಒಕ್ಕೂಟವಾದ್ದರಿಂದ, ಪ್ರಕರಣ ದಾಖಲಿಸಲು ನಿರಾಕರಿಸಿದಾಗ, ಈ ರಿಟ್ ಅರ್ಜಿ ದಾಖಲಿಸಲಾಗಿದೆ. ಈ ನ್ಯಾಯಾಲಯ ಪ್ರಕರಣದ ಮುಲಾಂಶಗಳ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತ ಪಡಿಸಿಲ್ಲ. ಈ ಪ್ರಕರಣ ಕಾರ್ಮಿಕ ಆಯುಕ್ತರ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಪ್ರಕರಣವನ್ನು ದಾಖಲೆಗಳ ಜೊತೆ ಕಾರ್ಮಿಕರ ಆಯುಕ್ತರಿಗೆ ಸಲ್ಲಿಸಲು ಸೂಚಿಸಿ, ಆಯುಕ್ತರಿಗೆ ಪ್ರಕರಣ ವಿಚಾರಣೆ ನಡೆಸಿ ಆದೇಶಿಸಲು ನಿರ್ದೇಶನ ನೀಡಲಾಯಿತು. (2005 Indlaw Kar 399, 2005 (6) KLJ 610)

25. ಸರ್ಕಾರದ ಆದೇಶದ ಮೇಲೆ (ಕಾರ್ಮಿಕ ಇಲಾಖೆ) ಕಾರ್ಮಿಕ ನ್ಯಾಯಾಲಯಕ್ಕೆ ಪ್ರಕರಣ ವಿಚಾರಣೆ ಮಾಡಲು ಆದೇಶಿಸಿತು. ಈ ಪ್ರಕರಣ ವಿಚಾರಣೆ ಹಂತದಲ್ಲಿರುವಾಗ, ಕರ್ನಾಟಕ ಸಹಕಾರ ಕಾಯಿದೆ 1959ರ ಕಲಂ 70 ಮತ್ತು ಕಲಂ 118 ಕ್ಕೆ ತಂದ ತಿದ್ದುಪಡಿ ನಂತರ, ಕಾರ್ಮಿಕ ನ್ಯಾಯಾಲಯಕ್ಕೆ ಅಧಿಕಾರ ಮೊಟಕು ಗೊಂಡಿರುವುದರಿಂದ ಮತ್ತು ಈ ನ್ಯಾಯಾಲಯದ ಪೂರ್ಣ ಪೀಠದ ಆದೇಶದಲ್ಲಿ (2003 Indlaw Kar 211) ಒಂದು ಸಹಕಾರ ಸಂಘ ಕಾಯಿದೆಯಲ್ಲಿ ನೋಂದಾವಣೆ ಆದ ನಂತರ, ಅದರ ರಚನೆ, ವ್ಯವಸ್ಥಾಪನೆ ಮತ್ತು ವ್ಯವಹಾರಕ್ಕೆ ಸಂಬಂಧಪಟ್ಟಂತೆ, ಪೂರ್ಣ ಅಧಿಕಾರ ನಿಬಂಧಕರಿಗೆ ನೀಡಲಾಗಿದೆ. ಆದ್ದರಿಂದ ನಿಬಂಧಕರೇ ಕಾರ್ಮಿಕರ ವಿಷಯದಲ್ಲಿ ತೀರ್ಮಾನ ಮಾಡುವ ಅಧಿಕಾರ ಇದೆ. ಅವರೇ ತೀರ್ಮಾನಿಸಬೇಕು ಎಂದು ನಿರ್ಧೇಶಿಸಿದ್ದನ್ನು

ಆಧರಿಸಿ, ನಿಬಂಧಕರಿಗೆ ಈ ಪ್ರಕರಣ ಯಾವ ಸ್ಥಿತಿಯಲ್ಲಿ ನಿಂತಿತ್ತೋ, ಅದೇ ಸ್ಥಿತಿಯಿಂದ ಮುಂದಿನ ವಿಚಾರಣೆ ಮಾಡಲು ಆದೇಶಿಸಿತು ಮತ್ತು ಕಡತ ಮತ್ತು ದಾಖಲೆಗಳಿಗೆ ನಿಬಂಧಕರಿಗೆ ವರ್ಗಾಯಿಸಲು ಸೂಚಿಸಲಾಯಿತು. (2005 Indlaw Kar 509, 2005 (3) KLJ 300)

26. ಅರ್ಜಿದಾರ ಬ್ಯಾಂಕ್ ಕೆಲಸದಿಂದ ತೆಗೆದು ಹಾಕಿದ ನೌಕರನನ್ನು ಮರು ನೇಮಕ ಮಾಡಲು ಮತ್ತು ಹಿಂದಿನ ಸಂಬಳ ಪಾವತಿಸಲು ಏಕ ಸದಸ್ಯ ಪೀಠ ಮಾಡಿದ ಆದೇಶ (26045/1991) ದ ಮೇಲೆ ಈ ಮೇಲ್ಮನವಿ ಸಲ್ಲಿಸಲಾಗಿದೆ. ಏಕ ಸದಸ್ಯ ಪೀಠ ಆದೇಶ ಮಾಡುವಾಗ ರಿಟ್ ತೀರ್ಮಾನಿಸುವಾಗ ಅರ್ಜಿದಾರ ಬ್ಯಾಂಕ್‌ನ್ನು ಜವಾಬ್ದಾರರನ್ನಾಗಿ ಮಾಡಿದೆಯೋ ತಿಳಿಯದು. ಏಕೆಂದರೆ ನೇಮಕ ಮಾಡಿದ ಒಕ್ಕೂಟ, ಅವನ ನೇಮಕ ಮಾಡಿದೆ ಮತ್ತು ವಜಾ ಮಾಡಿದೆ. ಆದ್ದರಿಂದ ಬ್ಯಾಂಕ್‌ನ್ನು ಜವಾಬ್ದಾರಿ ಮಾಡಿದ್ದು ಸರಿಯಲ್ಲ. ಸಾಮಾನ್ಯ ಸೇವಾ ಪ್ರಾಧಿಕಾರವನ್ನು ಕಕ್ಷಿ ದಾರರನ್ನು ಮಾಡಿಲ್ಲ, ಆದರೆ ಕಾರ್ಮಿಕ ನ್ಯಾಯಾಲಯದಲ್ಲಿ ಸಾಮಾನ್ಯ ಸೇವಾ ಪ್ರಾಧಿಕಾರವನ್ನು ಕಕ್ಷಿದಾರರನ್ನಾಗಿ ಸೇರಿಸಿತ್ತು. ಆದ್ದರಿಂದ ಏಕ ಸದಸ್ಯ ಪೀಠ ಮರು ನೇಮಕಕ್ಕೆ ನೀಡಿದ್ದ ಆದೇಶ ಊರ್ಜಿತವಲ್ಲ. ನೌಕರನಿಗೆ ಈಗಾಗಲೇ ಒಕ್ಕೂಟ (ಆರ್–3) ಈಗಾಗಲೇ ಶೇ.50 ರಷ್ಟು ಸಂಬಳ ಪಾವತಿಸಿರುವುದರಿಂದ (22.2.1975 – 9.3.1979) ಮತ್ತು ಸಂಬಳ ಪಾವತಿಸಲು ಆದೇಶ ಮಾಡುವ ಅವಶ್ಯಕತೆ ಇಲ್ಲ. ಆದರೆ ಒಕ್ಕೂಟ ನೌಕರನನ್ನು ಮರು ನೇಮಕ ಮಾಡಲು ಮತ್ತು ಅವನ ಸೇವೆಯನ್ನು ಮುಂದುವರಿಸಲು (ಯಾವುದೇ ಬಾಕಿ ಸಂಬಳ ಪಾವತಿಸದೆ) ಅವನನ್ನು ಸಾಮಾನ್ಯ ಸೇವಾ ಪ್ರಾಧಿಕಾರಕ್ಕೆ ವರ್ಗಾಯಿಸಬಹುದು ಅಥವಾ ಬ್ಯಾಂಕಿನ ಒಪ್ಪಿಗೆ ಇದ್ದರೆ ಬ್ಯಾಂಕ್ ಸೇವೆಗೆ ವರ್ಗಾಯಿಸಬಹುದು. (2003 Indlaw Kar 286, 2004 (3) LLJ 720)

27. ಒಬ್ಬ ನೌಕರನ್ನು ನಿವೃತ್ತಿ ನಂತರ ಅವನಿಗೆಬೇಕಾದ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ಪಾವತಿ ಮಾಡಿದ್ದು (ಸಹಕಾರ ನಿಯಮದಂತೆ) ಆ ನಂತರ ಗ್ರಾಚುಯಿಟಿ ಕಾಯಿದೆ 1972 ರನ್ವಯ ಪಾವತಿ ಮಾಡಲು ಮನವಿ ಮಾಡಿದ್ದನ್ನು ತಿರಸ್ಕರಿಸಿದ ನಂತರ ಈ ರಿಟ್ ಅರ್ಜಿ. ಏಕ ಸದಸ್ಯ ಪೀಠ 1948ರ ಕಾಯಿದೆ ಈಗಲೂ ಮುಂದುವರಿದಿರುವುದರಿಂದ ವಿಭಾಗೀಯ ಪೀಠ ತನ್ನ ILR 1999 Kar 650 ರಲ್ಲಿ ನೀಡಿದ ಆದೇಶ ಮರು ಪರಿಶೀಲಿಸಬೇಕಿರುವುದರಿಂದ, ಮತ್ತೊಂದು ವಿಭಾಗೀಯ ಪೀಠದ ಮುಂದೆ ಮಂಡಿಸಲು ಆದೇಶಿಸಿದ ನಂತರ, ಈ ಪ್ರಕರಣ ಏಕ ಸದಸ್ಯ ಪೀಠ ವರ್ಗಾಯಿಸಿದೆ. ನಂತರ ಮಲ್ಲೇಶ್ವರಂ ಸಹಕಾರ ಸಂಘದ ಪ್ರಕರಣದ ತೀರ್ಪು (ILR 1999 Kar 650) ಅನ್ವಯ ವಾಗುತ್ತದೆಯೇ ಎಂಬುದಕ್ಕೆ ಹೊಸ ಕಾಯಿದೆ 24.9.1997 ರಿಂದ ಜಾರಿಗೆ ಬಂದಿದ್ದು ಹಳೆ ಕಾಯಿದೆ ಅನೂರ್ಜಿತವಾಗಿದೆ. ಆದ್ದರಿಂದ ಹೊಸ ಕಾಯಿದೆಯಲ್ಲಿ ವಿನಾಯ್ತಿ ಕೊಡುವ ಅವಕಾಶ ಇಲ್ಲದಿರುವುದರಿಂದ, ಹಳೆ ಕಾಯಿದೆಯಲ್ಲಿ ನೀಡಿದ ವಿನಾಯ್ತಿ, ಅನ್ವಯವಾಗುವುದಿಲ್ಲ. ಇದಕ್ಕೆ ಪೂರಕವಾಗಿ 2000 Indlaw SC 39 ಮತ್ತು ILR 1992 Kar 1994 ನ್ನು ಆಧರಿಸಲಾಗಿದೆ. ಆದ್ದರಿಂದ 1948ರ ಕಾಯಿದೆಯಲ್ಲಿನ ಅಧಿಸೂಚನೆ. (17.5.1952)

"In exercise of the powers conferred by S.6 of the Mysore shops and establishments Act 1948 (Mysore Act No.11 of 1948). His highness of the Maharaga of Mysore is pleased to execmpt all the cooperative institutions in the State of Mysore, registered under the Mysore Cooperative Societies Act 1948 from the provisions of the said Act"ನ ವಿನಾಯ್ತಿ ಹೊಸ ಕಾಯಿದೆ ಬಂದ ನಂತರ ಅನ್ವಯವಾಗುವುದಿಲ್ಲ. (2003 Indlaw Kar 359, 2004 (1) CLR 688, 2004 (1) KLJ 179)

28. ಕೆಲಸಗಾರರು ಕೈಗಾರಿಕಾ ವಿವಾದವನ್ನು ದಾಖಲಿಸಲು ಅಧಿಕಾರ ಇದೇ. ಅಂದರೆ ಬಿಡುಗಡೆ,

ವಜಾ, ಕಿತ್ತುಹಾಕುವುದು ಅಥವಾ ಇನ್ನಾವುದೇ ರೀತಿ ಶಿಕ್ಷೆ ವಿಧಿಸಿದಾಗ ವ್ಯಕ್ತಿಗತ ನೌಕರ ದಾವಾ ದಾಖಲಿಸಬಹುದು. ನೌಕರರ ಒಕ್ಕೂಟವೂ ಸಹ ವಿವಾದ ದಾಖಲಿಸಲು ಅಧಿಕಾರದಿಂದ ವಂಚಿತರಲ್ಲ. ಕಾಯಿದೆ ತಿದ್ದುಪಡಿ ಮಾಡಿ ನಿಬಂಧಕರೇ ವಿವಾದ ಇತ್ಯರ್ಥ ಪಡಿಸಲು ಅವಕಾಶ ಕಲ್ಪಿಸಿರುವುದು ಸರ್ಕಾರದ ಅಧಿಕಾರ. ಸಹಕಾರ ಕಾಯಿದೆ ನೌಕರರ ವಿವಾದ ಸಹಕಾರ ನ್ಯಾಯಾಲಯದಲ್ಲಿಯೇ ತೀರ್ಮಾನಿಸಲು ಮತ್ತು ಕಾ------/ಜಾದ್ಯೊಗಿಕ ನ್ಯಾಯಾಲಯಗಳ ಅಧಿಕಾರವನ್ನು ನಿರ್ಭಂದಿಸಬಹುದು.

(2003 Indlaw Kar 211, 2003 ILR (Kar) 2531, 2003 (4) KLJ 453, 2003 (3) LLJ 502)

ಈ ಮೇಲ್ಕಂಡ ತೀರ್ಪಿಗೆ ಆಧಾರವಾಗಿ ಶ್ರೇಷ್ಠ ನ್ಯಾಯಾಲಯ ಕೊಟ್ಟ 1959 AIR SC 69ಮತ್ತು 1951 Indlaw SC 63 ಆಧರಿಸಬಹುದು.

29. ದಿನಗೂಲಿ ನೌಕರರು, ಸೀಸನಲ್ ನೌಕರರು, ಖಾಯಂ ನೌಕರನ್ನು ವಜಾಗೊಳಿಸಿದಾಗ, ಆ ನೌಕರರು ಕಾರ್ಮಿಕ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ವಿಚಾರಣೆ ಹಂತದಲ್ಲಿರುವಾಗಿ, ಆಡಳಿತ ಮಂಡಳಿ ಮತ್ತು ನೌಕರರ ಒಕ್ಕೂಟ ಒಪ್ಪಂದ ಮಾಡಿಕೊಂಡಿದ್ದು ಆ ಒಪ್ಪಂದ ಜಾರಿಗಾಗಿ ಈ ರಿಟ್ ಅರ್ಜಿ. ಇದಕ್ಕೆ ಪೂರ್ವದಲ್ಲಿ ಕಾರ್ಮಿಕ ನ್ಯಾಯಾಲಯದಲ್ಲಿ ದಾಖಲಿಸಿದ ಪ್ರಕರಣಗಳನ್ನು ವಾಪಸ್ ಪಡೆಯಲು ಆಡಳಿತ ಮಂಡಳಿ ಸೂಚಿಸಿದ್ದನ್ನು ವಿರೋದಿಸಿ, ಈ ರಿಟ್ ವಿಚಾರಣೆ ಹಂತದಲ್ಲಿ ಹಾಗೂ ಕಾರ್ಮಿಕ ನ್ಯಾಯಾಲಯದ ಪ್ರಕರಣ ವಾಪಸ್ ಪಡೆದ ನಂತರ ಈ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಊರ್ಜಿತವಲ್ಲ ಎಂದು ವಾಧಿಸುವುದು ತಪ್ಪು. ಅದಕ್ಕಾಗಿ ಈ ನ್ಯಾಯಾಲಯ ಒಪ್ಪಂದ ತಪ್ಪಿಸುವ ತತ್ವ ಅನ್ವಯಿಸಬೇಕು (Doctume of promissory estoppel) ಈ ನ್ಯಾಯಾಲಯ 27.9.1999 ರಂದು ನೀಡಿದ್ದ ಆಂತರಿಕ ಆದೇಶದನ್ವಯ 51 ಕೆಲಸಗಾರರನ್ನು ಮರು ನೇಮಕ ಮಾಡಲಾಗಿದೆ. ಆದರೆ ಶೇ.40% ರಷ್ಟು ಬಾಕಿ ಸಂಬಳ ಪಾವತಿಸಿಲ್ಲ. ಆದ್ದರಿಂದ ಆ ಆದೇಶವನ್ನು ದೃಢೀಕರಿಸಿ 51 ನೌಕರರನ್ನು ಮರು ನೇಮಕ ಮಾಡಿ ಬಾಕಿ 40% ಸಂಬಳವನ್ನು ಪಾವತಿಸಲು ಆದೇಶಿಸಲಾಯಿತು. (2003 Indlaw Kar 385, 2003 (3) LLJ 300A)

30. ಸಹಕಾರ ಸಂಘಗಳ ಕಾಯಿದೆ ಕಲಂ 32 ರಲ್ಲಿ ಸಂಘಕ್ಕೆ ಬರಬೇಕಾದ ಸಾಲಕ್ಕೆ ಆಸ್ತಿಯಲ್ಲಿ ಪ್ರಥಮ ಆದ್ಯತೆ ಎಂದು ಇದ್ದರೂ, ಕಲಂ 33ಸಿ(2) ರನ್ವಯ ನೌಕರರ ಸಂಬಳಕ್ಕೆ ಮೊದಲ ಪ್ರಾಶಸ್ತ್ಯ ಇರುವುದರಿಂದ, ಬ್ಯಾಂಕಿಗೆ ಸಾಲಗಾರ ಸಂಸ್ಥೆಯ ಆಸ್ತಿ ಮಾರಾಟ/ಹರಾಜು ಮಾಡಿ ಬಂದ ಹಣದಿಂದ ಬ್ಯಾಂಕ್‌ನ ನೌಕರರ ಸಂಬಳ ಪಾವತಿ ಮೊದಲ ಪ್ರಾಶಸ್ತ್ಯ ನೀಡಬೇಕು. ಇದಕ್ಕೆ 1987 Indlaw SC 28750/1987 ll LLJ 1 ಅನ್ವಯ ಏಕ ಸದಸ್ಯ ಪೀಠ ಆದೇಶಿಸಿದೆ. ಕಾಯಿದೆ ಕಲಂ 32 ರನ್ವಯ ಯಾವುದೇ ಬಾಕಿ ವಸೂಲಾದಾಗ ಬ್ಯಾಂಕ್‌ಗೆ ಪ್ರಥಮ ಪ್ರಾಶಸ್ತ್ಯ ಇದೆ ಎಂದಿದ್ದರೂ, ಈ ಪ್ರಕರಣದಲ್ಲಿ ಈ ನ್ಯಾಯಾಲಯ ಸಹಕಾರ ಸಂಘದ ಬಾಕಿ/ಅರ್ಜಿದಾರ ಬ್ಯಾಂಕ್‌ನ ಪ್ರಾಶಸ್ತ್ಯದ ಬಗ್ಗೆ ಪ್ರಕರಣ ತೀರ್ಮಾನಕ್ಕೆ ಇಲ್ಲವಾದ್ದರಿಂದ, ಅದನ್ನು ಪರಿಶೀಲಿಸುವ ಅವಶ್ಯಕತೆ ಇಲ್ಲ. ಏಕ ಸದಸ್ಯ ಪೀಠದ ಆದೇಶವನ್ನು ಕಿತ್ತು ಹಾಕಿ ಅರ್ಜಿದಾರರು ಕೇಳಿದ ಪರಿಹಾರವನ್ನು ನೀಡಲಾಗಿದೆ. ಅಂದರೆ ಬ್ಯಾಂಕ್‌ಗೆ ಪ್ರಥಮ ಪ್ರಾಶಸ್ತ್ಯ ಇರತಕ್ಕದ್ದು. (2003 Indlaw Kar 369, 2003 (6) KLJ 15, 2003 (2) LLJ 595)

31. ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುವಾಗ, ಸಂಘದ ಹಣ ದುರುಪಯೋಗ ಮಾಡಿಕೊಂಡು, ತಾನು ಸಾರ್ವಜನಿಕ ಸೇವಕನಲ್ಲವಾದ್ದರಿಂದ – ಅಂದರೆ ಐ.ಪಿ.ಸಿ ಕಲಂ 409 ರಡಿಯಲ್ಲಿ – ಜವಾಬ್ದಾರನಲ್ಲವೆಂದು ವಾದಿಸಿದಾಗ ಐ.ಪಿ.ಸಿ ಕಲಂ 21 ಮತ್ತು ಸಹಕಾರ ಸಂಘಗಳ ಕಾಯಿದೆ ಕಲಂ 127ಎ ಅನ್ವಯ ಸಾರ್ವಜನಿಕ ಸೇವಕ ಎಂದು ತೀರ್ಮಾನಿಸಿತು ಮತ್ತು ಪ್ರೊಟೇಕ್ಷನ್

ಕಾಯಿದೆ ಅನ್ವಯವಾಗುವುದಿಲ್ಲ ಏಕೆಂದರೆ ಅವನ ವಯಸ್ಸು 21 ವರ್ಷಕ್ಕಿಂತ ಹೆಚ್ಚಾಗಿದೆ ಎಂದು ತೀರ್ಮಾನಿಸಿ, ಅದನ್ನು ತನ್ನ ಹೇಳಿಕೆಯಲ್ಲಿ ತಾನು ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿರುವುದನ್ನು ಒಪ್ಪಿಕೊಂಡಿದ್ದು, ಸಂಘದ ಸಮಸ್ಥ ಆಸ್ತಿ (ಚರ ಮತ್ತು ಸ್ಥಿರ) ತನ್ನ ಜವಾಬ್ದಾರಿ ಎಂದು ಒಪ್ಪಿಕೊಂಡಿದ್ದು ಹಾಗೂ ತಾನು ಕುಟುಂಬದ ದುಡಿಯುವ ಒಬ್ಬನೇ ಸದಸ್ಯ ಎಂದು ವಾಧಿಸಿದರೂ, ದುರುಪಯೋಗವಾದ ಹಣವನ್ನು ವಾಪಸ್ ತುಂಬಿರುವುದರಿಂದ, ದುರುಪಯೋಗವನ್ನು ಒಪ್ಪಿಕೊಂಡಂತೆ ಎಂದು ತೀರ್ಮಾನಿಸಿ, ಶಿಕ್ಷೇ ವಿಧಿಸಿರುವುದನ್ನು ದೃಡೀಕರಿಸಿದೆ. (2002 Indlaw Kar 74, 2002 CRLJ 2755, 2002 (5) KLJ 237)

32. ನೇಮಕಾತಿ ನಿಯಮಗಳನ್ನು ಪಾಲಿಸದೆ, ಅಂದರೆ ವಯಸ್ಸಿನ ಮಿತಿ ನಿಗದಿ ಪಡಿಸಿದಂತೆ ಮೀರಿ ನೇಮಿಸಲಾಗಿತ್ತು. ಆದ್ದರಿಂದ ಕೆಲಸದಿಂದ ತೆಗೆದು ಹಾಕಲಾಗಿತ್ತು. ಇದನ್ನು ಪ್ರಶ್ನಿಸಿದಾಗ ನ್ಯಾಯಾಧಿಕರಣ ಕಾರ್ಮಿಕ ಕಾಯಿದೆ ಕಲಂ 25ಫ್ ನ್ನು ಅನುಸರಿಸಿ, ಮರು ನೇಮಕ ಮಾಡಲು ಆದೇಶಿಸಿದ್ದನ್ನು ಬ್ಯಾಂಕ್ ಪ್ರಶ್ನಿಸಿದಾಗ, ಸಹಕಾರ ನಿಯಮದಲ್ಲಿ ಯಾವುದೇ ಸಹಕಾರ ಸಂಘ ನೇಮಕ ಮಾಡುವಾಗ, ನಿಗದಿ ಪಡಿಸಿದ ವಯಸ್ಸಿನ ಮಿತಿ ಪಾಲಿಸಬೇಕು. ಇಲ್ಲವಾದರೆ ನಿಬಂಧಕರ ಪೂರ್ವಾನುಮತಿ ಪಡೆದು ನೇಮಿಸಬೇಕು. ಈ ಪೂರ್ವಾನುಮತಿ ಪಡೆದಿಲ್ಲ. ಇದರ ಜೊತೆಗೆ ನೇರ ನೇಮಕಾತಿ ಮಾಡುವಾಗ ಅರ್ಜಿಯನ್ನು ಆಹ್ವಾನಿಸಿ ಪ್ರಕಟಿಸಿ, ನೇಮಕ ಮಾಡಬೇಕು – ಅದನ್ನು ಮಾಡಿಲ್ಲ. ಆಡಳಿತ ಮಂಡಳಿಗೆ ಪ್ರಕಟಣೆ ಹೊರಡಿಸದೇ ನೇಮಕ ಮಾಡಲು ಅವಕಾಶವಿಲ್ಲ ಮತ್ತು ಕಾರ್ಮಿಕ ಕಾಯಿದೆ 1.4.1947 ರಲ್ಲಿ ರಚನೆಯಾಗಿದೆ ಮತ್ತು ಸಹಕಾರ ಕಾಯಿದೆ 1.6.1960 ರಿಂದ ಜಾರಿಯಾಗಿದೆ. ರಾಜ್ಯ ಸರ್ಕಾರದ ಕಾಯಿದೆ ಊರ್ಜಿತ ವಾಗುತ್ತದೆ. (ಕೇಂದ್ರ ಕಾಯಿದೆಯಲ್ಲಿ) ಮತ್ತು ಸಹಕಾರ ಕಾಯಿದೆಯಡಿ ವಿವಾದ ಪರಿಹರಿಸಿಕೊಳ್ಳಲು ಅವಕಾಶ ಕಲ್ಪಿಸಿದ್ದು – ಕಾರ್ಮಿಕ ಕಾಯಿದೆಯಲ್ಲಿ ತೀರ್ಮಾನಿಸಲು ಬರುವುದಿಲ್ಲ. (2001 Indlaw Kar 127, 2002 (18) CLR 721, 2001 (6) KLJ 36, 2001 (34) Lablc 3578, 2002 (1) LLJ 684)

33. ಒಬ್ಬ ಕೆಲಸಗಾರನನ್ನು ಗೈರು ಹಾಜರಿ ಕಾರಣ ನೀಡಿ ಕೆಲಸದಿಂದ ತೆಗೆದು ಹಾಕಲಾಯಿತು ಮತ್ತು ರಜೆಯನ್ನು ಮಂಜೂರಿ ಮಾಡಿಸಿಕೊಳ್ಳದೆ ಗೈರು ಹಾಜರಿ ಆಧಾರದ ಮೇಲೆ ವಜಾಗೊಳಿಸಲಾಯಿತು. ಇದಕ್ಕೆ ಸ್ವಾಭಾವಿಕ ನ್ಯಾಯ ನೀತಿ ಅನ್ವಯ ಕಾರಣ ಕೇಳುವ ನೋಟೀಸ್ ಜಾರಿ ಮಾಡದೆ ತೆಗೆದು ಹಾಕಿದ್ದನ್ನು ಕಾರ್ಮಿಕ ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು ಮತ್ತು ತೆಗೆದು ಹಾಕಿದ ನಂತರ ಬರಬೇಕಾದ ವಜಾ ಸೌಲತ್ತುಗಳನ್ನು ನೀಡಿಲ್ಲ. ನೌಕರರ ನೇಮಕಾತಿ 28.4.1980 ರಷ್ಟು ಹಿಂದೆ ಸೇವೆಗೆ ಸೇರಿದ್ದರು. ಕಾರ್ಮಿಕ ನ್ಯಾಯಾಲಯದ ಬಾಗಿಲು ಮುಚ್ಚಿದಂತಲ್ಲ. ನ್ಯಾಯಾಲಯ ನೀಡಿದ ತೀರ್ಪು, ಆ ನೌಕರನ್ನು ಮರು ನೇಮಕ ಮಾಡಬೇಕು ಮತ್ತು ಹಿಂದಿನ ಸುಮಾರು 20 ವರ್ಷಗಳ ಸೇವೆ ನೀಡಬೇಕು ಎಂಬುದರ ಜೊತೆಗೆ ಸಹಕಾರ ನ್ಯಾಯಾಲಯದಲ್ಲಿ ಪರಿಹರಿಸಿಕೊಳ್ಳಬೇಕು ಎಂಬ ಕಾರಣದಿಂದ ಕೆಲಸಗಾರರ ಮನವಿ ತಿರಸ್ಕರಿಸಲಾಗದು. ಇದಕ್ಕೆ ಶ್ರೇಷ್ಠ ನ್ಯಾಯಾಲಯದ ತೀರ್ಪನ್ನು ಅನ್ವಯಿಸತಕ್ಕದ್ದು (1970 1 SCC 205/1970 Lablc 285/1996 Indlaw SC 2085) (2001 Indlaw Kar 78, 2002 (2) KLJ 6, 2001 (34) Lablc 2889)

34. ಅರ್ಜಿದಾರ ಬ್ಯಾಂಕ್ ಸಹಕಾರ ಕಾಯಿದೆಯಲ್ಲಿ ನೋಂದಾವಣೆಯಾಗಿದೆ. ನೌಕರನ್ನು ಕೆಲಸದಿಂದ ತೆಗೆದು ಹಾಕಿದಾಗ ಕಾರ್ಮಿಕ ಕಾಯಿದೆಯನ್ವಯ ಪ್ರಕರಣ ದಾಖಲಾಯಿತು. ಅರ್ಜಿದಾರರು ಈ ಪ್ರಕರಣ ನಿಬಂಧಕರು ಮಾತ್ರ ವಿಚಾರಣೆ ಮಾಡಬೇಕೆಂದು ವಾದ ಮಂಡಿಸಿತು. ಶ್ರೇಷ್ಠ ನ್ಯಾಯಾಲಯ 1996 Indlaw SC 2085 ಪ್ರಕರಣದಲ್ಲಿ ಸಹಕಾರ ಕಾಯಿದೆಯಲ್ಲಿ ಸ್ಪಷ್ಟವಾಗಿ ಅವಕಾಶ ಕಲ್ಪಿಸಿರುವುದರಿಂದ, ಇದು ಕಾರ್ಮಿಕ ನ್ಯಾಯಾಲಯದಲ್ಲಿ ಬರುವುದಿಲ್ಲ ಎಂದು

ತೀರ್ಮಾನಿಸಿದೆ. ಸಹಕಾರ ಕಾಯಿದೆಯಡಿ ಸಮಗ್ರವಾಗಿ ಅವಕಾಶ ಕಲ್ಪಿಸಿದ್ದು, ಕಾರ್ಮಿಕ ನ್ಯಾಯಾಲಯದ ಕಾರ್ಯ ವ್ಯಾಪ್ತಿ ಕಿತ್ತುಹಾಕಿದ್ದು, ಕಾರ್ಮಿಕರು ಪರಿಹಾರ ಕೇಳಬೇಕೆಂದರೆ ಸಹಕಾರ ನ್ಯಾಯಾಲಯಕ್ಕೆ ದಾಖಲಿಸಬೇಕೆಂದು ತೀರ್ಮಾನಿಸಿತು. (ವೀರಶೈವ ಸಹಕಾರ ಬ್ಯಾಂಕ್ ಪ್ರಕರಣ) (2000 Indlaw Kar 135, 2001 (34) Lablc 269, 2001 (1) LLJ 980)

35. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರು ಶೇ.33% ಬೋನಸ್ ಪಾವತಿಸುವಂತೆ ಸಾಮಾನ್ಯ ಸೇವಾ ಪ್ರಾಧಿಕಾರಕ್ಕೆ ಅರ್ಜಿ ಕೊಟ್ಟಾಗ, ಕಾರ್ಮಿಕ ನ್ಯಾಯಾಲಯ ಕನಿಷ್ಠ 33% ಬೋನಸ್ ಪಾವತಿಸಲು ಆದೇಶ ಹೊರಡಿಸಿತ್ತು. ಇದನ್ನು ಬ್ಯಾಂಕ್ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಈ ನ್ಯಾಯಾಲಯ ಮೊದಲು ಕಾರ್ಮಿಕ ನ್ಯಾಯಾಲಯ ಆದೇಶ ಮಾಡುವ ಮೊದಲು ಪರಿಶೀಲಿಸಬೇಕಾದ ಅಂಶ – ಅರ್ಜಿದಾರರು ಕಾರ್ಮಿಕರೇ ಮತ್ತು ಅವರು ಕಾರ್ಮಿಕ ಕಾಯಿದೆಗೆ ಒಳಪಡುತ್ತಾರೆ ಎಂಬುದನ್ನು ಮರು ಪರಿಶೀಲಿಸಲು ಆದೇಶಿಸಿತು. ಇದನ್ನು ಪ್ರಶ್ನಿಸಿ ಬ್ಯಾಂಕ್ ರಿಟ್ ಮೇಲ್ಮನವಿ ಸಲ್ಲಿಸಿದಾಗ. ಕಾರ್ಮಿಕ ನ್ಯಾಯಾಲಯ ದೊಡ್ಡ ತಪ್ಪನ್ನು ಮಾಡಿದೆ ಏಕೆಂದರೆ, ಅರ್ಜಿದಾರರ ನೌಕರರು ಸಹಕಾರ ಸಂಘಗಳ ಕಾರ್ಯದರ್ಶಿಗಳಾಗಿ ಕೆಲಸ ನಿರ್ವಹಿಸುತ್ತಿದ್ದು, ಅವರು ಮೇಲ್ವಿಚಾರಣೆ ಅಧಿಕಾರ ಹೊಂದಿದ್ದು, ಅದನ್ನು ಕಾರ್ಮಿಕರು ಎಂದು ತಿಳಿಯತಕ್ಕದ್ದಲ್ಲ. ಏಕ ಸದಸ್ಯ ಪೀಠ ಇದನ್ನು ಮರು ವಿಚಾರಣೆಗೆ ಕಾರ್ಮಿಕ ನ್ಯಾಯಾಲಯಕ್ಕೆ ವಾಪಸ್ ಹಾಕಬೇಕಾಗಿರಲಿಲ್ಲ. ಆದ್ದರಿಂದ ಅರ್ಜಿದಾರ ನೌಕರರ ಪರಿಹಾರ ನೀಡಲು ಕಾರ್ಮಿಕ ನ್ಯಾಯಾಲಯದ ಆದೇಶ ಕಿತ್ತು ಹಾಕಿ, ಮೇಲ್ಮನವಿಯನ್ನು ಪುರಸ್ಕರಿಸಿ ಆದೇಶ ನೀಡಲಾಯಿತು. (2000 Indlaw Kar 117, 2001 (1) CLR 964, 2000 (8) KLJ 422, 2000 (33) Lablc, 2001 (1) LLJ 655)

36. ಸಹಕಾರ ಸಂಘದ ನೇಮಕಾತಿ ಮಾಡುವಾಗ, ಸಹಕಾರ ಸಂಘಗಳ ಕಾಯಿದೆಯಲ್ಲಿನ ನೀತಿ ನಿಯಮಗಳನ್ನು ರೂಪಿಸಿದೆ. ಉಪನಿಯಮಗಳು ಜಾರಿಯಲ್ಲಿದೆ. ಆರು ತಿಂಗಳ ಅವಧಿಗೆ ಹಂಗಾಮಿ ನೇಮಕ ಮಾಡಿಕೊಂಡ ನೌಕರರನ್ನು ಅವಧಿ ನಂತರ ಬಿಡುಗಡೆ ಮಾಡಿದನ್ನು ಮತ್ತು ಮತ್ತೊಂದು ಹಂಗಾಮಿಗೆ ನೇಮಕ ಮಾಡಲು ನಿರಾಕರಿಸಿದ್ದಕ್ಕೆ ಕಾರ್ಮಿಕ ನ್ಯಾಯಾಲಯದ ಮೊರೆ ಹೋದಾಗ ಸಹಕಾರ ಸಂಘಗಳ ಕಾಯಿದೆಯಲ್ಲಿ ಪರಿಹಾರ ಕೇಳಲು ಅವಕಾಶ ಇರುವುದರಿಂದ, ಕಾರ್ಮಿಕ ಕಾಯಿದೆ ಅನ್ವಯವಾಗುವುದಿಲ್ಲ. ಇದಕ್ಕೆ ಶ್ರೇಷ್ಠ ನ್ಯಾಯಾಲಯದ ತೀರ್ಪು 1999 Indlaw SC 1022 ಅನ್ವಯವಾಗುತ್ತದೆ. (2000 Indlaw Kar 126, 2000 (8) KLJ 252, 2001 (34) Lablc 165)

37. ಕಾರ್ಮಿಕ ನ್ಯಾಯಾಲಯ 34 ಕೆಲಸಗಾರರಿಗೆ ಕೂಡಬೇಕಾದ ಹಣದ ಪ್ರಮಾಣವನ್ನು ನಿರ್ಧರಿಸಿ ಪಾವತಿ ಮಾಡಲು ಆದೇಶಿಸಿದ ನಂತರ, ಕಲಂ 33ಸಿ ರಂತೆ ವಸೂಲಾತಿಗೆ ಕ್ರಮ ಜರುಗಿಸಿ ಕಂದಾಯ ಬಾಕಿ ಎಂದು ಆದೇಶಿಸಿತು. ಈ ಮಧ್ಯೆ ಸಹಕಾರ ಬ್ಯಾಂಕ್, ಬಾಕಿ ವಸೂಲಿಗಾಗಿ ಕಲಂ 70 ರನ್ವಯ ಡಿಕ್ರಿ ಪಡೆದು ಮಾರಾಟ ಮಾಡುವ ಸಂದರ್ಭದಲ್ಲಿ 34 ಕೆಲಸಗಾರರಲ್ಲಿ 10 ಕೆಲಸಗಾರರು ವಸೂಲಾದ ಹಣದಲ್ಲಿ ಮೊದಲ ಪ್ರಾಶಸ್ತ್ಯ ನೌಕರರಿಗೆ ಕೊಡಬೇಕು ಎಂದು ಕೇಳಿದಾಗ ಕಾರ್ಮಿಕರಿಗೆ ಕೊಡಬೇಕಾದ ಪರಿಹಾರ ಪಾವತಿ ಮಾಡಿದ ನಂತರ ಉಳಿದ ಹಣವನ್ನು ಬ್ಯಾಂಕ್ ತನ್ನ ಸಾಲಕ್ಕೆ ಜಮಾ ಪಡೆಯತಕ್ಕದ್ದು ಎಂದು ಆದೇಶಿಸಿತು ಇದಕ್ಕೆ 1987 II LLJ 1/1994 II LLJ 303 ಅನ್ನು ಅನ್ವಯಿಸಿತು. (1999 Indlaw Kar 232, 1999 (6) KLJ 347, 2000 (1) LLJ 859)

38. ಅರ್ಜಿದಾರರು ಸೇವೆಗೆ ಸೇರಿದಾಗ ಅವರ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಅಥವಾ ಪಿಯುಸಿ ಇದ್ದು, ಅವರು ಡಿಗ್ರಿ ಪಡೆದಿರಲಿಲ್ಲ. ಭಡ್ತಿ ಕೊಡುವ ಸಂದರ್ಭದಲ್ಲಿ, ವಿದ್ಯಾರ್ಹತೆಯನ್ನು ಡಿಗ್ರಿ ಎಂದು ನಿಗದಿ ಪಡಿಸಿ, ಭಡ್ತಿ ನಿರಾಕರಿಸಿರುವುದು ತಪ್ಪು ಎಂದು ಪ್ರಶ್ನಿಸಿದರು ಸರ್ಕಾರದ ಆದೇಶದನ್ವಯ

ವಿದ್ಯಾರ್ಹತೆಯಾಗಿರಬೇಕೆಂದು ನಿಗದಿ ಪಡಿಸಿದೆ. ಇದು ಅರ್ಜಿದಾರರ ಭಡ್ತಿಗೆ ತಡೆಯೊಡ್ಡಿದೆ. ಏಕೆಂದರೆ ಬ್ಯಾಂಕಿನ ಮಧ್ಯಂತರ ಭಡ್ತಿ ಹೊಂದಲು ಆಗುವುದೇ ಇಲ್ಲ. ಭಡ್ತಿ ಸಂದರ್ಭದಲ್ಲಿ ಅಭ್ಯರ್ಥಿಗಳು ಯಾವುದೇ ವಿಭಾಗದ ಡಿಗ್ರಿ ಪಡೆದಿದ್ದರೂ ಅವರು ನಿರ್ವಹಿಸಬೇಕಾದ ಶಾಖಾ ವ್ಯವಸ್ಥಾಪಕರ ಕೆಲಸ ನಿರ್ವಹಿಸಬಹುದು. ಧೀರ್ಘಾವದಿ ಸೇವೆ ಸಲ್ಲಿಸಿದ ನಂತರ ಮಧ್ಯಂತರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ಡಿಗ್ರಿ ಅವಶ್ಯಕವೆಂದು ನಿಗದಿ ಪಡಿಸಿದಾಗ – ಈ ವಿದ್ಯಾರ್ಹತೆ ನಿಗದಿ ಪಡಿಸಿರುವುದನ್ನು ಇದು ಅನಾವಶ್ಯಕ ಹೆಚ್ಚುವರಿ ವಿದ್ಯಾರ್ಹತೆ ಎಂದು ತಿಳಿಯತಕ್ಕದ್ದಲ್ಲ. ಅರ್ಜಿದಾರರು ಈ ವಿದ್ಯಾರ್ಹತೆಗಳ ಗಳಿಸದಿದ್ದರೆ ಭಡ್ತಿಗೆ ಅರ್ಹತೆ ಇಲ್ಲ. (2015 Indlaw Kar 294)

39. ಒಬ್ಬ ನೌಕರನ ಮೇಲೆ ಶಿಸ್ತು ಕ್ರಮಕೈಗೊಂಡು, ವಿಚಾರಣಾ ವರದಿ ಆಧಾರದ ಮೇಲೆ ಸೇವೆಯಿಂದ ವಜಾಗೊಂಡಾಗ, ಕಲಂ 70ರ ದಾವಾ ಪ್ರಕರಣದಲ್ಲಿ ಮರು ನೇಮಕ ಮಾಡಲು ಆದೇಶಿಸಿತ್ತು ಮತ್ತು ಮರು ವಿಚಾರಣೆಗೆ ಆದೇಶಿಸಿತ್ತು. ಕರ್ನಾಟಕ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿದಾಗ, ಅರ್ಜಿಯನ್ನು ವಜಾ ಮಾಡಿತು. ಆ ಆದೇಶದ ಮೇಲೆ ರಿಟ್ ಅರ್ಜಿ 33126/2004 ರಲ್ಲಿ ಪ್ರಾಧಿಕಾರದ ಆದೇಶವನ್ನು ದೃಡೀಕರಿಸಿತು. ಈ ಮಧ್ಯ ಸಂಬಂಧಪಟ್ಟ ನೌಕರರು ನಿವೃತ್ತಿಯಾದ್ದರಿಂದ, ಸೇವಾ ಮುಕ್ತಾಯದ ನಿವೃತ್ತಿಯಾದರು. ಇದಾದ ನಂತರ ಸಹಾಯಕ ನಿಬಂಧಕರ ಮಾಡಿದ ಮರು ವಿಚಾರಣೆ ಆದೇಶ ಜಾರಿಗೆ ಕಲಂ 101 ರಲ್ಲಿ ಅರ್ಜಿ ಸಲ್ಲಿಸಿದಾಗ ಸಿವಿಲ್ ನ್ಯಾಯಾಲಯ, ಈ ಜಾರಿ ಆದೇಶ ಊರ್ಜಿತವಲ್ಲವೆಂದು ತೀರ್ಪಿತ್ತಿತು. ಇದನ್ನು ರಿಟ್ ಅರ್ಜಿ 14160/2010 ರಲ್ಲಿ ಪ್ರಶ್ನಿಸಿದಾಗ, ಸಿವಿಲ್ ಕೋರ್ಟಿನ ಆದೇಶವನ್ನು ಎತ್ತಿ ಹಿಡಿಯಿತು. ಹಾಗೂ ನಿಬಂಧಕರ ನ್ಯಾಯಾಲಯ ಕಲಂ.101(1)(9) ಅನ್ವಯ ಯಾವ ಅಧಿಕಾರಿ ಜಾರಿ ಮಾಡಬೇಕೆಂದು ಆದೇಶಿಸಿದ್ದರೂ, ಆ ವ್ಯಕ್ತಿ ಜಾರಿ ಮಾಡಲು ಹಕ್ಕುಳ್ಳವನಾಗಿದ್ದಾರೆ. ಆದ್ದರಿಂದ ಸಿವಿಲ್ ನ್ಯಾಯಾಲಯ ಕೊಟ್ಟ ತೀರ್ಪು ನ್ಯಾಯ ಸಮ್ಮತವಾಗಿದೆ. (2010 Indlaw Kar 390, 2010 (5) KLJ 574)

40. ಅರ್ಜಿದಾರ ನಿವೃತ್ತಿಯಾಗಿ ಮೂರು ವರ್ಷಗಳಾದರೂ ನಿವೃತ್ತಿ ಸೌಲಭ್ಯ ಕೊಟ್ಟಿಲ್ಲವೆಂದು ರಿಟ್ ಅರ್ಜಿ ದಾಖಲಿಸಿದಾಗ ಏಕ ಸದಸ್ಯ ಪೀಠ ಸಹಕಾರ ಕಾಯಿದೆಯಲ್ಲಿ ಪರಿಹಾರ ಕಂಡು ಕೊಳ್ಳಲು ಆದೇಶಿಸಿ ರಿಟ್ ತಿರಸ್ಕರಿಸಿದ್ದರು. ಇದನ್ನು ಪ್ರಶ್ನಿಸಿ ರಿಟ್ ಮೇಲ್ಮನವಿಸಲ್ಲಿಸಲಾಗಿದೆ. ನಿವೃತ್ತಿಗೆ ಮೊದಲು ನೌಕರನಿಗೆ ಹಣ ದುರುಪಯೋಗದ ಬಗ್ಗೆ ಕಾರಣ ಕೇಳುವ ನೋಟೀಸ್ ನೀಡಿದ್ದು, ಅರ್ಜಿದಾರ ಉತ್ತರದಲ್ಲಿ ದುರುಪಯೋಗ ಮಾಡಿಲ್ಲವೆಂಬ ಕಾರಣ ನೀಡಿದ್ದರು. ರಿಟ್ ಮೇಲ್ಮನವಿ ವಿಚಾರಣೆ ಸಮಯದಲ್ಲಿ ಅರ್ಜಿದಾರ ಹಣ ದುರುಪಯೋಗದಲ್ಲಿ ಭಾಗಿಯಾಗಿಲ್ಲವೆಂದು ವರದಿ ಬಂದ ನಂತರ, ನಿವೃತ್ತಿ ಪರಿಹಾರ ನೀಡಲಾಗುವುದು ಎಂದು ತಿಳಿಸಿದ್ದರಿಂದ, ಏಕ ಸದಸ್ಯ ಪೀಠ ಮಾಡಿದ ಆದೇಶದಲ್ಲಿ ಯಾವುದೇ ನ್ಯೂನತೆ ಇಲ್ಲವೆಂದು ಆದೇಶಿಸಿತು. (2009 Indlaw Kar 153, 2009 (5) KLJ 441)

41. ಒಬ್ಬ ನೌಕರರನ್ನು 1961 ರಲ್ಲಿ ಬಿಲ್ ಕಲೆಕ್ಟರ್ ಎಂದು ನೇಮಿಸಿ, 1966ರಲ್ಲಿ ಗುಮಾಸ್ತಿನೆಂದು ಭಡ್ತಿ ನೀಡಿತು. ಆ ನಂತರ ಸಹಕಾರ ತರಬೇತಿಗೂ ನೇಮಿಸಿತು. ಆದರೆ ನಿಯಮ 17ಬಿ ಅನ್ವಯ ವಿದ್ಯಾರ್ಹತೆ ಇರಲಿಲ್ಲ ಗುಮಸ್ತನಿಗೆ ಎಸ್.ಎಸ್.ಎಲ್.ಸಿ ಮತ್ತು ಡಿಪ್ಲೊಮಾ ಅವಶ್ಯಕತೆ ಎಂದು ನಿಗದಿ ಪಡಿಸಿದ್ದು, ಅದು ಭಡ್ತಿ ನೀಡುವಾಗ ಅನ್ವಯಿಸುವುದಿಲ್ಲ ಎಂಬುದಕ್ಕೆ ನಿಯಮ ಅಥವಾ ಉಪನಿಯಮದ ಅವಕಾಶ ಇಲ್ಲದೇ ಇರುವುದರಿಂದ, ನಿಯಮ 17ರಲ್ಲಿ ನಿಗದಿ ಪಡಿಸಿದ ವಿದ್ಯಾರ್ಹತೆ ಭಡ್ತಿ ನೀಡುವಾಗಲೂ ಅವಶ್ಯಕ. ಅರ್ಜಿದಾರ ತನ್ನ ನೇಮಕಾತಿ/ಭಡ್ತಿಯನ್ನು ಯಾವ ರೀತಿ ನೀಡಬೇಕೆಂದು ನಿರ್ಧರಿಸುವ ಅಧಿಕಾರ ಇಲ್ಲ ಸಹಕಾರ ಸಂಘ ಸರ್ಕಾರಿ ಸೌಮ್ಯದ

ಸಂಸ್ಥೆಯಲ್ಲಿ ವಾದ್ದರಿಂದ ರಿಟ್ ಅರ್ಜಿ ಊರ್ಜಿತವಲ್ಲ. (1979 Indlaw Kar 8, 1980 (1) LLJ 95)

42. ಮಧ್ಯಪ್ರದೇಶ ರಾಜ್ಯ ಸಹಕಾರ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರು, ನಿಬಂಧಕರಿಗೆ ಒಂದು ಮನವಿ ಸಲ್ಲಿಸಿ 60 ಗುಮಾಸ್ತರು ಕಂ ಟೈಪಿಸ್ಟ್ ನೇಮಕ ಮಾಡಿಕೊಳ್ಳಲು ಮನವಿ ಸಲ್ಲಿಸಿದರು. ನಿಬಂಧಕರು ಪ್ರಾರಂಭದಲ್ಲಿ 40ಕ್ಕೆ ಒಪ್ಪಿಗೆ ಕೊಟ್ಟು, ಆ ನಂತರ ಮತ್ತೆ 20 ಜನರ ನೇಮಕಕ್ಕೆ ಒಪ್ಪಿಗೆ ನೀಡಿದರು. ಆದರೆ ನೇಮಕಾತಿ ತಾತ್ಪೂರ್ವಿಕವಿದ್ದು ಆರು ತಿಂಗಳ ಅವಧಿ ನಿಗದಿ ಪಡಿಸಿದರು. 6 ತಿಂಗಳ ಅವಧಿಯಲ್ಲಿ ಇಬ್ಬರು ನೌಕರರು ರಾಜೀನಾಮೆ ನೀಡಿದರು ಮತ್ತು ಬ್ಯಾಂಕ್ ಇನ್ನು ಒಂದು ವರ್ಷದ ಸೇವೆಗೆ ಲಿಖಿತ ಪರೀಕ್ಷೆಗೆ ಹಾಜರಾಗಲು ತಿಳಿಸಿ, ಒಂದು ವರ್ಷದ ಸೇವೆ ಎಂದು ತಿಳಿಸಿದರು. ವ್ಯವಸ್ಥಾಪಕ ನಿರ್ದೇಶಕರು 27.10.1997 ರಂದು, ನಿಬಂಧಕರ ಆದೇಶದಂತೆ, ಎಲ್ಲಾ ನೌಕರರನ್ನು ವಜಾ ಮಾಡಿದರು – ಅದಕ್ಕಾಗಿ ಈ ರಿಟ್ ಅರ್ಜಿ. ಈ ಮಧ್ಯ ನೌಕರರ ವಜಾ ಮಾಡಲು, ನೇಮಕಾತಿ ಅಕ್ರಮಗಳ ಬಗ್ಗೆ ಲೋಕಾಯುಕ್ತರಿಂದ ವಿಚಾರಣಾ ವರದಿಯಲ್ಲಿ ಅಕ್ರಮಗಳ ಸಾಬೀತಾಗದ್ದರೆಂದ ಮಾಡಲಾಗಿತ್ತು. ಇದಕ್ಕೆ ಶ್ರೇಷ್ಠ ನ್ಯಾಯಾಲಯ ಉಚ್ಚ ನ್ಯಾಯಾಲಯ, ನಿಬಂಧಕರ ಮರು ಪರಿಶೀಲನೆಗೆ ಮಾಡಿದ್ದು ಆದೇಶವನ್ನು ರದ್ದು ಮಾಡಿ, ವ್ಯವಸ್ಥಾಪಕ ನಿರ್ದೇಶಕರು, ನಿಬಂಧಕರು ಮತ್ತು ಲೋಕಾಯುಕ್ತ ವರದಿಯ ಮೇಲೆ ತೆಗೆದುಕೊಂಡ ಕ್ರಮವನ್ನು ಅನೂರ್ಜಿತಗೊಳಿಸಿದರು ಮತ್ತು ಉಚ್ಚನ್ಯಾಯಾಲಯದ ತೀರ್ಪನ್ನು ಕಿತ್ತು ಹಾಕಿದ ನಂತರ, ನೌಕರರು ತನ್ನ ಸ್ಥಾನವನ್ನು ಉಳಿಸಿಕೊಂಡಿದ್ದಾರೆಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (2007 Indlaw SC 954, (2007) 8 SCC 264, AIR 2007 SC (Supp) 932)

43. ಮಹಾರಾಷ್ಟ್ರ ಕಾಯಿದೆಯಲ್ಲಿ ಒಂದು ಸಹಕಾರ ಬ್ಯಾಂಕ್ ತನ್ನ 11 ನೌಕರರನ್ನು ವರ್ಗ ಮಾಡಿದಾಗ, ಅದು ಬಹುರಾಜ್ಯ ಸಹಕಾರ ಕಾಯಿದೆಯಲ್ಲಿ ನೋಂದಾವಣೆ ಆಗಿರುವುದರಿಂದ, ಈ ಪ್ರಕರಣ ಕೇಂದ್ರ ಸರ್ಕಾರದ ಸಹಕಾರ ನಿಬಂಧಕರ ಮುಂದೆ ದಾಖಲಿಸಬೇಕೆಂಬ ಮನವಿಗೆ ಜಾಧ್ಯೋಗಿಕ ನ್ಯಾಯಾಲಯ ತೀರ್ಮಾನಿಸಿದ್ದನ್ನು ಪ್ರಶ್ನಿಸಿ, ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿದಾಗ, ಸಹಕಾರ ಬ್ಯಾಂಕ್, ಬ್ಯಾಂಕಿಂಗ್ ಕಾಯಿದೆಯಡಿ "ಬ್ಯಾಂಕಿಂಗ್ ಕಂಪನಿ" ಎಂದು ಅರ್ಥ ವಿವರಣೆಗೆ ಬರುವುದಿಲ್ಲವೆಂದು ತೀರ್ಮಾನಿಸಿ ಜಾದ್ಯೋಗಿಕ ನ್ಯಾಯಾಲಯಕ್ಕೆ ವರ್ಗಾಯಿಸಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಿತು. (2007 Indlaw SC 1008, (2007) 2 SCC (L and S) 82, AIR 2007 SC 2320)

44. ಆಂದ್ರಪ್ರದೇಶ ಎಣ್ಣೆ ಉತ್ಪಾದಕರ ಮಹಾಮಂಡಳ, ಸ್ವಯಂ ನಿವೃತ್ತಿ ಯೋಜನೆಯಡಿ, ಹೆಚ್ಚುವರಿ ಸಿಬ್ಬಂದಿಯನ್ನು ನಿವೃತ್ತಿಗೊಳಿಸಿದಾಗ, ಅಂದರೆ 322 ನೌಕರರಲ್ಲಿ 163 ನೌಕರರು ಹೆಚ್ಚಿಗೆ ಇರುವುದೆಂದು, ಈ ಯೋಜನೆ ರೂಪಿಸಿದರು. (ಅಂದರೆ 159 ನೌಕರರು ಮಾತ್ರ ಒಪ್ಪಿಗೆ ನೀಡಿದ ಹುದ್ದೆಗಳೆಂದು) 163 ರಲ್ಲಿ 26 ನೌಕರರನ್ನು ಹೊರತು ಪಡಿಸಿ, ಖಾಯಂ ನಿವೃತ್ತಿ ಒಪ್ಪಿದರು, ಮತ್ತು 26 ನೌಕರರು ನ್ಯಾಯಾಲಯದ ಮೆಟ್ಟಿಲು ಹತ್ತಿದರು. ಅದರಲ್ಲಿ ಈ ರಿಟ್‌ನಲ್ಲಿ 6 ಜನರು ಮಾತ್ರ ಇದ್ದಾರೆ. ಇದರಲ್ಲಿ ತೀರ್ಮಾನಿಸಬೇಕಾದ ಅಂಶ ಮಹಾಮಂಡಳದವರು ರೂಪಿಸಿದ ನೀತಿ ಮತ್ತು ಒಕ್ಕೂಟಗಳು ಮುಂಬಡ್ತಿ ಮೂಲಕ ಭಡ್ತಿ ನೀಡಿದ ನೀತಿಯನ್ನು ಪರಿಶೀಲಿಸಿ. ಸೇವೆಯು ಪ್ರಾರಂಭದಲ್ಲಿ ನೇಮಕವಾದ ನೌಕರರ ಜೇಷ್ಠತೆ ಆಧಾರದ ಮೇಲೆ ಭಡ್ತಿ ನೀಡಬೇಕು – ಮಹಾಮಂಡಳದ ನೇಮಕಾತಿ ಸಂಬಂಧದ ಹಿರಿತನ ಪರಿಗಣಿಸಬೇಕು. ಒಕ್ಕೂಟ ನೀಡಿದ ಮುಂಬಡ್ತಿ ದಿನಾಂಕದಿಂದ ಅಲ್ಲ. ಮಹಾಮಂಡಳದ ಮೇಲ್ಮನವಿಯನ್ನು ತಿರಸ್ಕರಿಸಿತು. (2007 Indlaw SC 209, (2007) 13 SCC 320)

45. ಮಧ್ಯಪ್ರದೇಶ ಸಹಕಾರ ಕಾಯಿದೆಯಡಿ, ನಿಬಂಧಕರಿಗೆ ನೇಮಕಾತಿ ನಿಯಮಗಳನ್ನು ರೂಪಿಸುವ ಅಧಿಕಾರದ ಬಗ್ಗೆ ರಿಟ್ ಮೂಲಕ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯ, ನಿಬಂಧಕರಿಗೆ ಅಧಿಕಾರ ಇಲ್ಲ ಎಂದು ತೀರ್ಮಾನಿಸಿದ್ದನ್ನು, ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, 1994ರ ತಿದ್ದುಪಡಿ ನಂತರ ಕಲಂ 55 ರಡಿ ನಿಬಂಧಕರು ನಿಯಮಗಳನ್ನು ರೂಪಿಸಲು ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ನೇಮಕಾತಿಯಲ್ಲಿ ಮೀಸಲಾತಿ ನೀಡಲು ಅಧಿಕಾರ ಇದೆ ಎಂದು ತೀರ್ಮಾನಿಸಿತು. ಆದರೆ ಸರ್ಕಾರದ ಪಾಲು ಬಂಡವಾಳ ಶೇ.51% ಕ್ಕಿಂತ ಹೆಚ್ಚಿದ್ದರೆ ಮಾತ್ರ ನಿಯಮಗಳನ್ನು ರೂಪಿಸಬಹುದು. ಸರ್ಕಾರದ ಸಹಾಯ ಧನ 51% ಕ್ಕಿಂತ ಕಡಿಮೆ ಇದ್ದರೆ, ಈ ಮೀಸಲಾತಿ ನಿಯಮ ಅನ್ವಯಿಸುವುದಿಲ್ಲ. (2007 Indlaw SC 138, (2007) 12 SCC 529, AIR 2007 SC (Supp) 540)

46. ಪಂಜಾಬ್ ಸಹಕಾರ ಕಾಯಿದೆಯಡಿ, ಒಂದು ಸಕ್ಕರೆ ಕಾರ್ಖಾನೆಯಲ್ಲಿ ಹಂಗಾಮಿನ ಕೆಲಸ ನಿರ್ವಹಿಸುವ ನೌಕರರಲ್ಲಿ ಒಬ್ಬರನ್ನು ನೇಮಿಸಿಕೊಳ್ಳಲಿಲ್ಲವೆಂದು, ಕಾರ್ಮಿಕ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಕಾರ್ಮಿಕ ನ್ಯಾಯಾಲಯ, ಅರ್ಜಿ ದಾರನಿಗಿಂತ ಕಿರಿಯರನ್ನು ನೇಮಿಸಲು ಮತ್ತು ಹಿಂದಿನ ಸಂಬಳ ನೀಡಲು ಆದೇಶಿಸಿದ ನಂತರ, ರಿಟ್ ಅರ್ಜಿ ದಾಖಲಿಸಿದ ಕಾರ್ಖಾನೆ ಪ್ರಶ್ನಿಸಿದಾಗ ಕಾರ್ಖಾನೆ ಅವಹಾಲು ಕೇಳಿ, ಅರ್ಜಿದಾರನ ವಿರುದ್ಧ ವಿಚಾರಣೆ ನಡೆಯುತ್ತಿದ್ದು, ಅವನನ್ನು ನೇಮಿಸಿಲ್ಲವೆಂದು ತೀರ್ಮಾನಿಸಿದ್ದನ್ನು, ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿತು. ಅದಕ್ಕೆ ವಿವಿದ ತೀರ್ಪುಗಳನ್ನು ಉಲ್ಲೇಖಿಸಿ, ಉಚ್ಚನ್ಯಾಯಾಲಯದ ತೀರ್ಮಾನವನ್ನು ಎತ್ತಿಹಿಡಿಯಿತು. (2006 Indlaw SC 842, (2006) 13 SCC 28, AIR 2007 SC 288)

47. ಹರ್‍ಯಾನ ಸಹಕಾರ ಕಾಯಿದೆಯಡಿ – ಒಂದು ಸಕ್ಕರೆ ಕಾರ್ಖಾನೆಯಲ್ಲಿ ಒಬ್ಬ ಲೆಕ್ಕಪತ್ರ ನಿರ್ವಹಣೆ ಮಾಡುವ ಸಂದರ್ಭದಲ್ಲಿ, ಆ ನೌಕರನ ಮೇಲೆ ಎರಡು ಆರೋಪ ಪಟ್ಟಿಯನ್ನು ನೀಡಲಾಯಿತು ಮತ್ತು ವಿಚಾರಣಾಧಿಕಾರಿ ನೇಮಿಸಿತು. ವಿಚಾರಣಾ ವರದಿ ಮೇಲೆ ಆ ನೌಕರನನ್ನು ಸೇವೆಯಿಂದ ವಜಾ ಮಾಡಿತು. ನಿಬಂಧಕರ ಮುಂದೆ ಪ್ರಶ್ನಿಸಿದಾಗ ಅರ್ಜಿಯನ್ನು ವಜಾ ಮಾಡಿದರು, ಪುನರ್ ವಿಮರ್ಷೆ ಅರ್ಜಿಯನ್ನು ಸರ್ಕಾರದ ಮುಂದೆ ಸಲ್ಲಿಸಿದಾಗ, ಮನವಿಯನ್ನು ಮನ್ನಿಸಿ ಆದೇಶಿಸಿದ್ದನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಆ ಅರ್ಜಿಯನ್ನು ವಜಾ ಮಾಡಿತು. ಇದರ ಮೇಲೆ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯದ ತೀರ್ಪನ್ನು ಕಿತ್ತುಹಾಕಿ, ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶ ಇರಲಿಲ್ಲವೆಂಬುದನ್ನು ತೀರ್ಮಾನಿಸಬೇಕಾಗಿತ್ತು. ಮರು ನೇಮಕಾತಿ ಆದೇಶಕ್ಕೆ ಸರ್ಕಾರ ಆದೇಶಿಸುವ ಅಧಿಕಾರ ಇಲ್ಲ. ಆದ್ದರಿಂದ ಸಂವಿಧಾನದ ಅನುಚ್ಛೇದ 142 ರಡಿ, ನಿಬಂಧಕರು, ಮಧ್ಯಸ್ತಿಕೆ ಮಾಡಿ, ಹರ್‍ಯಾನ ಕಾಯಿದೆ ಕಲಂ 102 ರಡಿ ಅಧಿಕಾರ ಚಲಾಯಿಸಲು ನಿರ್ದೇಶಿಸಿತು. (2006 Indlaw SC 1405, (2006) 12 SCC 404, AIR 2007 SC 340)

48. ಉತ್ತರ ಪ್ರದೇಶ ಸಹಕಾರ ಕಾಯಿದೆಯಡಿ ಒಂದು ಸಹಕಾರ ಪ್ರಾಧಿಕಾರದ ನೌಕರನ ಮೇಲೆ ಶಿಸ್ತುಕ್ರಮದ ಪೂರಕ ಅಮಾನತ್ತು ಮಾಡಿ, ವಿಚಾರಣೆ ನಡೆಸಿ, ಸೇವೆಯಿಂದ ಬಿಡುಗಡೆ ಮಾಡಲು ತೀರ್ಮಾನಿಸಿದ್ದನ್ನು ಪ್ರಶ್ನಿಸಿ ರಿಟ್ ಅರ್ಜಿ ದಾಖಲಿಸಿದಾಗ, ಪರಿಶೀಲಿಸಬೇಕಾದ ಒಂದೇ ಪ್ರಶ್ನೆ ಎಂದರೆ, ಸಾಕಷ್ಟು ಅವಕಾಶ ನೀಡದೆ ಬಿಡುಗಡೆ ಮಾಡಿದ್ದು. ಈ ವಿಷಯದಲ್ಲಿ ಏಕ ಸದಸ್ಯ ಪೀಠ, ಅರ್ಜಿದಾರನಿಗೆ 10.07.1993 ರಂದು ನೋಟೀಸ್ ಕಳುಹಿಸಿದ್ದು, ದಿನಾಂಕ 02.10.1993, 09.10.1993 ಮತ್ತು 28.11.1993 ರಂದು ದೈನಿಕ್ ಜಾಗರಣ್ ಪತ್ರಿಕೆಯಲ್ಲಿ ಪ್ರಕಟಿಸಿತು. ಅರ್ಜಿದಾರರು ದಿನಾಂಕ 13.07.1993, 02.10.1993 ಮತ್ತು 28.11.1993 ರಂದು ಮೂರು ಆಂತರಿಕ ಅರ್ಜಿ ಸಲ್ಲಿಸಿದ್ದರು. ಸಾಕಷ್ಟು ಅವಕಾಶಗಳನ್ನು ನೀಡಿದ್ದು, ಹೆಚ್ಚುವರಿ ಅವಕಾಶಗಳ

ಅವಶ್ಯಕತೆ ಇಲ್ಲವೆಂದು ತೀರ್ಮಾನಿಸಿತು. ವಿಭಾಗೀಯ ಪೀಠ ಈ ತೀರ್ಪನ್ನು ನೀಡುವಾಗ 13.07.1993ರ ನೋಟೀಸ್ ನೀಡಿ ವಜಾಗೊಳಿಸಬಾರಬೇಕೆಂದು ಕೇಳಿದ್ದು, ಅದಕ್ಕೆ ಅವನು ಉತ್ತರಿಸಿಲ್ಲ ಮತ್ತು ಎರಡನೆಯದಾಗಿ, ಆದೇಶವನ್ನು ಕಲಂ 68 ರನ್ವಯ ವಜಾಗೊಳಿಸಲಾಗಿದೆ ಎಂದು ತಿಳಿಸಿರುವುದು ತಪ್ಪು, ಏಕೆಂದರೆ ನಿಬಂಧನೆ 68 ರಡಿ ವಜಾ ಮಾಡಲಾಗಿದೆ ಎನ್ನುವ ಬದಲು, ಕಲಂ 68 ಎಂದು ನಮೂದಿಸಿರುವುದು ತಪ್ಪು ಎಂದು ಆದೇಶಿಸಿತ್ತು. ಈ ವಿಷಯ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಏಕ ಸದಸ್ಯ ಪೀಠದ ಆದೇಶವನ್ನು ಎತ್ತಿ ಹಿಡಿದು, ಸಾಕಷ್ಟು ಅವಕಾಶಗಳನ್ನು ನೀಡಿದ್ದು ಯಾವುದೇ ನ್ಯೂನತೆ ಇಲ್ಲವೆಂದು ಆದೇಶಿಸಿ ವಿಭಾಗೀಯ ಪೀಠದ ಆದೇಶ ಕಿತ್ತು ಹಾಕಿತು. (2005 Indlaw SC 1334, (2005) 11 SCC 570)

49. ರಾಜಾಸ್ಥಾನ್ ಸಹಕಾರ ಕಾಯಿದೆಯಡಿ, ಒಂದು ಸಂಘ ನೌಕರನನ್ನು 56 ವರ್ಷ ತುಂಬಿದೆ ಮತ್ತು 27 ವರ್ಷ ಸೇವೆ ಸಲ್ಲಿಸಿದ್ದರೆಂದು ಖಾಯಂ ನಿವೃತ್ತಿಗೊಳಿಸಿದಾಗ ಅದನ್ನು ಪ್ರಶ್ನಿಸಿ ಅಪರ ನಿರ್ದೇಶಕರ ಮುಂದೆ ಪ್ರಕರಣ ದಾಖಲಿಸಿದಾಗ – ಅದನ್ನು ತಿರಸ್ಕರಿಸಿದರು ಮತ್ತು ಅದನ್ನು ಕಲಂ 128 ರನ್ವಯ ಊರ್ಜಿತವಲ್ಲವೆಂದು. ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿದಾಗ ಅದನ್ನು ಪುರಸ್ಕರಿಸಿದರು. ಆ ವಿಷಯವನ್ನು ರಿಟ್ ಅರ್ಜಿ ಮೂಲಕ ಪ್ರಶ್ನಿಸಿದಾಗ ಎರಡನೇ ಪುನರ್ ವಿಮರ್ಷೆ ಅರ್ಜಿ ಊರ್ಜಿತವೇ ಎಂಬುದನ್ನು ಏಕ ಸದಸ್ಯ ಪೀಠ ಊರ್ಜಿತವೆಂದು ಆದೇಶಿಸಿತು. ಅದನ್ನು ವಿಭಾಗೀಯ ಪೀಠಕ್ಕೆ ಸಲ್ಲಿಸಿದಾಗ, ಊರ್ಜಿತವಲ್ಲವೆಂದು ತೀರ್ಮಾನವನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಅದನ್ನು ಕಲಂ 124 ರಲ್ಲಿನ ನಿಬಂಧಕರ ಅಧಿಕಾರ ಮತ್ತು ಅಧ್ಯಾಯ XIII ರಲ್ಲಿನ ಅವಕಾಶಗಳು ಪ್ರತ್ಯೇಕವಿದ್ದು ಅದನ್ನು ಈ ಪ್ರಕರಣಕ್ಕೆ ಅನ್ವಯಿಸಲಾಗದು. ಏಕ ಸದಸ್ಯ ಪೀಠದ ಆದೇಶದಲ್ಲಿ ಯಾವುದೇ ನ್ಯೂನತೆ ಇಲ್ಲವೆಂದು ತೀರ್ಪಿತ್ತಿತು. (2005 Indlaw SC 6, (2005) SCC (L & S) 260, (2005) 2 SCC 334, AIR 2005 SC 773)

50. ಒಂದು ಪ್ರಾಥಮಿಕ ಭೂ ಬ್ಯಾಂಕಿನ ನೌಕರರು ಕೇಂದ್ರ ಭೂ ಬ್ಯಾಂಕಿನ ದರದಲ್ಲಿಯೇ ಬೋನಸ್ ಪಾವತಿ ನೀಡಲು ದಾಖಲಿಸಿದ ಪ್ರಕರಣದಲ್ಲಿ ಪ್ರಾಥಮಿಕ ಮತ್ತು ಕೇಂದ್ರ ಭೂ ಬ್ಯಾಂಕ್‌ಗಳು ಪ್ರತ್ಯೇಕ ನೋಂದಾಯಿಸಿದ್ದು, ಅವುಗಳ ಪ್ರತ್ಯೇಕ ಸಂಸ್ಥೆ ರೂಪದಲ್ಲಿದ್ದು, ಅವುಗಳ ಪ್ರತ್ಯೇಕ ಆರ್ಥಿಕ ತಃಖ್ತೆಗಳು ತಯಾರಾಗುತ್ತಿದ್ದು. ಬೋನಸ್ ಕಾಯಿದೆಯನ್ವಯ ಕನಿಷ್ಟ 8.33 ದರದಲ್ಲಿ ಪಾವತಿಸಲು ಬದ್ದತೆ ಇದ್ದು. ಹೆಚ್ಚುವರಿ ಬೋನಸ್ ಪಾವತಿಸಬೇಕಾದರೆ, ಆ ಸಂಘದ ಲಾಭಾಂಶ ವಿದ್ದಾಗ ಮಾತ್ರ ಹೆಚ್ಚುವರಿ ಬೋನಸ್ ಪಾವತಿಸಲು ಸಾಧ್ಯ. ಆದ್ದರಿಂದ ಪ್ರಾಥಮಿಕ ಭೂ ಬ್ಯಾಂಕ್‌ಗಳು ನಷ್ಟದಲ್ಲಿದ್ದು ಕನಿಷ್ಠ ಬೋನಸ್‌ಗೆ ಮಾತ್ರ ಅರ್ಹರು – ಕೇಂದ್ರ ಭೂ ಬ್ಯಾಂಕಿನ ದರದಲ್ಲಿ ಅಲ್ಲ ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (2003 Indlaw SC 1402, (2004) 1 SCC 574)

51. ಪಂಜಾಬ್ ಸಹಕಾರ ಕಾಯಿದೆಯಡಿ ಕೇಂದ್ರ ಸಹಕಾರ ಬ್ಯಾಂಕ್ ಕಿರಿಯ ಕಾರಖೂನರು/ಕಿರಿಯ ಕಾರಕುವರು ಕಂ ಬೆರಳಚ್ಚುಗಾರರ ಹುದ್ದೆ ಭರ್ತಿ ಮಾಡಲು ಪ್ರಕಟಣೆಯನ್ನು ದಿನಾಂಕ 25.05.1996 ರಂದು ಹೊರಡಿಸಿ, ದಿನಾಂಕ 08.06.1996 ಕೊನೆಯ ದಿನಾಂಕ ಎಂದು ನಿಗದಿ ಪಡಿಸಿತು. 1565 ಅರ್ಜಿಗಳು ಸಲ್ಲಿಕೆಯಾದವು. ಆಡಳಿತ ಮಂಡಳಿ ಒಂದು ನೇಮಕಾತಿ ಸಮಿತಿ ರಚಿಸಿತು.19.12.1996 ರಿಂದ 28.12.1996 ರವರೆಗೆ ಬೆರಳಚ್ಚು ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆ ನಡೆಸಿದರು. ಈ ಮಧ್ಯ ವಿಧಾನ ಸಭೆಗೆ ಚುನಾವಣೆ ಪ್ರಕಟಣೆ ಹೊರಡಿಸಿದಾಗ ನಿಬಂಧಕರು 09.01.1997 ರಂದು ಒಂದು ನಿರ್ದೇಶನ ನೀಡಿ ನೇಮಕಾತಿಯನ್ನು ನಿಲ್ಲಿಸಲು ಸೂಚಿಸಿದರು. ಈ ಮಧ್ಯ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಚುನಾವಣೆ ಮುಕ್ತಾಯವಾಗುವ ತನಕ ಯಾವುದೇ ಸಹಕಾರ ಮತ್ತಿತರ ಸಂಸ್ಥೆಗಳಲ್ಲಿ ನೇಮಕಾತಿ ಮಾಡದಂತೆ ನಿರ್ದೇಶನ ನೀಡಿದರು. ಬ್ಯಾಂಕಿನ ವ್ಯವಸ್ಥಾಪಕರು ದಿನಾಂಕ

21.02.1997 ರಂದು ನಿಬಂಧಕರಿಗೆ ಒಂದು ಪತ್ರ ಬರೆದು ಜೇಷ್ಠತೆ ಆಧಾರದಲ್ಲಿ ನೇಮಕಾತಿ ಆದೇಶ ನೀಡಲು ಒಪ್ಪಿಗೆ ಕೇಳುತ್ತಾರೆ. ನಿಬಂಧಕರು ದಿನಾಂಕ 03.04.1997 ರಂದು ಇಲಾಖಾಧಿಕಾರಿಗಳಿಗೆ, ಕಾರ್ಮಿಕ ಇಲಾಖೆಯಿಂದ ಪಟ್ಟಿ ಪಡೆಯದೆ, ಮತ್ತು ಸಾಕಷ್ಟು ಅವಕಾಶ ನೀಡದೆ, ಮೌಖಿಕ ಪರೀಕ್ಷೆ ನಡೆಸಲು ಕ್ರಮ ಜರುಗಿಸಿದ್ದು, ಈಗ ಮತ್ತೊಮ್ಮೆ ಹುದ್ದೆ ಭರ್ತಿ ಮಾಡಲು ಹೊಸ ಪ್ರಕಟಣೆ ಹೊರಡಿಸಿ, ಈಗಾಗಲೇ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಮತ್ತು ಅರ್ಜಿ ಸಲ್ಲಿಸುವ ಅವಶ್ಯಕತೆ ಇಲ್ಲವೆಂದು ಪರೀಕ್ಷೆಯನ್ನು ಮೌಖಿಕ ಪರೀಕ್ಷೆ ನಡೆಸಲು ಸೂಚಿಸಿದರು. ಈ ಮಧ್ಯ ಖಾಸಗಿ ಎದುರು ಅರ್ಜಿದಾರರು ರಿಟ್ ದಾಖಲಿಸಿ ನೇಮಕಾತಿ ಫಲಿತಾಂಶ ಪ್ರಕಟಿಸಲು ಸೂಚಿಸಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯಲ್ಲಿ ಪ್ರಶ್ನಿಸಿದಾಗ – ನಿಬಂಧಕರ/ಸರ್ಕಾರದ ನಿರ್ದೇಶನ ಇದ್ದರೂ ಆಯ್ಕೆ ಪ್ರಕ್ರಿಯೆ ನಡೆಸಿರುವುದು, ಮತ್ತು ಆಯ್ಕೆ ಪ್ರಕ್ರಿಯೆಯಲ್ಲಿನ ಅಕ್ರಮಗಳನ್ನು ಮಾಡಿದ್ದರೂ, ಉಚ್ಚನ್ಯಾಯಾಲಯ ಪ್ರಕಟಣೆ ಮಾಡಲು ಆದೇಶಿಸಿದ್ದು ತಪ್ಪು ಆದ್ದರಿಂದ ಉಚ್ಚನ್ಯಾಯಾಲಯದ ಆದೇಶ ಕಿತ್ತು ಹಾಕಿ ಈ ಕೆಳಕಂಡ ನಿರ್ದೇಶನ ನೀಡಿದೆ.

1. ನೇಮಕಾತಿ ಪ್ರಕ್ರಿಯೆ ಸಮರ್ಪಕವಾಗಿಲ್ಲದ್ದರಿಂದ ಆಯ್ಕೆಯಾದ ಅಭ್ಯರ್ಥಿಗಳ ಯಾವುದೇ ಅಧಿಕಾರ ಪ್ರಾಪ್ತವಾಗುವುದಿಲ್ಲ.
2. ಹೊಸದಾಗಿ ನೇಮಕಾತಿ ಪ್ರಕಟಣೆ/ಪ್ರಕ್ರಿಯೆ ನೀಡಲು ಸೂಚಿಸಿತು.
3. ಸಾಮಾನ್ಯ ಲಿಖಿತ ಪರೀಕ್ಷೆಯನ್ನು ಹೊಸದಾಗಿ ನಡೆಸಿ, ಮೌಖಿಕ ಪರೀಕ್ಷೆ, (ಹೊಸ ಅರ್ಜಿ ಆಹ್ವಾನ) ಅವರಿಗೆ ವಯಸ್ಸಿನ ವಿನಾಯ್ತಿ ನೀಡಿ, ಆಯ್ಕೆ ಮಾಡಲು, ಈಗಾಗಲೇ ಆಯ್ಕೆಯಾದ ಅಭ್ಯರ್ಥಿಗಳಿಗೆ ಯಾವುದೇ ಅಧಿಕಾರ ಇಲ್ಲ ಎಂದು ತೀರ್ಪಿತ್ತಿತು.

(2003 Indlaw SC 647, (2003) 10 SCC 136, AIR 2003 SC 3103)

52. ಆಂದ್ರಪ್ರದೇಶ ಕಾಯಿದೆಯಡಿ ಒಂದು ಜಿಲ್ಲಾ ಬ್ಯಾಂಕ್ ತನ್ನ ನಿವೃತ್ತಿ ಹೊಂದಿದ ಒಬ್ಬ ನೌಕರನ ಮೇಲೆ ದುರುಪಯೋಗದ ಆರೋಪದ ಮೇಲೆ ಕ್ರಮ ಜರುಗಿಸಬೇಕಾಗಿರುವುದರಿಂದ, ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿಯಲು ತೀರ್ಮಾನಿಸಿದ್ದನ್ನು ರಿಟ್ ಅರ್ಜಿ ಮೂಲಕ ಪ್ರಶ್ನಿಸಿದಾಗ, ಕಾಯಿದೆ ಕಲಂ 51 ಮತ್ತು 60 ರನ್ವಯ ಈ ರೀತಿ ತಡೆಹಿಡಿಯಲು ಅವಕಾಶವಿಲ್ಲವೆಂದು ತೀರ್ಮಾನಿಸಿದ್ದನ್ನು ವಿಭಾಗೀಯ ಪೀಠ ರದ್ದುಪಡಿಸಿತ್ತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಏಕ ಸದಸ್ಯ ಪೀಠದ ಆದೇಶವನ್ನು ಎತ್ತಿ ಹಿಡಿದು ವಿಭಾಗೀಯ ಪೀಠ ಆದೇಶವನ್ನು ಕಿತ್ತು ಹಾಕಿತು. (2001 Indlaw SC 2584)

53. ಕೇರಳ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಸಹಕಾರ ಸಂಘದ ನೇಮಕಾತಿಯಲ್ಲಿ ನ್ಯೂನತೆಗಳಾಗಿದೆ ಎಂದು ನಿಬಂಧಕರ ವರದಿಯನ್ನಾದರಿಸಿ, ಉಚ್ಚನ್ಯಾಯಾಲಯ ನೇಮಕಾತಿ ಅಕ್ರಮವೆಂದು ತೀರ್ಮಾನಿಸಿದ್ದು, ಅದಕ್ಕೆ ವಿರುದ್ದವಾಗಿ ಶ್ರೇಷ್ಠ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದಾಗ, ಸಂಬಂಧಪಟ್ಟ ನೌಕರರನ್ನು ಕಕ್ಷಿದಾರರನ್ನಾಗಿ ಮಾಡದೆ ಆದೇಶ ಮಾಡಿದ್ದು, ಸಾರ್ವಜನಿಕವಾಗಿ ನೋಟೀಸ್ ನೀಡಿರುವುದು ಸಮರ್ಪಕವಲ್ಲವೆಂದು, ಉಚ್ಚನ್ಯಾಯಾಲಯಕ್ಕೆ ಸಮರ್ಪಕ ನೋಟೀಸ್‌ನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ನೀಡಿ, ಮರು ಆದೇಶ ಮಾಡಲು ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. (1999 Indlaw SC 2118, (2005) 10 SCC 197)

54. ತಮಿಳುನಾಡು ಕಾಯಿದೆಯಲ್ಲಿನ ಒಂದು ಮಾರಾಟ ಸಹಕಾರ ಸಂಘ ತನ್ನ ಸದಸ್ಯರು ಬೆಳೆದ ವಾಣಿಜ್ಯ ಉತ್ಪನ್ನಗಳನ್ನು ಖರೀದಿ/ಮಾರಾಟ ಮಾಡುವುದಿಲ್ಲ ಮತ್ತು ಅಗತ್ಯಕ್ಕನುಗುಣವಾಗಿ, ಸದಸ್ಯರ ಮಾಲನ್ನು ಶೇ.1% ರ ಕಮಿಷನ್ ಆಧಾರದ ಮೇಲೆ ವ್ಯವಹಾರ ಮಾಡುತ್ತಿದ್ದು, ಹಮಾಲಿ/ದಿನಗೂಲಿ ನೌಕರರ ಒಕ್ಕೂಟ ಕೆಲವು ಸೌಲತ್ತುಗಳನ್ನು ಕೇಳಿ ಪರಿಹಾರ ನೀಡಲಿಲ್ಲವೆಂದು ನ್ಯಾಯಾಧಿಕರಣದ

ಮುಂದೆ ಪ್ರಶ್ನಿಸಿದಾಗ, ಅರ್ಜಿದಾರರು ಸಂಘದ ನೌಕರರೆಂದು ಪೂರಕ ದಾಖಲೆ ಹಾಜರ್ ಪಡಿಸಲಿಲ್ಲವೆಂದು ತಿರಸ್ಕರಿಸಿತು. ಇದನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ನ್ಯಾಯಾಧಿಕರಣದ ತೀರ್ಮಾನವನ್ನು ಎತ್ತಿ ಹಿಡಿಯಿತು. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಈ ಸಂಘವು ಖರೀದಿ/ಮಾರಾಟ ಮಾಡುವ ಸಂಸ್ಥೆಯಲ್ಲಿ ಮತ್ತು ಅಗತ್ಯಕ್ಕೆ ಅನುಗುಣವಾಗಿ/ಬೇಡಿಕೆ ಅನುಗುಣವಾಗಿ ಸದಸ್ಯರಿಂದ ಪಡೆದು, ಸರಬರಾಜು ಮಾಡಿದ್ದಕ್ಕೆ ಒಕ್ಕೂಟವು ತಾವು ನೌಕರರೆಂದು ದಾಖಲೆಗಳ ಮೂಲಕ ದೃಢೀಕರಿಸಲು ಅಸಮರ್ಥರಾದ ಕಾರಣ, ನ್ಯಾಯಾಧಿಕರಣ ಮತ್ತು ಉಚ್ಚನ್ಯಾಯಾಲಯ ಬೇಡಿಕೆ ತಿರಸ್ಕರಿಸಿರುವುದು ಸರಿಯಾಗಿದೆ. ಮಧ್ಯ ಪ್ರವೇಶ ಮಾಡುವ ಅವಶ್ಯಕತೆ ಇಲ್ಲವೆಂದು ತೀರ್ಮಾನಿಸಿತು. (2004 Indlaw SC 480, (2004) 3 SCC 514, AIR 2004 SC 1639)

55. ಉತ್ತರಪ್ರದೇಶ ಕಾಯಿದೆಯಲ್ಲಿ ಬಂದ ಸಂಘದ ಕಾರ್ಯದರ್ಶಿ ಹಣ ದುರುಪಯೋಗ ಮಾಡಿದ್ದಾನೆಂದು ಪ್ರಕರಣ ದಾಖಲಿಸಿ ಡಿಕ್ರಿ ಪಡೆದಾಗ, ಕಾಯಿದೆಯಲ್ಲಿ ವಸೂಲಾತಿಗೆ ದಾವಾ ದಾಖಲಿಸುವ ಅಧಿಕಾರದ ಬಗ್ಗೆ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಅಧಿಕಾರ ಇದೆ ಎಂದು ತೀರ್ಪಿತ್ತಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಕಾಯಿದೆ ಕಲಂ 70ನ್ನು ಪರಿಶೀಲಿಸಿ, ದುರುಪಯೋಗವಾದ ಹಣವನ್ನು ಕಲಂ 70 ರಲ್ಲಿ ವಸೂಲಿ ಮಾಡಲು ಅಧಿಕಾರ ಇದೆ ಎಂದು ಪ್ರಕರಣ ವಜಾ ಮಾಡಿತು. (2002 Indlaw SC 2323, (2009) 16 SCC 247)

56. ಪಂಜಾಬ್ ಮತ್ತು ಹರ್‍ಯಾನ ಸಹಕಾರ ಕಾಯಿದೆಯಡಿ ಒಂದು ಬ್ಯಾಂಕಿನ ವಿಚಾರಣಾ ವರದಿಯಲ್ಲಿ ಹಣ ದುರುಪಯೋಗ ಮಾಡಿಕೊಂಡಿದ್ದಾನೆಂದು ಒಬ್ಬ ನೌಕರನ ಮೇಲೆ ಶಿಸ್ತು ಕ್ರಮ ಜರುಗಿಸಿ, ವರದಿ ಪಡೆದು, ವಜಾ ಗೊಳಿಸಿದಾಗ, ಅದನ್ನು ಪ್ರಶ್ನಿಸಿ ನಿಬಂಧಕರ ಮುಂದೆ ದಾವಾ ದಾಖಲಿಸಿ ಪರಿಹಾರ ಕೇಳಿದಾಗ, ನಿಬಂಧಕರು ವರದಿಯನ್ನು ಪರಿಶೀಲಿಸಿ, ಸಂಬಂಧಪಟ್ಟ ನೌಕರನ ಮೇಲೆ, ವರದಿ ಅವಧಿಯಲ್ಲಿ ದುರುಪಯೋಗವಾಗಿಲ್ಲವೆಂದು ತೀರ್ಮಾನಿಸಿ, ಆ ನೌಕರನ್ನು ಮರು ನೇಮಕ ಮಾಡಲು ಆದೇಶಿಸಿ, ವಜಾ ಆದೇಶವನ್ನು ರದ್ದು ಪಡಿಸಿದರು. ಇದನ್ನು ಪ್ರಶ್ನಿಸಿ ರಿಟ್ ಅರ್ಜಿ ದಾಖಲಿಸಿದಾಗ, ಉಚ್ಚನ್ಯಾಯಾಲಯ ನಿಬಂಧಕರ ಆದೇಶದಲ್ಲಿ ಯಾವುದೇ ನ್ಯೂನತೆ ಇಲ್ಲವೆಂದು ತೀರ್ಮಾನಿಸಿತು. ಇದನ್ನು ಪ್ರಶ್ನಿಸಿ, ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಸಂವಿಧಾನದ ಅನುಚ್ಛೇದ 226 ರಲ್ಲಿ ತೀರ್ಮಾನ ಮಾಡುವಾಗ, ಕೆಳ ನ್ಯಾಯಾಲಯಗಳಲ್ಲಿ, ಕಾನೂನಿನ ವಿರುದ್ಧವಾಗಿ ತೀರ್ಮಾನ ನೀಡಿದ್ದರೆ ಮಾತ್ರ ಮಧ್ಯಪ್ರವೇಶ ಮಾಡಬೇಕು. ಇಲ್ಲವಾದರೆ ರಿಟ್ ಅರ್ಜಿಯಲ್ಲಿ ಪರಿಹಾರ ನೀಡಲಾಗದೆಂದು ತೀರ್ಮಾನಿಸಿ, ಉಚ್ಚನ್ಯಾಯಾಲಯದ ಆದೇಶವನ್ನು ಸಮರ್ಥಿಸಿತು. (2001 Indlaw SC 21336, (2010) 15 SCC 517)

57. ಮಧ್ಯಪ್ರದೇಶ ಸಹಕಾರ ಕಾಯಿದೆಯಡಿ ಒಂದು ಬ್ಯಾಂಕಿನ ನೌಕರನ ಮೇಲೆ, ಒಂದು ಪ್ರಾಥಮಿಕ ಕೃಷಿ ಪತ್ತಿನ ಸಂಘ, ಸಕ್ಕರೆ ವಿತರಣೆಯಲ್ಲಿ ನಡೆದು ಅವ್ಯವಹಾರದಲ್ಲಿ ಕ್ರಿಮಿನಲ್ ಮೊಕದಮ್ಮೆ ದಾಖಲಿಸಿದ್ದು, ಅದರಲ್ಲಿ ಆರೋಪ ಸಾಬೀತಾಗಿದೆ ಎಂದು ಒಂದು ವರ್ಷ ಜೈಲು ಮತ್ತು ದಂಡ ವಿಧಿಸಿತು. ಈ ಮಧ್ಯ ಆಡಳಿತ ಮಂಡಳಿ, ಶಿಸ್ತುಕ್ರಮ ಜರುಗಿಸಿ, ಸೇವೆಯಿಂದ ವಜಾ ಮಾಡಿತು. ಕ್ರಿಮಿನಲ್ ಮೊಕದಮ್ಮೆಯಲ್ಲಿ ಮೇಲ್ಮನವಿಯನ್ನು ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದರಲ್ಲಿ ಸಾಕ್ಷ್ಯಾಧಾರಗಳ ಕೊರತೆ ಇದೆ ಎಂದು, ಪುರಸ್ಕರಿಸಿ ಶಿಕ್ಷೆ ವಜಾ ಮಾಡಿತು. ಆ ನಂತರ ಬ್ಯಾಂಕ್ ಅವನನ್ನು ಕೆಲಸಕ್ಕೆ ಮರು ನೇಮಕ ಮಾಡಿತು ಮತ್ತು ಹಿಂದಿನ ಸಂಬಳ ಪಾವತಿ ಮಾಡಲು ನಿರಾಕರಿಸಿದ್ದನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯಕ್ಕೆ ಅರ್ಜಿ ಹಾಕಿದಾಗ, ಅದನ್ನು ವಜಾ ಮಾಡಿತು. ಇದಕ್ಕೆ ವಿರುದ್ಧವಾಗಿ ಶ್ರೇಷ್ಠ ನ್ಯಾಯಾಲಯದಲ್ಲಿ ವಿಶೇಷ ಅರ್ಜಿ ಸಲ್ಲಿಸಿ ಪರಿಹಾರ ಕೇಳಿದಾಗ,

ಉಚ್ಚನ್ಯಾಯಾಲಯ ತೀರ್ಪನ್ನು ಎತ್ತಿಹಿಡಿದು, ಬ್ಯಾಂಕ್ ತನ್ನ ಉಪನಿಯಮ 2(11) ರನ್ನು ವಜಾಗೊಂಡ ಅವಧಿಗೆ ಸಂಬಳ ಪಾವತಿ ಮಾಡಬೇಕೆ ಬೇಡವೇ ಎಂಬ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಇದೆ ಎಂದು ವಜಾ ಮಾಡಿತು. (1997 Indlaw SC 1270, (1998) 2 SCC 291)

58. ಪಂಜಾಬ್ ಸಹಕಾರ ಕಾಯಿದೆಯಲ್ಲಿ, ಒಂದು ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು, ಕ್ರಿಮಿನಲ್ ಮೊಕದ್ದೊಮ್ಮೆ ದಾಖಲಿಸುವ ಅಧಿಕಾರದ ಬಗ್ಗೆ ತೀರ್ಮಾನಿಸುತ್ತ ಉಚ್ಚನ್ಯಾಯಾಲಯ, ಅಧಿಕಾರ ಇಲ್ಲ ಎಂಬ ತೀರ್ಮಾನವನ್ನು ಶ್ರೇಷ್ಠ ನ್ಯಾಯಾಲಯ, ಬ್ಯಾಂಕಿನ ಉಪನಿಯಮ 46 ರನ್ವಯ ವ್ಯವಸ್ಥಾಪಕ ನಿರ್ದೇಶಕರು, ಒಂದು ಪ್ರಕರಣ ದಾಖಲಿಸಲು, ಸಂದಾನ ಮಾಡಲು, ಮಾರ್ಪಡಿಸಲು, ಹಿಂಪಡೆಯಲು ಅಧಿಕಾರ ನೀಡಿರುವುದರಿಂದ, ಉಚ್ಚನ್ಯಾಯಾಲಯದ ಆದೇಶವನ್ನು ಕಿತ್ತುಹಾಕಿ, ಮರು ವಿಚಾರಣೆಗೆ ವಾಪಸ್ ಮಾಡಿತು. (1997 Indlaw SC 2919, (1997) 7 SCC 758, AIR 1998 SC 271)

59. ಹರ್ಯಾನ ಸಹಕಾರ ಕಾಯಿದೆಯಲ್ಲಿ ಒಂದು ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ನಡೆದು ದುರುಪಯೋಗದ ಬಗ್ಗೆ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಕೊಷಾಧಿಕಾರಿಗಳ ಮೇಲೆ ದಾವಾ ದಾಖಲಿಸಿ ಡಿಕ್ರಿ ಪಡೆದ ನಂತರ, ಅಧ್ಯಕ್ಷರು ಮೇಲ್ಮನವಿ ಸಲ್ಲಿಸಿ, ತನ್ನ ಜವಾಬ್ದಾರಿ ಇಲ್ಲವೆಂದು ಪ್ರತಿಪಾದಿಸಿದಾಗ, ಉಚ್ಚನ್ಯಾಯಾಲಯ ಅವರ ಮೇಲ್ಮನಿ ತಿರಸ್ಕರಿಸಿತು. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಅಧ್ಯಕ್ಷರು ಸಂಘದ ಮೇಲ್ವಿಚಾರಕರಾಗಿದ್ದ ಅವರು ಸಾಮೂಹಿಕ ಜವಾಬ್ದಾರಿ ಹೊಂದಿದ್ದರು, ಆದ್ದರಿಂದ ಅವರೂ ಜವಾಬ್ದಾರರು ಎಂದು ಪ್ರಕರಣ ವಜಾ ಮಾಡಿತು. (1997 Indlaw SC 1003, (1997) 10 SCC 752, AIR 1997 SC 2778)

60. ರಾಜಸ್ತಾನ್ ಸಹಕಾರ ಕಾಯಿದೆಯಡಿ ಒಂದು ಸಂಘದ ನೌಕರನ್ನು, ಕೆಲಸದಿಂದ ವಜಾ ಮಾಡಿದ್ದು. ಅದು, ಸಹಕಾರ ನಿಯಮ 20ಲ ಅಡಿ, ಒಂದು ಅವಧಿಗೆ ನೇಮಕ ಮಾಡಿದ ನೌಕರ, ಅವಧಿ ಮುಗಿದ ಕೂಡಲೇ, ಕೆಲಸ ಕಳೆದುಕೊಳ್ಳುತ್ತಾನೆ ಎಂದಿರುವುದು, ರಾಜಸ್ತಾನ್ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆ ಕಲಂ 28ಎ ಗೆ ವಿರುದ್ದವಾಗಿದ್ದು, ಒಬ್ಬ ನೌಕರನ್ನು ತೆಗೆದು ಹಾಕಲು, ಒಂದು ತಿಂಗಳ ನೋಟೀಸ್ ಅಥವಾ ಒಂದು ತಿಂಗಳ ಸಂಬಳ ಪಾವತಿಸುವ ನಿಯಮ ಪಾಲಿಸಿಲ್ಲವಾದ್ದರಿಂದ, ಅವನನ್ನು ಮರು ನೇಮಕ ಮಾಡಿ ಸಂಬಳ ಪಾವತಿಸಲು ಆದೇಶಿಸಿತು. (1997 Indlaw SC 436, (1997) 6 SCC 29, AIR 1997 SC 2687)

61. ಉತ್ತರಪ್ರದೇಶ ಸಹಕಾರ ಕಾಯಿದೆಯಲ್ಲಿ ಒಂದು ಸಂಘದ ನೌಕರನ್ನು ತೆಗೆದು ಹಾಕಬೇಕೆಂದರೆ (ನೋಟೀಸ್ ಜಾರಿ ಮಾಡಿ) ಆಡಳಿತ ಮಂಡಳಿಗೆ ಅಧಿಕಾರ ಇದೆ. ಅಂತಹ ಅಧಿಕಾರ ಚಲಾಯಿಸಿ, ನೌಕರನ್ನು ತೆಗೆದು ಹಾಕಲು ನಿಬಂಧಕರು ಸಂಘಕ್ಕೆ ನಿರ್ದೇಶನ ನೀಡಿದರೆ, ತೆಗೆದು ಹಾಕಬೇಕು, ಆ ರೀತಿ ಮಾಡದೇ ಇದ್ದರೆ, ನಿಬಂಧಕರೇ ಆ ನೌಕರನನ್ನು ತೆಗೆದು ಹಾಕುವ ಅಧಿಕಾರವಿದೆ. ಆ ರೀತಿ ತೆಗೆದು ಹಾಕಿದ ನೌಕರ ಪರಿಹಾರವನ್ನು ನ್ಯಾಯಾಧಿಕರಣಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶವಿದ್ದರೂ, ರಿಟ್ ಅರ್ಜಿ ಊರ್ಜಿತವೇ ಎಂಬ ಪ್ರಶ್ನೆಗೆ ಉಚ್ಚನ್ಯಾಯಾಲಯ ಕಲಂ 38ರನ್ನು ಕಾನೂನಿನಲ್ಲಿಯೇ ನಿಬಂಧಕರಿಗೆ ಅಧಿಕಾರ ನೀಡಿರುವುದರಿಂದ, ಆ ಅಧಿಕಾರ ಚಲಾಯಿಸಿದಾಗ, ಅಂತಹ ನೊಂದ ನೌಕರ ಸಂವಿಧಾನದ ಅನುಚ್ಚೇದ 226 ರಲ್ಲಿ ರಿಟ್ ದಾಖಲಿಸಬಹುದು ಮತ್ತು ಅದು ಊರ್ಜಿತ ಎಂದು ಶ್ರೇಷ್ಠ ನ್ಯಾಯಾಲಯ ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಿತು. (1997 Indlaw SC 2593, (1997) 11 SCC 144)

62. ಮಧ್ಯಪ್ರದೇಶ ಕಾಯಿದೆಯಡಿ ನೋಂದಾಯಿಸಿದ ಒಂದು ಬ್ಯಾಂಕ್ ನೌಕರನ್ನು ವಿಚಾರಣೆ ನಡೆಸಿ ತೆಗೆದು ಹಾಕಿದಾಗ ಜಾದ್ಯೋಗಿಕ ಕಾಯಿದೆಯಡಿ, ಕಾರ್ಮಿಕ ನ್ಯಾಯಾಲಯ ಮರು ನೇಮಕಾತಿ

ಮತ್ತು ಬಾಕಿ ಸಂಬಳ ಪಾವತಿಸಲು ಆದೇಶಿಸಿದ್ದನ್ನು ಉಚ್ಚನ್ಯಾಯಾಲಯದಲ್ಲಿ ರಿಟ್ ಮೂಲಕ ಪ್ರಶ್ನಿಸಿದಾಗ, ಕಾರ್ಮಿಕ ನ್ಯಾಯಾಲಯದ ಆದೇಶವನ್ನು ರದ್ದುಗೊಳಿಸಿತು. ಶ್ರೇಷ್ಠನ್ಯಾಯಾಲಯದ ಮುಂದೆ ಬಂದಾಗ, ಅರ್ಜಿದಾರರ ವಕೀಲರು ಮಧ್ಯಪ್ರದೇಶ ಉಚ್ಚನ್ಯಾಯಾಲಯದ ಒಂದು ತೀರ್ಪನ್ನು ಉಲ್ಲೇಖಿಸಿ, ಅಂದರೆ ಮಧ್ಯಪ್ರವೇಶ ಸಹಕಾರ ಕಾಯಿದೆ ಕಲಂ 93 ಮತ್ತು ಔದ್ಯೋಗಿಕ ವಿವಾದ ಕಾಯಿದೆ ಕಲಂ 10(1)(ಡಿ) ಅಡಿ ಕ್ರಮ ಜರುಗಿಸಿರುವುದು ಸರಿ ಎಂದು ವಾದಿಸಿದಾಗ, ಮತ್ತು ಇದಕ್ಕೆ ಪೂರಕವಾಗಿ ರಾಷ್ಟ್ರೀಯ ಕದನ್ ಮಜದೂರ ಸಹಕಾರ ಸಮಿತಿ ಮತ್ತು ಕಾರ್ಮಿಕ ನ್ಯಾಯಾಲಯದ ಪ್ರಕರಣ ಮತ್ತು ಹಾಲಿ ವಿಚಾರಣೆಯಲ್ಲಿರುವ ಪ್ರಕರಣ ಹೋಲಿಕೆ ಇಲ್ಲವೆಂದು. ಉಚ್ಚನ್ಯಾಯಾಲಯದ ತೀರ್ಮಾನದಲ್ಲಿ ಮಧ್ಯ ಪ್ರವೇಶ ಮಾಡಲಿಲ್ಲ ಮತ್ತು ಪ್ರಕರಣ ವಜಾ ಮಾಡಿತು. (1996 Indlaw SC 2085, (1997) 9 SCC 354)

63. ಪಂಜಾಬ್ ಸಹಕಾರ ಕಾಯಿದೆ ಮತ್ತು ಉತ್ತರಪ್ರದೇಶ ಔದ್ಯೋಗಿಕ ವಿವಾದ ಕಾಯಿದೆ 1947 ರಡಿ ಮಾಡಿಕೊಂಡ ಒಪ್ಪಂದದಂತೆ (ತುಟ್ಟಿ ಭತ್ಯೆ ಪಾವತಿ ಬಗ್ಗೆ) ಅದರ ಊರ್ಜಿತತೆ ಕಾಯಿದೆ ತಿದ್ದುಪಡಿಯಾದ ನಂತರ ಮುಂದು ವರಿಯುತ್ತದೆಯೇ ಎಂಬ ಪ್ರಶ್ನೆ ಉದ್ಭವಿಸಿದಾಗ, ಒಪ್ಪಂದದ ಅವಧಿಯನ್ನು ಮುಂದುವರಿಸಿದರೂ, ಆ ಒಪ್ಪಂದ ಕಾಯಿದೆಯಲ್ಲಿ ಆದ ತಿದ್ದುಪಡಿಗೆ ಪೂರಕವಾಗಿಲ್ಲದೇ ಇದ್ದರೆ, ಆ ಒಪ್ಪಂದ ಜಾರಿ ಮಾಡತಕ್ಕದ್ದಲ್ಲ. ಅಂದರೆ ಒಪ್ಪಂದಕ್ಕಿಂತ ಕಾಯಿದೆ ತಿದ್ದುಪಡಿಯನ್ನು ಅಂಗೀಕರಿಸಬೇಕು. (1996 Indlaw SC 3860, (1997) (2) LLJ 631)

64. ಪಂಜಾಬ್ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಒಂದು ಸಹಕಾರ ಕೇಂದ್ರ ಬ್ಯಾಂಕ್, ತನ್ನ ನೌಕರ ಜೊತೆ ಮಾಡಿಕೊಂಡ ಒಪ್ಪಂದ 31.03.77 ಕ್ಕೆ ಮುಕ್ತಾಯವಾಗಿದ್ದು, ಅದನ್ನು ಮುಂದುವರಿಸಲು ಔದ್ಯೋಗಿಕ ಕಾಯಿದೆ ಕಲಂ 19 ರಂತೆ ಮುಂದುವರಿಸಿತು. ಈ ಮಧ್ಯ ಸಹಕಾರ ಕಾಯಿದೆಗೆ ತಿದ್ದುಪಡಿ ಮಾಡಿ ಕಲಂ 84ಬಿ ಸೇರ್ಪಡೆ ಮಾಡಿತು. ಅದರಲ್ಲಿ ಸರ್ಕಾರಿ ನೌಕರರಿಗೆ ನೀಡುವ ತುಟ್ಟಿ ಭತ್ಯೆ ದರಕ್ಕಿಂತ ಸಹಕಾರ ಸಂಘಗಳ ನೌಕರರು ಅರ್ಹರಲ್ಲವೆಂದು ಸೇರಿಸಿದ್ದನ್ನು ಪ್ರಶ್ನಿಸಿ, ಒಪ್ಪಂದ ಜಾರಿಯಲ್ಲಿದ್ದಾಗ ಬದಲಾವಣೆ ಮಾಡಲಾಗದು ಎಂದು ಉಚ್ಚನ್ಯಾಯಾಲಯದ ಪ್ರಶ್ನಿಸಿದಾಗ, ವಿಭಾಗೀಯ ಪೀಠ ಅದನ್ನು ಪುರಸ್ಕರಿಸಿತು. ಅದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪುನರ್ ವಿಮರ್ಷೆ ಮಾಡಿದಾಗ ಒಪ್ಪಂದಗಳು ಕಾನೂನಿಗೆ ವಿರುದ್ದವಾಗಿದ್ದರೆ ಅದು ಸಿಂದುವಾಗದು. ಔದ್ಯೋಗಿಕ ಕಾಯಿದೆ ಕಲಂ 19 ರಲ್ಲಿ ಒಪ್ಪಂದ ಮುಂದುವರಿಸಲು ಅವಕಾಶ ಕಲ್ಪಿಸಿದೆ. ವಿಧಾನ ಮಂಡಳ ಕಾಯಿದೆ ಮಾಡುವ ಅಧಿಕಾರವನ್ನು ಒಪ್ಪಂದವಿದೆ ಎಂದು ಬಂಧಿಸಲಾಗದು. ಏಕೆಂದರೆ ಶಾಸನ ಸಭೆ ಕಾಯಿದೆ ಮಾಡುವ/ತಿದ್ದುಪಡಿ ಮಾಡುವ ಅಧಿಕಾರ ಇದ್ದು, ಅದನ್ನು ಒಂದು ಒಪ್ಪಂದ ಮೊಟಕುಗೊಳಿಸಲಾಗದು. ಅಂದರೆ ಕಾಯಿದೆ ಒಪ್ಪಂದಕ್ಕಿಂತ ಮೇಲ್ಪಟ್ಟಿದ್ದು. (1996 Indlaw SC 1281, (1996) 11 SCC 202, AIR 1996 SC 3944)

65. ರಾಜಾಸ್ತಾನ್ ಕಾಯಿದೆಯಲ್ಲಿ ರಚಿಸಿದ ಸಾಮಾನ್ಯ ಸೇವಾ ಪ್ರಾಧಿಕಾರ ನೇಮಿಸಿದ ನೌಕರರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೌಕರರಲ್ಲಿ ಪ್ರಾಧಿಕಾರ ಒಂದು ಸಹಕಾರ ಸಂಘದಲ್ಲಿ ನಿಬಂಧಕರು ಒಂದು ಹುದ್ದೆಗೆ ಅವಶ್ಯಕವಾದ ವಿದ್ಯಾರ್ಹತೆ ಮತ್ತು ಸೇವಾ ಶರತ್ತುಗಳನ್ನು ನಿಗದಿ ಪಡಿಸುವುದು ಮಾತ್ರ. ನೇಮಕಾತಿ ನಿಯಮಗಳನ್ನು ಬ್ಯಾಂಕ್ ನಡೆಸುವ ಸಾಮಾನ್ಯ ಸೇವಾ ಪ್ರಾಧಿಕಾರದ ನೌಕರರಿಗೆ ನೇಮಕಾತಿ ನೀತಿ ರೂಪಿಸಲು ನಿಬಂಧಕರಿಗೆ ಅಧಿಕಾರ ಇಲ್ಲ. ಪ್ರಾಧಿಕಾರ ನೇಮಿಸಿದ ನೌಕರರು ಪ್ರಾಥಮಿಕ ಸಂಘದ ನೌಕರರಲ್ಲ. (1996 Indlaw SC 2569, (1996) 8 SCC 391)

66. ರಾಜಾಸ್ತಾನ್ ಸಹಕಾರ ಕಾಯಿದೆಯ ಒಂದು ಕೇಂದ್ರ ಬ್ಯಾಂಕಿನಿಂದ ಸಾಲ ಪಡೆದು ಸದಸ್ಯರಿಗೆ

ಹಂಚುವ ಪ್ರಾಥಮಿಕ ಸಂಘದ ನೌಕರ (ವ್ಯವಸ್ಥಿತ) ಹಣ ದುರುಪಯೋಗ ಮಾಡಿದ್ದಾನೆಂದು ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ, ಅದು ಬಾಕಿ ಇರುವಾಗ, ಇಲಾಖಾ ವಿಚಾರಣೆ ನಡೆಸಿ, ವಜಾ ಮಾಡಿದಾಗ, ವಿವಿಧ ಪ್ರಾಧಿಕಾರಗಳ ಮುಂದೆ ಆರೋಪಿ ಪ್ರಕರಣ ದಾಖಲಿಸಿದಾಗ, ಸಿವಿಲ್ ನ್ಯಾಯಾಲಯ, ರಾಜಾಸ್ತಾನ್ ಅಂಗಡಿ ಹಾಗೂ ವಾಣಿಜ್ಯ ಕಾಯಿದೆ ಮತ್ತು ಉಚ್ಚನ್ಯಾಯಾಲಯದಲ್ಲಿ, ವಿವಿಧ ಪ್ರಕರಣ ದಾಖಲಿಸಿ, ಪರಿಹಾರ ಕೇಳುತ್ತಿದ್ದು, ಪ್ರಾಥಮಿಕ ಸಂಘ ಹಣ ದುರುಪಯೋಗವಾದ ಬಗ್ಗೆ ಪೂರಕ ದಾಖಲೆಗಳನ್ನು ಸಲ್ಲಿಸಿ, ಶಿಕ್ಷೇ ನೀಡುವ ಬದಲು, ವಿವಿಧ ಪ್ರಾಧಿಕಾರಗಳ ಮುಂದೆ, ವಿವಿಧ ವಿಷಯಗಳ ಬಗ್ಗೆ ತಕರಾರು ಮಾಡುತ್ತಿದ್ದು. ಸಮಸ್ಯೆಯನ್ನು ಕ್ಲಿಷ್ಠಕರ ಮಾಡಿದೆ ಮೂಲ ಪ್ರಶ್ನೆ ಹಣ ದುರುಪಯೋಗದ ಬಗ್ಗೆ ಪೂರಕ ದಾಖಲೆ ನೀಡಿ ಶಿಕ್ಷೆವಿಧಿಸಲು ಪ್ರಯತ್ನಿಸಿಲ್ಲ. ಉಚ್ಚನ್ಯಾಯಾಲಯದ ಮುಂದೆ ಪರಿಹಾರ ನೀಡಲು ಯಾವುದೇ ಪ್ರಶ್ನೆ ಇರಲಿಲ್ಲ. ಆದ್ದರಿಂದ ಮೇಲ್ಮನವಿಯನ್ನು ಶ್ರೇಷ್ಠ ನ್ಯಾಯಾಲಯ ವಜಾಗೊಳಿಸಿತು. (1996 Indlaw SC 3995, (1996) 2 SCC 1)

67. ಮಹಾರಾಷ್ಟ್ರ ಕಾಯಿದೆ – ರೈಲ್ವೆ ಸಿಬ್ಬಂದಿ ಮತ್ತು ಸಹಕಾರಿ ಸಂಘ – ರೈಲ್ವೆ ಸಿಬ್ಬಂದಿ ಕೊಡ್‌ನ್ನು ರೈಲ್ವೆ ಸಹಕಾರ ಮಳಿಗೆ ನೌಕರರಿಗೆ ಅನ್ವಯಿಸಬಹುದೇ ಎಂಬ ವಿಷಯದಲ್ಲಿ ರೈಲ್ವೆ ಇಲಾಖೆ, ನೌಕರರ ಕ್ಷೇಮಾಭಿವೃದ್ಧಿಗೆ ಒಂದು ಸಹಕಾರ ಮಳಿಗೆ ಸ್ಥಾಪಿಸಿದಾಗ, ರೈಲ್ವೆ ನೌಕರರಿಗೆ ಅನುಸರಿಸುವ ರೈಲ್ವೆ ಕೋಡ್‌ನ್ನು ಅನ್ವಯಿಸತಕ್ಕದ್ದಲ್ಲ. ಅಂದರೆ ರೈಲ್ವೆ ನೌಕರರು ಮತ್ತು ರೈಲ್ವೆ ನೌಕರರ ಸಹಕಾರ ಸ್ಟೋರ್ಸ್‌ನ್ನು ಏಕ ರೀತಿ ನೋಡತಕ್ಕದ್ದಲ್ಲ, ಮತ್ತು ಇದಕ್ಕೆ ಪೂರಕವಾಗಿ, ವೇತನ ಭಡ್ತಿ, ವೇತನ ಶ್ರೇಣಿ, ವಾರ್ಷಿಕ ಮುಂಭಡ್ತಿಯೂ ರೈಲ್ವೆ ನೌಕರರಿಗೆ ನೀಡಿದಂತೆ ರೈಲ್ವೆ ಸಹಕಾರ ಸ್ಟೋರ್‌ನ ನೌಕರರಿಗೆ ಸಮಾನಂತರ ಎಂದು ಪರಿಗಣಿಸತಕ್ಕದ್ದಲ್ಲ. (1995 Indlaw SC 1919, (1996) 2 SCC 258, AIR 1996 SC 2890)

68. ಪಂಜಾಬ್ ಕಾಯಿದೆಯಲ್ಲಿ ಒಂದು ಭೂ ಅಡಮಾನ ಬ್ಯಾಂಕ್, ತನ್ನ ನೌಕರರಿಗೆ 2 ವಾರ್ಷಿಕ ಭಡ್ತಿ ನಿರಾಕರಿಸಿ ನೀಡಿದ ಶಿಕ್ಷೆಯನ್ನು ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಅದನ್ನು ತಿರಸ್ಕರಿಸಿತ್ತು. ಅದಕ್ಕೆ ಮೇಲ್ಮನವಿ ಸಲ್ಲಿಸಿದಾಗ, ವಿಚಾರಣೆಗೆ ಅರ್ಹ ಎಂದು ತೀರ್ಮಾನಿಸಿ ಮತ್ತು ಸಿವಿಲ್ ನ್ಯಾಯಾಲಯ ರವಾನಿಸಿತ್ತು. ಇದನ್ನು ಪ್ರಶ್ನಿಸಿ ರಿಟ್ ಅರ್ಜಿ ದಾಖಲಿಸಿದಾಗ, ಸಿವಿಲ್ ದಾಖಲೆ ಹೂಡಲು ಬರುವುದಿಲ್ಲವೆಂಬ ತೀರ್ಪಿಗೆ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಬ್ಯಾಂಕನ್ನು ರಾಜ್ಯವೇ ಎಂದು ಪರಿಶೀಲಿಸುವ ಅವಶ್ಯಕತೆ ಇಲ್ಲ. ಬ್ಯಾಂಕ್ ಶಿಕ್ಷೆ ನೀಡುವ ಪೂರ್ವದಲ್ಲಿ ವಿಚಾರಣೆ ನಡೆಸಿ ಶಿಕ್ಷೆ ವಿಧಿಸಿದೆ. ವಿವರಗಳನ್ನು ಕೆಳನ್ಯಾಯಾಲಯಗಳು ತೀರ್ಮಾನಿಸಬೇಕು ಎಂದು ವಜಾ ಮಾಡಿತು. (1995 Indlaw SC 2220, (1995) 3 SCC (Supp) 573)

69. ಆಂದ್ರಪ್ರದೇಶ ಕಾಯಿದೆಯಡಿ ನೋಂದಾಯಿಸಿದ ಒಂದು ರೈಲ್ವೆ ನೌಕರರ ಸಹಕಾರ ಸಂಘದ ನೇಮಕಾತಿಯಲ್ಲಿ ಮೀಸಲಾತಿ ಬಗ್ಗೆ ರಾಜ್ಯ ಸರ್ಕಾರ ಹೊರಡಿಸಿದ ಅಧಿ ಸೂಚನೆ ಬಗ್ಗೆ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯದ ಏಕ ಸದಸ್ಯ ಪೀಠ ನೇಮಕಾತಿ ಮತ್ತು ಭಡ್ತಿಗೆ ಮೀಸಲಾತಿ ಅನ್ವಯವಾಗುತ್ತಿದೆ ಎಂದು ತೀರ್ಪಿತ್ತಿತು. ಇದನ್ನು ವಿಭಾಗೀಯ ಪೀಠ ಸಮರ್ಥಿಸಿತು ಮತ್ತು ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ನೇಮಕಾತಿಯಲ್ಲಿ ಪರಿಶಿಷ್ಟಜಾತಿ/ಪಂಗಡಕ್ಕೆ ಮೀಸಲಾತಿ ಇದೆ ಎಂದು, ಇದೇ ನೀತಿ ಭಡ್ತಿಗೆ ಅನ್ವಯಿಸುವುದಿಲ್ಲವೆಂದು ಶ್ರೇಷ್ಠ ನ್ಯಾಯಾಲಯ ಅರ್ಜಿ ವಜಾ ಮಾಡಿತು. (1998 Indlaw SC 1363, (1998) 2 SCC 580, AIR 1998 SC 703)

70. ಹರ್‍ಯಾನ ಸಹಕಾರ ಕಾಯಿದೆಯಲ್ಲಿ ಒಂದು ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಆದ ಅವ್ಯವಹಾರದಲ್ಲಿ ಕಾರ್ಯದರ್ಶಿ ಮತ್ತು ಕೊಷಾಧಿಕಾರಿ ಜವಬ್ದಾರರೆಂದಿದ್ದರೂ, ಅಧ್ಯಕ್ಷರು

ಜವಾಬ್ದಾರರು ಎಂದು ದಾವಾ ದಾಖಲಿಸಿದಾಗ, ನಿಬಂಧಕರು ಮೂವರ ಮೇಲೆ ವೈಯಕ್ತಿಕವಾಗಿ ಮತ್ತು ಜಂಟಿಯಾಗಿ ಜವಾಬ್ದಾರಿ ನಿಗದಿ ಪಡಿಸಿದ್ದನ್ನು, ಮೇಲ್ಮನವಿ ಪ್ರಾಧಿಕಾರದಲ್ಲಿ ಪ್ರಕಟಿಸಿದಾಗ, ಡಿಕ್ರಿಯನ್ನು ಸಮರ್ಥಿಸಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ವಿಶೇಷ ಮನವಿ ಸಲ್ಲಿಸಿದಾಗ, ಅಧ್ಯಕ್ಷರು ಸಂಘದ ವ್ಯವಹಾರದಲ್ಲಿ ಮೇಲ್ವಿಚಾರಣೆ ಮಾಡುವ ಜವಾಬ್ದಾರಿ ಇದ್ದು, ಅವರನ್ನು ಅಧಿಬಾರ ಪ್ರಕರಣದಲ್ಲಿ ಭಾಗಿ ಮಾಡಿರುವುದರಲ್ಲಿ ಯಾವುದೇ ತಪ್ಪು ಇಲ್ಲ. ಕ್ರಿಮಿನಲ್ ಪ್ರಕರಣ ಪ್ರತ್ಯೇಕ ವಿಚಾರಣೆ ನಡೆಯುತ್ತದೆ ಎಂದು ತಿರ್ಪಿತ್ತಿತು. (1997 Indlaw SC 1003, (1997) 10 SCC 752, AIR 1997 SC 2778)

71. ಮಹಾರಾಷ್ಟ್ರ ಕಾಯಿದೆಯ ಸಹಕಾರ ಮಹಾ ಮಂಡಳ ಸೀಸನಲ್ ನೌಕರರನ್ನು ಖಾಯಂ ಮಾಡಲು ನಿರಾಕರಿಸಿದಾಗ ನ್ಯಾಯಾಧಿಕರಣ, 240 ದಿವಸ ಪೂರೈಸಿದ ಸೀಸನಲ್ ನೌಕರರನ್ನು ಖಾಯಂ ಮಾಡಲು ನೀಡಿದ ಆದೇಶವನ್ನು ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯ ತಿರಸ್ಕರಿಸಿತು. ಅದನ್ನು ಪ್ರಶ್ನಿಸಿದಾಗ, ಶ್ರೇಷ್ಠ ನ್ಯಾಯಾಲಯದ ಸೀಸನಲ್ ನೌಕರರನ್ನು ಖಾಯಂ ಮಾಡಲು ಮಾದರಿ ಸೇವಾ ನಿಯಮಗಳಡಿ (ಮಾಡಲ್ ಸ್ಟ್ಯಾಂಡಿಂಗ್ ಆರ್ಡರ್) ನಂತೆ ಬರುವುದಿಲ್ಲವೆಂದು ತೀರ್ಮಾನಿಸಿತು. ಅಂದರೆ ನ್ಯಾಯಾಧಿಕರಣದ ಆದೇಶವನ್ನು ರದ್ದುಗೊಳಿಸಿ, ಅಂತಹ ಸೀಸನಲ್ ನೌಕರರನ್ನು ಖಾಯಂಗೊಳಿಸಲಾಗದು ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (1994 Indlaw SC 1275, (1994) 3 SCC (Supp) 385, AIR 1994 SC 1046)

72. ಹಿಮಾಚಲ್ ಸಹಕಾರ ಕಾಯಿದೆ, ಒಂದು ಗ್ರಾಹಕ ಸಂಘದ ವ್ಯವಸ್ಥಾಪಕರನ್ನು ನೋಟೀಸ್ ಜಾರಿ ಮಾಡದೆ ಆಡಳಿತಾಧಿಕಾರಿ ಒಪ್ಪಿಗೆ ಇಲ್ಲದೆ, ವಜಾ ಮಾಡಿದ ಪ್ರಕರಣ ದಾಖಲಿಸಿದಾಗ ಸಹಾಯಕ ನಿಬಂಧಕರು ಏಳು ವರ್ಷಗಳ ನಂತರ ವಜಾಗೊಳಿಸಿದ ಆದೇಶವನ್ನು ರದ್ದುಗೊಳಿಸಿ, ಕೆಲಸಕ್ಕೆ ಮರು ನೇಮಕಾತಿಗೆ ಆದೇಶಿಸಿದರು, ಆದರೆ ಬಾಕಿ ಸಂಬಳ ಪಾವತಿಗೆ ಆದೇಶಿಸಲಿಲ್ಲ. ಈ ಆದೇಶವನ್ನು ಜಾರಿ ಮಾಡಲು ವಿವಿಧ ಪ್ರಾಧಿಕಾರಗಳ ಮುಂದೆ ಪ್ರಯತ್ನಿಸಿದರೂ ಸಾರ್ಥಕವಾಗಲಿಲ್ಲ. ಉಚ್ಚನ್ಯಾಯಾಲಯದ ಆದೇಶವನ್ನು ಪಾಲಿಸದೇ ಇದ್ದಾಗ ಶ್ರೇಷ್ಠನ್ಯಾಯಾಲಯದಲ್ಲಿ ವಿಶೇಷ ಮನವಿ ಸಲ್ಲಿಸಿದಾಗ, ಸಂಘದ ಅಧಿಕಾರಿಗಳಿಂದ ಆದೇಶ ಜಾರಿ ಮಾಡಲು ಅಡ್ಡಿಪಡಿಸುತ್ತಿದ್ದು. ಬಾಕಿ ಸಂಬಳವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿ ಮಾಡಿಕೊಳ್ಳಲು ಆದೇಶಿಸಿತು. (1993 Indlaw SC 1121, (1993) 3 SCC 214, AIR 1994 SC 23)

73. ಉತ್ತರಪ್ರದೇಶ ಸಹಕಾರ ಕಾಯಿದೆಯಲ್ಲಿನ ಸೇವಾ ನಿಯಮಗಳಡಿ [17(1) ಮತ್ತು 19(ಎ)] ತಾತ್ಪೂರ್ವಿಕವಾಗಿ ನೇಮಕವಾದ ನೌಕರರನ್ನು ಖಾಯಂ ಮಾಡಿದಾಗ, ಅಂತಹ ನೌಕರ ಮತ್ತೊಮ್ಮೆ ಸಾಮಾನ್ಯ ನೌಕರನಾಗುತ್ತಾನೆ. ಅವನು ಸೇವೆಯಲ್ಲಿದ್ದು ವಜಾಗೊಳಿಸುವಾಗ, ಒಂದು ತಿಂಗಳ ನೋಟೀಸ್ ಬದಲು ಒಂದು ತಿಂಗಳ ಸಂಬಳ ಪಾವತಿ ಮಾಡಿದರೆ, ಅದು ಕಾನೂನುನನ್ವಯ ಸರಿ. ಇದಕ್ಕೆ 1975ರ ನಿಯಮಗಳು ಅನ್ವಯವಾಗುತ್ತದೆ. (1984 ರಲ್ಲಿ ಹೊಸದಾಗಿ ಮಾಡಿದ ನಿಯಮಗಳಲ್ಲಿ) (1992 Indlaw SC 1096, (1992) 4 SCC 17, AIR 1992 SC 2093)

74. ಮಹಾರಾಷ್ಟ್ರ ಕಾಯಿದೆಯ ಒಂದು ಸಹಕಾರ ಸಂಘದ ನೌಕರರಿಗೆ ಪಾವತಿಸುವ ಬೋನಸ್ ಬಗ್ಗೆ ಉಚ್ಚನ್ಯಾಯಾಲಯ ಆದೇಶಿಸಿದ 75-76 ರಿಂದ 77-78 ರವರೆವಿಗೆ ಶೇ.20% ರಂತೆ ಪಾವತಿಸಲು ಮಾಡಿದ ಆದೇಶವನ್ನು ಮಾರ್ಪಾಡು ಮಾಡಿ, ಸಂಘದ ಹೂಡಿಕೆಗಳು ಆದರೆ ಸಂಪನ್ಮೂಲಗಳನ್ನು ತೊಡಗಿಸಿದ್ದನ್ನು ಪರಿಗಣಿಸಿ, ಲೆಕ್ಕಹಾಕಬೇಕು ಮತ್ತು ಆ ಹೂಡಿಕೆಗಳ ಆಧಾರದ ಮೇಲೆ 75-76 ನೇ ವಾರ್ಷಿಕ್ಕೆ 18.78% ದರದಲ್ಲಿ ಬೋನಸ್ ಪಾವತಿ ಮಾಡಲು ಮತ್ತು 76-77 ಮತ್ತು 77-78ನೇ ವರ್ಷಕ್ಕೆ ಶೇ.20% ರಂತೆ ಪಾವತಿಸಲು ಮಾರ್ಪಡಿಸಿ ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. (1989

Indlaw SC 554, (1989) 3 SCC 89, AIR 1989 SC 1398)

75. ಉತ್ತರಪ್ರದೇಶ ಕಾಯಿದೆಯಲ್ಲಿ ನೌಕರರಿಗೆ ಸಂಬಂಧಪಟ್ಟ ಶಿಸ್ತು ಕ್ರಮಕ್ಕೆ ಸಂಸ್ಥೆಗಳ ಸೇವಾ ಮಂಡಳಿ ರಚಿಸಿದಾಗ, ಮೇಲ್ಮನವಿ ಸಲ್ಲಿಸಲು ಅವಕಾಶ ಇಲ್ಲ. ಆದ್ದರಿಂದ ಅಂತಹ ನೌಕರರು ಮೇಲ್ಮನವಿ ಸಲ್ಲಿಸಲು ಉತ್ತರಪ್ರದೇಶ ಸರ್ಕಾರದ ಕಾನೂನು ಇಲಾಖೆ ಕಾರ್ಯದರ್ಶಿಯನ್ನು ಮೇಲ್ಮನವಿ ಪ್ರಾಧಿಕಾರವೆಂದು ಶ್ರೇಷ್ಠನ್ಯಾಯಾಲಯ ತೀರ್ಮಾನಿಸಿ ಆದೇಶಿಸಿತು. (1987 Indlaw SC 28454, (1989) 2 SCC (Supp) 498)

76. ಉತ್ತರಪ್ರದೇಶ ಕಾಯಿದೆಯಲ್ಲಿ ಒಂದು ಸಂಘದಲ್ಲಿ ಹಣ ದುರುಪಯೋಗವಾಗಿದ್ದು, ವಸೂಲಾತಿಗೆ ದಾವಾ ದಾಖಲಿಸಿದಾಗ, ವಿಚಾರಣ ಮಾಡಿ ವಸೂಲಾತಿಗೆ ಆದೇಶಿಸಿದರು (ಉಪನಿಬಂಧಕರು). ಈ ಆದೇಶ ಮಾಡುವಾಗ ಉಪನಿಬಂಧಕರು ವಸೂಲಾತಿ ಆದೇಶ ನೀಡಬೇಕೆಂದು ಪೂರ್ವಗ್ರಹಿಯಾಗಿದ್ದರು ಎಂಬುದನ್ನು ಗಮನಿಸಿ, ಆರೋಪಿಗೆ ಸಾಕಷ್ಟು ಅವಕಾಸ ನೀಡಿಲ್ಲವೆಂದು ಉಚ್ಚನ್ಯಾಯಾಲಯ ತೀರ್ಮಾನಿಸಿತು ಮತ್ತು ಕಾನೂನಿನಲ್ಲಿ ಸ್ಪಷ್ಟವಾಗಿ ಸಿವಿಲ್ ನ್ಯಾಯಾಲಯಕ್ಕೆ ಅಧಿಕಾರ ಇಲ್ಲವೆಂದು ತಿಳಿಸದಿದ್ದರೆ, ಸಿವಿಲ್ ನ್ಯಾಯಾಲಯ, ಸಾಮಾನ್ಯ ನ್ಯಾಯ ನೀತಿಯಂತೆ, ಪ್ರಕರಣ ಸ್ವೀಕರಿಸಿ ವಿಚಾರಣೆ ನಡೆಸಬಹುದು ಎಂದು ತೀರ್ಮಾನಿಸಿತು. ಇದನ್ನು ಶ್ರೇಷ್ಠ ನ್ಯಾಯಾಲಯ ಉಚ್ಚನ್ಯಾಯಾಲಯದ ಆದೇಶವನ್ನು ಡಿಕ್ರಿ ಬಗ್ಗೆ ನೀಡಿದ ಆದೇಶವನ್ನು ಕಿತ್ತು ಹಾಕಿ ದಾವಾದಲ್ಲಿ ಮಾಡಿದ ವಸೂಲಾತಿ ಆದೇಶವನ್ನು ದೃಡೀಕರಿಸಿತು. (1969 Indlaw SC 492, (1969) 3 SCC 694)

77. ಮಹಾರಾಜ್ಯ ಸಹಕಾರ ಕಾಯಿದೆಯು ಒಂದು ಸಹಕಾರ ಸಂಘದ ನೌಕರನ್ನು ನಿವೃತ್ತಿಯಾಗುವಾಗ, ಗ್ರಾಚ್ಯುಯಿಟಿ ಪಾವತಿಸಲು ಯಾವುದೇ ನಿಯಮಗಳು ಇಲ್ಲದೇ ಇದ್ದರೂ ಸಂಘ ನಿಬಂಧಕರರ ಒಪ್ಪಿಗೆಯಿಂದ ರೂಪಿಸಿದ ಹಳೆ ನಿಯಮಗಳಂತೆ ಗ್ರಾಚ್ಯೂಯಿಟಿ ಪಾವತಿಸತಕ್ಕದ್ದು. ನಿಬಂಧಕರು ಹೊಸ ಗ್ರಾಚ್ಯೂಯಿಟಿ ನಿಯಮಗಳನ್ನು ರೂಪಿಸಿ, ಹಳೆಯ ನಿಯಮಗಳನ್ನು ರದ್ದು ಪಡಿಸಿದರೂ, ನಿವೃತ್ತಿ ನೌಕರನಿಗೆ ಹಳೇ ನಿಯಮದಂತೆ ಗ್ರಾಚ್ಯೂಯಿಟಿ ಪಾವತಿಸತಕ್ಕದ್ದು. (1969 Indlaw SC 99, (1969) 2 SCC 713, AIR 1970 SC 1966)

78. ಮಹಾರಾಷ್ಟ್ರ ಕಾಯಿದೆಯಲ್ಲಿ ಕ್ರಿಮಿನಲ್ ಮೊಕದಮ್ಮೆ ಹೂಡಲು ನಿಬಂಧಕರ ಪೂರ್ವಾನುಮತಿ ಅವಶ್ಯಕ. ಸಹಕಾರ ನ್ಯಾಯಾಲಯವನ್ನು ನ್ಯಾಯಾಲಯ ಎಂದು ಕರೆಯಲಾಗದು. ಸಹಕಾರ ನ್ಯಾಯಾಲಯ/ನ್ಯಾಯಾಧಿಕರಣ ಸಿವಿಲ್ ನ್ಯಾಯಾಲಯದ ಹಲವು ಅಧಿಕಾರ ಚಲಾಯಿಸಲು ಅವಕಾಶ ಕಲ್ಪಿಸಿದ್ದರೂ, ನ್ಯಾಯಾಲಯ ಎಂಬ ಅರ್ಥದಲ್ಲಿ ಬರುವುದಿಲ್ಲ. ಅಂದರೆ ಸಿವಿಲ್/ಕ್ರಿಮಿನಲ್ ನ್ಯಾಯಾಲಯಗಳನ್ನು ನ್ಯಾಯಾಲಯ ಎಂದು ಮಾತ್ರ ಅರ್ಥೈಸಬೇಕು. ನಿಬಂಧಕರ ಅಧಿಕಾರವನ್ನು ಕಾಯಿದೆಯಲ್ಲಿ ನೀಡಲಾಗದೆ ಮತ್ತು ಅವರ ಅಧಿಕಾರವನ್ನು ಚಲಾಯಿಸಲು ಕೆಳ ಅಧಿಕಾರಿಗಳಿಗೆ, ಅಧಿಕಾರ ನೀಡಿದರೂ, ಕ್ರಿಮಿನಲ್ ಪ್ರಕರಣ ದಾಖಲಿಸಲು ಕಾಯಿದೆ ಕಲಂ 146(ಪಿ), 148(3) ಮತ್ತು ಐಪಿಸಿ 465 ರನ್ವಯ ನಿಬಂಧಕರ ಪೂರ್ವಾನುಮತಿ ಅವಶ್ಯಕ. (1968 Indlaw SC 343, (1969) 1 SCC 167, AIR 1969 SC 724)

79. ರಾಜಸ್ಥಾನ್ ಸಹಕಾರ ಕಾಯಿದೆಯಡಿ ಒಂದು ಕೃಷಿಯೇತರ ಸಾಲ ನೀಡುವ ಸಂಘದ ನೌಕರನ ಮೇಲೆ ಶಿಸ್ತು ಕ್ರಮ ಜರುಗಿಸಿದ್ದು, ಈ ಪ್ರಕರಣವನ್ನು ನ್ಯಾಯಾಧಿಕರಣ ರದ್ದುಗೊಳಿಸಿದ್ದು ಮರು ನೇಮಕಾತಿಗೆ ಆದೇಶಿಸಿರುವುದನ್ನು ರದ್ದುಗೊಳಿಸುವ ಮೊದಲು, ಆರೋಪಿ ನೌಕರನಿಗೆ ಯಾವ ಸ್ಪಷ್ಟ ಕಾರಣದ ಆಧಾರದ ಮೇಲೆ ಆರೋಪ ಹೊರಿಸಲಾಗಿದೆ ಎಂದು ತಿಳಿಸಿದೆ, ವಜಾ ಮಾಡಿರುವುದು ತಪ್ಪು ಮತ್ತು ಆರೋಪಿ ನೌಕರನಿಗೆ ಗೈರು ಹಾಜರಾಗಿದ್ದಾನೆಂಬ ಆಧಾರದ ಮೇಲೆ ಪ್ರಕರಣ

ತೀರ್ಮಾನಿಸಲಾಗದು. ಈ ವಿಷಯ ತೀರ್ಮಾನವಾಗುತ್ತಿರುವ ಸಂದರ್ಭದಲ್ಲಿ, ಶ್ರೇಷ್ಠ ನ್ಯಾಯಾಲಯದ ಗಮನಕ್ಕೆ ವಕೀಲರು ಮರು ವಿಚಾರಣೆ ಮಾಡಿ ಮತ್ತೊಮ್ಮೆ ವಜಾ ಆದೇಶ ಹೊರಡಿಸಲಾಗಿದ್ದು, ಆ ಪ್ರಕರಣ ಪರಿಹಾರ ನೀಡುವ ಬಗ್ಗೆ ವಿಚಾರಣೆ ನಡೆಯುತ್ತಿರುವುದರಿಂದ, ಈ ಪ್ರಕರಣದಲ್ಲಿ ತೀರ್ಮಾನ ಕೊಡುವುದು ಸೂಕ್ತವಲ್ಲವೆಂದು ವಜಾ ಮಾಡಿತು. (1967 Indlaw SC 16, AIR 1967 SC 1182)

80. ಕರ್ನಾಟಕ ಸಹಕಾರ ಕಾಯಿದೆಯಡಿ ಒಂದು ಗ್ರಾಹಕರ ಸಂಘದ ನೌಕರನ್ನು ಕಾರ್ಮಿಕ ನ್ಯಾಯಾಲಯ ಶೇ.25% ರಷ್ಟು ಬಾಕಿ ಸಂಬಳದ ಜೊತೆ ಮರು ನೇಮಕ ಮಾಡಿದ ಆದೇಶವನ್ನು ಸಮರ್ಥಿಸಿ ಉಚ್ಚನ್ಯಾಯಾಲಯ ನೀಡಿದ ಆದೇಶವನ್ನು ಪ್ರಶ್ನಿಸಿ, ಶ್ರೇಷ್ಠ ನ್ಯಾಯಾಲಯದ ಮುಂದೆ ವಿಶೇಷ ಮನವಿ ಸಲ್ಲಿಸಿದಾಗ, ಉಚ್ಚನ್ಯಾಯಾಲಯ ಆದೇಶವನ್ನು ಪರಿಶೀಲಿಸಿ, ಒಬ್ಬ, ನೌಕರ ಸ್ಪಷ್ಟ ಹಣಕಾಸು ಅವ್ಯವಹಾರ ಮಾಡಿದ ಬಗ್ಗೆ ದಾಖಲಿಸಿ ತೀರ್ಮಾನಕ್ಕೆ ಬಂದ ಮೇಲೆ, ಅವನ ಹಿಂದಿನ ಅವ್ಯವಹಾರದ ಬಗ್ಗೆ ಪರಿಶೀಲಿಸುವ ಅವಶ್ಯಕತೆ ಇಲ್ಲ. ಅಂದರೆ ಒಬ್ಬ ನೌಕರನ ಮೇಲೆ ಶಿಸ್ತು ಕ್ರಮವಾಗಿ ವಜಾ ಮಾಡಿದಾಗ ಅವನು ಈ ಪ್ರಕರಣಕ್ಕೆ ಹಿಂದೆ ದುರುಪಯೋಗ ಮಾಡಿದ ಬಗ್ಗೆ ಪರಿಶೀಲಿಸುವ ಅವಶ್ಯಕತೆ ಇಲ್ಲ. ಆದ್ದರಿಂದ ಕಾರ್ಮಿಕ ನ್ಯಾಯಾಲಯ ಮತ್ತು ಉಚ್ಚನ್ಯಾಯಾಲಯ ನೀಡಿದ ಆದೇಶವನ್ನು ಕಿತ್ತುಹಾಕಿ, ದುರುಪಯೋಗ ಮಾಡಿದ ಬಗ್ಗೆ ಸಾಬೀತಾಗಿದ್ದರೆ, ಹಿಂದಿನ ಪ್ರಕರಣ ಪರಿಶೀಲಿಸಬೇಕಿಲ್ಲ ಎಂದು ವಿಶೇಷ ಮೇಲ್ಮನವಿಯನ್ನು ಪುರಸ್ಕರಿಸಿತು. (2000 Indlaw SC 472, (2000) 7 SCC 517, AIR 2000 SC 3139)

81. ಆಂಧ್ರಪ್ರದೇಶ ಕಾಯಿದೆಯಡಿ ಸಹಕಾರ ಸಂಘಗಳ ನೌಕರರು ಲೊಕಾಯುಕ್ತ ಕಾಯಿದೆಯಲ್ಲಿ ವಿಚಾರಣೆಗೊಳ ಪಡುತ್ತಾರೇಯೋ ಎಂಬ ವಿಷಯ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಸಹಕಾರ ಸಂಘಗಳ ನೌಕರರು/ರಾಜ್ಯ ರಸ್ತೆ ಸಾರಿಗೆ ನಿಗಮದ ನೌಕರರು ಲೊಕಾಯುಕ್ತ/ಉಪಲೊಕಾಯುಕ್ತ ಕಾಯಿದೆ ವ್ಯಾಪ್ತಿಗೆ ಬರುವುದಿಲ್ಲ ಎಂಬ ತೀರ್ಮಾನವನ್ನು ವಿಭಾಗೀಯ ಪೀಠ ಎತ್ತಿಹಿಡಿಯಿತು. ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ವಿಭಾಗೀಯ ಪೀಠದ ಆದೇಶವನ್ನು ಎತ್ತಿ ಹಿಡಿಯಿತು. ಅಂದರೆ ಆಂಧ್ರಪ್ರದೇಶ ಲೊಕಾಯುಕ್ತ/ಉಪಲೊಕಾಯುಕ್ತ ವ್ಯಾಪ್ತಿಗೆ (1983ರ ಕಾಯಿದೆ) "ಸಾರ್ವಜನಿಕ ಸೇವಕರು" ಎಂಬ ಅರ್ಥದಲ್ಲಿ ಬರುವುದಿಲ್ಲವಾದ್ದರಿಂದ ಲೊಕಾಯುಕ್ತ/ಉಪಲೊಕಾಯುಕ್ತರು ವಿಚಾರಣೆ ನಡೆಸಲು ಅಧಿಕಾರ ಇಲ್ಲ. (ಕಲಂ 2(ಕೆ) 1983ರ ಕಾಯಿದೆ) (1996 Indlaw SC 2028, (1997) 9 SCC 42)

82. ಆಂಧ್ರಪ್ರದೇಶದ ಒಂದು ಪಟ್ಟಣಾ ಬ್ಯಾಂಕಿನ ವ್ಯವಸ್ಥಾಪಕರು, ರೈತರಿಂದ ಪಡೆದ ರೂ.10,000/– ವನ್ನು ಬೆಳೆಸಾಲದ ಖಾತೆಗೆ ಜಮಾ ಮಾಡಲಿಲ್ಲ. (ಡಿಸೆಂಬರ್ 1986) ದಿನಾಂಕ 22.03.1986 ರಂದು ರೂ.11,517.50 ನ್ನು ಸಾಲಗಾರನ ಹೆಸರಿನಲ್ಲಿ ಬ್ಯಾಂಕಿಗೆ ಜಮಾ ಮಾಡಿದೆ, ಅಂದರೆ ಸಾಲಗಾರನ ಹೆಸರಿನಲ್ಲಿ ಮೂರು ತಿಂಗಳ ಅವಧಿಗೆ ಹಣ ದುರುಪಯೋಗ ಮಾಡಿಕೊಳ್ಳಲಾಗಿದೆ ಎಂದು ಆರೋಪ ಹೊರಿಸಿ ವಿಚಾರಣೆ ನಡೆಸಿ, ಶಿಸ್ತು ಕ್ರಮದ ಪೂರಕ ವಜಾ ಮಾಡಿದಾಗ ಉಚ್ಚನ್ಯಾಯಾಲಯದಲ್ಲಿ ವಿಚಾರಣೆ ಮಾಡಿದಾಗ, ಆರೋಪಿ ನೌಕರನನ್ನು ಪರೀಕ್ಷಿಸಿಲ್ಲವೆಂದು ತೀರ್ಮಾನಿಸಿರುವುದನ್ನು ಬ್ಯಾಂಕ್ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಉಚ್ಚನ್ಯಾಯಾಲಯದ ತೀರ್ಮಾನ ಸರಿಯಿಲ್ಲ. ಸಾಕಷ್ಟು ಅವಕಾಶ ನೀಡಲಾಗಿದೆ, ಆದ್ದರಿಂದ ವಿಚಾರಣಾ ಅವಧಿಯಲ್ಲಿ ನೀಡಿದ ಅವಕಾಶ ಸಮರ್ಪಕವಾಗಿದೆ ಎಂದು ತೀರ್ಮಾನಿಸಿತು. (1996 Indlaw SC 693, (1996) 3 SCC 364, AIR 1966 SC 1669)

83. ಉತ್ತರಪ್ರದೇಶ ಸಹಕಾರ ಕಾಯಿದೆಯಲ್ಲಿನ ಒಂದು ಸಕ್ಕರೆ ಕಾರ್ಖಾನೆಯಲ್ಲಿ, ಒಬ್ಬ ನೌಕರನನ್ನು

ಒಂದು ವರ್ಷದ ಪರೀಕ್ಷಾರ್ಹ ಅವಧಿಯ ನಂತರ, ಮತ್ತೊಂದು ವರ್ಷದ ಪರೀಕ್ಷಾರ್ಹ ಅವಧಿಗೆ ವಿಸ್ತರಿಸಿ, ಆ ಅವಧಿಯಲ್ಲಿ ನಂತರ ನೌಕರನನ್ನು ವಾಣಿಜ್ಯ ಅಧಿಕಾರಿ ಹುದ್ದೆಯಿಂದ ಅಧೀಕ್ಷಕ ಹುದ್ದೆಗೆ ಹಿಂಬಡ್ತಿ ನೀಡಿತು. ಪರೀಕ್ಷಾರ್ಹ ಅವಧಿಯಲ್ಲಿ ಆ ನೌಕರನ್ನು ವಜಾ ಮಾಡುವುವಾಗಲೀ ಅಥವಾ ಹಿಂಬಡ್ತಿ ನೀಡುವುದಾಗಲೀ ಮಾಡಲಿಲ್ಲ. ಅಂದರೆ, ಸೇವಾ ನಿಯಮಗಳಂತೆ ಎರಡು ವರ್ಷಗಳ ಪರೀಕ್ಷಾವಧಿ ಮುಗಿದ ಕೂಡಲೇ ಅವನು ಖಾಯಂ ನೌಕರನಾಗುತ್ತಾನೆ. ಆದ್ದರಿಂದ ಅವನ ಸೇವೆಯಿಂದ ಹಿಂಬಡ್ತಿ ಅಥವಾ ವಜಾ ಮಾಡಲಾಗದು. ಆದ್ದರಿಂದ ಅವನ ಹಿಂಬಡ್ತಿ ಆದೇಶ ಊರ್ಜಿತವಲ್ಲ ಎಂದು ತೀರ್ಮಾನಿಸಿತು. (1986 Indlaw SC 191, (1986) SCC (Supp) 95, AIR 1986 SC 1844)

84. ಬಾಂಬೆ ಸಹಕಾರ ಸಂಘಗಳ ಕಾಯಿದೆಯಡಿ ಒಂದು ಸಹಕಾರ ಸಂಘ ಅಗತ್ಯ ವಸ್ತುಗಳ ವಿತರಣೆ ಮಾಡುವ ಸಂದರ್ಭ ಸರ್ಕಾರ ನೇಮಕ ಮಾಡಿದ ಒಬ್ಬ ಅಧಿಕಾರಿ, ಸಂಘದಲ್ಲಿ ಕೆಲಸ ನಿರ್ವಹಿಸುವ ಅವಧಿಯಲ್ಲಿ "ಸಾರ್ವಜನಿಕ ನೇಮಕ" ಎಂಬ ಅರ್ಥದಲ್ಲಿ ಬರುವುದಿಲ್ಲ. ಅಂದರೆ ಸರ್ಕಾರ, ಅರೆ ಸರ್ಕಾರಿ/ಜಿಲ್ಲಾ ಪಂಚಾಯಿತ್/ನಿಗಮ/ಮಂಡಳಿ ಗಳಲ್ಲದೆ, ಸಹಕಾರ ಸಂಘಕ್ಕೆ ನಿಯೋಜಿಸಿದ ಸರ್ಕಾರಿ ಅಧಿಕಾರಿ ಸಂಬಳ ಸರ್ಕಾರ ಪಾವತಿಸದೇ ಇರುವುದರಿಂದ ಅವನ್ನು ಸಾರ್ವಜನಿಕ ಸೇವಕನಲ್ಲ. (1981 Indlaw SC 248, (1981) 3 SCC 431, AIR 1981 SC 1395)

85. ಆಂದ್ರಪ್ರದೇಶ ಸಹಕಾರ ಕಾಯಿದೆಯಲ್ಲಿ ದಾವಾ ಪ್ರಕರಣ ದಾಖಲಿಸುವಾಗ "ಇನ್ನಾವುದೇ ವಿವಾದ" ಎಂದರೆ ನೌಕರರ ವಿವಾದ ಸೇರುವುದರ ಬಗ್ಗೆ ವಿಮರ್ಷೆ ಮಾಡಿ ಸಂಘದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಎಂದರೆ, ಅದು ನೌಕರರ ವಿವಾದ ಸೇರುವುದಿಲ್ಲ. ನೌಕರರಿಗೆ ಸಂಬಂಧಪಟ್ಟಂತೆ ನಿಬಂಧಕರ ಕಾರ್ಯವ್ಯಾಪ್ತಿಗೆ ಸಂಬಂಧಪಟ್ಟ ವಿಷಯವಲ್ಲ. ಅಂದರೆ ನೌಕರರನ್ನು ತೆಗೆದು ಹಾಕುವ ಅಥವಾ ಪುನರ್ ಸ್ಥಾಪಿಸುವ ಅಧಿಕಾರ ನಿಬಂಧಕರಿಗೆ ಇಲ್ಲಿ, ಇದು ಕಾರ್ಮಿಕ ನ್ಯಾಯಾಲಯದ ವ್ಯಾಪ್ತಿ ಎಂದು ತೀರ್ಮಾನಿಸಿತು.

**ಸೂಚನೆ : ಈ ತೀರ್ಮಾನವನ್ನು ಕಾನೂನು ತಿದ್ದುಪಡಿಗಳ ನಂತರ ಶ್ರೇಷ್ಠ ನ್ಯಾಯಾಲಯ ನಿಬಂಧಕರ ಕಾರ್ಯವ್ಯಪ್ತಿಗೆ ಬರುತ್ತದೆ ಎಂದು ತೀರ್ಮಾನಿಸಿದೆ. ಅಂದರೆ ಈ ತೀರ್ಮಾನ ಈಗ ಸಿಂಧುವಲ್ಲ.**

(1979 law SC 291, (1979) 3 SCC 123, AIR 1979 SC 1203)

86. ಪಂಜಾಬ್ ಸಹಕಾರ ಕಾಯಿದೆಯ ರಾಜ್ಯ ಭೂಅಭಿವೃದ್ಧಿ ಬ್ಯಾಂಕಿನ ನೇಮಕಾತಿಗೆ ಸಂಬಂಧಪಟ್ಟಂತೆ, ರಿಟ್ ದಾಖಲಿಸುವ ಬಗ್ಗೆ, ಈ ಹಿಂದೆ ಸಹಕಾರ ಸಂಘ "ರಾಜ್ಯ" ಎಂಬ ವ್ಯಾಪ್ತಿಗೆ ಬರುವುದಿಲ್ಲವೆಂದು ವಿಭಾಗೀಯ ಪೀಠ 1992 Indlaw SC 144 ನಲ್ಲಿ ತೀರ್ಮಾನ ನೀಡಿತ್ತು. ನೇರ ನೇಮಕಾತಿ ಮತ್ತು ಭಡ್ತಿ ಮೀಸಲಾತಿ ಬಗ್ಗೆ ವಿಮರ್ಷೆ ಮಾಡುವಾಗ ನಿಗದಿತ ಪ್ರಮಾಣ ನಿಗದಿ ಪಡಿಸಿದ್ದು ಅದನ್ನು ಪಾಲಿಸುವುದು ಬ್ಯಾಂಕಿನ ಕರ್ತವ್ಯ. ಈ ನೀತಿಯನ್ನು ಪರಾಮರ್ಷಿಸುವ ಅಗತ್ಯವಿಲ್ಲವೆಂದು ವಿಶೇಷ ಮನವಿಯನ್ನು ವಜಾಗೊಳಿಸಿತು. (1976 Indlaw SC 114, (1976) 3 SCC 828, AIR 1976 SC 2216)

87. ಆಗ್ರಾ ಜಿಲ್ಲಾ ಸಹಕಾರ ಬ್ಯಾಂಕಿನ ಒಬ್ಬ ನೌಕರನನ್ನು ವಾರ್ಷಿಕ ಮಹಾಸಭೆಯ ಹಿಂದಿನ ದಿವಸ ತುರ್ತು ಆಡಳಿತ ಮಂಡಲಿ ಸಭೆ ಕರೆದು ವಜಾ ಮಾಡಲು ತೀರ್ಮಾನಿಸಿ ಜಾರಿ ಮಾಡಿತು. ನೌಕರನು ಇದನ್ನು ನಿಬಂಧಕರ ಮುಂದೆ ಪ್ರಶ್ನಿಸಿದಾಗ, ನಿಬಂಧಕರ, ನೋಟೀಸ್ ಜಾರಿ ಮಾಡಿದೆ, ಅಂದರೆ ಸ್ವಾಭಾವಿಕ ನ್ಯಾಯಾದನ್ವಯ ಅವಕಾಶ ನೀಡದೇ ತೆಗೆದು ಹಾಕಿರುವುದು ತಪ್ಪು ಎಂದು ವಜಾ ಆದೇಶವನ್ನು ರದ್ದು ಮಾಡಿ ಆದೇಶಿಸಿದರು. ಈ ಆದೇಶವನ್ನು ಒಂದು ವರ್ಷದ ನಂತರ

ಹೊಸದಾಗಿ ಬಂದ ನಿಬಂಧಕರು ಯಾವುದೇ ಕಾರಣ ನೀಡದೆ ಹಿಂದಿನ ನಿಬಂಧಕರ ಆದೇಶವನ್ನು ಹಿಂಪಡೆದರು. ಈ ವಿಷಯವನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಬೇರೆ ಕಾರಣಗಳಿಂದ ಪುರಸ್ಕರಿಸಿದ್ದನ್ನು ಶ್ರೇಷ್ಠ ನ್ಯಾಯಾಲಯ ರದ್ದು ಪಡಿಸಿ, ಹೊಸದಾಗಿ ಬಂದ ನಿಬಂಧಕರ ಆದೇಶವನ್ನು ಮತ್ತು ಆ ನಂತರ ಅದರ ಆಧಾರದ ಮೇಲೆ ಆಡಳಿತಾಧಿಕಾರಿ ಹೊರಡಿಸಿದ ಎಲ್ಲಾ ಆದೇಶಗಳನ್ನು ರದ್ದು ಪಡಿಸಿತು ಮತ್ತು ನೌಕರನ್ನು ಎಲ್ಲಾ ಹಂತದ ಖರ್ಚನ್ನು ಭರಿಸಲು ಆದೇಶಿಸಿತು. (1976 Indlaw SC 114, (1976) 3 SCC 828, AIR 1976 SC 2216)

88. ಆಂದ್ರಪ್ರದೇಶ ಕಾಯಿದೆಯಡಿ, ಒಂದು ಸಂಸ್ಥೆಯ ನೌಕರನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಾಗ (ನೌಕರರ ಕ್ಷೇಮ ನಿಧಿ ಉದ್ದೇಶಕ್ಕೆ) ಒಂದು ವರ್ಷದ ಅವಧಿಯೊಳಗೆ ಕೆಲಸ ನಿರ್ವಹಿಸಿದ್ದರೆ, ಅದನ್ನು ಪರಿಗಣಿಸುವಂತಿಲ್ಲ. ಇದು ಕಲಂ.1(3)(ಎ) ನ ಅರ್ಥದಲ್ಲಿ ಬರುವುದಿಲ್ಲ. ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿಹಿಡಿಯುತ್ತಾ ಶ್ರೇಷ್ಠ ನ್ಯಾಯಾಲಯ ಪ್ರತಿ ವರ್ಷ ಜೂನ್ ನಿಂದ ಸೆಪ್ಟೆಂಬರ್ ವರೆಗೆ ನೀರು ಸರಬರಾಜು ಮಾಡಲು ನೇಮಿಸಿಕೊಂಡಿದ್ದರೆ ಮಾತ್ರ ಖಾಯಂ ನೌಕರ ಎಂದು ಪರಿಗಣಿಸಲು ಮಂಡಿಸಿದ ವಾದವನ್ನು ಉಚ್ಚನ್ಯಾಯಾಲಯ ಒಪ್ಪದೆ ಇರುವುದು ಸರಿಯಾದ ಕ್ರಮ. (1971 Indlaw SC 103, (1971) 2 SCC 68, AIR 1971 SC 1519)

## ಆದಾಯ ತೆರಿಗೆ ಕಾಯಿದೆಗೆ ಸಂಬಂಧಪಟ್ಟ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯದ ತೀರ್ಪುಗಳು

1. ಗುಜರಾತ್ ಕಾಯಿದೆಯಡಿ ಒಂದು ಹತ್ತಿ ಗಿರಣಿ ತನ್ನ ಸದಸ್ಯರಿಂದ ಸ್ವೀಕರಿಸದ ಹತ್ತಿಯನ್ನು ಸಂಸ್ಕರಿಸಿ ಮಾರಾಟ ಮಾಡಿದರೆ, ಅದು ವ್ಯವಸಾಯ ಉತ್ಪನ್ನವಾಗುವುದಿಲ್ಲ ಎಂಬ ಆದಾಯ ತೆರಿಗೆ ಇಲಾಖೆ ಅಭಿಪ್ರಾಯಕ್ಕೆ ಶ್ರೇಷ್ಠ ನ್ಯಾಯಾಲಯ ಕಾಯಿದೆ ಕಲಂ 81(1) ರಲ್ಲಿ ನೀಡಿ ಅವಕಾಶ ಕಲ್ಪಿಸಿದ್ದು. ಪರಂತುಕದಲ್ಲಿ ನೀಡಿರುವ ವಿವರಣೆ ಅನ್ವಯಿಸದು. ಕಲಂ 81(1) ರಲ್ಲಿನ ವಿನಾಯ್ತಿ ಅನ್ವಯವಾಗುತ್ತಿದೆ. ಅಂದರೆ ಸಂಸ್ಕರಿಸಿದ ಹತ್ತಿಗೆ ವಿನಾಯ್ತಿ ಇದೆ ಎಂದು ತೀರ್ಮಾನಿಸಿತು. (1989 Indlaw SC 596, (1989) 2 SCC 679, AIR 1989 SC 1493)
2. ಉತ್ತರಪ್ರದೇಶ ಕಾಯಿದೆಯಡಿ ಒಂದು ಮಹಾಮಂಡಳ ಕಲ್ಲಿದ್ದಲು, ಸಕ್ಕರೆ ಮತ್ತಿತರ ವಸ್ತುಗಳ ವಿತರಣೆಯನ್ನು ಸದಸ್ಯ ಸಂಘಗಳ ಮುಖಾಂತರ ನಡೆಸಿದಾಗ, ಭದ್ರತೆಗಾಗಿ ನೀಡಿದ ಠೇವಣಿ ಮತ್ತು ಅದರ ಮೇಲೆ ಸ್ವೀಕರಿಸಿದ ಬಡ್ಡಿ ಕಲಂ.14(3) ರನ್ವಯ ವಿನಾಯ್ತಿ ಇಲ್ಲ. ಆದರೆ ಸಹಕಾರ ಸಂಘಗಳ ಈ ಠೇವಣಿ ಮೇಲೆ ಸ್ವೀಕರಿಸಿದ ಬಡ್ಡಿಗೆ ಕಲಂ.14(3)(iii) ರಡಿ ವಿನಾಯ್ತಿ ಇದೆ. (1989 Indlaw SC 749, (1989) 1 SCC 747, AIR 1989 SC 915)
3. ಉತ್ತರಪ್ರದೇಶ ಕಾಯಿದೆಯಡಿ ಒಂದು ಸಕ್ಕರೆ ಕಾರ್ಖಾನೆ, ತನ್ನ ಉಪನಿಯಮಗಳಲ್ಲಿ ನಿರ್ದಿಷ್ಟ ಪಡಿಸಿದ ಹಣವನ್ನು ಕಬ್ಬು ಖರೀದಿ ಹಣದಲ್ಲಿ ಮುರಿದುಕೊಂಡು, ಒಂದು ನಿಧಿಗೆ ವರ್ಗಾಯಿಸಲು ಅವಕಾಶ ಇದ್ದಾಗ, ಆ ನಿಧಿ ಹಣವನ್ನು ಸಾಲ ಮರುಪಾವತಿ, ಸರ್ಕಾರದ ಪಾಲು ಬಂಡವಾಳ ಮರುಪಾವತಿ ಮಾಡಲು ಅವಕಾಶವಿದ್ದು. ಆ ನಿಧಿಯನ್ನು ಪೂರ್ವಾನ್ವಯವಾಗುವಂತೆ ಉಪನಿಯಮಗಳನ್ನು ತಿದ್ದುಪಡಿ ಮಾಡಿದಾಗ, ಅದು ಆದಾಯ ಸ್ವೀಕರಿಸಿದಂತೆ ಎಂದು ಪರಿಗಣಿಸಿ ಕರ ನಿಗದಿ ಪಡಿಸಬೇಕೆಂಬ ಮನವಿಯನ್ನು, ಶ್ರೇಷ್ಠನ್ಯಾಯಾಲಯ ದೃಡೀಕರಿಸಿತು. ಅಂದರೆ, ಉಪನಿಯಮಗಳ ತಿದ್ದುಪಡಿ ಪೂರ್ವದಲ್ಲಿ ಇದ್ದಂತೆ ಕರ ನಿಗದಿ ಪಡಿಸಲು ಆದಾಯ ತೆರಿಗೆ ಇಲಾಖೆ ಅಧಿಕಾರ ಇದೆ ಎಂದು ತೀರ್ಮಾನಿಸಿತು. (1988 Indlaw SC 492, (1988) 3 SCC 553,

AIR 1988 SC 1263)

4. ಮಹಾರಾಷ್ಟ್ರ ಕಾಯಿದೆಯಡಿ ಸಹಕಾರ ಬ್ಯಾಂಕ್ ತನ್ನ ಹೂಡಿಕೆಯ ಮೇಲೆ ಪಡೆದ ಬಡ್ಡಿ, ಆದಾಯ ತೆರಿಗೆ ಕಾಯಿದೆಯಲ್ಲಿ ವಿನಾಯ್ತಿಗೆ ಅರ್ಹವೇ ಎಂಬುದಕ್ಕೆ ಉಚ್ಚನ್ಯಾಯಾಲಯದ ತೀರ್ಮಾನವನ್ನು ಕಿತ್ತುಹಾಕಿ ಒಂದು ಬ್ಯಾಂಕಿನ ಕೆಲಸ ಸದಸ್ಯರಿಂದ ಠೇವಣಿ ಸ್ವೀಕರಿಸಿ, ಸಾಲ ನೀಡಿ, ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿ ಹೂಡಿದ ಹಣದಿಂದ ಬಡ್ಡಿಗೆ ಆದಾಯ ತೆರಿಗೆ ನೀಡಬೇಕು ಎಂಬುದು ತಪ್ಪು. ಠೇವಣಿಗಳ ಮೇಲೆ ಪಡೆದ ಬಡ್ಡಿ ವ್ಯವಹಾರದಿಂದ ಬಂದ ಬಡ್ಡಿಯಲ್ಲದೆ ಸರ್ಕಾರದಲ್ಲಿ ಶಾಸನ ಬದ್ದ ಹೂಡಿಕೆಯಿಂದ ಬಂದ ಬಡ್ಡಿಗೆ ವಿನಾಯ್ತಿ ಇದೆ. ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. ಆದಾಯ ತೆರಿಗೆ ಇಲಾಖೆ ನೀಡಿದ ಸುತ್ತೋಲೆಯಂತೆ ವಿನಾಯ್ತಿಗೆ ಅರ್ಹ ಎಂದು ತೀರ್ಮಾನಿಸಿತು. (1967 Indlaw SC 360, (1968) 70 ITR 86)

5. ಮದ್ರಾಸ್ ಸಹಕಾರ ಅಡಮಾನ ಬ್ಯಾಂಕ್ ಮತ್ತು ಆದಾಯ ತೆರಿಗೆ ಆಯುಕ್ತರ ಪ್ರಕರಣದಲ್ಲಿ ಆದಾಯ ತೆರಿಗೆ ಕಾಯಿದೆ ಕಲಂ 14(3) ರಲ್ಲಿ ವಿನಾಯ್ತಿ ಇದ್ದು, ಈ ವಿನಾಯ್ತಿಯು ಸರ್ಕಾರದಲ್ಲಿ ಭದ್ರತೆಗಾಗಿ ಹೂಡಿದ ಹಣದ ಸಮಾನಾಂತರ ವ್ಯವಹಾರದಲ್ಲಿ ತೊಡಗಿಸಿದ ಒಟ್ಟು ದುಡಿಯುವ ಬಂಡವಾಳದ ಆದಾರದಲ್ಲಿ ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. ಸರ್ಕಾರದ ಭದ್ರತೆಯಲ್ಲಿ ಹೂಡಿದ ಹಣಕ್ಕೆ ಬಂದ ಬಡ್ಡಿ ರೂ.13,578/–ಕ್ಕೆ ಆದಾಯ ತೆರಿಗೆ ನೀಡಬೇಕು ಎಂದು ತೀರ್ಮಾನಿಸಿತು. (1967 Indlaw SC 239, AIR 1968 SC 55)

6. ಹಿಮಾಚಲ್ ಸಹಕಾರ ಕಾಯಿದೆಯ ಒಂದು ಕೇಂದ್ರ ಸಹಕಾರ ಬ್ಯಾಂಕು ತನ್ನ ಸದಸ್ಯರೊಂದಿಗೆ ನಡೆಸಿದ ವ್ಯವಹಾರ ಆದಾಯ ತೆರಿಗೆ ಕಾಯಿದೆ ಕಲಂ 66ರಲ್ಲಿ ವಿನಾಯ್ತಿ ಇಲ್ಲವೆಂದು ಉಚ್ಚನ್ಯಾಯಾಲಯದ ತೀರ್ಮಾನವನ್ನು ಶ್ರೇಷ್ಠ ನ್ಯಾಯಾಲಯ, ಸದಸ್ಯರ ಜೊತೆ ಮಾಡಿದ ವ್ಯವಹಾರಕ್ಕೆ ವಿನಾಯ್ತಿ ಇದೆ ಎಂದು ಉಚ್ಚನ್ಯಾಯಾಲಯದ ಆದೇಶವನ್ನು ಕಿತ್ತು ಹಾಕಿತು. (1960 Indlaw SC 334, AIR 1960 SC 1303)

7. ಕರ್ನಾಟಕ ಸಹಕಾರ ಕಾಯಿದೆಯಲ್ಲಿ ಒಂದು ಸಹಕಾರ ಬ್ಯಾಂಕ್, ತನ್ನ ಮೀಸಲು ನಿಧಿಯನ್ನು ಬೇರೆ ಬ್ಯಾಂಕಿನಲ್ಲಿ ಹೂಡಿ ಬಂದು ಬಡ್ಡಿ, ಆದಾಯ ತೆರಿಗೆ ಕಾಯಿದೆಯಲ್ಲಿ ಬರುವುದಿಲ್ಲ, ಏಕೆಂದರೆ ಮೀಸಲು ನಿಧಿಯನ್ನು ಬ್ಯಾಂಕಿನ ವ್ಯವಹಾರದಲ್ಲಿ, ಉಪಯೋಗಿಸಲು ಬರುವುದಿಲ್ಲ. ಆದರೆ ಬ್ಯಾಂಕಿಂಗ್ ಕಾಯಿದೆಯಡಿ ಬ್ಯಾಂಕ್ ಹೂಡಿಕೆ ಮಾಡಬೇಕೆಂದು ಶರತ್ತು ವಿಧಿಸಿದಾಗ, ಅದು ಬ್ಯಾಂಕಿಂಗ್ ವ್ಯವಹಾರಕ್ಕೆ ಸಂಬಂಧಪಟ್ಟಿದ್ದು ಅದು ಆದಾಯ ತೆರಿಗೆ ಕಾಯಿದೆಯಲ್ಲಿ ವಿನಾಯ್ತಿ ಸಿಗುವುದಿಲ್ಲ ಅಂದರೆ ಅಂತಹ ಆದಾಯ, ಕರ ಪಾವತಿ ವ್ಯಾಪ್ತಿಗೆ ಬರುತ್ತಿದೆ. (ಕಲಂ.80(2)(9)(i)) (2001 Indlaw SC 282, (2001) 7 SCC 654, AIR 2001 SC 3332)

8. ಮಧ್ಯಪ್ರದೇಶ ಸಹಕಾರ ಕಾಯಿದೆಯ ಒಂದು ಬ್ಯಾಂಕ್, ತನ್ನ ಕಾಯ್ದಿಟ್ಟ ನಿಧಿ/ಭವಿಷ್ಯ ನಿಧಿ ಹಣವನ್ನು ಸರ್ಕಾರದ ಭದ್ರತೆಯಲ್ಲಿ ಹೂಡಿದ್ದು, ಆ ಹೂಡಿಕೆಯಿಂದ ಬಂದ ಬಡ್ಡಿ, ಆದಾಯ ತೆರಿಗೆ ಕಾಯಿದೆ ವ್ಯಾಪ್ತಿಗೆ ಬರುತ್ತದೇಯೋ ಇಲ್ಲವೇ ಎಂಬ ಪ್ರಶ್ನೆ ಬಂದಾಗ, ಬಡ್ಡಿಯನ್ನು ಲಾಭ ನಷ್ಟ ಖಾತೆಗೆ ತೆಗೆದುಕೊಂಡ ನಂತರ, ಆ ಹಣ ಬ್ಯಾಂಕಿನ ವ್ಯವಹಾರದಲ್ಲಿ ತೊಡಗಿಸಿದಂತೆ ಆಗುತ್ತಿದೆ. ಈ ಹೂಡಿಕೆಯಿಂದ ಬಂದ ಬಡ್ಡಿ ಆದಾಯ ತೆರಿಗೆ ಕಾಯಿದೆಯಲ್ಲಿ ವಿನಾಯ್ತಿಗೆ ಅರ್ಹವಲ್ಲ, ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (1996 Indlaw SC 3486, (1996) 2 SCC 541)

# ಮಾಹಿತಿ ಹಕ್ಕು ಕಾಯಿದೆಗೆ ಸಂಬಂಧಪಟ್ಟಂತೆ ಉಚ್ಚ ಮತ್ತು ಶ್ರೇಷ್ಠನ್ಯಾಯಾಲಯದ ತೀರ್ಮಾನಗಳು

1. ಕೇರಳ ಸಹಕಾರ ಸಂಘಗಳ ಕಾಯಿದೆಯಡಿ ಒಂದು ಸಹಕಾರಿ ಸಂಘ, "ಸಾರ್ವಜನಿಕ ಪ್ರಾಧಿಕಾರ" ಎಂಬ ಅರ್ಥದಲ್ಲಿ ಬರುವುದಿಲ್ಲ. ಆದ್ದರಿಂದ ಸಹಕಾರ ಸಂಘಗಳಿಂದ ಸಾರ್ವಜನಿಕರು ಮಾಹಿತಿ ಪಡೆಯುವ ಹಕ್ಕು ಇಲ್ಲ. ಇದನ್ನು ಮಾಹಿತಿ ಹಕ್ಕು ಕಾಯಿದೆಯಲ್ಲಿ ಸ್ಪಷ್ಟವಾಗಿದೆ. ಯಾವ ಮಾಹಿತಿ ಸಾರ್ವಜನಿಕ ಪ್ರಾಧಿಕಾರದ ನಿಯಂತ್ರಣದಲ್ಲಿ ಇಲ್ಲವೂ, ಆ ಮಾಹಿತಿ ನೀಡಲಾಗದು. ಇದರ ಜೊತೆಗೆ ಸಂವಿದಾನದ ಅನುಚ್ಛೇದ 19 ಮತ್ತು 21 ಒಂದೇ ಅರ್ಥದಲ್ಲಿ ವಿಮರ್ಶಿಸಲಾಗದು. ವ್ಯಕ್ತಿಗತ ಮಾಹಿತಿ ಸಾರ್ವಜನಿಕರ ಹಿತಾಸಕ್ತಿಗೆ ಪೂರಕವಾಗಿಯಿಲ್ಲ ಮತ್ತು ಅಂತಹ ಮಾಹಿತಿ ನೀಡುವುದು, ಅದರಲ್ಲೂ ಬರವಣಿಗೆಯಲ್ಲಿ ಸೂಕ್ತವಲ್ಲ. ಆದ್ದರಿಂದ ಕೇರಳ ಸಹಕಾರ ಕಾಯಿದೆಯಲ್ಲಿ ನೊಂದಾಯಿಸಿದ ಸಹಕಾರ ಸಂಘಗಳು ಮಾಹಿತಿ ಹಕ್ಕು ಕಾಯಿದೆ ವ್ಯಾಪ್ತಿಗೆ ಬರುವುದಿಲ್ಲ. (2013 Indlaw SC 663, AIR 2013 SC (Supp) 437, 2013 (4) KLT 232)
2. ಮಾಹಿತಿ ಹಕ್ಕು ಕಾಯಿದೆಯಡಿ ಒಬ್ಬ ವ್ಯಕ್ತಿ ಸಲ್ಲಿಸಿದ ಅರ್ಜಿಯಲ್ಲಿ ನೌಕರರ ನೇಮಕಾತಿ ಬಗ್ಗೆ ಮಾಹಿತಿ ಕೇಳಿದಾಗ, ಬ್ಯಾಂಕ್, ಅರ್ಜಿದಾರ ಬ್ಯಾಂಕಿನ ಸದಸ್ಯನಲ್ಲ ಅಥವಾ ನಿರ್ದೇಶಕನಲ್ಲಿ ಮತ್ತು ಇದರ ಜೊತೆಗೆ ಬ್ಯಾಂಕ್ ಒಂದು ಸಾರ್ವಜನಿಕ ಪ್ರಾಧಿಕಾರ ಅಲ್ಲ. ಆದ್ದರಿಂದ ಮಾಹಿತಿ ಕೊಡುವ ಅವಶ್ಯಕತೆ ಇಲ್ಲವೆಂದು ಹಿಂಬರಹ ನೀಡಿದಾಗ, ಮಾಹಿತಿ ನೀಡಲು ನಿರ್ದೇಶನ ನೀಡಲಾಯಿತು. ಇದರ ಜೊತೆಗೆ ಸರ್ಕಾರದಿಂದ ರೂ.71,00,000/- ಪಾಲು ಬಂಡವಾಳ ನೀಡಿದ್ದು, ಇದನ್ನು ದಿನಾಂಕ 27.05.1993 ರಂದು ಸರ್ಕಾರಕ್ಕೆ ಪಾವತಿ ಮಾಡಿರುವುದರಿಂದ, ಈ ಬ್ಯಾಂಕ್ ಸರ್ಕಾರದಿಂದ ಯಾವುದೇ ಹಣ ಸ್ವೀಕರಿಸಿಲ್ಲವಾದ್ದರಿಂದ, ಇದು ಸರ್ಕಾರಿ ಸೌಮ್ಯದ ಬ್ಯಾಂಕ್ ಎಂದು ಪರಿಗಣಿಸಲಾಗದು ಎಂದು ತಿಳಿಸಿತು. ನಿಬಂಧಕರು ಸಹಕಾರಿ ಸಂಸ್ಥೆಗಳ ಮೇಲೆ ಮೇಲ್ವಿಚಾರಣೆ, ಮಾಡುವ ಅಧಿಕಾರ ಇರುವುದರಿಂದ, ಈ ಬ್ಯಾಂಕನ್ನು ಒಂದು ಸರ್ಕಾರಿ ಸೌಮ್ಯದ ಬ್ಯಾಂಕ್ ಎಂದು ಪರಿಗಣಿಸಲಾಗದು. ಆದ್ದರಿಂದ ಮಾಹಿತಿ ಆಯೋಗ ನೀಡಿದ ನಿರ್ದೇಶನ ತಪ್ಪು. ಈ ಬ್ಯಾಂಕ್ ಸರ್ಕಾರಿ ಸೌಮ್ಯದ ಬ್ಯಾಂಕ್ ಅಲ್ಲದೇ ಇರುವುದರಿಂದ, ಇದು ಮಾಹಿತಿ ಹಕ್ಕು ಕಾಯಿದೆಯಲ್ಲಿ ಬರುವುದಿಲ್ಲ. (2008 Indlaw Kar 160, 2009 (1) KLT 231)
3. ಮಾಹಿತಿ ಹಕ್ಕು ಕಾಯಿದೆಯಲ್ಲಿ ಮಾಡಿದ ಆದೇಶಗಳನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಮಾಹಿತಿ ಆಯೋಗವನ್ನು ಕಕ್ಷಿದಾರರನ್ನಾಗಿ ಮಾಡುವ ಬಗ್ಗೆ ವಿಚಾರಣ ನಡೆದಾಗ, ಯಾವುದೇ ಮೇಲ್ಮನವಿ ಪ್ರಾಧಿಕಾರ ಅಥವಾ ಆಯೋಗ ಮಾಡಿದಾಗ, ಅಂತಹ ಪ್ರಸಂಗದಲ್ಲಿ ಉಚ್ಚನ್ಯಾಯಾಲಯದ ಆದೇಶವನ್ನು ಜಾರಿಗೆ ತರಬೇಕಾದರೆ/ಅಥವಾ ಆದೇಶಕ್ಕೆ ಭದ್ರತೆ ನಿರ್ಮಿಸುವಾಗ, ಮಾಹಿತಿ ಆಯೋಗವನ್ನು ಕಕ್ಷಿದಾರರನ್ನಾಗಿ ಮಾಡಲೇಬೇಕು. ಮಾಹಿತಿ ಆಯೋಗ ಉಚ್ಚನ್ಯಾಯಾಲಯದ ಕೆಳನ್ಯಾಯಾಲಯ ಅಲ್ಲದೇ ಇದ್ದರೂ, ಅದರ ಆದೇಶವನ್ನು ಪ್ರಶ್ನಿಸಿದಾಗ, ಆ ಆಯೋಗ ಕಕ್ಷಿದಾರರಾಗಿದ್ದರೆ ಮಾತ್ರ ಉಚ್ಚನ್ಯಾಯಾಲಯದ ಆದೇಶವನ್ನು ಪಾಲಿಸಲು ಭದ್ದರಾಗಿರುತ್ತಾರೆ. (2007 Indlaw Kar 312, AIR 2007 Kar 136, 2008 (1) KLT 672)
4. ಕೇರಳ ಸಹಕಾರ ಸಂಘಗಳ ನಿಬಂಧಕರು ದಿನಾಂಕ 01.06.2006 ರಂದು ಒಂದು ಸುತ್ತೋಲೆ ಮುಖಾಂತರ ಸಹಕಾರ ಸಂಘಗಳು "ಸಾರ್ವಜನಿಕ ಸಂಸ್ಥೆಗಳು" ಎಂದು ಹೊರಡಿಸಿದನ್ನು ಕೇರಳ ಉಚ್ಚನ್ಯಾಯಾಲಯ (AIR 2012 Kar 124) ದೃಡೀಕರಿಸಿ, ನಿಬಂಧಕರ ಸುತ್ತೋಲೆ 23/2006 ದಿನಾಂಕ 01.06.2006 ಎತ್ತಿ ಹಿಡಿದಿತ್ತು. ಕೇರಳದ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ (AIR

2010 Kar 6/2009 Indlaw Kar 349) ಪ್ರತಿಯೊಂದು ಪ್ರಕರಣವನ್ನು ಪರಿಶೀಲಿಸಿ, ಪ್ರತ್ಯಕ್ಷ ಪರೋಕ್ಷವಾಗಿ ಹಣಕಾಸು ಪೂರೈಸಿದ ಆಧಾರದ ಮೇಲೆ ನಿರ್ಧರಿಸಬೇಕು ಎಂದು ತೀರ್ಮಾನಿಸಿತು.

ಸಹಕಾರ ಕಾಯಿದೆಯಲ್ಲಿನ ನಿಬಂಧಕರು, ಒಂದು ಸಾರ್ವಜನಿಕ ಹುದ್ದೆ. ಅದು ಮಾಹಿತಿ ಕಾಯಿದೆ ಕಲಂ.2(4) ರಲ್ಲಿ ಬಿರುತ್ತಿದೆ. ಸಹಕಾರ ಸಂಘಗಳ ಮೇಲೆ ನಿಯಂತ್ರಣ ಮಾಡಲು ನಿಬಂಧಕರಿಗೆ ಕಾಯಿದೆಯಲ್ಲಿ ಅಧಿಕಾರ ನೀಡಿದೆ. ಸಹಕಾರ ಸಂಘಗಳ ಮೇಲೆ ಮೇಲ್ವಿಚಾರಣೆ ಮಾಡಲು ಅಧಿಕಾರ ಇದ್ದು, ಆ ಸಂಘಗಳಲ್ಲಿ ಲಭ್ಯವಾಗುವ ಮಾಹಿತಿಯನ್ನು ಸಂಗ್ರಹಿಸುವ/ಪಡೆಯುವ ಅಧಿಕಾರ ಇದೆ. ಆದರೆ ಆ ಮಾಹಿತಿಯನ್ನು ಸಾರ್ವಜನಿಕರಿಗೆ ಕೊಡಲಾಗದು. ಅಂದರೆ ಮಾಹಿತಿ ಕಾಯಿದೆ ಕಲಂ.8(j) ನಲ್ಲಿ ವಿನಾಯ್ತಿ ಪಡೆದ ಮಾಹಿತಿ ಲಭ್ಯವಿದ್ದರೂ, ಅದನ್ನು ಸಾರ್ವಜನಿಕರಿಗೆ ನೀಡತಕ್ಕದ್ದಲ್ಲ.

ಕೇರಳ ಕಾಯಿದೆಯಲ್ಲಿ ನೋಂದಣಿಯಾದ ಸಹಕಾರ ಸಂಘಗಳು, ಮಾಹಿತಿ ಹಕ್ಕು ಕಾಯಿದೆಯಲ್ಲಿ "ಸಾರ್ವಜನಿಕ ಸಂಸ್ಥೆಗಳಲ್ಲ, ಆದ್ದರಿಂದ ನಿಬಂಧಕರು ದಿನಾಂಕ 01.06.2006 ರಲ್ಲಿ ಹೊರಡಿಸಿದ ಸುತ್ತೋಲೆಯನ್ನು ಕಿತ್ತು ಹಾಕಲಾಗಿದೆ. ಏಕೆಂದರೆ ಈ ಸಹಕಾರ ಸಂಘಗಳ ಸರ್ಕಾರದ ಮಾಲೀಕತ್ವವಿಲ್ಲ, ನಿಯಂತ್ರಿಸಲು ಬರುವುದಿಲ್ಲ ಮತ್ತು ಪ್ರಮುಖವಾಗಿ ಸಾಕಷ್ಟು ಹಣ, ಅಂದರೆ ಮಾಲೀಕತ್ವ ಪಡೆಯುವ ಹಣ ಹೂಡಿಲ್ಲ. ಆದ್ದರಿಂದ ಸಹಕಾರ ಸಂಘಗಳು ಮಾಹಿತಿ ಹಕ್ಕು ಕಾಯಿದೆಯಲ್ಲಿ ಬರುವುದಿಲ್ಲ. (2013 Indlaw SC 663, AIR 2013 SC (Supp) 437, 2014 (1) CLT (SC) 187, 2013 (4) KLT 232)

5. ಮಾಹಿತಿ ಹಕ್ಕು ಕಾಯಿದೆಯಲ್ಲಿ ಆಯುಕ್ತರನ್ನು ನೇಮಕ ಮಾಡುವಾಗ, ಮಾಹಿತಿ ಹಕ್ಕು ಕಾಯಿದೆ ಕಲಂ 12(5) ಮತ್ತು 15(5) ರಲ್ಲಿನ ಅಂಶ ಗಮನಿಸಬೇಕು. ಅತಿ ನ್ಯಾಯಿಕ ವ್ಯವಸ್ಥೆಯ ಕಾರ್ಯನಿರ್ವಹಣೆ ಮಾಡಲು ಅಧಿಕಾರಿಗಳನ್ನು ನೇಮಿಸುವಾಗ, ಅವರಿಗೆ ಸಾಮಾನ್ಯ ನ್ಯಾಯ ವಿತರಣೆ ಬಗ್ಗೆ, ಸಾಮಾನತೆ ಬಗ್ಗೆ, ಸಾಮಾನ್ಯ ಜ್ಞಾನದ ಅರಿವು ತತ್ವಗಳು ಇರುವ ಬಗ್ಗೆ ಮಾಹಿತಿ ಪಡೆದು ನೇಮಿಸಬೇಕು.

ಅದೇ ರೀತಿ ನಿಬಂಧಕರ, ಜಂಟಿ ನಿಬಂಧಕರು ಮತ್ತಿತರ ಅಧಿಕಾರಿಗಳನ್ನು ನೇಮಿಸುವಾಗ, ಅಂತಹ ಅಧಿಕಾರಿಗಳು ನ್ಯಾಯ ವಿತರಣ ಮಾಡುವಾಗ ಸಾಮಾನ್ಯ ಜ್ಞಾನ ಹೊಂದಿರುವ ಬಗ್ಗೆ ದೃಡೀಕರಿಸಬೇಕು. ಈಗ ಇರುವ ಯಾವುದೇ ವ್ಯಕ್ತಿಯನ್ನು ನಿಬಂಧಕರಾಗಿ ನೇಮಿಸುವುದು ಎಂದಾದರೆ, ಅಂತಹ ವ್ಯಕ್ತಿ ಅನಕ್ಷರನಿದ್ದರೂ ಆಗುತ್ತದೆ ಎಂದು ಅರ್ಥೈಸಬಹುದು. ಆದರೆ, ಮಧ್ಯ ಪ್ರದೇಶ ಸಹಕಾರ ಕಾಯಿದೆ ಕಲಂ 3ರಲ್ಲಿ ಸರ್ಕಾರ ನಿಬಂಧಕರು ಮತ್ತಿತರರನ್ನು ನೇಮಿಸುವಾಗ ಒಬ್ಬ ವ್ಯಕ್ತಿ ಎಂದಿದ್ದರೂ, ಅಂತಹ ವ್ಯಕ್ತಿಗೆ ಕಾನೂನು, ನ್ಯಾಯಸಮ್ಮತ, ನ್ಯಾಯಿತ ತಿಳುವಳಿಕೆ ಇದ್ದವರನ್ನು ನೇಮಿಸಬೇಕು. (2014 Indlaw SC 329, (2014) 7 SCC 244, AIR 2014 SC 2361)

# ನ್ಯಾಯಾಲಯ ನಿಂದನೆ

"ನ್ಯಾಯಾಲಯ ನಿಂದನೆ" ಎಂದರೆ ಸಿವಿಲ್ ನಿಂದನೆ ಅಥವಾ ಕ್ರಿಮಿನಲ್ ನಿಂದನೆ.

"ಸಿವಿಲ್ ನಿಂದನೆ" ಎಂದರೆ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ, ನಿರ್ದೇಶನ, ಆದೇಶ, ರಿಟ್ ಅಥವಾ ಇತರ ಪ್ರೊಸೆಸನ್ನು ಕುರಿತು ಉದ್ದೇಶಪೂರ್ವಕವಾಗಿ ಅವಿಧೆಯತೆ ಅಥವಾ ನ್ಯಾಯಾಲಯಕ್ಕೆ ಕೊಟ್ಟ ಮುಚ್ಚಳಿಕೆಯನ್ನು ಉದ್ದೇಶ ಪೂರ್ವಕವಾಗಿ ಭಂಗ ಮಾಡುವುದು.

"ಕ್ರಿಮಿನಲ್ ನಿಂದನೆ" ಎಂದರೆ –

1. ಯಾವುದೇ ನ್ಯಾಯಾಲಯದ ಅಧಿಕಾರವನ್ನು ಅವಹೇಳನ ಮಾಡುವ ಅಥವಾ ಅವಹೇಳನ ಮಾಡಲು ಪ್ರವೃಕ್ತವಾಗುವ ಅಥವಾ ಕಗ್ಗಿಸುವ ಅಥವಾ ಕಗ್ಗಿಸಲು ಪ್ರವೃಕ್ತವಾಗುವ ಅಥವಾ

2. ಯಾವುದೇ ನ್ಯಾಯಿಕ ವ್ಯವಹರಣೆಯ ಕ್ರಮಬದ್ಧವಾಗಿ ನಡೆಯುವುದಕ್ಕೆ ಪ್ರತಿಕೂಲವನ್ನುಂಟು ಮಾಡುವ ಅಥವಾ ಹಸ್ತಕ್ಷೇಪ ಮಾಡಲು ಪ್ರವೃಕ್ತವಾಗುವ ಅಥವಾ
3. ಯಾವುದೇ ಇತರ ರೀತಿಯಲ್ಲಿ ನ್ಯಾಯಾ ಹೇಳಿಕೆದೊಂದಿಗೆ ಹಸ್ತಕ್ಷೇಪ ಮಾಡುವ ಅಥವಾ ಹಸ್ತಕ್ಷೇಪ ಮಾಡಲು ಪ್ರವೃಕ್ತವಾಗುವ ಅಥವಾ ಅಡ್ಡಿಯನ್ನುಂಟು ಮಾಡುವ ಅಥವಾ ಅಡ್ಡಿಯುಂಟು ಮಾಡಲು ಪ್ರವೃಕ್ತಿಸುವಂಥ ಯಾವುದೇ ವಿಷಯವನ್ನು (ಬಾಯಿ ಮುಖೇನ ಅಥವಾ ಲಿಖಿತ ಪದಗಳ ಮೂಲಕ ಅಥವಾ ಚಿಹ್ನೆಗಳ ಮೂಲಕ ದೃಶ್ಯ ನಿರೂಪಣೆಗಳ ಮೂಲಕ ಅಥವಾ ಅನ್ಯಥಾ) ಪ್ರಕಟಿಸುವುದು ಅಥವಾ ಯಾವುದೇ ವಿಷಯವನ್ನು ಪ್ರಕಟಿಸುವುದು ಅಥವಾ ಯಾವುದೇ ಇತರ ಕಾರ್ಯವನ್ನು ಮಾಡುವುದು.

ವಿಮರ್ಶೆಗೆ ಅನುಕೂಲವಾಗುವಂತೆ, ನ್ಯಾಯಾಲಯ ನಿಂದನೆಯನ್ನು ಮತ್ತೊಂದು ರೀತಿ ತಿಳಿಯಬಹುದು.

1. ನ್ಯಾಯಾಲಯ ಮತ್ತು ಅದರ ಅಧಿಕಾರಿಗಳ ಬಗ್ಗೆ ನಿಂದನೆ.
2. ವಿಧಾನ ಮಂಡಳ ಮತ್ತು ಅದರ ಸದಸ್ಯರ ನಿಂದನೆ.
3. ಸಾರ್ವಜನಿಕ ಅಧಿಕಾರಿಯ ನಿಂದನೆ.

ಶಿಕ್ಷೆ ಮತ್ತು ದಂಡವನ್ನು ಕೊಡುವ ಅಧಿಕಾರವಿರುವ ನ್ಯಾಯಾಲಯ, ನ್ಯಾಯ ವಿತರಣೆ ಮಾಡುವ ವ್ಯವಸ್ಥೆಗೆ ತೊಡಕುಂಟು ಮಾಡುವ ಮೌಖಿಕ ಲಿಖಿತ ಅಥವಾ ದೃಶ್ಯ ಅಥವಾ ಚಿಹ್ನೆ ಮೂಲಕ ಪ್ರತಿರೋಧ ವ್ಯಕ್ತಪಡಿಸಿದಲ್ಲಿ ಅದು ನ್ಯಾಯಾಲಯ ನಿಂದನೆಯಾಗುತ್ತದೆ. ಮೇಲ್ಕಂಡ ಪ್ರಾಧಿಕಾರಿಗಳ ಮೇಲೆ ಯಾವುದೇ ರೀತಿಯ ಅವಮಾನವಾಗುವ ರೀತಿ ಅಥವಾ ಆ ಪ್ರಾಧಿಕಾರದ ಅಧಿಕಾರಿಗಳ ಮೇಲೆ ನ್ಯಾಯ ದೊರಕಿಸುವ ಪ್ರಕ್ರಿಯೆಗೆ ತೊಡಕುಂಟು ಮಾಡಿದರೆ, ಅದು ನ್ಯಾಯ ನಿಂದನೆಯಾಗತಕ್ಕದ್ದು.

**ತೀರ್ಪುಗಳು :**

ನ್ಯಾಯ ಅಥವಾ ನ್ಯಾಯಾಲಯ ನಿಂದನೆ ಸಾರ್ವಜನಿಕ ಹಕ್ಕುಗಳನ್ನು ಸಂರಕ್ಷಿಸಲು ಇರುವ ಅಧಿಕಾರ ಯಾವುದೇ ಕಕ್ಷಿದಾರ ನ್ಯಾಯಾಲಯದ ಅಧಿಕಾರ ಧಿಕ್ಕರಿಸಿದಾಗ ಅದು ನ್ಯಾಯ ವ್ಯವಸ್ಥೆ ಪ್ರಶ್ನಿಸಿದಂತೆ. ಅದರಿಂದ ಸಾರ್ವಜನಿಕರು ನ್ಯಾಯಾಂಗದ ಬಗ್ಗೆ ನಂಬಿಕೆ ಕಳೆದುಕೊಳ್ಳುತ್ತಾರೆ. ಮತ್ತು ನ್ಯಾಯಾಂಗ ವ್ಯವಸ್ಥೆಯನ್ನು ನಿಸ್ತೇಜನ ಮಾಡುವ ವ್ಯವಸ್ಥೆಗೆ ಉತ್ತೇಜನ ಕೊಟ್ಟಂತೆ. (1987 Mah LJ 1078)

ನ್ಯಾಯಾಲಯ ನಿಂದನೆಯ ಉದ್ದೇಶ ನ್ಯಾಯಾಧೀಶರನ್ನು ರಕ್ಷಿಸುವ ಸಲುವಾಗಿ ಮಾಡಿದ ಅಧಿಕಾರವಲ್ಲ. ಅದು ಒಬ್ಬ ವ್ಯಕ್ತಿಯ ಸ್ವಾತಂತ್ರ್ಯವನ್ನು ಮತ್ತು ಅವನ ಹಕ್ಕನ್ನು ರಕ್ಷಿಸುವ ವ್ಯವಸ್ಥೆ ಹಾಗೂ ನ್ಯಾಯಾಂಗದ ಆಡಳಿತದಲ್ಲಿ ವ್ಯವಸ್ಥೆ ತರುವ ಉದ್ದೇಶದಿಂದ (AIR 1969 Delhi 214) ಸಂವಿಧಾನ ಪರಿಚ್ಛೇದ 19(2) ರಲ್ಲಿರುವ ವಾಕ್ ಸ್ವಾತಂತ್ರ್ಯ ರಕ್ಷಿಸುವುದರ ಜೊತೆಗೆ ಸಾಮಾಜಿಕ ನಿಯಂತ್ರಣ ನಿರ್ವಹಿಸುವ ವ್ಯವಸ್ಥೆಯಾಗಿದೆ. (1967 CrLJ 1470)

ನ್ಯಾಯಾಲಯ ನಿಂದನೆ ಪ್ರಕರಣದಲ್ಲಿ ಸತ್ಯತೆ ಬಗ್ಗೆ ಪ್ರತಿಪಾದಿಸತಕ್ಕದ್ದಲ್ಲ. ಯಾವನೋ ವ್ಯಕ್ತಿ ಪ್ರತಿಪಾದಿಸಿದ ವಿಷಯ ಸಕ್ತವಾಗಿದೆ ಎಂಬ ಕಾರಣಕ್ಕೆ ಆದೇಶವನ್ನು ಪ್ರಶ್ನಿಸತಕ್ಕದ್ದಲ್ಲ. (1989 Mah LJ 1078)

ನ್ಯಾಯಾಲಯ ನಿಂದನೆ ಪ್ರಕರಣ ಪ್ರಾರಂಭಿಸುವ ಉದ್ದೇಶ ನ್ಯಾಯಾಂಗ ವ್ಯವಸ್ಥೆ ಕಾಪಾಡುವುದು. ಅದನ್ನು ಬೇರೆ ವೈಯಕ್ತಿಕ ಆಸಕ್ತಿ ಮತ್ತು ಹಿತಕ್ಕಾಗಿ ಉಪಯೋಗಿಸಿದರೆ ಅದು ನ್ಯಾಯಾಂಗವನ್ನು ದುರುಪಯೋಗಪಡಿಸಿಕೊಂಡಂತೆ. ಒಬ್ಬ ವ್ಯಕ್ತಿಯ ಹಿತಾಸಕ್ತಿ ಕಾಪಾಡಲು ಅಥವಾ ದುರುದ್ದೇಶದಿಂದ ನ್ಯಾಯಾಂಗ ವ್ಯವಸ್ಥೆ ಉಪಯೋಗಿಸತಕ್ಕದ್ದಲ್ಲ ನ್ಯಾಯಾಲಯ ನಿಂದನೆ ನ್ಯಾಯ ವ್ಯವಸ್ಥೆ ಉಳಿಸಲು ಮಾತ್ರ ಉಪಯೋಗಿಸತಕ್ಕದ್ದು. (1967 Ker LT 59)

ನ್ಯಾಯಾಲಯವನ್ನು ಅವಹೇಳನಕಾರಿಯಾದಂತೆ ಮಾಡಿದರೆ, ಅದು ವ್ಯಕ್ತಿಗತವಾಗಿ ನ್ಯಾಯಾಧೀಶರನ್ನಲ್ಲದೇ ಅದು ನ್ಯಾಯಾಲಯ ಅಧಿಕಾರವನ್ನು ಪ್ರಶ್ನಿಸಿದಂತೆ ಉದ್ದೇಶಪೂರ್ವಕ ಅವಮಾನಕರ ಆರೋಪವನ್ನು ನ್ಯಾಯಾಧೀಶರ ಮೇಲೆ ಮಾಡಿದರೆ ಅದು ನ್ಯಾಯಾಲಯದ ನಿಂದನೆ ಜೊತೆಗೆ ಸಾರ್ವಜನಿಕರು ನ್ಯಾಯಾಂಗದ ಮೇಲೆ ನಂಬಿಕೆ ಕಳೆದು ಕೊಳ್ಳುತ್ತಾರೆ ಮತ್ತು ನ್ಯಾಯಾಧೀಶರು ತೀರ್ಪು ಕೊಡುವಾಗ ಮುಜುಗರಕ್ಕೊಳಗಾಗುತ್ತಾರೆ ಮತ್ತು ಕಕ್ಷಿದಾರರ ಅಧಿಕಾರ ಕರ್ತವ್ಯಗಳ ಬಗ್ಗೆ ನಂಬಿಕೆ ಕಳೆದುಕೊಳ್ಳುತ್ತಾರೆ. (AIR 1954 SC 10)

ನ್ಯಾಯಾಲಯ ನಿಂದನೆ ಎಂದರೆ ಅದು ನ್ಯಾಯಧೀಶರಿಗೆ ವೈಯಕ್ತಿಕವಾಗಿ ಮತ್ತು ಎರಡನೇಯದಾಗಿ ಸಾರ್ವಜನಿಕರಿಗೆ ಮಾಡಿದ ನಿಂದನೆ ಇದರಿಂದ ನ್ಯಾಯಾಧೀಶರು ನಿಷ್ಪಕ್ಷಪಾತಿಗಳು ಮತ್ತು ಅವೆ ವಿದ್ವತ್ತವನ್ನು ಪ್ರಶ್ನಿಸಿದಂತೆ ಮತ್ತು ಅದರಿಂದ ನ್ಯಾಯ ವ್ಯವಸ್ಥೆ ಮೇಲೆ ಸಾರ್ವಜನಿಕರು ನಂಬಿಕೆ ಇಲ್ಲದಂತೆ ಮಾಡಿದಂತಾಗುತ್ತದೆ. (1967 Cr LJ 1470 AIR 1954 SC 10)

ಉಚ್ಚನ್ಯಾಯಾಲಯ ಯಾವುದೇ ವ್ಯಕ್ತಿ ಪತ್ರಿಕೆಯಲ್ಲಿ ಲೇಖನ ಪ್ರಕಟಿಸಿ ನ್ಯಾಯಾಧೀಶರು ಅಥವಾ ನ್ಯಾಯಾಲಯದ ಘನತೆ, ಗೌರವಕ್ಕೆ ಚ್ಯುತಿ ತಂದರೆ ನಿಂದನೆ ಪ್ರಕರಣ ಕ್ರಮ ಜರುಗಿಸಲು ಅಧಿಕಾರ ಹೊಂದಿದೆ. (AIR 1950 Sind 1 (FB))

ಸಂವಿಧಾನದ 215ನೇ ಪರಿಚ್ಛೇದದಲ್ಲಿ ಪ್ರತಿಯೊಂದು ಉಚ್ಚನ್ಯಾಯಾಲಯವು "ದಾಖಲೆಗಳ ನ್ಯಾಯಾಲಯ" ಎಂದು ಹೆಸರಿಸಿದೆ. (Court of record) ಹಾಲ್ಸಬರಿ (Halsbury's) ಕಾಯ್ದೆಯಲ್ಲಿ ವಿವರಿಸಿರುವಂತೆ ದಾಖಲೆಗಳ ನ್ಯಾಯಾಲಯ ಎಂದರೆ ಯಾವ ನ್ಯಾಯಾಲಯ ದಂಡ ಮತ್ತು ಶಿಕ್ಷೆ ವಿಧಿಸುವ ಅಧಿಕಾರ ಹೊಂದಿದೆಯೋ ಮತ್ತು ಸಾಮಾನ್ಯ ನ್ಯಾಯದನ್ವಯ ಅದರ ದಾಖಲೆಗಳನ್ನು ಸಂಗ್ರಹಿಸಿಡಲಾಗುತ್ತದೆಯೋ ಅದನ್ನು ದಾಖಲೆಗಳ ನ್ಯಾಯಾಲಯ ಎಂದು ಕರೆಯತಕ್ಕದು.

"ನ್ಯಾಯಾಧೀಕರಣ" – 1978 ರ ಕಾಯ್ದೆಯಲ್ಲಿ ರಚನೆಯಾದ ನ್ಯಾಯಾಧೀಕರಣವನ್ನು ನ್ಯಾಯಾಲಯ (Court) ಎಂದು ಮತ್ತು ನ್ಯಾಯಾಂಗಕ್ಕೆ ಜವಾಬ್ದಾರಿಯಾಗುವ ಪ್ರಾಧಿಕರಣವಾದ್ದರಿಂದ, ಆ ನ್ಯಾಯಾಧೀಕರಣ ಹೊರಡಿಸಿದ ಆದೇಶಗಳನ್ನು ನ್ಯಾಯಾಲಯ ನಿಂದನೆಯಡಿ (1952ರ ಕಾಯಿದೆ) ಶಿಕ್ಷಿಸಬಹುದು.

ನ್ಯಾಯಾಲಯ ನಿಂದನೆ ನ್ಯಾಯಾಧೀಕರಣ ರಚಿಸದಿದ್ದರೆ ಆ ವಿಷಯಗಳ ಬಗ್ಗೆ ತೀರ್ಮಾನಿಸುವ ಅಧಿಕಾರ ಸಾಮಾನ್ಯ ನ್ಯಾಯಾಲಯಗಳಿಗೆ ಇರುವುದರಿಂದ ನ್ಯಾಯಾಧೀಕರಣವನ್ನು ನ್ಯಾಯಾಲಯ ಎಂದು ಪರಿಗಣಿಸುವುದು.

**ಕ್ರಿಮಿನಲ್ ನ್ಯಾಯ ನಿಂದನೆ :**

ಸಿವಿಲ್ ನ್ಯಾಯ ನಿಂದನೆ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ, ನಿರ್ದೇಶನ ಆದೇಶ, ರಿಟ್ ಅಥವಾ ಇನ್ನಾವುದೇ ನ್ಯಾಯಾಲಯದ ಕ್ರಿಯೆಯನ್ನು ಅಥವಾ ಬರೆದುಕೊಟ್ಟ ಮುಚ್ಚಳಿಕೆ (Undertaking) ಉದ್ದೇಶಪೂರ್ವಕವಾಗಿ ಜಾರಿ ಮಾಡದೇ ಇದ್ದರೆ ಅದು ಸಿವಿಲ್ ನ್ಯಾಯ ನಿಂದನೆಯಾಗುತ್ತದೆ. ಅದೇ ರೀತಿ ಕ್ರಿಮಿನಲ್ ನ್ಯಾಯ ನಿಂದನೆ, ಎಂದರೆ, ಬಾಯಿ ಮಾತಿನಲ್ಲಿ, ಬರವಣಿಗೆ ಅಥವಾ ಸಂಜ್ಞೆಯ ಮುಖಾಂತರ ನ್ಯಾಯಾಲಯವನ್ನು ನ್ಯಾಯಾಲಯದ ಹೆಸರಿಗೆ ಕಳಂಕ ತರುವ ಅಥವಾ ಕಳಂಕ ತರುವಂತೆ ಕಾರ್ಯ ಮಾಡುವ ಪ್ರಯತ್ನ ಅಥವಾ ನ್ಯಾಯಾಲಯದ ಅಧಿಕಾರವನ್ನು ಪ್ರಶ್ನಿಸುವ ಅಥವಾ ಅದಕ್ಕೆ ಅವಮಾನ ಮಾಡುವ ರೀತಿ ಮಾಡಿದರೆ ಅಥವಾ

ನ್ಯಾಯಾ ವಿತರಣೆ ಮಾಡುವಾಗ, ತಪ್ಪದಾರಿ ಗೆಳೆಯುವ, ಅದರಲ್ಲೂ ಮಧ್ಯಪ್ರವೇಶಿಸುವ ಮೂಲಕ ನ್ಯಾಯ ವಿತರಣೆಗೆ ಅಡೆತಡೆ ನಿರ್ಮಾಣ ಮಧ್ಯಪ್ರವೇಶ ಮಾಡುವ ಪ್ರಯುಕ್ತ ಅಥವಾ

ನ್ಯಾಯಾಲಯದ ಕೆಲಸ ನಿರ್ವಹಣೆ ಮಾಡುವಾಗ ಮಧ್ಯಪ್ರವೇಶ ಅಥವಾ ಕೆಡಕನ್ನುಂಟು

ಮಾಡುವುದಿದ್ದರೆ, ಅದು ಕ್ರಿಮಿನಲ್ ನ್ಯಾಯ ನಿಂದನೆಯಾಗುತ್ತದೆ. ಸಂವಿಧಾನದ 19ನೇ ಪರಿಚ್ಛೇದನ್ವಯ ಯಾವುದೇ ರೀತಿಯ ಸ್ಪಷ್ಟ ನಿರ್ಭಂದವಿಧಿಸಿಲ್ಲ ಮತ್ತು ಅದನ್ನು ನ್ಯಾಯಾಲಯ ಸಂದರ್ಭನುಸಾರ ಅಧಿಕಾರ ಚಲಾಯಿಸಲು ಅನುಕೂಲವಾಗುವಂತೆ ಬಿಡಲಾಗಿದೆ. (1957 Cr JJ 18) ನ್ಯಾಯಾಲಯವು ಅಧಿಕಾರ ಚಲಾಯಿಸುವಾಗ ಅದಕ್ಕೆ ನಿಂದನೆ ಅಧಿಕಾರ ಚಲಾಯಿಸುವುದು. ಅದರ ಆಂತರಿಕ ಹಕ್ಕು. (AIR 1957 AG37(DB)) ಸಿವಿಲ್ ನ್ಯಾಯನಿಂದನೆ ಉದ್ದೇಶ ಆರೋಪಿಯನ್ನು ಶಿಕ್ಷಿಸುವುದು ಮತ್ತು ನ್ಯಾಯಾಲಯದ ಆದೇಶವನ್ನು ಪಾಲಿಸುವಂತೆ ನೋಡಿಕೊಳ್ಳುವುದು. (1930(3) Bombay CR 82)

ಕಲಂ 3

**ನಿಷ್ಕಪಟ ಪ್ರಕಟಣೆ ಮತ್ತು ವಿತರಣೆ ನಿಂದನೆಯಲ್ಲಿ :**

ಯಾವುದೇ ವ್ಯಕ್ತಿಯು ಬಾಯಿ ಮಾತಿನ ಅಥವಾ ಬರಹದ ಪದಗಳ ಮೂಲಕ ಅಥವಾ ಚಿಹ್ನೆಗಳ ಮೂಲಕ ಅಥವಾ ದೃಶ್ಯ ರೂಪಗಳ ಮೂಲಕ ಅಥವಾ ಪ್ರಕಟಣೆ ಕಾಲದಲ್ಲಿ ಇತ್ಯರ್ಥದಲ್ಲಿರುವ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹಾರಗಳಿಗೆ ಸಂಬಂಧಪಟ್ಟರ ನ್ಯಾಯದ ಕ್ರಮದೊಂದಿಗೆ ಹಸ್ತಕ್ಷೇಪ ಮಾಡುವ ಕಾರಣದ ಮೇಲೆ ಆ ಕಾಲದಲ್ಲಿ ವ್ಯವಹರಣೆಯ ಇತ್ಯರ್ಥದಲ್ಲಿತ್ತೆಂದು ನಂಬಲು ತನಗೆ ಯುಕ್ತ ಕಾರಣಗಳು ಇಲ್ಲದಿದ್ದರೆ ನ್ಯಾಯನಿಂದನೆ ತಪ್ಪಿತಸ್ತನಾಗತಕ್ಕದ್ದಲ್ಲ. ಹಾಗೂ ಪ್ರಕಟಣೆಯ ಕಾಲದಲ್ಲಿ ಇತ್ಯರ್ಥದಲ್ಲಿಲ್ಲವೆಂದು ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗೆ ಸಂಬಂಧಿಸಿದಂತೆ ನಮೂದಿಸಲಾದಂಥ ಪ್ರಕಟಣೆಯು, ನ್ಯಾಯಾಲಯ ನಿಂದನೆಯಾಗತಕ್ಕದ್ದಲ್ಲ ಹಾಗೂ ಯಾವುದೇ ಒಬ್ಬ ವ್ಯಕ್ತಿ ವಿತರಣೆ/ಪ್ರಕಟಣೆ ಮಾಡಿದ್ದಾನೆಂಬ ಆಧಾರದ ಮೇಲೆ ವಿತರಣೆ ಕಾಲದಲ್ಲಿ ವಿಷಯ ಒಳಗೊಂಡಿತ್ತು ಎಂದು ನಂಬಲು ಸಾಮಾಜಿಕ ಕಾರಣಗಳಿಲ್ಲದಿದ್ದರೆ ಅವನು ನ್ಯಾಯಾಲಯ ನಿಂದನೆಯ ತಪ್ಪಿತಸ್ಥನಾಗತಕ್ಕದ್ದಲ್ಲ ಅಥವಾ ಅವಹಾಗಿ ಕೇಳಿ ಅಂತಿಮವಾಗಿ ತೀರ್ಮಾನಿಸಿರುವಂಥ ನ್ಯಾಯ ವ್ಯವಹರಣೆ ಅದರಲ್ಲೂ ಹೊರಡಿಸಿದ ಡಿಕ್ರಿ, ಆದೇಶ ಅಥವಾ ಶಿಕ್ಷೆಯನ್ನು ಜಾರಿಗೊಳಿಸುವುದಕ್ಕಾಗಿ ವ್ಯವಹರಣೆಗಳು ಇತ್ಯರ್ಥದಲ್ಲಿವೆ ಎಂದು ಸಂಗತಿಯ ಕಾರಣದಿಂದ ಇತ್ಯರ್ಥದಲ್ಲಿದೆ ಎಂದು ಭಾವಿಸತಕ್ಕದ್ದಲ್ಲ. ಅಂದರೆ ಈಗಾಗಲೇ ತೀರ್ಮಾನವಾಗಿದ್ದರೆ ಅದರ ಬಗ್ಗೆ ಪ್ರಕಟಣೆ ಮಾಡಿದರೆ ಅದು ನ್ಯಾಯಾಲಯ ನಿಂದನೆಯಾಗತಕ್ಕದ್ದಲ್ಲ.

ಆದರೆ ನ್ಯಾಯಾಲಯದ ದೋಷಾರೋಪಣೆ ಪಟ್ಟಿ ಮತ್ತು ಚಲನ ದಾಖಲ್ಮಾಡಿದಾಗ ಸಮನ್ಸ ಅಥವಾ ವಾರೆಂಟ್ ಹೊರಡಿಸಿದಾಗ ಮತ್ತು ನ್ಯಾಯಾಲಯ ಪ್ರಕರಣವನ್ನು ಸ್ವೀಕರಿಸಿ ಅವಹಾಲು ಕೇಳಿಕೆ ಅಂತಿಮವಾಗಿ ತೀರ್ಮಾನಿಸುವವರೆಗೆ ಅಂದರೆ ಅಫೀಲಿಗೆ ಅವಕಾಶ ಇರುವ ಕಡೆ, ಅಂತಿಮವಾಗಿ ತೀರ್ಮಾನಿಸುವವರೆಗೆ, ಅಂತಹ ಪ್ರಕರಣ ವಿಚಾರಣೆಯಲ್ಲಿದೆ ಎಂದು ಭಾವಿಸತಕ್ಕದ್ದು. ಅಂತಹ ಸಂದರ್ಭದಲ್ಲಿ ಪ್ರಕಟಣೆ ಮಾಡಿದರೆ ಅದು ವಿಚಾರಣೆಯಲ್ಲಿದೆ ಎಂದು ಭಾವಿಸತಕ್ಕದ್ದು.

ನ್ಯಾಯಾಯುತವಾದ ಮತ್ತು ನಿಖರವಾದ ವರದಿಯ ನಿಂದನೆಯಾಗುವುದಿಲ್ಲ. (ಕಲಂ 4)

ವ್ಯಕ್ತಿಯು ನ್ಯಾಯಿಕ ವ್ಯವಹರಣೆಯ ಅಥವಾ ಅದರ ಯಾವುದೇ ಹಂತದ ನ್ಯಾಯಾಯುತ ಮತ್ತು ನಿಖರವಾದ ವರದಿ ಪ್ರಕಟಿಸಿದುದಕ್ಕಾಗಿ ನ್ಯಾಯಾಲಯದ ನಿಂದನೆ ತಪ್ಪಿತಸ್ತನಾಗತಕ್ಕದ್ದಲ್ಲ ಹಾಗೂ (ಕಲಂ 7)

ಒಬ್ಬ ವ್ಯಕ್ತಿಯು ನ್ಯಾಯಾಧೀಶರ ಚೆಂಬರ್‌ನಲ್ಲಿ ಅಥವಾ ರಹಸ್ಯವಾಗಿ ನಡೆಸಿದ ವ್ಯವಹರಣೆಗೆ ಸಂಬಂಧಿಸಿದ, ಮಾಹಿತಿಯು ಪ್ರಕಟಣೆ ನಿಂದನೆ ಅಲ್ಲ.

ಚೆಂಬರ್‌ನಲ್ಲಿ ಅಥವಾ ರಹಸ್ಯವಾಗಿ ನ್ಯಾಯಾಯುತ ಮತ್ತು ನಿಖರವಾದ ವರದಿಯನ್ನು ಪ್ರಕಟಿಸಿದ್ದಕ್ಕಾಗಿ ಹೇಳಿದ ವಿಷಯವಲ್ಲದೆ ನಿಂದನೆಯಾಗತಕ್ಕದ್ದಲ್ಲ.

1. ಪ್ರಕಟಣೆಯು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮ ಮತ್ತು ಉಪಬಂಧಗಳಿಗೆ

ತದ್ವಿರುದ್ಧವಾಗಿರುವುದಿಲ್ಲ.

2. ನ್ಯಾಯಾಲಯವು ಸಾರ್ವಜನಿಕ ನೀತಿ ಆಧಾರದ ಮೇಲೆ ಅಥವಾ ತನ್ನಲ್ಲಿ ನಿಹಿತವಾಗಿರುವ ಯಾವುದೇ ಅಧಿಕಾರವನ್ನು ಚಲಾಯಿಸಿ ವ್ಯವಹರಣೆಗೆ ಸಂಬಂಧಪಟ್ಟ ಎಲ್ಲಾ ಮಾಹಿತಿಯ ಅಥವಾ ಪ್ರಕಟವಾದಂಥ ವಿವರಣೆಯ ಮಾಹಿತಿಯ ಪ್ರಕಟಣೆಯನ್ನು ಸ್ಪಷ್ಟವಾಗಿ ನಿಷೇದಿಸಿರುವಲ್ಲಿ ಅಥವಾ
3. ನ್ಯಾಯಾಲಯವು ಸಾರ್ವಜನಿಕ ಸುವ್ಯವಸ್ಥೆ ಅಥವಾ ರಾಷ್ಟ್ರದ ಭದ್ರತೆಗೆ ಸಂಬಂಧಪಟ್ಟ ಕಾರಣಗಳಿಗಾಗಿ ಚೆಂಬರ್‌ನಲ್ಲಿ ಅಥವಾ ರಹಸ್ಯವಾಗಿ ಕೂಡುವಲ್ಲಿ ಆ ವ್ಯವಹರಣೆಗಳಿಗೆ ಸಂಬಂಧಪಟ್ಟ ಮಾಹಿತಿ ಪ್ರಕಟಣೆ ಅಥವಾ
4. ವಿವಾದಗಳವಾಗಿರುವಂಥ ಮಾಹಿತಿಯ ರಹಸ್ಯ ಕ್ರಮಕ್ಕೈಗೊಂಡಿರುವುದು ಅಥವಾ ಹೊಸ ಸಂಶೋಧನೆಗೆ ಸಂಬಂಧಿಸಿದಲ್ಲಿ ಅದು ನಿಂದನೆಯಾಗತಕ್ಕದ್ದು.

ನ್ಯಾಯಾಲಯದ ನಿಂದನೆ ಕ್ರಮ ಜರುಗಿಸುವಾಗ ಬಿಗಿ ಅಥವಾ ನೇರವಾಗಿ ಅಥವಾ ವಿಮರ್ಶೆ ಮಾಡಲಾರದಂತಹ ಅರ್ಥ ಕೊಡತಕ್ಕದ್ದಲ್ಲ. ನಿಯಮಗಳನ್ನು ಸಡಿಲಿಕೆ ಇರಬೇಕು ಎಂದು ಅರ್ಥೈಸತಕ್ಕದ್ದು. ಇದಕ್ಕೆ ಮೂರು ಕಾರಣಗಳನ್ನು ಗುರುತಿಸಬಹುದು.

1. ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣದ ಬಗ್ಗೆ ತಿಳುವಳಿಕೆ ಇಲ್ಲದೇ ಇರುವುದು ಅಥವಾ
2. ಅಂತಹ ವ್ಯಕ್ತಿ ಬಾಕಿ ಇರುವ ಪ್ರಕರಣದ ಬಗ್ಗೆ ತಿಳುವಳಿಕೆ ಇತ್ತು ಎಂದು ನಂಬಲರ್ಹವಾದ ನಂಬಿಕೆ
3. ನ್ಯಾಯಾಲಯವು ಅಂತಹ ವ್ಯಕ್ತಿಗೆ ಪ್ರಕರಣ ಬಾಕಿ ಇರುವ ಬಗ್ಗೆ ಮಾಹಿತಿ ಇತ್ತು ಅಥವಾ ಇರಲಿಲ್ಲವೆಂಬ ಅಂಶ ಪರಿಗಣಿಸದೆ ತಪ್ಪಿತಸ್ಥನೆಂದು ತೀರ್ಮಾನಿಸಬಹುದು. (AIR 1957 AG 37(DB)) (1957 Cr LJ 18)

ಅಧೀನ ನ್ಯಾಯಾಲಯಗಳ ನಿಂದನೆಯನ್ನು ದಂಡಿಸಲು ಉಚ್ಚನ್ಯಾಯಾಲಯದ ಅಧಿಕಾರ

ಪ್ರತಿಯೊಂದು ಉಚ್ಚನ್ಯಾಯಾಲಯವೂ ತನಗೆ ಅಧೀನವಾಗಿರುವ ನ್ಯಾಯಾಲಯಗಳ ನಿಂದನೆಗಳಿಗೆ ಸಂಬಂಧಪಟ್ಟಂತೆ ತನ್ನ ನಿಂದನೆಯ ಬಗ್ಗೆ ತಾನು ಹೊಂದಿರುವ ಮತ್ತು ಚಲಾಯಿಸುವಂತಹ ಪ್ರಕ್ರಿಯೆ ಮತ್ತು ಆಚರಣೆಗೆ ಅನುಸಾರವಾಗಿ ಅದೇ ಅಧಿಕಾರ ವ್ಯಾಪ್ತಿ ಅಧಿಕಾರಗಳು ಮುಕ್ತ ಪ್ರಾಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು. ಆದರೆ ಅಧೀನ ನ್ಯಾಯಾಲಯದಲ್ಲಿ ನಡೆದ ನಿಂದನೆ, ಭಾರತ ದಂಡ ಸಂಹಿತೆಯಲ್ಲಿ ದಂಡನೀಯ ಅಪರಾಧವಾಗಿದ್ದಲ್ಲಿ ಅದನ್ನು ತೆಗೆದುಕೊಳ್ಳತಕ್ಕದ್ದಲ್ಲ.

ಕಾರ್ಮಿಕ ನ್ಯಾಯಾಲಯವನ್ನು ಒಂದು ಅರ್ಥದಲ್ಲಿ, ಅಧೀನ ನ್ಯಾಯಾಲಯ ಎಂದು ಪರಿಗಣಿಸತಕ್ಕದ್ದಲ್ಲ. ಏಕೆಂದರೆ ಅದರ ಆದೇಶಗಳನ್ನು ಜಾರಿ ಮಾಡಲು ಕೈಗಾರಿಕಾ ನ್ಯಾಯಾಧೀಕರಣ ಕಾಯಿದೆಯಲ್ಲೂ ಅಧಿಕಾರ ಇದೆ. (1993 (1) SLR 138 P & H (DB))

**ಕ್ರಿಮಿನಲ್ ನ್ಯಾಯ ನಿಂದನೆ – ಇದರ ವ್ಯಾಪ್ತಿ**

1. ಜೈಲಿನ ಒಬ್ಬ ಅಧೀಕ್ಷಕ, ಒಬ್ಬ ಖೈದಿಯನ್ನು ಬಿಡುಗಡೆ ಮಾಡಲು ಆದೇಶಿಸಿದ್ದರೂ, ಬಿಡುಗಡೆ ಮಾಡದಿದ್ದರೆ ಅದು ಕ್ರಿಮಿನಲ್ ನ್ಯಾಯ ನಿಂದನೆ. [(1995) AIHC 2730 (cal)]
2. ಒಬ್ಬ ಕಕ್ಷಿದಾರ ನ್ಯಾಯಾಲಯದ ಆದೇಶ ಗೊತ್ತಿರದೆ ಇದ್ದಾಗ, ಅದರ ಉಲ್ಲಂಘನೆ ನ್ಯಾಯಾಲಯ ನಿಂದನೆ ಆಗುವುದಿಲ್ಲ. [(1995) AIHC 2402 (cal)]
3. ಪೋಲೀಸ್ ಇಲಾಖೆಯನ್ನು ಅಥವಾ ಪೋಲೀಸರನ್ನು ನಿಂದನೆ ಮಾಡುವುದು ನ್ಯಾಯಾಲಯ ನಿಂದನೆಯಾಗದೇ ಇದ್ದರೂ ಒಂದು ಬಾಕಿ ಇರುವ ಪ್ರಕರಣದ ವಿಚಾರಣೆ ನಡೆಸುತ್ತಿರುವಾಗ ಅಂತಹ ನಿಂದನೆ ಪ್ರಕರಣದ ಮೇಲೆ ಪ್ರಭಾವ ಬೀರುತ್ತಿದ್ದರೆ – ಅಷ್ಟರ ಮಟ್ಟಿಗೆ ಅದು ನ್ಯಾಯ

ನಿಂದನೆಯಾಗುತ್ತದೆ. (1969 KerLT 513)

4. ತಪ್ಪು ಆಧರಾ ಸುಳ್ಳು ಪ್ರತಿಜ್ಞಾ ಪತ್ರ (Affidavit) ನ್ನು ನ್ಯಾಯಾಲಯದಲ್ಲಿ ಸಲ್ಲಿಸಿದರೆ ಅದು ಕ್ರಿಮಿನಲ್ ಅಪರಾಧ ಮತ್ತು ನ್ಯಾಯಾಲಯ ನಿಂದನೆಯಾಗುತ್ತದೆ. [(1966) 1 JCLR 114 (All)]

## ನ್ಯಾಯಾಲಯ ನಿಂದನೆ ಮತ್ತು ಮಾನ ನಷ್ಟ ಮೊಕದ್ದೊಮ್ಮೆಗಳಲ್ಲಿನ ವ್ಯತ್ಯಾಸ

ಒಬ್ಬ ನ್ಯಾಯದೀಶರನ್ನು ಅವರ ಅಧಿಕೃತ ಹುದ್ದೆಯಲ್ಲಿ ಕೆಲಸ ನಿರ್ವಹಿಸುವಾಗ ಅಥವಾ ನಿರ್ವಹಿಸುತ್ತಿದ್ದಾಗ ಅವರ ಹುದ್ದೆಗೆ ಕೆಟ್ಟ ಹೆಸರು ತರುವ ಅಥವಾ ಕಳಂಕತರುವ ಅಥವಾ ನ್ಯಾಯಾಲಯಕ್ಕೆ ಕಳಂಕ ತರುವ ಬಗ್ಗೆ ಲೇಖನ ಬರೆದು, ಪ್ರಕಟಿಸಿದರೆ ಅದು ನ್ಯಾಯಾಲಯ ಮತ್ತು ನ್ಯಾಯಾದೀಶರ ನಿಂದನೆಯಾಗುತ್ತದೆ. ಅದಕ್ಕೆ ಶಿಕ್ಷೆ ವಿಧಿಸುವ ಅಧಿಕಾರ ನ್ಯಾಯಾಲಯಕ್ಕೆ ಇದೆ. ಆದರೆ ಒಬ್ಬ ನ್ಯಾಯಾದೀಶರನ್ನು ವೈಯಕ್ತಿಕವಾಗಿ ಅವಮಾನಿಸುವ ಕಳಂಕ ತರುವ ಲೇಖನವಾಗಿದ್ದರೆ ಮತ್ತು ಅದು ಯಾವುದೇ ಬಾಕಿ ಇರುವ ಪ್ರಕರಣಕ್ಕೆ ಸಂಬಂಧಿಸಿಲ್ಲವಾದರೆ ಅದು ನ್ಯಾಯಾಲಯ ನಿಂದನೆಯಾಗತಕ್ಕದ್ದಲ್ಲ. ಅದು ಮಾನ ನಷ್ಟವಾಗುತ್ತದೆ, ಅದಕ್ಕೆ ಪರಿಹಾರ ರೂಪದಲ್ಲಿ ಸಂಬಂಧಪಟ್ಟ ನ್ಯಾಯಾದೀಶರು ಪ್ರಕರಣ ದಾಖಲಿಸಿ ಪರಿಹಾರ ಕೇಳಬೇಕು. ಅಂದರೆ ವೈಯಕ್ತಿಕ ಬದುಕಿನ ಬಗ್ಗೆ ಬರೆದರೆಂದು ಬಾಕಿ/ಅಥವಾ ವಿಚಾರಣೆಯಲ್ಲಿರುವ ಪ್ರಕರಣದಲ್ಲಿದಿದ್ದರೆ ಅದು ನ್ಯಾಯಾಲಯ ನಿಂದನೆಯಾಗುವುದಿಲ್ಲ.

**ತಾಂತ್ರಿಕ ನಿಂದನೆ**

ನ್ಯಾಯಾದೀಶರು ಒಂದು ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ತಪ್ಪು ಆದೇಶವನ್ನು ಉದ್ದೇಶ ಪೂರ್ವಕವಲ್ಲದೆ ಮಾಡಿದ್ದರೆ ಅದು ನ್ಯಾಯಾ ವಿತರಣೆ ತಡೆಯಲು, ಮಧ್ಯಪ್ರವೇಶಿಸಲು ಮಾಡಿದ ಆದೇಶವೆಂದು ಮತ್ತು ನ್ಯಾಯಾಂಗಕ್ಕೆ ಚ್ಯುತಿಯುಂಟು ಮಾಡಿದ ಆದೇಶ ಎಂದು ತಿಳಿಯತಕ್ಕದಲ್ಲ. ಮ್ಯಾಜಿಸ್ಟ್ರೇಟ್ ಅವರು ಮಾನಸಿಕವಾಗಿ ಮತ್ತು ಉದ್ದೇಶ ಪೂರ್ವಕ ತಯಾರಿಯಿಂದ ಮಾಡಿದ ಆದೇಶವಲ್ಲದಿದ್ದರೆ ಅಂತಹ ಪ್ರಕರಣದಲ್ಲಿ ಅದನ್ನು ತಾಂತ್ರಿಕ ನಿಂದನೆ ಎಂದು ಪರಿಗಣಿಸಿತಕ್ಕದ್ದು. ಅಂತಹ ಪ್ರಕರಣಗಳಲ್ಲಿ ಉಚ್ಚನ್ಯಾಯಾಲಯ ನ್ಯಾಯಾಲಯ ನಿಂದನೆ ಕ್ರಮ ಜರುಗಿಸುವ ಅವಶ್ಯಕತೆ ಇಲ್ಲ. [(1976) 1 SCC 975 : AIR 1977 SC 859]

ಉಚ್ಚಾನ್ಯಾಯಾಲಯದ ಆದೇಶವನ್ನು ಸರ್ಕಾರದ ಮಾರ್ಪಾಡಾದ ನೀತಿಯಿಂದ ಜಾರಿ ಮಾಡಲಾಗದಿದ್ದರೆ ಅದು ನ್ಯಾಯಾಲಯ ನಿಂದನೆಯಾಗತಕ್ಕದ್ದಲ್ಲ.

ನ್ಯಾಯಾಲಯ ನಿಂದನೆ ಆರೊಪಿತನ ನಿಯಂತ್ರಣವಿಲ್ಲದ ಕಾರಣಗಳಿಂದ ಆದೇಶವನ್ನು ಪಾಲಿಸಲಾಗದಿದ್ದರೆ ಅದು ನ್ಯಾಯಾಲಯ ನಿಂದನೆಯಾಗುವುದಿಲ್ಲ. ಆದುದರಿಂದ ಪ್ರಕರಣವನ್ನು ವಜಾ ಮಾಡಲಾಯಿತು.

[(1996) 1 PLR 475]

ಉದ್ದೇಶ ಪೂರ್ವಕವಾಗಿಯಿಲ್ಲದ ಆದೇಶವನ್ನು ಪಾಲಿಸದಿದ್ದರೆ ಅದು ನ್ಯಾಯಾಲಯ ನಿಂದನೆಯಲ್ಲ. ಪ್ರಕರಣವನ್ನು ಕೈಬಿಡಲಾಯಿತು. (1995 CrLj 3745)

**ಯಾವಾಗ ನ್ಯಾಯಾಲಯ ನಿಂದನೆ**

1. ನ್ಯಾಯಾಲಯದ ಆದೇಶದ ಬಗ್ಗೆ ತಿಳಿದಿದ್ದು ಮತ್ತು ಆದೇಶವನ್ನು ಉದ್ದೇಶ ಪೂರ್ವಕವಾಗಿ ಉಲ್ಲಂಘಿಸಿದರೆ ಅಥವಾ ಪಾಲಿಸದಿದ್ದರೆ ಅದು ನ್ಯಾಯಾಲಯ ನಿಂದನೆಯಾಗುತ್ತದೆ. [(1995) 1 Gar HC 119]
2. ಉದ್ದೇಶ ಪೂರ್ವಕವಾಗಿ ಆದೇಶ ಪಾಲಿಸದೆ ಇದ್ದರೆ ಅದು ನ್ಯಾಯಾಲಯ ನಿಂದನೆಯಾಗುತ್ತದೆ

ಮತ್ತು ಕಾಗದಲ್ಲಿ ಕ್ಷಮಾದಾನ ಕೇಳಿದರೆ ಅದನ್ನು ಪರಿಗಣಿಸತಕ್ಕದ್ದಲ್ಲ ಅದನ್ನು ತಿರಸ್ಕಾರಿಸಲಾಯಿತು. (1996 All LJ 721)

3. ಉದ್ದೇಶ ಪೂರ್ವಕ ಉಲ್ಲಂಘನೆ ಎಂಬ ಪದಕ್ಕೆ ಅದು ಪೂರ್ವ ಯೋಜಿತ ಮತ್ತು ಯೋಜನೆಯಿಂದ ಮಾಡಬೇಕೆಂದಿಲ್ಲ. ಆದೇಶ ಪಾಲಿಸದಿದ್ದರೆ ಅದು ನ್ಯಾಯ ನಿಂದನೆಯಾಗುತ್ತದೆ. (1995 CrLj 1261) (P and H)

4. ನ್ಯಾಯಾಲಯದ ಆದೇಶ ತಪ್ಪಿನಿಂದ ಕೂಡಿದ್ದರೂ, ಆ ಆದೇಶವನ್ನು ಪಾಲಿಸಬೇಕಾಗಿಲ್ಲವೆಂಬ ಭಾವನೆ ಇರತಕ್ಕದ್ದಲ್ಲ. ಅದನ್ನು ಪಾಲಿಸಲೇಬೇಕು. (1983 Ker LT 829)

5. ನ್ಯಾಯಾಲಯದ ಆದೇಶವನ್ನು ಉದ್ದೇಶ ಪೂರ್ವಕವಾಗಿ ಪಾಲಿಸದಿದ್ದರೆ ಅದು ನಿಂದನೆಯಾಗುತ್ತದೆ. ಆರೋಪಿ ಅಧಿಕಾರಿ ಕ್ರಮವನ್ನೇ ಜರುಗಿಸಿಲ್ಲ (inaction) ವೆಂಬ ಕಾರಣವೇ ಸಾಲದು. [1995 CrLj 1718 (gaul)]

6. ನ್ಯಾಯಾಲಯ ನಿಂದನೆ ಪ್ರಕರಣ ವಿಚಾರಣೆ ನಡೆಯುತ್ತಿರುವಾಗ, ಒಬ್ಬ ನೌಕರನನ್ನು ಇಲಾಖಾ ವಿಚಾರಣೆಗೊಳ ಪಟ್ಟ ಅಮಾನತ್ತಿನಲ್ಲಿಟ್ಟರೆ ಅದು ನ್ಯಾಯಾಲಯ ನಿಂದನೆಯಾಗುತ್ತದೆ. [1995 CrLj 707 (cal)]

7. ನ್ಯಾಯಾಲಯವು ಒಬ್ಬ ನೌಕರನಿಗೆ ಬಡ್ತಿ ಕೊಡಲು ಆದೇಶಿಸಿದ್ದು ಅದನ್ನು ಪಾಲಿಸದಿದ್ದರೆ ಅದು ನ್ಯಾಯಾಲಯ ನಿಂದನೆ. ಅಂತಹ ಪ್ರಸಂಗದಲ್ಲಿ ನ್ಯಾಯಾಲಯವು ಒಂದು ತಿಂಗಳ ಸಾಮಾನ್ಯ ಸೆರೆ ವಾಸ ವಿಧಿಸಿ ಆದೇಶಿಸಿತು. [1996 CrLj 426 (SC) AIR 1996 SC 302]

**ಕರ್ನಾಟಕ ಟಿ.ಆರ್.ಧನಂಜಯ V/s ಜೆ.ವಾಸುದೇವನ್**

8. ನ್ಯಾಯಾಲಯ ನಿಂದನೆ ಮಾಡಿದ ಒಂದು ಸಂಸ್ಥೆ ಒಬ್ಬ ನೌಕರನನ್ನು ನ್ಯಾಯಾಲಯದ ಆದೇಶದಂತೆ ಅಮಾನತ್ತಿನಲ್ಲಿದ್ದ ಒಬ್ಬ ನೌಕರನನ್ನು ಸೇವೆಗೆ ಸೇರಿಸಿಕೊಳ್ಳದೆ, ಉಚ್ಚನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿದರೆ ಅದು ನ್ಯಾಯಾಲಯ ನಿಂದನೆಯಾಗುತ್ತದೆ. [1995 CrLj 766(Raj)]

9. ಒಬ್ಬ ಜಿಲ್ಲಾ ನ್ಯಾಯಾದೀಶರು ಉಚ್ಚನ್ಯಾಯಾಲಯದ ಆದೇಶ ಉದ್ದೇಶ ಪೂರ್ವಕವಾಗಿ ಪಾಲಿಸಿಲ್ಲವೆಂದು ತೀರ್ಮಾನಿಸಿದಾಗ ಆ ನ್ಯಾಯಾದೀಶರು ರಿಟ್ ಅರ್ಜಿಯ ಪ್ರತಿ ನೋಡಲು/ಸಲ್ಲಿಸಲು ಕೇಳಿದರೆ ಅದು ನ್ಯಾಯಾಲಯ ನಿಂದನೆಯಾಗುವುದಿಲ್ಲ. [1995 6 JT 766 (Raj)]

10. ನ್ಯಾಯಾಲಯವು ಪರಭಾರೆ ಮಾಡಬಾರದೆಂದು ಆದೇಶ ಮಾಡಿದ್ದರೂ, ಉದ್ದೇಶ ಪೂರ್ವಕವಾಗಿ ಮಾರಾಟ ಮಾಡಿದರೆ, ಅದನ್ನು ಮಾಡಿದ ವ್ಯಕ್ತಿ ನ್ಯಾಯಾಲಯ ನಿಂದನೆ ಮಾಡಿದ್ದಾನೆ. [1996 CrLj 972 (Cal)]

11. ಉಚ್ಚನ್ಯಾಯಾಲಯ ಒಬ್ಬ ಖೈದಿಯನ್ನು ಅವಧಿಗೆ ಮುನ್ನ ಬಿಡುಗಡೆ ಮಾಡಿ ಆದೇಶಿಸಿದಾಗ ಅದನ್ನು ಪಾಲಿಸದೆ ಮೇಲಾಧಿಕಾರಿಗಳ ಮಾರ್ಗದರ್ಶನ ಕೇಳುವುದು ಮತ್ತು ಆ ನಂತರ ಬಿಡುಗಡೆ ಆದೇಶವನ್ನು ರದ್ದು ಪಡಿಸಿದರೂ ಆದೇಶ ಪಾಲಿಸದೆ ಇದ್ದದು ನ್ಯಾಯಾಲಯ ನಿಂದನೆಯಾಗುತ್ತದೆ. [1988 (3) Crimes 745]

12. ಯಾವುದೇ ಆದೇಶ ಪಾಲಿಸದೆ ಇದ್ದಾಗ ಅದು ಉದ್ದೇಶ ಪೂರ್ವಕ ಎಂದು ಸಾಬೀತಾಗಬೇಕು. [(1996) 3 ALT 404 DB (AP)]

13. ನ್ಯಾಯಾಲಯ ನಿಂದನೆ ಆರೋಪಿಯು ಉದ್ದೇಶ ಪೂರ್ವಕವಾಗಿ, ದುರುದ್ದೇಶದಿಂದ, ಬೇಕೆಂತಲೇ ಉಲ್ಲಂಘಿಸದಿದ್ದರೆ ಅದು ನ್ಯಾಯಾಲಯ ನಿಂದನೆಯಾಗುವುದಿಲ್ಲ. [1994 (1) Mah.L.R.166 Bombay]

**ಕಾನೂನು ಭದ್ದವಲ್ಲದ ಮತ್ತು ಕಾರ್ಯವ್ಯಾಪ್ತಿಯಲ್ಲದ ನ್ಯಾಯಾಲಯ ಮಾಡಿದ ಆದೇಶ**

ಯಾವುದೇ ಕ್ರಮ ಜರುಗಿಸದಂತೆ ನ್ಯಾಯಾಲಯ ಆದೇಶ ಉಲ್ಲಂಘನೆ ಮಾಡಿದಾಗ, ಅಂತಹ ಆದೇಶ ಮಾಡುವ ಅಧಿಕಾರ ಇಲ್ಲದೇ ಇದ್ದರೂ ಮಾಡಿದಾಗ ಅದು ನ್ಯಾಯಾಲಯ ನಿಂದನೆಯಾಗುತ್ತದೆ. ಆದರೆ ಕಾರ್ಯವ್ಯಾಪ್ತಿಯಿಲ್ಲದೆ ಮಾಡಿದ ಆದೇಶ ನ್ಯಾಯಾಲಯ ನಿಂದನೆಯಾಗುವುದಿಲ್ಲ. (AIR 1949 Leh 131) [1950 CrLj 598 (DB)]

**ವ್ಯತಿರಿಕ್ತ ಆದೇಶಗಳು**

ಒಬ್ಬ ಜಿಲ್ಲಾ ವಿದ್ಯಾಧಿಕಾರಿಯು ಎರಡು ವಿರುದ್ಧ ಆದೇಶಗಳನ್ನು ಪಡೆದಾಗ, ನಂತರದ ಆದೇಶವನ್ನು ಅವನು ಪಾಲಿಸಿದ್ದು, ಆ ರೀತಿ ಮಾಡಿದಾಗ ಅಧಿಕಾರಿಯು ಮೊದಲಿನ ಆದೇಶವನ್ನು ಪಾಲಿಸಬಾರದೆಂಬ ಉದ್ದೇಶದಿಂದ ಎರಡನೇ ಆದೇಶ ಪಾಲಿಸಿದ್ದಾನೆಂದು ಭಾವಿಸತಕ್ಕದ್ದಲ್ಲ. ಅಂತಹ ಸಂದರ್ಭದಲ್ಲಿ ಅವನು ನ್ಯಾಯಾಲಯ ನಿಂದನೆ ಮಾಡಿದಂತಾಗುವುದಿಲ್ಲ. [(1992) 19 All Lr 16] (1942 CrLj 319)

**ಮೂರನೇ ವ್ಯಕ್ತಿಯಿಂದ ಆದೇಶ ಉಲ್ಲಂಘನೆ**

ಯಾವನೇ ಒಬ್ಬ ವ್ಯಕ್ತಿ ನ್ಯಾಯಾಲಯದ ಆದೇಶವನ್ನು ಜಾರಿ ಮಾಡುವ ಜವಾಬ್ದಾರಿ ಇಲ್ಲದಿದ್ದು, ಆದೇಶವನ್ನು ಮಾಡಿದ ವ್ಯಕ್ತಿ ಜಾರಿ ಮಾಡಬೇಕಾಗಿದ್ದು. ಅದರಿಂದ ಮಾರನೆ ವ್ಯಕ್ತಿಗೆ ಅನುಕೂಲವಾದರೆ ಮತ್ತು ಅದನ್ನು ಅವನು ಜಾರಿ ಮಾಡಿದರೆ, ಅದು ನ್ಯಾಯಾಲಯ ನಿಂದನೆಯಾಗುವುದಿಲ್ಲ. (AIR 1952 Cal 452)

ಒಂದು ರಿಟ್‌ನಲ್ಲಿ ಸಮಾನಾಂತರ (equity) ಆದೇಶ ಮಾಡಿದ ವ್ಯಕ್ತಿ ಆದೇಶ ಉಲ್ಲಂಘನೆ ಮಾಡಿದರೆ ಮಾತ್ರ ಅದು ಉಲ್ಲಂಘನೆಯಾಗುತ್ತದೆ ಆದರೆ, ಆ ಆದೇಶವನ್ನು ಬೇರೆಯವರು ಉಲ್ಲಂಘಿಸಿದರೆ ಅದು ನ್ಯಾಯಾಲಯ ನಿಂದನೆಯಾಗುವುದಿಲ್ಲ. (AIR 1949 Pat 39)

**ಕ್ರಿಮಿನಲ್ ನ್ಯಾಯ ನಿಂದನೆ – ಇದರ ವ್ಯಾಪ್ತಿ**

1. ಜೈಲಿನ ಒಬ್ಬ ಅಧೀಕ್ಷಕ, ಒಬ್ಬ ಖೈದಿಯನ್ನು ಬಿಡುಗಡೆ ಮಾಡಲು ಆದೇಶಿಸಿದ್ದರೂ, ಬಿಡುಗಡೆ ಮಾಡದಿದ್ದರೆ ಅದು ಕ್ರಿಮಿನಲ್ ನ್ಯಾಯ ನಿಂದನೆ. [(1995) AIHC 2730 (cal)]
2. ಒಬ್ಬ ಕಕ್ಷಿದಾರ ನ್ಯಾಯಾಲಯದ ಆದೇಶ ಗೊತ್ತಿರದೆ ಇದ್ದಾಗ, ಅದರ ಉಲ್ಲಂಘನೆ ನ್ಯಾಯಾಲಯ ನಿಂದನೆ ಆಗುವುದಿಲ್ಲ. [1995 AIHC 2402 (cal)]
3. ಪೋಲೀಸ್ ಇಲಾಖೆಯನ್ನು ಅಥವಾ ಪೋಲೀಸರನ್ನು ನಿಂದನೆ ಮಾಡುವುದು ನ್ಯಾಯಾಲಯ ನಿಂದನೆಯಾಗದೇ ಇದ್ದರೂ, ಒಂದು ಬಾಕಿ ಇರುವ ಪ್ರಕರಣದ ವಿಚಾರಣೆ ನಡೆಸುತ್ತಿರುವಾಗ ಅಂತಹ ನಿಂದನೆ ಪ್ರಕರಣದ ಮೇಲೆ ಪ್ರಭಾವ ಬೀರುತ್ತಿದ್ದರೆ – ಅಷ್ಟರ ಮಟ್ಟಿಗೆ ಅದು ನ್ಯಾಯ ನಿಂದನೆಯಾಗುತ್ತದೆ. (1969 KerLT 513)
4. ತಪ್ಪು ಅಥರಾ ಸುಳ್ಳ ಪ್ರತಿಷ್ಣ ಪತ್ರ (Affidant) ನ್ನು ನ್ಯಾಯಾಲಯದಲ್ಲಿ ಸಲ್ಲಿಸಿದರೆ ಅದು ಕ್ರಿಮಿನಲ್ ಅಪರಾಧ ಮತ್ತು ನ್ಯಾಯಾಲಯ ನಿಂದನೆಯಾಗುತ್ತದೆ. [(1966) 1 JCLR 114 (All)]

## ಸಹಕಾರ ಸಂಘಗಳ ಚುನಾವಣೆ

ಸಹಕಾರ ಸಂಘ ಸ್ಥಾಪನೆ ಮಾಡಿದ ನಂತರ ಕಾರ್ಯನಿರ್ವಹಣೆಗೆ ಒಂದು ಮಂಡಳಿ ಅವಶ್ಯಕವಿದೆ. ಈ ಮಂಡಳಿ ರಚಿಸಲು, ಸಂವಿಧಾನ, ಸಹಕಾರ ಕಾಯಿದೆ, ಸಹಕಾರ ನಿಯಮ ಮತ್ತು ಉಪನಿಯಮಗಳಲ್ಲಿ ಅವಕಾಶ ಕಲ್ಪಿಸಿದೆ. ಸುಮಾರು ಎರಡು ದಶಕಗಳ ಹಿಂದೆ, ಸಾಮಾನ್ಯವಾಗಿ ಅವಿರೋಧ ಆಯ್ಕೆಯಾಗುತ್ತಿದ್ದು, ಬಹಳಷ್ಟು ಸಂಖ್ಯೆಯ ಆಡಳಿತ ಮಂಡಳಿಗೆ ಚುನಾವಣೆ ನಡೆಯುತ್ತಿರಲಿಲ್ಲ. ಗ್ರಾಮ

ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತ್ ವ್ಯವಸ್ಥೆ ಪ್ರಾರಂಭವಾದ ನಂತರ ಎಲ್ಲಾ ಸಹಕಾರ ಸಂಘಗಳು ಸದಸ್ಯರಲ್ಲಿ ಜಾಗೃತಿ ಮಾಡಿ, ಚುನಾವಣೆ ನಡೆಯುತ್ತಿದೆ. ಈ ಚುನಾವಣೆ ನಡೆಯುವ ಸಂದರ್ಭದಲ್ಲಿ ಹಲವಾರು ನ್ಯೂನತೆಗಳು ಬರುವುದರಿಂದ, ಇದರ ಪರಿಹಾರಕ್ಕಾಗಿ ಸಹಕಾರ ಕಾಯಿದೆಯಲ್ಲಿ ಚುನಾವಣೆ ವಿವಾದಗಳನ್ನು ಪರಿಹರಿಸಲು, ನಿಬಂಧಕರ ನ್ಯಾಯಾಲಯ ಸ್ಥಾಪನೆಯಾಗಿದೆ. 2011ರಲ್ಲಿ ರಾಷ್ಟ್ರ ಮಟ್ಟದಲ್ಲಿ ಚರ್ಚೆಯಾಗಿ ಸಂವಿಧಾನಕ್ಕೂ ತಿದ್ದುಪಡಿ ತಂದು ಪ್ರತ್ಯೇಕ ಚುನಾವಣಾ ಆಯೋಗ/ಪ್ರಾಧಿಕಾರ ರಚನೆಗೆ ಅವಕಾಶ ಕಲ್ಪಿಸಿದೆ. ಅದರಂತೆ ಇತ್ತೀಚಿಗೆ ದೊಡ್ಡ ಪ್ರಮಾಣದಲ್ಲಿ ಚುನಾವಣಾ ತಕರಾರು ಅರ್ಜಿಗಳು ದಾಖಲಾಗುತ್ತಿದ್ದು. ಇವುಗಳ ಪರಿಹಾರ ನೀಡುವ ಜವಾಬ್ದಾರಿ ನಿಬಂಧಕರ ನ್ಯಾಯಾಲಯಕ್ಕೆ ನೀಡಲಾಗಿದೆ. (ಎರಡು ವರ್ಷಗಳ ಅವಧಿಗೆ ಇದನ್ನು ಸಿವಿಲ್ ನ್ಯಾಯಾಲಯಕ್ಕೆ ನೀಡಲಾಗಿತ್ತು.)

ಚುನಾವಣೆಗೆ ಸಂಬಂಧಪಟ್ಟಂತೆ ಉಚ್ಚನ್ಯಾಯಾಲಯ ಮತ್ತು ಶ್ರೇಷ್ಠ ನ್ಯಾಯಾಲಯ ನೂರಾರು ತೀರ್ಪುಗಳನ್ನು ನೀಡಿದೆ. ಈ ತೀರ್ಪುಗಳನ್ನು ಒಂದೇ ಕಡೆ ಕ್ರೋಡೀಕರಿಸಿ ಸಹಕಾರ ಸಂಸ್ಥೆಗಳಿಗೆ, ಸಹಕಾರಿಗಳಿಗೆ ಮತ್ತು ಇಲಾಖಾಧಿಕಾರಿಗಳಿಗೆ ಸಿಗುತ್ತಿಲ್ಲ. ಇದರ ಒಂದು ಪ್ರಯತ್ನವಾಗಿ ಸಂಯುಕ್ತ ಸಹಕಾರಿ 2014ನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆ ಸಮಯದಲ್ಲಿ ಸಂಕ್ಷಿಪ್ತ ತೀರ್ಪುಗಳ ಒಂದು ಪುಸ್ತಕ ಪ್ರಕಟಿಸಿದೆ. ಅದರ ಮುಂದುವರಿದ ಭಾಗ ಇದು.

## ಆಡಳಿತ ಮಂಡಳಿ ಚುನಾವಣೆ

1. ಸಂವಿಧಾನದ ಅನುಚ್ಛೇದ 243 ಝಡ್‌ಕೆ ಅನುಗುಣವಾಗಿ ರಾಜ್ಯ ಕಾಯಿದೆ ರಚನೆಯಾಗದೇ ಇರುವುದರಿಂದ ಹಾಗೂ ಮಂಡಳಿ ಅವಧಿ ಮುಗಿಯುವ ಮೊದಲು ಚುನಾವಣೆ ನಡೆಸುವ ಅವಕಾಶ ಇಲ್ಲದಿರುವುದರಿಂದ, ಹಾಲಿ ಮಂಡಳಿ ಹೊಸ ಆಡಳಿತ ಮಂಡಳಿ ರಚನೆಯಾಗುವ ತನಕ ಮುಂದುವರಿಯತಕ್ಕದ್ದು.
ಸಂವಿಧಾನದ ಅನುಚ್ಛೇದ 243 ಝಡ್‌ಕೆ ಅನ್ವಯ ಮಾಧ್ಯಮಿಕ, ರಾಜ್ಯ ಮತ್ತು ಅಪೆಕ್ಸ್ ಸಂಸ್ಥೆಗಳಿಗೆ ಅವಧಿಗೆ ಪೂರ್ಣ ಚುನಾವಣೆಗೆ ಅವಕಾಶವಿಲ್ಲದ್ದರಿಂದ, ಹಾಲಿ ಮಂಡಳಿ ಹೊಸ ಮಂಡಳಿ ಅಧಿಕಾರ ವಹಿಸಿಕೊಳ್ಳುವ ತನಕ ಅಧಿಕಾರದಲ್ಲಿ ಮುಂದುವರಿಯತಕ್ಕದ್ದು. (2015 Indlaw Kar 560, W.P.No.9274/2015 (CS-EC/M)
2. ಚುನಾವಣೆ ವಿಷಯಕ್ಕೆ ಸಂಬಂಧಪಟ್ಟಂತೆ ಸಹಕಾರ ಕಾಯಿದೆಯಲ್ಲಿ ವಿವಾದ ಪರಿಹರಿಸಲು ಅವಕಾಶ ಇದೆ. ಆದರೆ ಒಮ್ಮೆ ಚುನಾವಣಾ ಪ್ರಕ್ರಿಯೆ ಪ್ರಾರಂಭವಾದ ನಂತರ, ಯಾವುದೇ ಪ್ರಸಂಗದಲ್ಲಿಯೂ ಮಧ್ಯ ಪ್ರವೇಶ ಮಾಡುವ ಅಧಿಕಾರ ಇಲ್ಲ. ಆದರೆ ಉಚ್ಚನ್ಯಾಯಾಲಯ ವಿಶೇಷ ಸಂದರ್ಭಗಳಲ್ಲಿ ಮಧ್ಯ ಪ್ರವೇಶ ಮಾಡಲು ಅಧಿಕಾರ ಇದೆ. (ILR 1992 (2) Kar 979 (FB))
3. ಕಾಯಿದೆಯಲ್ಲಿ ವಿವಾದ ಪರಿಹಾರ ಮಾಡಿಕೊಳ್ಳಲು ಅವಕಾಶ ಇದೆ ಎಂಬ ಕಾರಣಕ್ಕೆ ಉಚ್ಚನ್ಯಾಯಾಲಯ, ಅನುಚ್ಛೇದ 226 ರಲ್ಲಿ ಅಧಿಕಾರ ಚಲಾಯಿಸಲಾಗದು ಎಂದು ತಿಳಿಯತಕ್ಕದ್ದಲ್ಲ. ತಪ್ಪು ತಿಳುವಳಿಕೆಯಿಂದ ನಾಮ ಪತ್ರ ತಿರಸ್ಕರಣೆ ಪ್ರಕ್ರಿಯೆ ಬಗ್ಗೆ ಸಂವಿಧಾನದ ಅನುಚ್ಛೇದ 226 ರಲ್ಲಿ ಮಧ್ಯ ಪ್ರವೇಶಿಸಬಹುದು. (1989 (1) KLJ 130)
4. ಸಾಮಾನ್ಯವಾಗಿ ಉಚ್ಚನ್ಯಾಯಾಲಯ ಆಂತರಿಕ ಅರ್ಜಿಗಳ ಮೇಲೆ ಮಾಡಿದ ಏಕಪಕ್ಷೀಯ ಆದೇಶಗಳ ಬಗ್ಗೆ ಮಧ್ಯ ಪ್ರವೇಶಿಸುವುದಿಲ್ಲ. ಆದರೆ ವಿಶೇಷ ಸಂದರ್ಭದಲ್ಲಿ, ಏಕಪಕ್ಷೀಯ ಆದೇಶದಿಂದ ನ್ಯಾಯ ಚ್ಯುತಿ ಯಾಗುತ್ತಿದೆ ಎಂದಾಗ, ಮಧ್ಯ ಪ್ರವೇಶಿಸಿ, ಅಂತಹ ಆದೇಶವನ್ನು ಮಾರ್ಪಡಿಸಬಹುದು. (2000 (3) KCLR 1900, ILR 2000 (3) Kar 2220, 2000 (4) KLJ 265)
5. ಅರ್ಜಿದಾರ ಚುನಾವಣೆ ಪ್ರಕ್ರಿಯೆ ಕಾನೂನು ಬಾಹಿರವಾಗಿದೆ ಎಂದು ದೂರಿದರೆ ಮತ್ತು ಎದುರು

ಅರ್ಜಿದಾರರು ಮಾಡಬೇಕಾದ ಕೆಲಸ ಮಾಡದೆ ಇದ್ದಾಗ, ಅದು ಅರ್ಜಿದಾರನಿಗೆ ಅನಾನುಕೂಲವಾಗದಿದ್ದರೆ ಮತ್ತು ಅರ್ಜಿದಾರ ಚುನಾವಣೆಯಲ್ಲಿ ಭಾಗವಹಿಸದಿದ್ದರೆ, ಅವನು ಚುನಾವಣೆಯಲ್ಲಿ ತೊಂದರೆಯಾದ ವ್ಯಕ್ತಿ ಎಂಬ ಅಧಿಕಾರ ಇರುವುದಿಲ್ಲ. ಆದ್ದರಿಂದ ಚುನಾವಣಾ ತಕರಾರು/ದಾವಾ ಹಾಕಲು ಅವನಿಗೆ ಅರ್ಹತೆ ಇರುವುದಿಲ್ಲ. (2001 (3) KCCR SN 133, ILR 2001 (4) Kar 4992)

6. ಚುನಾವಣಾ ತಕರಾರು ಅರ್ಜಿ ಸಲ್ಲಿಸಲು ಕಾನೂನಿನಲ್ಲಿ ಅವಕಾಶ ಇದ್ದರೂ, ಅದರಿಂದ ಯಾವುದೇ ಪ್ರಯೋಜನೆಯಾಗುವುದಿಲ್ಲವೆಂದು ಮನಗಂಡರೆ, ಉಚ್ಚನ್ಯಾಯಾಲಯ ಮ್ಯಾಂಡಮಸ್ ನಿರ್ದೇಶನ ನೀಡಿ ಮರು ಚುನಾವಣೆ ಮಾಡಲು ಆದೇಶಿಸಬಹುದು. ಚುನಾವಣಾಧಿಕಾರಿ ಹಿಂದೆ ಹೊರಡಿಸಿದ ವೇಳಾ ಪಟ್ಟಿಯಂತೆ, ಮೂವರು ಸ್ಪರ್ಧಿಗಳು ಸತ್ತಿದ್ದರೂ ಚುನಾವಣೆ ನಡೆಸಿರುವುದು ತಪ್ಪು ಮತ್ತು ಕಾನೂನು ಭದ್ದವಲ್ಲ. (ILR 1991 (1) Kar 577 (DB))

7. ಚುನಾವಣಾ ತಕರಾರು ಅರ್ಜಿ ತೀರ್ಮಾನ ಮಾಡುವಾಗ ನಿಬಂಧಕರು ನ್ಯಾಯ, ಸಮಾನತೆ ಮತ್ತು ಪರಿಜ್ಞಾನದಂತೆ ತೀರ್ಮಾನಿಸುವಾಗ, ಪ್ರಜಾ ಪ್ರತಿನಿಧಿ ಕಾಯಿದೆ ಕಲಂ.100 ಮತ್ತು 101 ನ್ನು ಪಾಲಿಸತಕ್ಕದ್ದು. ಆದರೆ ಈ ರೀತಿ ತೀರ್ಮಾನಿಸುವಾಗ ಅದು ಸಾಮಾನ್ಯ ನ್ಯಾಯ ತತ್ವಗಳಿಗೆ ವಿರುದ್ದವಾಗಿಲ್ಲವೆಂದು ಸ್ಪಷ್ಟವಾಗಿರಬೇಕು. (1975 (2) KLJ 235, 1975 ILR Kar 1682)

8. ಅರ್ಜಿದಾರ ಮತದಾರರ ಪಟ್ಟಿಯಲ್ಲಿನ ನ್ಯೂನತೆಗಳನ್ನು, ಆ ಪಟ್ಟಿ ಪ್ರಕಟಿಸಿದ ಕೂಡಲೇ ಪ್ರಶ್ನಿಸದಿದ್ದರೆ, ಮಧ್ಯ ಪ್ರವೇಶ ಮಾಡುವ ಅವಶ್ಯಕತೆ ಇಲ್ಲ. ಮತದಾರರ ಪಟ್ಟಿಯಲ್ಲಿನ ನ್ಯೂನತೆಗಳಿದ್ದರೆ ನಿಬಂಧಕರು ದಾವಾ ತೀರ್ಮಾನ ಮಾಡುವಾಗ ಅದನ್ನು ಪರಿಗಣಿಸಿ ಪಟ್ಟಿ ಪುರಸ್ಕರಿಸಿ ಚುನಾವಣೆ ನಡೆಸಲು ಆದೇಶಿಸುವ ಅಧಿಕಾರ ಇರುವುದರಿಂದ – ಉಚ್ಚನ್ಯಾಯಾಲಯ ಮಧ್ಯಪ್ರವೇಶಿಸಲು ಸಕಾರಣಗಳಿಲ್ಲ. ಆದರಿಂದ ಚುನಾವಣೆ ಪ್ರಕ್ರಿಯೆಯಲ್ಲಿ ಮಧ್ಯಪ್ರವೇಶ ಇಲ್ಲ. (2015 Indlaw Kar 356)

9. ಸಹಕಾರ ಚುನಾವಣಾ ಪ್ರಾಧಿಕಾರ ಯಾವುದೇ ಒಂದು ಚುನಾವಣೆ ಕೇಂದ್ರದಲ್ಲಿ, ಮತ ಚಲಾವಣೆಯಲ್ಲಿ ನ್ಯೂನತೆ ಇದೆ ಎಂದು ತೀರ್ಮಾನಿಸಿದಾಗ, ಆ ಮತಕೇಂದ್ರದಲ್ಲಿ ಮರು ಚುನಾವಣೆ ಮಾಡಲು ಆದೇಶಿಸಬಹುದು. ಅದು ನಿಯಮ 14-1(2)(i) ಮತ್ತು (ii) ರನ್ವಯ ಚುನಾವಣಾಧಿಕಾರಿಗೆ ಆ ಒಂದು ಕೇಂದ್ರದಲ್ಲಿ ಮರು ಮತದಾನ ಮಾಡಲು ಆದೇಶಿಸಬಹುದು. (2015 Indlaw Kar 1741)

10. ಚುನಾವಣಾ ಪ್ರಾಧಿಕಾರದ ಅಧಿಕಾರವನ್ನು ಕಲಂ.39 ಎಎ ನಲ್ಲಿ ನಿಗದಿ ಪಡಿಸಿದೆ. ಕಾಯಿದೆಯಲ್ಲಿ ಪ್ರಾಧಿಕಾರಕ್ಕೆ ಕಾರ್ಯದರ್ಶಿ ಮತ್ತು ಆಯುಕ್ತರು ಇರತಕ್ಕದ್ದೆಂದು ನಿಗದಿ ಪಡಿಸಿದೆ. ಪ್ರಾಧಿಕಾರದ ಆದೇಶಗಳನ್ನು, ಆ ಪ್ರಾಧಿಕಾರದ ಕಾರ್ಯದರ್ಶಿ ಸಹಿ ಮಾಡಿದ್ದರೆ, ಅದು ಅಸಮರ್ಪಕ ಆದೇಶ ಎಂದು ಪರಿಗಣಿಸಲಾಗದು. ಕಾಯಿದೆಯಲ್ಲಿ ಕಾರ್ಯದರ್ಶಿ ಉಲ್ಲೇಖ ಇರುವುದರಿಂದ, ಪ್ರಾಧಿಕಾರದ ಆದೇಶಗಳಿಗೆ ಸಹಿ ಮಾಡಲು ಕಾರ್ಯದರ್ಶಿಗೆ ಅಧಿಕಾರ ಇದೆ. (2015 Indlaw Kar 1741)

11. ಚುನಾವಣಾಧಿಕಾರಿ ವರದಿಯನ್ನಾದರಿಸಿ 16 ಮತ ಪತ್ರಗಳ ಎಣಿಕೆಯಿಂದ ಚುನಾವಣಾ ಪಲಿತಾಂಶದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲವೆಂದು ಮನದಟ್ಟಾದ ನಂತರ, ಒಂದು ಮತದಾನ ಕೇಂದ್ರದಲ್ಲಿ ಮರು ಚುನಾವಣೆ ನಡೆಸಲು ಆದೇಶಿಸಬಹುದು. ಈ ವಿಷಯದಲ್ಲಿ ಸ್ವಾಭಾವಿಕ ನ್ಯಾಯ ನೀತಿ ಅನ್ವಯ ಸಂಬಂಧಪಟ್ಟವರಿಗೆ ವ್ಯಯಕ್ತಿಕ ಅವಕಾಶ ನೀಡುವ ಅವಶ್ಯಕತೆ ಇಲ್ಲ. (2015 Indlaw Kar 1741)

12. ಕರ್ನಾಟಕ ಸಹಕಾರ ಕಾಯಿದೆ, ಕಲಂ.28ಎ ಗೆ ತಂದ ತಿದ್ದುಪಡಿ (ಕಾಯಿದೆ 3/2013 – ಕಲಂ.2.28ಎ (5) ಯಲ್ಲಿ ಚುನಾವಣೆಯನ್ನು ಮಂಡಳಿ ಅವಧಿ ಮುಗಿಯುವ ಪೂರ್ವದಲ್ಲಿ ನಡೆಸದಿದ್ದರೆ, (ಕಲಂ 39ಎ) – ಹೊರ ಹೋಗುವ ಆಡಳಿತ ಮಂಡಳಿ ಅವಧಿ ಐದು ವರ್ಷ ಇರುವುದರಿಂದ ಈ ಅವಧಿ, ಪೂರ್ವಾನ್ವಯವಾಗಿ ಅನ್ವಯಿಸುತ್ತದೆ. ಆದ್ದರಿಂದ, ಮಂಡಳಿ ಅವಧಿ ಐದು ವರ್ಷಗಳು ಮುಗಿಯುವ ತನಕ ಮುಂದುವರಿಯುತ್ತದೆ ಹಾಗೂ ಅವಧಿ ಮುಗಿಯುವ ಪೂರ್ವದಲ್ಲಿ ಆಡಳಿತಾಧಿಕಾರಿ ನೇಮಿಸಲಾಗದು. ಆದ್ದರಿಂದ ಕಲಂ.28ಎ (4) ರನ್ವಯ ಹಾಲಿ ಮಂಡಳಿಯ ಅವಧಿ ಐದು ವರ್ಷ ಪೂರೈಸುವ ತನಕ ಮುಂದುವರಿಯತಕ್ಕದ್ದು. (2014 Indlaw Kar 1301, AIR 2014 Kar 120)

13. ಏಕ ಸದಸ್ಯ ಪೀಠ ದಿನಾಂಕ 6.3.2014 ರಂದು ಮಾಡಿದ ಆದೇಶವನ್ನು ಕಿತ್ತುಹಾಕಿ, ಚುನಾಯಿತ ಮಂಡಳಿ ಐದು ವರ್ಷ ತನ್ನ ಅವಧಿ ಮುಗಿಯುವ ತನಕ ಮುಂದುವರಿಯತಕ್ಕದ್ದು ಮತ್ತು ಹೊಸದಾಗಿ ಚುನಾಯಿತ ಮಂಡಳಿ ಆ ನಂತರ ಅಧಿಕಾರ ಗ್ರಹಣ ಮಾಡತಕ್ಕದ್ದು. ಅಲ್ಲಿಯವರೆವಿಗೆ ಆಡಳಿತಾಧಿಕಾರಿ ನೇಮಿಸತಕ್ಕದ್ದಲ್ಲ. (2014 Indlaw Kar 1301, AIR 2014 Kar 120)

14. ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಉಪನಿಬಂಧಕರ ಆದೇಶವನ್ನು ಕಾನೂನು ಬಾಹಿರ ಎಂದು ತೀರ್ಮಾನಿಸಿದೆ. ಅದು ನ್ಯಾಯ ಸಮ್ಮತವಾಗಿದೆ. ಏಕೆಂದರೆ, ಚುನಾವಣಾ ತಕರಾರು ಅರ್ಜಿ ದಾಖಲಿಸುವಾಗ 70 ದಿವಸಗಳ ವಿಳಂಬವಾಗಿದ್ದು, ಆ ವಿಳಂಬ ವಿನಾಯ್ತಿ ಬಗ್ಗೆ ಆದೇಶಿಸಲೂ ಅಥವಾ ಅಂತಿಮ ಆದೇಶ ಮಾಡುವಾಗಲೂ ವಿಳಂಬದ ಬಗ್ಗೆ ಉಲ್ಲೇಖಿಸಿಲ್ಲ. ಉಪನಿಬಂಧಕರು ವಿಳಂಬ ವಿನಾಯ್ತಿ ಬಗ್ಗೆ, ಅದರಲ್ಲಿಯೂ ಚುನಾವಣಾ ತಕರಾರು ಅರ್ಜಿಯಲ್ಲಿ, ಉಲ್ಲೇಖಿಸದೆ, ಪ್ರಕರಣ ವಿಚಾರಣೆ ನಡೆಸಿ ಆದೇಶಿಸಿರುವುದು ತಪ್ಪು. ಈ ಆದೇಶವನ್ನು ಕರ್ನಾಟಕ ನ್ಯಾಯಾಧಿಕರಣ ಉಪನಿಬಂಧಕರ ಆದೇಶ ಕಿತ್ತು ಹಾಕಿರುವುದು ಸರಿ. ಮಧ್ಯ ಪ್ರವೇಶಿಸುವ ಅವಶ್ಯಕತೆ ಇಲ್ಲ. (2014 Indlaw Kar 1960, 2014 (5) KLJ 11)

15. ಈಗಾಗಲೇ ವಿಭಾಗ ಪೀಠ ಆದೇಶಿಸಿದಂತೆ ಚುನಾಯಿತ ಮಂಡಳಿ ಅವಧಿ ಐದು ವರ್ಷಗಳು ಎಂದು ಮತ್ತು ಇದು ಪೂರ್ವಾನ್ವಯವಾಗಿ ಅನ್ವಯವಾಗುವುದರಿಂದ, ಕಲಂ.21 (2) ರನ್ವಯ ಮಾಧ್ಯಮಿಕ ಸಂಘಗಳ ಚುನಾವಣೆ ನಡೆದ ನಂತರ, ಒಕ್ಕೂಟ ಸಹಕಾರ ಸಂಘಗಳ ಚುನಾವಣೆ ನಡೆಯಬೇಕು. ಕಲಂ.39ಎ (2) ರನ್ವಯ ಅವಧಿ ಮುಗಿಯುವ ಮೂವತ್ತು ದಿನಗಳೊಳಗೆ ಚುನಾವಣೆ ನಡೆಸಬೇಕೆಂದಿರುವುದರಿಂದ ಮತ್ತು ಮಾಧ್ಯಮಿಕ ಸಹಕಾರ ಸಂಘಗಳ ಚುನಾವಣೆ ನಡೆದ ನಂತರ ಎಂದಿದ್ದು ಹಾಗೂ ಇದು ಸಂವಿಧಾನದ ಪರಿಚ್ಛೇದ 243 ಝಿಕೆ ಅನ್ವಯ ಇರುವುದರಿಂದ, ಮಧ್ಯಪ್ರವೇಶಿಸುವ ಅವಶ್ಯಕತೆ ಇಲ್ಲ. ಮಾದ್ಯಮಿಕ ಸಹಕಾರ ಸಂಘಗಳ ಚುನಾವಣೆ ನಡೆಯುತ್ತಿರುವುದರಿಂದ ಪರಿಹಾರ ನೀಡಬೇಕಿಲ್ಲ. (2014 Indlaw 1748, 2014 (4) KLJ 115)

16. ಮಂಡಳಿಗೆ ಚುನಾವಣೆ ನಡೆಸುವುದರಿಂದ ಕಾರ್ಖಾನೆ ಗುತ್ತಿಗೆ ನೀಡುವುದಕ್ಕೆ ಯಾವುದೇ ಸಂಬಂಧವಿಲ್ಲ. ಮಂಡಳಿ ಚುನಾವಣೆ ಎಂಬುದು ಪ್ರಜಾಪ್ರಭುತ್ವದ ವ್ಯವಸ್ತೆ. ಈ ಚುನಾವಣೆ ನಡೆಸುವುದರಿಂದ ಗುತ್ತಿಗೆಗೆ ಬೇರೆ ಯಾವುದೇ ಪರಿಣಾಮ ಬೀರುವುದಿಲ್ಲ. ಗುತ್ತಿಗೆದಾರ ಕಾರ್ಖಾನೆಯನ್ನು ವಶಕ್ಕೆ ಪಡೆದು, ಕಬ್ಬು ನುರಿಸುವ ಕೆಲಸ ಮಾಡುತ್ತಿದ್ದು, ಗುತ್ತಿಗೆದಾರರು ಈ ನ್ಯಾಯಾಲಯದ ಮುಂದೆ ಬಂದಿಲ್ಲ ಹಾಗೂ ಚುನಾವಣಾಧಿಕಾರಿ ನೇಮಕದ ಬಗ್ಗೆ ತಕರಾರು ಇಲ್ಲ. ಆದ್ದರಿಂದ ಈ ಅರ್ಜಿದಾರರು ಚುನಾವಣಾಧಿಕಾರಿ ನೇಮಕದ ಬಗ್ಗೆ ಯಾವುದೇ ತಕರಾರು ಇಲ್ಲ ಮತ್ತು ಚುನಾವಣೆ ನಡೆದರೆ ಅರ್ಜಿದಾರರಿಗೆ ಯಾವುದೇ ತೊಡಕಿಲ್ಲ. (2014 Indlaw Kar 1722, 2014 (3) KLJ 457)

17. ಕಾಯಿದೆಗೆ ತಂದ ತಿದ್ದುಪಡಿ (ಕಲಂ.28ಎ(4)) ಯಲ್ಲಿ ಆಡಳಿತ ಮಂಡಳಿ ಅವಧಿ ಐದು ವರ್ಷ ಎಂದು ಸ್ಪಷ್ಟ ಪಡಿಸಿದೆ. ಅಂದರೆ ಆಡಳಿತ ಮಂಡಳಿ ರಚನೆಯಾದ ದಿನದಿಂದ ಐದು ವರ್ಷಗಳು. ಉದ್ದೇಶ ಸ್ಪಷ್ಟವಾಗಿ ಮಂಡಳಿ ಅವಧಿ ಐದು ವರ್ಷ ಕಾಯಿದೆ ರಚನೆ ಮಾಡುವಾಗಿ ತಿದ್ದುಪಡಿ ಪೂರ್ವಾನ್ವಯ ಎಂದು ಉದ್ದೇಶ ಪೂರಕವಾಗಿ ನಮೂದಿಸಿಲ್ಲ. ಏಕೆಂದರೆ ಆಡಳಿತ ಮಂಡಳಿ ಅವಧಿಯನ್ನು ಪೂರ್ವಾನ್ವಯವಾಗುವಂತೆ ವಿಸ್ತರಿಸಲು ಬರುವುದಿಲ್ಲ. ಇದು ಪ್ರಜಾಪ್ರಭುತ್ವದ ನೀತಿಗೆ ವಿರುದ್ಧ ಮತ್ತು ಮತದಾರ ಆಶಯವಾಗಿರಲಿಲ್ಲ. ಮತದಾರರು ಮತ ಚಲಾಯಿಸುವಾಗ ಸ್ಪಷ್ಟವಾಗಿ ಮಂಡಳಿ ಅವಧಿ ದಿನಾಂಕ 31.03.2014ಕ್ಕೆ ಮುಕ್ತಾಯವಾಗುತ್ತದೆ ಎಂದು ನಿರ್ಧರಿಸಿತ್ತು. ಅದನ್ನು ನಾವು ಮಾನ್ಯ ಮಾಡಬೇಕು. ಈಗ ಮಂಡಳಿಗೆ ಸ್ಪರ್ಧಿಸುವವರು ಮತದಾರರ ಮುಂದೆ ಐದು ವರ್ಷದ ಅವಧಿಗೆ ಮತ ಕೇಳಬೇಕು. ತಿದ್ದುಪಡಿ ಆಗಿದೆ ಎಂದು ಅವಧಿಯನ್ನು ಐದು ವರ್ಷಕ್ಕೆ ವಿಸ್ತರಿಸಬೇಕು ಎಂದು ಕೇಳತಕ್ಕದ್ದಲ್ಲ. ಅರ್ಜಿದಾರರು ತಮ್ಮ ಅವಧಿ ಯಾವಾಗ ಮುಗಿಯುತ್ತದೆಂದು ಸ್ಪಷ್ಟವಾಗಿ ತಿಳಿದಿತ್ತು. ಆದ್ದರಿಂದ ಏಕ ಸದಸ್ಯ ಪೀಠದ ಆದೇಶವನ್ನು ಅನೂರ್ಜಿತಗೊಳಿಸಲಾಗದು. (2014 Indlaw Kar 1601)

**ಸೂಚನೆ : ಈ ತೀರ್ಮಾನವನ್ನು ಮಾರ್ಪಡಿಸಲಾಗಿದೆ – ಇತರ ತೀರ್ಪುಗಳಿಂದ (1. 2014 Indlaw Kar 1748, 2. 2014 (4) KLJ 115, 3. 2014 Indlaw Kar 1301, 4. AIR 2014 Kar 120**

18. ಯಾವುದೇ ಕಾಯಿದೆಯಲ್ಲಿ ವಿವಾದ ಪರಿಹರಿಸಿಕೊಳ್ಳಲು ಅವಕಾಶ ಕಲ್ಪಿಸಿದಾಗ, ಅನುಚ್ಛೇದ 226 ರಲ್ಲಿ ಪರಿಹಾರ ಕೇಳಿದರೆ, ಅದನ್ನು ಪರಿಗಣಿಸುವ ಅವಶ್ಯಕತೆ ಇಲ್ಲ. ಕಾನೂನನ್ನು ತಿರುಚಿ, ಪರಿಹಾರ ನೀಡಲಾಗದು. (2013 Indlaw Kar 2598, 2014 (2) BC 625, 2014 (2) DRTC 243, 2014 (1) KLJ 571)

19. ಮಂಡಳಿಯನ್ನು ರದ್ದು ಪಡಿಸಿ, ಆಡಳಿತಾಧಿಕಾರಿ ನೇಮಿಸಿದಾಗ, ಚುನಾವಣೆ ಸಂದರ್ಭದಲ್ಲಿ ಆಡಳಿತಾಧಿಕಾರಿ ಹೊಸದಾಗಿ ಸದಸ್ಯರನ್ನು ಸೇರಿಸಿಕೊಂಡು, ಆ ಸದಸ್ಯರನ್ನು ಸೇರಿಸಿ ಚುನಾವಣೆ ನಡೆಸಲಾಗದು. ಆಡಳಿತಾಧಿಕಾರಿ, ಚುನಾವಣಾಧಿಕಾರಿ ಅಥವಾ ವಿಶೇಷಾಧಿಕಾರಿ ಹೊಸದಾಗಿ ಸದಸ್ಯರನ್ನಾಗಿ ಸೇರಿಸುವ ಅಧಿಕಾರ ಹೊಂದಿಲ್ಲ. ಇದನ್ನು ಶ್ರೇಷ್ಠ ನ್ಯಾಯಾಲಯ (AIR 2000 SC 2378/2000 Indlaw SC 446) ಮತ್ತು ಈ ನ್ಯಾಯಾಲಯದ ವಿಭಾಗ ಪೀಠ ತೀರ್ಪು ನೀಡಿದೆ. (1997 Indlaw SC 2314, 2013 Indlaw Kar 1588)

20. ಸರ್ಕಾರ ಸಾಲ ಮನ್ನಾ ಯೋಜನೆಯಡಿ ಸಹಕಾರ ಸಂಘಗಳಿಗೆ ಕಲಂ.121ರ ಅಧಿಕಾರ ಚಲಾಯಿಸಿ ಕಲಂ.20 (2)(b)(iv)(a) ಮತ್ತು (b) ಅಡಿ ವಿನಾಯ್ತಿ ನೀಡಿದಾಗ, ಅದು ಸಹಕಾರ ಸಂಘದ ಅಥವಾ ಸದಸ್ಯರ ತಪ್ಪಿನಿಂದಲ್ಲ. ಆದ್ದರಿಂದ ಸರ್ಕಾರದ ಆದೇಶದನ್ವಯ ಅಂತಹ ಸಂಘಗಳು ವಿನಾಯ್ತಿ ಉಪಯೋಗಿಸಿಕೊಂಡು ಚುನಾವಣೆಯಲ್ಲಿ ಭಾಗವಹಿಸಬಹುದು. ಏಕೆಂದರೆ ಸರ್ಕಾರ ಹಣ ಪಾವತಿ ಮಾಡದೆ ಇದ್ದುದರಿಂದ ಅಂತಹ ಸಹಕಾರ ಸಂಘಗಳನ್ನು ಸುಸ್ತಿದಾರರೆಂದು ಪರಿಗಣಿಸಲಾಗದು. ಮೇಲ್ಕಂಡ ವಿನಾಯ್ತಿಯಂತೆ ಎಲ್ಲಿ ಚುನಾವಣೆ ಬಾಕಿ ಇದೆಯೋ, ಅಂತಹ ಸಂಘಗಳು ಹೊಸದಾಗಿ ಮತದಾರರ ಪಟ್ಟಿ ಪುರಸ್ಕರಿಸಿ ಚುನಾವಣೆ ನಡೆಸತಕ್ಕದ್ದು. (2013 Indlaw Kar 1762, 2014 (2) KLJ 361)

21. ಬಹುಮತದ ಆಡಳಿತ ಮಂಡಳಿ ರಚನೆಯಾಗಿಲ್ಲವೆಂಬ ಕಾರಣಕ್ಕೆ ಆಡಳಿತಾಧಿಕಾರಿ ನೇಮಿಸಿದಾಗ, ಚುನಾವಣೆಯಲ್ಲಿ, ಸ್ಪರ್ಧಿಸಿ ಗೆದ್ದ ಅಭ್ಯರ್ಥಿಗಳು ಆಯ್ಕೆ ಅಸಿಂದು ಎಂದು ತೀರ್ಮಾನಿಸಿಲ್ಲವಾದ್ದರಿಂದ, ಅಂತಹ ಆಯ್ಕೆಯಾದ ನಿರ್ದೇಶಕ ಸ್ಥಾನಗಳಿಗೆ ಮರು ಚುನಾವಣೆ

ಮಾಡತಕ್ಕದ್ದಲ್ಲ. ಏಕೆಂದರೆ ಅವರು ಸ್ಪರ್ಧಿಸಿ ಆಯ್ಕೆಯಾಗಿದ್ದರೆ ಮತ್ತು ಬಹುಮತದ ಮಂಡಳಿ ಆಯ್ಕೆ ಆಗದೇ ಇದ್ದಾಗ, ಅಂತಹ ಗೆದ್ದ ಅಭ್ಯರ್ಥಿಗಳ ತಪ್ಪೇನು ಇಲ್ಲ. ಆದ್ದರಿಂದ ಆಡಳಿತಾಧಿಕಾರಿ ಆಯ್ಕೆಯಾದ ನಿರ್ದೇಶಕರನ್ನು ಹೊರತು ಪಡಿಸಿ ಖಾಲಿ ಇರುವ ಸ್ಥಾನಗಳಿಗೆ ಮಾತ್ರ ಚುನಾವಣೆ ನಡೆಸತಕ್ಕದ್ದು. (2013 Indlaw Kar 1933)

**ಉಲ್ಲೇಖ : ಶ್ರೇಷ್ಠ ನ್ಯಾಯಾಲಯದ ತೀರ್ಪುನ್ನು ಗಮನಿಸುವುದು – AIR 2001 SC 1980/ 2001 Indlaw SC 19874/(2001) 8 SCC 257/2001 Indlaw SC 60**

22. ಚುನಾವಣಾ ವೇಳಾ ಪಟ್ಟಿಯನ್ನು ದಿನಾಂಕ 08.08.2013 ರಂದು ಪ್ರಕಟಿಸಲಾಗಿದೆ. ಈ ರಿಟ್ ಅರ್ಜಿಯನ್ನು ದಿನಾಂಕ 20.08.2013 ರಂದು ಸಲ್ಲಿಸಲಾಗಿದೆ ಹಾಗೂ ಚುನಾವಣಾ ದಿನಾಂಕವನ್ನು 01.09.2013 ರಂದು ನಿಗದಿಗೊಳಿಸಿರುವುದರಿಂದ ಹಾಗೂ ಈ ಪ್ರಕರಣದಲ್ಲಿ ದಾಖಲೆಗಳು ಮತ್ತು ಸಾಕ್ಷಿಗಳನ್ನು ಮತ್ತು ಸಹಕಾರ ಸಂಘಗಳ ಕಾಯಿದೆ 70ರಲ್ಲಿ ಪರಿಹಾರ ಕೇಳಲು ಅವಕಾಶ ಇರುವುದರಿಂದ, ಈ ರಿಟ್ ಅರ್ಜಿಯನ್ನು ಪುರಸ್ಕರಿಸಲಾಗದು. (2013 Indlaw Kar 1197)

23. ಸದಸ್ಯತನವನ್ನು ಮುಕ್ತಾಯಗೊಳಿಸಿ, ಮತದಾರರ ಪಟ್ಟಿಯಿಂದ ಹೆಸರು ತೆಗೆದ ನಂತರ, ರಿಟ್ ಮುಖಾಂತರ ಸದಸ್ಯತ್ವ ಮರು ಸೇರ್ಪಡೆ ಮತ್ತು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕೇಳಿದಾಗ, ಅಂತಹ ಪ್ರಕರಣವನ್ನು ಪರಿಶೀಲಿಸಲು ಅವಕಾಶ ಇಲ್ಲ. ಸಹಕಾರ ಸಂಘ ಸರ್ಕಾರದ ಒಂದು ಅಂಗವಲ್ಲ, ಆದ್ದರಿಂದ ರಿಟ್ ಅರ್ಜಿಯನ್ನು ಸ್ವೀಕರಿಸತಕ್ಕದ್ದಲ್ಲ ಸದಸ್ಯತ್ವದಿಂದ ತೆಗೆದ ಬಗ್ಗೆ ಪ್ರಶ್ನಿಸಿರುವುದರಿಂದ ಇದು ಒಂದು ದಾವಾ ಪ್ರಕರಣವಾಗುತ್ತದೆ. ಇದರ ಜೊತೆಗೆ ಅಂತಹ ವ್ಯಕ್ತಿ ಮಾಜಿ ಸದಸ್ಯನಾಗುತ್ತಾನೆ ಆದ್ದರಿಂದ ಸಹಕಾರ ಕಾಯಿದೆಯಲ್ಲಿ ಪರಿಹಾರ ಕೇಳಬೇಕು. (2013 Indlaw Kar 1180)

24. ಮಂಡಳಿಯ ಪದಾಧಿಕಾರಿಗಳ ಆಯ್ಕೆ ಸಂದರ್ಭದಲ್ಲಿ ಸರ್ಕಾರ ಕಲಂ.29(1) ರನ್ನು ಮೂವರನ್ನು ನಾಮ ನಿರ್ದೇಶನ ಮಾಡಿತು. ಜಿಲ್ಲಾ ಪಂಚಾಯತ್‌ನಿಂದ ಸಹಾಯ ಧನ ನೀಡಲಾಗಿದೆ ಎಂಬ ಆಧಾರದ ಮೇಲೆ ನಾಮನಿರ್ದೇಶನ ಮಾಡಿತ್ತು. ಜಿಲ್ಲಾ ಪಂಚಾಯತ್ ನಿಂದ 1994 ಮತ್ತು 1996 ರಲ್ಲಿ ಸಹಾಯ ಧನ ನೀಡಲಾಗಿತ್ತು. ಆದರೆ ಕಾಯಿದೆಯಲ್ಲಿ ಸಹಾಯ ಧನ ಪಡೆದ ಸಂಸ್ಥೆ ಎಂಬಲ್ಲಿ "ರಾಜ್ಯ" ಎಂಬ ಪದ, ಆ ಅವಧಿ ಯಲ್ಲಿ ಸೇರ್ಪಡೆಯಾಗಿರಲಿಲ್ಲ. ಹಾಗೂ ಸಹಾಯ ಧನ ಇತ್ತೀಚಿಗೆ ನೀಡಿದ್ದಲ್ಲ, ಅಂದರೆ ಬಹಳ ಹಿಂದೆ ನೀಡಲಾಗಿದ್ದು, ಅದರ ಆಧಾರದ ಮೇಲೆ ನಾಮ ನಿರ್ದೇಶನ ಸಲ್ಲದು – ಏಕೆಂದರೆ ಸಹಾಯ ಧನದ ಅವಧಿಯನ್ನು ಕಾಯಿದೆಯಲ್ಲಿ ನಮೂದಿಸಿಲ್ಲ. ಈಗಿನ ತಃಖ್ತೆಯಲ್ಲಿ ಸಹಾಯ ಧನ ಪಡೆದ ಸಂಸ್ಥೆಯಲ್ಲಿದ್ದರಿಂದ ನಾಮನಿರ್ದೇಶನ ಮಾಡಿರುವುದು, ಅಧಿಕಾರವಿಲ್ಲದೇ ಚಲಾವಣೆ ಆಗಿದೆ ಆದ್ದರಿಂದ ನಾಮನಿರ್ದೇಶನ ಕಿತ್ತು ಹಾಕಲಾಗಿದೆ. (2010 Indlaw Kar 589, 2011 (2) KLJ 181)

25. ಚುನಾವಣಾ ಪ್ರಕ್ರಿಯೆ ಪ್ರಾರಂಭವಾದ ನಂತರ ಯಾವುದೇ ಕಾರಣಕ್ಕೂ ಅದನ್ನು ತಡೆಹಿಡಿಯಬಾರದು ಎಂದು ಶ್ರೇಷ್ಠ ನ್ಯಾಯಾಲಯ (AIR 1952 SC 64/1952 Indlaw SC 117) ನಿರ್ದೇಶಿಸಿದೆ. ಚುನಾವಣಾ ಪ್ರಕ್ರಿಯೆ ಪ್ರಾರಂಭವಾದ ನಂತರ ಮಧ್ಯಂತರ ಅರ್ಜಿಯಲ್ಲಿ ತಡೆಯಾಜ್ಞೆ ನೀಡಿರುವುದು ಅಪೆಕ್ಸ್ ಸಂಸ್ಥೆಯ ಅಧ್ಯಕ್ಷರ ಚುನಾವಣೆಗೆ ತಡೆಯಾಗುತ್ತದೆ. ಆದ್ದರಿಂದ ಸಹಕಾರ ಸಂಘಗಳ ಕಾಯಿದೆ ಕಲಂ 70ರಲ್ಲಿ ಪರಿಹಾರ ಪಡೆಯಬೇಕು. ಅರ್ಜಿದಾರರು ಅಪೆಕ್ಸ್ ಸಂಸ್ಥೆಯ ಅಧ್ಯಕ್ಷರ ಚುನಾವಣೆಯಲ್ಲಿ (30.4.2010) ಭಾಗವಹಿಸಬಹುದು. (2010 Indlaw Kar 330, 2010 (5) KLJ 1)

26. ನಿಬಂಧಕರು ಕಲಂ 30(5) ರನ್ವಯ ಒಂದು ಸಹಕಾರ ಬ್ಯಾಂಕ್‌ನ ಆಡಳಿತ ಮಂಡಳಿ ರದ್ದು

ಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸಿದಾಗ – ನಿರ್ದೇಶಕರನ್ನು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರು ಎಂದು ಆದೇಶಿಸತಕ್ಕದ್ದಲ್ಲ. (2010 Indlaw Kar 421, 2010 (6) KLJ 126)

27. ಕಲಂ.20(2) ರನ್ವಯ ಯಾವ ಸಹಕಾರ ಸಂಘ ಶೇ.75% ರಷ್ಟು ಸಾಲ ವಸೂಲಿ ಮಾಡದಿದ್ದರೆ ಮತದಾನ ಮಾಡುವ ಹಕ್ಕು ಇರುವುದಿಲ್ಲ ಕಲಂ.20(2)(b)(iv) ರನ್ವಯ ಶೇ.75% ಸಾಲ ವಸೂಲಿಯನ್ನು ಸಂಬಂಧಪಟ್ಟ ವರ್ಷದಲ್ಲಿ ಮಾಡದೇ ಇದ್ದರೆ – ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತಾರೆ. (2010 Indlaw Kar 533, 2011 (2) KLJ 82)

28. ಚುನಾವಣೆ ನಡೆದ ನಂತರ, ನ್ಯೂನತೆಗಳನ್ನು ಪ್ರಶ್ನಿಸಿ, ದಾವಾದಾಖಲು ಮಾಡಲು ಅವಕಾಶ ಇದೆ. ಎಂದರು ಅರ್ಜಿದಾರರಲ್ಲಿ ಪದಾಧಿಕಾರಿಗೆ ಸ್ಪರ್ಧಿಸಲು ಅನರ್ಹರೆಂಬ ಆಧಾರದಲ್ಲಿ ಪ್ರಶ್ನಿಸಬಹುದು. ಆದರೆ ಅಧ್ಯಕ್ಷರ ಚುನಾವಣೆಗೆ ವೇಳಾ ಪಟ್ಟಿ ಪ್ರಕಟವಾಗಿಲ್ಲ. ಅರ್ಜಿದಾರನಿಗೆ ಕಲಂ 70 ರನ್ವಯ ಪ್ರಶ್ನಿಸಲು ಅವಕಾಶ ಇರುವುದರಿಂದ, ಮತ್ತು ಅಧ್ಯಕ್ಷರ ಚುನಾವಣೆ ದಿನಾಂಕ 31.07.2009 ರಂದು ಆರೋಪಿಸಿದಂತೆ ಚುನಾವಣೆ ನಡೆದಿದೆ. ಆದ್ದರಿಂದ ಈ ಅರ್ಜಿ ಸ್ವೀಕಾರಾರ್ಹವಲ್ಲ ಹಾಗೂ ಚುನಾವಣಾ ತಕರಾರು ಅರ್ಜಿ ಸಲ್ಲಿಸಬಹುದು. (2009 Indlaw Kar 170, 2009 (5) KLJ 595)

29. ಲೋಕಸಭೆ ಚುನಾವಣೆ ಇದೆ ಎಂಬ ಕಾರಣದಿಂದ, ಸಹಕಾರ ಸಂಘಗಳ ಚುನಾವಣೆಯನ್ನು ಮುಂದೂಡಿ ಸರ್ಕಾರ ಹೊರಡಿಸಿದ ಅಧಿಸೂಚನೆ, ದುರುದೇಶದಿಂದ ಕೂಡಿದೆ ಎಂದು ಆರೋಪಿಸಿಲ್ಲ. ಮುಂದೂಡಿದ ಚುನಾವಣೆಯನ್ನು, ಯಾವ ಸ್ಥಿತಿಯಲ್ಲಿ ಮುಂದೂಡಲಾಗಿದೆಯೋ, ಆ ಸ್ಥಿತಿಯಂದು ಮುಂದುವರಿಸತಕ್ಕದ್ದು. ಎಲ್ಲಿ ಚುನಾವಣೆ ಮುಕ್ತಾಯವಾಗಿ, ಫಲಿತಾಂಶ ಪ್ರಕರಟವಾಗಿಲ್ಲವೋ, ಅಂತಹ ಪ್ರಸಂಗದಲ್ಲಿಯೂ, ಮುಂದೂಡಿದ ಆದೇಶದ ಅವಧಿ ಮುಗಿದ ಕೂಡಲೇ, ಫಲಿತಾಂಶ ಪ್ರಕಟಿಸತಕ್ಕದ್ದು. (2009 Indlaw Kar 144, 2009 (J) KLJ 280)

30. ಚುನಾವಣಾಧಿಕಾರಿ, ಮೂರನೇ ಎದುರು ಅರ್ಜಿದಾರರನ್ನು ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಮತ್ತು ಅರ್ಜಿದಾರರು ನಾಮ ಪತ್ರ ಹಿಂಪಡೆದಿದ್ದಾರೆಂದುದನ್ನು ಪರಿಗಣಿಸಿ ತೀರ್ಮಾನಿಸಿದ್ದರು. ಅರ್ಜಿದಾರ ನಾಮ ಪತ್ರ ಹಿಂಪಡೆದಿಲ್ಲವೆಂದು ವಾದಿಸಿದಾಗ ಮತ್ತು ಚುನಾವಣಾಧಿಕಾರಿ ನಾಮ ಪತ್ರ ಹಿಂಪಡೆದ ದಾಖಲೆ ಇಲ್ಲವೆಂದು ಹಿಂಬರಹ ನೀಡಿದಾಗ ಸಂಯುಕ್ತ ನಿಬಂಧಕರ ಮುಂದೆ ದಾವಾ ದಾಖಲಿಸಿ, ಉಪನಿಬಂಧಕರ ತೀರ್ಮಾನಕ್ಕೆ ಕಳುಹಿಸಲಾಗಿತ್ತು.

ವಿಳಂಬ ವಿನಾಯ್ತಿ ಬಗ್ಗೆ ಕಲಂ.70ಎ(2) ರಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದರೆ ಮೈಸೂರು ಸಾಮಾನ್ಯ ನಿಯಮ ಕಾಯಿದೆ 1899 ಅನ್ವಯ ಮಾಡಲು ಕಾನೂನಿನಲ್ಲಿ ಯಾವುದೇ ನಿರ್ಬಂಧ ಅಥವಾ ತಡೆ ಇಲ್ಲ. ಉಪನಿಬಂಧಕರು ದಾವಾ ದಾಖಲಿಸಲು ವಿಳಂಬವಾಗಿದೆ ಎಂದು ಹಿಂಬರಹ ನೀಡಿದ್ದರಿಂದ ಈ ಅರ್ಜಿ ದಾಖಲಿಸಲಾಗಿದೆ. ಆ ಹಿಂಬರಹ ತಪ್ಪು ಮತ್ತು ಇಂತಹ ಪ್ರಸಂಗಗಳಲ್ಲಿ ಮೈಸೂರು ಸಾಮಾನ್ಯ ಕಾಯಿದೆ 1899 ಅನ್ವಯ ಮಾಡಲು ನಿಷೇದ ಅಥವಾ ತಡೆ ಇಲ್ಲ. (2008 Indlaw Kar 342, 2009 (1) KLJ 458)

31. ಏಕ ಸದಸ್ಯ ಪೀಠ ಪೋಲೀಸ್ ಅಧಿಕಾರಿಯ ಮೌಖಿಕ ಮಾರ್ಗದರ್ಶನದಂತೆ ಚುನಾವಣಾ ನಡೆಸಿದರೆ ಕಾನೂನು ತೊಡಕಾಗುತ್ತದೆಂದು ಮಾಡಿರುವುದು ತಪ್ಪು ಎಂಬ ಆದೇಶ ಸರಿಯಿದೆ. ಚುನಾವಣಾಧಿಕಾರಿ ಮೌಖಿಕ ತಿಳುವಳಿಕೆ ಮೇಲೆ ಮುಂದೂಡಿರುವುದು ತಪ್ಪು. ಆದ್ದರಿಂದ, ಮುಂದೂಡಿದ ದಿನಾಂಕದಂದು ಯಾವ ಸ್ಥಿತಿಯಲ್ಲಿ ಮುಂದೂಡಲಾಗಿದೆಯೋ, ಆ ಸ್ಥಿತಿಯಂದು ಚುನಾವಣಾ ಪ್ರಕ್ರಿಯೆಯನ್ನು ಮುಂದುವರಿಸತಕ್ಕದ್ದು. ನ್ಯೂನತೆಗಳಿದ್ದರೆ, ಮತದಾರರ ಪಟ್ಟಿಯಲ್ಲಿ ದೋಷವಿದ್ದರೆ, ಅದನ್ನು ಪ್ರಶ್ನಿಸಬಹುದಾಗಿದೆ. ಆದ್ದರಿಂದ ಪೋಲೀಸ್ ಅಧಿಕಾರಿಯ ಮೌಖಿಕ

ಸೂಚನೆ ಮೇಲೆ ಚುನಾವಣೆ ಮುಂದೂಡಿರುವುದು ಕಾನೂನಿನಲ್ಲಿ ಸ್ವೀಕಾರಾರ್ಹವಲ್ಲ. (2008 Indlaw Kar 281, 2009 (2) KLJ 438)

32. ನಿಯಮ 14 ರನ್ವಯ ಚುನಾವಣಾಧಿಕಾರಿಯನ್ನು ನೇಮಿಸುವ ಅಧಿಕಾರ ನಿಬಂಧಕರಿಗೆ ಇದೆ ಮತ್ತು ಚುನಾವಣೆಯನ್ನು ಯಾವ ರೀತಿ ನಡೆಸಬೇಕೆಂದು ಸ್ಪಷ್ಟವಾಗಿ ನಿಯಮದಲ್ಲಿ ಸೇರಿಸಲಾಗಿದೆ. ಚುನಾವಣಾಧಿಕಾರಿಗೆ, ನಿಯಮವನ್ನು ಹೊರತು ಪಡಿಸಿ ಯಾವುದೇ ಅಧಿಕಾರ ಇಲ್ಲ. ಚುನಾವಣಾಧಿಕಾರಿ ಸ್ವತಂತ್ರವಾಗಿ ಯಾವುದೇ ಅಧಿಕಾರವನ್ನು ಪಡೆಯಲು/ಹೊಂದಲು ಅವಕಾಶ ಇಲ್ಲ. ಅಂದರೆ ಚುನಾವಣೆಯನ್ನು ತಡೆ ಹಿಡಿಯುವುದು ಅಥವಾ ಮುಂದೂಡುವ ಅಧಿಕಾರ ಇಲ್ಲ. ಕಾನೂನು ಸುವ್ಯವಸ್ಥೆ ಕಾಪಾಡುವ ಆಧಾರದ ಮೇಲೆ ಮುಂದೂಡಲು ಬರುವುದಿಲ್ಲ. ಅಂತಹ ಸಂದರ್ಭ ಬಂದರೆ ಮೇಲಾಧಿಕಾರಿಗಳ ಮಾರ್ಗದರ್ಶನ ಪಡೆಯ ಬೇಕೇ ಹೊರತು ಸ್ವತಂತ್ರ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಚುನಾವಣಾಧಿಕಾರಿಗೆ ಇಲ್ಲ. ಚುನಾವಣಾಧಿಕಾರಿ, ಪೋಲೀಸ್ ಅಧಿಕಾರಿಯ ಮೌಖಿಕ ಸೂಚನೆಯಂತೆ ಚುನಾವಣೆ ಮುಂದೂಡಿರುವುದು ಕಾನೂನು ಬಾಹಿರ. ಚುನಾವಣೆ ಮುಂದೂಡಿದ ದಿನಾಂಕದಲ್ಲಿ ಇದ್ದ ಸ್ಥಿತಿಯಂದು, ಚುನಾವಣಾ ಪ್ರಕ್ರಿಯೆ ಮುಂದುವರಿಸತಕ್ಕದ್ದು. (2008 Indlaw Kar 137, 2009 (1) KLJ 121)

**ನೀತಿ : ಕಾನೂನಿನಲ್ಲಿ ಅವಕಾಶಗಳಲ್ಲಿ ರಾಜ್ಯ ಸರ್ಕಾರ ಚುನಾವಣೆಯನ್ನು ಮುಂದೂಡುವ ಅವಕಾಶ ಕಲ್ಪಿಸಿಲ್ಲ. ಅಂದರೆ ಚುನಾವಣಾ ವೇಳ ಪಟ್ಟಿ ಪ್ರಕಟವಾದ ನಂತರ ರಾಜ್ಯ ಸರ್ಕಾರ ಚುನಾವಣೆ ಮುಂದೂಡುವ ಅವಕಾಶ ಕಾಯಿದೆಯಲ್ಲಿ ಇಲ್ಲ. (2008 Indlaw Kar 137, 2009 (1) KLJ 121)**

33. ಆಡಳಿತ ಮಂಡಳಿಯನ್ನು ರದ್ದು ಪಡಿಸಿ ಆಡಳಿತಾಧಿಕಾರಿ ನೇಮಿಸಿದ ನಂತರ, ಹೊಸ ಮಂಡಳಿಗೆ ಚುನಾವಣೆ ನಡೆಸಲು ಚುನಾವಣಾಧಿಕಾರಿ ನೇಮಿಸಿ ಹಾಗೂ ಚುನಾವಣೆ ನಡೆಸದಿದ್ದಾಗ, ಅದು ಇಲಾಖೆಯ ಜವಾಬ್ದಾರಿಯಿಂದ ತಪ್ಪಿಸಿಕೊಂಡಂತೆ. ಸಹಕಾರ ಇಲಾಖೆ ಏಳು ವರ್ಷಗಳಿಂದ ಆಡಳಿತಾಧಿಕಾರಿ ಕಾರ್ಯ ನಿರ್ವಹಿಸುತ್ತಿದ್ದು, ಹೊಸ ಮಂಡಳಿ ರಚನೆ ಇಲಾಖೆಯ ಜವಾಬ್ದಾರಿ ಮತ್ತು ಮಂಡಳಿ ರಚಿಸಿ ಅಧಿಕಾರ ತುರ್ತಾಗಿ ವರ್ಗಾಹಿಸಬೇಕು. (2008 Indlaw Kar 410, 2009 (3) KLJ 380)

34. 2004 ILR (Kar) 2362 ರಲ್ಲಿ ನೀಡಿದ ತೀರ್ಪು, ಮಂಡಳಿ ಅವಧಿಯನ್ನು ನಿರ್ಧರಿಸುವಾಗ "ವರ್ಷ" ಎಂದು ನಮೂದಾಗಿದ್ದು, ಆ ವರ್ಷದ ಮಧ್ಯದಲ್ಲಿ ಚುನಾವಣೆ ನಡೆದಿದ್ದರೆ ಉಳಿದ ತಿಂಗಳುಗಳು ವರ್ಷ ಎಂಬ ಅರ್ಥಕ್ಕೆ ಸೇರುತ್ತದೆ. ಪದಾಧಿಕಾರಿಗಳ ಆಯ್ಕೆ 2 1/2 ವರ್ಷ ಎಂದಿದ್ದರೆ ಅದು ಸಹಕಾರಿ ವರ್ಷ – ಉಳಿದ ಅವಧಿ 12 ತಿಂಗಳಿಗಿಂತ ಕಡಿಮೆ ಇದ್ದರೂ ಅದು ಒಂದು ವರ್ಷವೆಂದು ಪರಿಗಣಿಸತಕ್ಕದ್ದು. 2 1/2 ವರ್ಷದ ಅವಧಿ 14.10.2004ಕ್ಕೆ ಮುಕ್ತಾಯವಾಗುತ್ತಿದೆ. ಅರ್ಜಿದಾರ ಆಂಗ್ಲಾ ಕ್ಯಾಲೆಂಡರ್ ವರ್ಷದಂತೆ ಈ ಅವಧಿ 13.4.2007ಕ್ಕೆ ಮುಕ್ತಾಯವಾಗುತ್ತಿದೆ. ಆದ್ದರಿಂದ ಪರಿಹಾರ ಬಯಸಿ ಈ ಅರ್ಜಿ, ಸಹಕಾರಿ ವರ್ಷ ಅಥವಾ ವರ್ಷ ಎಂಬುದಕ್ಕೆ ಕಲಂ.2(d-1) ರಲ್ಲಿ ಸೂಚಿಸಿದೆ. ಇದು ಸಂವಿಧಾನದ ಅನುಚ್ಛೇದ 14ಕ್ಕೆ ವಿರುದ್ಧ ಎಂದು ವಾಧಿಸಿಲ್ಲ ಮತ್ತು ಸಾಬೀತು ಪಡಿಸಿಲ್ಲ. ಮೈಸೂರು ಸಾಮಾನ್ಯ ನಿಯಮ ಕಾಯಿದೆ 1899ರ ಕಲಂ.3(43) ರಲ್ಲಿನ ಅರ್ಥ ವಿವರಣೆ ಪಡೆಯಲು ಪ್ರಯತ್ನಿಸಿದ್ದಾರೆ. ಆದರೆ ಸಹಕಾರ ಸಂಘಗಳ ಕಾಯಿದೆ ಒಂದು ವಿಶೇಷ ಕಾಯಿದೆ ಮತ್ತು ಮೈಸೂರು ಸಾಮಾನ್ಯ ಕಾಯಿದೆಗೆ ವಿರುದ್ಧ. ಆದರೆ ಆ ಕಾಯಿದೆಯಲ್ಲಿನ ಅವಕಾಶವನ್ನು ಸಹಕಾರ ವಿಷಯಕ್ಕೆ ಅನ್ವಯಿಸತಕ್ಕದ್ದಲ್ಲ. ಸಹಕಾರ ಕಾಯಿದೆಯಲ್ಲಿ 2 1/2 ವರ್ಷ ಎಂದರೆ ಉಳಿದ ಅವಧಿ 12 ತಿಂಗಳಿಗಿಂತ ಕಡಿಮೆ ಇದ್ದರೂ, ಅದು ಒಂದು ವರ್ಷವೆಂದು

ಅರ್ಥೈಸತಕ್ಕದ್ದು. (2006 Indlaw Kar 340, 2007 (1) KLJ 235)

35. ಚುನಾವಣೆ ತಕರಾರು ಅರ್ಜಿ ವಿಚಾರಣೆ ಮಾಡುವಾಗ ಮಧ್ಯಸ್ಥಿಗಾರರು ಚುನಾವಣೆ ಅಕ್ರಮವೆಂದು ತೀರ್ಮಾನಿಸಬಹುದು ಮತ್ತು ಆ ರೀತಿ ಮಾಡಿದಾಗ, ಅರ್ಜಿದಾರರನ್ನು ಚುನಾವಣೆಯಲ್ಲಿ ಗೆದ್ದಿದಾರೆಂದು ತೀರ್ಮಾನಿಸುವ ಅಧಿಕಾರವೂ ಇದೆ. ಇದಕ್ಕೆ ಪೂರಕವಾಗಿ ನ್ಯಾಯಾಲಯದ ತೀರ್ಮಾನಗಳು ಸಾಕಷ್ಟು ಲಾಭವಾಗಿದೆ. ಮಧ್ಯಸ್ಥಿಗಾರರು ಅರ್ಜಿದಾರರ ಅಥವಾ ಮತ್ತಿತರರನ್ನು ಆಯ್ಕೆಯಾಗಿದ್ದಾನೆಂದು ತೀರ್ಮಾನಿಸುವ ಅಧಿಕಾರ ಇದೆ.

ಮೇಲ್ಮನವಿ ಪ್ರಾಧಿಕಾರ ಮಧ್ಯಸ್ಥಿಗಾರರ ಆದೇಶವನ್ನು ಕಿತ್ತುಹಾಕಬಹುದು ಮತ್ತು ಅರ್ಜಿದಾರರನ್ನು ಚುನಾಯಿತರಾಗಿದ್ದಾರೆಂದು ತೀರ್ಮಾನಿಸಬಹುದು ಮತ್ತು ಮರು ಚುನಾವಣೆ ಮಾಡಲು ಆದೇಶಿಸಬಹುದು. (2006 Indlaw Kar 616, 2008 (1) KLJ 227)

36. ಮತ ಚಲಾವಣೆ ಅಕ್ರಮದಿಂದ ಗಳಿಸಲಾಗಿದೆ ಎಂದು ತೀರ್ಮಾನಕ್ಕೆ ಬಂದಾಗ, ಆ ಮತಗಳನ್ನು ತಿರಸ್ಕರಿಸಬಹುದು/ಲೆಕ್ಕಕ್ಕೆ ಪರಿಗಣಿಸತಕ್ಕದ್ದಲ್ಲ. (2006 Indlaw Kar 616, 2008 (1) KLJ 227)

37. ಒಂದು ಸ್ಥಾನಕ್ಕೆ ಇಬ್ಬರು ಅಭ್ಯರ್ಥಿಗಳು ಸ್ಪರ್ಧಿಸಿದ್ದು, ಆದರೂ ಒಬ್ಬರನ್ನು ಅನರ್ಹತೆಗೊಳಿಸಲಾಗಿದೆ ಎಂದು ಮತದಾರರಿಗೆ ತಿಳಿದಿಲ್ಲದಿದ್ದರೆ, ಅಂತಹ ಮತದಾರರು ಮತ್ತೊಬ್ಬ ಅಭ್ಯರ್ಥಿಗೆ ಮತ ಹಾಕುತ್ತಿದ್ದರು ಎಂಬುದನ್ನು ಆಧರಿಸಿ, ಆ ಅಭ್ಯರ್ಥಿ ಆಯ್ಕೆಯಾಗಿದ್ದಾನೆಂದು ತಿಳಿಯತಕ್ಕದ್ದು. ಒಬ್ಬ ಅಭ್ಯರ್ಥಿಯ ಆಯ್ಕೆಯನ್ನು ಅಸಿಂದು ಗೊಳಿಸಿದಾಗ, ಮತ್ತೊಬ್ಬ ಅರ್ಜಿದಾರರು ಆಯ್ಕೆಯಾಗಿದ್ದಾರೆಂದು ತಿಳಿಯತಕ್ಕದ್ದಲ್ಲ. ಆದ್ದರಿಂದ ಮೇಲ್ಮನವಿ ಪ್ರಾಧಿಕರಣ, ಮಧ್ಯಸ್ಥಿಗಾರರು, ಆಯ್ಕೆಯಾಗಿದ್ದಾನೆಂದು ತೀರ್ಪನ್ನು ಕಿತ್ತುಹಾಕಿ, ಮರು ಚುನಾವಣೆ ಮಾಡಲು ಆದೇಶಿಸಿರುವುದು ಸರಿ. (2006 Indlaw Kar 616, 2008 (1) KLJ 227)

38. ಕಲಂ.21(2)(a) ಅಡಿಯಲ್ಲಿ ಆಯ್ಕೆಯಾಗುವ ಪ್ರತಿನಿಧಿಗೆ ಸಂಬಂಧಪಟ್ಟಂತೆ, ಅದು ಆ ಸಂಘದ ಆಡಳಿತ ಮತ್ತು ವ್ಯವಹಾರಕ್ಕೆ ಸಂಬಂಧಪಟ್ಟಿದ್ದು. ಪ್ರತಿನಿಧಿಯನ್ನು ಆಯ್ಕೆಯಾಗುವುದು, ಆಯ್ಕೆ ಮಾಡುವ ಸಂಘದ ವ್ಯವಹಾರ. ಅದು ಆಯ್ಕೆ ಮಾಡಿ ಕಳುಹಿಸಿದ ಸಂಘದ ವ್ಯವಹಾರವಲ್ಲ. ಆಯ್ಕೆ ಮಾಡಿದ ಸಂಸ್ಥೆಯ ಆಡಳಿತಕ್ಕೆ ಸಂಬಂಧಪಟ್ಟಿದ್ದಲ್ಲ. ಅಂದರೆ ಆಯ್ಕೆಯಾಗಿ ಹೊಗುವ ಸಂಸ್ಥೆಯ ಆಡಳಿತ ಒಂದು ಪ್ರತ್ಯೇಕ ವ್ಯವಸ್ಥೆ. (2005 Indlaw Kar 166, 2006 (3) KLJ 410)

39. ಮೀಸಲಾತಿ ಕ್ಷೇತ್ರಕ್ಕೆ ಸ್ಪರ್ಧಿಸಿದ ವ್ಯಕ್ತಿಯನ್ನು – ಸಾಮಾನ್ಯ ಕ್ಷೇತ್ರದಿಂದ ಆಯ್ಕೆಯಾಗಿದ್ದಾನೆಂದು ತೀರ್ಮಾನಿಸತಕ್ಕದ್ದಲ್ಲ. ಈ ರೀತಿ ತೀರ್ಮಾನಿಸುವಾಗ ಮೀಸಲಾತಿ ವ್ಯಕ್ತಿಗೆ ಎರಡು ಕಡೆ ಅವಕಾಶ ಕಲ್ಪಿಸಿದಂತಾಗುತ್ತದೆ. ಬೇರೆ ಕಾಯಿದೆಯಲ್ಲಿನ ಅವಕಾಶಗಳನ್ನು ಈ ನೀತಿ ಅನ್ವಯಿಸಿ ಅನುಕೂಲ ಕಲ್ಪಿಸಲಾಗದು. ಆದ್ದರಿಂದ ಮೀಸಲಾತಿಗೆ ಸ್ಪರ್ಧಿಸಿದ ವ್ಯಕ್ತಿ ಅದೇ ಕ್ಷೇತ್ರದಿಂದ ಚುನಾಯಿತನಾಗಬೇಕು. (ತ್ರಿ ಸದಸ್ಯ ಪೀಠದ ಆದೇಶ) (2003 Indlaw Kar 120, AIR 2003 Kar 364, 2003 (6) KLJ 503)

40. ಪದಾಧಿಕಾರಿಗಳ ಆಯ್ಕೆಯಲ್ಲಿ ನಾಮ ನಿರ್ದೇಶಿತ ಮತ್ತು ಅಧಿಕಾರಿಗಳು (Ex-officer) ಮತದಾನದ ಹಕ್ಕೂ ಇರುವುದಿಲ್ಲ. ಅಂದರೆ ಸದಸ್ಯರಿಂದ ಆಯ್ಕೆಯಾದ ಸದಸ್ಯರು ಮಾತ್ರ ಪದಾಧಿಕಾರಿಗಳ ಆಯ್ಕೆಯಲ್ಲಿ ಭಾಗವಹಿಸಬಹುದು. (ಕಲಂ.29ಎಫ್(4)(8))

**ಸೂಚನೆ : ಈ ಅವಕಾಶಕ್ಕೆ ತಿದ್ದುಪಡಿ ಮಾಡಲಾಗಿದ್ದು ಆಡಳಿತ ಮಂಡಳಿಯ ಸದಸ್ಯರೆಲ್ಲರೂ ಮತ ಹಾಕುವ ಅಧಿಕಾರ ಹೊಂದಿದ್ದಾರೆ. (ಮುಖ್ಯ ಕಾರ್ಯನಿರ್ವಾಹಕನ ಹೊರತು ಪಡಿಸಿ)**

(2000 Indlaw Kar 344, AIR 2000 Kar 330, 2005 (5) KLJ 271)

41. ಕಾಯಿದೆ ಕಲಂ.21(2)() ಅನ್ವಯ ಸದಸ್ಯ ಎಂದು ಅರ್ಥೈಸುವಾಗ ಕಲಂ.2(ಎಫ್)

ಅನ್ವಯಿಸಬೇಕು. ಅಂದರೆ ಪ್ರತಿನಿಧಿಯನ್ನು ಆಯ್ಕೆ ಮಾಡುವಾಗ ಅದನು ಆ ಸಂಘದ ಸಾಮಾನ್ಯ ಸದಸ್ಯನಾಗಿರಬಹುದು.

**ಸೂಚನೆ : ಈ ಅವಕಾಶಕ್ಕೆ ಈಗ ತಿದ್ದುಪಡಿ ತಂದು ಆಡಳಿತ ಮಂಡಳಿಯ ಸದಸ್ಯನಾಗಿದ್ದರೆ ಮಾತ್ರ ಪ್ರತಿನಿಧಿಯಾಗಿ ಆಯ್ಕೆಯಾಗತಕ್ಕದ್ದು.**

(1999 Indlaw Kar 355, AIR 2000 Kar 190, 2000 (3) KLJ 259)

42. ಸರ್ಕಾರದಿಂದ ನಾಮ ನಿರ್ದೇಶನ ಮಾಡಿದ ವ್ಯಾಪ್ತಿಗಳು ಮತದಾನ ಮಾಡಬಹುದು ಅಂದರೆ ಕಲಂ.28ಎ(6), 29ಎಫ್(4)(b) ತಿದ್ದುಪಡಿ ಮಾಡಲಾಯಿತು. ಆದರೆ ಕಲಂ.29ಎ ತಿದ್ದುಪಡಿ ಮಾಡಿಲ್ಲ.

**ಸೂಚನೆ : ಈಗ ತಿದ್ದುಪಡಿಯಾಗಿದೆ ನಾಮನಿರ್ದೇಶನವನ್ನು ಒಬ್ಬ ವ್ಯಕ್ತಿಗೆ ಸೀಮಿತಗೊಳಿಸಿ ಸ್ಪರ್ಧಿಸುವ, ಮತದಾನ ಮಾಡುವ ಅಧಿಕಾರ ನೀಡಲಾಗಿದೆ.**

(1999 Indlaw Kar 357, AIR 2000 Kar 224, 2000 (1) KLJ 499, 2001 (2) KLJ 527)

43. ಜಿಲ್ಲೆಯನ್ನು ಪುನರ್ ವಿಂಗಡನೆ ಮಾಡಿದಾಗ ಸಂಘದ ಹಾಲಿ ಉಪನಿಯಮದಂತೆ ಚುನಾವಣೆ ನಡೆಸಬೇಕು. ಸಂಘದ ಉಪನಿಯುಮ ತಿದ್ದುಪಡಿ ಮಾಡಿಕೊಂಡಿದ್ದರೂ ಅದಕ್ಕೆ ಉಚ್ಚನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ, ತಿದ್ದುಪಡಿಯಾದ ಉಪನಿಯಮದಂತೆ ಚುನಾವಣೆ ನಡೆಸತಕ್ಕದ್ದಲ್ಲ. (1999 Indlaw Kar 352, AIR 2000 Kar 113, 2000 (4) KLJ 14)

44. ಚುನಾವಣೆಗೆ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದಾಗ ಒಪ್ಪಂದದಲ್ಲಿ ಭಾಗಿಯಾಗಿದ್ದಾರೆಂದು ಮತ್ತು ಆ ಸಂಸ್ಥೆಗೆ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆಂದು – ನಾಮ ಪತ್ರ ತಿರಸ್ಕೃತಗೊಂಡಿತು. ಈ ತಿರಸ್ಕರಣೆ ಪ್ರಶ್ನಿಸಿ ಏಕ ಸದಸ್ಯ ಪೀಠಕ್ಕೆ ಅರ್ಜಿ ಸಲ್ಲಿಸಿದಾಗ, ಆ ಅರ್ಜಿಯನ್ನು ಪುರಸ್ಕರಿಸಿದ್ದು ಅದನ್ನು ಪ್ರಶ್ನಿಸಿ ಈ ಮೇಲ್ಮನವಿ ಸಲ್ಲಿಕೆಯಾಗದೆ ಹಿತಾಸಕ್ತಿಯನ್ನು ಪ್ರಶ್ನಿಸುವಾಗ, ಕಲಂ.70ರ ದಾವಾ ಪ್ರಕರಣ ದಾಖಲಿಸಿ, ದಾಖಲೆ, ಸಾಕ್ಷಿಗಳನ್ನು ಪರಿಗಣಿಸಿ, ಮೌಖಿಕ ಮತ್ತು ಲಿಖಿತ ಹೇಳಿಕೆ ಪರಿಶೀಲಿಸಿ ತೀರ್ಮಾನಕ್ಕೆ ಬರಬೇಕಾಗುತ್ತದೆ. ಇದಕ್ಕಾಗಿ ಸಂವಿಧಾನದ ಅನುಚ್ಛೇದ 226ನ್ನು ಬಳಸಲಾಗದು. (1975 Indlaw Kar 72, AIR 1976 Kar 1, 1975 (2) KLJ 312)

45. ಅರ್ಜಿದಾರನ ನಾಮ ಪತ್ರವನ್ನು ಸುಸ್ತಿದಾರನೆಂಬ ಕಾರಣದಿಂದ ತಿರಸ್ಕರಿಸಿದಾಗ, ಅಂದರೆ ರೂ.35,000/– ಬಾಕಿ ಇದೆ ಎಂದು (05.08.1973 ರಂತೆ). ನಾಮಪತ್ರ ಸಲ್ಲಿಸಿದ ದಿನಾಂಕ 14.09.1973 ನಾಮ ಪತ್ರಗಳ ಪರಿಶೀಲನೆ. ದಿನಾಂಕ 17.09.1973 ರಂದು ನಡೆಯಿತು. ಅದೇ ದಿನ, ಅಂದರೆ 17.09.1973 ರಂದು, ಒಪ್ಪಿ ಪೂರ್ಣ ಹಣ ಪಾವತಿ ಮಾಡಿದರು. ಈ ಮಧ್ಯ ಅರ್ಜಿದಾರರನ್ನು ಸುಸ್ತಿ ದಾರರೆಂದು ನಾಮ ಫಲಕದಲ್ಲಿ ಪ್ರಕಟಿಸಲಾಗಿತ್ತು. ಏಕೆಂದರೆ ದಿನಾಂಕ 05.08.1973 ರಂದು ಪಾವತಿ ಮಾಡಿಲ್ಲವೆಂದು ಕಲಂ.16(1)(a) ಅನ್ವಯ ಅರ್ಜಿದಾರ ಸುಸ್ತಿದಾರನಾಗಿರುವುದಿಲ್ಲ. ಅಂದರೆ 17.09.1973 ರಂದು ನಾಮ ಪತ್ರ ತಿರಸ್ಕರಿಸಲು ಬರುತ್ತಿರಲಿಲ್ಲ. ಆದ್ದರಿಂದ ಅರ್ಜಿದಾರನ ನಾಮ ಪತ್ರ ಅಂಗೀಕರಿಸಿ, ಚುನಾವಣೆ ನಡೆಸಬೇಕು. (1974 Indlaw Kar 108, AIR 1975 Kar 30, 1974 (1) KLJ 436)

46. ಸಂಘದ ಚುನಾವಣೆ ನಡೆಸದೇ ಇದ್ದಾಗ ಸಲ್ಲಿಸಿದ ರಿಟ್ ಅರ್ಜಿಯನ್ನು, ಸಂಘವು ನಿಯಮ 13ಡಿ(5) ರನ್ವಯ ಪಟ್ಟಿಯನ್ನು ಜಿಲ್ಲಾ ಚುನಾವಣಾಧಿಕಾರಿಗೆ 15.06.2015 ರೊಳಗೆ ಸಲ್ಲಿಸಬೇಕೆಂದು, ಚುನಾವಣಾ ಪ್ರಾಧಿಕಾರ ದಿನಾಂಕ 24.08.2015 ರೊಳಗೆ ಚುನಾವಣೆ ನಡೆಸಲು ಮತ್ತು ಪಟ್ಟಿಯನ್ನು ಆಡಳಿತಾಧಿಕಾರಿ 15.06.2015 ರೊಳಗೆ ಸಲ್ಲಿಸಿದ್ದರ ಆಧಾರದಲ್ಲಿ ಚುನಾವಣೆ ನಡೆಸಲು ನಿರ್ದೇಶನ ನೀಡಲಾಯಿತು. (2015 Indlaw Kar 1271)

## ಚುನಾವಣೆಗೆ ಸಂಬಂಧಪಟ್ಟ ತೀರ್ಪುಗಳು

1. ಮಹಾರಷ್ಟ್ರ ಸಹಕಾರ ಸಂಘಗಳ ಕಾಯಿದೆಯಡಿ ಚುನಾವಣೆಯಲ್ಲಿ ಆದ ಅಕ್ರಮಗಳ ಆಧಾರದ ಮೇಲೆ, ಅಂದರೆ ಮತದಾನ ಮಾಡಲು ಕೊಲ್ಲಾಪುರ ಮುನಿಸಿಪಲ್ ಟ್ರಾನ್ಸ್‌ಪೋರ್ಟ್ ನಿಂದ ವಾಹನ ಪಡೆದು, ಬಂದು ಹೋಲಗುವ ವ್ಯವಸ್ಥೆ ಮಾಡಿರುವುದು ಚುನಾವಣಾ ಅಕ್ರಮವೆಂದು ಪ್ರಶ್ನಿಸಿತು. ಆಯುಕ್ತರು ಪ್ರಕರಣದ ವಿಚಾರಣೆ ನಡೆಸುವಾಗ ಅರ್ಜಿದಾರರು ದಾಖಲೆ ಮತ್ತು ಸಾಕ್ಷಿಗಳನ್ನು ಪರಿಶೀಲಿಸುವಾಗ ಅವುಗಳ ನಂಬುವಂತಹವೇ ಎಂಬುದರ ಜೊತೆಗೆ, ಸಮರ್ಥ ದಾಖಲೆ/ಸಾಕ್ಷಿಗಳನ್ನು ನೀಡಿ, ಆರೋಪ ಸಮರ್ಥಿಸಬೇಕು. ವಾಹನ ಪಡೆದ ವ್ಯಕ್ತಿ/ಏಜೆಂಟ್ ಬಗ್ಗೆ ದಾಖಲೆ ಸಮರ್ಥವಾಗಿರಬೇಕು ಮತ್ತು ನಂಬುವಂತಾಗಿರಬೇಕು, ಅಂದರೆ ಅವು ಪ್ರಶ್ನಾತೀತವಾಗಿರಬೇಕು. ಆಯುಕ್ತರ ಈ ವಿಷಯದಲ್ಲಿ ಎಡವಿದ್ದು, ಅರ್ಜಿಯನ್ನು ಪುರಸ್ಕರಿಸಲು ಸಾಕಷ್ಟು ನಂಬಲರ್ಹ ದಾಖಲೆ/ಸಾಕ್ಷಿಗಳು ಇಲ್ಲದೇ ಇದ್ದರೂ ಪುರಸ್ಕರಿಸಿರುವುದು ತಪ್ಪು. ಇದಕ್ಕೆ ಪೂರಕವಾಗಿ (1) 1974 Indlaw SC 372 (2) (1976) 3 SCC 646 (3) 1976 Indlaw SC 123 (4) 1976 Indlaw SC 441 (5) (1977) 2 SCC 23 (6) 1976 Indlaw SC 142 ಆಧರಿಸಿ ಅರ್ಜಿಯಲ್ಲಿ ಕೇಳಿದ ಪರಿಹಾರ ನೀಡಿತು ಮತ್ತು ಆಯುಕ್ತರ ಆದೇಶ ಕಿತ್ತು ಹಾಕಿತು. (1978 Indlaw SC 333, (1978) 1 SCC 504, AIR 1978 SC 351)

2. ನಿಬಂಧಕರು, ಚುನಾವಣಾ ನಿಯಮಗಳನ್ನು ವಿಮರ್ಶಿಸಿ ಅಭಿಪ್ರಾಯ ವ್ಯಕ್ತ ಪಡಿಸುವ ಅಧಿಕಾರ ಇಲ್ಲ. ಸದಸ್ಯರ ಮತದಾನದ ಹಕ್ಕು, ಒಂದಕ್ಕಿಂತ ಹೆಚ್ಚು ಮತ ಚಲಾವಣೆ ಬಗ್ಗೆ ಮಾರ್ಗದರ್ಶನ ಅಭಿಪ್ರಾಯ ವ್ಯಕ್ತ ಪಡಿಸತಕ್ಕದ್ದಲ್ಲ, ಅಂದರೆ ಒಬ್ಬ ಸದಸ್ಯನಿಗೆ ಅವನು ಎಷ್ಟು ಷೇರುಗಳನ್ನು ಹೊಂದಿದ್ದರೂ ಒಂದು ಮತಕ್ಕಿಂತ ಹೆಚ್ಚು ಮತ ಚಲಾಯಿಸತಕ್ಕದ್ದಲ್ಲ. ಹೆಚ್ಚು ಮತ ಕ್ಷೇತ್ರಗಳಿದ್ದಲ್ಲಿ, ಪ್ರತಿ ಮತ ಕ್ಷೇತ್ರದಿಂದ ಒಂದು ಮತ ಚಲಾಯಿಸುವ ಅಧಿಕಾರ ಇಲ್ಲ. ಆ ರೀತಿ ಅಭಿಪ್ರಾಯ ವ್ಯಕ್ತ ಪಡಿಸಿದರೆ ನಿಬಂಧಕರು ಕಲಂ 20 ಮತ್ತು ನಿಯಮ 409 ರ ವಿರುದ್ಧವಾಗುತ್ತದೆ. ಈ ಸಂಬಂಧ ನಿಯಮ 105 ರಲ್ಲಿ ಪ್ರತಿಯೊಬ್ಬ ಸದಸ್ಯ ಪ್ರತಿಯೊಬ್ಬ ಆಡಳಿತ ಮಂಡಳಿ ಸದಸ್ಯನಿಗೆ ಮತ ಚಲಾಯಿಸುವುದು ಎಂಬುದು ನಡವಳಿಕೆಗಳನ್ನು ತೀರ್ಮಾನಿಸುವಾಗ ಅನುಸರಿಸುವ ನೀತಿ (ಠರಾವು ಮಾಡುವಾಗ) ಈ ನಿಯಮ ಆಡಳಿತ ಮಂಡಳಿಗೆ ಆಯ್ಕೆ ಮಾಡುವಾಗ ಸದಸ್ಯರು ಚಲಾಯಿಸುವ ಮತಕ್ಕಲ್ಲ. ನಿಬಂಧಕರು ನಿಯಮ 409ರ ಬಗ್ಗೆ ಸುತ್ತೋಲೆ ಮುಖಾಂತರ ವಿಷಾಧೀಕರಣ ನೀಡುವ ಅಧಿಕಾರ ಇಲ್ಲ ಮತ್ತು ಚುನಾವಣೆಗೆ ಸಂಬಂಧಪಟ್ಟ ವಿಷಯದಲ್ಲಿ ನಿಬಂಧಕರಿಗೆ ಯಾವುದೇ ಅಧಿಕಾರ ಇಲ್ಲ. ಈ ಪ್ರಕರಣ ಉತ್ತರ ಪ್ರದೇಶ ಸಹಕಾರ ಕಾಯಿದೆಯಲ್ಲಿ ದಾಖಲಾಗಿತ್ತು. (1972 Indlaw SC 90, (1972) 1 SCC 719, AIR 1972 SC 758)

3. ಒಂದು ಸಹಕಾರ ಬ್ಯಾಂಕ್‌ನ ಚುನಾವಣೆ ನಡೆಸುವಾಗ ಗುಜರಾತ್ ಕಾಯಿದೆಯಲ್ಲಿ, ಕ್ಷೇತ್ರಗಳ ವಿಂಗಡಣೆ ಮಾಡುವ ಅಧಿಕಾರವನ್ನು ಕಾಯಿದೆಯಲ್ಲಿ ಜಿಲ್ಲಾ ಕಲೆಕ್ಟರ್‌ಗೆ ನೀಡಲಾಗಿದೆ. ಅದು ಬೈಲಾ ಪ್ರಕಾರ ಇಲ್ಲವೆಂದು ಬ್ಯಾಂಕ್ ಅರ್ಜಿ ದಾಖಲಿಸಿದಾಗ, ಬೈಲಾ ಅವಕಾಶಗಳು, ನಿಯಮದ ಪ್ರಕಾರ ಇರಬೇಕು, ಇಲ್ಲದಿದ್ದರೆ ನಿಯಮ ಮತ್ತು ಕಾಯಿದೆಯಲ್ಲಿರುವ ಅವಕಾಶಗಳು ಜಾರಿಯಾಗುತ್ತವೆ. ಉಪನಿಯಮಗಳ ಕಾಯಿದೆ ಮತ್ತು ನಿಯಮಗಳ ಕೆಳಸ್ಥರದ ಅವಕಾಶ ಮತ್ತು ಉಪನಿಯಮ, ಸಹಕಾರ ನಿಯಮಗಳಿಗಿಂತ ಹೆಚ್ಚು ಎಂದು ತಿಳಿಯತಕ್ಕದ್ದಲ್ಲ.

   **ನೀತಿ : ಉಪನಿಯಮಗಳ ಗುಜರಾತ್ ನಿಯಮಗಳ ಕೆಳಸ್ಥರದ ಅವಕಾಶಗಳು. ಅದನ್ನು ಉಪನಿಯಮಗಳಿಗಿಂತ ಶ್ರೇಷ್ಠ ಎಂದು ತಿಳಿಯತಕ್ಕದ್ದಲ್ಲ. ಕಾನೂನು ಮತ್ತು ನಿಯಮಗಳಲ್ಲಿ ಅಧಿಕಾರವನ್ನು ನೀಡಿದಾಗ, ಆ ಅಧಿಕಾರ ಬ್ಯಾಂಕಿನ ಉಪನಿಯಮಗಳಲ್ಲಿನ ಅಧಿಕಾರವಲ್ಲ.**

**ಅದನ್ನು ಕಾಯಿದೆಯಲ್ಲಿ ಕೊಡ ಮಾಡಿದ ಅಧಿಕಾರ, ಅದು ಉಪನಿಯಮಗಳಿಗಂತೆ ಶ್ರೇಷ್ಠ.**

(2014 Indlaw SC 790, AIR 2015 SC 489)

4. ಅರ್ಜಿದಾರರು, ಸಕ್ಕರೆ ಆಯುಕ್ತರ ಮುಂದೆ ಅರ್ಜಿ ಸಲ್ಲಿಸಿ, ಚುನಾವಣೆಗೆ ತಯಾರಿಸಿದ ಪಟ್ಟಿಯಲ್ಲಿ ಅರ್ಹ ಸದಸ್ಯರ ಪಟ್ಟಿ ಪರಿಶೀಲಿಸುವಂತೆ ಮನವಿ ಸಲ್ಲಿಸಿದರು. ಆಯುಕ್ತರು ಯಾವುದೇ ಕ್ರಮ ಜರುಗಿಸಲಿಲ್ಲ. ಉಚ್ಚನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದಾಗ, ವಿಚಾರಣೆ ಮಾಡಿ ವರದಿ ಸಲ್ಲಿಸಲು ಆದೇಶಿಸಿತು. ಅದರಂತೆ ಸಂಯುಕ್ತ ನಿಬಂಧಕರು 6617 ಅನರ್ಹ ಸದಸ್ಯರಿದ್ದಾರೆಂದು ವರದಿ ಸಲ್ಲಿಸಿದರು ಮತ್ತು ಅವರನ್ನು ಅನರ್ಹಗೊಳಿಸಿದರೂ. ಇದನ್ನು ಪ್ರಶ್ನಿಸಿ, ಸಹಕಾರ ಸಚಿವರು, ತನ್ನ ಹಿತಾಸಕ್ತಿ ಇದೆ ಎಂದು, ಇಲಾಖಾ ಕಾರ್ಯದರ್ಶಿಗೆ ವರ್ಗಾಯಿಸಿದರು. ಇದನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಸಹಕಾರ ಸಚಿವರು ಆದೇಶ ನೀಡದಿದ್ದುದು ಅಥವಾ ಕಾರ್ಯದರ್ಶಿಗೆ ವರ್ಗಾಹಿಸಿದ್ದು ತಪ್ಪು. ಈ ಬಗ್ಗೆ ಮುಖ್ಯ ಮಂತ್ರಿಗಳ ತಾವೇ ವಿಚಾರಿಸಬಹುದು ಅಥವಾ ಮತ್ತೊಬ್ಬ ಮಂತ್ರಿಗೆ ಕಳುಹಿಸಬೇಕಾಗಿತ್ತು ಎಂಬ ತೀರ್ಮಾನವನ್ನು ಶ್ರೇಷ್ಠ ನ್ಯಾಯಾಲಯ ದೃಡೀಕರಿಸಿ, ಮುಖ್ಯ ಮಂತ್ರಿಗಳು ಸಮಯದ ಅಭಾವದಿಂದ ಪ್ರಕರಣ ತೀರ್ಮಾನಿಸಲಾಗದಿದ್ದರೆ ಮತ್ತೊಬ್ಬ ಮಂತ್ರಿಗೆ ವರ್ಗಾಯಿಸಬಹುದು ಎಂದು ಮೇಲ್ಮನವಿಯನ್ನು ತಿರಸ್ಕರಿಸಿತು. (2012 Indlaw SC 101, (2012) 4 SCC 781, AIR 2012 SC 1714)

5. ಮಹಾರಾಷ್ಟ್ರ ಸಹಕಾರ ಕಾಯಿದೆಯಡಿ ಕಲಂ 157 ರನ್ವಯ ವ್ಯವಹಾರ ಸಮರ್ಪಕವಾಗಿಲ್ಲವೆಂದು ಮೊದಲ ಆಡಳಿತ ಮಂಡಳಿಯನ್ನು ಮೂರು ವರ್ಷದ ಅವಧಿಗೆ ನಾಮ ನಿರ್ದೇಶನ ಮಾಡಿತು. (1994) ಆ ಅವಧಿಯನ್ನು ಮುಂದುವರಿಸಿತು (2002 ರವರೆವಿಗೆ) ಆ ನಂತರ ವ್ಯವಹಾರ ವೃದ್ಧಿಸಿಲ್ಲವೆಂದು ಆಡಳಿತಾಧಿಕಾರಿಯಾಗಿ ಸಹಾಯಕ ನಿಬಂಧಕರು ನೇಮಿಸಿದರು. ಅಂದರೆ, 1994 ರಿಂದ ಚುನಾವಣೆಯನ್ನು ನಡೆಸಲಿಲ್ಲ. ಆ ನಂತರ ಜವಳಿ ನಿರ್ದೇಶಕರು ಆಡಳಿತಾಧಿಕಾರಿಗಳ ಒಂದು ಮಂಡಳಿ ರಚಿಸಿತು. (19.06.2009 ರವರೆಗೆ). ಇದನ್ನು ಪ್ರಶ್ನಿಸಿದಾಗ ಕಾಯಿದೆ ಕಲಂ 157 ರಲ್ಲಿ ಆಡಳಿತಾಧಿಕಾರಿ ನೇಮಿಸಿದಾಗ ಕಾರಣ ಕೇಳುವ ನೋಟೀಸ್ ನೀಡಿಲ್ಲ ಮತ್ತು ಇದು ಸಂವಿಧಾನದ 162ನೇ ಅನುಚ್ಛೇದಕ್ಕೆ ವಿರುದ್ದ. ಸರ್ಕಾರ ನೋಟೀಸ್ ಕೊಟ್ಟ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ. ಯಾವುದೇ ಸಹಕಾರ ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸುವುದು ಕರ್ತವ್ಯ. ಆಡಳಿತಾಧಿಕಾರಿಯನ್ನು ನೇಮಿಸುವಾಗಲೂ ಕಾಯಿದೆಯಲ್ಲಿನ ಅವಧಿಗೆ ಮೀರತಕ್ಕದ್ದಲ್ಲ. ಆದ್ದರಿಂದ ಉಚ್ಚನ್ಯಾಯಾಲಯ ನೀಡಿದ ಆದೇಶ ಸರಿಯಿದೆ ಎಂದು ಸರ್ಕಾರದ ಆದೇಶಗಳನ್ನು ಕಿತ್ತು ಹಾಕಿತು. (2009 Indlaw SC 768)

## ಚುನಾವಣೆಗೆ ಸಂಬಂಧಪಟ್ಟ ತೀರ್ಪುಗಳು

1. ಮಹಾರಾಷ್ಟ್ರ ಸಹಕಾರ ಕಾಯಿದೆಯಲ್ಲಿ ಮಂಡಳಿ ಚುನಾವಣೆಗೆ ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸದಿದ್ದರೆ, ಅಂತಹ ಸದಸ್ಯರಿಗೆ ಮತದಾನದ ಹಕ್ಕು ನೀಡುವ ಬಗ್ಗೆ ವಿಚಾರಣೆ ಸಂಬಂಧ ಜಿಲ್ಲಾಧಿಕಾರಿಗಳು ಮತದಾನದ ಹಕ್ಕಿಲ್ಲವೆಂದು ತೀರ್ಮಾನಿಸಿದನ್ನು ಪ್ರಶ್ನಿಸಿ ರಿಟ್ ದಾಖಲಿಸಿದಾಗ, ಕಲಂ 27(3) ರನ್ವಯ ಮತದಾನದ ಹಕ್ಕು ಇಲ್ಲವೆಂದು ತೀರ್ಮಾನದ ಮೇಲೆ, ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ 1971ರ ನಿಯಮ 4 ರನ್ವಯ ಒಬ್ಬ ಸದಸ್ಯ ಪಾಲು ಬಂಡವಾಳ ನೀಡಿ, ಎರಡು ವರ್ಷಗಳು ಪೂರೈಸಿದ್ದರೆ ಮತದಾನದ ಹಕ್ಕು ಪ್ರಾಪ್ತವಾಗುತ್ತದೆ. ಅದರಂತೆ ಈ ಪ್ರಕರಣದಲ್ಲಿ ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸದಿದ್ದರೂ, ಈ ಮೇಲ್ಕಂಡ ಶರತ್ತು ಪೂರೈಸಿದ್ದರೆ, ಅವರ ಹೆಸರು ಮತದಾರರ ಪಟ್ಟಿಯಲ್ಲಿ ಇರಬೇಕು ಮತ್ತು ಅವರು ಮತದಾನ

ಮಾಡಲು ಹಕ್ಕುಳ್ಳವರಾಗಿರುತ್ತಾರೆ ಎಂದು ತೀರ್ಪಿತ್ತಿತು. (2006 Indlaw SC 1400, (2006) 5 SCC 250, AIR 2007 SC 347)

2. ಬಹುರಾಜ್ಯ ಕಾಯಿದೆಯಡಿ ಕಲಂ 84 ರನ್ವಯ ದಾವಾ ಪ್ರಕರಣ, ಚುನಾವಣಾ ಪ್ರಕರಣಗಳೂ ಸೇರಿ/ ದಾಖಲಿಸಿಕೊಳ್ಳಲು ಅಧಿಕಾರ ವಿದ್ದು, ಒಂದು ಸಹಕಾರ ಚುನಾವಣಾ ಪ್ರಕ್ರಿಯೆ ಪ್ರಾರಂಭಿಸಿದಾಗ, ಅರ್ಜಿದಾರರು ವಿವಿಧ ಪ್ರಾಧಿಕಾರಿಗಳಿಗೆ, (ಸಹಕಾರ ಸಚಿವರೂ ಸೇರಿ) ಸುಸ್ತಿದಾರರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಲು ಮನವಿ ಸಲ್ಲಿಸಿದರೂ ಕ್ರಮಕೈಗೊಳ್ಳಲೇ ಇಲ್ಲ. ಸುಸ್ತಿದಾರರನ್ನು ಆಯ್ಕೆಯಾಗಿದ್ದಾರೆಂದು ಪ್ರಕಟಿಸಿದ ನಂತರ ದಾವಾ ದಾಖಲಿಸಲಾಗಿದೆ. ಇದರಲ್ಲಿ ಒಬ್ಬ ಪ್ರತಿನಿಧಿ, ಒಂದು ಕ್ಷೇತ್ರದಲ್ಲಿ ಮಾತ್ರ ಮತ ಚಲಾಯಿಸಲು ಅಧಿಕಾರ ಇದ್ದರೂ, ಐದು ಕ್ಷೇತ್ರಗಳ ಅಭ್ಯರ್ಥಿಗೆ ಮತ ಚಲಾಯಿಸಲಾಗಿದೆ ಎಂದು ಪ್ರಶ್ನಿಸಲಾಯಿತು. ಉಚ್ಚನ್ಯಾಯಾಲಯ ಸಹಕಾರ ಸಚಿವರಿಗೆ, ವಿಚಾರಣೆ ನಡೆಸಿ ತೀರ್ಮಾನಿಸಲು ನಿರ್ದೇಶಿಸಿತು ಮತ್ತು ಅದಕ್ಕೆ ಕಾಯಿದೆಯಲ್ಲಿ ನಿಬಂಧಕರಿಗೆ ಈ ಅಧಿಕಾರ ಇದೆ, ಈ ಪ್ರಕರಣವನ್ನು ಮಧ್ಯಸ್ತಿಗಾರರಿಂದ ತೀರ್ಮಾನಿಸಲು ಸೂಚಿಸಿದರು. ಇದನ್ನು ಪ್ರಶ್ನಿಸಿ, ಉಚ್ಚನ್ಯಾಯಾಲಯದ ವಿಭಾಗೀಯ ಪೀಠಕ್ಕೆ ಅರ್ಜಿ ಸಲ್ಲಿಸಿದಾಗ, ನಿಬಂಧಕರಿಗೆ ಕಳುಹಿಸಲು ತನ್ನದೇನು ತಕರಾರು ಇಲ್ಲವೆಂದು ಮನವಿ ಮಾಡಿದಾಗ, ಅವನ ವಕೀಲರು, ಈ ಪ್ರಕರಣ ದಾಖಲಿಸಲು ವಿಳಂಬವಾಗಿದೆ ಎಂಬ ಅಂಶವನ್ನು ನಿಬಂಧಕರ ಮುಂದೆ ಪ್ರಸ್ತಾಪಿಸಲು ಸೂಚಿಸಿತು. ವಿಚಾರಣ ಸಂದರ್ಭದಲ್ಲಿ ವಿಳಂಬ ವಿನಾಯ್ತಿ ಬಗ್ಗೆ ಕಲಂ.75(3) ರಲ್ಲಿ ನಿಬಂಧಕರಿಗೆ ಅಧಿಕಾರ ಇದ್ದು. ಅರ್ಜಿದಾರರು ವಿಳಂಬ ವಿನಾಯ್ತಿ ಅರ್ಜಿ ಸಲ್ಲಿಸದೇ ಇದ್ದರೂ ನಿಬಂಧಕರಿಗೆ ವಿನಾಯ್ತಿ ನೀಡುವ ಅಧಿಕಾರ ಇರುವುದನ್ನು ಪರಿಗಣಿಸಿತು ಮತ್ತು ಈ ಬಗ್ಗೆ ನಿಬಂಧಕರು ಅಧಿಕಾರ ಚಲಾಯಿಸುವಾಗ, ನ್ಯಾಯ ನೀತಿ ನಿಯಮಗಳನ್ನು ಪಾಲಿಸದೇ ಇದ್ದಾಗ ಮಾತ್ರ, ನ್ಯಾಯಾಲಯ ಮಧ್ಯಪ್ರವೇಶ ಮಾಡಬಹುದು. ಈ ಪ್ರಕರಣದಲ್ಲಿ ಅಂತಹ ನ್ಯೂನತೆ ಕಂಡು ಬರದೇ ಇದ್ದುದನ್ನು ಪರಿಗಣಿಸಿ, ಉಚ್ಚನ್ಯಾಯಾಲಯದ ವಿಭಾಗೀಯ ಪೀಠದ ಆದೇಶವನ್ನು ಕಿತ್ತು ಹಾಕಿ – ದಾವಾ ಪ್ರಕರಣವನ್ನು ಅರ್ಹತೆ ಆಧಾರದ ಮೇಲೆ ಪರಿಶೀಲಿಸಲು ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. (2004 Indlaw SC 858, (2004) 8 SCC 312)

3. ದಿಲ್ಲಿ ಸಹಕಾರ ಸಂಘಗಳ ಕಾಯಿದೆಯಲ್ಲಿ ನೊಂದಾವಣೆಯಾದ ಒಂದು ಗೃಹ ನಿರ್ಮಾಣ ಸಹಕಾರ ಸಂಘ ಮೂವರು ಸದಸ್ಯರಿಗೆ ಸುಸ್ತಿದಾರರೆಂದು ನೋಟೀಸ್ ನೀಡಿದಾಗ, ಅದಕ್ಕೆ ಪರಿಹಾರವಾಗಿ ಅವರು ನಿಬಂಧಕರ ಮುಂದೆ ದಾವಾ ದಾಖಲಿಸಿದ್ದು ಅದರಲ್ಲಿ ಅವರು ಪರಿಹಾರ ಪಡೆಯಬೇಕು. ರಿಟ್ ಅರ್ಜಿ ಮುಖಾಂತರ ಪರಿಹಾರ ನೀಡಲಾಗದು. ಇದನ್ನು ಉಚ್ಚನ್ಯಾಯಾಲಯ ಪರಿಗಣಿಸಿ ಆದೇಶಿಸಬೇಕು ಎಂದು ಶ್ರೇಷ್ಠ ನ್ಯಾಯಾಲಯ ಆದೇಶಿಸಿತು. (2004 Indlaw SC 272, (2004) 5 SCC 795, AIR 2004 SC 2521)

4. ಮಹಾರಾಷ್ಟ್ರ ಸಹಕಾರ ಕಾಯಿದೆಯಡಿ ಒಂದು ಸಂಯುಕ್ತ ಸಹಕಾರ ಸಂಘದ ಚುನಾವಣೆ ನಡೆಸಲು ಜಿಲ್ಲಾಧಿಕಾರಿ ಕರಡು ಮತದಾರರ ಪಟ್ಟಿ ತಯಾರಿಸಿ, ತಕರಾರು ಸಲ್ಲಿಸಲು ಅವಕಾಶ ನೀಡಿದ್ದರು. ಅಂತಿಮ ಪಟ್ಟಿ ತಯಾರಿಸುವ ಮೊದಲು ರಾಜ್ಯ ಸರ್ಕಾರ ಚುನಾವಣೆಯನ್ನು ಮುಂದೂಡಿತು. ಈ ಮಧ್ಯ, ಈ ಸಂಘ, ಆ ಅಧಿಸೂಚನೆಯಿಂದ ವಿನಾಯ್ತಿ ಪಡೆದು, ಆ ನಂತರ ಅಂತಿಮ ಮತದಾರರ ಪಟ್ಟಿಯನ್ನು (ತಕರಾರು ಪರಿಗಣಿಸಿ) ಪ್ರಕಟಿಸಿ ಚುನಾವಣೆ ನಡೆಸಿತು. ಫಲಿತಾಂಶ ಪ್ರಕಟಿಸಲು ಉಚ್ಚನ್ಯಾಯಾಲಯ ನಿರ್ದೇಶಿಸಿತು. ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಮತದಾರ ಪಟ್ಟಿ ತಯಾರಿಕೆ ಒಂದು ಚುನಾವಣೆಯ ಮಧ್ಯಂತರ ವ್ಯವಸ್ಥೆಯಾಗಿದ್ದು, ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ನಂತರ ಉಚ್ಚನ್ಯಾಯಾಲಯ ಮಧ್ಯ ಪ್ರವೇಶ ಮಾಡಬಾರದು.

ಮತದಾರರ ಪಟ್ಟಿಯಲ್ಲಿನ ನ್ಯೂನತೆ ನಿಯಮ ಉಲ್ಲಂಘನೆಯಾಗಿದೆ ಎಂಬ ಕಾರಣಕ್ಕೆ ಮಧ್ಯಪ್ರವೇಶ ಸಲ್ಲದು. ಚುನಾವಣೆ ಪಲಿತಾಂಶ ಪ್ರಕಟಿಸಿದ ನಂತರ ನೊಂದ ವ್ಯಕ್ತಿಗಳು ಕಾನೂನಿನಲ್ಲಿ ಇರುವ ಅವಕಾಶಗಳನ್ನು ಉಪಯೋಗಿಸಿ ಪ್ರಕರಣ ದಾಖಲಿಸಿ, ಪರಿಹಾರ ಪಡೆಯಬಹುದು. (2001 Indlaw SC 225, (2001) 8 SCC 509, AIR 2001 SC 3982)

5. ಮಹಾರಾಷ್ಟ್ರ ಕಾಯಿದೆಯಡಿ ಒಂದು ಸಂಘ ತನ್ನ ಉಪನಿಯಮಗಳ ತಿದ್ದುಪಡಿ, ಕಾನೂನಿಗೆ/ನಿಯಮಕ್ಕೆ ವಿರುದ್ಧ ಮಾಡಿದರೆ, ಮತ್ತು ಅದರ ಆಧಾರದ ಮೇಲೆ ಮತದಾರರ ಪಟ್ಟಿ ತಯಾರಿಸಿದ್ದಾರೆ, ಅದು ಊರ್ಜಿತವಲ್ಲವೆಂದು ಮತ್ತು ತಿದ್ದುಪಡಿ ಬಗ್ಗೆ ಮೇಲ್ಮನವಿ ಸಲ್ಲಿಸಲು ನ್ಯಾಯಾಧಿಕರಣದಲ್ಲಿ ಸಲ್ಲಿಸಲಾಗದು. ಅದನ್ನು ಇಲಾಖೆಯಲ್ಲಿಯೇ ಸಲ್ಲಿಸಬೇಕು. ಉಚ್ಚನ್ಯಾಯಾಲಯದ ತೀರ್ಮಾನದಲ್ಲಿ ಯಾವುದೇ ನ್ಯೂನತೆ ಇಲ್ಲ. ತಪ್ಪು ನಿಯಮ ಪಾಲಿಸಿ, ಮತದಾರರ ಪಟ್ಟಿ ತಯಾರಿಸಿ, ಆ ಪಟ್ಟಿ ಆಧಾರದ ಮೇಲೆ ಚುನಾವಣೆ ನಡೆಸಲಾಗದು. (2003 Indlaw SC 1003, (2004) 1 SCC 133, AIR 2004 SC 1329)

## ಚುನಾವಣೆಗೆ ಸಂಬಂಧಪಟ್ಟ ತೀರ್ಪುಗಳು

1. ಗುಜರಾತ್ ಸಹಕಾರ ಕಾಯಿದೆಯಡಿ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಒಕ್ಕೂಟದ ಪದಾಧಿಕಾರಿಗಳ ಅವಧಿ ಬಗ್ಗೆ ಪ್ರಶ್ನಿಸಿದಾಗ, ಕಲಂ 74 ರನ್ವಯ ಮಂಡಳಿಯ ಅವಧಿ ನಿವೃತ್ತರಾದ ನಿರ್ದೇಶಕರ ಸ್ಥಾನಕ್ಕೆ ಭರ್ತಿ ಮಾಡಿ, ಆ ನಂತರ ಅಧ್ಯಕ್ಷರ ಆಯ್ಕೆಗೆ ಜಿಲ್ಲಾಧಿಕಾರಿಗಳ ಸಭೆ ಕರೆದಾಗ, ಆ ಸಭೆ ಬಗ್ಗೆ ರಿಟ್ ಅರ್ಜಿ ದಾಖಲಿಸಿದರು. ಗುಜರಾತ್ ಕಾಯಿದೆ ಕಲಂ.74–ಸಿ ಮತ್ತು ಕಲಂ.145(2) ರನ್ವಯ ಆಡಳಿತ ಮಂಡಳಿ ಅವಧಿ ಮೂರು ವರ್ಷವಿದ್ದು, ಪದಾಧಿಕಾರಿಗಳ ಅವಧಿಯ ಮೂರ ವರ್ಷಗಳಿರಬೇಕು. ಆದ್ದರಿಂದ ಪದಾಧಿಕಾರಿಗಳ ಆಯ್ಕೆಗೆ ಜಿಲ್ಲಾ ಕಲೆಕ್ಟರ್ ಕರೆದ ಸಭೆ ಊರ್ಜಿತವಲ್ಲ ಎಂದು ಪ್ರಶ್ನಿಸಿದರು. ಇದಕ್ಕೆ ಸಂಘದ ಉಪನಿಯಮ 40.1 ರನ್ವಯ ವಾರ್ಷಿಕ ಮಹಾಸಭೆ ನಡೆದ ಒಂದು ತಿಂಗಳೊಳಗಾಗಿ, ಆಡಳಿತ ಮಂಡಳಿ ಸಭೆ ಕರೆದು ಅಧ್ಯಕ್ಷರು, ಉಪಾಧ್ಯಕ್ಷರನ್ನು ಒಂದು ವರ್ಷದವರೆಗೆ ಆಯ್ಕೆ ಮಾಡತಕ್ಕದ್ದು ಎಂದಿರುವುದನ್ನು ಗಮನಿಸಿ, ಜಿಲ್ಲಾ ಕಲೆಕ್ಟರ್‌ಗೆ ವಾರ್ಷಿಕ ಮಹಾಸಭೆ ನಂತರ ಒಂದು ತಿಂಗಳೊಳಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಗೆ ಸಭೆ ಕರೆಯಲು ಅಧಿಕಾರ ಇರುವುದರಿಂದ ಜಿಲ್ಲಾ ಕಲೆಕ್ಟರ್ ನೀಡಿದ ನೋಟೀಸ್‌ಗೆ ಮಧ್ಯಪ್ರವೇಶ ಮಾಡುವ ಅವಶ್ಯಕತೆ ಇಲ್ಲವೆಂದು ತೀರ್ಮಾನಿಸಿತು. (1997 Indlaw SC 1120, (1997) 9 SCC 612, AIR 1997 SC 2273)

2. ಉತ್ತರಪ್ರದೇಶ ಕಾಯಿದೆಯಡಿ ಹಿಂದುಳಿದ ವರ್ಗದ ಸದಸ್ಯರಿಗೆ ಮೀಸಲಾತಿ ನೀಡಲು ತಿದ್ದುಪಡಿ ಮಾಡುವ ಅಧಿಕಾರ ಇದೆಯೇ ಎಂಬ ಪ್ರಶ್ನೆ ಎತ್ತಿದಾಗ, ಕಾಯಿದೆ ಕಲಂ.130(2)(XII) ಮತ್ತು (XII–ಎ) ಮತ್ತು ನಿಯಮ 393ರ ವಿವರಣೆ ಅಸಂವಿಧಾನಿಕ ಎಂದು ಕಿತ್ತು ಹಾಕಿತು. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಸಂವಿಧಾನದ ಅನುಚ್ಛೇದ 19(1)(ಸಿ) ರಂತೆ ಮೀಸಲಾತಿ ಅಸಂವಿಧಾನ ಎಂಬುದಕ್ಕೆ ಉತ್ತರಿಸುತ್ತಾ. ಹಿಂದಿನ ತೀರ್ಪುಗಳಾದ 1985 Indlaw SC 206/1983 Indlaw SC 159/1992 Indlaw SC 596/1971 Indlaw SC 865/1988 Indlaw SC 416 ಪರಿಶೀಲಿಸಿ. ಚುನಾವಣೆ ನಡೆದಾಗ ಹಿಂದುಳಿದ ಮತ್ತು ಮಹಿಳೆಯರು ಆಯ್ಕೆಯಾಗದೇ ಇದ್ದಾಗ, ಸರ್ಕಾರದಿಂದ ನಾಮ ನಿರ್ದೇಶನ ಮಾಡಿ ಈ ನ್ಯೂನತೆಯನ್ನು ಸರಿಪಡಿಸಬಹುದು. ಇದಕ್ಕೆ ನ್ಯಾಯಾಲಯಗಳು ಮಧ್ಯಪ್ರವೇಶ ಮಾಡತಕ್ಕದ್ದಲ್ಲ. ಕಾಯಿದೆಯಲ್ಲಿಯೇ ಈ ವರ್ಗದ ಸದಸ್ಯರಿಗೆ ಆಡಳಿತ ಮಂಡಳಿಯಲ್ಲಿ ಮೀಸಲಾತಿ ನೀಡುವುದು ಸಂವಿಧಾನದ ಅನುಚ್ಛೇದ 19(1)(ಸಿ) ಯ ಉಲ್ಲಂಘನೆ

ಯಾಗುವುದಿಲ್ಲವೆಂದು ಉಚ್ಚನ್ಯಾಯಾಲಯದ ತೀರ್ಪನ್ನು ಕಿತ್ತು ಹಾಕಿತು. ಈ ನೀತಿ ರಾಜ್ಯ ಸರ್ಕಾರದ ನೀತಿ ರೂಪಿಸಿದಾಗ ಮಾಡಿದ ತಿದ್ದುಪಡಿಯಾಗಿದ್ದು ಇದು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತಿದೆ. (1997 Indlaw SC 2275, (1997) 3 SCC 681, AIR 1997 SC 1413)

3. ಬಹುರಾಜ್ಯ ಸಹಕಾರ ಸಂಘದ ಚುನಾವಣೆ ಬಗ್ಗೆ ಗೋವಾ ರಾಜ್ಯ ಸಹಕಾರ ಬ್ಯಾಂಕ್ ಆಡಳಿತ ಮಂಡಳಿ ರಚನೆ ಬಗ್ಗೆ ವಿವಾದ ಪರಿಹರಿಸುವಾಗ, ಉಚ್ಚನ್ಯಾಯಾಲಯ ತೀರ್ಮಾನ ತೆಗೆದುಕೊಳ್ಳುವಾಗ, ಬ್ಯಾಂಕ್ ತನ್ನ ಉಪನಿಯಮ ತಿದ್ದುಪಡಿ ಮಾಡಿಕೊಂಡ ಅವಕಾಶದಂತೆ ಚುನಾವಣೆ ನಡೆಸಲು ತೀರ್ಮಾನಿಸಿತ್ತು. ಆದರೆ, ತಿದ್ದುಪಡಿ ನಿಬಂಧಕರಿಂದ ಒಪ್ಪಿಗೆಯಾಗಿದೆಯೇ ಇಲ್ಲವೇ ಎಂಬುದನ್ನು ದೃಡೀಕರಿಸಿಕೊಳ್ಳದೆ. ಅಂದರೆ ತಿದ್ದುಪಡಿ ಅಂಗೀಕಾರವಾಗಿದೆ ಎಂದು ಭಾವಿಸಿತು. ನಿಬಂಧಕರಿಗೆ ನೊಂದಾಯಿಸಿದ ಬಗ್ಗೆ ದೃಡೀಕರಣ ನೀಡಿ ಪ್ರಮಾಣ ಪತ್ರ ಸಲ್ಲಿಸಲು ಸೂಚಿಸಿದ್ದು, ಅದರಂತೆ ನಿಬಂಧಕರು ದಿನಾಂಕ 06.09.1994 ರಂದು ನೊಂದಾಯಿಸಿದ್ದು ಆಡಳಿತ ಮಂಡಳಿ ರಚನೆ ಬಗ್ಗೆ ಇರುವ ಅವಕಾಶವನ್ನು ಪರಿಶೀಲಿಸಿತು. ಈ ತಿದ್ದುಪಡಿಯಲ್ಲಿ ಚುನಾವಣೆ ನಡೆಸಲು ಬಹುರಾಜ್ಯ ಸಹಕಾರ ಕಾಯಿದೆ ಅನುಭಂದ 2 ರಿಂದ 7 ನ್ನು ಅನುಸರಿಸಿತ್ತು. ಆದರೆ ಬಹುರಾಜ್ಯ ಕಾಯಿದೆಯಲ್ಲಿ ನೊಂದಾವಣೆ ಮಾಡಿಸಿಕೊಂಡಿದ್ದು 08.02.1996ರ ಉಪನಿಯಮಗಳ ತಿದ್ದುಪಡಿ ನಂತರ. ಆದ್ದರಿಂದ ಉಚ್ಚನ್ಯಾಯಾಲಯದ ತೀರ್ಮಾನವನ್ನು ರದ್ದುಗೊಳಿಸಿ, ಕೇಂದ್ರ ನಿಬಂಧಕರಿಗೆ ಚುನಾವಣೆ ನಡೆಸಲು ಆದೇಶಿಸಿತು. (1996 Indlaw SC 1520, AIR 1996 SC 1801)

4. ಬಿಹಾರ್ ಸಹಕಾರ ಕಾಯಿದೆಯಲ್ಲಿ, ಆಡಳಿತ ಮಂಡಳಿಯ ಅವಧಿ ಸಹಕಾರ ವರ್ಷ ಮೇ ಅಥವಾ ಪ್ರಾರಂಭವಾದ ದಿನಾಂಕದಿಂದಲೇ ಎಂಬುದನ್ನು ವಿಮರ್ಶಿಸಲಾಯಿತು. ಸರ್ಕಾರ ತಾನು ಪಾವತಿಸಿದ ಪಾಲು ಬಂಡವಾಳದ ಆಧಾರದ ಮೇಲೆ ನಾಮ ನಿರ್ದೇಶನ ಮಾಡುವ ಅಧಿಕಾರ ಇದೆ. ಅದರಂತೆ ನಾಮ ನಿರ್ದೇಶನ ಮಾಡುತ್ತದೆ. ಆಡಳಿತ ಮಂಡಳಿ ಅವಧಿ ಮೂರು ವರ್ಷ ಎಂದು ಇರುವಾಗ, ಸಹಕಾರ ವರ್ಷದ ಪ್ರಾರಂಭದಿಂದ ಅಥವಾ ಸಹಕಾರಿ ವರ್ಷದ ಅವಧಿಗೆ ಎಂಬುದು ಪರಿಶೀಲಿಸಿತು. ಸರ್ಕಾರ ಶೇ.30–50 ರಷ್ಟು ಪಾಲು ಬಂಡವಾಳವಿದ್ದರೆ 1/3 ಸದಸ್ಯರನ್ನು ನಾಮ ನಿರ್ದೇಶನ, 50% ರಿಂದ 60% ಪಾವತಿಸಿದ್ದರೆ ಅಧ್ಯಕ್ಷರೂ ಸೇರಿ ಶೇ.50 ರಷ್ಟು ಸದಸ್ಯರನ್ನು ಮತ್ತು ಶೇ.60% ಕ್ಕಿಂತ ಹೆಚ್ಚು ಪಾಲು ಬಂಡವಾಳವಿದ್ದರೆ ಅಧ್ಯಕ್ಷರನ್ನು ಸೇರಿಸಿ 2/3 ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಅವಕಾಶವಿದ್ದು, ಅದರಂತೆ ನಾಮ ನಿರ್ದೇಶನ ಮಾಡಬಹುದು. ಚುನಾವಣೆ ನಡೆದಾಗ ಯಾವ ದಿನಾಂಕದಿಂದ ಮೂರು ವರ್ಷ ಎಂಬ ಬಗ್ಗೆ ಕಾಯಿದೆ ಕಲಂ.14(10) ರಲ್ಲಿ ಸಹಕಾರ ವರ್ಷ ಎಂದಿದ್ದರೂ, ಸರ್ಕಾರ ನಾಮ ನಿರ್ದೇಶನ ಮಾಡಿದ ಅವಧಿಯನ್ನು ನಿಯಮ 22(2) ರಂತೆ ರಚನೆಯಾಗಿದೆ ಎಂದು ಭಾವಿಸತಕ್ಕದ್ದು. ಚುನಾವಣೆ ಎಂಬ ಪದವನ್ನು ಕಾಯಿದೆ ಮತ್ತು ನಿಯಮಗಳಲ್ಲಿ ಹೆಸರಿಸಿದ್ದರೂ, ಅದು ಸರ್ಕಾರ ನಾಮ ನಿರ್ದೇಶನ ಮಾಡಿದ ದಿನಾಂಕದಂದು ಎಂದು ಅರ್ಥೈಸಬೇಕು. ಈ ಪ್ರಕರಣದಲ್ಲಿ ಚುನಾವಣೆ ಮಾರ್ಚ್ ಅಂತ್ಯಕ್ಕೆ ಆಗದಿದ್ದರೂ ಮೂರು ವರ್ಷದ ಅವಧಿ ದಿನಾಂಕ 01.04.1992 ರಿಂದ ಪ್ರಾರಂಭವಾಗಬೇಕು. ಆದರೆ ಈ ಪ್ರಕರಣವನ್ನು ಹೊಸ ಆಡಳಿತ ಮಂಡಳಿ ಚುನಾವಣೆ 04.07.1994 ರಚನೆಯಾಗಿದೆ. (1995 Indlaw SC 559, (1995) 1 SCC (Supp) 340, AIR 1995 SCW 836)

## ಚುನಾವಣೆಗೆ ಸಂಬಂಧಪಟ್ಟ ತೀರ್ಪುಗಳು

1. ಮಹಾರಾಷ್ಟ್ರ ಸಹಕಾರ ಕಾಯಿದೆಯಡಿ ಒಂದು ಸಂಘದ ಚುನಾವಣೆಗೆ ಸಂಬಂಧಪಟ್ಟಂತೆ. ಇಬ್ಬರು ಸದಸ್ಯರು ಸಂಘದ ಅಧ್ಯಕ್ಷರ ಪರೋಕ್ಷವೆಂಬುದೊಂದಿಗೆ ಚುನಾವಣೆ ಪ್ರಕ್ರಿಯೆಯನ್ನು

ಸಮರ್ಪಕವಾಗಿ ನಡೆಸದಂತೆ ಮಾಡಲು ಒಂದು ಒಪ್ಪಂದ ಡಿಕ್ರಿ ಪಡೆದಾಗ ಅದನ್ನು ಪ್ರಶ್ನಿಸಿ ರಿಟ್ ದಾಖಲಿಸಿದಾಗ, (ಎರಡು ಬಾಕಿ ವಿಚಾರಣೆ ನಡೆಸಿ) ಮಾರ್ಪಾಡಾದಂತೆ ಚುನಾವಣೆ ನಡೆಸಲು ಆದೇಶಿತು. ಇದನ್ನು ಪ್ರಶ್ನಿಸಿದಾಗ ಶ್ರೇಷ್ಠ ನ್ಯಾಯಾಲಯ, ಮತದಾರರ ಪಟ್ಟಿಯಲ್ಲಿನ ದೋಷವನ್ನು ಪರಿಗಣಿಸಿ, ಜಿಲ್ಲಾ ಕಲೆಕ್ಟರ್ ದಿನಾಂಕ 30.06.1992 ರಂದು ತಯಾರಿಸಿದ ಮತದಾರರ ಪಟ್ಟಿಯನ್ನು ಕಾನೂನು ಬಾಹಿರ ಎಂದು ರದ್ದುಗೊಳಿಸಿತು. ಆಡಳಿತ ಮಂಡಳಿಗೆ ದಿನಾಂಕ 27.04.1993 ರಂದು ಉಪನಿಬಂಧಕರು ನಡೆಸಿದ ಚುನಾವಣೆ ಕಾನೂನು ಬಾಹಿರ ಎಂದು ರದ್ದುಗೊಳಿಸಿತು ಮತ್ತು ನಿಯಮ 4 ರಿಂದ 7 ಮತ್ತು 16 ರಂತೆ ಮರು ಚುನಾವಣೆ ನಡೆಸಲು ಸೂಚಿಸಿ, ಮತದಾರರ ಪಟ್ಟಿ ದಿನಾಂಕ 17.12.1991 ರಲ್ಲಿ ತಯಾರಿಸಿದ್ದ ಆಧಾರದ ಮೇಲೆ ಹೊಸ ಚುನಾವಣೆ ನಡೆಸಲು ಉಪನಿಬಂಧಕರಿಗೆ ಸೂಚಿಸಿತು.

(1993 Indlaw SC 565, (1993) 4 SCC 216, AIR 1994 SC 1673)

2. ಮಹಾರಾಷ್ಟ್ರ ಸಹಕಾರ ಕಾಯಿದೆ ಒಂದು ಹಾಲು ಒಕ್ಕೂಟದಲ್ಲಿ ನಡೆದ ಅವ್ಯವಹಾರದ ಮೇಲೆ ಕಾರಣಕೇಳುವ ನೋಟೀಸ್ ನೀಡಿ, ವಿವರಣೆ ಪಡೆದು ಮಂಡಳಿ ರದ್ದು ಪಡಿಸಿ ಆಡಳಿತಾಧಿಕಾರಿ ನೇಮಿಸಿತು. ಚುನಾವಣೆ ನಡೆದಾಗ ಹಿಂದಿನ ಮಂಡಳಿಯಲ್ಲಿದ್ದು ಏಳು ನಿರ್ದೇಶಕರು ಪುನಃ ಆಯ್ಕೆಯಾದರು (ಹೊಸದಾಗಿ 6 ಜನರು ಆಯ್ಕೆಯಾದರು) ರಿಟ್ ಅರ್ಜಿ ದಾಖಲಿಸಿ, ತೀರ್ಮಾನವಾಗುವ ತನಕ ಮಂಡಳಿ ಯಾವುದೇ ತಾತ್ವಿಕ ತೀರ್ಮಾನ ತೆಗೆದುಕೊಳ್ಳತಕ್ಕದ್ದಲ್ಲವೆಂದು (ಅಂದರೆ ಮಂಡಳಿ ರದ್ದು ಪಡಿಸಿದ ನಂತರ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿದ್ದು, ಅದು ತೀರ್ಮಾನವಾಗುವ ತನಕ ಮಂಡಳಿ ಯಾವುದೇ ತಾತ್ವಿಕ ತೀರ್ಮಾನ ತೆಗೆದುಕೊಳ್ಳಬಾರದು ಎಂಬ ಮನವಿ) ಕೇಳಿದ ಮನವಿಗೆ, ಮಂಡಳಿ ರದ್ದತಿ ಕಿತ್ತು ಹಾಕಿದಾಗ ಮಾತ್ರ ಹಿಂದಿನ ಮಂಡಳಿ ಮುಂದುವರಿಯುತ್ತಿದೆ ಎಂಬ ವಾದಕ್ಕೆ ಉಚ್ಚನ್ಯಾಯಾಲಯ ಇಬ್ಬರೂ (ಎರಡು ಕಕ್ಷಿದಾರರು) ಒಪ್ಪಂದದಲ್ಲಿ ಆದೇಶ ಪಡೆದಿದ್ದರೆ, ಅದನ್ನು ಉಚ್ಚನ್ಯಾಯಾಲಯ ದಾಖಲಿಸಿಕೊಂಡು ತೀರ್ಮಾನ ಆದೇಶಿಸಬೇಕಿತ್ತು ಆದರೆ ಆ ರೀತಿ ಮಾಡದೆ, ಇದ್ದುದರಿಂದ, ಉಚ್ಚನ್ಯಾಯಾಲಯದ ಆದೇಶವನ್ನು ಕಿತ್ತು ಹಾಕಿ, ಮರು ವಿಚಾರಣೆ ನಡೆಸಿ ತೀರ್ಮಾನಿಸಲು ಶ್ರೇಷ್ಠ ನ್ಯಾಯಾಲಯವು ಆದೇಶಿಸಿತು. (1993 Indlaw SC 555, (1993) 4 SCC 255, AIR 1993 SCW 3013)

3. ಹಿಮಾಚಲ್‌ಪ್ರದೇಶದ ಒಂದು ಗ್ರಾಹಕರ ಸಂಘದ ನೌಕರರನ್ನು ನೋಟೀಸ್, ವಿಚಾರಣೆ, ಮತ್ತು ಆಡಳಿತಾಧಿಕಾರಿ ಅನುಮೋದನೆ ಪಡೆಯಲಾರದೆ ವಜಾ ಮಾಡಿದ ಆದೇಶವನ್ನು ಸಹಾಯಕ ನಿಬಂಧಕರಲ್ಲಿ ಪ್ರಶ್ನಿಸಿದಾಗ, ಏಳು ವರ್ಷಗಳ ನಂತರ ಮರು ನೇಮಕಾತಿಗೆ ಆದೇಶಿಸಿ, ಬಾಕಿ ಸಂಬಳ ಪಾವತಿಸಲು ಆದೇಶಿಸಲಿಲ್ಲ. ಇದನ್ನು ವಿವಿದ ಪ್ರಾಧಿಕಾರಿಗಳ ಮುಂದೆ ಪ್ರಶ್ನಿಸಿದಾಗ ಪಡೆದ ಆದೇಶಗಳನ್ನು ಜಾರಿ ಮಾಡಲಿಲ್ಲ. ಇಲಾಖಾಧಿಕಾರಿಗಳು ಸಹ ನಿರ್ದೇಶನ ನೀಡಿದರೂ ಅದನ್ನು ಪಾಲಿಸಲಿಲ್ಲ, ಉಚ್ಚನ್ಯಾಯಾಲಯದ ಆದೇಶವನ್ನು ಜಾರಿ ಮಾಡದೆ, ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಈ ಪ್ರಕರಣ ಇತ್ಯರ್ಥ ಪಡಿಸಲು ವರ್ಷಗಳಾಗಿದೆ. ಪರಿಹಾರ ನೀಡಲು ಸಂಘ ವಿಫಲವಾಗಿದೆ. ವಜಾ ಆದೇಶ ರದ್ದು ಪಡಿಸಿದರೂ ಅದನ್ನು ಜಾರಿ ಮಾಡಿಲ್ಲ. ಈ ನೌಕರರನ್ನು ವಜಾ ಮಾಡಲು ಕಾರಣಕರ್ತರಾದ ಎಲ್ಲಾ ನೌಕರರು/ಅಧಿಕಾರಿಗಳಿಂದ ಬಾಕಿ ಸಂಬಳದ ಮೊತ್ತವನ್ನು ವಸೂಲಿ ಮಾಡಲು ಆದೇಶಿಸಿತು. (1993 Indlaw SC 1121, (1993) 3 SC 214, AIR 1994 SC 23)

4. ರಾಜಸ್ತಾನ್ ಸಹಕಾರ ಕಾಯಿದೆಯ ಒಂದು ಪ್ರಾಥಮಿಕ ಸಂಘದ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿದ್ದು ಆ ಸಂಘಕ್ಕೆ ಆಡಳಿತಾಧಿಕಾರಿ ನೇಮಿಸುವ ಅವಶ್ಯಕತೆ ಇಲ್ಲವೆಂದು ಸರ್ಕಾರ ತೀರ್ಮಾನಿಸಿದ್ದು, ಬ್ಯಾಂಕ್‌ಗಳ ಪ್ರಕರಣದಲ್ಲಿ ಚುನಾವಣೆ ಪ್ರಕಟಣೆ ಹೊರಡಿಸಿದ್ದು ಚುನಾವಣೆಯನ್ನು

ಮುಂದೂಡಲು ಸರ್ಕಾರ ತೆಗೆದುಕೊಂಡ ತೀರ್ಮಾನ ಸರಿಯಾಗಿದ್ದು ಉಚ್ಚನ್ಯಾಯಾಲಯ ಎರಡನ್ನು ಒಂದೇ ಎಂದು ತೀರ್ಮಾನವನ್ನು ಕಿತ್ತು ಹಾಕಿತು. ಅಂದರೆ ಅಂತಹ ಸಂಘಕ್ಕೆ ಆಡಳಿತಾಧಿಕಾರಿ ನೇಮಿಸುವುದು ತಪ್ಪು ಎಂದು ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿತು. (1992 Indlaw SC 462, (1993) 1 SCC (Supp) 556, AIR 1992 SC 1975)

5. ಮಹಾರಾಷ್ಟ್ರ ಕಾಯಿದೆಯ ಒಂದು ಸಹಕಾರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರ ಮೇಲೆ ಅವಿಶ್ವಾಸ ಮಂಡಿಸಿ ಮಂಡಳಿ ನಿರ್ದೇಶಕರು ಮನವಿ ಸಲ್ಲಿಸಿದಾಗ, ಸಂಯುಕ್ತ ನಿಬಂಧಕರು ಅವಿಶ್ವಾಸ ನಿರ್ಣಯ ಚರ್ಚಿಸಲು ಸಭೆ ಕರೆದರು. ಅದನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ ಕಲಂ 73-1ಡಿ, ನಿಯಮ 57-ಎ ಮತ್ತು ಸಂಘದ ಉಪನಿಯಮ 29ನ್ನು ಪರಿಶೀಲಿಸಿ, ಉಚ್ಚನ್ಯಾಯಾಲಯ ಮತಚಲಾಯಿಸುವ ಎಲ್ಲಾ ನಿರ್ದೇಶಕರಿಗೂ ನೋಟೀಸ್ ನೀಡುವಂತೆ ಸೂಚಿಸಿದ್ದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿತು. ಶ್ರೇಷ್ಠ ನ್ಯಾಯಾಲಯ ಹಣಕಾಸು ಪೂರೈಸುವ ಸಂಸ್ಥೆ ಮತ್ತು ಸರ್ಕಾರ ನಾಮ ನಿರ್ದೇಶನ ಮಾಡಿದ ನಿರ್ದೇಶಕರನ್ನು ಹೊರತು ಪಡಿಸಿ ಉಳಿದ ಎಲ್ಲಾ ನಿರ್ದೇಶಕರು ಅವಿಶ್ವಾಸ ನಿರ್ಣಯದ ಮೇಲೆ ಭಾಗವಹಿಸಲು ಸೂಚಿಸಿದರು. (1990 Indlaw SC 715, (1990) 3 SCC 634, AIR 1990 SC 1023)

6. ಮಹಾರಾಷ್ಟ್ರ ಸಹಕಾರ ಕಾಯಿದೆಯ ಒಂದು ಜಿಲ್ಲಾ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಸಾಲ ಪಡೆದ ಒಬ್ಬ ವ್ಯಕ್ತಿ ಒಂದು ಕಂತು ಅಥವಾ ಹೆಚ್ಚಿನ ಕಂತುಗಳನ್ನು ಪಾವತಿ ಮಾಡದೇ ಇದ್ದರೂ ಕಾಯಿದೆ ಕಲಂ.77ಎಫ್.ಎಫ್, 78(1), 91, 144 ಇ, 144 ಟಿ ಮತ್ತು 154 ರಡಿ ಸುಸ್ತಿದಾರರಾಗಿದ್ದು, ಅವನು ಆಯ್ಕೆಯಾದ ದಿನಾಂಕದಂದೇ ಅನರ್ಹತೆಗೊಳ್ಳುತ್ತಾನೆ. ಆ ದಿನಾಂಕದಂದು, ಅವನು ಆಯ್ಕೆಯಾದ ಹುದ್ದೆ ಖಾಲಿಯಾಗಿದೆ ಎಂದು ಭಾವಿಸತಕ್ಕದ್ದು. ಕಾಯಿದೆ ಕಲಂ.77 ಎಫ್.ಎಫ್ ಅನ್ವಯ ಅಂತಹ ಆಯ್ಕೆಯಾದ ನಿರ್ದೇಶಕ ತನ್ನ ಸ್ಥಾನದಲ್ಲಿ ಮುಂದುವರಿಯಲು ಅನರ್ಹತೆ ಹೊಂದಿದ್ದಾನೆ. (1991 Indlaw SC 539, (1991) 2 SCC 423)

7. ಮಧ್ಯಪ್ರದೇಶ ಕಾಯಿದೆಯಡಿ ರಾಜ್ಯ ಅಪೆಕ್ಸ್ ಬ್ಯಾಂಕಿನ ಚುನಾಯಿತ ಮಂಡಳಿಯ ಅವಧಿ ಮೂರು ವರ್ಷಗಳಿದ್ದು, ಪದಾಧಿಕಾರಿಗಳ ಆಯ್ಕೆಯಾಗಿದ್ದು ಪದಾಧಿಕಾರಿಗಳ ಅವಧಿ ಆಡಳಿತ ಮಂಡಳಿ ಅವಧಿಗೆ ಸೀಮಿತ ವಾಗಿರತಕ್ಕದ್ದು ಎಂದಿದೆ. ಈ ಮಧ್ಯೆ ಮಂಡಳಿ ಅವಧಿಯನ್ನು ಐದು ವರ್ಷಗಳಿಗೆ ವಿಸ್ತರಿಸಲಾಯಿತು. ಅಪೆಕ್ಸ್ ಬ್ಯಾಂಕಿನ ಆಡಳಿತ ಮಂಡಳಿ ಒಂದು ಠರಾವಿನ ಮೂಲಕ ಚುನಾವಣೆ ನಡೆಸಲು ನಿಬಂಧಕರನ್ನು ವಿನಂತಿಸಿತು. ನಿಬಂಧಕರು ಚುನಾವಣೆ ನಡೆಸದೇ ಇದ್ದಾಗ ಆಡಳಿತ ಮಂಡಳಿ ರಿಟ್ ಮುಖಾಂತರ ಪ್ರಶ್ನಿಸಿತು. ಈ ಮಧ್ಯೆ ಸರ್ಕಾರ ಎಲ್ಲಾ ಸಹಕಾರ ಸಂಘಗಳ ಆಡಳಿತ ಮಂಡಳಿಗಳನ್ನು ರದ್ದು ಪಡಿಸಿ, ಆಡಳಿತಾಧಿಕಾರಿ ನೇಮಿಸಲು ಅವಕಾಶ ಕಲ್ಪಿಸಿತು. ಆ ನಂತರ ಉಚ್ಚನ್ಯಾಯಾಲಯ ಆಡಳಿತಾಧಿಕಾರಿ ನೇಮಕದ ಸುಗ್ರೀವಾಜ್ಞೆಯನ್ನು ಅಸಂವಿದಾನಿಕ ಎಂದು ತೀರ್ಮಾನಿಸಿತು. ಆ ನಂತರ ಸುಗ್ರೀವಾಜ್ಞೆಯನ್ನು ಕಾಯಿದೆಯಾಗಿ ವಿಧಾನ ಮಂಡಳಿ ರಚಿಸಿತು, ಆ ನಂತರ ಮತ್ತೆ ನಿಬಂಧಕರು ಆಡಳಿತಾಧಿಕಾರಿಯನ್ನು ನೇಮಿಸಿದರು. ಇದಕ್ಕೆ ಪೂರಕವಾಗಿ ಉಚ್ಚನ್ಯಾಯಾಲಯ ಹೆಚ್ಚುವರಿ ಅವಧಿ ಮುಕ್ತಾಯದ 90 ದಿವಸಗಳ ಮುಂಚೆ ನಿಬಂಧಕರಿಗೆ ಪದಾಧಿಕಾರಿಗಳ ಚುನಾವಣೆ ಮಾಡಲು ವಿನಂತಿಸಬೇಕು. ನಿಬಂಧಕರು ಸಭೆ ಕರೆಯದಿದ್ದಾಗ, ಆಡಳಿತ ಮಂಡಳಿ ಠರಾವಿನ ಮೂಲಕ ಪದಾಧಿಕಾರಿಗಳ ಚುನಾವಣೆಗೆ ಚುನಾವಣಾಧಿಕಾರಿ ನೇಮಿಸಿ ಆಯ್ಕೆ ಮಾಡಲು ಸೂಚಿಸಿತು. ಚುನಾವಣೆ ನಡೆಸದಿದ್ದ ಸಂದರ್ಭದಲ್ಲಿ ಆಡಳಿತ ಮಂಡಳಿ/ಪದಾಧಿಕಾರಿಗಳ ಅವಧಿ ಐದು ವರ್ಷದ ಮುಕ್ತಾಯದ ದಿನದಂದು ತನ್ನ ಅವಧಿ ಮುಕ್ತಾಯವಾಗಿದೆ ಎಂದು ಭಾವಿಸುವ ಬಗ್ಗೆ ಉಚ್ಚನ್ಯಾಯಾಲಯ, ಪತ್ತಿನ ವ್ಯವಸ್ಥೆಯಲ್ಲಿ ಪ್ರಾಥಮಿಕ

ಕೃಷಿ ಪತ್ತಿನ ಸಹಕಾರ ಸಂಘ, ಜಿಲ್ಲಾ ಸಹಕಾರ ಬ್ಯಾಂಕ್ ಮತ್ತು ರಾಜ್ಯ ಅಪೆಕ್ಸ್ ಬ್ಯಾಂಕ್ ಒಂದುಕೊಂಡು ಇದ್ದಂತೆ, ಪ್ರಾಥಮಿಕ ಸಂಘಗಳ ಚುನಾವಣೆ ನಡೆಸದೆ ಜಿಲ್ಲಾ ಬ್ಯಾಂಕ್‌ನ ಚುನಾವಣೆ ನಡೆಯತಕ್ಕದ್ದಲ್ಲ. ಅದೇ ರೀತಿ ಜಿಲ್ಲಾ ಬ್ಯಾಂಕ್‌ಗಳ ಚುನಾವಣೆ ನಡೆಸದೆ ಅಪೆಕ್ಸ್ ಬ್ಯಾಂಕ್ ಚುನಾವಣೆ ನಡೆಯತಕ್ಕದ್ದಲ್ಲ. ಆದ್ದರಿಂದ ರಾಜ್ಯ ಅಪೆಕ್ಸ್ ಬ್ಯಾಂಕ್‌ನ ಮಂಡಳಿ ರಚನೆ ಜಿಲ್ಲಾ ಬ್ಯಾಂಕ್‌ಗಳ ಚುನಾವಣೆ ನಡೆಸದೆ, ಮಂಡಳಿ ರಚನೆ ಮಾಡಲಾಗದು. ಅಂದರೆ ಶಾಸನಾತ್ಮಕವಾದ, ಈ ಕ್ರಿಯೆ ಮುಕ್ತಾಯವಾಗು ವವರೆಗೆ ಅಪೆಕ್ಸ್ ಬ್ಯಾಂಕ್‌ನ ಮಂಡಳಿ ರಚನೆಯಾಗದು. ಆದ್ದರಿಂದ ಐದು ವರ್ಷದ ಅವಧಿ ಮುಗಿದರೂ, ಅಧಿಕಾರದಲ್ಲಿ ಮುಂದುವರಿಯತಕ್ಕದ್ದು. ನಿಬಂಧಕರು ಅಧಿಕಾರ ವಹಿಸಿಕೊಂಡು ಆಡಳಿತಾಧಿಕಾರಿ ನೇಮಕ ಸಾಧ್ಯವಿಲ್ಲ. (1997 Indlaw SC 3323, (1997) 6 SCC 678, AIR 1997 SC 3723)

8. ಕರ್ನಾಟಕ ಸಹಕಾರ ಕಾಯಿದೆಯಡಿ, ಒಂದು ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ, ಅರ್ಜಿದಾರರ ನಾಮಪತ್ರ ತಿರಸ್ಕರಿಸಲಾಗಿತ್ತು. ಚುನಾವಣೆಯಲ್ಲಿ ನಾಮಪತ್ರ ತಿರಸ್ಕರಿಸಿದ ಬಗ್ಗೆ ರಿಟ್ ದಾಖಲಿಸಿದಾಗ ಏಕಸದಸ್ಯ ಪೀಠ, ಸಹಕಾರ ಕಾಯಿದೆಯಲ್ಲಿ ಪರಿಹಾರ ಪಡೆಯಲು ಸೂಕ್ತ ವೇದಿಕೆಯಾಗಿರುವುದರಿಂದ ರಿಟ್ ತಿರಸ್ಕರಿಸಿತು. ಇದನ್ನು ಪ್ರಶ್ನಿಸಿ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದಾಗ, ನಾಮಪತ್ರ ತಿರಸ್ಕರಿಸಿರುವುದು ತಪ್ಪು ಎಂದು ಏಕಸದಸ್ಯ ಪೀಠದ ಆದೇಶ ಕಿತ್ತು ಹಾಕಿತ್ತು. ಇದನ್ನು ವಿಶೇಷ ಅರ್ಜಿ ಮೂಲಕ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಏಕಸದಸ್ಯ ಪೀಠದ ಆದೇಶವನ್ನು ಎತ್ತಿಹಿಡಿದು ವಿಭಾಗೀಯ ಪೀಠದ ಆದೇಶವನ್ನು ಕಿತ್ತು ಹಾಕಿತು. ಅಂದರೆ ನಿಬಂಧಕರ ಮುಂದೆ ದಾವಾ ದಾಖಲಿಸಿ ಪರಿಹಾರ ಪಡೆಯಲು ಅವಕಾಶ ಉಪಯೋಗಿಸಿಕೊಳ್ಳಲು ಆದೇಶಿಸಿತು. (1998 Indlaw SC 1700, (1998) 4 SCC 529, AIR 1999 SC 1566)

9. ಆಡಳಿತ ಮಂಡಳಿ ಅವಧಿ ಮುಗಿದು ಹೊಸ ಚುನಾವಣೆ ಪ್ರಕ್ರಿಯೆ ಪ್ರಾರಂಭಿಸಿದಾಗ, ಅರ್ಜಿದಾರನ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಟ್ಟಿದಲ್ಲಿ (ಸದಸ್ಯತ್ವ ತೆಗೆದು ಹಾಕಿದ್ದರಿಂದ) ಪ್ರಶ್ನಿಸಿ ರಿಟ್ ದಾಖಲಿಸಿದಾಗ, ಸದಸ್ಯತ್ವ ತೆಗೆದು ಹಾಕುವಾಗ ಯಾವುದೇ ವಿಚಾರಣೆ ಅಥವಾ ನೋಟೀಸ್ ನೀಡಿಲ್ಲವೆಂದು, ಆದ್ದರಿಂದ ಸದಸ್ಯತ್ವ ತೆಗೆದದ್ದು ಸರಿಯಲ್ಲವೆಂದು, ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಿ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕೇಳಿದಾಗ, ಸಹಕಾರ ಸಂಘ ರಾಜ್ಯ ಎಂದು ಒಪ್ಪಲಾಗದು ಆದ್ದರಿಂದ ರಿಟ್ ಅರ್ಜಿ ಮುಖಾಂತರ ಪರಿಹಾರ ನೀಡಲಾಗದು ಅರ್ಜಿದಾರ ಮತ್ತು ಸಂಘದ ವಿವಾದವಾದ್ದರಿಂದ ಸಹಕಾರ ಕಾಯಿದೆಯಲ್ಲಿ ಪರಿಹಾರ ಪಡೆಯತಕ್ಕದ್ದು. ರಿಟ್ ಮುಖಾಂತರ ಅಲ್ಲ. (2013 Indlaw Kar 1180)

## ಡಿಕ್ರಿ, ಆದೇಶಗಳು ಮತ್ತು ತೀರ್ಪುಗಳ ಜಾರಿ– ವಸೂಲಾತಿ ಕ್ರಮಗಳ ಬಗ್ಗೆ ತೀರ್ಪುಗಳು

ಸಹಕಾರ ಸಂಘಗಳ ಕಾಯಿದೆ ಕಲಂ 101 ರಡಿ ಸಹಕಾರ ನ್ಯಾಯಾಲಯಗಳು ನೀಡಿದ ಡಿಕ್ರಿ, ಆದೇಶ ಮತ್ತು ತಿರ್ಪುಗಳನ್ನು ಜಾರಿ ಮಾಡಲು ಅಧಿಕಾರವನ್ನು ನೀಡಿದೆ. ಇವುಗಳನ್ನು ಸಹಕಾರಿ ಇಲಾಖಾಧಿಕಾರಿಗಳು ಜಾರಿ ಮಾಡುವುದರ ಜೊತೆಗೆ; ನಿಬಂಧಕರ ಪ್ರಮಾಣ ಪತ್ರದ ಆಧಾರದ ಮೇಲೆ, ಸಿವಿಲ್ ಕೋರ್ಟ್ ಮುಖಾಂತರ ಜಾರಿ ಮಾಡಲು ಅವಕಾಶ ನೀಡಲಾಗಿದೆ. ಇಲಾಖಾಧಿಕಾರಿಗಳು ಮತ್ತು ಸಿವಿಲ್ ನ್ಯಾಯಾಲಯಗಳು ಜಾರಿ ಮಾಡುವಾಗ ಉದ್ಭವಿಸಿದ ಪ್ರಕರಣಗಳನ್ನು ಉಚ್ಚನ್ಯಾಯಾಲಯ ಮತ್ತು

ಶ್ರೇಷ್ಠ ನ್ಯಾಯಾಲಯಗಳು ನೀಡಿದ ಆದೇಶಗಳ ಸಂಕ್ಷಿಪ್ತ ವಿವರಣೆ (ಅಂದರೆ ತೀರ್ಪಿನ ಮುಖ್ಯಾಂಶ) ನೀಡಲು ಈ ಪ್ರಯತ್ನ.

1. ಮಾರಾಟಾಧಿಕಾರಿ, ಆಸ್ತಿಯನ್ನು ಮಾರಲು ನೋಟೀಸ್ ಹೊರಡಿಸಿ (ಅಡಮಾನ ಮಾಡಿದ ಆಸ್ತಿಯನ್ನು) ಮಾರಾಟಕ್ಕೆ ಇಡಲಾಗಿತ್ತು. ಇದಕ್ಕೆ ವಿರುದ್ಧವಾಗಿ, ಮತ್ತೊಬ್ಬ ವ್ಯಕ್ತಿ ರಿಟ್ ಅರ್ಜಿ ಸಂಖ್ಯೆ 344/2005 ಸಲ್ಲಿಸಿ, ಸಿವಿಲ್ ಪ್ರಕರಣ ಸಿಸಿರ್ ಸಿವಿಲ್ ನ್ಯಾಯಾಲಯದ ಆಸ್ತಿ ಹಕ್ಕಿನ ತೀರ್ಮಾನವಾಗುವ ತನಕ ತಡೆಆಜ್ಞೆ ನೀಡಿತ್ತು. ಈ ರಿಟ್ ಅರ್ಜಿ ತೀರ್ಮಾನಿಸಿದಾಗ ಕಕ್ಷಿದಾರರು ಪ್ರಕರಣ 185/2009 ನಲ್ಲಿ ಪರಿಹಾರ ಕೇಳದೆ ರಿಟ್ ದಾಖಲಿಸಿರುವುದು ಮಾರಾಟಾಧಿಕಾರಿ ಹೊರಡಿಸಿದ ಮಾರಾಟ ನೋಟೀಸ್ ತಡೆ ಇಡಿಯುವುದು ಸರಿಯಲ್ಲ/ಊರ್ಜಿತವಲ್ಲ. (2015 Indlaw Kar 431)
2. ಅರ್ಜಿದಾರ ಫರ್ಮ್ ಡಿಕ್ರಿ ಪಡೆದಿದ್ದು (128/2000) ಅದನ್ನು ಜಾರಿ ಮಾಡಲು ಮುಂದಾದಾಗ, ಡಿಕ್ರಿ ಪಡೆದ ಸಹಕಾರ ಸಂಘ ಸಮಾಪನೆಯಾಗಿದ್ದು, ನಿಬಂಧಕರಿಂದ ಆದೇಶ ಪಡೆದು ಜಾರಿ ಮಾಡಲು ಸೂಚಿಸಿತು. ನಿಬಂಧಕರ ಆದೇಶ ಮತ್ತು ಕಲಂ 118(2) ರಲ್ಲಿ ಆದೇಶ ಪಡೆಯದೇ ಇದ್ದುದರಿಂದ ಜಾರಿ ಅರ್ಜಿಯನ್ನು ವಜಾ ಮಾಡಿತು. ಅದಕ್ಕೆ ರಿಟ್ ಅರ್ಜಿ ಸಂಖ್ಯೆ 20234/2007 ರಲ್ಲಿ ಸಲ್ಲಿಸಿದ್ದು ಅದನ್ನು ಸಹಾ ವಜಾ ಮಾಡಲಾಗಿದೆ. ಅದಾದ ನಂತರವೂ ನಿಬಂಧಕರ ಒಪ್ಪಿಗೆ ಪಡೆಯದೇ ರಿಟ್ ಅರ್ಜಿಯಲ್ಲಿ ಪರಿಹಾರ ಕೇಳಿರುವುದು ತಪ್ಪು. ಆದ್ದರಿಂದ ಈ ರಿಟ್ ಅರ್ಜಿಯಲ್ಲಿ (65506/2012) ಯಾವುದೇ ಪರಿಹಾರ ನೀಡಲಾಗದು. (2014 Indlaw Kar 790)
3. ಅರ್ಜಿದಾರರು ಬ್ಯಾಂಕ್‌ಗೆ ಹಣ ಪಾವತಿ ಮಾಡಲು ತಪ್ಪಿದ್ದರಿಂದ ಸೆಕ್ಯೂರೈಟೇಷನ್ ಕಾಯಿದೆ 2002 ರಲ್ಲಿ, ಏಳು ದಿವಸಗಳಲ್ಲಿ ಪಾವತಿಸದಿದ್ದರೆ, ಆಸ್ತಿಯನ್ನು ಜಪ್ತಿ ಮಾಡಲಾಗುವುದು ಎಂದು ನೋಟೀಸ್ ಕೊಟ್ಟ ನಂತರ, ಈ ರಿಟ್ ಅರ್ಜಿ ದಾಖಲಿಸಿದರು. ಈ ಪ್ರಕರಣದಲ್ಲಿ ಶ್ರೇಷ್ಠ ನ್ಯಾಯಾಲಯ ನೀಡಿದ ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯ ಮತ್ತು ಸತ್ಯವತಿ ಟಂಡನ್ (2010 Indlaw SC 594) ರಲ್ಲಿ ನೀಡಿದ ತೀರ್ಪನ್ನು ಅನುಸರಿಸಲಾಗಿ, ಅದರಲ್ಲಿ ಈ ನೋಟೀಸ್‌ಗೆ ಪರಿಹಾರ ರೂಪದಲ್ಲಿ ಹೆಚ್ಚಿನ ಸಮಯ ಕೇಳಲು ಅವಕಾಶ ವಿದ್ದರೂ, ಉಪಯೋಗಿಸದೆ ರಿಟ್ ದಾಖಲಿಸಿ ಪರಿಹಾರ ಕೇಳಲಾಗದು. ಆದ್ದರಿಂದ ಕಾನೂನಿನಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶ ಇರುವುದಕ್ಕೆ ಬದಲಾಗಿ ರಿಟ್ ಅರ್ಜಿ ಪರಿಹಾರವಲ್ಲ. (2013 Indlaw Kar 2598, 2014 (2) BC 625, 2014 (2) DRTC 243, 2014 (1) KLJ 571)
4. ಅರ್ಜಿದಾರರು ಬ್ಯಾಂಕ್‌ನಿಂದ ಸಾಲ ಪಡೆದು ಸುಸ್ತಿದಾರರಾದ್ದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ 70 ರಲ್ಲಿ ದಾವಾ ದಾಖಲಿಸಿ ಡಿಕ್ರಿ ಪಡೆದಿದೆ. ಇದೇ ಸಮಯದಲ್ಲಿ ಸೆಕ್ರೂರೈಸೇಪ್ರ್ ಕಾಯಿದೆ 2002 ರಲ್ಲಿಯೂ ಸಹಾ ನೋಟೀಸ್ ಜಾರಿ ಮಾಡಿ ಆಸ್ತಿಯನ್ನು ಮಾರಾಟ ಮಾಡಬಾರದೆಂದು ನೋಟೀಸ್ ನೀಡಿ 26.03.2005 ರಂದು ಹರಾಜು ಮಾಡಲಾಯಿತು. ಇದನ್ನು ಪ್ರಶ್ನಿಸಿ ರಿಟ್ ಸಂಖ್ಯೆ.11075/2006 ನ್ನು ದಾಖಲಿಸಿದರು. ಅದನ್ನು ಈ ನ್ಯಾಯಾಲಯ ತಿರಸ್ಕರಿಸಿತ್ತು. ಈ ಪ್ರಕರಣ ಸಾಲ ವಸೂಲಾತಿ ಪ್ರಾಧಿಕಾರದಿಂದಲೂ ಪ್ರಕರಣಕ್ಕೆ ಪರಿಹಾರಸಿಗಲಿಲ್ಲ. ಉಪನಿಬಂಧಕರು ಈ ಮಧ್ಯೆ ಪ್ರಕರಣ ಮರು ವಿಚಾರಣೆಯಲ್ಲಿ ಪೂರ್ತಿ ಹಣ ವಸೂಲಾಗಿರುವುದರಿಂದ, ಆದೇಶ ಮಾಡುವ ಅವಶ್ಯಕತೆ ಇಲ್ಲವೆಂದು ಮುಕ್ತಾಯಗೊಳಿಸಿತು. ಈ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಮೇಲ್ಮನವಿ ಪ್ರಾಧಿಕರಣಕ್ಕೆ ಮೇಲ್ಮನವಿ ಸಲ್ಲಿಸಿದಾಗ (101/2013) ಈ ಪ್ರಕರಣ ಏಕ ಸದಸ್ಯ ಪೀಠದ ಮುಂದೆ 10.05.2013 ರಂದು ಬಂದಾಗ, ಆ ಮೇಲ್ಮನವಿಯನ್ನು ವಜಾ ಮಾಡಲಾಯಿತು. (ಮೇಲ್ಮನವಿ ಊರ್ಜಿತವಲ್ಲವೆಂದು). ಈ ರಿಟ್ ಅರ್ಜಿಯಲ್ಲಿ

(39206/2013) ಪ್ರಶ್ನಿಸಲಾಯಿತು. ಮೇಲ್ಮನವಿ ಪ್ರಾಧಿಕರಣದ ಏಕ ಸದಸ್ಯ ಪೀಠ ಪ್ರಕರಣವನ್ನು ವಜಾ ಮಾಡಲು ಅಧಿಕಾರವಿಲ್ಲ. ಏಕೆಂದರೆ ಕರ್ನಾಟಕ ಮೇಲ್ಮನವಿ ಪ್ರಕರಣದ ನಿಯಮ 34 ರಲ್ಲಿ ಇಬ್ಬರು ಸದಸ್ಯರ ಪೀಠ ಮಾತ್ರ ತೀರ್ಮಾನ ಮಾಡುವ ಅಧಿಕಾರ ಇದೆ. ಏಕ ಸದಸ್ಯ ಪೀಠದ ಆದೇಶ ಊರ್ಜಿತವಲ್ಲವೆಂದು ಆದೇಶವನ್ನು ಕಿತ್ತು ಹಾಕಿ ಮರು ಆದೇಶಕ್ಕೆ ನ್ಯಾಯಾಧಿಕರಣಕ್ಕೆ ವಾಪಸ್ ಮಾಡಲಾಯಿತು. (2013 Indlaw Kar 1780, 2013 (6) KLJ 395)

5. ರಿಟ್ ಮೇಲ್ಮನವಿಯಲ್ಲಿ ಕೇಳಿದ ಸ್ಪಷ್ಟೀಕರಣ, ಸಹಕಾರ ಬ್ಯಾಂಕ್‌ಗಳಿಗೆ ಸೆಕ್ಯೂರೈಟೇಷನ್ ಕಾಯಿದೆ ಕಲಂಗಳನ್ವಯ ವಾಗುತ್ತಿದೆಯೇ? ಸಂವಿಧಾನದಲ್ಲಿ ಕಾಯಿದೆ ರಚಿಸುವ ಅಧಿಕಾರ ಶಾಸಕಾಂಗಕ್ಕೆ ಇರುವುದರಿಂದ ಅಧಿಕಾರವನ್ನು ಚಲಾಯಿಸಿ ಷೆಡ್ಯೂಲ್ VII ರ ಪಟ್ಟಿ 1ಕ್ಕೆ ಸೇರಿಸಿದ್ದು. ಶ್ರೇಷ್ಠ ನ್ಯಾಯಾಲಯ ಮರ್ತಿಯಾ ಕೆಮಿಕರ್ಸ್‌ನಿ ಪ್ರಕರಣದಲ್ಲಿ, ಸಹಕಾರ ಬ್ಯಾಂಕ್‌ಗಳಿಗೆ ಅನ್ವಯವಾಗುತ್ತಿದೆ, ಎಂದು ತೀರ್ಪಿತ ನಂತರ, ಅದನ್ನು ಅನುಸರಿಸಲಾಗಿದೆ. ಆದ್ದರಿಂದ ಪ್ರಶ್ನೆಯನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆ.

1. ಸೆಕ್ಯೂರೈಟೇಷನ್ ಕಾಯಿದೆ ಕಲಂ 2 ಉಪಕಲಂ (1) ಕ್ಲಾಸ್ 1ರ ಸಂಖ್ಯೆ (1)/(v) ಸಂವಿಧಾನಾತ್ಮಕವಾಗಿದೆ.
2. ಸೆಕ್ಯೂರೈಟೇಷನ್ ಕಾಯಿದೆ ಕಲಂ 13, 14, 17, 18 ಮತ್ತು 19 ಸಹಕಾರ ಬ್ಯಾಂಕ್‌ಗಳಿಗೆ ಅನ್ವಯವಾಗುತ್ತದೆ.
3. ಕೇಂದ್ರ ಸರ್ಕಾರದ ನೋಟಿಫಿಕೇಷನ್ S.O.105(E) ದಿನಾಂಕ 28.01.2003 ಊರ್ಜಿತ.

(2011 Indlaw Kar 537)

6. ಕಾನೂನಿನಲ್ಲಿ ಯಾವುದೇ ಪ್ರಾಧಿಕಾರಕ್ಕೆ ಅಥವಾ ಅಧಿಕಾರಿಗೆ, ಕೊಟ್ಟ ಅಧಿಕಾರವನ್ನು ಮತ್ತೊಬ್ಬ ಅಧಿಕಾರಿಗೆ ವಹಿಸಲು ಕಾಯಿದೆಯಲ್ಲಿಯೇ ಅವಕಾಶ ನೀಡಿದಾಗ, ಪ್ರಾಧಿಕಾರ/ಅಧಿಕಾರಿಯ ಅಧಿಕಾರವನ್ನು ಕಿರಿಯ ಅಧಿಕಾರಿ ಚಲಾಯಿಸಿದಾಗ, ಆ ಆದೇಶ ಹಿರಿಯ ಅಧಿಕಾರಿ/ಪ್ರಾಧಿಕಾರ ಮಾಡಿದ ಆದೇಶವಾಗುತ್ತಿದೆ. ಮೇಲ್ಮನವಿ ಸಲ್ಲಿಸುವ ಪ್ರಸಂಗದಲ್ಲಿ ಪ್ರಾಧಿಕಾರ/ಹಿರಿಯ ಅಧಿಕಾರಿಗೆ ಮೇಲ್ಮನವಿ ಸ್ವೀಕರಿಸಲು ಅಧಿಕಾರ ಇಲ್ಲ. ಏಕೆಂದರೆ ವರ್ಗಾವಣೆಯಾದ ಅಧಿಕಾರ ಪ್ರಾಧಿಕಾರ/ಅಧಿಕಾರಿ ಮಾಡಿದ ಆದೇಶವಾಗುತ್ತಿದೆ. ಇದನ್ನು ಶ್ರೇಷ್ಠ ನ್ಯಾಯಾಲಯ 1998 Indlaw SC 1176 ರಲ್ಲಿನ ಅಂಶವನ್ನು ಗಮನಿಸಿ ತೀರ್ಮಾನಿಸಿದೆ. ಸಹಕಾರ ಸಂಘಗಳ ಕಾಯಿದೆ ಕಲಂ 106(1) ರಲ್ಲಿ ಮೇಲ್ಮನವಿ ಸಲ್ಲಿಸಲು, ಆದೇಶವನ್ನು ನಿಬಂಧಕರು ಮಾಡಿದ್ದಾರೆ, ಅದು ಸರ್ಕಾರಕ್ಕೆ ಮತ್ತು ನಿಬಂಧಕರ ಅಧಿಕಾರವನ್ನು ಚಲಾಯಿಸಲು 106(2)(ಬಿ) ರಲ್ಲಿ ಯಾವ ಅಧಿಕಾರಿ ಆದೇಶ ಹೊರಡಿಸುತ್ತಾನೋ ಅವನು ನಿಕರ ಪೂರ್ವ ಮೇಲಾಧಿಕಾರಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ಇದೆ. ಈ ಮೇಲ್ಕಂಡ ಅವಕಾಶವನ್ನು ಗಮನಿಸಿ, 1970 (11) Mys LJ 530 ನಲ್ಲಿನ ತೀರ್ಮಾನವನ್ನು ಒಪ್ಪಿ ಸಹಕಾರ ಕಾಯಿದೆಯಲ್ಲಿ ವರ್ಗಾವಣೆ ಯಾದ ಅಧಿಕಾರ ಚಲಾಯಿಸಿದ, ನಿಕಟ ಪೂರ್ವ ಮೇಲಾಧಿಕಾರಿಗೆ ಮೇಲ್ಮನವಿ ಸ್ವೀಕರಿಸಲು ಅಧಿಕಾರ ಇದೆ. (2011 Indlaw Kar 539)

7. ಸಹಕಾರ ಸಂಘಗಳು ಕಾಯಿದೆ ಕಲಂ 34 ರನ್ವಯ ಸಂಬಳದಲ್ಲಿ ಕಂತು ಮುರಿದುಕೊಂಡು 14 ದಿವಸಗಳಲ್ಲಿ ಸಂಘಕ್ಕೆ ಪಾವತಿ ಮಾಡುವುದು ಸಂಬಳ ಬಟವಾಡೆ ಮಾಡುವ ಅಧಿಕಾರಿ ಕೊಟ್ಟ ಅಧಿಕಾರ. ಆ ಅಧಿಕಾರ ಚಲಾಯಿಸದ ಸಂಬಳ ಬಟವಾಡೆ ಮಾಡುವ ಅಧಿಕಾರಿ ಮೇಲೆ ಕಲಂ 109(4) ರನ್ವಯ ಅವರದ/ಶಿಕ್ಷೆಯಲ್ಲಿ ದಂಡ/ಜೈಲು ಶಿಕ್ಷೆ ವಿಧಿಸಲು ಅವಕಾಶ ಇರುವುದನ್ನು ಎತ್ತಿ ಹಿಡಿದಿದ್ದಲಿ ಏಕ ಸದಸ್ಯ ಪೀಠದ ಆದೇಶದಲ್ಲಿ ಯಾವುದೇ ನ್ಯೂನತೆ ಇಲ್ಲ. ಆದ್ದರಿಂದ ಕಲಂ 104(4) ರಲ್ಲಿ ಕ್ರಮ ಜರುಗಿಸಲು ವಸೂಲಾತಿ ಅಧಿಕಾರಿಗೆ ಅಧಿಕಾರ ಇದೆ. (2010 Indlaw Kar 309, 2010 (4)

KLJ 516)

8. ಯಾವುದೇ ಆದೇಶ/ಡಿಕ್ರಿ/ತೀರ್ಪನ್ನು ಸಿವಿಲ್ ನ್ಯಾಯಾಲಯದ ಮೂಲಕ ಜಾರಿ ಮಾಡಬೇಕಾದರೆ (ಕಲಂ 101 ರಡಿ), ನಿಬಂಧಕರ ಪ್ರಮಾಣ ಪತ್ರ ಇರಬೇಕು. ಅಥವಾ ನಿಬಂಧಕರು ನಿಗದಿ ಪಡಿಸಿದ ಅಧಿಕಾರಿ ಮುಖಾಂತರ ಜಾರಿ ಮಾಡಬಹುದು. (2010 Indlaw Kar 390, 2010 (5) KLJ 574)

9. ಕಾಯಿದೆ ಕಲಂ 38(5) ರಡಿ ಮಾರಾಟವನ್ನು 1993 ರಲ್ಲಿ ಮಾಡಿ ಸಹಾಯಕ ನಿಬಂಧಕರು, ಡಿಕ್ರಿ ಪಡೆದ ಸಂಸ್ಥೆಗೆ ಬಾಕಿ ವಸೂಲಿ ಮಾಡಲು ಸಹಾಯ ಮಾಡುವ ಅಸಹಜ ಆತುರದಲ್ಲಿ ಸರಿಯಾದ ಪ್ರಕ್ರಿಯೆ ಮಾಡಿಲ್ಲ. ದಾಖಲೆಗಳನ್ನು ತಿದ್ದಿರುವುದು ಮತ್ತು ಆತುರ ತೋರಿಸಿರುವುದನ್ನು ಗಮನಿಸಿದರೆ, ಈ ಪ್ರಕರಣವನ್ನು ಮಾರಾಟಾಧಿಕಾರಿಗೆ ವರ್ಗಾಯಿಸಿದರೆ, ಸರಿಯಾದ ಕ್ರಮವಾಗುವುದಿಲ್ಲ. ಏಕೆಂದರೆ ಪ್ರಕರಣದ ಎಲ್ಲಾ ದಾಖಲೆಗಳು ಲಭ್ಯ ಇರುವುದರಿಂದ ತೀರ್ಮಾನ ಕೊಡಲು ಸಾದ್ಯ. ಆದ್ದರಿಂದ ರಿಟ್ ಅರ್ಜಿದಾರನ ಮನವಿ ಪುರಸ್ಕರಿಸಿ ಅರ್ಜಿದಾರನ ಆಸ್ತಿ ಬ್ಯಾಂಕಿಗೆ ಅಡಮಾನವಾಗಿರುವುದರಿಂದ ಮುಂದಿನ ವಸೂಲಾತಿ ಕ್ರಮ ಜರುಗಿಸಲು ಸೂಚಿಸಿ, ಖರೀದಿದಾರನಿಗೆ ಅವನಿಂದ ವಸೂಲಾದ ಹಣವನ್ನು ಮರು ಪಾವತಿ ಮಾಡಲು ಆದೇಶಿಸಿದೆ ಮತ್ತು ಬಾಕಿದಾರ/ಅರ್ಜಿದಾರನ ಆಸ್ತಿ ಮಾರಾಟದಿಂದ ಬ್ಯಾಂಕಿನ ಹಣ ವಸೂಲಿ ಮಾಡಿಕೊಳ್ಳತಕ್ಕದ್ದು. ಇದಕ್ಕೆ ಪೂರಕವಾಗಿ AIR 1995 SC 1971, (1995) 3 SCC 579 ಆಧಾರಿಸಲಾಗಿದೆ. (2008 Indlaw Kar 489, 2009 (4) KLJ 419)

10. ಬ್ಯಾಂಕ್ ಡಿಕ್ರಿ ಪಡೆದು ಜಾರಿ ಮಾಡಲು ವಸೂಲಾತಿ ಅಧಿಕಾರಿಗೆ ರವಾನಿಸಿದಾಗ, ಮಾರಾಟಾಧಿಕಾರಿ ಮಾರಾಟ ಮಾಡಿದ ನಂತರ, ಹಣ ಪಾವತಿಗೆ ನಿಗದಿ ಪಡಿಸಿದ ಅವಧಿಯೊಳಗೆ ಹಣ ಪಾವತಿಸದಿದ್ದರೆ ಅವಧಿಯನ್ನು ವಿಸ್ತರಿಸುವ ಅಧಿಕಾರ ಮಾರಾಟಾಧಿಕಾರಿಗೆ ಇಲ್ಲ. ಅವನ್ನು ಹಣ ಪಾವತಿಯಾಗದಿದ್ದರೆ, ಮಾರಾಟವನ್ನು ರದ್ದುಗೊಳಿಸಿ ಪುನಃ ಮಾರಾಟ ಪ್ರಕ್ರಿಯೇ ಪ್ರಾರಂಭಿಸಬೇಕು. ಸಾಲಗಾರ ಡಿಕ್ರಿಯಲ್ಲಿ ದೋಷವಿದೆ ಎಂದು ಮಾರಾಟಾಧಿಕಾರಿ/ವಸೂಲಾತಿ ಅಧಿಕಾರಿ ಮುಂದೆ ಪ್ರಶ್ನಿಸುವಂತಿಲ್ಲ. ಆದರೆ ಮಾರಾಟ ಮಾಡುವಾಗ ನೀತಿ ನಿಯಮಗಳನ್ನು ಚಾಚೂತಪ್ಪದೆ ಪಾಲಿಸುವ ಜವಾಬ್ದಾರಿ ಮಾರಾಟಾಧಿಕಾರಿಗೆ ಸೇರಿದ್ದು, ನಿಯಮ 38 ಪಾಲಿಸಬೇಕು. ಮಾರಾಟವನ್ನು ಸಾಲಗಾರನ ಮನವಿಗಳನ್ನು ಪುರಸ್ಕರಿಸದೆ, ಮರು ಮಾರಾಟಕ್ಕೆ ವ್ಯವಸ್ಥೆ ಮಾಡಬೇಕು. (2008 Indlaw Kar 345, 2009 (1) KLJ 493)

11. ಸಾಲಗಾರನ ಮೇಲೆ ಡಿಕ್ರಿ ಪಡೆದು ನಂತರ ಸಾಲಗಾರ ಕರ್ನಾಟಕ ಮೇಲ್ಮನವಿ ಪ್ರಾಧಿಕರಣಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಅದನ್ನು ವಜಾಗೊಳಿಸಲಾಯಿತು. ನಿಬಂಧಕರ ಕಲಂ 101 (1) ರ ಪ್ರಕಾರ ಪ್ರಮಾಣ ಪತ್ರ ಪಡೆದು ಜಾರಿಗೆ ಅರ್ಜಿ ಸಲ್ಲಿಸಲಾಯಿತು. ಇದು 20 ವರ್ಷಗಳ ನಂತರ ಸಲ್ಲಿಕೆಯಾಗದೆ ಹಾಗೂ 12 ವರ್ಷದೊಳಗೆ ಜಾರಿ ಮಾಡದಿದ್ದರೆ ಅದು ಊರ್ಜಿತವಲ್ಲವೆಂದು, ಅದು ಕಾಲಮಿತಿ ಕಾಯಿದೆಗೆ ವಿರುದ್ದವೆಂದು ವಾದಿಸಿದರು. ಸಿವಿಲ್ ನ್ಯಾಯಾಲಯ ಸಂಘದ ಪರವಾಗಿ ಆದೇಶಿಸಿ ವಸೂಲಿ ಮಾಡಿತು. ಕಲಂ 100 ಮತ್ತು 101 ನ್ನು ಗಮನಿಸಿದಾಗ ಡಿಕ್ರಿ ಪಡೆದಂತಹ ಸಂಘ ಯಾವುದೇ ಜಾರಿ ಕ್ರಮವನ್ನು ಜರುಗಿಸಲು ಅಧಿಕಾರವಿದ್ದು. ಒಂದು ಕ್ರಮದ ಮುಖಾಂತರ ಜಾರಿ ಮಾಡಲಾಗದಿದ್ದರೆ ಮತ್ತೊಂದು ಕ್ರಮ ಜರುಗಿಸಲು ಅವಕಾಶವಿರುವುದರಿಂದ, ನಿಬಂಧಕರ ಪ್ರಮಾಣ ಪತ್ರದ ಜಾರಿ ಮಾಡಬಹುದು ಇದು ವಿಳಂಬ ಕಾಯಿದೆಗೆ ಅನ್ವಯಿಸದು. ಡಿಕ್ರಿ ಪಡೆದ ವಿವಿಧ ನ್ಯಾಯಾಲಯಗಳ ಮುಖಾಂತರ ಪರಿಹಾರ ಕೇಳುತ್ತಿದ್ದು. ಇದು ಊರ್ಜಿತ. ಸಿವಿಲ್ ನ್ಯಾಯಾಲಯದಲ್ಲಿ 12 ವರ್ಷಗಳ ನಂತರ ಜಾರಿ ಮಾಡಲು ಸಾಧ್ಯವಿಲ್ಲ ಆದರೆ ನಿಬಂಧಕರ

ಪ್ರಮಾಣ ಪತ್ರದ ಮೇರೆ ಜಾರಿ ಮಾಡುವಾಗ 12 ವರ್ಷಗಳಾಗಿಲ್ಲ. ಆದ್ದರಿಂದ ರಿಟ್ ವಜಾಗೊಳಿಸಿತು. (2008 Indlaw Kar 212, 2008 (6) KLJ 643)

12. ಸೆಕ್ಯೂರೈಟೇಷನ್ ಕಾಯಿದೆಯಲ್ಲಿ ಬ್ಯಾಂಕ್ ನೀಡಿದ ಸಾಲ ವಸೂಲಿ ಮಾಡಲು ಅಧಿಕಾರ ಇದೆ. ಆದರೆ ರಾಜ್ಯ ಸರ್ಕಾರ ತನ್ನ ಆರ್ಥಿಕ ಸ್ವಾಯತ್ತತೆಯನ್ವಯ, ಈ ಪ್ರಕರಣಗಳಲ್ಲಿ ಕರ ವಸೂಲಾತಿಗೆ ಪ್ರಾಶಸ್ತ್ಯ ಇದ್ದರೂ, ಅದು ಸಾಮಾನ್ಯ ಭದ್ರತೆ ಇಲ್ಲದ ಸಾಲ ನೀಡಿದಾಗ ಮಾತ್ರ ರಾಜ್ಯ ಸರ್ಕಾರದ ಪ್ರಾಶಸ್ತ್ಯ ಇರತಕ್ಕದ್ದು. ಆದರೆ ಸೆಕ್ಯೂರೈಟೇಷನ್ ಕಾಯಿದೆಯಲ್ಲಿ ಭದ್ರತೆ ಪಡೆದ ಸಾಲಗಳಿಗೆ ಸರ್ಕಾರದ ಪ್ರಾಶಸ್ತ್ಯ ಇರತಕ್ಕದ್ದಲ್ಲ. (2008 Indlaw Kar 13, 2008 (5) KLJ 81, 2008 (3) KLJ 608)

13. ಸಾಲ ವಸೂಲಾತಿಗೆ ಕಲಂ 70 ರನ್ವಯ ದಾವಾ ದಾಖಲಿಸಿ ಡಿಕ್ರಿ ಪಡೆದ ನಂತರ, ಕಾಯಿದೆ ಕಲಂ 34 ನ್ನು ಅನ್ವಯಿಸಬಹುದು. ಕಲಂ 34 ರಲ್ಲಿ ಸಂಬಳ ಬಟವಾಡೆ ಮಾಡುವ ವ್ಯಕ್ತಿ, ಸಹಕಾರ ಸಂಘದ ಸದಸ್ಯನಿಗೆ ಸಾಲ ಮಂಜೂರಿ ಮಾಡುವಾಗ ಸಂಬಳದಲ್ಲಿ ಕಂತುಗಳನ್ನು ಮುರಿದು, ಸಂಘಕ್ಕೆ 14 ದಿವಸಗಳಲ್ಲಿ ಜಮಾ ಮಾಡುವ ಜವಾಬ್ದಾರಿ ಇದ್ದರೂ. ಕಲಂ 70 ರಲ್ಲಿ ದಾವಾ ಹೂಡಿದಾಗ ಅಥವಾ ಡಿಕ್ರಿ ಪಡೆದ ನಂತರ, ಕಲಂ 34 ರನ್ನು ಸಂಬಳದಲ್ಲಿ ಮುರಿದು ಸಂಘಕ್ಕೆ ಜಮಾ ಮಾಡಲು ಸಂಬಳ ಬಡವಾಡಿ ಮಾಡುವ ಜವಾಬ್ದಾರಿ ಇದೆ. ಆದ್ದರಿಂದ ಕಲಂ 70 ರಲ್ಲಿ ಪಡೆದ ಆದೇಶದಿಂದ ಕಲಂ 34 ರನ್ವಯ ವಸೂಲಿ ಮಾಡಲು ಅವಕಾಶ ಇದೆ. (2008 Indlaw Kar 173, 2009 (1) KLJ 36)

14. ಕೇಂದ್ರ ಸರ್ಕಾರದ ಕಾಯಿದೆಗಳಲ್ಲಿ ಸಾಲ ವಸೂಲಿಯಲ್ಲಿ ಪ್ರಾಶಸ್ತ್ಯವಿದೆ ಎಂದು ತಿಳಿಸಿಲ್ಲವಾದ್ದರಿಂದ, ಜಾರಿ ಮಾಡುವ ಸಂದರ್ಭದಲ್ಲಿ, ಅದರಲ್ಲೂ ಸಾಮಾನ್ಯ ದಾವಾ ಅಭದ್ರತೆ ಸಾಲಗಳನ್ನು ಹೊರತು ಪಡಿಸಿ, ಭದ್ರತೆ ಆಧಾರದ ಸಾಲಗಳ ವಸೂಲಾತಿಯಲ್ಲಿ ಕರ ವಸೂಲಿಯಲ್ಲಿ ಪ್ರಾಶಸ್ತ್ಯ ಇರತಕ್ಕದ್ದಲ್ಲ. ಭದ್ರತೆ ಆಧಾರದ ಸಾಲಗಳ ವಸೂಲಾತಿಗೆ ಬ್ಯಾಂಕ್‌ಗೆ ಪ್ರಾಶಸ್ತ್ಯ ಇರತಕ್ಕದ್ದು. (2008 Indlaw Kar 45, AIR 2008 Kar 70, 2089 (2) DRTC 219, 2008 (226) ELT 325, 2008(12) STR 671)

15. ಸೆಕ್ಯೂರೈಟೇಷನ್ ಕಾಯಿದೆ ಅನ್ವಯವಾಗುವುದರ ಬಗ್ಗೆ – ಸಹಕಾರ ಬ್ಯಾಂಕ್‌ಗಳಿಗೆ ಅನ್ವಯವಾಗುವುದಿಲ್ಲ – ವಶ ಪಡಿಸಿಕೊಂಡ ಆಸ್ತಿಯನ್ನು ವಾಪಸ್ ಮಾಡಲು ಆದೇಶಿಸಿದೆ.

**ಸೂಚನೆ : ಈ ತೀರ್ಪನ್ನು ಅನೂರ್ಜಿತಗೊಳಿಸಲಾಗಿದೆ – (2013 Indlaw Kar 1780, 2013 (6) KLJ 395) ರಲ್ಲಿ**

(2007 Indlaw Kar 512, AIR 2008 Kar 20)

16. ಮಾರಾಟ ಮಾಡಿದ ಒಂದು ಆಸ್ತಿಯನ್ನು, ನೋಟೀಸ್ ನೀಡಲಾರದೆ ರದ್ದು ಪಡಿಸತಕ್ಕದ್ದಲ್ಲ. ರದ್ದು ಮಾಡುವ ದಿನಾಂಕದಂದು, ಆ ಆಸ್ತಿಯು ಅರ್ಜಿದಾರನ ಸುಪರ್ದಿನಲ್ಲಿ ಇದ್ದು, ಅದನ್ನು ಸಾಬೀತು ಪಡಿಸಿದ್ದಾರೆ. (2007 Indlaw Kar 545, 2009 (2) KLJ 291)

17. ಏಕ ಸದಸ್ಯ ಪೀಠ ಮಾರಾಟ ದೃಡೀಕರಣವನ್ನು ರದ್ದು ಪಡಿಸಿ, ಪುನಃ ಮಾರಾಟ ಪ್ರಕ್ರಿಯೆ ಮಾಡಲು ನೀಡಿದ ಆದೇಶವನ್ನು ರದ್ದು ಪಡಿಸಿ, ಸಾಲಗಾರ ಬ್ಯಾಂಕಿಗೆ ಬಾಕಿ ಇರುವ, ಮತ್ತಿತರ ಖರ್ಚಿನ ಹಣವನ್ನು ತುಂಬಲು ಒಪ್ಪಿ ಕೊಂಡಿರುವುದರಿಂದ, ಈ ಪ್ರಕರಣವನ್ನು ಮತ್ತೊಮ್ಮೆ ಮರು ಮಾರಾಟ ಮಾಡಲು ಆದೇಶಿಸಿದ, ಏಕ ಸದಸ್ಯ ಪೀಠದ ಆದೇಶ ಕಿತ್ತು ಹಾಕಿ, ಬ್ಯಾಂಕ್‌ಗೆ ಹಣ ತುಂಬಲು ಸಾಲಗಾರ ತಯಾರಿರುವುದರಿಂದ, ಮರು ಹರಾಜು ಅವಶ್ಯಕತೆ ಇಲ್ಲ. (2006 Indlaw Kar 222, 2006 (5) KLJ 233)

18. ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗವಿದೆಯೆಂದು ಕುಟುಂಬದ ಸದಸ್ಯರು ಪರಿಹಾರ ಕೇಳಿದಾಗ, ಸಾಲ ಕೊಟ್ಟ ಬ್ಯಾಂಕ್, ತನ್ನ ಸಾಲಕ್ಕೆ ಅಡಮಾನ ಮಾಡಿಕೊಂಡ ಆಸ್ತಿಯನ್ನು ಮಾರಾಟ ಮಾಡಿ ಬಾಕಿ ಹಣ

ವಸೂಲಿ ಮಾಡಿಕೊಳ್ಳಬಹುದು. ಆಸ್ತಿಯಲ್ಲಿ ಭಾಗ ಕೇಳಿದ ಕುಟುಂಬ ಸದಸ್ಯರು ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗ ಕೇಳಿ ಪಡೆದರೂ ಬ್ಯಾಂಕಿಗೆ ಅಡಮಾನ ಮಾಡಿದ ಆಸ್ತಿ ಮಾರಾಟದಿಂದ ವಸೂಲಿ ಮಾಡಲು ಬ್ಯಾಂಕ್‌ಗೆ ಯಾವುದೇ ತೊಡಕು ಇರತಕ್ಕದ್ದಲ್ಲ. (2005 Indlaw Kar 306, AIR 2006 Kar 21, 2006 (3) BC 9, 2006 (1) DRTC 356, 2005 (6) KLJ 337)

19. ಬ್ಯಾಂಕಿನಿಂದ ವಾಹನ ಖರೀದಿ ಸಾಲ ಪಡೆದು ವಾಹನವನ್ನು ಬ್ಯಾಂಕಿನ ಹೆಸರಿಗೆ ಅಡಮಾನ ಮಾಡಿದ ನಂತರ, ಆ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಮಾರಾಟ ಮಾಡಲು ಅಧಿಕಾರ ಇದೆ. (ಸಾಲದ ಕಂತು ವಾಪಸ್ ಕಟ್ಟದಿದ್ದರೆ). ಶರತ್ತುಗಳನ್ನು ಒಪ್ಪಿದ ನಂತರ, ಅವುಗಳನ್ನು ಪೂರೈಸುವುದು ಸಾಲಗಾರನ ಕರ್ತವ್ಯ. (2003 Indlaw Kar 147, AIR 2003 Kar 484, 2005 (1) BC 74)

20. ಆದೇಶಗಳನ್ನು ಜಾರಿ ಮಾಡುವಾಗ ಮಾರಾಟಕ್ಕೆ ಇಟ್ಟ ಆಸ್ತಿಯನ್ನು ಸಹಕಾರ ಸಂಘ ಬಿಡ್‌ನಲ್ಲಿ ಭಾಗವಹಿಸಿ ಖರೀದಿ ಮಾಡತಕ್ಕದ್ದಲ್ಲ ನಿಯಮ 38ಎ ರಲ್ಲಿ ನಿಗದಿ ಪಡಿಸಿದ ನಿಯಮದಂತೆ ಇಲ್ಲ. ಈ ನಿಯಮದ ಉದ್ದೇಶ ಸಹಕಾರಿ ಸಂಘದ ಮತ್ತು ಸಾಲಗಾರನ ಹಿತ ಕಾಪಾಡಲು ರೂಪಿಸಲಾಗಿದೆ. (1981 Indlaw Kar 103, AIR 1982 Kar 89)

21. ಉತ್ತರ ಪ್ರದೇಶ ಕಾಯಿದೆಯಡಿ ನೋಂದಾಯಿಸಿದ ಒಂದು ಸಹಕಾರ ಸಂಘ, ಬೀಜ ಮತ್ತು ಗೊಬ್ಬರ ಖರೀದಿಗೆ ನೀಡಿದ ಸಾಲ ವಸೂಲಾತಿಗೆ, ಭಾದ್ಯತೆ ತೆಗೆದುಕೊಂಡ ಆಸ್ತಿಯನ್ನು ಮಾರಾಟ ಮಾಡಲು ಮುಂದಾದಾಗ, ವಸೂಲಾಧಿಕಾರಿ, ಕಲಂ 34ರಲ್ಲಿ ಕೊಟ್ಟ ಭಾದ್ಯತೆಯ ಆಧಾರದ ಮೇಲೆ ವಸೂಲಿ ಕ್ರಮ ಜರುಗಿಸಿರುವುದು ತಪ್ಪು. ಕಲಂ 39 ಮತ್ತು 91ನ್ನು ಒಟ್ಟು ಗೂಡಿಸಿ ವಿಮರ್ಶಿಸಿದಾಗ ಸ್ಥಿರಾಸ್ತಿಯನ್ನು ಮಾರಾಟ ಮಾಡುವ ಅಧಿಕಾರ ಇಲ್ಲವೆಂದು, ಆ ರೀತಿ ಸ್ಥಿರಾಸ್ತಿಯನ್ನು ಮಾರಾಟ ಮಾಡಬೇಕಾದರೆ, ದಾವ ಪ್ರಕರಣ ದಾಖಲಿಸಿ ಡಿಕ್ರಿ ಪಡೆದ ನಂತರ, ಸ್ಥಿರಾಸ್ತಿ ಮಾರಾಟ ಮಾಡಬಹುದೆಂದು ತೀರ್ಮಾನಿಸಿತು. ಈ ತೀರ್ಮಾನವನ್ನು ಶ್ರೇಷ್ಠ ನ್ಯಾಯಾಲಯ, ಎತ್ತಿ ಹಿಡಿದು, ಮಧ್ಯಪ್ರವೇಶ ಮಾಡುವ ಅವಶ್ಯಕವಿಲ್ಲವೆಂದು ಪ್ರಕರಣ ವಜಾ ಮಾಡಿತು. (1996 Indlaw SC 1624, (1997) 2 SCC 682)

# ಲೇಖನಗಳು

## ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 69ನೇ ಪ್ರಕರಣದ ಮೇರೆಗೆ ಅಧಿಭಾರ ವ್ಯವಹರಣೆಗಳು

ನಿಘಂಟಿನಲ್ಲಿ ನೀಡಲಾದ ಅರ್ಥ ಪ್ರಕಾರ. 'ಅಧಿಭಾರ' ಪದಕ್ಕೆ "ಅಧಿಕ" ಅಥವಾ "ಹೆಚ್ಚುವರಿ ಶುಲ್ಕ" ವಿಧಿಸುವುದು ಎಂಬ ಅರ್ಥವಿದೆ. ಹೆಚ್ಚುವರಿ ಮತ್ತು ಸಾಮಾನ್ಯ ದರಕ್ಕಿಂತ ಹೆಚ್ಚಾಗಿ ವಿಧಿಸಿದ ಯಾವುದೇ ಶುಲ್ಕವನ್ನು 'ಅಧಿಭಾರ' ಎಂದು ಕರೆಯಲಾಗುತ್ತದೆ. ಸಹಕಾರ ಸಂಘಗಳ ಅಧಿನಿಯಮದ ಮೇರೆಗೆ ಈ ಪ್ರಕರಣದ ಉದ್ದೇಶವೆಂದರೆ, ದುರುಪಯೋಗಗಳು ಮತ್ತು ವಂಚನೆಗಳೂ ಒಳಗೊಂಡಂತೆ, ಗಂಭೀರ ಕ್ರಮದೋಷಗಳನ್ನು ಪರಿಶೀಲಿಸುವುದಾಗಿದೆ ಮತ್ತು ಮೋಸ ಮಾಡಿದ ವ್ಯಕ್ತಿಗಳಿಂದ, ದೋಷಪೂರ್ಣ ಆಡಳಿತ ಮತ್ತು ತಪ್ಪು ನಿರ್ವಹಣೆಯ ಕಾರಣದಿಂದ ಉಂಟಾಗಬಹುದಾದಂತ ಕೊರತೆಯನ್ನು ಸಹಕಾರ ಸಂಘಕ್ಕೆ ತುಂಬಿಕೊಡಲು ವ್ಯಕ್ತಿಗಳನ್ನು ಜವಬ್ದಾರರನ್ನಾಗಿ ಮಾಡುವುದಾಗಿದೆ. ಅಧಿಭಾರದ ಉಪಬಂಧವು ಪ್ರತಿ ಬಂಧಕ ಹಾಗೂ ಪರಿಹಾರತ್ಮಕ ಸ್ವರೂಪದಲ್ಲಿದೆ. ಈ ಉಪಬಂಧವು ಆಡಳಿತ ಸಮಿತಿಯ ಸದಸ್ಯರು ಮತ್ತು ಸಹಕಾರ ಸಂಘದ ಅಧಿಕಾರಿಗಳು, ಸಹಕಾರ ಸಂಘದ ವ್ಯಕ್ತಿಗಳು ನಷ್ಟಕ್ಕೆ ಕಾರಣವಾಗುವಂತಹ

ಅಪ್ರಮಾಣಿಕತೆಯನ್ನು ಪರಿಶೀಲಿಸಲು ಸಮರ್ಥವಾಗಿದ್ದು, ಸಹಕಾರ ಸಂಘಗಳ ಅಧಿನಿಯಮ ಒಂದು ಉಪಬಂಧವಾಗಿದ್ದು, ಇದನ್ನು ರಿಜಿಸ್ಟ್ರಾರ್‌ನು ಸ್ವತಃ ಅಥವಾ ಸಹಕಾರ ಸಂಘದ ಕೋರಿಕೆಯ ಮೇರೆಗೆ, ಸಂಘದ ಸ್ವತ್ತಿನ ನಷ್ಟಕ್ಕೆ ಕಾರಣವಾದವರ ಸಂಬಂಧ ವಸೂಲಿ ಮಾಡಲು ಅಧಿಕಾರ ಹೊಂದಿರುತ್ತಾನೆ.

'ಕೊರತೆ' ಪದವನ್ನು 'ನಷ್ಟ' ಪದಕ್ಕೆ ಬದಲಾಗಿ ಪ್ರಕರಣದಲ್ಲಿ ಬಳಸಲಾಗಿದೆ. ವ್ಯಾಪಾರ ಸಂಸ್ಥೆಯೊಂದರ ನಷ್ಟವು ಊಹಾತ್ಮಕ ಸ್ವರೂಪದ್ದಾಗಿರುತ್ತದೆ. 'ಕೊರತೆ' ಪದವು ಸಹಕಾರ ಸಂಘದ ಸ್ವತ್ತಿನಲ್ಲಿ ವಾಸ್ತವಿಕವಾಗಿ ಖೋತಾ ಆಗಿರುತ್ತದೆ ಮತ್ತು ಊಹೆಯನ್ನು ಆಧರಿಸಿರುವುದಿಲ್ಲ.

"ಸ್ವತ್ತು" ಪದವು ವ್ಯಾಪಾರದಲ್ಲಿನ ಸಂಗ್ರಹವನ್ನು ಸೂಚಿಸುತ್ತದೆ. ಇದು ಸ್ಥಿರ ಅಥವಾ ಚರಸ್ವತ್ತಿನ ರೂಪದಲ್ಲಿರಬಹುದು. ಭೂಮಿ ಮತ್ತು ಕಟ್ಟಡಗಳು. ಯಂತ್ರ, ಖಾಯಂ ಸ್ಥಾವರಗಳು, ಇವುಗಳನ್ನು ಸ್ಥಿರ ಸ್ವತ್ತುಗಳೆಂದು ಮತ್ತು ಕೈಯಲ್ಲಿರುವ ಮತ್ತು ಬ್ಯಾಂಕಿನಲ್ಲಿರುವ ನಗದು, ಹೂಡಿಕೆಗಳು, ಸಾಲಗಳಂಥ ಬಾಬ್ತುಗಳು ಚರಸ್ವತ್ತುಗಳಾಗಿರುತ್ತದೆ.

ಪ್ರಕರಣದಲ್ಲಿ, ಸಹಕಾರ ಸಂಘಕ್ಕೆ ಸೇರಿದ ಹಣ ಅಥವಾ ಇತರ ಸ್ವತ್ತಿಗೆ ನ್ಯಾಯದ ಉಲ್ಲಂಘನೆ ಅಥವಾ ನಿರ್ಲಕ್ಷ್ಯ ಅಥವಾ ದುರ್ವಿನಿಯೋಗ ಅಥವಾ ಮೋಸದಿಂದ ನಷ್ಟ ಉಂಟು ಮಾಡುವುದನ್ನು ಉಪಬಂಧಿಸಿದೆ. ಮೇಲಿನ ಪದಗಳನ್ನು ಈ ಮುಂದಿನಂತೆ ಪರಿಭಾಷಿಸಬಹುದು.

**(i) ವಿಶ್ವಾಸ ಭಂಗ :–**

'ವಿಶ್ವಾಸ' ಎಂದರೆ ಮತ್ತೊಬ್ಬನ ಬಗೆಗೆ ವಿಶ್ವಾಸವಿಡುವುದು ಮತ್ತು ವಿಶ್ವಾಸ ಭಂಗ ಎಂದರೆ ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಕಾನೂನಿಂದ ಪ್ರಾಪ್ತವಾಗಿ ವಿಧಿಸಲಾದ ಯಾವುದೇ ಕರ್ತವ್ಯ ಅಥವಾ ಹೊಣೆಗಾರಿಕೆ ಅಥವಾ ವಿಶ್ವಾಸದಿಂದಿರುವುದನ್ನು ಉಲ್ಲಂಗಿಸುವುದು. ವಿಶ್ವಾಸ ಭಂಗವು ಮತ್ತೊಬ್ಬರ ಸ್ವತ್ತನ್ನು ಮೋಸದಿಂದ, ಅಪ್ರಮಾಣಿಕವಾಗಿ ಬಳಸುವುದು ಅಥವಾ ಅಂಥ ವಿಶ್ವಾಸಪಡಿಸಿದ, ನಿರ್ವಹಿಸಬೇಕಾದ ಕಾನೂನಿನ ಯಾವುದೇ ವಿಧಾನದ ನಿರ್ದೇಶನವನ್ನು ಉಲ್ಲಂಘಿಸಿ ಸ್ವತ್ತನ್ನು ವಿಲೆ ಮಾಡುವುದು.

**(ii) ದುರುಪಯೋಗ :–**

ದುರುಪಯೋಗದಲ್ಲಿ, ಸ್ವತ್ತು ಅಪರಾಧಿಯ ಸ್ವಾಧೀನಕ್ಕೆ ಬರುತ್ತದೆ. ಅಪರಾಧ ವಿಶ್ವಾಸ ಭಂಗದಲ್ಲಿ, ಅಪರಾಧಿಯು ಕಾನೂನು ಸಮ್ಮತವಾಗಿ ಸ್ವತ್ತನ್ನು ವಹಿಸಿಕೊಂಡಿರುತ್ತಾನೆ ಮತ್ತು ಅವನು ತನ್ನ ಬಗ್ಗೆ ಇಡಲಾದ ವಿಶ್ವಾಸವನ್ನು ಉಳಿಸಿಕೊಳ್ಳುವ ಬದಲು ಅಪ್ರಮಾಣಿಕವಾಗಿ ಹಣವನ್ನು ದುರುಪಯೋಗ ಪಡಿಸಿರುತ್ತಾನೆ ಅಥವಾ ಯಾರೇ ಇತರ ವ್ಯಕ್ತಿಗೆ ಉದ್ದೇಶ ಪೂರ್ವಕವಾಗಿ ತೊಂದರೆ ಮಾಡಿರುತ್ತಾನೆ.

ದುರುಪಯೋಗ ಪದದ ಬಗೆಗೆ ಭಾರತ ದಂಡ ಸಂಹಿತೆಯ 403ನೇ ಪ್ರಕರಣದಲ್ಲಿ ಪರಿಭಾಷಿಸಲಾಗಿದೆ. ಇದರ ಪ್ರಕಾರ ಸ್ವತ್ತಿಗೆ ಸಂಬಂಧಿಸಿದಂತೆ ಶಾಶ್ವತವಾಗಿ, ಇಲ್ಲವೆ ತಾತ್ಕಾಲಿಕವಾಗಿ ಅಕ್ರಮ ಪರಿವರ್ತನೆಯ ಅಪ್ರಮಾಣಿಕ ದುರುಪಯೋಗದ ಅಪರಾಧವು ಅಪರಾಧಿಯ ಸ್ವಾಧೀನದಲ್ಲಿ ಯಾವುದೇ ತಪ್ಪಿಲ್ಲದೆ ಇರುತ್ತದೆ.

**(iii) ನಿರ್ಲಕ್ಷ್ಯ :–**

ಈ ಪದವನ್ನು, ಸದರಿ ಪ್ರಕರಣದಲ್ಲಿ, ಈ ಮೊದಲು ವ್ಯಕ್ತಿಯ ಉದ್ದೇಶ ಪೂರ್ವಕ ನಿರ್ಲಕ್ಷ್ಯವನ್ನು ಸಾಬೀತುಪಡಿಸುವುದು ಅವಶ್ಯವಿಲ್ಲ ಎಂಬುದು ಕಂಡು ಬಂದದ್ದರಿಂದ, ಕರ್ನಾಟಕ ಅಧಿನಿಯಮ 1976ರ 71ರಲ್ಲಿ ತಿದ್ದುಪಡಿ ಮೂಲಕ ನಿರ್ಲಕ್ಷ್ಯ ಉಳಿಸಿಕೊಂಡು ಉಳಿದಿದ್ದನ್ನು ಬಿಟ್ಟುಬಿಡಲಾಯಿತು. ಇದರ ಪ್ರಕಾರ, ಸಹಕಾರ ಸಂಘದ ಹಣವನ್ನು ಉಳಿಸಿ ಕೊಂಡಂತಹ ವ್ಯಕ್ತಿಯ ಕ್ರಮವು ಉದ್ದೇಶಪೂರ್ವಕವಾಗಿತ್ತು. ಎಂಬುದು ತಿಳಿದು ಬರಬೇಕು. ಪ್ರಸಕ್ತ ತಿದ್ದುಪಡಿ ಉಪಬಂಧದಲ್ಲಿ ಕೇವಲ ನಿರ್ಲಕ್ಷ್ಯ ಪದ ಇರುವುದರಿಂದ ಇದನ್ನು ಅಧಿಕೃತ ಕರ್ತವ್ಯ ನಿರ್ವಹಣೆಯಲ್ಲಿ ಸಕಾಲಿಕ ಕ್ರಮದ ವಿಫಲತೆ ಅಥವಾ ನಿಷ್ಕ್ರಿಯತೆ ಅಥವಾ ತನ್ನ ಸಕಾಲಿಕ ನಿಯಂತ್ರಣ ವಿಫಲತೆ ಮತ್ತು ಮೇಲ್ವಿಚಾರಣೆ ನಿರ್ವಹಿಸಲು ಜವಬ್ದಾರಿಯುತ ವ್ಯಕ್ತಿಯ ವಿಫಲತೆ

ಎಂದು ಅರ್ಥೈಸಲಾಗಿದೆ.

**(iv) ವಂಚನೆ :–**

**"ವಂಚನೆ"** ಎಂದರೆ ಅಪ್ರಮಾಣಿಕತೆ ಅಥವಾ ನೈತಿಕವಾಗಿ ದೋಷಪೂರ್ಣವಾದುದು. ಇದು ಮೋಸದ ಸ್ವರೂಪದ್ದಾಗಿರುತ್ತವೆ, ಮೋಸ ಮಾಡುವುದು ಎಂದರೆ ಯಾರೇ ವ್ಯಕ್ತಿಯು ಸಂಘಕ್ಕೆ ಸೇರಿದ ಯಾವುದೇ ಹಣ ಅಥವಾ ಇತರ ಸ್ವತ್ತನ್ನು ಆತ ವಂಚಿಸಿದ್ದಾನೆಂದು ಹೇಳಬಹುದಾದಂತಹದ್ದಾಗಿರುತ್ತದೆ ಅಥವಾ ವಂಚಿಸಿರುತ್ತಾನೆ.

ಈ 63ನೇ ಪ್ರಕರಣದ ಮೇರೆಗಿನ ಲೆಕ್ಕ ಪರಿಶೋಧನೆ, 64ನೇ ಪ್ರಕರಣದ ಮೇರೆಗಿನ ವಿಚಾರಣೆ ಮತ್ತು 65ನೇ ಪ್ರಕರಣದ ತಪಾಸಣೆಯ ಸಂದರ್ಭದಲ್ಲಿ ಮತ್ತು ಸಹಕಾರ ಸಂಘವನ್ನು ಮುಕ್ತಾಯಗೊಳಿಸುವ ಸಂದರ್ಭದಲ್ಲಿ ಅಂಥ ಸಂಘದ ಅಧ್ಯಕ್ಷ, ಉಪಾಧ್ಯಕ್ಷ, ಸಭಾಪತಿ, ಉಪಸಭಾಪತಿ ಅಥವಾ ಆಡಳಿತ ಸಮಿತಿಯ ಯಾರೇ ಇತರ ಸದಸ್ಯರು ಅಥವಾ ಅಂತಹ ಸಹಕಾರ ಸಂಘದ ಸಂಘಟನೆ ವ್ಯವಸ್ಥಾಪನೆಯನ್ನು ವಹಿಸಿಕೊಡಲಾಗಿರುವ ಅಥವಾ ವಹಿಸಿಕೊಡಲಾಗಿದ್ದ ಯಾರೇ ವ್ಯಕ್ತಿಯು ಅಥವಾ ಯಾವುದೇ ಕಾಲಕ್ಕೆ ಸಹಕಾರ ಸಂಘದ ಅಧಿಕಾರಿ ಅಥವಾ ನೌಕರ ಆಗಿದ್ದ ಯಾರೇ ವ್ಯಕ್ತಿಯು ಅಧಿನಿಯಮ, ಅಥವಾ ನಿಯಮಗಳು ಅಥವಾ ಉಪವಿಧಿಗಳಿಗೆ ವಿರುದ್ಧವಾಗಿ ಸಂದಾಯ ಮಾಡಿದ್ದರೆ ಅಥವಾ ವಿಶ್ವಾಸ ಭಂಗ ಅಥವಾ ನಿರ್ಲಕ್ಷ್ಯದಿಂದ ಅಥವಾ ದುರುಪಯೋಗ ಮಾಡಿದ್ದರೆ, 69ನೇ ಪ್ರಕರಣದ ಮೇರೆಗೆ ವ್ಯವಹರಣೆ ಆರಂಭಿಸಬಹುದು ಎಂಬುದನ್ನು ಈ ಪ್ರಕರಣದಲ್ಲಿ ಸೇರಿಸಲಾಗಿದೆ. ಪ್ರಾರಂಭದಲ್ಲಿ, 69ನೇ ಪ್ರಕರಣದ ವ್ಯವಹರಣೆಗಳನ್ನು ಆರಂಭಿಸುವ ಪ್ರಾಥಮಿಕ ಅಗತ್ಯತೆಗಳು ಸೂಚಿಸಲಾದಂತೆ ನಾಲ್ಕು ಪ್ರಕರಣಗಳೆಂದು ಸೂಚಿಸಬೇಕಾಗುತ್ತದೆ. ಮೇಲಿನ ಪ್ರಕರಣ 69ರ ವ್ಯವಹರಣೆಗಳನ್ನು ಲೆಕ್ಕಪರಿಶೋಧನೆ, ತಪಾಸಣೆ, ವಿಚಾರಣೆ ಅಥವಾ ಸಮಾಪನಗೊಳಿಸುವಿಕೆ (ಇತ್ತೀಚಿಗೆ ಕರ್ನಾಟಕ ಉಚ್ಚನ್ಯಾಯಾಲಯವು 69ನೇ ಪ್ರಕರಣದ ಮೇರೆಗಿನ ವಿವಾದವನ್ನು ಸಲ್ಲಿಸುವ ಮೂಲಕ ಅಧಿನಿಯಮದ 70ನೇ ಪ್ರಕರಣದ ಮೇರೆಗೂ ಸಹ ವಿವಾದ ಹೂಡಬಹುದೆಂದು ನಿರ್ಣಯಿಸದೆ)ಯ ನಿರ್ಣಯಗಳ ಮೇಲೆ ಆರಂಭಿಸಬೇಕು.

'ಅಧಿಬಾರ'ದ ಉಪಬಂಧಗಳನ್ನು ಸಹಕಾರ ಸಂಘದ ಸಂಘಟನೆ/ವ್ಯವಸ್ಥಾಪನೆಯನ್ನು ವಹಿಸಿಕೊಡಲಾಗಿರುವ ಅಥವಾ ವಹಿಸಿಕೊಡಲಾಗಿದ್ದ ಯಾರೇ ವ್ಯಕ್ತಿಯು ಅಥವಾ ಯಾವುದೇ ಕಾಲಕ್ಕೆ ಸಹಕಾರ ಸಂಘದ ಅಧಿಕಾರಿ ಅಥವಾ ನೌಕರವಾಗಿರುವ ಅಥವಾ ಆಗಿದ್ದ ಯಾರೇ ವ್ಯಕ್ತಿಯ ವಿರುದ್ಧ ಆರಂಭಿಸಬಹುದಾಗಿದೆ. ಮೃತ ಅಧಿಕಾರಿಯ ಕಾನೂನು ಪ್ರತಿನಿಧಿಗಳ ವಿರುದ್ಧ, ಅಂಥ ಕಾನೂನು ವಾರುಸುದಾರರಾಗಿ ಸ್ವತ್ತನ್ನು ಹೊಂದಿರುವ ವ್ಯಕ್ತಿಗಳ ವಿರುದ್ಧ, ವ್ಯವಹರಣೆಗಳನ್ನು ಆರಂಭಿಸಬಹುದು ಎಂದು ಸಹ ಈ ಪ್ರಕರಣದಲ್ಲಿ ಉಪಬಂಧಿಸಿದೆ.

ನಿಬಂಧಕನು ತಾನಾಗಿಯೇ ಅಥವಾ ಸಹಕಾರ ಸಂಘದ ಆಡಳಿತ ಸಮಿತಿ ಅಥವಾ ಸಮಾಪನಗೊಳಿಸುವಂತ ಪ್ರಕರಣದಲ್ಲಿ ಸಮಾಪಕ ಮತ್ತು ಸಹಕಾರ ಸಂಘದ ಯಾವುದೇ ಲೇಣಿದಾರನ ಅರ್ಜಿಯ ಮೇಲೆ ವ್ಯವಹರಣೆಗಳನ್ನು ಆರಂಭಿಸಬಹುದು.

ಅಲ್ಲದೆ, ಅಧಿನಿಯಮದಲ್ಲಿ ಹೇಳಲಾದಂತೆ ಅಧಿಕಾರ ಸಹಿತ ವ್ಯವಹರಣೆಗಾಗಿ ಗೊತ್ತುಪಡಿಸಿದ ವಿಧಾನಗಳೆಂದರೆ, ನಿಬಂಧಕನು ಯಾವುದಾದರು ಆರೋಪಗಳು ಇದ್ದರೆ, ಅವುಗಳನ್ನು ರೂಪಿಸತಕ್ಕದ್ದು, ಮನವಿಗಳಿದ್ದರೆ ಸ್ವೀಕರಿಸತಕ್ಕದು ಮತ್ತು ಆದೇಶಗಳನ್ನು ಹೊರಡಿಸತಕ್ಕದು. (ಇದನ್ನು ಈ ಲೇಖನದ ಮುಂದಿನ ಭಾಗದಲ್ಲಿ ವಿವರವಾಗಿ ನಿರೂಪಿಸಲಾಗಿದೆ.)

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮವನ್ನು 1959ರಲ್ಲಿ (1959ರ ಕರ್ನಾಟಕ ಅಧಿನಿಯಮ) ಅಧಿನಿಯಮಿಸಲಾಗಿದೆ. ಪ್ರಕರಣವು ಈ ಮುಂದಿನಂತಿದೆ:–

**"69 ಅಧಿಭಾರ:–** ಸಹಕಾರ ಸಂಘದ ಲೆಕ್ಕಪರಿಶೋಧನೆ, ವಿಚಾರಣೆ, ಪರಿಶೀಲನೆ ಅಥವಾ

ಸಮಾಪನದ ಕ್ರಮದಲ್ಲಿ, ಅಂಥ ಸಂಘದ ವ್ಯವಸ್ಥಾಪನೆ ನಡೆಸುವ ಸಮಿತಿ ಅಥವಾ ಅಂಥ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ, ಉಪಾಧ್ಯಕ್ಷ, ಸಭಾಪತಿ, ಉಪಸಭಾಪತಿ ಅಥವಾ ಯಾರೇ ಇತರ ಸದಸ್ಯ ಅಥವಾ ಅಂಥ ಸಂಘದ ಸಂಘಟನೆ ಅಥವಾ ವ್ಯವಸ್ಥಾಪನೆಯನ್ನು ವಹಿಸಿ ಕೊಡಲಾಗಿರುವ ಅಥವಾ ವಹಿಸಿಕೊಡಲಾಗಿದ್ದ ಯಾರೇ ವ್ಯಕ್ತಿ ಅಥವಾ ಯಾವುದೇ ಕಾಲಕ್ಕೆ ಸಹಕಾರ ಸಂಘದ ಅಧಿಕಾರ ಅಥವಾ ನೌಕರನಾಗಿರುವ ಅಥವಾ ಆಗಿದ್ದ ಯಾರೇ ವ್ಯಕ್ತಿಯು ಆದಿನಿಯಮ, ನಿಯಮಗಳು ಅಥವಾ ಉಪನಿಧಿಗಳಿಗೆ ವಿರುದ್ಧವಾಗಿ ಯಾವುದೇ ಸಂದಾಯ ಮಾಡಿದ್ದರೆ ಅಥವಾ ವಿಶ್ವಾಸ ಭಂಗ ಅಥವಾ ನಿರ್ಲಕ್ಷ್ಯದಿಂದ ಸಹಕಾರ ಸಂಘದ ಆಸ್ತಿಯಲ್ಲಿ ಯಾವುದೇ ಕೊರತೆ ಉಂಟು ಮಾಡಿದ್ದರೆ ಅಥವಾ ಅಂಥ ಸಹಕಾರ ಸಂಘಕ್ಕೆ ಸೇರಿದ ಯಾವುದೇ ಹಣ ಅಥವಾ ಇತರ ಸ್ವತನ್ನು ದುರುಪಯೋಗಪಡಿಸಿಕೊಂಡಿದ್ದರೆ ಅಥವಾ ಮೋಸದಿಂದ ತನ್ನಲ್ಲಿ ಇಟ್ಟುಕೊಂಡಿದ್ದರೆ, ರಿಜಿಸ್ಟ್ರಾರ್‌ನು ತಾನಾಗಿಯೇ ಅಥವಾ ಸಮಿತಿಯ ಸಮಾಪಕನ ಅಥವಾ ಯಾವುದೇ ಲೇಣಿದಾರನ ಅರ್ಜಿಯ ಮೇಲೆ ಸ್ವತಃ ವಿಚಾರಣೆ ಮಾಡಬಹುದು ಅಥವಾ ತಾನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯುಕ್ತ ಈ ಸಂಬಂಧದಲ್ಲಿ ಲಿಖಿತ ಆದೇಶವನ್ನು ಅಂಥ ವ್ಯಕ್ತಿಯ ನಡತೆಯನ್ನು ವಿಚಾರಣೆ ಮಾಡಲು ನಿರ್ದೇಶಿಸಬಹುದು.

(2) (1)ನೇ ಉಪ ಪ್ರಕರಣದ ಮೇರೆಗೆ ವಿಚಾರಣೆಯನ್ನು ಮಾಡುವಾಗ ರಿಜಿಸ್ಟ್ರಾರ್‌ನು ಸಂಬಂಧಪಟ್ಟ ವ್ಯಕ್ತಿಗಳಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ಅಂಥ ದರದಲ್ಲಿ ಬಡ್ಡಿ ಸಹಿತ ಹಣ ಅಥವಾ ಸ್ವತ್ತು ಅಥವಾ ಯಾವುದೇ ಅರ್ಧ ಭಾಗವನ್ನು ಹಿಂತಿರುಗಿಸಲು ಅಥವಾ ಪುನಃ ಸ್ಥಾಪಿಸುವಂತೆ ಅವನನ್ನು ಅಗತ್ಯ ಪಡಿಸುವ ಆದೇಶವನ್ನು ಮಾಡಬಹುದು.

ನಿಬಂಧಕನು ವಿಚಾರಣೆ ಮಾಡತಕ್ಕದ್ದು ಮತ್ತು ಕೊರತೆಯನ್ನು ವಸೂಲಿ ಮಾಡಬೇಕಾದ ವ್ಯಕ್ತಿಗಳ ವಿರುದ್ಧ ವಿಚಾರಣೆಗೆ ಅವಕಾಶವನ್ನು ನೀಡತಕ್ಕದ್ದು ಎಂಬುದನ್ನು ಪ್ರಧಾನ ಪ್ರಕರಣಕ್ಕೆ (2)ನೇ ಉಪಪ್ರಕರಣದ ಮೇರೆಗೆ ಉಪಬಂಧಿಸಲಾಗಿದೆ ಮತ್ತು ಸಂಬಂಧಿಸಿದ ಪಕ್ಷಕಾರನನ್ನು ವಿಚಾರಣೆ ಮಾಡಿದ ತರುವಾಯ, ನಿಬಂಧಕನು ತಾನು ಸೂಕ್ತ ಮತ್ತು ಸರಿಯಾದುದು ಎಂದು ಭಾವಿಸಿದಂತ ಆದೇಶವನ್ನು ಹೊರಡಿಸಲು ಪರಿಗಣಿಸಬಹುದು ಎಂಬುದನ್ನು ಸಹ ಇದರಲ್ಲಿ ಉಪಬಂಧಿಸಿದೆ. ಈ ಪ್ರಕರಣವನ್ನು 1976ರ ತಿದ್ದುಪಡಿ ಅಧಿನಿಯಮ 19ರಲ್ಲಿ ಸದರಿ ಪ್ರಕರಣವನ್ನು ಪ್ರತ್ಯಾಯೋಜಿಸುವ ಮೂಲಕ ತಿದ್ದುಪಡಿ ಮಾಡಲಾಗಿದ್ದು ಇದರ ಪ್ರಕಾರ ವಿಚಾರಣೆ ಅಥವಾ ಅವಹಾಲು ಹೇಳಿಕೊಳ್ಳುವ ಅವಕಾಶವನ್ನು ಬಿಟ್ಟು ಬಿಡಲಾಗಿದೆ. ಪ್ರತ್ಯಾಯೋಜಿಸಲಾದಂತೆ ಪ್ರಕರಣವು ಈ ಮುಂದಿನಂತಿದೆ:–

"69 ಅಧಿಭಾರ – ಸಹಕಾರ ಸಂಘದ ಲೆಕ್ಕಪರಿಶೋಧನೆ, ವಿಚಾರಣೆ, ಪರಿಶೀಲನೆ ಅಥವಾ ಸಮಾಪನದ ಕ್ರಮದಲ್ಲಿ, ಅಂಥ ಸಂಘದ ವ್ಯವಸ್ಥಾಪನೆ ನಡೆಸುವ ಸಮಿತಿ ಅಥವಾ ಅಂಥ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ, ಉಪಾಧ್ಯಕ್ಷ, ಸಭಾಪತಿ, ಉಪಸಭಾಪತಿ ಅಥವಾ ಯಾರೇ ಇತರ ಸದಸ್ಯರು ಅಥವಾ ಅಂಥ ಸಹಕಾರ ಸಂಘದ ಸಂಘಟನೆ ಅಥವಾ ವ್ಯವಸ್ಥಾಪನೆಯನ್ನು ವಹಿಸಿಕೊಡಲಾಗಿರುವ ಅಥವಾ ವಹಿಸಿಕೊಡಲಾಗಿದ್ದ ಯಾರೇ ವ್ಯಕ್ತಿ ಅಥವಾ ಯಾವುದೇ ಕಾಲಕ್ಕೆ ಸಹಕಾರ ಸಂಘದ ಅಧಿಕಾರಿ ಅಥವಾ ನೌಕರನಾಗಿರುವ ಅಥವಾ ಆಗಿದ್ದ ಯಾರೇ ವ್ಯಕ್ತಿಯು, ಆದಿನಿಯಮ, ನಿಯಮಗಳು ಅಥವಾ ಉಪನಿಧಿಗಳಿಗೆ ವಿರುದ್ಧವಾಗಿ ಯಾವುದೇ ಸಂದಾಯ ಮಾಡಿದರೆ ಅಥವಾ ವಿಶ್ವಾಸಭಂಗ ಅಥವಾ ನಿರ್ಲಕ್ಷ್ಯದಿಂದ ಸಹಕಾರ ಸಂಘದ ಆಸ್ತಿಗಳಲ್ಲಿ ಯಾವುದೇ ಕೊರತೆ ಉಂಟು ಮಾಡಿದ್ದರೆ ಅಥವಾ ಅಂಥ ಸಹಕಾರ ಸಂಘಕ್ಕೆ ಸೇರಿದ ಯಾವುದೇ ಹಣ ಅಥವಾ ಇತರ ಸ್ವತನ್ನು ದುರುಪಯೋಗಪಡಿಸಿಕೊಂಡಿದ್ದರೆ ಅಥವಾ ಮೋಸದಿಂದ ತನ್ನಲ್ಲಿ ಇಟ್ಟುಕೊಂಡಿದ್ದರೆ, ರಿಜಿಸ್ಟ್ರಾರ್‌ನು ತಾನಾಗಿಯೇ ಅಥವಾ ಸಮಿತಿಯ, ಸಮಾಪಕನ ಅಥವಾ ಯಾವುದೇ ಲೇಣಿದಾರನ ಅರ್ಜಿಯ ಮೇಲೆ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ವಿರುದ್ಧ ಆರೋಪಗಳನ್ನು ರೂಪಿಸಬಹುದು ಮತ್ತು ಆ ವ್ಯಕ್ತಿಗೆ ಮತ್ತು ಮೃತ ವ್ಯಕ್ತಿಯ ಸಂದರ್ಭದಲ್ಲಿ ಅವನ

ಸಂಪತ್ತಿನ ಉತ್ತರಾಧಿಕಾರಿಯಾದ ಅವನ ಪ್ರತಿನಿಧಿಗೆ ಮನವಿ ಸಲ್ಲಿಸಲು ಅವಕಾಶ ಕೊಟ್ಟ ತರುವಾಯ ಆ ಹಣ, ಸ್ವತ್ತು ಅಥವಾ ಅದರ ಯಾವುದೇ ಭಾಗವನ್ನು ತಾನು ನಿರ್ಧರಿಸಬಹುದಾದಂಥ ಬಡ್ಡಿಯೊಂದಿಗೆ ಸಂದಾಯ ಮಾಡುವಂತೆ ಅಥವಾ ಪುನಃ ಸ್ಥಾಪಿಸುವಂತೆ ನ್ಯಾಯಯುತವಾದದ್ದೆಂದು ಪರಿಗಣಿಸುವಂಥ ಮೊತ್ತವನ್ನು ಅಷ್ಟರಮಟ್ಟಿಗೆ ಪರಿಹಾರ ರೂಪದಲ್ಲಿ ಸಹಕಾರ ಸಂಘದ ಆಸ್ತಿಗಳಿಗೆ ವಂತಿಗೆ ಕೊಡುವಂತೆ ಅಗತ್ಯಪಡಿಸುವ ಆದೇಶವನ್ನು ಹೊರಡಿಸಬಹುದು.

ಸದರಿ ಪ್ರಕರಣವನ್ನು ಪ್ರತಿಯೋಜಿಸುವಾಗ ವಿಧಾನಮಂಡಲವು, ಕರ್ನಾಟಕ ವಿಧಾನ ಸಭೆಯ (5ನೇ ಅಧಿವೇಶನ) 9ನೇ ಅಧಿವೇಶನದಲ್ಲಿ ಅಂಗೀಕರಿಸಿದ ವಿಧಾನ ಸಭಾ ವಿಧೇಯಕ ಸಂ:20/1976ರಲ್ಲಿ ತನ್ನ ಧ್ಯೇಯೋದ್ದೇಶಗಳು ಮತ್ತು ಕಾರಣಗಳನ್ನು ಸೂಚಿಸುವುದು ಸುಸಂಬದ್ಧವಾಗಿದ್ದು ಅದು ಈ ಮುಂದಿನಂತಿದೆ:–

"ಹಾಲಿ ಪ್ರಕರಣ – 69ರ ಮೇರೆಗಿನ ಅಧಿಭಾರ ವ್ಯವಹರಣೆಗಳು, ಪ್ರಸ್ತುತ ಉಪಬಂಧಗಳಡಿ ಎರಡು ವಿಚಾರಣೆಗಳನ್ನು ನಡೆಸಬೇಕಾದ ಅಗತ್ಯವಿರುವ ಕಾರಣ ಶೀಘ್ರವಾಗಿ ಕೊನೆಗೊಳ್ಳುತ್ತಿಲ್ಲ. ಇದನ್ನು ಒಂದೇ ವಿಚಾರಣೆಗೆ ಉಪಬಂಧಿಸುವುದು ಅಗತ್ಯವಾಗಿದೆ."

**ಟಿಪ್ಪಣಿ**

ವಿಧೇಯಕವನ್ನು ಮಂಡಿಸಿದಾಗ, ಮೇಲೆ ಹೇಳಿದ ಪ್ರಕರಣವನ್ನು ತಿದ್ದುಪಡಿಮಾಡುವ ಬಗ್ಗೆ ಪ್ರಸ್ತಾಪವಿಲ್ಲದಿದ್ದರೂ ಕಾರಣಗಳು ಮತ್ತು ಉದ್ದೇಶಗಳನ್ನು ದಾಖಲಿಸಲಾಗಿತ್ತು ಮತ್ತು ಚರ್ಚೆಯ ಸಮಯದಲ್ಲಿ ಪ್ರತಿಯೋಜನೆಯ ಮೂಲಕ ಪ್ರಕರಣವನ್ನೇ ಪ್ರತಿಯೋಜಿಸಲಾಯಿತು.

ಮೇಲೆ ಹೇಳಲಾದಂಥ ಉದ್ದೇಶಗಳು ಮತ್ತು ಕಾರಣಗಳಲ್ಲಿ ಸಹಕಾರ ಸಂಘದ ಸಮಾಪನದ ಸಮಯದಲ್ಲಿ ಮತ್ತು ಉಂಟಾದ ಕೊರತೆಯ ಬಗ್ಗೆ ಪ್ರಕರಣ 63,64,65ರ ಅಡಿಯಲ್ಲಿ ಈಗಾಗಲೇ ಪ್ರಾಥಮಿಕ ವಿಚಾರಣೆಯನ್ನು ನಡೆಸಿರುವುದರಿಂದ ಎರಡು ವಿಚಾರಣೆಗಳನ್ನು ನಡೆಸುವ ಅಗತ್ಯವಿಲ್ಲ ಎಂದು ಸೂಚಿಸಿದೆ ಮತ್ತು ಮೇಲ್ಕಂಡ ಉಪಬಂಧದ ಮೇರೆಗೆ ಈಗಾಗಲೇ ವಿಚಾರಣೆಯನ್ನು ನಡೆಸಿರುವ ಹಿನ್ನಲೆಯಲ್ಲಿ ಅಧಿನಿಯಮದ 69ನೇ ಪ್ರಕರಣದ ಮೇರೆಗೆ ವ್ಯವಹರಣೆಗಳ ಸಮಯದಲ್ಲಿ ಇನ್ನೂ ಒಂದು ವಿಚಾರಣೆಯನ್ನು ನಡೆಸುವ ಅಗತ್ಯವಿಲ್ಲ ಮೂಲ ಪ್ರಕರಣದಲ್ಲಿನ (2)ನೇ ಉಪಪ್ರಕರಣವನ್ನು ಬಿಟ್ಟು ಬಿಡಲಾಯಿತು ಮತ್ತು ಸದರಿ ಉಪಬಂಧವನ್ನು "ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ವಿರುದ್ಧ ಆರೋಪಗಳನ್ನು ರೂಪಿಸಬಹುದು ಮತ್ತು ಆ ವ್ಯಕ್ತಿಗೆ ಮತ್ತು ಮೃತ ವ್ಯಕ್ತಿಯ ಸಂದರ್ಭದಲ್ಲಿ ಅವನ ಸಂಪದದ ಉತ್ತರಾಧಿಕಾರಿಯಾದ ಅವನ ಪ್ರತಿನಿಧಿಗಳಿಗೆ ಮನವಿ ಸಲ್ಲಿಸಲು ಅವಕಾಶ ಕೊಟ್ಟ ತರುವಾಯ ಆ ಹಣಮ ಸ್ವತ್ತು ಅಥವಾ ಅದರ ಯಾವುದೇ ಭಾಗವನ್ನು ತಾನು ನ್ಯಾಯಸಮ್ಮತವಾದದ್ದೆಂದು ಮತ್ತು ನ್ಯಾಯಯುತವಾದದ್ದೆಂದು ಪರಿಗಣಿಸುವ ಹಾಗೂ ತಾನು ನಿರ್ಧರಿಸಬಹುದಾದಂಥ ದರದಲ್ಲಿ ಬಡ್ಡಿಯೊಂದಿಗೆ ಸಂದಾಯ ಮಾಡುವಂತೆ ಅಥವಾ ಪುನಃ ಸ್ಥಾಪಿಸುವಂತೆ ಅಗತ್ಯ ಪಡಿಸುವ ಆದೇಶವನ್ನು ಹೊರಡಿಸಬಹುದು ಎಂಬ ಪದಾವಳಿಗಳ ಮೂಲಕ ಸದರಿ ಉಪಬಂಧವನ್ನು ಸೇರಿಸಲಾಯಿತು ಎಂಬುದನ್ನು ಸೂಚಿಸುವುದು ಮಹತ್ವದ್ದಾಗಿದೆ.

ಕರ್ನಾಟಕ ಉಚ್ಚ ನ್ಯಾಯಾಲಯವು ಎಂಎಲ್‌ಜೆ 1972 (1) ಪುಟ 321 ರಲ್ಲಿ ವರದಿಯಾದ ಪ್ರಕರಣದಲ್ಲಿ ಮೈಸೂರು ಬಾಡಿಗೆ ನಿಯಂತ್ರಣ ಅಧಿನಿಯಮದಡಿಯ ಪ್ರಕರಣಕ್ಕೆ ಪ್ರತಿಯೋಜನೆಯ ಮೂಲಕ ತಿದ್ದುಪಡಿಯನ್ನು ವ್ಯಾಖ್ಯಾನಿಸುವ ಸಂದರ್ಭದಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ.

"ತಿದ್ದುಪಡಿ ಮಾಡುವ ಅಧಿನಿಯಮದಲ್ಲಿ ಹಾಲಿ ಪ್ರಕರಣಕ್ಕೆ ಬದಲಾಗಿ ಒಂದು ಹೊಸ ಪ್ರಕರಣವನ್ನು ಪ್ರತಿಯೋಜಿಸಲಾಗಿದೆ ಎಂದು ತಿಳಿಸಿದೆ. ವಿಧಾನ ಮಂಡಲವು, ಪ್ರತಿಯೋಜನೆ ಉಪಬಂಧವನ್ನು ಪ್ರಾರಂಭದಿಂದಲೇ ಅಧಿನಿಯಮದ ಭಾಗವೆಂದು ಭಾವಿಸತಕ್ಕದ್ದೆಂಬ ಆಶಯವಿತ್ತೆಂಬುದು

ಉಲ್ಲೇಖವಾಗಿದೆ."

"ತಿದ್ದುಪಡಿ ಅಧಿನಿಯಮವು ಒಂದು ಸ್ವತಂತ್ರ ಶಾಸನವೆಂದು ಭಾವಿಸುವಂತಿಲ್ಲ. ತಿದ್ದುಪಡಿಗೊಂಡ ರೂಪದಲ್ಲಿರುವ ಶಾಸನವು ಹಳೆಯ ರೂಪದಲ್ಲಿರುವ ಶಾಸನದ ಸ್ಥಾನವನ್ನು ಅಧಿಕ್ರಮಿಸಿದೆ. ಶಾಸನದ ತಿದ್ದುಪಡಿ ಮಾಡಲಾದ ಪ್ರಕರಣವು, ತಿದ್ದುಪಡಿಯನ್ನು ಸದಾ ಮಾಡಲಾಗುತ್ತಿದ್ದರೆ ಹೇಗೋ ಹಾಗೆ ಎಲ್ಲಾ ಆಶಯಗಳು ಮತ್ತು ಉದ್ದೇಶಗಳಿಗಾಗಿ ಮೂಲ ಪ್ರಕರಣದ ಸ್ಥಾನವನ್ನು ಪಡೆದಿದೆ. ತಿದ್ದುಪಡಿಯನ್ನು ಅದು ಯಾವ ಶಾಸನದ ಒಂದು ಭಾಗವಾಗಿರುವುದೋ ಆ ಇಡೀ ಶಾಸನದಲ್ಲಿ ಒಳಗೊಂಡಿದ್ದರೆ ಹೇಗೋ ಹಾಗೆ ಪರಿಗಣಿಸತಕ್ಕದ್ದು. ತದ್ವಿರುದ್ಧವಾದ ಉದ್ದೇಶವನ್ನು ಸ್ಪಷ್ಟವಾಗಿ ಸೂಚಿಸಿದ ಹೊರತು. ತಿದ್ದುಪಡಿ ಮಾಡಲಾದ ಶಾಸನವನ್ನು ಮೂಲ ಶಾಸನವನ್ನು ನಿರಸನಗೊಳಿಸಿದೆ ಮತ್ತು ಇಡೀ ಶಾಸನವನ್ನು ತಿದ್ದುಪಡಿಯೊಂದಿಗೆ ಪುನಃ ಅಧಿನಿಯಮಿತಗೊಳಿಸಿದೆ. (ಅಮೇರಿಕಾ ನ್ಯಾಯಶಾಸ್ತ್ರದ ಸಂಪುಟ 50481–482ರ 468ನೇ ಪುಟ ನೋಡಿ)"

ರಚನಾ ಸಿದ್ಧಾಂತದ ಮೇಲ್ಕಂಡ ತತ್ವಗಳನ್ನು ಸರ್ವೋಚ್ಚ ನ್ಯಾಯಾಲಯವು ಶಾಮರಾವ್ ವಿರುದ್ಧ ಜಿಲ್ಲಾ ದಂಡಾಧಿಕಾರಿ ಥಾಣ – ಪ್ರಕರಣದಲ್ಲಿ ಮಾನ್ಯ ಮಾಡಿದೆ. ಸದರಿ ತೀರ್ಪಿನಲ್ಲಿ ಬೋಸ್‌ರವರ ಅಭಿಪ್ರಾಯ ಈ ಕೆಳಕಂಡಂತಿದೆ:–

"ತಿದ್ದುಪಡಿ ಮಾಡಲಾದಂಥ ಒಂದು ಅಧಿನಿಯಮದ ರಚನೆಯನ್ನು ಈಗ ತಾಂತ್ರಿಕ ನಿಯಮಗಳಿಂದ ರೂಪಿಸಿದೆ ಮತ್ತು ನಾವು ಮೊದಲು ಸಮರ್ಪಕ ರಚನಾ ಸಿದ್ಧಾಂತದ ಬಗ್ಗೆ ಸ್ಪಷ್ಟ ಪಡಿಸಿಕೊಳ್ಳಬೇಕು. ಪ್ರತಿಯೋಜನೆ ಅಧಿನಿಯಮವನ್ನು ಸ್ವತಃ ಅದನ್ನೇ ಅಥವಾ ಅದರ ಒಂದು ಭಾಗವನ್ನೇ ಈ ಹಿಂದಿನ ಅಧಿನಿಯಮದಲ್ಲಿ ಸೇರಿಸುವಂಥ ರೀತಿಯಲ್ಲಿ ಈ ಹಿಂದಿನ ಅಧಿನಿಯಮಕ್ಕೆ ಬದಲಾಗಿ ತಿದ್ದುಪಡಿ ಮಾಡಿದಾಗ, ಈ ಹಿಂದಿನ ಅಧಿನಿಯಮವನ್ನು ಅನಂತರ ಬದಲಾವಣೆ ಮಾಡಿದ ಪದಗಳನ್ನು ಪೆನ್ನು ಮತ್ತು ಶಾಯಿಯಿಂದ ಈ ಹಿಂದಿನ ಅಧಿನಿಯಮದಲ್ಲಿ ಬರೆಯಲಾಗಿದ್ದರೆ ಹೇಗೋ ಹಾಗೆ ಮತ್ತು ಹಳೆಯ ಪದಗಳನ್ನು ಹೊಡೆದು ಹಾಕಿದ್ದರೆ ಹೇಗೋ ಹಾಗೆ (ವಿರುದ್ಧವಾದ ಅಸಂಗತವಾದ ಮತ್ತು ಅಸಂಬದ್ಧವಾದ ಅರ್ಥಕ್ಕೆ ಎಡೆಮಾಡಿಕೊಡುವಲ್ಲಿ ಹೊರತುಪಡಿಸಿ) ಓದಿಕೊಳ್ಳತಕ್ಕದ್ದು ಮತ್ತು ಅರ್ಥೈಸಿಕೊಳ್ಳತಕ್ಕದ್ದು. ಇದರಿಂದಾಗಿ ಆ ನಂತರ ತಿದ್ದುಪಡಿ ಅಧಿನಿಯಮವನ್ನು ಅವಲೋಕಿಸುವ ಅಗತ್ಯವೇ ಇರುವುದಿಲ್ಲ." ಹಳೆ ಮತ್ತು ಹೊಸ ಉಪ ಪ್ರಕರಣಗಳ ನಡುವಿನ ಯಾವುದೇ ವೈರುದ್ಯತೆ ಮತ್ತು ಅಸ್ತಂಗತತೆಯು ನಮ್ಮ ಗಮನಕ್ಕೆ ಬಂದಿರುವುದಿಲ್ಲ. ಹಳೆ ಉಪ ಪ್ರಕರಣಕ್ಕೆ ಬದಲಾಗಿ ಹೊಸ ಉಪಪ್ರಕರಣವನ್ನು ಪ್ರತಿಯೋಜಿಸಲಾಗಿದೆ ಎಂದು ತಿದ್ದುಪಡಿ ಅಧಿನಿಯಮದಲ್ಲಿ ಹೇಳಿರುವಾಗ, ವಿಧಾನ ಮಂಡಲವು, ಪ್ರತಿಯೋಜಿಸಲಾದ ಉಪಬಂಧವನ್ನು ಉದ್ದೇಶವನ್ನು ಹೊಂದಿತ್ತು ಎಂಬುದು ಊಹೆಯಾಗಿದೆ.

ಕರ್ನಾಟಕ ಉಚ್ಚನ್ಯಾಯಾಲಯದ ವಿಭಾಗೀಯ ಪೀಠವು, ದಿನಾಂಕ 04.02.1986 ಮತ್ತು 05.02.1986 ರಂದು ರಿಟ್ ಅರ್ಜಿ ಸಂ.16989/84 ಮತ್ತು 9256/85 ಗಳನ್ನು ಇತ್ಯರ್ಥ ಪಡಿಸುವಾಗ, ನ್ಯಾಯಾಲಯವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಪ್ರಕರಣ 30ಎ ಯನ್ನು ಪರಿಶೀಲಿಸುವಾಗ, ತಿದ್ದುಪಡಿ ಅಧಿನಿಯಮದ ಪರಿಗಣನೆಗೆ ವಿಧೇಯಕವನ್ನು ಮಾಡಿಸುವಾಗ ಹೇಳಲಾದ ಉದ್ದೇಶಗಳು ಮತ್ತು ಕಾರಣಗಳಿಗೆ ನೀಡಬೇಕಾದ ಪ್ರಾಮುಖ್ಯತೆಯ ಬಗ್ಗೆ ನಿರ್ದಿಷ್ಟ ಅಭಿಪ್ರಾಯಗಳನ್ನು ಮಾಡಿದ್ದು, ನೀಡಿದ ನಿರ್ಣಯವು ಈ ಮುಂದಿನಂತಿದೆ.

> **"30ಎ ಪ್ರಕರಣವು ವಿಧೇಯಕದ ಉದ್ದೇಶಗಳ ಮತ್ತು ಕಾರಣಗಳನ್ನು ಇದೇ ಹೇಳಿಕೆಯಲ್ಲಿ ನಿರೂಪಿಸಿದ್ದು, ಅಧಿನಿಯಮದ ಉದ್ದೇಶ ಮತ್ತು ಗುರಿಗಳನ್ನು ಸಾಧಿಸುವ ಸಲುವಾಗಿ ಮಾತ್ರ ಅತ್ಯುನ್ನತ ಕಾರ್ಯನಿರ್ವಹಣಾ ಪ್ರಾಧಿಕಾರಕ್ಕೆ ಸರ್ಕಾರದ ಒಂದು ವಿಭಿನ್ನ, ವಿಶೇಷ ಮತ್ತು**

**ಅಸಾಧಾರಣವಾದ ಅಧಿಕಾರವನ್ನು ಪ್ರಧಾನ ಮಾಡಲಾಗುತ್ತಿದೆ ಎಂಬುದಾಗಿ ಓದಿಕೊಳ್ಳಬೇಕು."**
(ಬಿಎಲ್‌ಜೆ 1986 (1) ಪುಟ 365)

ಮೇಲ್ಕಂಡ ತೀರ್ಮಾನಗಳ ಹಿನ್ನಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ (ಕೆಸಿಎಸ್) ಅಧಿನಿಯಮ, 1956ರ ಪ್ರಕರಣ 69ರಲ್ಲಿ ತಿದ್ದುಪಡಿಯನ್ನು 1959ರಲ್ಲಿ ಕರ್ನಾಟಕ ಸಹಕಾರ ಸಂಘಗಳ (ಕೆಸಿಎಸ್) ಅಧಿನಿಯುಮವನ್ನು ಅಧಿನಿಯುಮಿತಿಗೊಳಿಸಿದ ದಿನಾಂಕದಂದೇ ಇದನ್ನು ಅಧಿನಿಯಮಿತಿಗೊಳಿಸಲಾಯಿತು ಎಂದು ಅರ್ಥೈಸಿಕೊಳ್ಳಬೇಕು. ಉಚ್ಚ ನ್ಯಾಯಾಲಯದ ಮೇಲ್ಕಂಡ ತೀರ್ಮಾನವನ್ನು ದೃಷ್ಟಿಯಲ್ಲಿಟ್ಟುಕೊಂಡು, ಅಧಿನಿಯಮದ 69ನೇ ಪ್ರಕರಣದ ಅಗತ್ಯತೆಯನ್ನು ಪರಿಶೀಲಿಸುವುದು ಅಗತ್ಯವಾಗಿದೆ.

ಅಧಿನಿಯಮದ 69ನೇ ಪ್ರಕರಣವನ್ನು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ಸಂ.19/1976ರಲ್ಲಿ ತಿದ್ದುಪಡಿ ಮೂಲಕ ಪ್ರತ್ಯಾಯೋಜಿಸಲಾಯಿತು. ಅದರಲ್ಲಿ, 69ನೇ ಪ್ರಕರಣದ ಅಗತ್ಯತೆಗಳು ಎಂದರೆ, ನಿಬಂಧಕರು ತಾನಾಗಿಯೇ ಅಥವಾ ಒಂದು ಸಮಿತಿಯ, ಸಮಾಪಕನ ಅಥವಾ ಯಾರೇ ಲೇಣಿದಾರನ ಅರ್ಜಿಯ ಮೇಲೆ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ವಿರುದ್ಧ ಆರೋಪಗಳನ್ನು ರೂಪಿಸಬಹುದು ಮತ್ತು ಆ ವ್ಯಕ್ತಿಗೆ ಮತ್ತು ಮೃತ ವ್ಯಕ್ತಿಯ ಸಂದರ್ಭದಲ್ಲಿ ಅವನ ಸಂಪದದ ಉತ್ತರಾಧಿಕಾರಿಯಾದ ಅವನ ಪ್ರತಿನಿಧಿಗೆ ಮನವಿ ಸಲ್ಲಿಸಲು ಅವಕಾಶ ಕೊಟ್ಟ ತರುವಾಯ, ಆ ಹಣ ಅಥವಾ ಸ್ವತ್ತು ಅಥವಾ ಅದರ ಯಾವುದೇ ಭಾಗವನ್ನು ತಾನು ನಿರ್ಧರಿಸಬಹುದಾದಂಥ ಬಡ್ಡಿ ಸಹಿತ ಸಂದಾಯ ಮಾಡುವಂತೆ ಅಥವಾ ಪುನಃ ಸ್ಥಾಪಿಸುವಂತೆ ಅಥವಾ ನ್ಯಾಯಸಮ್ಮತವದದ್ದೆಂದು ಮತ್ತು ನ್ಯಾಯಯುತವಾದದ್ದೆಂದು ಪರಿಗಣಿಸುವಂಥ ಮೊತ್ತವನ್ನು ಅಷ್ಟರಮಟ್ಟಿಗೆ ಪರಿಹಾರದ ರೂಪದಲ್ಲಿ ಸಹಕಾರ ಸಂಘದ ಆಸ್ತಿಗಳಿಗೆ ವಂತಿಗೆ ಕೊಡುವಂತೆ ಅಗತ್ಯ ಪಡಿಸುವ ಆದೇಶವನ್ನು ಹೊರಡಿಸಬಹುದು ಎಂಬುದಾಗಿದೆ. ಮೇಲೆ ಪದಗಳ ಪ್ರಕಾರ, ನಿಬಂಧಕನು ಆರೋಪಗಳನ್ನು ರೂಪಿಸತಕ್ಕದು ಮತ್ತು ಯಾರಾದರೂ ಮನವಿ ಸಲ್ಲಿಸುವುದಿದ್ದರೆ ಅದಕ್ಕೆ ಅವಕಾಶ ನೀಡತಕ್ಕದು ಮತ್ತು ಆ ವ್ಯಕ್ತಿಯ ವಿರುದ್ಧ ನಿರ್ಧರಿಸಲಾದ ಬಡ್ಡಿ ಮತ್ತು ನಿರ್ಧರಿತ ಮೊಬಲಗಿನ ಮೇಲೆ ವಿಧಿಸಲಾದ ಬಡ್ಡಿಯೂ ಸೇರಿದಂತೆ, ಹಣ ಅಥವಾ ಸ್ವತ್ತನ್ನು ಸಂದಾಯ ಮಾಡುವಂತೆ ಮತ್ತು ಪುನಃ ಸ್ಥಾಪಿಸುವಂತೆ ಆದೇಶವನ್ನು ಹೊರಡಿಸಬೇಕು ಎಂಬುದು ಅಗತ್ಯತೆಗಳಾಗಿವೆ.

ಉಚ್ಚ ನ್ಯಾಯಾಲಯದ ದಿನಾಂಕ : 31.05.1983 ರಂದು ವಿಲೆಯಾದ ರಿಟ್ ಅರ್ಜಿ ಸಂ.20/1976, ಕೆಎಲ್‌ಜೆ 1983 (2) ಪುಟ 313ರ ಸಂಬಂಧದಲ್ಲಿ ನ್ಯಾಯಸಮ್ಮತವಾದ ಮನವಿಯನ್ನು ಸಲ್ಲಿಸುವ ಅವಕಾಶ ಪರಿಶೀಲಿಸಿದ್ದು ಅದು ಈ ಮುಂದಿನಂತಿದೆ:– (ಈ ರಿಟ್ ಅರ್ಜಿಯು ಕರ್ನಾಟಕ ಸಹಕಾರ ಸಂಘಳ ಅಧಿನಿಯಮ 1959ರ 30ನೇ ಪ್ರಕರಣದ ಮೇರೆಗಿನ ವಿಷಯವಾಗಿತ್ತು.)

> **".. .. .. ಬಹಳ ಹಿಂದೆಯೇ ಸರ್ವೋಚ್ಚ ನ್ಯಾಯಾಲಯವು ಯಾರೇ ವ್ಯಕ್ತಿಯು ಸಿವಿಲ್ ಪರಿಣಾಮವನ್ನು ಎದುರಿಸಬೇಕಾಗಿರುವಾಗಲೆಲ್ಲ ಅವನು ಎದುರಿಸುವ ಸಿವಿಲ್ ಪರಿಣಾಮಗಳ ಆಧಾರದ ಮೇಲೆ ಆರೋಪಗಳನ್ನು ಸಮರ್ಥಿಸಿಕೊಳ್ಳುವ ಅವಕಾಶವನ್ನು ಹೊಂದಿರತಕ್ಕದ್ದು. ಅಂದರೆ, ಆತನಿಗೆ ತನ್ನ ಮನವಿಯನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಬೇಕು. ತನ್ನ ವಿರುದ್ಧದ ಮೊಕದ್ದಮೆಯ ಬಗ್ಗೆ ಸ್ಪಷ್ಟವಾಗಿ ತಿಳಿದಿರಬೇಕು ಮತ್ತು ತನ್ನ ವಿರುದ್ಧ ಹೂಡಲಾದ ಮೊಕದ್ದಮೆಯನ್ನು ಎದುರಿಸುವ ಅವಕಾಶವನ್ನು ಹೊಂದಿರಬೇಕು... .. .. .." ಎಂದು ಸಮಂಜಸವಾದ ತೀರ್ಪು ನೀಡಿದೆ.."**
>
> **".. ಶಾಸನವು ಮೌಖಿಕ (ವಿಚಾರಣೆಯ) ಹಕ್ಕನ್ನು ಸ್ಪಷ್ಟವಾಗಿ ನೀಡಿಲ್ಲದಿರುವಾಗ. ಅದನ್ನು ಮ್ಯಾಕ್ಷಿಮ್ "ಆದಿ ಆಲ್ಟ್‌ರೆಮ್ ಪಾರ್ಟೆನ್" ಅಡಿ ಹಕ್ಕು ಎಂಬುದಾಗಿ ಕ್ಲೇಮು ಮಾಡಲಾಗದು".**

**ವರದಿಯಾದ ಇನ್ನೊಂದು ತೀರ್ಪು ಎಂಎಲ್‌ಜೆ 1972 (2)ರ ಸಂಕ್ಷಿಪ್ತ ಟಿಪ್ಪಣಿ ಬಾಬು 29 ಸಂ.290, ಪುಟ ಸಂ.112 ರಲ್ಲಿ ಮೋಟಾರು ವಾಹನಗಳ ಅಧಿನಿಯಮ, 1939ರ 33 (1) (ಹೆಚ್) ಪ್ರಕರಣದ ಉಪಬಂಧಗಳನ್ನು ಪರಿಶೀಲಿಸುವಾಗ, ಈ ಮುಂದಿನಂತೆ ತೀರ್ಪು ನೀಡಿದೆ.**

"..   ..   ..  ಆದ್ದರಿಂದ ಮಾಲೀಕನು ಮನವಿಯನ್ನು ಸಲ್ಲಿಸಬೇಕೆಂಬುದು ಏಕೈಕ ಹಕ್ಕಾಗಿದೆ. ಪ್ರಕರಣವು, ವಾಹನದ ಮಾಲೀಕನ ಉಪಸ್ಥಿತಿಯಲ್ಲಿ ಸಾಕ್ಷಿಗಳ ಸಾಕ್ಷ್ಯವನ್ನು ದಾಖಲಿಸಿಕೊಳ್ಳುವುದಕ್ಕಿಂತ ಯಾವುದೇ ವಿಸ್ತೃತ ವಿಚಾರಣೆಯನ್ನು ನಡೆಸುವುದನ್ನು

ಸಂರಕ್ಷಣೆ ಎಂದರೆ ಉದ್ದೇಶಿತ ಕ್ರಮದ ವಿರುದ್ಧ ಮನವಿಯನ್ನು ಸಲ್ಲಿಸುವ ಅವಕಾಶವಿರುತ್ತದೆ. ಅಧಿನಿಯಮದ 33ನೇ ಪ್ರಕರಣದಲ್ಲಿ ಹೇಳಲಾದ ಅವಕಾಶವು ನೈಜ ಮತ್ತು ಪರಿಣಾಮಕಾರಿ ಅವಕಾಶವಾಗಿರಬೇಕು ಮತ್ತು ಬಾದಕವಾದುದಾಗಿರಬಾರದು. ಆದ್ದರಿಂದ, ಪ್ರಾಧಿಕಾರವು, ವಾಹನದ ಮಾಲೀಕನು ಮನವಿಯನ್ನು ಸಲ್ಲಿಸುವ ತನ್ನ ಹಕ್ಕನ್ನು ಮನದಟ್ಟಾಗುಂತೆ ಪರಿಶೀಲಿಸಬಹುದಾದ ಹಾಗೆ ಅಧಿನಿಯಮದ 33ನೇ ಪ್ರಕರಣದ ಮೇರೆಗಿನ ಕ್ರಮದಲ್ಲಿ ಅದು ಯಾವ ಸಾಮಗ್ರಿಯ ಮೇಲೆ ಉದ್ದೇಶಿಸಿದೆಯೋ ಆ ಸಾಮಗ್ರಿಯನ್ನು ವಾಹನದ ಮಾಲೀಕನಿಗೆ ಲಭ್ಯವಾಗುವಂತೆ ಮಾಡಬೇಕೆಂಬುದನ್ನು ಅಗತ್ಯ ಪಡಿಸಿದೆ."

ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು, ಎಂಎಲ್‌ಜೆ 1972(2) 421ನಲ್ಲಿ ವರದಿಯಾದ ದಿನಾಂಕ : 28.07.1972 ರಂದು ವಿಲೇಯಾದ ಇನ್ನೊಂದು ಪ್ರಕರಣದಲ್ಲಿ (ರಿಟ್ ಅರ್ಜಿ ಸಂ.5080/1969) ನೌಕರರ ಭವಿಷ್ಯ ನಿಧಿ ಅಧಿನಿಯಮದ ಪ್ರಕರಣ 14(ಬಿ) ಉಪಬಂಧಗಳನ್ನು ಪರಿಶೀಲಿಸುವಾಗ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ.

"ಪ್ರಕರಣ 148ರಡಿ ಯಾರ ವಿರುದ್ಧ ಕ್ರಮಕೈಗೊಳ್ಳಲಾಗಿದೆಯೋ ಅಂಥ ಪ್ರತಿಯೊಬ್ಬ ವ್ಯಕ್ತಿಯು ಖುದ್ದಾಗಿ ಅಹವಾಲನ್ನು ಹೇಳಿಕೊಳ್ಳುವ ಹಕ್ಕನ್ನು ಹೊಂದಿರುತ್ತಾನೆಂಬುದನ್ನು ಕಾನೂನಿನ ವಿಷಯವಾಗಿದೆ ಎನ್ನಲಾಗಿದೆ. ಪ್ರಕರಣ 148ರಡಿ ಯಾರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಲಾಗಿದೆಯೋ ಅಂತ ಪಕ್ಷಕಾರನನ್ನು ಪ್ರತಿ ಪ್ರಕರಣದ ವಾಸ್ತವ ಸಂಗತಿಗಳನ್ನು ಅವಲಂಬಿಸಿ ಖುದ್ದಾಗಿ ವಿಚಾರಣೆ ಮಾಡಬೇಕೋ ಅಥವಾ ಬೇಡವೇ ಎಂಬುದು ಪ್ರಶ್ನೆಯಾಗಿದೆ".

ಅರ್ಜಿದಾರನು, ಅಧಿನಿಯುಮದ 148ನೇ ಪ್ರಕರಣದ ಮೇರೆಗೆ ಯಾವುದೇ ಕ್ರಮ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಖುದ್ದು ಅಹವಾಲು ಹೇಳಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಸರ್ಕಾರಕ್ಕೆ ನಿರ್ದಿಷ್ಟ ಕೋರಿಕೆಯನ್ನು ಸಲ್ಲಿಸಬೇಕು ಎಂಬುದು ವಾಸ್ತವಿಕವಾಗಿದೆ. ರಾಜ್ಯ ಸರ್ಕಾರವು ಈ ಬಗ್ಗೆ ಅರ್ಜಿದಾರನು ಸಲ್ಲಿಸಿದ ಕೋರಿಕೆಯ ಬಗ್ಗೆ ಏನನ್ನೂ ಹೇಳುವುದಿಲ್ಲ. 148ನೇ ಪ್ರಕರಣದ ಮೇರೆಗೆ ಯಾರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು ಖುದ್ದಾಗಿ ಅಹವಾಲನ್ನು ಹೇಳಿಕೊಳ್ಳುವ ಹಕ್ಕನ್ನು ಹೊಂದಿರುತ್ತಾನೆಂಬುದು ಕಾನೂನಿನ ವಿಷಯವಾಗಿದೆ.

ಯಾರೇ ಪಕ್ಷಕಾರನನ್ನು ಪ್ರತಿ ಪ್ರಕರಣದ ವಾಸ್ತವಾಂಶಗಳನ್ನು ಅವಲಂಬಿಸಿ ಖುದ್ದಾಗಿ ವಿಚಾರಣೆ ಮಾಡಬೇಕೇ ಅಥವಾ ಬೇಡವೇ ಎಂಬುದು ಪ್ರಶ್ನೆಯಾಗಿದೆ. ಖುದ್ದು ಅಹವಾಲನ್ನು ಹೇಳಿಕೊಳ್ಳುವುದಕ್ಕಾಗಿ ಕೋರಿಕೆಯನ್ನು ಸಲ್ಲಿಸಿದಾಗ, ಸರ್ಕಾರವು ತನ್ನ ವಿವೇಚನೆಯನ್ನು ಬಳಸಬೇಕು ಮತ್ತು ವಿಷಯವನ್ನು ಖುದ್ದು ವಿಚಾರಣೆಗೆ ಕರೆಯದೆ ತೃಪ್ತಿಕರವಾಗಿ ವಿಲೇ ಮಾಡಬಹುದೇ ಎಂಬ ಬಗ್ಗೆ ಮೊಕದ್ದಮೆಯ ಸಂಗತಿಗಳು ಮತ್ತು ಎತ್ತಲಾದ ವಾದಾಂಶಗಳನ್ನು ಆಧರಿಸಿ ತೀರ್ಮಾನಿಸಬೇಕು."

ಉಚ್ಚ ನ್ಯಾಯಾಲಯದ ಕೆಎಲ್‌ಜೆ 1978 (1) ಪುಟ 127ರಲ್ಲಿ ವರದಿಯಾದ ಇನ್ನೊಂದು ತೀರ್ಪಿನಲ್ಲಿ, ರಿಟ್ ಅರ್ಜಿ ಸಂ.1257/1976ನ್ನು ದಿನಾಂಕ : 19.12.1977 ರಂದು ವಿಲೇ ಮಾಡುವಾಗ, ಕರ್ನಾಟಕ ಸಹಕಾರ ಸಂಘಗಳ (ಕೆಪಿಎಸ್) ಅಧಿನಿಯಮದ 30(1)ನೇ ಪ್ರಕರಣದ ಉಪಬಂದಗಳನ್ನು

ಪರಿಶೀಲಿಸುತ್ತಾ ಮೌಖಿಕ ಮನವಿಗೆ ಅವಕಾಶ ನೀಡುವ ಬಗ್ಗೆ ಪ್ಯಾರಾ 6ರಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ.

> **".. .. .. ಈ ಸ್ವರೂಪದ ಪ್ರಕರಣಗಳಲ್ಲಿ, ಅಧಿನಿಯಮದ 30(1)ನೇ ಪ್ರಕರಣದ ಮೇರೆಗೆ ವ್ಯವಸ್ಥಾಪನಾ ಸಮಿತಿಯು ವಿರುದ್ಧ ಕ್ರಮಕೈಗೊಳ್ಳುವಾಗ, ಯಾರ ವಿರುದ್ಧ ಕ್ರಮಕೈಗೊಳ್ಳಲಾಗುತ್ತಿದೆಯೋ ಆ ವ್ಯಕ್ತಿಗಳು ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ತಮ್ಮ ಪ್ರಕರಣವನ್ನು ಮಂಡಿಲು ಯುಕ್ತ ಅವಕಾಶವನ್ನು ನೀಡಬೇಕೆಂಬುದು ವಾಸ್ತವಾಂಶವಾಗಿದೆ. ನ್ಯಾಯಾಲಯಗಳಲ್ಲಿ ವ್ಯವಹರಣೆಗಳನ್ನು, ಹೊರತು ಪಡಿಸಿ, ಹೆಚ್ಚಲ್ಲದೆ ಕೇವಲ ಮೌಖಿಕ ಮನವಿಯನ್ನು ಮಾಡಿಕೊಳ್ಳುವ ಅವಕಾಶವನ್ನು ನಿರಾಕರಿಸುವುದಷ್ಟೆ ಆಗಿದ್ದು, ಎಲ್ಲಾ ಪ್ರಕರಣಗಳಲ್ಲಿ ಖುದ್ದು ವಿಚಾರಣೆ ರೂಪದಲ್ಲಿ ಆವಕಾಶವನ್ನು, ನೀಡಬೇಕೆಂಬುದನ್ನು ಅಗತ್ಯ ಪಡಿಸುವ ಯಾವುದೇ ನಿಯಮವಿಲ್ಲ ಎಂದು ವ್ಯವಹರಣೆಗಳನ್ನು, ನಿರರ್ಥಕಗೊಳಿಸಬಾರದು. ಲಿಖಿತದಲ್ಲಿ ಆಕ್ಷೇಪಣೆಗಳನ್ನು ಹೇಳುವ ಅವಕಾಶವು ಸ್ವಾಭಾವಿಕ ನ್ಯಾಯ ನಿಯಮಗಳನ್ನು ಪಾಲಿಸಿದಂತಾಗುತ್ತದೆ.. .. .. ಪ್ರಸಕ್ತ ಪ್ರಕರಣದಲ್ಲಿ ಲಿಖಿತ ಮನವಿಯನ್ನು ಸಲ್ಲಿಸುವ ಅವಕಾಶವನ್ನು ನೀಡಲಾಗಿರುವುದರಿಂದ, ಸ್ವಾಭಾವಿಕ ನ್ಯಾಯ ತತ್ವಗಳ ಉಲ್ಲಂಘನೆಯಾಗಿದೆ ಎಂಬುದು ನಮ್ಮ ಗಮನಕ್ಕೆ ಬಂದಿರುವುದಿಲ್ಲ."**

ಉಚ್ಛ ನ್ಯಾಯಾಲಯವು ಎಐಆರ್ 1967 ಎಐಆರ್ 1967 ಎಸ್‌ಸಿ 1398 ಮತ್ತು ಎಐಆರ್ 1971 ಎಸ್‌ಸಿ 1093ಗಳ ಸಂಬಂಧಪಟ್ಟ ವಿನಾಯಿತಿ ನೀಡಿದೆ.

ಭಾರತ ಸರ್ವೋಚ್ಚ ನ್ಯಾಯಾಲಯವು ಕೆಎಲ್‌ಜೆ 1977 (2) ಪುಟ 259ರಲ್ಲಿ ವರದಿಯಾದ ಒಂದು ತೀರ್ಪಿನಲ್ಲಿ ಸಂಕ್ಷಿಪ್ತ ಟಿಪ್ಪಣಿ ಸಂ.38ರಲ್ಲಿ ಆಂಧ್ರಪ್ರದೇಶ ಸಹಕಾರ ಸಂಘಗಳ ಅಧಿನಿಯಮದ ಪ್ರಕರಣ 77(2) ನೇ ಪ್ರಕರಣ ಪರಿಶೀಲಿಸುವಾಗ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ.

> **"ಯಾರೇ ವ್ಯಕ್ತಿಗೆ ಆತನ ಮನವಿ ಸಲ್ಲಿಸುವ ಅವಕಾಶವನ್ನು ನೀಡಿದ್ದ ಹೊರತು ಅಂಥ ವ್ಯಕ್ತಿಗೆ ಬಾಧಕವಾಗುವ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ".**

ನಂತರ ತಾನು ನ್ಯಾಯಸಮ್ಮತ ಮತ್ತು ನ್ಯಾಯಯುತವಾದದ್ದೆಂದು ಭಾವಿಸುವಂಥ ಬಡ್ಡಿ ದರದೊಂದಿಗೆ ಆದೇಶಗಳನ್ನು ಹೊರಡಿಸುವುದು ಆಗಿರುತ್ತದೆ.

ಉಚ್ಛ ನ್ಯಾಯಾಲಯದ ಕೆಎಲ್‌ಜೆ (ನ್ಯಾಯಾಧೀಕರಣ ಪೂರಕ) 1989ರ ಪು 118 ಮತ್ತು 1991(2) ಕೆಎಲ್‌ಜೆ 23ರಲ್ಲಿ ವರದಿಯಾದ ತೀರ್ಪುಗಳು ಅಧಿನಿಯಮದ 69ನೇ ಪ್ರಕರಣದ ಅಡಿಯಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಗಳ ಬಗ್ಗೆ ಕೆಲವು ಮಾರ್ಗಸೂಚಿಗಳನ್ನು ರೂಪಿಸಿದೆ. 69ನೇ ಪ್ರಕರಣದ ಅಗತ್ಯತೆಯು ಕೇವಲ ಆರೋಪಗಳನ್ನು ರೂಪಿಸುವುದಕ್ಕೆ, ಮನವಿಯನ್ನು ಪಡೆದು, ದಸ್ತಾವೇಜುಗಳನ್ನು ಪರಿಶೀಲಿಸಿ, ನಂತರ ಆದೇಶವನ್ನು ಹೊರಡಿಸುವುದಕ್ಕೆ ಮಾತ್ರವಾಗಿದೆ ಎಂಬ ಮುಂದಿನ ನಿರ್ಣಯಗಳನ್ನು ಈ ನಿರ್ಣಯಗಳು ನಿಷ್ಪರಿಣಾಮಗೊಳಿಸಿವೆಯೆಂದು, ಈ ತೀರ್ಪುಗಳನ್ನು ಕೈಗೊಳ್ಳಲಾಗಿದೆ. ಈ ಎರಡೂ ನಿರ್ಣಯಗಳನ್ನು ಪರಿಶೀಲಿಸಿದಾಗ, ಅಧಿನಿಯಮದ 69ನೇ ಪ್ರಕರಣದ ಮೇರೆಗಿನ ಪ್ರಕ್ರಿಯಾತ್ಮಕ ಅಂಶಕ್ಕೆ ಒಂದು ಹೊಸ ಆಯಾಮವನ್ನು ನೀಡಿದಂತಾಗುತ್ತದೆ. ಆದರೆ ಅನುಸರಿಸಲು ಅಗತ್ಯ ಪಡಿಸಿದ ಪ್ರಕ್ರಿಯೆಯನ್ನು ರದ್ದುಗೊಳಿಸಲಾಗಿದೆಯೆಂದಾಗಲಿ ಅಥವಾ ಭಿನ್ನ ಪ್ರಕ್ರಿಯೆಯನ್ನು ಗೊತ್ತುಪಡಿಸಲಾಗಿದೆಯೆಂದಾಗಲಿ ಇರುವುದಿಲ್ಲ. 1989ರ ನಿರ್ಣಯದ ಸಂಬಂಧಿಸಿದ ಪ್ಯಾರಾಗಳನ್ನು ಈ ಕೆಳಗೆ ನೀಡಲಾಗಿದೆ:–

"ಸಂಬಂಧಪಟ್ಟ ರಿಜಿಸ್ಟ್ರಾರನು, ಕಾರ್ಯ ವಿಧಾನಗಳನ್ನು ಪ್ರಾರಂಭಿಸಲು ಅಧಿಕಾರ ಹೊಂದಲು, ಮೊದಲು ತಾನೇ ಸ್ವತಃ ಮಾಡಿದ ತನಿಖೆ ಅಥವಾ ಬೇರೆ ಯಾರೋ ಒಬ್ಬರ ವಿನಂತಿಯ ಮೇರೆಗೆ ಮಾಡಿದ

ತನಿಖೆಯ ರೂಪದಲ್ಲಿ ವಿಷಯ ಸಾಮಗ್ರಿಯನ್ನು ಹೊಂದಿರಬೇಕಾಗುತ್ತದೆ. ಅಂಥ ವಿಷಯ ಸಾಮಗ್ರಿಯು ಆ ಪ್ರಕರಣದಲ್ಲಿ ನಮೂದಿಸಿರುವ ನಿರ್ಲಕ್ಷ್ಯತೆ ದುರುಪಯೋಗ ಇತ್ಯಾದಿ ಕಾರಣದಿಂದಾಗಿ ಸಹಕಾರ ಸಂಘದ ಸ್ವತ್ತುಗಳನ್ನು ಕುಗ್ಗಿಸಿದ್ದಕ್ಕೆ ಸಾಕ್ಷ್ಯವಾಗಬೇಕಾಗುತ್ತದೆ. ಅದು ಅಂಥ ವಿಷಯ ಸಾಮಗ್ರಿಯ ಲಭ್ಯತೆಯನ್ನು ಅವಲಂಭಿಸಿರುತ್ತದೆ. ಅಂಥ ವಿಷಯ ಸಾಮಗ್ರಿಯನ್ನು ಆಧರಿಸಿ, ಪ್ರಥಮ ಅಗತ್ಯತೆಯಾಗಿ ನ್ಯಾಯಾಧೀಕರಣವು ನೈಜ ವಿಶ್ಲೇಷಣೆ ಮಾಡಿದಂತೆ, ರಿಜಿಸ್ಟ್ರಾರನು ಆರೋಪಗಳನ್ನು ರೂಪಿಸಬೇಕಾಗುತ್ತದೆ. ತದನಂತರ, ಪ್ರಥಮ ಅಗತ್ಯತೆಯು ಸಮಾಧಾನಕರವಾಗಿದ್ದರೆ, ಅವನು, ನಿರ್ದಿಷ್ಟ ಆರೋಪಗಳಿಂದ ಬಾಧಿತರಾಗುವ ಸಂಭವವಿರುವಂಥ ವ್ಯಕ್ತಿಗಳನ್ನು ಮನವಿ ಸಲ್ಲಿಸುವಂತೆ ಕರೆಯಬಹುದು ಹಾಗೂ ಅನಂತರ ಅಂಥ ಮನವಿಯ ಮೇಲೆ ಅಗತ್ಯವಿರಬಹುದಾದಂಥ ವಿಚಾರಣೆಯನ್ನು ನಡೆಸಬಹುದು ಮತ್ತು ಸಹಕಾರ ಸಂಘದ ಮಾಜಿ ಅಧಿಕಾರಿ ಅಥವಾ ನೌಕರ, ನಿರ್ದೇಶಕರ, ಮಾಜಿ ಸದಸ್ಯ ಹಾಗೂ ಮಾಜಿ ನೌಕರ ಮುಂತಾದ ಪ್ರತಿಯೊಬ್ಬರ ಮೇಲೂ ಪ್ರತ್ಯೇಕ ಹೊಣೆಯನ್ನು ಗೊತ್ತುಪಡಿಸಬಹುದು, ಅವನು ರೂಪಿಸಲಾದ ಆರೋಪದ ತಪ್ಪಿತಸ್ಥನೆಂದು ಕಂಡು ಬಂದರೆ, ಸದರಿ ಅಧಿಕಾರಿಗಳು, ನೌಕರರು, ಮುಂತಾದ ಪ್ರತಿಯೊಬ್ಬರ ವಿರುದ್ಧವೂ, ಆಪಾದಿಸಲಾದ ಕೃತ್ಯದ ಮೂಲಕ ಸ್ವತ್ತನ್ನು ಕುಗ್ಗಿಸಿದ್ದಕ್ಕಾಗಿ ನಷ್ಟಪರಿಹಾರ ತುಂಬಿಕೊಡಬೇಕಾದ ಹಣಕಾಸು ಹೊಣೆಗಾರಿಕೆಗೆ ಅವನನ್ನು ಗುರಿ ಮಾಡಬಹುದು. ಅಧಿನಿಯಮದ 69ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶವು ಈ ಅಂಶಗಳಲ್ಲಿ ಯಾವುದೇ ಒಂದು ಕೊರತೆಯನ್ನು ಹೊಂದಿದ್ದರೆ ಆಗ ಆ ಆದೇಶವು ಸ್ಪಷ್ಟವಾಗಿ ಅಧಿಕಾರ ವ್ಯಾಪ್ತಿ ಇಲ್ಲದ್ದಾಗುತ್ತದೆ ಮತ್ತು ದಾಖಲೆಯಿಂದಲೇ ಸ್ಪಷ್ಟವಾಗುವಂತೆ ಕಾನೂನುಬಾಹಿರತೆಗೆ ಒಳಗಾಗಿದ್ದರೆ, ಸಂವಿಧಾನದ 226 ಮತ್ತು 227ನೇ ಅನುಚ್ಛೇದದ ಮೇರೆಗೆ ಈ ನ್ಯಾಯಾಲಯವನ್ನು ಮಧ್ಯಪ್ರವೇಶ ಕೋರಬಹುದಾಗಿರುತ್ತದೆ."

"ಅಧಿನಿಯಮದ 69ನೇ ಪ್ರಕರಣದ ಅಡಿಯಲ್ಲಿನ ಅಧಿಭಾರ ವ್ಯವಹರಣೆಗಳು, ಸಮಾಪಕನ ಅರ್ಜಿಯ ಮೇಲೆ, ಕಂಪನಿ ನ್ಯಾಯಾಲಯವು ಪ್ರಾರಂಭಿಸಬಹುದಾದ ವ್ಯವಹರಣೆಗಳಿಗೆ ಅಥವಾ ಹಣ ದುರುಪಯೋಗ ವ್ಯವಹರಣೆಗಳೆಂದು ಸಾಮಾನ್ಯವಾಗಿ ಅರ್ಥೈಸಲಾಗಿರುವ ಕಂಪನಿಗಳ ಅಧಿನಿಯಮ, 1956ಕ್ಕೆ ಹೋಲಿಕೆಯಾಗುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದು ಸೂಕ್ತವಾಗಬಹುದು. ಆ ವಿಷಯದ ಬಗ್ಗೆ ಹಿಂದಿನ ತೀರ್ಪುಗಳ ಅಗತ್ಯವಿರುವುದಿಲ್ಲ. ಅಧಿನಿಯಮದ 69ನೇ ಪ್ರಕರಣದ ಮೇರೆಗಿನ ವ್ಯವಹರಣೆಗಳು, ಹಣಕಾಸು ಹೊಣೆಗಾರಿಕೆಯನ್ನು ಹೊರಿಸುತ್ತಿರುವುದರ ವಿರುದ್ಧ ಕಾನೂನು ಕ್ರಮ ಮುಂದುವರಿಯುವುದರಲ್ಲಿ ಪರ್ಯಾವಸಾನವಾದರೆ ಮತ್ತು ದುರುಪಯೋಗ, ವಂಚನೆ ಮುಂತಾದವುಗಳಂಥ ಅಪರಾಧಗಳಿಗಾಗಿ ಕ್ರಿಮಿನಲ್ ನ್ಯಾಯಾಲಯದಲ್ಲಿ ಕಾನೂನು ವ್ಯವಹರಣೆ ಇದ್ದರೂ ಕೂಡ ನನ್ನ ಅಭಿಪ್ರಾಯದಲ್ಲಿ, ರಿಜಿಸ್ಟ್ರಾರನ ಕ್ರಮವು ಸಿವಿಲ್ ಪರಿಣಾಮಗಳಿಂದ ಪ್ರಾರಂಭಿಸಿದ ಕ್ರಿಮಿನಲ್ ವ್ಯವಹರಣೆಗಳಿಗೆ ತುಂಬಾ ನಿಕಟ ಸಂಬಂಧವುಳ್ಳ ಸ್ವರೂಪ ಹಾಗೂ ಗುಣವನ್ನು ಪಡೆದಿರುತ್ತದೆ. ಆದ್ದರಿಂದ, ಸ್ವಾಭಾವಿಕ ನ್ಯಾಯಗಳ ನಿಯಮಗಳ ಅಗತ್ಯತೆಗಳನ್ನು ಕಟ್ಟುನಿಟ್ಟಾಗಿ ಗಮನಿಸಬೇಕು ಹಾಗೂ ಪಾಲಿಸಬೇಕು. ಆಗ ಇದು ಈ ನ್ಯಾಯಾಲಯದ ನ್ಯಾಯಿಕ ವಿವೇಚನೆಯನ್ನು ಈಡೇರಿಸುತ್ತದೆ."

ಅಲ್ಲದೆ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ.

> **"ಖುದ್ದು ಅಹವಾಲು ಹೇಳಿಕೊಳ್ಳುವುದು ಅನಿವಾರ್ಯ ಹೊಣೆಗಾರಿಕೆಯಾಗಿಲ್ಲದಿದ್ದರೂ ಪ್ರಕರಣ 77(2) ರ ಕನಿಷ್ಟ ಅಗತ್ಯತೆಯು ಲಿಖಿತ ಸೂಚನೆಯಾಗಿದೆ ಮತ್ತು ಈ ಕನಿಷ್ಟ ಅಗತ್ಯತೆಯು, ಯಾವುದೇ ಕಾರಣಕ್ಕೂ ಪಕ್ಷಕಾರನಿಗೆ ಬಾಧಕವಾಗದಿರುವ ಅಥವಾ ಆತನಿಗೆ ತಿಳಿದಿದೆ ಎಂದು ಆರೋಪ ಹೊರಿಸದಿರುವ ತತ್ವಗಳ ಮೇಲೆ ಆಧರಿಸುವುದರಿಂದ ವಿನಾಯಿತಿ ಬಿಟ್ಟು ಬಿಡಲಾಗದು.. .. .. .**

ಶ್ರೀ ಎ.ಜಿ.ಆನೆಗುಂದಿಯವರು "ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಮತ್ತು

ಅದರಡಿಯ ನಿಯಮಗಳು" ಎಂಬ ಪುಸ್ತಕದಲ್ಲಿ ಮಧ್ಯಪ್ರದೇಶ ಕಂದಾಯ ಮಂಡಳಿಯು ನೀಡಿದ್ದ 1970ರ ಸಹಕಾರ ಸಂಘದ ಕಾನೂನು ಪತ್ರಿಕೆಯಲ್ಲಿ ವರದಿಯಾಗಿದ್ದ ಒಂದು ತೀರ್ಪನ್ನು ಉದ್ಧರಿಸಿದ್ದು, ಈ ತೀರ್ಪಿನಲ್ಲಿ ಮಧ್ಯಪ್ರದೇಶ ಕಂದಾಯ ಮಂಡಳಿಯು, ಸಹಾಯಕ ರಿಜಿಸ್ಟ್ರಾರ್ ಒಬ್ಬ ವಕೀಲರ ಮೂಲಕ ಪ್ರತಿನಿಧಿಸುವುದನ್ನು ನಿರಾಕರಿಸಿರುವ ವಿಚಾರವು ಯುಕ್ತ ಅವಕಾಶದ ನಿರಾಕರಣೆಯಾಗುತ್ತದೆಯೇ ಎಂಬುದರ ಬಗ್ಗೆ ಮಧ್ಯಪ್ರದೇಶ ಸಹಕಾರ ಸಂಘಗಳ ಅಧಿನಿಯಮ 1960ರ ಪ್ರಕರಣ 63(1) ಮತ್ತು 63(2) ಅನ್ನು ಪರಿಶೀಲಿಸುತ್ತಾ ಈ ಕೆಳಗಿನಂತೆ ನಿರ್ಣಯಿಸಿದೆ.

> **"ಅಧಿನಿಯಮವು, ಯಾವುದು ಯುಕ್ತ ಅವಕಾಶವಾಗಿರುತ್ತದೆ ಎಂಬ ಬಗ್ಗೆ ವ್ಯಾಖ್ಯಾನಿಸಿರುವುದಿಲ್ಲ. 67(2) ಪ್ರಕರಣವು ಅಧ್ಯಾಯ – VII ಕ್ಕೆ ಮಾತ್ರ ಅನ್ವಯವಾಗುತ್ತದೆ ಎಂಬುದು ಖಂಡಿತವಾಗಿಯೂ ಸತ್ಯ. ಆದರೂ ಉಪಪ್ರಕರಣವು ಕಾನೂನು ರಚನಾಕಾರರು ಅಧಿನಿಯಮದ ಮೇರೆಗಿನ ವ್ಯವಹರಣೆಗಳಲ್ಲಿ ನ್ಯಾಯವಾದಿಗಳು ಪ್ರತಿನಿಧಿಸುವುದನ್ನು ನಿರುತ್ಸಾಹಗೊಳಿಸಿದ್ದಾರೆಂಬುದನ್ನು ಸೂಚಿಸುತ್ತದೆ. ಕಾನೂನು ರಚನಾಕಾರರು, ಪ್ರಕರಣ 63ರ ಮೇರೆಗೆ ವ್ಯವಹರಣೆಗಳನ್ನು ಯಾರ ವಿರುದ್ಧ ನಿರೂಪಿಸಲಾಗಿದೆಯೋ, ಆ ವ್ಯಕ್ತಿಗಳಿಗೆ ರಿಜಿಸ್ಟ್ರಾರ್‌ನ ಅನುಮತಿಯನ್ನು ಪಡೆದು ನ್ಯಾಯವಾದಿಗಳ ಮೂಲಕ ಪ್ರತಿನಿಧಿಸಲು ಅವಕಾಶ ನೀಡಬೇಕಾದುದು ಅಗತ್ಯವೆಂದು ಭಾವಿಸಿದ್ದಲ್ಲಿ ಅಧ್ಯಾಯ – VI ರಲ್ಲಿ ಸಹ ಅದೇ ರೀತಿಯ ಉಪಬಂಧಗಳನ್ನು ಮಾಡುವುದರಿಂದ ಅವರನ್ನು ಯಾವುದು ತಡೆಯಲಿಕ್ಕಾಗುತ್ತಿರಲಿಲ್ಲ ಎಂಬುದನ್ನು ಅಧ್ಯಾಯ – VII ರ ಪ್ರಕರಣದಲ್ಲೂ ಹೇಳಲಾಗಿದೆ. ಕಾನೂನು ರಚನಾಕಾರರು, 63(1)ರ ಮೇರೆಗಿನ ವ್ಯವಹರಣೆಗಳನ್ನು ನ್ಯಾಯವಾದಿಗಳ ಮೂಲಕ ಪ್ರತಿನಿಧಿಸಬಹುದೆಂಬ ಉದ್ದೇಶವನ್ನು ಹೊಂದಿರುವುದಿಲ್ಲ ಎಂಬುದನ್ನು ತಿಳಿಯಲು ಯಾವುದೇ ವಿಶೇಷ ಉಪಬಂಧವನ್ನು ಮಾಡಲಾಗಿಲ್ಲವೆಂಬುದು ಕೇವಲ ಸಂಗತಿಯಾಗಿದೆ. (ಸದರಿ ಪುಸ್ತಕದ ಪುಟ 375)."**

ಮೇಲೆ ಉದಾಹರಿಸಲಾದ ತೀರ್ಪುಗಳು, ಪಕ್ಷಕಾರರಿಗೆ ತಮ್ಮ ಲಿಖಿತ ಮನವಿಯನ್ನು ಸಲ್ಲಿಸಲು ಅವಕಾಶವನ್ನು ನೀಡಿದ್ದಲ್ಲಿ ಅದು ಸ್ವಾಭಾವಿಕ ನ್ಯಾಯದ ಹಾಗೂ ಯುಕ್ತ ಅವಕಾಶ ತತ್ವಗಳಿಗೆ ತಕ್ಕುದಾಗಿರುತ್ತದೆ ಎಂಬ ನೀತಿಯನ್ನು ಪ್ರತಿಪಾದಿಸುತ್ತವೆ. ಈಗ ಉಪಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ (ಕೆಸಿಎಸ್) ಅಧಿನಿಯಮದ 69ನೇ ಪ್ರಕರಣವು, ರಿಜಿಸ್ಟ್ರಾರ್‌ರವರು ಆರೋಪಗಳನ್ನು ರೂಪಿಸಿದ ನಂತರ ಮನವಿಯನ್ನು ಸಲ್ಲಿಸುವ ಅವಕಾಶವನ್ನು ನೀಡಿ, ಆದೇಶವನ್ನು ಹೊರಡಿಸಬೇಕೆಂಬುದನ್ನು ಮಾತ್ರ ತಿಳಿಸುತ್ತದೆ. ಇಲ್ಲಿ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಗಳು ಅರ್ಥೈಸಿದಂತೆ "ಮನವಿ ಸಲ್ಲಿಸುವ ಅವಕಾಶ" ಎಂಬ ಪದಗಳು ಲಿಖಿತ ಮನವಿಯನ್ನು ಸಲ್ಲಿಸುವ ಅವಕಾಶವನ್ನು ನೀಡಲು ಸಾಕಾಗುತ್ತದೆ ಎಂಬುದಾಗಿದೆ. ಅಲ್ಲದೆ, ವಿಧಾನ ಮಂಡಲವು ಯಾವುದೇ ಅಂಥ ಅವಕಾಶವನ್ನು ನೀಡುವ ಅಗತ್ಯವಿಲ್ಲವೆಂದು ಉದ್ದೇಶಿಸಿದಲ್ಲಿ, ಮೌಖಿಕ ನಿವೇದನೆ ಅಥವಾ ಕಾನೂನು ನೆರವನ್ನು ಒದಗಿಸುವ ಅಥವಾ ಖುದ್ದು ಅಹವಾಲನ್ನು ಹೇಳಿಕೊಳ್ಳುವ ಅವಕಾಶವು, ಅಗತ್ಯವಾಗಿರುವುದಿಲ್ಲವೆಂಬುದನ್ನು ಸಹ ಅದು ಸ್ಪಷ್ಟವಾಗಿ ತಿಳಿಸುತ್ತದೆ. ವಿಧಾನಮಂಡಲವು ತಿದ್ದುಪಡಿಯನ್ನು ಅಧಿನಿಯಮಿಸುವಾಗ ತನ್ನ ಉದ್ದೇಶಗಳು ಮತ್ತು ಕಾರಣಗಳಲ್ಲಿ, ಪ್ರಕರಣ 69ರ ಮೇರೆಗೆ ಕ್ರಮಕೈಗೊಳ್ಳುವುದಕ್ಕೆ ಮುಂಚೆ ವಿಚಾರಣೆ, ಪರಿಶೀಲನೆ ಅಥವಾ ಲೆಕ್ಕ ಪರಿಶೋಧನೆಯನ್ನು ಈಗಾಗಲೇ ಮಾಡಿರುವುದರಿಂದ ಎರಡು ವಿಚಾರಣೆಗಳ ಅಗತ್ಯವಿಲ್ಲವೆಂದು ಹೇಳಿದೆ ಎಂಬುದನ್ನು ಈ ದಸ್ತಾವೇಜಿನ ಈ ಹಿಂದಿನ ಕಂಡಿಕೆಯಲ್ಲಿ ಸಹ ಗಮನಿಸಲಾಗಿದೆ.

ಕರ್ನಾಟಕ ಅಪೀಲು ನ್ಯಾಯಾಧೀಕರಣವು, ಕಾನೂನು ಸಮ್ಮತ ಪ್ರಾತಿನಿಧ್ಯಕ್ಕೆ ಅಥವಾ ಮೌಖಿಕ

ಅಹವಾಲು ಹೇಳಿಕೊಳ್ಳುವುದಕ್ಕೆ ಅವಕಾಶ ನೀಡುವ ಅಗತ್ಯವಿಲ್ಲ ಮತ್ತು ಲಿಖಿತ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಿದರೆ ಸಾಕು ಎಂಬ ಮೇಲ್ಕಂಡ ಅಂಶವನ್ನು ಸಮರ್ಥಿಸಿ ದೃಢವಾದ ಅಭಿಪ್ರಾಯ ನೀಡಿದೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು, ಕರ್ನಾಟಕ ಆಡಳಿತ ಮಂಡಳಿಯು ದಿ: 17.06.1986 ರಂದು ವಿಲೇಯಾದ ರಿಟ್ ಅರ್ಜಿ ಸಂ.9933/84ರ (ಬಿಎಲ್‌ಜೆ 1986(2) 353 ರಲ್ಲಿ ವರದಿಯಾದ) ಸಂಬಂಧದಲ್ಲಿ ನೀಡಿದ ತೀರ್ಪುಗಳಲ್ಲೊಂದನ್ನು ಪರಿಶೀಲಿಸುವಾಗ ಪ್ಯಾರಾ 3 ರಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ.

> **"ಹೊಣೆಗಾರಿಕೆಯನ್ನು ನಿಗದಿ ಪಡಿಸುವಾಗ, ಆತನು (ರಿಜಿಸ್ಟ್ರಾರ್) ಕಾರಣ ಕೇಳುವ ನೋಟೀಸಿನ ಮೂಲಕ ತಿಳಿಸಲಾದ ಆರೋಪಗಳ ಬಗ್ಗೆ ಮನವಿಯನ್ನು ಆಹ್ವಾನಿಸುವುದಕ್ಕಿಂತ ಬೇರೇನು ಮಾಡಬೇಕಾಗಿಲ್ಲ. ಯಾವುದೇ ಸಲ್ಲಿಸಿದ ಮನವಿಯ ಮೇಲೆ, ಆತನು ತಾನು ಕೋರಬಹುದಾದಂಥ ಅಂಥ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಸಂಘವು ಸಲ್ಲಿಸಿದ ದೂರಿನ ಆಧಾರದ ಮೇಲೆ ನಿರ್ಧರಣೆ ಮಾಡಲು ಮುಂದಾಗಬೇಕು."**

ಮತ್ತು ಮುಂದುವರಿದು ಅದು ಈ ಮುಂದಿನಂತೆ ಅಭಿಪ್ರಾಯಟ್ಟಿದೆ.

> **"ಆದ್ದರಿಂದ, ಪ್ರಾಧಿಕಾರವು ಅವಕಾಶವನ್ನು ನೀಡಿದ ಡೆಪ್ಯೂಟಿ ರಿಜಿಸ್ಟ್ರಾರ್ ರವರ ಆದೇಶದಲ್ಲಿ ಯಾವುದೇ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕ್ರಮದೋಷವಾಗಿಲ್ಲ ಮತ್ತು ಮೃತ ಅರ್ಜಿದಾರರು ಅವಕಾಶವನ್ನು ಬಳಸಿಕೊಂಡಿರುವುದಿಲ್ಲ ಎಂಬ ನಿರ್ಣಯಕ್ಕೆ ಬಂದಿದೆ."**

ತೀರ್ಪಿನ ಹಿನ್ನೆಲೆಯಲ್ಲಿ ಮತ್ತು ಉಚ್ಚನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಆಧರಿಸಿ ಮತ್ತು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ 69ನೇ ಪ್ರಕರಣದ ಮೇರೆಗೆ ಪಾಲಿಸಬೇಕಾದಂಥ ಅಗತ್ಯತೆಗಳೆಂದರೆ, ಲೆಕ್ಕಪರಿಶೋಧನೆ ಅಥವಾ ಪರಿಶೀಲನೆ ಅಥವಾ ವಿಚಾರಣೆಯನ್ನು ನಡೆಸಿರಬೇಕು ಅಥವಾ ಸಂಘವನ್ನು ಸಮಾಪನೆಗೊಳಿಸುತ್ತಿರ ಬೇಕು (ಸಮಾಪಕನು ಕೈಗೊಂಡ ಕ್ರಮ). ಈ ವರದಿಗಳನ್ನು ಆಧರಿಸಿ ರಿಜಿಸ್ಟ್ರಾರನು ತಾನಾಗಿಯೇ ಅಥವಾ ಸಮಿತಿಯ ಅರ್ಜಿಯ ಮೇಲೆ ಅಥವಾ ಲೇಣಿದಾರನ ಅರ್ಜಿಯ ಮೇಲೆ ಅಧಿಭಾರ ವ್ಯವರಣೆಗಳನ್ನು ಆರಂಭಿಸಬಹುದು. ಇಂಥ ಅರ್ಜಿಯನ್ನು ಪಡೆದ ಮೇಲೆ, ರಿಜಿಸ್ಟ್ರಾರನು ಲೆಕ್ಕಪರಿಶೋಧನೆ, ಪರಿಶೀಲನೆ, ವಿಚಾರಣಾ ವರದಿಯ ಆಧಾರದ ಮೇಲೆ ಆರೋಪಗಳನ್ನು ರೂಪಿಸಿ, ಉಂಟಾದ ಕೊರತೆಯನ್ನು ಯಾರಿಂದ ವಸೂಲಿ ಮಾಡಬೇಕಾಗಿದೆಯೋ ಅಂಥ ಸಂಬಂಧಪಟ್ಟ ಪಕ್ಷಕಾರರಿಗೆ ಅವಶ್ಯಕವಾಗಿರುವಂಥ ಮನವಿಯನ್ನು ಎಂದರೆ ಲಿಖಿತ ಮನವಿಯನ್ನು ಸಲ್ಲಿಸುವಂತೆ ಕೋರಿ ಅವರಿಗೆ ವಿಷಯವನ್ನು ತಿಳಿಸಬೇಕು ಎಂಬುದು ಪ್ರಕರಣವು ಅಗತ್ಯಪಡಿಸುತ್ತದೆ. ಅಂಥ ಮನವಿಯನ್ನು ಸ್ವೀಕರಿಸಿದ ಮೇಲೆ, ರಿಜಿಸ್ಟ್ರಾರನು ದಾಖಲೆಗಳನ್ನು ಪರಿಶೀಲಿಸಿ ಮತ್ತು ಸಂಘದಿಂದ ಅಂಥ ದಾಖಲೆಗಳನ್ನು ಆಹ್ವಾನಿಸಿದ ತರುವಾಯ, ಅಂಥ ಮೊಬಲಗನ್ನು ತುಂಬಿಕೊಡುವಂತೆ ಯಾರ ವಿರುದ್ಧ ವಸೂಲಾದ ಆದೇಶವನ್ನು ಹೊರಡಿಸಬೇಕಾಗಿದೆಯೋ, ಆ ವ್ಯಕ್ತಿಯನ್ನು ಅಗತ್ಯಪಡಿಸಿ ಆದೇಶವನ್ನು ಹೊರಡಿಸಬೇಕು. ರಿಜಿಸ್ಟ್ರಾರನು, ಸಂಘಕ್ಕೆ ತುಂಬಿಕೊಡಬೇಕಾದ ಪ್ರಾಪ್ತ ಮೊಬಲಗಿನ ಮೇಲೆ ತಾನು ನ್ಯಾಯ ಸಮ್ಮತವಾದುದೆಂದು ಮತ್ತು ನ್ಯಾಯಬದ್ಧವಾದುದೆಂದು ಭಾವಿಸುವ ಬಡ್ಡಿಯನ್ನು ಕೊಡುವಂತೆ ಐತೀರ್ಪು ನೀಡಬಹುದೆಂಬುದನ್ನು ಸಹ ಪ್ರಕರಣವು ಉಪಬಂಧಿಸಿರುತ್ತದೆ.

ಉಚ್ಚ ನ್ಯಾಯಾಲಯವು ದಿ: 17.06.1986 ರಂದು ವಿಲೇ ಮಾಡಿದ ರಿಟ್ ಅರ್ಜಿ ಸಂ.9933/84 ರಲ್ಲಿ (ಬಿಎಲ್‌ಜೆ 1986(2) 353 ರಲ್ಲಿ ವರದಿಯಾದ) ಬಡ್ಡಿಯ ವಿವಾದದ ಬಗ್ಗೆ ಈ ಮುಂದಿನಂತೆ ತೀರ್ಪು ನೀಡಿದೆ.

".. .. .. ಸದರಿ ಮೊಬಲಗನ್ನು ಸಹ ವಾರ್ಷಿಕ ಶೇಕಡಾ 12ರ ಬಡ್ಡಿಯೊಂದಿಗೆ ವಸೂಲಿ ಮಾಡಲು

ನಿರ್ಣಯಿಸಿದೆ.. .. .. .."

ಈ ಪ್ರಕರಣದಲ್ಲಿ, ರಿಜಿಸ್ಟ್ರಾರನು ನಿರ್ಧರಿಸಿದ ಮೊಬಲಗಿಗೆ ಅನುಮತಿಸಲಾದ ಬಡ್ಡಿಯ ದರವು ಶೇಕಡಾ 12 ಆಗಿತ್ತು. ಆದ್ದರಿಂದ ಈ ಪ್ರಕರಣದಲ್ಲಿ ಕೊಡಲಾದ ನ್ಯಾಯಸಮ್ಮತ ಬಡ್ಡಿಯು ಶೇಕಡಾ 12 ಆಗಿತ್ತು. ಇದರಲ್ಲಿ ಉಚ್ಚ ನ್ಯಾಯಾಲಯವು ಹಸ್ತಕ್ಷೇಪ ಮಾಡಿರುವುದಿಲ್ಲ. ಹಾಗಾಗಿ, ರಿಜಿಸ್ಟ್ರಾರನು ತಾನು ಯುಕ್ತ ನ್ಯಾಯಸಮ್ಮತ ಮತ್ತು ನ್ಯಾಯಯುತವಾದುದ್ದೆಂದು ಭಾವಿಸುವಂಥ ದರದಲ್ಲಿ ಬಡ್ಡಿಯ ಬಗ್ಗೆ ನಿರ್ಣಯಿಸಬಹುದೆಂದು ಅಭಿಪ್ರಾಯ ಪಡಬಹುದಾಗಿದೆ.

ಆದುದರಿಂದ, ಪ್ರಕರಣದ 69ರ ಮೇರೆಗೆ ನಿರ್ಧರಿಸುವುದಕ್ಕಾಗಿ ವಿಚಾರಣೆಯನ್ನು ನಡೆಸುವ ಕಾರ್ಯ ವಿಧಾನವನ್ನು ತಿದ್ದುಪಡಿ ಅಧಿನಿಯಮ 19/1976ರ ದೃಷ್ಟಿಯಿಂದ ಬಿಟ್ಟು ಬಿಡಬೇಕಾಗಿದೆಯೆಂದು ವಿಧಾನ ಮಂಡಲವು ಉದ್ದೇಶಿಸಿರುವುದರಿಂದ ಪ್ರಕರಣ 70ರ ಅಗತ್ಯತೆಯನ್ನು ಪ್ರಕರಣ 69 ರೊಂದಿಗೆ ಹೋಲಿಕೆ ಮಾಡಲಾಗದು. ಕನಿಷ್ಠಪಕ್ಷ ಅಧಿನಿಯಮ 69ನೇ ಪ್ರಕರಣದ ಮೇರೆಗೆ 20.01.1976ರ ತರುವಾಯ ಹೂಡಲಾದ ವ್ಯವಹರಣೆಗಳಲ್ಲಿ, ಪ್ರಕರಣದ ಅಗತ್ಯತೆಗಳು ಮೇಲೆ ಹೇಳಿದಂತೆ ಮಾತ್ರ ಇರುತ್ತದೆ. ಅಂದರೆ, ಆರೋಪಗಳನ್ನು ರೂಪಿಸುವುದು, ಯಾವುದಾದರೂ ಮನವಿಯನ್ನು ಸಲ್ಲಿಸಿದರೆ ಅದನ್ನು ಪಡೆಯುವುದು ಮತ್ತು ದಾಖಲೆಗಳನ್ನು ಅವಲೋಕಿಸಿದ ನಂತರ ತಾನು ನ್ಯಾಯಸಮ್ಮತ ಮತ್ತು ನ್ಯಾಯಯುತವಾದದ್ದೆಂದು ಭಾವಿಸುವಂಥ ಬಡ್ಡಿ ದರದೊಂದಿಗೆ ಆದೇಶಗಳನ್ನು ಹೊರಡಿಸುವುದು ಆಗಿರುತ್ತದೆ.

ಉಚ್ಚ ನ್ಯಾಯಾಲಯದ ಕೆಎಲ್‌ಜೆ (ನ್ಯಾಯಾಧೀಕರಣ ಪೂರಕ) 1989ರ ಪು 118 ಮತ್ತು 1991 (2) ಕೆಎಲ್‌ಜೆ 23 ರಲ್ಲಿ ವರದಿಯಾದ ತೀರ್ಪುಗಳು ಅಧಿನಿಯಮದ 69ನೇ ಪ್ರಕರಣದ ಅಡಿಯಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಗಳ ಬಗ್ಗೆ ಕೆಲವು ಮಾರ್ಗಸೂಚಿಗಳನ್ನು ರೂಪಿಸಿದೆ. 69ನೇ ಪ್ರಕರಣದ ಅಗತ್ಯತೆಯು ಕೇವಲ ಆರೋಪಗಳನ್ನು ರೂಪಿಸುವುದಕ್ಕೆ, ಮನವಿಯನ್ನು ಪಡೆದು, ದಸ್ತಾವೇಜುಗಳನ್ನು ಪರಿಶೀಲಿಸಿ, ನಂತರ ಆದೇಶವನ್ನು ಹೊರಡಿಸುವುದಕ್ಕೆ ಮಾತ್ರವಾಗಿದೆ ಎಂಬ ಮುಂದಿನ ನಿರ್ಣಯಗಳನ್ನು ಈ ನಿರ್ಣಯಗಳು ನಿಷ್ಪರಿಣಾಮಗೊಳಿಸಿವೆಯೆಂದು, ಈ ತೀರ್ಪುಗಳನ್ನು ಕೈಗೊಳ್ಳಲಾಗಿದೆ. ಈ ಎರಡೂ ನಿರ್ಣಯಗಳನ್ನು ಪರಿಶೀಲಿಸಿದಾಗ, ಅಧಿನಿಯಮದ 69ನೇ ಪ್ರಕರಣದ ಮೇರೆಗಿನ ಪ್ರಕ್ರಿಯಾತ್ಮಕ ಅಂಶಕ್ಕೆ ಒಂದು ಹೊಸ ಆಯಾಮವನ್ನು ನೀಡಿದಂತಾಗುತ್ತದೆ. ಆದರೆ ಅನುಸರಿಸಲು ಅಗತ್ಯ ಪಡಿಸಿದ ಪ್ರಕ್ರಿಯೆಯನ್ನು ರದ್ದುಗೊಳಿಸಲಾಗಿದೆಯೆಂದಾಗಲಿ ಅಥವಾ ಭಿನ್ನ ಪ್ರಕ್ರಿಯೆಯನ್ನು ಗೊತ್ತು ಪಡಿಸಲಾಗಿದೆಯೆಂದಾಗಲಿ ಇರುವುದಿಲ್ಲ. 1989ರ ನಿರ್ಣಯದ ಸಂಬಂಧಿಸಿದ ಪ್ಯಾರಾಗಳನ್ನು ಈ ಕೆಳಗೆ ನೀಡಲಾಗಿದೆ:–

"ಸಂಬಂಧಪಟ್ಟ ರಿಜಿಸ್ಟ್ರಾರನು, ಕಾರ್ಯ ವಿಧಾನಗಳನ್ನು ಪ್ರಾರಂಭಿಸಲು ಅಧಿಕಾರ ಹೊಂದಲು, ಮೊದಲು ತಾನೇ ಸ್ವತಃ ಮಾಡಿದ ತನಿಖೆ ಅಥವಾ ಬೇರೆ ಯಾರೋ ಒಬ್ಬರ ವಿನಂತಿಯ ಮೇರೆಗೆ ಮಾಡಿದ ತನಿಖೆಯ ರೂಪದಲ್ಲಿ ವಿಷಯ ಸಾಮಗ್ರಿಯನ್ನು ಹೊಂದಿರಬೇಕಾಗುತ್ತದೆ. ಅಂಥ ವಿಷಯ ಸಾಮಗ್ರಿಯು ಆ ಪ್ರಕರಣದಲ್ಲಿ ನಮೂದಿಸಿರುವ ನಿರ್ಲಕ್ಷತೆ ದುರುಪಯೋಗ ಇತ್ಯಾದಿ ಕಾರಣದಿಂದಾಗಿ ಸಹಕಾರ ಸಂಘದ ಸ್ವತ್ತುಗಳನ್ನು ಕುಗ್ಗಿಸಿದ್ದಕ್ಕೆ ಸಾಕ್ಷ್ಯವಾಗಬೇಕಾಗುತ್ತದೆ. ಅದು ಅಂಥ ವಿಷಯ ಸಾಮಗ್ರಿಯ ಲಭ್ಯತೆಯನ್ನು ಅವಲಂಭಿಸಿರುತ್ತದೆ. ಅಂಥ ವಿಷಯ ಸಾಮಗ್ರಿಯನ್ನು ಆಧರಿಸಿ, ಪ್ರಥಮ ಅಗತ್ಯತೆಯಾಗಿ ನ್ಯಾಯಾಧೀಕರಣವು ನೈಜ ವಿಶ್ಲೇಷಣೆ ಮಾಡಿದಂತೆ, ರಿಜಿಸ್ಟ್ರಾರನು ಆರೋಪಗಳನ್ನು ರೂಪಿಸಬೇಕಾಗುತ್ತದೆ. ತದನಂತರ, ಪ್ರಥಮ ಅಗತ್ಯತೆಯು ಸಮಾಧಾನಕರವಾಗಿದ್ದರೆ, ಅವನು, ನಿರ್ದಿಷ್ಟ ಆರೋಪಗಳಿಂದ ಬಾಧಿತರಾಗುವ ಸಂಭವವಿರುವಂಥ ವ್ಯಕ್ತಿಗಳನ್ನು ಮನವಿ ಸಲ್ಲಿಸುವಂತೆ ಕರೆಯಬಹುದು ಹಾಗೂ ಅನಂತರ ಅಂಥ ಮನವಿಯ ಮೇಲೆ ಅಗತ್ಯವಿರಬಹುದಾದಂಥ ವಿಚಾರಣೆಯನ್ನು ನಡೆಸಬಹುದು ಮತ್ತು

ಸಹಕಾರ ಸಂಘದ ಮಾಜಿ ಅಧಿಕಾರಿ ಅಥವಾ ನೌಕರ, ನಿರ್ದೇಶಕರ, ಮಾಜಿ ಸದಸ್ಯ ಹಾಗೂ ಮಾಜಿ ನೌಕರ ಮುಂತಾದ ಪ್ರತಿಯೊಬ್ಬರ ಮೇಲೂ ಪ್ರತ್ಯೇಕ ಹೊಣೆಯನ್ನು ಗೊತ್ತುಪಡಿಸಬಹುದು, ಅವನು ರೂಪಿಸಲಾದ ಆರೋಪದ ತಪ್ಪಿತಸ್ಥನೆಂದು ಕಂಡು ಬಂದರೆ, ಸದರಿ ಅಧಿಕಾರಿಗಳು, ನೌಕರರು, ಮುಂತಾದ ಪ್ರತಿಯೊಬ್ಬರ ವಿರುದ್ಧವೂ, ಆಪಾದಿಸಲಾದ ಕೃತ್ಯದ ಮೂಲಕ ಸ್ವತ್ತನ್ನು ಕುಗ್ಗಿಸಿದ್ದಕ್ಕಾಗಿ ನಷ್ಟ ಪರಿಹಾರ ತುಂಬಿಕೊಡಬೇಕಾದ ಹಣಕಾಸು ಹೊಣೆಗಾರಿಕೆಗೆ ಅವನನ್ನು ಗುರಿ ಮಾಡಬಹುದು. ಅಧಿನಿಯಮದ 69ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶವು ಈ ಅಂಶಗಳಲ್ಲಿ ಯಾವುದೇ ಒಂದು ಕೊರತೆಯನ್ನು ಹೊಂದಿದ್ದರೆ ಆಗ ಆ ಆದೇಶವು ಸ್ಪಷ್ಟವಾಗಿ ಅಧಿಕಾರ ವ್ಯಾಪ್ತಿ ಇಲ್ಲದ್ದಾಗುತ್ತದೆ ಮತ್ತು ದಾಖಲೆಯಿಂದಲೇ ಸ್ಪಷ್ಟವಾಗುವಂತೆ ಕಾನೂನುಬಾಹಿರತೆಗೆ ಒಳಗಾಗಿದ್ದರೆ, ಸಂವಿಧಾನದ 226 ಮತ್ತು 227ನೇ ಅನುಚ್ಛೇದದ ಮೇರೆಗೆ ಈ ನ್ಯಾಯಾಲಯವನ್ನು ಮಧ್ಯಪ್ರವೇಶ ಕೋರಬಹುದಾಗಿರುತ್ತದೆ."

"ಅಧಿನಿಯಮದ 69ನೇ ಪ್ರಕರಣದ ಅಡಿಯಲ್ಲಿನ ಅಧಿಭಾರ ವ್ಯವಹರಣೆಗಳು, ಸಮಾಪಕನ ಅರ್ಜಿಯ ಮೇಲೆ, ಕಂಪನಿ ನ್ಯಾಯಾಲಯವು ಪ್ರಾರಂಭಿಸಬಹುದಾದ ವ್ಯವಹರಣೆಗಳಿಗೆ ಅಥವಾ ಹಣ ದುರುಪಯೋಗ ವ್ಯವಹರಣೆಗಳೆಂದು ಸಾಮಾನ್ಯವಾಗಿ ಅರ್ಥೈಸಲಾಗಿರುವ ಕಂಪನಿಗಳ ಅಧಿನಿಯಮ, 1956ಕ್ಕೆ ಹೋಲಿಕೆಯಾಗುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದು ಸೂಕ್ತವಾಗಬಹುದು. ಆ ವಿಷಯದ ಬಗ್ಗೆ ಹಿಂದಿನ ತೀರ್ಪುಗಳ ಅಗತ್ಯವಿರುವುದಿಲ್ಲ. ಅಧಿನಿಯಮದ 69ನೇ ಪ್ರಕರಣದ ಮೇರೆಗಿನ ವ್ಯವಹರಣೆಗಳು, ಹಣಕಾಸು ಹೊಣೆಗಾರಿಕೆಯನ್ನು ಹೊರಿಸುತ್ತಿರುವುದರ ವಿರುದ್ಧ ಕಾನೂನು ಕ್ರಮ ಮುಂದುವರಿಯುವುದರಿಲ್ಲಿ ಪರ್ಯಾವಸಾನವಾದರೆ ಮತ್ತು ದುರುಪಯೋಗ, ವಂಚನೆ ಮುಂತಾದವುಗಳಂಥ ಅಪರಾಧಗಳಿಗಾಗಿ ಕ್ರಿಮಿನಲ್ ನ್ಯಾಯಾಲಯದಲ್ಲಿ ಕಾನೂನು ವ್ಯವಹರಣೆ ಇದ್ದರೂ ಕೂಡ ನನ್ನ ಅಭಿಪ್ರಾಯದಲ್ಲಿ, ರಿಜಿಸ್ಟ್ರಾರನ ಕ್ರಮವು ಸಿವಿಲ್ ಪರಿಣಾಮಗಳಿಂದ ಪ್ರಾರಂಭಿಸಿದ ಕ್ರಿಮಿನಲ್ ವ್ಯವಹರಣೆಳಿಗೆ ತುಂಬಾ ನಿಕಟ ಸಂಬಂಧವುಳ್ಳ ಸ್ವರೂಪ ಹಾಗೂ ಗುಣವನ್ನು ಪಡೆದಿರುತ್ತದೆ. ಆದ್ದರಿಂದ, ಸ್ವಾಭಾವಿಕ ನ್ಯಾಯಗಳ ನಿಯಮಗಳ ಅಗತ್ಯತೆಗಳನ್ನು ಕಟ್ಟುನಿಟ್ಟಾಗಿ ಗಮನಿಸಬೇಕು ಹಾಗೂ ಪಾಲಿಸಬೇಕು. ಆಗ ಇದು ಈ ನ್ಯಾಯಾಲಯದ ನ್ಯಾಯಿಕ ವಿವೇಚನೆಯನ್ನು ಈಡೇರಿಸುತ್ತದೆ."

"ಈ ಪ್ರಕರಣದ ಒಪ್ಪಿಕೊಂಡ ಅಂಶಗಳ ಮೇಲೆ, ಪ್ರಶ್ನಿತ ಸಹಕಾರ ಸಂಘದ ಸ್ವತ್ತುಗಳನ್ನು ಯಾವ ರೀತಿ ಕುಗ್ಗಿಸಲಾಯಿತು ಮತ್ತು ಪ್ರತಿವಾದಿಗಳ ಪೈಕಿ ಪ್ರತಿಯೊಬ್ಬರು ಅಂಥ ಕುಗ್ಗಿಸುವಿಕೆಗೆ ಹೇಗೆ ಜವಾಬ್ದಾರಿಯಾಗುತ್ತಾರೆ ಮತ್ತು ಎಷ್ಟು ಪ್ರಮಾಣದಲ್ಲಿ ಎಂಬುದನ್ನು ನಿರ್ದಿಷ್ಟ ಪಡಿಸುವಂಥ ಆರೋಪವನ್ನು ಪ್ರತಿಯೊಬ್ಬ ಅರ್ಜಿದಾರರ ವಿರುದ್ಧ ರಿಜಿಸ್ಟ್ರಾರನು ರೂಪಿಸಿಲ್ಲವೆಂಬುದನ್ನು ತೋರಿಸುವುದಕ್ಕೆ ಇದು ನನಗೆ ಅಗತ್ಯ ಆಧಾರವಾಯಿತು. ದುರದೃಷ್ಟವಶಾತ್ ಈ ಅರ್ಜಿಗಳ ಬ್ಯಾಚಿನಲ್ಲಿ, 2ನೇ ಪ್ರತಿವಾದಿ – ಜಂಟಿ ರಿಜಿಸ್ಟ್ರಾರನು ನೀಡಿದ ಕಾರಣ ಕೇಳುವ ನೋಟೀಸನ್ನು ಯಾವೊಬ್ಬ ಅರ್ಜಿದಾರರು ಹಾಜರುಪಡಿಸಿಲ್ಲ. ಅಷ್ಟೇ ದುರದೃಷ್ಟಕರವೆಂದರೆ, ನಾಲ್ಕು ವರ್ಷಗಳಾದರೂ, ಸರ್ಕಾರಿ ನ್ಯಾಯವಾದಿಗಳು ಪ್ರಕರಣದ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ವಿಫಲವಾದರು. ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡಾಗ, ಸರ್ಕಾರಿ ನ್ಯಾಯವಾದಿಗಳು ದಾಖಲೆಗಳನ್ನು ಪಡೆದುಕೊಳ್ಳುವುದಕ್ಕೆ ಮತ್ತಷ್ಟು ಕಾಲಾವಧಿಯನ್ನು ಕೋರಿದರು. ಈ ನ್ಯಾಯಾಲಯವು ಸಾಕಷ್ಟು ಕಾಲಾವಧಿಯನ್ನು ನೀಡಲಾಗಿದ್ದು ಯಾವ ಆಕ್ಷೇಪಣಾ ಹೇಳಿಕೆಯನ್ನೂ ಸಲ್ಲಿಸಲಿಲ್ಲ ಅಥವಾ ದಾಖಲೆಗಳನ್ನು ಹಾಜರುಪಡಿಸಲಿಲ್ಲ ಎಂಬ ಕಾರಣದ ಮೇಲೆ ಅದನ್ನು ನಿರಾಕರಿಸಿತು. ಆದ್ದರಿಂದ, ಈ ನ್ಯಾಯಾಲಯವು, ಯಾವುದೇ ದಾಖಲೆಗಳಿಲ್ಲದಿದ್ದರೆ ಹೇಗೋ ಹಾಗೆ ಅಥವಾ ದಾಖಲೆಗಳನ್ನು ಹಾಜರುಪಡಿಸಿದ್ದರೆ 2ನೇ ಪ್ರತಿವಾದಿಯ ವಿರುದ್ಧ ಹಾಜರುಪಡಿಸಿದ್ದರೆ ಹೇಗಾಗುತ್ತಿತ್ತೋ ಹಾಗೆ ಕಾನೂನು ವ್ಯವಹರಣೆಯನ್ನು ಮುಂದುವರೆಸಬೇಕಾಗುತ್ತದೆ."

ಲೆಕ್ಕ ಪರಿಶೋಧಕನು ಸಿದ್ಧಪಡಿಸಿದ ವರದಿಯನ್ನು ಅರ್ಜಿದಾರರ ಗಮನಕ್ಕೆ ತರಲಾಗಿತ್ತೇ ಎಂಬ ಬಗ್ಗೆ ಕಾರಣ ಕೇಳುವ ನೋಟೀಸಿನಲ್ಲಿ ಯಾವುದೇ ವಾಸ್ತವಿಕ ಸಾಕ್ಷ್ಯವಿಲ್ಲ. ಲೆಕ್ಕಪರಿಶೋಧಕನು ಬಳಸಿದ ವಿಷಯವು ಅರ್ಜಿದಾರರಿಗೆ ತಿಳಿದಿತ್ತೇ ಎಂಬ ಯಾವುದೇ ಹೇಳಿಕೆಯನ್ನು ಸಕ್ಷಿದಾರರಿಂದ ದಾಖಲಿಸಿಕೊಂಡಿದ್ದರೆ ಅದನ್ನು ಅರ್ಜಿದಾರರ ಗಮನಕ್ಕೆ ತರಲಾಗಿತ್ತೇ ಮತ್ತು ಅಂಥ ಸಾಕ್ಷಿದಾರರು, ಅರ್ಜಿದಾರರ ಪಾಟೀ ಸವಾಲಿಗೆ ಒಳಗಾಗಿದ್ದರೇ ಎಂಬುದನ್ನು ಸೂಚಿಸಿಲ್ಲ. ಅಂದರೆ, ಅಂಥ ವಿಚಾರಣೆಯನ್ನು, ಸ್ವಾಭಾವಿಕ ನ್ಯಾಯ ನಿಯಮಗಳ ಮೇಲೆ ಸುಸ್ಥಾಪಿತವಾದ ತತ್ವಗಳಿಗನುಸಾರವಾಗಿ ಮಾಡಲಾಗಿತ್ತೇ ಅಥವಾ ಅರ್ಜಿದಾರನ ಹಿಂದೆ ತೀವ್ರತರವಾದ ಗುಮಾನಿಯಿಂದಲೇ ಎಂಬುದಾಗಿದೆ. ದೋಷವನ್ನು ಮೆರೆಸುವ ಒಂದು ಅಂಶವೆಂದರೆ, ವರದಿಯ ಒಂದು ಪ್ರತಿಯು ಇದಕ್ಕೆ ಲಗತ್ತಾಗಿರುವುದು, ಅರ್ಥಾತ್, ಅಧಿನಿಯಮದ 69ನೇ ಪ್ರಕರಣದ ಮೇರೆಗೆ ಉದ್ದೇಶಿಸಲಾದ ಆರೋಪವನ್ನು 2ನೇ ಪ್ರತಿವಾದಿಯಾದ ಜಂಟಿ ರಿಜಿಸ್ಟ್ರಾರನು ರೂಪಿಸಿಲ್ಲ ಆದರೆ ಅದನ್ನು ಅಧಿನಿಯಮದ 64ನೇ ಪ್ರಕರಣದ ಮೇರೆಗೆ ತನಿಖೆ ಮತ್ತು ವಿಚಾರಣೆಯನ್ನು ನಡೆಸುವ ಮೂಲಕ ಲೆಕ್ಕಪರಿಶೋಧಕನು ಮಾಡಿದ್ದಾನೆ. ನ್ಯಾಯಾಧೀಕರಣವು ಅದಕ್ಕೆ ಸೂಚಿಸಿದಂತೆ ಅಧಿನಿಯಮದ 69ನೇ ಪ್ರಕರಣದ ಪ್ರಥಮ ಅಗತ್ಯತೆಯು ಮನವರಿಕೆಯಾಗುವುದಿಲ್ಲ. ಪ್ರಥಮ ಅಗತ್ಯತೆಯನ್ನು ಪೂರೈಸದಿದ್ದಾಗ, ಪ್ರತಿಯೊಬ್ಬ ಅರ್ಜಿದಾರರ ವಿರುದ್ಧ ಅವನಿಗೆ ಸಂಬಂಧಿಸಿದ ಆರೋಪವನ್ನು ಅಥವಾ ಆರೋಪಗಳನ್ನು ಹಾಗೂ ಅವನು ಆ ಸಂಘದ ವ್ಯವಸ್ಥಾಪನೆಯ ಪ್ರಭಾರದಲ್ಲಿದ್ದಾಗ ಸಹಕಾರ ಸಂಘದ ಸ್ವತ್ತುಗಳನ್ನು ಕುಗ್ಗಿಸುವುದಕ್ಕೆ ಅವನು ಕಾರಣವಾದ ರೀತಿಯನ್ನು ಅವರು ಆರೋಪಕ್ಕೆ ಉತ್ತರ ನೀಡಬಹುದಾದಂತೆ ಮತ್ತು ಆ ಆರೋಪವನ್ನು ಅಥವಾ ಆರೋಪಗಳನ್ನು ಅವರು ಅರ್ಥೈಸಿಕೊಂಡಂತೆ. ತಮ್ಮ ಸಮರ್ಥನೆಯನ್ನು ಸ್ಥಾಪಿಸಬಹುದಾದಂತೆ, ಅರ್ಜಿದಾರರು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುವ ಒಂದು ಅಥವಾ ಮತ್ತೊಂದು ಭಾಷಾ ಸಾಮರ್ಥ್ಯದಲ್ಲಿ ನಿರ್ದಿಷ್ಟಪಡಿಸಿದ ವ್ಯವಹರಣೆಗಳನ್ನು ಹೊಸದಾಗಿ ಪ್ರಾರಂಭಿಸಲು ತಿಳಿಸಿ, ಈ ಮೊದಲೇ ಅಭಿಪ್ರಾಯಪಟ್ಟಂತೆ, ಪ್ರಶ್ನಿತ ಆದೇಶಗಳನ್ನು ರದ್ದುಮಾಡಿ, ವಿಷಯ ಸಾಮಗ್ರಿಯನ್ನು 2ನೇ ಪ್ರತಿವಾದಿಗೆ ಹಿಂದಿರುಗಿಸುವುದನ್ನು ಬಿಟ್ಟು, ಈ ನ್ಯಾಯಾಲಯಕ್ಕೆ ಪರ್ಯಾಯ ಮಾರ್ಗವಿಲ್ಲ. ಅವರು ಬದಲಾದ ಭಾಗದ ಸಂದರ್ಭದಲ್ಲಿ ಅರ್ಜಿಯನ್ನು ಸಲ್ಲಿಸಲು ಕೋರಿದರೆ ಆ ಅರ್ಜಿಯು, ಅಹವಾಲನ್ನು ಹೇಳಿಕೊಳ್ಳುವ ಒಂದು ಅವಕಾಶವನ್ನು ಮಾತ್ರವೇ ಒಳಗೊಂಡಿರದೆ 2ನೇ ಪ್ರತಿವಾದಿಯಾದ ಜಂಟಿ ರಿಜಿಸ್ಟ್ರಾರನು ಆರೋಪವನ್ನು ಅಥವಾ ಆರೋಪಗಳನ್ನು ಸಾಬೀತುಪಡಿಸಲು ಸಾಕ್ಷ್ಯವನ್ನು ಕೂಡ ಒಳಗೊಳ್ಳಬೇಕಾಗುತ್ತದೆ. ಸಾಕ್ಷಿದಾರರನ್ನು ಅರ್ಜಿದಾರರು ಅಥವಾ ಅವರ ವಕೀಲರು, ಅವರಿಗೆ ಕಾಣಿಸಿಕೊಳ್ಳಲು ಅನುಮತಿ ನೀಡಿದರೆ ಮತ್ತು ರಿಜಿಸ್ಟ್ರಾರನು ಸಾಕ್ಷಿದಾರರನ್ನು ವಿಚಾರಣೆ ಮಾಡಿದ್ದರೆ, ಪಾಟೀ ಸವಾಲು ಮಾಡಲು ಅನುಮತಿ ನೀಡತಕ್ಕದ್ದು. ಮೇಲ್ಕಂಡ ಅಭಿಪ್ರಾಯಗಳಿಗೆ ಒಳಪಟ್ಟು, ಈ ಬ್ಯಾಚಿನ ಅರ್ಜಿಗಳಿಗೆ ಅವಕಾಶ ನೀಡಲಾಗಿದೆ ಮತ್ತು ಮೊದಲೇ ಹೊರಡಿಸಿದ ನಿಯಮವು ಅಂತಿಮವಾಗಿರುತ್ತದೆ. ಆದರೆ, ಪ್ರಕರಣದ ಸಂದರ್ಭಗಳಲ್ಲಿ, ಖರ್ಚುಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.

1991(2) ಕೆಎಲ್‌ಜೆ 23 ರಲ್ಲಿ ವರದಿಯಾದ ತೀರ್ಪಿನಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

"ರಿಟ್ ಅರ್ಜಿಗಳಿಗೆ ಅನುಬಂಧ–ಎ ಎಂಬುದಾಗಿ ಹಾಜರುಪಡಿಸಿದ ಅಧಿಭಾರ ವ್ಯವಹರಣೆಗಳು ನಡೆಸಲಾದ ವಿಚಾರಣೆಯ ಸ್ವರೂಪವನ್ನೂ ಬಹಿರಂಗಪಡಿಸಿಲ್ಲ ಅಥವಾ ಸಂಬಂಧಪಟ್ಟ ವಿಷಯ ಸಾಮಗ್ರಿ ವಿವರಗಳಿಗೆ ಸಂಬಂಧಿಸಿದಂತೆ ವಿಚಾರಣಾ ಅಧಿಕಾರಿಯು ಸಲ್ಲಿಸಿದ ವರದಿಗೆ ವಿವರವಾಗಿ ಉಲ್ಲೇಖವನ್ನೂ ಮಾಡಿಲ್ಲ. ಅನುಬಂಧ–ಎ ಅಡಿಯಲ್ಲಿನ ಅಧಿಭಾರ ವ್ಯವಹರಣೆಗಳ ಪ್ರಥಮ ಪ್ಯಾರಾದಲ್ಲಿ ಹೇಳಿರುವುದೇನೆಂದರೆ ವಿಚಾರಣಾ ಅಧಿಕಾರಿಯು, ತನ್ನ ವರದಿಯನ್ನು ಸಲ್ಲಿಸಿದ್ದು ಅದು 2,11,793.35 ರೂಗಳ ದುರುಪಯೋಗವನ್ನು ಬಹಿರಂಗಪಡಿಸಿದೆ. ಸದರಿ ವ್ಯವಹರಣೆಗಳ ಮುಂಬರುವ ಪ್ಯಾರಾ–1 ರಲ್ಲಿ

ಸಹ ವಿಚಾರಣಾ ಅಧಿಕಾರಿಯು ಅಧಿಭಾರ ವ್ಯವಹರಣೆಗಳ ಸಲಹೆ ಮಾಡಿದ್ದಾನೆ. ಅಧಿನಿಯಮದ 69ನೇ ಪ್ರಕರಣದ ಮೇರೆಗೆ ನಡೆಸಿದ ಅಧಿಭಾರ ವ್ಯವಹರಣೆಗಳ ಕ್ರಮದಲ್ಲಿ ಮಾತ್ರ ಅರ್ಜಿದಾರರ ವಿರುದ್ಧ ಮಾಡಿದ ಆಪಾದನೆಗಳಿಗೆ ಅವರ ಆಕ್ಷೇಪಣೆಗಳನ್ನು ಅಥವಾ ಉತ್ತರವನ್ನು ಸಲ್ಲಿಸಲು ಅವರಿಗೆ ಒಂದು ಅವಕಾಶವನ್ನು ನೀಡಲಾಗಿತ್ತು. ಅರ್ಜಿದಾರರು ಮತ್ತು ಇತರರನ್ನು ವಿಚಾರಣೆ ಮಾಡಿಲ್ಲ. ಆದರೆ ಅವರ ಲಿಖಿತ ಉತ್ತರಗಳನ್ನು ಪರಿಗಣಿಸಲಾಗಿದೆ ಮತ್ತು ಉತ್ತರಗಳನ್ನು ಆಧರಿಸಿ ವಿವಾದಾಂಶಗಳನ್ನು ರೂಪಿಸಲಾಗಿದೆ ಮತ್ತು ಪ್ರತಿವಾದಿ–1 ಆದೇಶವನ್ನು ಹೊರಡಿಸಿದ್ದಾರೆ. ಆದ್ದರಿಂದ ಅರ್ಜಿದಾರರು ಮತ್ತಿತರರನ್ನು ಅವರ ವಿರುದ್ಧ ಮಾಡಿದ ಆಪಾದನೆಗಳ ಸಂಬಂಧದಲ್ಲಿ ಆದೇಶ ಹೊರಡಿಸುವ ಪ್ರಕ್ರಿಯೆಗಿಂತ ಮುಂಚೆ ವಿಚಾರಣಾಧಿಕಾರಿಯಾಗಲಿ ಅಥವಾ ಪ್ರತಿವಾದಿ–1 ಆಗಲಿ ವಿಚಾರಣೆ ಮಾಡಿಲ್ಲ ಎಂಬುದು ಕಂಡುಬಂದಿದೆ."

"ಅಧಿನಿಯಮದ 69ನೇ ಪ್ರಕರಣವು ಅಧಿಭಾರ ವ್ಯವಹರಣೆಗಳಿಗೆ ಸಂಬಂಧಿಸಿದೆ. ಇತರ ವಿಷಯಗಳ ಜೊತೆಗೆ, ಇದರಲ್ಲಿ ಹೇಳಿರುವುದೇನೆಂದರೆ, ವಿಚಾರಣೆಯ ಕ್ರಮದಲ್ಲಿ, ಸಂಘದ ವ್ಯವಸ್ಥಾಪನಾ ಸಮಿತಿ ಅಥವಾ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಯಾರೇ ಇತರ ಸದಸ್ಯ ಅಥವಾ ಅಂಥ ಸಹಕಾರ ಸಂಘದ ಸಂಘಟನೆ ಅಥವಾ ವ್ಯವಸ್ಥಾಪನೆಯನ್ನು ವಹಿಸಿಕೊಡಲಾಗಿರುವ ಅಥವಾ ಉಪ ವಿಧಿಗಳಿಗೆ ವಿರುದ್ಧವಾಗಿ ಯಾವುದೇ ಸಂದಾಯವನ್ನು ಮಾಡಿದ್ದರೆ ಅಥವಾ ವಿಶ್ವಾಸಭಂಗ ಅಥವಾ ನಿರ್ಲಕ್ಷ್ಯದಿಂದ ಸಹಕಾರ ಸಂಘದ ಸ್ವತ್ತುಗಳಿಗೆ ಯಾವುದೇ ಕುಂದುಂಟು ಮಾಡಿದ್ದರೆ ಅಥವಾ ಅಂಥ ಸಹಕಾರ ಸಂಘಕ್ಕೆ ಸೇರಿದ ಯಾವುದೇ ಹಣ ಅಥವಾ ಇತರೆ ಸ್ವತ್ತನ್ನು ದುರುಪಯೋಗಪಡಿಸಿಕೊಂಡಿದ್ದರೆ ಅಥವಾ ಮೋಸದಿಂದ ಇಟ್ಟುಕೊಂಡಿದ್ದರೆ, ರಿಜಿಸ್ಟ್ರಾರನು ಅಂಥ ವ್ಯಕ್ತಿಗಳ ವಿರುದ್ಧ ಆರೋಪಗಳನ್ನು ರೂಪಿಸಬಹುದು ಮತ್ತು ಆ ವ್ಯಕ್ತಿಗಳಿಗೆ ಮನವಿ ಸಲ್ಲಿಸಲು ಅವಕಾಶ ಕೊಟ್ಟ ತರುವಾಯ, ಆ ಹಣ ಅಥವಾ ಸ್ವತ್ತು ಅಥವಾ ಅದರ ಯಾವುದೇ ಭಾಗವನ್ನು ತಾನು ನಿರ್ಧರಿಸಬಹುದಾದ ಬಡ್ಡಿಯೊಂದಿಗೆ ಸಂದಾಯ ಮಾಡುವಂತೆ ಅಥವಾ ಪುನಃ ತುಂಬಿಕೊಡುವಂತೆ ಅಗತ್ಯ ಪಡಿಸುವ ಆದೇಶವನ್ನು ಹೊರಡಿಸಬಹುದು. ಅದಕ್ಕೆ ಪರ್ಯಾಯವಾಗಿ, ತಾನು ನ್ಯಾಯಸಮ್ಮತವಾದದ್ದೆಂದು ಹಾಗೂ ನ್ಯಾಯಯುತವಾದ ದ್ದೆಂದು ಪರಿಗಣಿಸುವಷ್ಟು ಪ್ರಮಾಣದ ಮೊತ್ತವನ್ನು ಪರಿಹಾರದ ರೂಪದಲ್ಲಿ ಸಹಕಾರ ಸಂಘದ ಸ್ವತ್ತುಗಳಿಗೆ ವಂತಿಗೆ ನೀಡುವಂತೆ ಅವರಿಗೆ ನಿರ್ದೇಶನ ನೀಡಬಹುದು."

"ವಿಚಾರಣಾ ವರದಿಯನ್ನು ಆಧರಿಸಿ, ಸಂಘದ ವ್ಯವಸ್ಥಾಪನಾ ಸಮಿತಿಯು ಅಥವಾ ಅಂಥ ವ್ಯವಸ್ಥಾಪನಾ ಸಮಿತಿಯ ಸದಸ್ಯರು ಅಧಿನಿಯಮ, ನಿಯಮಗಳು ಅಥವಾ ಉಪನಿಯಮಗಳಿಗೆ ವಿರುದ್ಧವಾಗಿ ಯಾವುದೇ ಸಂದಾಯವನ್ನು ಮಾಡಿದ್ದಾರೆಂದು ಅಥವಾ ವಿಶ್ವಾಸಭಂಗ ಅಥವಾ ನಿರ್ಲಕ್ಷ್ಯದಿಂದ ಸಂಘದ ಸ್ವತ್ತುಗಳಿಗೆ ಯಾವುದೇ ಕುಂದುಂಟು ಮಾಡಿದ್ದಾರೆಂದು ಅಥವಾ ಅಂಥ ಸಹಕಾರ ಸಂಘಕ್ಕೆ ಸೇರಿದ ಯಾವುದೇ ಹಣ ಅಥವಾ ಇತರೆ ಸ್ವತ್ತನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಅಥವಾ ಮೋಸದಿಂದ ಇಟ್ಟುಕೊಂಡಿದ್ದಾರೆಂದು ಕಂಡು ಬಂದಿದೆಯೆಂಬ ಅಂಶವನ್ನು ಅಂಗೀಕರಿಸಿ, ಅವರ ವಿರುದ್ಧ ಆರೋಪಗಳನ್ನು ರೂಪಿಸಲು ಸಾಧ್ಯವಾಗುತ್ತದೆ."

"ಅಧಿಭಾರ ವ್ಯವಹರಣೆಗಳಿಂದ ತಿಳಿದು ಬರುವುದೇನೆಂದರೆ ಅಧಿನಿಯಮದ 64ನೇ ಪ್ರಕರಣದ ಮೇರೆಗೆ ವಿಚಾರಣೆ ನಡೆಸುವ ವಿಚಾರಣಾಧಿಕಾರಿಯು ಅಧಿಭಾರ ವ್ಯವಹರಣೆಗಳಿಗೆ ಸಲಹೆ ನೀಡುವುದು ಮಾತ್ರವಲ್ಲದೆ, ಲಿಖಿತ ಉತ್ತರ ನೀಡುವಂತೆ ಅಥವಾ ಪ್ರಕರಣ 64ರ ವಿಚಾರಣೆಯನ್ನು ಎದುರಿಸುವುದಕ್ಕೆ ಸಾಕ್ಷಿಯೊಂದಿಗೆ ಹಾಜರಾಗುವಂತೆ ಸಂಬಂಧಪಟ್ಟವರಿಗೆ ನಿರ್ದೇಶಿಸಿ, ಕಾರಣ ಕೇಳಿ ನೋಟೀಸನ್ನು ಕೂಡ ನೀಡಬಹುದು. ವಿಚಾರಣಾಧಿಕಾರಿಯು 1ನೇ ಪ್ರತಿವಾದಿಯ ಮುಂದೆ ಹಾಜರಾಗಲು ಸಂಬಂಧಪಟ್ಟ

ವ್ಯಕ್ತಿಗಳಿಗೆ ನಿರ್ದೇಶಿಸಿದ್ದಾನೆ."

"ಅನುಬಂಧ–ಎ ಯಲ್ಲಿ ತೋರಿಸಿದ ಅಧಿಭಾರ ವ್ಯವಹರಣೆಗಳಿಂದ, ಅರ್ಜಿದಾರರ ವಿರುದ್ಧ ರೂಪಿಸಲಾದ ಆರೋಪಗಳನ್ನು ತಿಳಿದುಕೊಳ್ಳಲು ನನಗೆ ಸಾಧ್ಯವಾಗಲಿಲ್ಲ. ವಿಚಾರಣೆ ದಿನಾಂಕವನ್ನು 11.06.1980 ಎಂದು ನಿಗದಿ ಪಡಿಸಿದ 26.05.1980ರ ದಿನಾಂಕದ ಪ್ರತಿವಾದಿ 1 ಇವರು ಹೊರಡಿಸಿದ ಕಾರಣ ಕೇಳಿ ನೋಟೀಸ್ ಹಾಗೂ ಉತ್ತರಗಳನ್ನು ಸ್ವೀಕರಿಸಿದ ಮೇಲೆ ವಿವಾದಾಂಶಗಳನ್ನು ರೂಪಿಸಲು ಅವರು ಮುಂದುವರೆಸಿದ ಪ್ರಕ್ರಿಯೆ ಮಾತ್ರ ನಾನು ಗಮನಿಸಿದ್ದೇನೆ. ವಿವಾದಾಂಶಗಳನ್ನು ರೂಪಿಸಿದ ನಂತರ, ಪ್ರತಿವಾದಿ–1 ಇವರು ತಮ್ಮ ನಿರ್ಣಯ ನೀಡಲು ಪ್ರಾರಂಭಿಸಿದರು."

"ಅಪರಾಧಿಯೆಂದು ಭಾವಿಸಲಾದ ಪ್ರತಿಯೊಬ್ಬ ವ್ಯಕ್ತಿಯ ವಿರುದ್ಧ ನಿರ್ದಿಷ್ಟ ಹಾಗೂ ಸ್ಪಷ್ಟ ಆರೋಪಗಳ ನಿರೂಪಣೆ ಗೈರು ಹಾಜರಿಯಲ್ಲಿ, ವಿವಾದಾಂಶಗಳನ್ನು ರೂಪಿಸಿಲ್ಲದಿರುವಾಗ ನಾನು, ಅಧಿನಿಯಮದ 69ನೇ ಪ್ರಕರಣದ ಕಡ್ಡಾಯ ಅಗತ್ಯತೆಗಳಿಗನುಸಾರವಾಗಿ ಅಧಿಭಾರ ವ್ಯವಹರಣೆಗಳು ನಡೆದಿವೆ ಎಂಬುದನ್ನು ಒಪ್ಪಿಕೊಳ್ಳಲು ಸ್ವತಃ ನನಗೆ ಮನವರಿಕೆಯಾಗುತ್ತಿಲ್ಲ. ಆರೋಪಗಳನ್ನು ರೂಪಿಸುವುದು ಕಡ್ಡಾಯ ಎಂಬುದು ನನ್ನ ಅಭಿಪ್ರಾಯವಾಗಿದೆ. ಅಷ್ಟೇ ಕಡ್ಡಾಯವಾದುದೆಂದರೆ, ಹಾಗೆ ರೂಪಿಸಲಾದ ಆರೋಪಗಳ ವಿರುದ್ಧ ಮನವಿ ಸಲ್ಲಿಸುವ ಅವಕಾಶವನ್ನು ನೀಡುವುದಾಗಿದೆ. ಹೂಡಲಾದ ಆರೋಪಗಳಿಗೆ ಆಕ್ಷೇಪಣೆಗಳು ಅಥವಾ ಉತ್ತರವನ್ನು ಸ್ವೀಕರಿಸಿದ ನಂತರವಷ್ಟೆ, ಪ್ರತಿವಾದಿ–1 ರವರು ವಿವಾದಾಂಶವನ್ನು ರೂಪಿಸಲು ಮುಂದುವರಿಸಬಹುದು. ವಿವಾದಾಂಶದ ಮೇಲೆ ತನ್ನ ನಿರ್ಣಯಗಳನ್ನು ನೀಡಬಹುದು."

"ಅಧಿನಿಯಮದ 69 (1)ನೇ ಪ್ರಕರಣದ ಮೇರೆಗೆ, ಆರೋಪಗಳು ಸ್ಪಷ್ಟ ಹಾಗೂ ನಿರ್ದಿಷ್ಟವಾಗಿರಬೇಕಾಗುತ್ತದೆ. ಏಕೆಂದರೆ, ಅರ್ಜಿದಾರರ ಆಪಾದಿಸಲಾದ ವರ್ತನೆಯು:–

1. ಅರ್ಜಿದಾರರು ಅಧಿನಿಯಮ, ನಿಯಮಗಳು ಅಥವಾ ಉಪನಿಯಮಗಳಿಗೆ ವಿರುದ್ಧವಾಗಿ ಯಾವುದೇ ಹಣ ಸಂದಾಯವನ್ನು ಮಾಡಿದ್ದರೆ ಅಥವಾ
2. ಅರ್ಜಿದಾರರು ಸಂಘದ ಸ್ವತ್ತುಗಳಿಗೆ ವಿಶ್ವಾಸಭಂಗ ಅಥವಾ ಉದ್ದೇಶಪೂರ್ವಕ ನಿರ್ಲಕ್ಷ್ಯತೆಯಿಂದ ಯಾವುದೇ ಕುಂದುಂಟು ಮಾಡಲು ಕಾರಣರಾಗಿದ್ದರೆ ಅಥವಾ
3. ಅರ್ಜಿದಾರರು ಆ ಸಂಘಕ್ಕೆ ಸೇರಿದ ಯಾವುದೇ ಹಣ ಅಥವಾ ಇತರ ಸ್ವತ್ತನ್ನು ದುರುಪಯೋಗಪಡಿಸಿಕೊಂಡಿದ್ದರೆ ಅಥವಾ ಮೋಸದಿಂದ ಇಟ್ಟುಕೊಂಡಿದ್ದರೆ

– ಎಂದು ಅರ್ಜಿದಾರರ ಆರೋಪಿತ ನಡತೆಯು ಬಹಿರಂಗವಾದಾಗ ಮಾತ್ರ ಅಧಿಭಾರ ವ್ಯವಹರಣೆಗಳನ್ನು ನಡೆಸಬಹುದು.

ಲಭ್ಯವಿರುವ ದಾಖಲೆಗಳಿಂದ, ಅಂಥ ಯಾವ ಆಪಾದನೆಗಳು ಅಥವಾ ಆರೋಪಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ಅಧಿಭಾರ ವ್ಯವಹರಣೆಗಳು, ಪ್ರಕಟಗೊಳ್ಳದಿರುವ ಸಂದೇಶಗಳನ್ನು ಆಧರಿಸಿವೆ ಎಂಬ ತೀರ್ಮಾನಕ್ಕೆ ಬರಲಾಗಿದೆ, ಮೇಲೆ ನೀಡಲಾದ ವಿವರಣೆಯಲ್ಲಿ ಲಗತ್ತಿಸಿದ ಆರೋಪಗಳ ಪೈಕಿ ಯಾವುದೂ ಗ್ರಹಿತವಾಗುವುದಿಲ್ಲ. ಹಾಗಾಗಿ, ನನ್ನ ಅಭಿಪ್ರಾಯದಲ್ಲಿಮ ಅಧಿಭಾರ ವ್ಯವಹರಣೆಗಳು ಕಾನೂನು ಬಾಹಿರತೆಯಿಂದ ಕಲುಷಿತವಾಗಿದ್ದರೂ ಕೂಡ, 69ನೇ ಪ್ರಕರಣದ ಅಡಿಯಲ್ಲಿ ವಿಚಾರಣೆ ನಡೆಸಿದ ಅಧಿಕಾರಿಯು, ಅಧಿನಿಯಮದ 64ನೇ ಪ್ರಕರಣದ ಅಡಿಯಲ್ಲಿ ಮಾಡಿದ ವಿಚಾರಣಾ ವರದಿಯ ಮೇಲೆ ಅವಲಂಭಿತವಾಗಿದ್ದಾನೆ. ಆದರೆ ಅರ್ಜಿದಾರರು ವಿಚಾರಣಾ ವರದಿಯ ಮಾರ್ಗವನ್ನು ನಿರಾಕರಿಸಿದ್ದಾರೆ. ಪರಿಣಾಮದಲ್ಲಿನ ನಿರಾಕರಣೆಯು ಸ್ವಾಭಾವಿಕ ನ್ಯಾಯದ ನಿರಾಕರಣೆಯಾಗುತ್ತದೆ. ಆದ್ದರಿಂದ, ಅಧಿನಯಮದ 69ನೇ ಅಧಿನಿಯಮದ ಅಡಿಯಲ್ಲಿ ನಡೆಸಿದ ವಿಚಾರಣೆಯು ನಿರರ್ಥಕವಾಗುತ್ತದೆ."

ಅನುಸರಿಸಬೇಕಾದ ಪ್ರಕ್ರಿಯೆಯು ಪ್ರಕರಣ 70ಕ್ಕೆ ಮೇಲಿನ ಎರಡು ತೀರ್ಪುಗಳ ಭಿನ್ನರೀತಿಯಲ್ಲಿ ಅರ್ಥೈಸಿದ್ದು, ಉಚ್ಛ ನ್ಯಾಯಾಲಯವು ನೀಡಿದ ನಿರ್ಣಯವನ್ನು ಆಧರಿಸಿಲ್ಲ. 1989ರ ತೀರ್ಪು, ಲೆಕ್ಕಪರಿಶೋಧಕನು ಬಳಸಿದ ವಿಷಯವು ಅರ್ಜಿದಾರರಿಗೆ ತಿಳಿದಿತ್ತು ಎಂಬ ಯಾವ ಸೂಚನೆಯು ಇರಲಿಲ್ಲ ಎಂಬುದನ್ನು ಹೇಳುತ್ತದೆ. ಹೊಣೆಗಾರಿಕೆಯನ್ನು ಹೊರಿಸುವ ಕ್ರಮವಾಗಿ ಸಾಕ್ಷಿದಾರರಿಂದ ಹೇಳಿಕೆಯನ್ನು ದಾಖಲಿಸಿಕೊಂಡಿದ್ದನ್ನು ಅರ್ಜಿದಾರರ ಗಮನಕ್ಕೆ ತರಲಾಗಿತ್ತು ಮತ್ತು ಬೇಡಿಕೆಯನ್ನು ಬೆಂಬಲಿಸಿದ ಸಾಕ್ಷಿದಾರರನ್ನು ಹೆಚ್ಚುವರಿಯಾಗಿ ಅರ್ಜಿದಾರರು ಪಾಟೀಸವಾಲಿಗೆ ಒಳಪಡಿಸತಕ್ಕದ್ದು ಎಂಬ ಬಗ್ಗೆ ಲೆಕ್ಕ ಪರಿಶೋಧಕರು ವರದಿಯಲ್ಲಿ ತೋರಿಸಿಲ್ಲ ಎಂದರೆ, ಯಾರ ವಿರುದ್ಧ ನಿರ್ಧಾರ ಮಾಡಲಾಗುತ್ತಿದೆಯೋ ಆ ವ್ಯಕ್ತಿಗಳ ಮೇಲೆ ಹೊಣೆಗಾರಿಕೆಯನ್ನು ನಿಗದಿ ಮಾಡುವಾಗ, ಸ್ವಾಭಾವಿಕ ನ್ಯಾಯದ ತತ್ವಗಳಿಗನುಸಾರವಾಗಿ ಲೆಕ್ಕಪರಿಶೋಧಕರು ವಿಚಾರಣೆಯನ್ನು ಮಾಡಿಲ್ಲ ಎಂದು ತಿಳಿಸಿದೆ. ಆರೋಪಗಳು, ಪ್ರತಿಯೊಬ್ಬ ನಿರ್ದೇಶಕರ ಹೊಣೆಗಾರಿಕೆಯನ್ನು ಮತ್ತು ಹೊಣೆಗಾರಿಕೆಯ ವ್ಯಾಪ್ತಿ ಮತ್ತು ಪ್ರಮಾಣವನ್ನು ರೂಪಿಸುತ್ತದೆ. ಪ್ರತಿಯೊಬ್ಬ ನಿರ್ದೇಶಕರ ಮೇಲೆ ವೈಯಕ್ತಿಕವಾಗಿ ಆರೋಪಗಳನ್ನು ನಿಗದಿ ಪಡಿಸದಿದ್ದರೆ, ಅವರು ಹೊಣೆಗಾರರಾಗುವುದಿಲ್ಲ ಮತ್ತು ಇದು 69ನೇ ಪ್ರಕರಣದ ಅಡಿಯಲ್ಲಿ ಮೂಲ ಅಂಶವಾಗಿದ್ದು, ಅದನ್ನು ಸೂಕ್ತವಾಗಿ ಪಾಲಿಸಿಲ್ಲದಿದ್ದರೆ, ತರುವಾಯದ ಪ್ರಕ್ರಿಯೆಯು ಕ್ರಮಬದ್ಧವಾಗಿದ್ದರೂ ನಿರ್ಣಯಗಳನ್ನು ಮಾಡಲಾಗದು. ಹೀಗಾಗಿ, ಆರೋಪಗಳು ನಿರ್ದಿಷ್ಟವಾಗಿರಬೇಕಾಗುತ್ತದೆ ಮತ್ತು ಲೆಕ್ಕಪರಿಶೋಧಕ ಅಥವಾ ವಿಚಾರಣಾ ಅಧಿಕಾರಿ ಅಥವಾ ತನಿಖಾಧಿಕಾರಿಯು, ನಿರ್ದೇಶಕರ ಅಥವಾ ಅಧಿಕಾರಿಯ ಮೇಲೆ ವೈಯಕ್ತಿಕವಾಗಿ ಹೊಣೆಗಾರಿಕೆಯನ್ನು ನಿಗದಿಪಡಿಸುವ ಮುಂಚೆ, ಪ್ರತಿ ನಿರ್ದೇಶಕರ ಮೇಲೂ ನಿಗದಿಪಡಿಸುವ ಆರೋಪಗಳು ಮತ್ತು ಹಣದ ಪ್ರಮಾಣವನ್ನು ನಿರ್ದಿಷ್ಟಪಡಿಸಬಾರದೇಕೆ ಎಂದು ಕೇಳುವ ನೋಟೀಸನ್ನು ಅವನಿಗೆ ನೀಡತಕ್ಕದ್ದು. ಅಂಥ ಅವಕಾಶವನ್ನು ಲೆಕ್ಕಪರಿಶೋಧಕ ವಿಚಾರಣಾ ಅಧಿಕಾರಿ/ತನಿಖಾ ಅಧಿಕಾರಿಯು ನೀಡಿಲ್ಲದಿದ್ದರೆ. ಆ ಅವಕಾಶವನ್ನು ಕುಂದುಂಟು ಮಾಡಿರುವ ಕಾರಣವನ್ನು ಯಾರ ವಿರುದ್ಧ ಆರೋಪಿಸಲಾಗಿದೆಯೋ ಆ ವ್ಯಕ್ತಿಯು ಬಳಸಿಕೊಳ್ಳಲಾಗದು. ಈ ಅವಕಾಶ ಎಂದರೆ, ನಿರ್ದಿಷ್ಟ ಆರೋಪಗಳನ್ನು ರೂಪಿಸಿದ ಮತ್ತು ಮನವಿಗಳನ್ನು ಸ್ವೀಕರಿಸಿದ ತರುವಾಯ, ಪಕ್ಷಕಾರ ಅಥವಾ ವ್ಯಕ್ತಿಯು, ದಸ್ತಾವೇಜುಗಳನ್ನು ಹಾಗೂ ವ್ಯಕ್ತಿಗಳನ್ನು ಪರೀಕ್ಷೆಗೊಳಪಡಿಸಲು ಅವಕಾಶವನ್ನು ಕೋರಿದರೆ ಮತ್ತು ಪೀಠಾಸೀನ ಅಧಿಕಾರಿಯು, ಕಾನೂನು ನೆರವೂ ಒಳಗೊಂಡಂತೆ ಅಂಥ ಸಹಾಯಕ್ಕೆ ಅನುಮತಿ ನೀಡುವುದು ಅಗತ್ಯವೆಂದು ಮನಗಂಡರೆ, ಅನುಸರಿಸತಕ್ಕದ್ದು ಮತ್ತು ಸಾಕ್ಷಿಗಳನ್ನು ವಿಚಾರಣೆ ಮಾಡಲು ಹಾಗೂ ಪಾಟೀ ಸವಾಲಿಗೆ ಒಳಪಡಿಸಲೂ ಕೂಡ ಅವಕಾಶ ನೀಡತಕ್ಕದ್ದು.

ಸಂಘದ ಸ್ವತ್ತುಗಳಿಗೆ ಕುಂದುಂಟು ಮಾಡಿರುವುದಕ್ಕಾಗಿ ಹೊಣೆಗಾರಿಕೆಯನ್ನು ನಿಗದಿಪಡಿಸುವ ಲೆಕ್ಕಪರಿಶೋಧಕ, ವಿಚಾರಣಾ ಅಧಿಕಾರಿ ಮತ್ತು ತನಿಖಾ ಅಧಿಕಾರಿಯು, ಹೊಣೆಗಾರಿಕೆಯನ್ನು ನಿಗದಿ ಪಡಿಸುವುದಕ್ಕೆ ಮುನ್ನ ಅಂಥ ವ್ಯಕ್ತಿಗಳಿಗೆ ಒಂದು ಅವಕಾಶವನ್ನು ನೀಡಿರದಿದ್ದರೆ ಮಾತ್ರ ಈ ನಿರ್ಣಯಕ್ಕೆ ಬರಬೇಕಾದುದರ ಅಗತ್ಯವಾಗಿರುತ್ತದೆ ಮತ್ತು 63, 64, 65ನೇ ಪ್ರಕರಣಗಳ ಮೇರೆಗಿನ ವರದಿಗಳಲ್ಲಿ ಇದು ಕಂಡು ಬರದಿದ್ದರೆ ಮಾತ್ರ ಹೀಗೆ ಸಮಾಪ್ತಿಗೊಳಿಸಲಾಗುತ್ತದೆ. ಪೀಠಾಸೀನ ಅಧಿಕಾರಿಯು 69ನೇ ಪ್ರಕರಣದ ಅಡಿಯಲ್ಲಿ ಅಂಥ ವ್ಯಕ್ತಿಗಳಿಗೆ ಅವಕಾಶವನ್ನು ನೀಡಬಹುದು.

ಆ ಪಕ್ಷಕಾರರು/ವ್ಯಕ್ತಿಗಳನ್ನು ವಿಚಾರಣೆ ಮಾಡಲಾಗಿದೆ ಮತ್ತು ಈ ವ್ಯಕ್ತಿಗಳಿಂದ ಪಡೆದುಕೊಂಡ ಸಮರ್ಥನೆಯನ್ನು ಹಾಗೂ ವರದಿಯಲ್ಲಿ ಸೇರಿಸಲಾಗಿದೆ. ದಸ್ತಾವೇಜುಗಳು ಮತ್ತು ಸಾಕ್ಷಿಗಳನ್ನು ಪರೀಕ್ಷಿಸುವ ಅವಕಾಶವನ್ನು ಕೂಡ ಬಳಸಿಕೊಂಡಿದ್ದಾರೆ ಎಂಬುದು ಕಂಡು ಬಂದರೆ, ಆಗ, ತಮ್ಮನ್ನು ಸಮರ್ಥನೆ ಮಾಡಿಕೊಳ್ಳಲು ಅವರಿಗೆ ಎರಡನೇ ಅವಕಾಶ ನೀಡುವ ಅಗತ್ಯವಿರುವುದಿಲ್ಲ.

1991(2) ಕೆಎಲ್‌ಜೆ ಯಲ್ಲಿ ವರದಿಯಾದ ತೀರ್ಪು ಸಹ 69ನೇ ಪ್ರಕರಣದ ಅಡಿಯಲ್ಲಿ

ನಿಗದಿಪಡಿಸಿದ ಪ್ರಕ್ರಿಯೆಯು ದೋಷಪೂರ್ಣವಾಗಿದೆ ಅಥವಾ ಅದನ್ನು ಮಾರ್ಪಾಟು ಮಾಡುವ ಅಗತ್ಯವಿದೆ ಇಲ್ಲವೆ ಅದನ್ನು ರದ್ದು ಮಾಡಬೇಕು ಎಂದೂ ತಿಳಿಸುವುದಿಲ್ಲ. ಕುಂದುಂಟು ಮಾಡಿರುವುದಕ್ಕೆ ಕಾರಣನಾದವನೆಂದು ಭಾವಿಸಲಾದ ಪ್ರತಿಯೊಬ್ಬ ವ್ಯಕ್ತಿಯ ವಿರುದ್ಧ ನಿರ್ದಿಷ್ಟ ಮತ್ತು ಸ್ಪಷ್ಟ ಆರೋಪಗಳನ್ನು ರೂಪಿಸುವುದರ ಗೈರುಹಾಜರಿಯಲ್ಲಿ ಅದನ್ನು ಅಂಗೀಕರಿಸಲು ಸಾಧ್ಯವಿಲ್ಲ ಎಂಬುದನ್ನು ಆದೇಶವು ತಿಳಿಸುತ್ತದೆ ಮತ್ತು ಕಡ್ಡಾಯವಾದಂತ ನಿರ್ದಿಷ್ಟ ಆರೋಪಗಳನ್ನು ರೂಪಿಸುವುದರ ಜೊತೆಯಲ್ಲಿ ಅಂಥ ಆರೋಪಗಳ ವಿರುದ್ಧ ಮನವಿಯನ್ನು ಸಲ್ಲಿಸಲು ಪಕ್ಷಕಾರನಿಗೆ ಅವಕಾಶ ನೀಡುವುದರ ಅಗತ್ಯತೆಯು ಅಷ್ಟೇ ಕಡ್ಡಾಯವಾಗಿದೆ ಎಂಬುದನ್ನು ಅದು ಎತ್ತಿಹಿಡಿದಿತ್ತು. ತದನಂತರವೇ ಪ್ರಾಧಿಕಾರಿಯು, ವಿವಾದಾಂಶವನ್ನು ರೂಪಿಸುವುದಕ್ಕೆ ಮತ್ತು ಪ್ರತಿಯೊಂದು ಆರೋಪದ ಮೇಲೂ ತನ್ನ ನಿರ್ಣಯಗಳನ್ನು ನೀಡಲು ಹಾಗೂ ಹೊಣೆಗಾರಿಕೆಯನ್ನು ನಿಗದಿಪಡಿಸುವ ಅಂತಿಮ ತೀರ್ಮಾನಗಳಿಗೆ ಬರಬಹುದಾಗಿರುತ್ತದೆ.

ಅರ್ಜಿದಾರರ ಆರೋಪಿತ ನಡೆಯು ಬಹಿರಂಗಗೊಂಡ ಮಾತ್ರ ಎಂದರೆ (1) ಅರ್ಜಿದಾರರು ಅಧಿನಿಯಮ, ನಿಯಮಗಳು ಅಥವಾ ಉಪನಿಯಮಗಳಿಗೆ ವಿರುದ್ಧವಾಗಿ ಯಾವುದೇ ಹಣ ಸಂದಾಯ ಮಾಡಿದ್ದಾರೆ ಅಥವಾ (2) ಅರ್ಜಿದಾರರು, ವಿಶ್ವಾಸಭಂಗದಿಂದ ಅಥವಾ ಉದ್ದೇಶಪೂರ್ವಕ ನಿರ್ಲಕ್ಷ್ಯತೆಯಿಂದ ಸಂಘದ ಸ್ವತ್ತುಗಳಿಗೆ ಕುಂದುಂಟು ಮಾಡಿದ್ದಾರೆ, ಅಥವಾ (3) ಅರ್ಜಿದಾರರು ಅಂಥ ಸಂಘಕ್ಕೆ ಸೇರಿದ ಯಾವುದೇ ಹಣ ಅಥವಾ ಇತರ ಸ್ವತ್ತನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಅಥವಾ ಮೋಸದಿಂದ ಇಟ್ಟುಕೊಂಡಿದ್ದಾರೆ – ಎಂಬ ರೂಪಿಸಲಾದ ಆರೋಪಗಳನ್ನು ಸೂಕ್ತವಾಗಿ ನಿರ್ಣಯಿಸಬಹುದು.

ಆದ್ದರಿಂದ, ಆ ಪ್ರಕರಣದಲ್ಲಿನ ಅಧಿಭಾರ ವ್ಯವಹರಣೆಗಳು ಪ್ರಕಟಗೊಳ್ಳದಿರುವ ಸಂದೇಹವನ್ನು ಆಧರಿಸಿವೆ ಮತ್ತು ಮೇಲೆ ನೀಡಲಾದ ವಿವರಣೆಯಲ್ಲಿ ಲಗತ್ತಿಸಿದ ಆರೋಪಗಳ ಪೈಕಿ ಯಾವುದೂ ಗ್ರಹಿತವಾಗುವುದಿಲ್ಲ ಮತ್ತು ವ್ಯವಹರಣೆಗಳು ಕಾನೂನುಬಾಹಿರತೆಯಿಂದಾಗಿ ಕಲುಷಿತವಾಗಿದೆಯೆಂದು ಅಭಿಪ್ರಾಯಪಡಲಾಗಿದೆ ಮತ್ತು 69ನೇ ಪ್ರಕರಣದ ಅಡಿಯಲ್ಲಿನ ವಿಚಾರಣೆಯು 64ನೇ ಪ್ರಕರಣದ ಅಡಿಯಲ್ಲಿ ಮಾಡಿದ ವಿಚಾರಣಾ ವರದಿಯನ್ನು ಆಧರಿಸಿದ್ದು ಇದು, ದೋಷಪೂರ್ಣ ಮತ್ತು ನಿರರ್ಥಕವಾದುದಾಗಿದ್ದು ಆರೋಪಗಳು ಅಂಗೀಕಾರರ್ಹವಲ್ಲ. ಹಾಗಾಗಿ ಪ್ರಕ್ರಿಯೆಯನ್ನು ಪಾಲಿಸಿಲ್ಲದಿದ್ದು, ಆದೇಶವು ದೋಷಪೂರ್ಣವಾಗಿದೆಯೆಂದು ತೀರ್ಮಾನಿಸಲಾಗಿತ್ತು ಎಂದು ನಿರ್ಣಯಿಸಲಾಗಿದೆ.

ಮೇಲ್ಕಂಡ ಎರಡೂ ನಿರ್ಣಯಗಳು, ವ್ಯಾಖ್ಯಾನದಿಂದ ಎಂದರೆ, ವ್ಯಕ್ತಿಗೆ ಹೊಣೆಗಾರಿಕೆಯನ್ನು ನಿಗದಿ ಪಡಿಸ ಬೇಕಾಗಿದ್ದರೆ ಅದು ಭಾಗಶಃ ಕ್ರಿಮಿನಲ್ ಸ್ವರೂಪದ್ದಾಗಿರಬೇಕು ಮತ್ತು ಪ್ರಾಧಿಕಾರಿಯು 63, 64, 65ನೇ ಪ್ರಕರಣದ ಮೇರೆಗಿನ, ಕುಂದುಂಟು ಮಾಡಿರುವ ಆರೋಪವಿಲ್ಲದೆ ಮತ್ತು ಅಂಥ ವ್ಯಕ್ತಿಗಳಿಗೆ ಒಂದು ಅವಕಾಶವನ್ನು ನೀಡದೆ ಮತ್ತು ಅವರ ಮನವಿಗಳು ಅಥವಾ ಹೇಳಿಕೆಗಳನ್ನು ಪರ್ಯಾಲೋಚಿಸದೆ ಹೊಣೆಗಾರಿಕೆಯನ್ನು ನಿಗದಿಪಡಿಸುವ ನಿರ್ಣಯಗಳನ್ನು ನೀಡಿದ್ದರೆ, 69ನೇ ಪ್ರಕರಣದ ಮೇರೆಗಿನ ಪ್ರಾಧಿಕಾರಿ 69ನೇ ಪ್ರಕರಣದ ಅಡಿಯಲ್ಲಿ ವ್ಯವಹರಣೆ ನಡೆಸುವಾಗ, ಸಾಕಷ್ಟು ಮತ್ತು ಯುಕ್ತ ಅವಕಾಶವನ್ನು ನೀಡತಕ್ಕದ್ದು ಎಂಬುದಾಗಿದೆ. ಅಂದರೆ 69ನೇ ಪ್ರಕರಣದ ಅಡಿಯಲ್ಲಿ ಹೊಣೆಗಾರಿಕೆಯನ್ನು ನಿಗದಿ ಪಡಿಸುವಾಗ ಪ್ರಾಧಿಕಾರಿಯು, ಆರೋಪಗಳನ್ನು ರೂಪಿಸುವುದಕ್ಕೆ ಮುಂಚೆ, ಸಂಘದ ಸ್ವತ್ತುಗಳಿಗೆ ಕುಂದುಂಟಾಗುವುದಕ್ಕೆ ಕಾರಣವಾದ ವ್ಯಕ್ತಿಗಳು ತಮ್ಮ ಸಮರ್ಥನೆ ಮಾಡಿಕೊಳ್ಳಲು ಒಂದು ಅವಕಾಶವನ್ನು ನೀಡಲಾಗಿತ್ತೇ ಮತ್ತು 63, 64, 65ನೇ ಪ್ರಕರಣದ ಮೇರೆಗಿನ ಪ್ರಾಧಿಕಾರವು ಮುಂದೆ ಅವರು ಹೇಳಿಕೆಯನ್ನು ಸಲ್ಲಿಸಿದ್ದರೇ ಮತ್ತು ಅಂಥ ಹೇಳಿಕೆಗಳನ್ನು ಪರಿಗಣಿಸಲಾಯಿತೇ ಹಾಗೂ ಹೊಣೆಗಾರಿಕೆಯನ್ನು ನಿಗದಿಪಡಿಸುವುದಕ್ಕಾಗಿ ನಿರ್ಣಯಗಳನ್ನು ನೀಡಲಾಯಿತೇ ಎಂಬುದನ್ನು ಪರೀಕ್ಷಿಸಬೇಕು ಎಂಬುದಾಗಿದೆ. ಯಾವುದೇ ಒಂದು (ಪ್ರಕರಣ 63, 64, 65) ಉಪಬಂಧಗಳ ಅಡಿಯಲ್ಲಿ

ವ್ಯಕ್ತಿಯು ಯುಕ್ತ ಅವಕಾಶವನ್ನು ಬಳಸಿಕೊಂಡಿರುವನೆಂದು ಮತ್ತು ಆ ಪ್ರಾಧಿಕಾರಿಯು 69ನೇ ಪ್ರಕರಣದ ಅಡಿಯಲ್ಲಿ ರೂಪಿಸಲಾಗುವ ಆರೋಪದಲ್ಲಿ ಅದನ್ನು ಸೇರಿಸಿರುವುದು ಕಂಡು ಬಂದರೆ, ಆಗ ಸ್ವತಃ ತನ್ನನ್ನು ಸಮರ್ಥಿಸಿಕೊಳ್ಳಲು ಮತ್ತೊಂದು ಅವಕಾಶವನ್ನು ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಪೀಠಾಸೀನ ಅಧಿಕಾರಿಯು ಅಂಥ ತೀರ್ಮಾನವನ್ನು ತೆಗೆದುಕೊಳ್ಳುವಾಗ ತುಂಬಾ ಎಚ್ಚರಿಕೆಯಿಂದ ಇರತಕ್ಕದ್ದು ಮತ್ತು 63, 64, 65ನೇ ಪ್ರಕರಣದ ಅಡಿಯಲ್ಲಿನ ನಿರ್ಣಯಗಳಲ್ಲಿ, ಕುಂದುಂಟಾಗುವುದಕ್ಕೆ ಕಾರಣವಾದ ವ್ಯಕ್ತಿಗಳಿಗೆ ಅವಕಾಶವನ್ನು ನೀಡಲಾಗಿದೆ ಮತ್ತು ಅಂಥ ಅವಕಾಶವನ್ನು ಅವರು ಬಳಸಿಕೊಂಡಿದ್ದಾರೆ ಅಥವಾ ಅಂಥ ಅವಕಾಶವನ್ನು ಅವರು ಬಳಸಿಕೊಂಡಿಲ್ಲ ಎಂಬುದು ಕಂಡುಬರದಿದ್ದರೆ, ನಿರ್ದಿಷ್ಟ ನಿರ್ಣಯಗಳನ್ನು ಸೇರಿಸಬೇಕಾಗುತ್ತದೆ ಮತ್ತು ಆರೋಪಗಳನ್ನು ರೂಪಿಸಬೇಕಾಗುತ್ತದೆ. ಈ ವರದಿಯ ಮೊದಲನೇ ಭಾಗದಲ್ಲಿ ತಿಳಿಸಿದಂತೆ, 1976ರಲ್ಲಿ 69ನೇ ಪ್ರಕರಣವನ್ನು ಪ್ರತ್ಯಾಯೋಜಿಸುವಾಗ ವಿಧಾನ ಮಂಡಲದ ಉದ್ದೇಶವು, ಕುಂದುಂಟು ಮಾಡುವುದಕ್ಕೆ ಕಾರಣವಾದ ವ್ಯಕ್ತಿಗೆ ಎರಡನೇ ಅವಕಾಶ ನೀಡುವುದು ಅಗತ್ಯವಿಲ್ಲ ಎಂಬುದಾಗಿತ್ತು. ಅಧಿನಿಯಮದ ಮೇರೆಗಿನ ಒಂದು ವ್ಯವಹರಣೆಯಲ್ಲಿ ಒಂದು ಅವಕಾಶವನ್ನು ಬಳಸಿಕೊಂಡಿದ್ದರೆ, ಎರಡನೇ ಅವಕಾಶವು ಸಂಪೂರ್ಣಾವಕಾಶವಾಗಿರುವ ಅಗತ್ಯವಿರುವುದಿಲ್ಲ ಮತ್ತು ದಸ್ತಾವೇಜುಗಳ ಪರಿಶೀಲನೆಯನ್ನು ಆಧರಿಸಿ ಲಿಖಿತ ಮನವಿಯನ್ನು ಸಲ್ಲಿಸುವಂತೆ ವ್ಯಕ್ತಿಯನ್ನು ಕೋರುವುದು ಸಾಕಾಗುತ್ತದೆ ಮತ್ತು ನ್ಯಾಯಾಲಯ/ಪ್ರಾಧಿಕಾರಿಯು, ಆ ವ್ಯಕ್ತಿಯು ಕುಂದುಂಟು ಮಾಡುವುದಕ್ಕೆ ಕಾರಣವಾಗಿದ್ದಾನೆಂದು ಮನವರಿಕೆ ಮಾಡಿಕೊಂಡರೆ, ಆ ಸಂಬಂಧದಲ್ಲಿ ಒಂದು ಆದೇಶವನ್ನು ಹೊರಡಿಸಬಹುದು. ಉಚ್ಚ ನ್ಯಾಯಾಲಯವು ಯಾರ ವಿರುದ್ಧ ಹೊಣೆಗಾರಿಕೆಯನ್ನು ನಿಗದಿಪಡಿಸಲಾಗುತ್ತಿದೆಯೋ ಆ ಪಕ್ಷಕಾರರಿಗೆ ತಮ್ಮನ್ನು ಸಮರ್ಥಿಸಿಕೊಳ್ಳಲು ಯುಕ್ತ ಅವಕಾಶವನ್ನು ನೀಡಬೇಕು ಮತ್ತು ಈ ನಿರ್ಣಯವು ಅಧಿನಿಯಮದ ಇಂಗಿತ ಹೊಂದಿದೆ ಎಂಬುದರ ಹೊರತು, ಈ ಸ್ಥಿತಿಯನ್ನು ರದ್ದುಪಡಿಸಿಲ್ಲ ಯಾರೇ ವ್ಯಕ್ತಿಗೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕಾಗಿದ್ದರೆ ಸ್ವಾಭಾವಿಕ ನ್ಯಾಯ ತತ್ವಗಳ ದೃಷ್ಟಿಯಲ್ಲಿ ಅವನು ತನ್ನನ್ನು ಸಮರ್ಥಿಸಿಕೊಳ್ಳಲು ಒಂದು ಅವಕಾಶವನ್ನು ಹೊಂದಿರತಕ್ಕದ್ದು ಮತ್ತು ಆ ಅವಕಾಶವನ್ನು ಸಂಬಂಧಪಟ್ಟ ಪ್ರಕರಣ ಯಾವುದೇ ಒಂದನ್ನು ಆ ವ್ಯಕ್ತಿಯು ಬಳಸಿಕೊಂಡರೆ, ಆಗ, ಸರ್ವೋಚ್ಚ ನ್ಯಾಯಾಲಯದ ಸಂಕ್ಷಿಪ್ತ ಟಿಪ್ಪಣಿ 38ರಲ್ಲಿ ಕೆಎಲ್‌ಜೆ 1983 (2) 313 ಎಂಎಲ್‌ಜೆ 1972 (2) ಸಂಕ್ಷಿಪ್ತ ಟಿಪ್ಪಣಿ ಪುಟ 29 112 ಎಂಎಲ್‌ಜೆ 1972 (2) 421 ಕೆಎಲ್‌ಜೆ 1978 (1) 127 ಕೆಎಲ್‌ಜೆ 1977 (2) 259 ವರದಿಯಾದ ತೀರ್ಪುಗಳ ಅನುಸಾರ ಸ್ವಾಭಾವಿಕ ನ್ಯಾಯ ತತ್ವಗಳನ್ನು ಗಮನದಲ್ಲಿಟ್ಟುಕೊಂಡು, ಎರಡನೇ ಅವಕಾಶ ನೀಡಬೇಕಾದ ಅಗತ್ಯವಿರುವುದಿಲ್ಲ. ಪೀಠಾಸೀನ ಅಧಿಕಾರಿಯು, ವ್ಯಕ್ತಿಯು ವಿರುದ್ಧ ಹೊಣೆಗಾರಿಕೆಯನ್ನು ನಿಗದಿಪಡಿಸುವ ಪ್ರಕರಣವನ್ನು ತೀರ್ಮಾನಿಸುವಾಗ, ಪ್ರಾಧಿಕಾರವು ಆ ಬೇಡಿಕೆಗಳು ತೃಪ್ತಿಕರವಾಗಿಲ್ಲದಿದ್ದರೆ/ಮತ್ತು ಯಾರ ವಿರುದ್ಧ ಆರೋಪಗಳನ್ನು ರೂಪಿಸಲಾಗುತ್ತಿದೆಯೋ ಆ ವ್ಯಕ್ತಿಯು ನೀಡಿದ ವಿವರಣೆ ಮತ್ತು ದಸ್ತಾವೇಜುಗಳ ಪರಿಶೀಲನೆಯ ಅಂಶಗಳು ಮನವರಿಕೆಯಾದರೆ, ಸಾಕ್ಷಿಗಳನ್ನು ಪರೀಕ್ಷಿಸಲು ಮತ್ತು ಪಾರ್ಟಿ ಸವಾಲನ್ನು ಅನುಮತಿಸಬೇಕು ಮತ್ತು ನಿರ್ಣಯಗಳನ್ನು ನೀಡಬೇಕು ಇಲ್ಲಿ, ಪೀಠಾಸೀನ ಅಧಿಕಾರಿ/ಪ್ರಾಧಿಕಾರವು ಮನವರಿಕೆಯು ಅಗತ್ಯವಾಗಿರುತ್ತದೆ.

## ಸಹಕಾರ ಸಂಘಗಳ ಕಾಯ್ದೆ 1959ರಡಿಯಲ್ಲಿ ಹಣ ವಸೂಲಾತಿ ಬಗ್ಗೆ ದಾವಾ ದಾಖಲಿಸುವ ಮತ್ತು ತೀರ್ಮಾನಿಸುವ ವಿಧಾನ

**(1) ಅಧಿಭಾರ ಅರ್ಜಿ – ಸರ್‌ಚಾರ್ಜ್ (ಕಲಂ 69) :–**

ಯಾವುದಾದರೊಂದು ಸಹಕಾರ ಸಂಘದ ಲೆಕ್ಕಪರಿಶೋಧನೆಯ, ವಿಚಾರಣೆಯ, ಪರಿಶೀಲನೆಯ ಅಥವಾ ಸಮಾಪ್ತಿಗೊಳಿಸುವ ಕಾಲಕ್ಕೆ, ಅಂಥ ಸಂಘದ ಸಮಿತಿಯ ಅಥವಾ ಅಧ್ಯಕ್ಷ, ಉಪಾಧ್ಯಕ್ಷರ,

ಸಭಾಪತಿ ಅಥವಾ ಉಪಸಭಾಪತಿ ಅಥವಾ ಸಮಿತಿಯ ಇತರೆ ಯಾವೊಬ್ಬ ಸದಸ್ಯನು ಅಥವಾ ಅಂಥ ಸಂಘದ ವ್ಯವಸ್ಥೆಯನ್ನು ಅಥವಾ ಅದರ ನಿರ್ವಹಣೆಯನ್ನು ವಹಿಸಲ್ಪಟ್ಟ ಯಾವನೊಬ್ಬ ವ್ಯಕ್ತಿಯು, ಅಥವಾ ಯಾವನೊಬ್ಬ ಅಧಿಕಾರಿಯು ಅಥವಾ ಯಾವ ಕಾಲದಲ್ಲಾದರೂ ಅಧಿಕಾರಿಯಾಗಿ ಅಥವಾ ನೌಕರನಾಗಿದ್ದನೋ, ಆ ಯಾವನಾದದರೂ ವ್ಯಕ್ತಿಯು ಈ ಕಾನೂನು, ನಿಬಂಧನೆಗಳು ಅಥವಾ ಉಪನಿಯಮಗಳಿಗೆ ವಿರುದ್ಧವಾಗಿ ಎಷ್ಟಾದರೂ ಮೊಬಲಗನ್ನು ಪಾವತಿ ಮಾಡಿರುವುದಾಗಿ ಅಥವಾ ವಿಶ್ವಾಸ ದ್ರೋಹದಿಂದ, ಇಲ್ಲವೆ ಉದ್ದೇಶಪೂರ್ವಕವಾದ ಉದಾಸೀನತೆಯಿಂದ ಸಂಘದ ಲೇಣಿದೇಣಿಗಳಲ್ಲಿ ಕೊರತೆಯನ್ನೇನಾದರೂ ಉಂಟು ಮಾಡಿರುವುದಾಗಿ ಅಥವಾ ಇಂತಹ ಸಂಘಕ್ಕೆ ಸೇರಿಸುವ ಯಾವ ಮೊಬಲಗನ್ನಾದರೂ ಅಥವಾ ಯಾವ ಸ್ವತ್ತನ್ನಾದರೂ ದುರುಪಯೋಗಪಡಿಸಿರುವುದಾಗಿ ಅಥವಾ ಮೋಸದಿಂದ ಇಟ್ಟುಕೊಂಡಿರುವುದಾಗಿ ಕಂಡಪಕ್ಷದಲ್ಲಿ ರಿಜಿಸ್ಟ್ರಾರರು ತಾವಾಗಿಯೇ ಅಥವಾ ಸಮಿತಿಯವರು, ಲೇಣಿದೇಣಿಗಳ ವ್ಯವಸ್ಥಾಪಕನು (ಲಿಕ್ವಿಡೇಟರು) ಅಥವಾ ಯಾವನಾದರೂ ಸಾಲ ಕೊಟ್ಟವನು ಹಾಕಿಕೊಂಡು ಅರ್ಜಿಯ ಮೇರೆಗೆ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ಮೇಲೆ ಆಪಾದನೆಗಳನ್ನು ರೂಪಿಸಿ ಮತ್ತು ಅಂಥ ವ್ಯಕ್ತಿಗೆ ಮತ್ತು ಅಂಥ ವ್ಯಕ್ತಿಯು ಮೃತಪಟ್ಟಿದ್ದರೆ ಅವನ ಆಸ್ತಿಯನ್ನು ಉತ್ತರಾಧಿಕಾರಿಯಾಗಿ ಪಡೆದ ಪ್ರತಿನಿಧಿಗೆ ತನ್ನ ಆಕ್ಷೇಪಣೆಗಳೇನಾದರೂ ಇದ್ದರೆ ಅವುಗಳನ್ನು ಹೇಳಿಕೊಳ್ಳಲು ಅವಕಾಶಕೊಟ್ಟ ನಂತರ, ಸಂಬಂಧಪಟ್ಟ ಹಣವನ್ನು ಅಥವಾ ಸ್ವತ್ತನ್ನು ಅಥವಾ ಅದರ ಯಾವುದಾದರೂ ಭಾಗವನ್ನು ರಿಜಿಸ್ಟ್ರಾರರು ನ್ಯಾಯವಾದುದಾಗಿಯೂ, ನಿಷ್ಪಕ್ಷಪಾತವಾದುದಾಗಿಯೂ ಪರಿಗಣಿಸಬಹುದಾದಂತಹ ದರದ ಮೇರೆಗಿನ ಬಡ್ಡಿಯೊಡನೆ ಆತನ ಕೊಡಬೇಕೆಂದು ಇಲ್ಲವೆ ಪುನಃ ಸ್ವಾಧೀನಪಡಿಸಬೇಕೆಂದು ಅಥವಾ ಸದರಿ ಅಧಿಕಾರಿಯು ನ್ಯಾಯವಾದುದಾಗಿಯೂ ಪರಿಗಣಿಸುವಷ್ಟರ ಮಟ್ಟಿಗೆ ಕೊಡುಗೆ ಹಣವನ್ನು ಮತ್ತು ವೆಚ್ಚಗಳನ್ನು ಅಥವಾ ಪರಿಹಾರವನ್ನು ಕೊಡಬೇಕೆಂದು ಆಜ್ಞಾಪಿಸಿ ಆದೇಶ ನೀಡಬಹುದು.

**(2) ಆ ವ್ಯಕ್ತಿಯು ಅಪರಾಧಿತ ಕಾರ್ಯವನ್ನು ಮಾಡಿದ್ದರೂ ಸಹ ಈ ಪ್ರಕರಣವು ಅನ್ವಯಿಸತಕ್ಕದ್ದು.**

ಅಧಿಭಾರ ಅರ್ಜಿಯನ್ನು ದಾಖಲು ಮಾಡಲು ಪೂರ್ವದಲ್ಲಿ ಪರಿಗಣಿಸಲೇಬೇಕಾದ ಅಂಶವೇನೆಂದರೆ ಯಾವುದೇ ಒಂದು ಸಂಘ ಲೆಕ್ಕ ತಪಾಸಣಾ ವರದಿ, ಪರಿಶೀಲನಾ ವರದಿ, ವಿಚಾರಣಾ ವರದಿ ಅಥವಾ ಸಮಾಪನೆಗೊಂಡ ನಂತರ ಪಡೆದ ವರದಿ ಆಧಾರದ ಮೇಲೆಯೇ ಅಧಿಭಾರ ಅರ್ಜಿಯನ್ನು ದಾಖಲಿಸಬೇಕು. ಈ ಅಧಿಭಾರ ಅರ್ಜಿಯನ್ನು ದಾಖಲಿಸಬಹುದಾದ ವ್ಯಕ್ತಿಗಳು ಒಂದು ಸಹಕಾರ ಸಂಘದ ಆಡಳಿತ ಮಂಡಳಿ ಪದಾಧಿಕಾರಿಗಳ, ಅಧಿಕಾರಿಗಳ, ನೌಕರರು ಅಥವಾ ಯಾವನಾದರೂ ವ್ಯಕ್ತಿ ಮೃತಪಟ್ಟಿದ್ದರೆ ಆತನ ಕಾನೂನು ವಾರಸುದಾರರ ಮೇಲೆ ಅಧಿಭಾರ ಅರ್ಜಿಯನ್ನು ದಾಖಲಿಸಬಹುದು. ನಿಬಂಧನೆ ಮತ್ತು ಉಪನಿಯಮಗಳ ವಿರುದ್ಧವಾಗಿ ಯಾವುದೇ ಹಣವನ್ನು ಪಾವತಿ ಮಾಡಿ ಸಂಘಕ್ಕೆ ವಿಶ್ವಾಸ ದ್ರೋಹ ಎಸಗಿದಾಗ ಅಥವಾ ಉದಾಸೀನತೆಯಿಂದ ನಷ್ಟ ಆಗುವುದೆಂಬ ಸಾಲಗಳ ಕೊಡುವಿಕೆಯಿಂದ ನಷ್ಟ ವಸೂಲಾತಿಗಾಗಿ ಅಧಿಭಾರ ಅರ್ಜಿಯನ್ನು ಹೂಡಬಹುದಾಗಿದೆ. ಅಧಿಭಾರ ಅರ್ಜಿಯನ್ನು ಹೂಡುವ ಅಧಿಕಾರ ಸಮಿತಿಯವರಿಗೆ, ಸಮಾಪನಾಧಿಕಾರಿ, ಸಾಲ ಕೊಟ್ಟಿರುವ ಸಂಸ್ಥೆಗೆ, ವ್ಯಕ್ತಿಗೆ, ಅಥವಾ ನಿಬಂಧಕರು ಸ್ವಯಂ ಈ ಅಧಿಭಾರ ಅರ್ಜಿಯನ್ನು ದಾಖಲಿಸಬಹುದು. ಯಾವನಾದರೂ ವ್ಯಕ್ತಿ ಮೃತಪಟ್ಟಿದ್ದಾಗ ಅವನ ಕಾನೂನು ವಾರಸುದಾರರ ಮೃತಪಟ್ಟ ವ್ಯಕ್ತಿಯಿಂದ ಆಸ್ತಿ ಪಡೆದಿದ್ದರೆ ಮತ್ತು ಅಥವಾ ಎಷ್ಟು ಆಸ್ತಿ ಪಡೆದಿದ್ದಾರೆ ಮತ್ತು ಅಷ್ಟಕ್ಕೆ ಮಾತ್ರ ಅಧಿಭಾರ ಅರ್ಜಿ ದಾಖಲಿಸಬಹುದು. ಈ ಉತ್ತರಾಧಿಕಾರಿಗೆ ನೋಟೀಸು ಜಾರಿ ಮಾಡಿ, ಉತ್ತರ ಕೊಟ್ಟ ನಂತರ ಸ್ವತ್ತಿನಿಂದ ವಸೂಲಾತಿ ಆದೇಶವನ್ನು ನಿಬಂಧಕರು ಹೊರಡಿಸಬಹುದಾಗಿದೆ. ಅಧಿಭಾರ ಅರ್ಜಿಯನ್ನ ವಿಚಾರಣೆಗೆ ಕೈಗೆತ್ತಿಕೊಂಡಾಗ ಪ್ರತಿಯೊಬ್ಬ ವ್ಯಕ್ತಿ ಮೇಲೆ ಪ್ರತ್ಯೇಕವಾದ ಆರೋಪ ಪಟ್ಟಿ ಹೊರಿಸಬೇಕು. ಅಂದರೆ

ಒಂದಕ್ಕಿಂತ ಹೆಚ್ಚು ವ್ಯಕ್ತಿಗಳು ಹಣ ವಸೂಲಾತಿ ಆದೇಶ ಮಾಡಬೇಕಾದಾಗ ಪ್ರತಿಯೊಬ್ಬ ವ್ಯಕ್ತಿಗೆ ಆರೋಪದಲ್ಲಿ, ಆರೋಪ ಪಟ್ಟಿ ಹೊರಿಸಬೇಕೆ ಹೊರತು, ಜಂಟಿಯಾಗಿ ಹೊರಡಿಸಿದರೆ ಅಸಿಂಧುವೆಂದು ಉಚ್ಚನ್ಯಾಯಾಲಯ ಈಗಾಗಲೇ ತೀರ್ಪಿತ್ತಿದೆ. ಆರೋಪ ಪಟ್ಟಿ ಹೊರಿಸಿರುವ ಆರೋಪಿಗಳು, ಲಿಖಿತ ಉತ್ತರ ಪಡೆದು ಆರೋಪ ದೃಢಪಟ್ಟರೆ, ವಸೂಲಾತಿ ಆದೇಶ ಹೊರಡಿಸಬಹುದು. ಆದರೆ ಇತ್ತೀಚಿನ ಉಚ್ಚನ್ಯಾಯಾಲಯದ ತೀರ್ಮಾನದಂತೆ ಆರೋಪಿಗಳು ಜವಾಬ್ದಾರರೆಂದು ನಿಗದಿ ಪಡಿಸಿದಾಗ ಆರೋಪದಲ್ಲಿರುವ ಅಂಶಗಳನ್ನು ದೃಢೀಕರಿಸಿ ವಿಚಾರಣೆ ಮಾಡಬೇಕು, ಅಂದರೆ ಅರ್ಜಿದಾರರು ಆರೋಪಿಗಳಿಂದ ಹಣ ವಸೂಲಾತಿಗೆ, ದಾಖಲೆ ಸಲ್ಲಿಸಿ ಆರೋಪ ದೃಢಪಡಿಸಿರುತ್ತಾರೆಯೇ ಮತ್ತು ಇದಕ್ಕೆ ಸಂಬಂಧಪಟ್ಟ ದಾಖಲೆ ಮತ್ತು ಆಧಾರ ಸಮರ್ಪಕವಾಗಿದೆಯೇ ಎಂಬುದನ್ನು ಪ್ರಾಧಿಕಾರ ಪರಿಶೀಲಿಸಿ ಆದೇಶ ಹೊರಡಿಸಬಹುದಾಗಿದೆ.

ವಸೂಲಾತಿ ಆದೇಶ ಹೊರಡಿಸುವಾಗ ಬಡ್ಡಿಯನ್ನು ಆಕರಣೆ ಮಾಡಬಹುದು. ಆದರೆ ನ್ಯಾಯಯುತ ಬಡ್ಡಿ ತೀರ್ಮಾನ ತೆಗೆದುಕೊಳ್ಳಲು ಸಂಬಂಧಪಟ್ಟ ಪ್ರಾಧಿಕಾರ ನಿರ್ಧರಿಸಬಹುದು. ಆದರೆ ಅರ್ಜಿ ಸಲ್ಲಿಸಿದ ದಿನಾಂಕದಿಂದ ವಸೂಲಾತಿಯವರಿಗೆ ಸಾಮಾನ್ಯ ಬಡ್ಡಿ ಆಕರಣೆ ಮಾಡಲು ಪ್ರಾಧಿಕಾರ ನಿರ್ಧರಿಸುತ್ತದೆ. ಆದರೆ ಹಣ ದುರುಪಯೋಗ ಮಾಡಿದ ದಿನಾಂಕದಿಂದ ಬಡ್ಡಿ ಆಕರಣೆ ಮಾಡುವ ಬಗ್ಗೆ ಸ್ಪಷ್ಟ ತೀರ್ಮಾನಗಳು ಇಲ್ಲ.

**ವಿವಾದಗಳು – ಪಂಚಾಯಿತಿ – ವ್ಯಾಜ್ಯ (ಕಲಂ 70) :–**

ಅರ್ಥ :– ಯಾವುದೇ ಒಂದು ಸಹಕಾರ ಸಂಘ ಅಥವಾ ವ್ಯಕ್ತಿ ತನಗೆ ಬರತಕ್ಕ ಹಣ, ಅವಧಿಯೊಳಗೆ ಬರದಿದ್ದರೆ ಅಥವಾ ಸಲ್ಲಿತಕ್ಕ ಸೌಲಭ್ಯ ಸಲ್ಲದಿದ್ದರೆ ಅಥವಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತರೆ ಹಾಗೂ ನೌಕರರಿದ್ದರೆ, ನೌಕರಿಯಲ್ಲಿ ಇದ್ದ ಸಮಯದಲ್ಲಿ ಬರಬೇಕಾದ ಸೌಲತ್ತು ಬರದಿದ್ದರೆ, ಈ ಸೌಲತ್ತು ಪಡೆಯಲು 2 ಪಕ್ಷಗಳ ಸಮ್ಮತವಿಲ್ಲದಾಗ, ಸಲ್ಲಿಸುವ ಅರ್ಜಿಯೇ ವ್ಯಾಜ್ಯ. ಅದರಲ್ಲೂ ಯಾವುದೇ ಒಂದು ಬರತಕ್ಕ ಹಣಕ್ಕೆ ತಗಾದೆ ಇದ್ದಾಗ ಇಂತಹ ತಗಾದೆ ಬಗ್ಗೆಯೂ 2 ಪಕ್ಷಗಳ ವ್ಯಾಜ್ಯವನ್ನು ಹೂಡಬಹುದಾಗಿದೆ.

ಸಂಘದ ಘಟನೆ ಅಥವಾ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಎಂಬ ಶಬ್ದಗಳಲ್ಲಿ ವ್ಯವಹಾರ ಎಂಬ ಪದವನ್ನು ಸೇರಿಸಿ ಒಂದು ಸಂಘದ ಕಾರ್ಯನಿರ್ವಹಣೆಯಲ್ಲಿ ಈ ಮೇಲ್ಕಂಡ ವಿಮರ್ಶೆಗಳ ಜೊತೆಗೆ ವ್ಯಾಜ್ಯ ವಿವಾದಗಳನ್ನು ಮಂಡಿಸಬಹುದಾಗಿದೆ.

ವ್ಯಾಜ್ಯದಲ್ಲಿ ಸಾಮಾನ್ಯವಾಗಿ ಸದಸ್ಯ ಹಿಂದಿನ ಸದಸ್ಯ ಮುಖಾಂತರ ಭಾದ್ಯತೆಯನ್ನು ಮಂಡಿಸುವ ಸದಸ್ಯ ಕಾರ್ಯಬಾರಿ (ಏಜೆಂಟ್) ನೌಕರ ಪದಾಧಿಕಾರಿ ಮತ್ತಿತರರು ವ್ಯಾಜ್ಯ ಹೂಡಬಹುದಾಗಿದೆ.

ಸಾಮಾನ್ಯವಾಗಿ ವ್ಯಾಜ್ಯವನ್ನು ರಿಜಿಸ್ಟ್ರಾರ ರವರಿಗೆ ಸಲ್ಲಿಸುವ ವ್ಯಕ್ತಿ ಈ ಅಧಿಕಾರವನ್ನು ನೊಂದಾಯಿತ ಬೈಲಾದಂತೆ ಅಧಿಕಾರವನ್ನು ಹೊಂದಿರಬೇಕು. ಸಂಘದ ಕಾರ್ಯವ್ಯಾಪ್ತಿಗನುಸಾರವಾಗಿ ಸಂಬಂಧಪಟ್ಟ ನಿಬಂಧಕರ ಮುಂದೆ ಸಲ್ಲಿಸಬೇಕು. ಸಲ್ಲಿಸಬೇಕಾದ ಕೆಲವು ದಾಖಲೆಗಳು ಈ ಕೆಳಕಂಡಂತೆ ಇರಬಹುದು.

1. ವ್ಯಾಜ್ಯ ಹೂಡಬೇಕೆಂದು ನಿರ್ಧಾರ ಅಥವಾ ಅಧಿಕಾರ ಇರುವ ವ್ಯಕ್ತಿಯು ತೀರ್ಮಾನ ಸಾಲಗಾರರಿಂದ ಅಥವಾ ಬರತಕ್ಕ ವ್ಯಕ್ತಿಗಾಗಿ ವಸೂಲಿ ಮಾಡುವ ಬಗ್ಗೆ, ಬಗೆಹರಿಸಿಕೊಳ್ಳುವ ಬಗ್ಗೆ ಕೈಗೊಂಡ ಕ್ರಮ ಸಂಕ್ಷಿಪ್ತ ವರದಿ, ಸಾಲಗಾರರ ಮತ್ತು ಜಾಮೀನುದಾರರ ಪೂರ್ಣ ಹೆಸರು, ವಿಳಾಸ, ಸಾಲಗಾರರ ಅಥವಾ ಜಾಮೀನುದಾರರ ಮರಣಹೊಂದಿದ್ದಲ್ಲಿ ವಾರಸುದಾರರ, ಶಾಸನಬದ್ಧ ಪ್ರತಿನಿಧಿಯ ಪೂರ್ಣ ಹೆಸರು, ವಿಳಾಸ ವಸೂಲಾತಿ ಕ್ರಮ ಜರುಗಿಸಲು ಅವಧಿ ಮೀರಿದ್ದರೆ ಅದಕ್ಕೆ ಸಂಬಂಧಪಟ್ಟ ಅರ್ಜಿ ಮತ್ತು ಪ್ರಮಾಣೀಕೃತ ಹೇಳಿಕೆ.

2. ಸಾಲಗಾರನು ಬರೆದುಕೊಟ್ಟ ಸಾಲದ ಅರ್ಜಿ, ಪಡೆದ ಸವಲತ್ತು, ಪಡೆದ ಸಾಲ: ಬಾಕಿ, ವಿತರಣೆ ಮಾಡಿದ ಕಾಗದ ಪತ್ರಗಳು, ಪ್ರಮಾಣೀಕೃತ ಪ್ರತಿ.
3. ಸಾಲ ಖಾತೆ ದೃಢೀಕೃತ–ಪ್ರಮಾಣೀಕೃತ ನಕಲು.
4. ಸಾಲಗಾರನಿಂದ ಸಂಘಕ್ಕೆ ಬರತಕ್ಕ ಹಣ ಅಥವಾ ಸವಲತ್ತು, ಬಾಕಿ ಇವುಗಳ ಯಾದಿ.
5. ಈ ವ್ಯಾಜ್ಯವನ್ನು ನಡೆಸಿಕೊಂಡು ಹೋಗಲು ಆಡಳಿತ ಮಂಡಳಿ ಅಥವಾ ಬೈಲಾದಲ್ಲಿ ಅಧಿಕಾರ, ವ್ಯವಸ್ಥಾಪಕ ನಿರ್ದೇಶಕರಿಗೆ ಕಾಯ್ದೆ ಕಲಂ.29ಜಿ ನಲ್ಲಿ ದತ್ತವಾಗಿದೆ ಮತ್ತು ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ವಿಚಾರಣಾ ಕಾಲಕ್ಕೆ, ಮೂಲ ಪ್ರತಿಗಳನ್ನು ಪಂಚಾಯಿತಿದಾರರ ಮುಂದೆ ಸಲ್ಲಿಸಬೇಕು.

ಸಂಬಂಧಪಟ್ಟ ನಿಬಂಧಕರು ವ್ಯಾಜ್ಯದ ಅರ್ಜಿ ಸಲ್ಲಿಸಿದಾಗಲೇ ಪರಿಶೀಲಿಸಿ, ಹೆಚ್ಚುವರಿ ಮಾಹಿತಿಬೇಕಾಗಿದ್ದರೆ ಸಂಬಂಧಪಟ್ಟ ಸಂಘಕ್ಕೆ ವಾಪಸ್ಸಾತಿ ಮಾಡಿ ಸರಿಪಡಿಸಿ ಮರುಸಲ್ಲಿಸಲು ಸೂಚಿಸಬಹುದು. ಈ ವ್ಯಾಜ್ಯವನ್ನು ಹೂಡಿದಾಗಲೇ ವ್ಯಾಜ್ಯದ ಪ್ರಾಧಿಕಾರದ ಮುಂದೆ ನಡೆಸಲು ಅರ್ಹವೇ ಅಲ್ಲವೇ ಎಂಬುದನ್ನು ನಿರ್ಧರಿಸಬೇಕು. ಈ ತೀರ್ಮಾನ ತೆಗೆದುಕೊಂಡ ನಂತರ ನಿಬಂಧಕರು ವ್ಯಾಜ್ಯವನ್ನು ದಾಖಲೆಗೆ ತೆಗೆದುಕೊಂಡು ವ್ಯಾಜ್ಯವನ್ನು ತಾನೇ ನಡೆಸಿಕೊಂಡು ಹೋಗಬೇಕೆ ಅಥವಾ ಗೌರವ ಮಧ್ಯಸ್ಥದಾರರಿಗೆ ವರ್ಗಾಯಿಸಬೇಕೇ ಎಂಬ ತೀರ್ಮಾನ ತೆಗೆದುಕೊಳ್ಳಬೇಕು.

**ಸಹಕಾರ ಸಂಘಗಳ ಕಾಯ್ದೆ ಕಲಂ 70–ಎ :–**

ಯಾವುದೇ ಒಂದು ಪ್ರಕರಣವನ್ನು ದಾಖಲು ಮಾಡಲು ಕಾನೂನಿನಲ್ಲಿ ಇರುವ ವಿಷಯವನ್ನು ಕಲಂ 70ಎ ನಲ್ಲಿ ನಮೂದಿಸಲಾಗಿದೆ. ಅದರಲ್ಲಿ ಚುನಾವಣೆಗೆ ಸಂಬಂಧಪಟ್ಟ ವ್ಯಾಜ್ಯವಾದರೆ 30 ದಿವಸಗಳೊಳಗಾಗಿ, ಮತ್ತಿತರೆ ವಿಷಯಗಳಿಗೆ ಸಂಬಂಧಪಟ್ಟಂತೆ 6 ವರ್ಷದೊಳಗೆ ನಿಬಂಧಕರ ಮುಂದೆ ದಾಖಲಿಸಬಹುದು. ಸಕಾರಣಗಳೊಂದಿಗೆ ದಾವಾ ದಾಖಲು ಮಾಡಲು ವಿಳಂಬಕ್ಕೆ ಕಾರಣಗಳನ್ನು ಒಂದು ಪ್ರಮಾಣೀಕೃತ ಹೇಳಿಕೆ ಜೊತೆ ಅರ್ಜಿ ಸಲ್ಲಿಸಿದಾಗ, ಎದುರು ಅರ್ಜಿದಾರರಿಗೆ ನೋಟೀಸು ಜಾರಿ ಮಾಡಿ, ಕಾಲ ವಿಳಂಬ ಅರ್ಜಿ ಪುರಸ್ಕರಿಸಬೇಕೇ ಅಥವಾ ತಿರಸ್ಕರಿಸಬೇಕೆ ಎಂಬುದನ್ನು ನಿಬಂಧಕರು ತೀರ್ಮಾನ ತೆಗೆದುಕೊಳ್ಳಬೇಕು.

**ಸಹಕಾರ ಸಂಘಗಳ ಕಾಯ್ದೆ ಕಲಂ 71 :–**

ನಿಬಂಧಕರು ಕಲಂ 70ರಡಿ ಯಾವುದೇ ಒಂದು ವ್ಯಾಜ್ಯವನ್ನು ದಾಖಲೆಗೆ ತೆಗೆದುಕೊಂಡ ನಂತರ ಪ್ರಕರಣವನ್ನು ತಾನೇ ತೀರ್ಮಾನಿಸಬೇಕೆ ಅಥವಾ ಇತ್ಯರ್ಥ ಮಾಡಲು ಯಾರಿಗಾದರೂ ಅಧಿಕಾರ ವಹಿಸಲ್ಪಟ್ಟವರಿಗೆ ವರ್ಗಾಯಿಸಬೇಕೆ ಅಥವಾ ನಿಬಂಧಕರು ನೇಮಕ ಮಾಡಲ್ಪಟ್ಟ ಪಂಚಾಯಿತಿದಾರರಿಗೆ ಕಳುಹಿಸಬೇಕೆ ಎಂಬುದನ್ನು ನಿರ್ಧರಿಸಬೇಕು. ನಿಬಂಧಕರು ದಾವಾ ಪ್ರಕರಣವನ್ನು ವಿಚಾರಣೆ ಮಾಡುವ ಬಗ್ಗೆ ಕೆಲವೊಂದು ನಿರ್ದೇಶನಗಳನ್ನು ಕೊಟ್ಟಿದ್ದಾರೆ. ಅಂದರೆ ಸಾಲ ವಸೂಲಾತಿಗೆ ಸಂಬಂಧಪಟ್ಟಂತೆ ವ್ಯಾಜ್ಯದಲ್ಲಿ ರೂ.1.00 ಲಕ್ಷ ಮೀರದಂತೆ ಗೌರವ ಮಧ್ಯಸ್ಥದಾರರಿಗೆ ವರ್ಗಾಯಿಸಬಹುದು, ಹಣ ದುರುಪಯೋಗ ಪ್ರಕರಣಗಳಿದ್ದರೆ ನಿಬಂಧಕರು ಚುನಾವಣೆಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಸಾಮಾನ್ಯವಾಗಿ ನಿಬಂಧಕರು ನಿರ್ವಹಿಸಬೇಕೆಂದು ನಿರ್ದೇಶನ ಇದೆ.

ನಿಬಂಧಕರು ಅಥವಾ ಪಂಚಾಯಿತಿದಾರರು ಒಂದು ವ್ಯಾಜ್ಯವನ್ನು ತೀರ್ಮಾನಿಸುವಾಗ ಅನುಸರಿಸಬೇಕಾದ ನಿಯಮಗಳ ಬಗ್ಗೆ ಸಹಕಾರ ಸಂಘಗಳ ನಿಯಮ 31(4)(ಎ) ನಲ್ಲಿ ನಮೂದಿಸಲಾಗಿದೆ.

ನಿಬಂಧಕರು, ಮಧ್ಯಸ್ಥದಾರರು ಅಥವಾ ವ್ಯಾಜ್ಯ ತೀರ್ಮಾನಿಸಬೇಕಾದ ವ್ಯಕ್ತಿ ಸಂಬಂಧಪಟ್ಟವರಿಗೆ

ಸಮನ್ಸ್‌ಗಳನ್ನು ಜಾರಿ ಮಾಡಿ ಕಕ್ಷಿದಾರ ಮತ್ತು ಸಾಕ್ಷಿಗಳಿಂದ ಪಡೆದ ಹೇಳಿಕೆಗಳ ಸಂಕ್ಷಿಪ್ತ ಟಿಪ್ಪಣಿಗಳನ್ನು ಪಡೆಯಬೇಕು ಅಥವಾ ಬರೆದುಕೊಳ್ಳಬೇಕು. ನಂತರ ಕಕ್ಷಿದಾರ ಕೊಟ್ಟ ದಾಖಲಾತಿ ಸಾಕ್ಷ್ಯಗಳನ್ನು ಪರಿಶೀಲಿಸಿದ ನಂತರ ನ್ಯಾಯ ಸಮ್ಮತೆ ಮತ್ತು ಉತ್ತಮ ವಿವೇಚನೆಗೆ ಅನುಗುಣವಾಗಿ ತೀರ್ಪು ಅಥವಾ ಆದೇಶ ಕೊಡತಕ್ಕದ್ದು.

ಸಹಕಾರಿ ನ್ಯಾಯಾಲಯಗಳಲ್ಲಿ ಸಿವಿಲ್ ನ್ಯಾಯಾಲಯದಲ್ಲಿ (ಸಿಪಿಸಿ) ಅನುಸರಿಸಬಹುದಾದ ನಿಯಮಗಳನ್ನು ಅನುಸರಿಸುವ ಅವಶ್ಯಕತೆ ಇಲ್ಲ. ತುರ್ತಾಗಿ ನ್ಯಾಯ ವಿತರಣೆ ಮಾಡಲು ರಚಿಸಿರುವ ಕಾನೂನು, ಸಹಕಾರಿ ಕಾನೂನು ಆಗಿರುವುದರಿಂದ ಸಂಕ್ಷಿಪ್ತ ವಿಚಾರಣೆ ಅಥವಾ ಆದೇಶದಲ್ಲಿ ಕೊಡಬಹುದಾಗಿದೆ. ಆದ್ದರಿಂದ ಸಂಬಂಧಪಟ್ಟ ಕಕ್ಷಿದಾರರಿಗೆ ಅಥವಾ ಸಾಕ್ಷಿಗಳಿಗೆ, ನ್ಯಾಯಯುತವಾದ ನೋಟೀಸು ಜಾರಿ ಮಾಡಿ ದಿನಾಂಕ ಗೊತ್ತುಪಡಿಸಿದಾಗ ಹಾಜರಾದ ವ್ಯಕ್ತಿ ಹೇಳಿಕೆ ಪಡೆದು ಒಂದೇ ದಿನ ತೀರ್ಮಾನಿಸಬಹುದು. ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ವಿಚಾರಣಾ ದಿನಾಂಕದಂದು ಅವಕಾಶ ಕೊಡಲು ಕೇಳಿದಾಗ, ಅವಶ್ಯಕತೆ ಅನುಗುಣವಾಗಿ ಮುಂದೂಡಬಹುದು ಹಾಗೂ ಮುಂದೂಡಿದ ದಿನಾಂಕದಂದು ವಿಚಾರಣೆಯನ್ನು ಮುಕ್ತಾಯಗೊಳಿಸಿ ಆದೇಶವನ್ನು ಹೊರಡಿಸಬಹುದು.

ಯಾವುದೇ ಆದೇಶವನ್ನು ಹೊರಡಿಸುವಾಗ ಅರ್ಜಿದಾರರು ಸಲ್ಲಿಸಿದ ಮನವಿ ದಾಖಲೆಗಳು ಮತ್ತು ವಿಚಾರಣಾ ಸಮಯದಲ್ಲಿ ಸಾಕ್ಷಿಗಳ ಹೇಳಿಕೆ ಪಡೆಯುವಾಗ ಗುರುತಿಸಲಾದ ಅಂಶಗಳು ಪ್ರತ್ಯಕ್ಷ ಮತ್ತು ಪರೋಕ್ಷ ಹೇಳಿಕೆಗಳು ಇವುಗಳನ್ನು ಪರಿಶೀಲಿಸಿ ಪರಾಮರ್ಶಿಸಿ ಆದೇಶದಲ್ಲಿ ವಿವರಗಳನ್ನು ಕೂಡಿಸಿ, ಪ್ರಾಧಿಕಾರವು ಅಥವಾ ಪಂಚಾಯಿತಿದಾರರು ತೀರ್ಮಾನ ಕೊಡಬೇಕೆಂದು ತೀರ್ಮಾನ ಕೊಡುವಾಗ "ನ್ಯಾಯ ಸಮ್ಮತ" ಮತ್ತು "ಉತ್ತಮ ವಿವೇಚನೆ" ಎಂಬ ತತ್ವವನ್ನು ಗ್ರಹಿಸಿ ಆದೇಶವನ್ನು ಹೊರಡಿಸಬೇಕು.

ಯಾವುದೇ ಕಕ್ಷಿದಾರನು ಸಮನ್ಸ್ ಜಾರಿ ಆದರೂ, ಹಾಜರಾಗಲು ಸಾಧ್ಯವೇ ಇಲ್ಲದಾಗ ಮತ್ತು ಪಂಚಾಯಿತಿ ಅಥವಾ ಪ್ರಾಧಿಕಾರದಲ್ಲಿ ಹಾಜರಿದ್ದ ಕಕ್ಷಿದಾರರ ಹೇಳಿಕೆ ಪಡೆದು ತೀರ್ಮಾನಕೊಟ್ಟಿದ್ದರೆ ಅಂತಹ ತೀರ್ಮಾನವನ್ನು ತಡೆಹಿಡಿದು, ಕಿತ್ತುಹಾಕಿ, ಮರು ವಿಚಾರಣೆ ಮಾಡಲು ಸಹಕಾರ ಸಂಘಗಳ ನಿಯಮ 31(4)(ಬಿ) ರಂತೆ ಅರ್ಜಿಯನ್ನು ಸಕಾರಣಗಳ ಜೊತೆಗೆ ಸಲ್ಲಿಸಬಹುದು.

**ನಿಯಮ 31(4)(ಬಿ) ಈ ಕೆಳಕಂಡಂತಿದೆ.**

> "ಕೊಡಲಟ್ಟ ತೀರ್ಮಾನ ಅಥವಾ ಆದೇಶ ಲಿಖಿತವಾಗಿರತಕ್ಕದ್ದು ಮತ್ತು ನ್ಯಾಯಸ್ಥಾನದಲ್ಲಿ ಬಹಿರಂಗವಾಗಿ ವಿದ್ಯುಕ್ತವಾಗಿ ಹೇಳತಕ್ಕದ್ದು. ಕರೆಯಲ್ಪಟ್ಟ ಪಕ್ಷದಾರನು ಬರಲು ತಪ್ಪಿದಲ್ಲಿ ವ್ಯಾಜ್ಯವನ್ನು ಅಂತಹವರ ಗೈರು ಹಾಜರಿಯಲ್ಲಿ ತೀರ್ಮಾನಿಸಬಹುದು. ಪಕ್ಷದಾರನ ಗೈರು ಹಾಜರಿಯಲ್ಲಿ ಆದ ತೀರ್ಮಾನಗಳನ್ನು, ಪಕ್ಷದಾರನು ತನ್ನ ಗೈರು ಹಾಜರಿಯ ಬಗ್ಗೆ ಸಾಕಷ್ಟು ಕಾರಣವನ್ನು ತೋರಿಸಿದಲ್ಲಿ ರಿಜಿಸ್ಟ್ರಾರ ರವರು ಆ ವಿವರವನ್ನು ಕಡತದ ಮೇಲೆ ಪುನಃ ತೆಗೆದುಕೊಳ್ಳುವಂತೆ ಮತ್ತು ಇತ್ಯರ್ಥ ಮಾಡುವಂತೆ ಆದೇಶ ಕೊಡಬಹುದು."
>
> "ಆದರೆ ಪಕ್ಷದಾರನ ಗೈರು ಹಾಜರಿಯಲ್ಲಾದ ತೀರ್ಮಾನವನ್ನು ತಳ್ಳಿಹಾಕುವ ಬಗ್ಗೆ ಬರುವ ಯಾವ ಅರ್ಜಿಯೂ ಅಂಥ ತೀರ್ಮಾನ ಅಥವಾ ಆದೇಶ ಆದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಲ್ಲಿಸಿದ ಹೊರತು ಮತ್ತು ಯಾವ ಪಕ್ಷದಾರನ ಗೈರು ಹಾಜರಿಯ ಬಗ್ಗೆ ಅಂಥ ತೀರ್ಮಾನವು ಮಾಡಲ್ಪಟ್ಟಿದ್ದಿತೋ ಅಂಥ ಪಕ್ಷಗಾರನಿಗೆ ಸದರಿ ವಿವಾದದಲ್ಲಿ ಯೋಗ್ಯ ರೀತಿಯಲ್ಲಿ ಜಾರಿ ಮಾಡಲ್ಪಟ್ಟಿದ ಹೊರತು ಅಥವಾ ಇತರ ಬಾಬತುಗಳಲ್ಲಿ ಅಂಥ ತೀರ್ಮಾನವು ಅಥವಾ ಆದೇಶ ಮಾಡಲ್ಪಟ್ಟಿರುವುದೆಂಬ ಸಂಗತಿಯು ಗೊತ್ತಾದ ದಿನಾಂಕದಿಂದ ಮೂವತ್ತು ದಿವಸದೊಳಗಾಗಿ ಸದರಿ ಅರ್ಜಿಯು ಮಾಡಲ್ಪಟ್ಟ ಹೊರತು ಅವಕಾಶವಿರತಕ್ಕದ್ದಲ್ಲ."

ಈ ಮೇಲ್ಕಂಡ ವಿಷಯದಲ್ಲಿ ಗೈರುಹಾಜರಿಯಲ್ಲಿ ತೀರ್ಮಾನ ಮಾಡಿದಾಗ ಯಾರು ಗೈರುಹಾಜರಾಗುತ್ತಾರೇ ತೀರ್ಪು ಕೊಟ್ಟ 30 ದಿವಸದೊಳಗೆ ಅರ್ಜಿ ಸಲ್ಲಿಸಿದರೆ, ಅಂತಹ ಅರ್ಜಿಯನ್ನು ಪರಿಶೀಲಿಸಿ ವಿಚಾರಣೆ ಮಾಡಿ ಹೊರಡಿಸಿದ ಆದೇಶವನ್ನು ಕಿತ್ತು ಹಾಕಿ, ಪುನಃ ಕಡತಕ್ಕೆ ತೆಗೆದುಕೊಂಡು ಇತ್ಯರ್ಥ ಮಾಡುವ ಅಧಿಕಾರಿ ನಿಬಂಧಕರಿಗೆ ಇದೆ. ಆದರೆ ಅಧಿಕಾರವನ್ನು ಚಲಾಯಿಸುವಾಗ ಯಾವ ಪಕ್ಷಗಾರ ಸಮನ್ಸ್ ಜಾರಿ ಆದ ನಂತರ ಗೈರು ಹಾಜರಾಗುತ್ತಾನೋ ಆತನನ್ನು ಎಕ್ಸ್‌ಪಾರ್ಟಿ ಎಂದು ಆದೇಶ ಹೊರಡಿಸಲಾಗಿರುತ್ತದೆ. ಇಂತಹ ವ್ಯಕ್ತಿ ಸಕಾರಣಗಳ ಜೊತೆ ಪ್ರಮಾಣೀಕೃತ ಹೇಳಿಕೆ ಸಲ್ಲಿಸಬೇಕು. ಹೇಳಿಕೆ ಸಮಂಜಸವಾಗಿದೆ ಎಂಬುದು ಪ್ರಾಧಿಕಾರದ ತೀರ್ಮಾನಕ್ಕೆ ಬರಬೇಕು ಮತ್ತು ಹಾಜರಿದ್ದ ಪಕ್ಷಗಾರನಿಗೆ ನೋಟೀಸು ಜಾರಿ ಮಾಡಿ ಅವರ ತಕರಾರು ಪಡೆದು ಅರ್ಜಿಯನ್ನು ಪುರಸ್ಕರಿಸಬೇಕೆ ಅಥವಾ ತಿರಸ್ಕರಿಸಬೇಕೆ ಎಂಬುದನ್ನು ನಿಬಂಧಕರು ನಿರ್ಧರಿಸಬಹುದು.

**ನೋಟೀಸು ಜಾರಿ ಮಾಡುವ ಕ್ರಮ (ಸಹಕಾರ ಸಂಘಗಳ ನಿಯಮ 32) :–**

32(1) ಕಾನೂನು ಮತ್ತು ಈ ನಿಬಂಧನೆಗಳ ಮೇರೆಗೆ ಪ್ರತಿ ಸಮನ್ಸ್ ಲಿಖಿತವಾಗಿರತಕ್ಕದ್ದು ಮತ್ತು ಜಾರಿ ಮಾಡುವವರ ಸಹಿ ಮತ್ತು ಮೊಹರಿನಿಂದ ಕೂಡಿರತಕ್ಕದ್ದು ಮತ್ತು ಅಂಥ ಅಧಿಕಾರಿಯಿಂದ ಅಥವಾ ಆತನಿಂದ ಈ ಬಗ್ಗೆ ಬರಹ ಮೂಲಕವಾಗಿ ಪ್ರಾಧಿಕಾರ ಕೊಡಲಾದ ಯಾವನೇ ವ್ಯಕ್ತಿಯಿಂದ ಸಹಿ ಹಾಕಲ್ಪಡತಕ್ಕದ್ದು. ಸಮನ್ಸ್ ಮಾಡಲಾದ ವ್ಯಕ್ತಿ ಸದರಿ ಅಧಿಕಾರಿ ಮುಂದೆ ಹೇಳಲ್ಪಟ್ಟಿರುವ ಸಮಯದಲ್ಲಿ ಮತ್ತು ಸ್ಥಳದಲ್ಲಿ ಹಾಜರಾಗುವಂತೆ ನಿರ್ಬಂಧಿಸತಕ್ಕದ್ದು. ಆತನ ಹಾಜರಿಯು ಒಂದು ಹಕ್ಕಿನ ಬಗ್ಗೆ ಉತ್ತರ ಹೇಳುವ ಬಗ್ಗೆ ಒಂದು ಪಕ್ಷಗಾರನಂತೆ ಅಥವಾ ರುಜುವಾತನನ್ನು ಕೊಡುವ ಬಗ್ಗೆ ಒಬ್ಬ ಸಾಕ್ಷಿದಾರನಂತೆ ಅಥವಾ ಒಂದು ದಸ್ತಾವೇಜನ್ನು ಹಾಜರುಪಡಿಸುವ ಬಗ್ಗೆ ಅಥವಾ ಎರಡೂ ಉದ್ದೇಶಗಳ ಬಗ್ಗೆ ಬೇಕಾಗಿರುವುದೋ ಏನೆಂಬುದನ್ನು ನಮೂದಿಸತಕ್ಕದ್ದು. ಮತ್ತು ಯಾವ ನಿರ್ದಿಷ್ಟ ದಸ್ತಾವೇಜು ಹಾಜರಲ್ಪಡಿಸಬೇಕಾಗಿರುವುದೋ ಅದನ್ನು ಸಾಕಷ್ಟು ಸರಿಯಾಗಿ ಸಮನ್ಸ್‌ನಲ್ಲಿ ವಿವರಿಸತಕ್ಕದ್ದು.

32(2) ರುಜುವಾತನ್ನು ಕೊಡುವ ಸಮನ್ಸ್ ಮಾಡದೇ ಒಂದು ದಸ್ತಾವೇಜನ್ನು ಹಾಜರುಪಡಿಸುವ ಬಗ್ಗೆ ಯಾವನೇ ವ್ಯಕ್ತಿಯು ಸಮನ್ಸ್ ಮಾಡಲ್ಪಡಬಹುದು. ದಸ್ತಾವೇಜನ್ನು ಹಾಜರು ಮಾಡಲು ಮಾತ್ರ ಸಮನ್ಸ್ ಮಾಡಲ್ಪಟ್ಟ ಯಾವನೇ ವ್ಯಕ್ತಿಯು ಸದರಿ ದಸ್ತಾವೇಜನ್ನು ಹಾಜರಲ್ಪಡಿಸುವಂತೆ ಮಾಡಿದಲ್ಲಿ ಸಮನ್ಸ್‌ನ್ನು ಪಾಲಿಸಿದಂತೆ ಭಾವಿಸತಕ್ಕದ್ದು.

32(3) ಸದರಿ ಕಾನೂನಿನ ಮೇರೆಗೆ ಯಾವುದೇ ವ್ಯಕ್ತಿಯು ಮೇಲೆ ಈ ಕೆಳಗೆ ಹೇಳಲ್ಪಟ್ಟ ರೀತಿಗಳ ಪೈಕಿ ಯಾವುದೇ ರೀತಿಯಲ್ಲಿ ಅಂದರೇ:–

(ಎ) ಅಂಥ ವ್ಯಕ್ತಿಗೆ ಅದನ್ನು ಕೊಡುವ ಮೂಲಕ ಅಥವಾ ಒಪ್ಪಿಸಿ ಕೊಡುವ ಮೂಲಕ, ಅಥವಾ

(ಬಿ) ಅಂಥ ವ್ಯಕ್ತಿಯು ಕಾಣಬರದಿದ್ದ ಪಕ್ಷದಲ್ಲಿ ಆತನ ಕೊನೆಯ ವಾಸಸ್ಥಳವೆಂದು ಅಥವಾ ವ್ಯವಹಾರದ ಸ್ಥಳವೆಂದು ತಿಳಿದುಬಂದ ಸ್ಥಳದಲ್ಲಿ ಅದನ್ನಿಡುವ ಮೂಲಕ ಅಥವಾ ಆತನ ಕುಟುಂಬದ ಯಾರಾದರೂ ವಯಸ್ಕ ಸದಸ್ಯನಿಗೆ ಅದನ್ನು ಕೊಡುವ ಮೂಲಕ, ಅಥವಾ

(ಸಿ) ಅಂಥ ವ್ಯಕ್ತಿಯ ವಿಳಾಸದ ರಿಜಿಸ್ಟ್ರಾರರಿಗೆ ಅಥವಾ ಅಧಿಕಾರ ಕೊಡಲಾದ ಇತರ ವ್ಯಕ್ತಿಗೆ ತಿಳಿದಿರುವಲ್ಲಿ ತಲುಪಿದ ಬಗ್ಗೆ ಒಪ್ಪಿಗೆ ಸೂಚಿಸುವ ಮೊದಲನೇ ಹಣ ಕೊಡಮಾಡಲ್ಪಟ್ಟ ರಿಜಿಸ್ಟ್ರಾರ್ ಅಂಚೆ ಮೂಲಕ ಆತನಿಗೆ ಅದನ್ನು ಕಳುಹಿಸಿಕೊಡುವ ಮೂಲಕ, ಅಥವಾ

(ಡಿ) ಮೇಲೆ ಹೇಳಲ್ಪಟ್ಟ ಯಾವುದೇ ಕ್ರಮಕ್ಕೆ ಅವಕಾಶವಿಲ್ಲದಿರುವಲ್ಲಿ ಆತನ ಕೊನೆಯ ವಾಸಸ್ಥಳವೆಂದು ಅಥವಾ ವ್ಯವಹಾರದ ಸ್ಥಳವೆಂದು ತಿಳಿದುಬಂದ ಸ್ಥಳದ ಯಾವುದಾದರೂ ಎದ್ದು ಕಾಣುವ ಭಾಗದಲ್ಲಿ ಅದನ್ನು ಅಂಟಿಸುವ ಮೂಲಕ ಸಮನ್ಸ್‌ನನ್ನು ಜಾರಿ ಮಾಡಬಹುದು.

(4) ಸಮನ್ಸ್ ಮಾಡಲ್ಪಟ್ಟ ವ್ಯಕ್ತಿಗೆ ಸಮನ್ಸ್‌ನ ಪ್ರತಿಯನ್ನು ಜಾರಿ ಮಾಡುವ ಅಧಿಕಾರಿಯು ಒಬ್ಬ ಏಜೆಂಟ್ ಅಥವಾ ಆತನ ಪರವಾಗಿ ಇತರ ವ್ಯಕ್ತಿಗೆ ಸ್ವತಃ ಒಪ್ಪಿಸಿದಲ್ಲಿ ಅಥವಾ ಒಪ್ಪಿಸಿಕೊಟ್ಟಲ್ಲಿ ಆತನು ಯಾವ ವ್ಯಕ್ತಿಗೆ ಹಾಗೆ ಒಪ್ಪಿಸಲಾಗಿದೆಯೋ ಆತನ ಸಹಿಯನ್ನು ಮೂಲ ಸಮನ್ಸಿನ ಮೇಲೆ ಷರಾ ಬರೆಯಲ್ಪಟ್ಟ ಜಾರಿಯು ತಲುಪಿದ ಒಪ್ಪಿಗೆ ಬಗ್ಗೆ ಹಾಕುವಂತೆ ಕೇಳತಕ್ಕದ್ದು.

(5) ಜಾರಿ ಮಾಡುವ ಅಧಿಕಾರಿಯು (4) ನೇ ಉಪನಿಬಂಧನೆ ಮೇರೆಗೆ ಯಾವ ವಿಷಯಗಳಲ್ಲಿ ಸಮನ್ಸ್ ಜಾರಿ ಮಾಡಲಾಗಿದೆಯೋ ಆ ಸಮಸ್ತ ವಿಷಯಗಳಲ್ಲಿ ಮೂಲ ಸಮನ್ಸಿನ ಮೇಲೆ ಅಥವಾ ಅದಕ್ಕೆ ಸಮನ್ಸ್ ಯಾವಾಗ ಮತ್ತು ಯಾವ ರೀತಿಯಲ್ಲಿ ಜಾರಿ ಮಾಡಲ್ಪಟ್ಟಿತೆಂಬ ಬಗ್ಗೆ ಮತ್ತು ಜಾರಿ ಮಾಡಲ್ಪಟ್ಟ ವ್ಯಕ್ತಿಯನ್ನು ಗುರುತಿಸುವ ಮತ್ತು ಸಮನ್ಸ್‌ನ್ನು ಒಪ್ಪಿಸಿದುದಕ್ಕೆ ಅಥವಾ ಒಪ್ಪಿಸಿಕೊಟ್ಟಿದ್ದಕ್ಕೆ ಸಾಕ್ಷಿಯಾಗಿರುವ ವ್ಯಕ್ತಿಯು ಯಾರಾದರೂ ಇದ್ದರೆ ಆತನು ಹೆಸರಿನ ಮತ್ತು ವಿಳಾಸದ ವಿವರವನ್ನು ಕೊಡುವ ಮಾಹಿತಿ ವರದಿ ಮೂಲಕ ಷರಾ ಬರೆಯತಕ್ಕದ್ದು ಅಥವಾ ಷರಾ ಬರೆಯುವಂತೆ ಅಥವಾ ಸೇರಿಸಲ್ಪಡುವಂತೆ ಮಾಡತಕ್ಕದ್ದು.

(6) ಸಮನ್ಸ್ ಮಾಡಬೇಕಾದ ಪಕ್ಷಗಾರನು ಒಬ್ಬ ಸರ್ಕಾರಿ ಅಧಿಕಾರಿಯಾಗಿದ್ದಲ್ಲಿ ಅಥವಾ ಒಂದು ವೈಲ್ಡ್ ಕಂಪನಿಯ ನೌಕರನಾಗಿದ್ದಲ್ಲಿ ಅಥವಾ ಸ್ಥಳೀಯ ಅಧಿಕಾರಿಯಾಗಿದ್ದಲ್ಲಿ, ಸಮನ್ಸ್‌ನ್ನು ಕೊಡುವ ಅಧಿಕಾರಿಯು ಬಹಳ ಅನುಕೂಲವಾಗುವ ರೀತಿಯಲ್ಲಿ ಜಾರಿ ಮಾಡಲ್ಪಡಬಹುದೆಂದು ಕಂಡಲ್ಲಿ ಸಮನ್ಸ್ ಮಾಡಲ್ಪಡಬೇಕಾಗಿರುವ ವ್ಯಕ್ತಿಯ ಮೇಲೆ, ಜಾರಿಯ ಬಗ್ಗೆ ಆತನು ಯಾವ ಕಛೇರಿಯಲ್ಲಿ ನೇಮಕ ಮಾಡಲ್ಪಟ್ಟಿರುವನೋ ಆ ಕಛೇರಿಯಲ್ಲಿ ಮುಖ್ಯಾಧಿಕಾರಿಗೆ ವ್ಯಕ್ತಿಯಿಂದ ಇಟ್ಟುಕೊಳ್ಳುವ ಬಗ್ಗೆ ಒಂದು ಪ್ರತಿಯ ಸಹಿತಿ ಅದನ್ನು ತಲುಪಿದ ಒಪ್ಪಿಗೆಯ ಬಗ್ಗೆ ಮೊದಲೆ ಹಣ ಪಾವತಿ ಮಾಡಲ್ಪಟ್ಟ ರಿಜಿಸ್ಟ್ರಾರ್ ಅಂಚೆ ಮೂಲಕ ಕಳುಹಿಸಿಕೊಡಬಹುದು.

ದಾವಾ ಅಥವಾ ಅಧಿಭಾರ ಅರ್ಜಿ ಮತ್ಯಾವುದೇ ಕ್ರಮ ಜರುಗಿಸಬೇಕಾದರೆ ಸಂಬಂಧಪಟ್ಟ ವ್ಯಕ್ತಿಗಳಿಗೆ ನೋಟೀಸು–ಸಮನ್ಸ್ ಜಾರಿ ಮಾಡುವ ಬಗ್ಗೆ ಕ್ರಮವನ್ನು ಈ ಮೇಲ್ಕಂಡ ನಿಯಮದಲ್ಲಿ ರೂಪಿಸಿದೆ. ನೋಟೀಸು ಜಾರಿ ಮಾಡುವಾಗ ಸಾಮಾನ್ಯವಾಗಿ ಗೌರವ ಮಧ್ಯಸ್ಥದಾರರು ಸಂಬಂಧಪಟ್ಟ ಸಂಘದ ಕಾರ್ಯದರ್ಶಿಯವರ ಮುಖಾಂತರ ಅಥವಾ ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್ ಮುಖಾಂತರ ಅಥವಾ ಆರ್ಡಿನರಿ ಪೋಸ್ಟ್ ಮುಖಾಂತರ ನೋಟೀಸು ಜಾರಿ ಮಾಡುತ್ತಿದ್ದು, ಈ ರೀತಿ ಜಾರಿ ಮಾಡಲು ಬರುವುದಿಲ್ಲ. ಉಪನಿಯಮ 32 ರಡಿ 4 ವಿಧಾನಗಳನ್ನು ಸಮನ್ಸ್ ಜಾರಿ ಬಗ್ಗೆ ನಮೂದಿಸಲಾಗಿದೆ. ಅಂದರೆ ಸಂಬಂಧಪಟ್ಟ ವ್ಯಕ್ತಿಗೆ ಖುದ್ದಾಗಿ ಕೊಡುವ ಮೂಲಕ ಅಥವಾ ವ್ಯಕ್ತಿ ಸಿಗದಿದ್ದಾಗ ಅವನು ವಾಸಿಸುತ್ತಿದ್ದ ಕೊನೆಯ ಸ್ಥಳವನ್ನು ದೃಢೀಕರಿಸಿಕೊಂಡು ಅವನ ವಿಳಾಸವು ನಿಬಂಧಕರಿಗೆ ಅಥವಾ ಗೌರವ ಮಧ್ಯಸ್ಥದಾರರಿಗೆ ತಿಳಿದಿರುವಲ್ಲಿ, ತಲುಪಿದ ಬಗ್ಗೆ ಒಪ್ಪಿಗೆ ಸೂಚಿಸುವ ಮೊದಲನೇ ಹಣ ಕೊಟಲ್ಪಟ್ಟ ನೊಂದಾಯಿತ ಅಂಚೆ ಮೂಲಕ ಮತ್ತು ಮೇಲ್ಕಂಡ 3 ವಿಧಾನಗಳ ಮುಖಾಂತರ ಜಾರಿ ಮಾಡಲಾಗದಿದ್ದರೆ ಯಾವುದೇ ವ್ಯಕ್ತಿ ಕೊನೆ ವಾಸಸ್ಥಳವೆಂದು ಗುರುತಿಸಿಕೊಂಡು ಯಾವುದಾದರೂ ಎದ್ದು ಕಾಣುವ ಭಾಗದಲ್ಲಿ ಅಂಟಿಸುವ ಮೂಲಕ ಸಮನ್ಸ್ ಜಾರಿ ಮಾಡಬಹುದು. ಯಾವ ವ್ಯಕ್ತಿ ಸಮನ್ಸ್ ಜಾರಿ ಮಾಡುತ್ತಾನೋ ಆ ವ್ಯಕ್ತಿಯು ಜಾರಿ ಮಾಡಿದ ಸಮಯ, ದಿನಾಂಕ, ವೇಳೆ ಇವುಗಳನ್ನು ದಾಖಲಿಸಬೇಕು. ಅದರಲ್ಲೂ ಪ್ರಮುಖವಾಗಿ 4ನೇ ವಿಧಾನದಲ್ಲಿ ವಾಸಸ್ಥಳ ಅಥವಾ ವ್ಯವಹಾರದ ಸ್ಥಳವೆಂದು ಗುರುತಿಸಲಾಗಿರುವ ಸ್ಥಳದಲ್ಲಿ ಸಮನ್ಸ್ ಇಟ್ಟುಕೊಂಡು ಕನಿಷ್ಠ ಇಬ್ಬರು ಸಾರ್ವಜನಿಕ ಸಾಕ್ಷಿಗಳ ಸಮ್ಮುಖದಲ್ಲಿ ವಿಳಾಸ, ವೇಳೆ, ಸಹಿ ಪಡೆದು ಜಾರಿ ಮಾಡಬೇಕು ಮತ್ತು 4 ವಿಧಾನಗಳಲ್ಲಿ ತಿಳಿಸಿರುವ ಕ್ರಮದಂತೆ ನೋಟೀಸು ಜಾರಿ ಮಾಡಲು ಪ್ರಾಧಿಕಾರ ಮತ್ತು ಗೌರವ ಮಧ್ಯಸ್ಥದಾರರು ಅನುಸರಿಸಲೇಬೇಕು. ಆದರೆ ಈಗ

ಅನುಸರಿಸುತ್ತಿರುವುದು ಅಂಚೆ ಮುಖಾಂತರ ಕಳುಹಿಸುತ್ತಿರುವ ಸಾಮಾನ್ಯ ವಿಳಾಸ ನೋಂದಾಯಿತ ಅಂಚೆ ಮುಖಾಂತರ ಕಳುಹಿಸುವ ಕ್ರಮ ಅನುಸರಿಸಲಾಗುತ್ತಿದೆ. ಆದರೆ ಮೊದಲ ಎರಡು ಅಂಶಗಳನ್ನು ಅನುಸರಿಸುತ್ತಿರುವುದು ಅಷ್ಟು ಸಮರ್ಪಕ ಕಾರ್ಯ ನಡೆಯುತ್ತಿಲ್ಲ. ಉಚ್ಚನ್ಯಾಯಾಲಯದ ತೀರ್ಮಾನದಂತೆ ಉಪನಿಯಮ 3 ರಲ್ಲಿ ನಮೂದಿಸಿರುವ ಕ್ರಮಗಳ ಜೊತೆಗೆ ನೋಟೀಸು ಜಾರಿ ಮಾಡಬೇಕೆಂದು ನಿರ್ದೇಶಿಸಿದ್ದಾರೆ. ಈ ಕ್ರಮ ಅನುಸರಿಸದಿದ್ದರೆ ನೋಟೀಸು ಕ್ರಮ ಬದ್ಧವಲ್ಲವೆಂದು ಪರಿಗಣಿಸಬಹುದಾಗಿರುತ್ತದೆ. ಈ ನಿಯಮವನ್ನು ಪಾಲಿಸುವುದು ಅತೀ ಸೂಕ್ತ ಮತ್ತು ಅವಶ್ಯ ಎಂಬುದನ್ನು ಗುರುತಿಸಬಹುದು.

ಈ ನೀತಿ ನಿಯಮಗಳನ್ನು ಪಾಲಿಸದೆ ನಿಬಂಧಕರು: ಇಲಾಖಾ ಪಂಚಾಯಿತಿದಾರರು: ಗೌರವ ಮಧ್ಯಸ್ಥದಾರರು, ಕೊಟ್ಟ ತೀರ್ಮಾನಗಳನ್ನು ನೊಂದ ಮೇಲ್ಮನವಿದಾರರಿಗೆ, ವಿಳಂಬ ನೀತಿ ಅನುಸರಿಸಲು ಅವಕಾಶ ಕಲ್ಪಿಸದಂತೆ, ದಾವಾ ಪ್ರಕರಣಗಳಲ್ಲಿ ಶೇ.90–95 ರಷ್ಟು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ್ದು, ಹಣ ಪಡೆದವನು, ಸಾಲ ಕೊಡಲು ಬದ್ಧನಾಗಿದ್ದರೂ, ಈ ನ್ಯೂನತೆಗಳಿದ್ದರೆ–ಸಹಕಾರ ಸಂಸ್ಥೆಗಳಿಗೆ ನಷ್ಟ ಸಂಭವಿಸುವ ಸಾಧ್ಯತೆ ಇರುವುದರಿಂದ ಹಾಗೂ ಕರ್ನಾಟಕ ನ್ಯಾಯಾಧೀಕರಣ ಹಾಗೂ ಉಚ್ಚನ್ಯಯಾಲಯ ತೀರ್ಪುಗಾರ ಮೇಲೆ ವಿರುದ್ಧ ಷರಾ ಬರೆಯಲು ಸಾಧ್ಯತೆಗಳಿವೆ ಮತ್ತು ಪಂಚಾಯಿತಿದಾರರನ್ನು ಪಟ್ಟಿಯಿಂದ ನಿಬಂಧಕರು ತೆಗೆದು ಹಾಕಲುಬಹುದು. ಈ ದೃಷ್ಟಿಯಿಂದ, ನೀತಿ ನಿಯಮ ಪಾಲಿಸಿ ತೀರ್ಪು ಕೊಡುವುದು ಸೂಕ್ತ. ಸಮನ್ಸ್ ಒಮ್ಮೆ ತಪ್ಪು ವಿಳಾಸ ಎಂದು ಜಾರಿಯಾಗದೆ ಇದ್ದರೆ ಅದಕ್ಕೆ ಸಮರ್ಪಕ ಕ್ರಮ ಜರುಗಿಸುವುದು ಅರ್ಜಿದಾರನ ಜವಾಬ್ದಾರಿ. ಅದಕ್ಕೆ ತಗಲುವ ಖರ್ಚನ್ನು ಅರ್ಜಿದಾರನೇ ಭರಿಸಬೇಕು. ಕಲಂ 69ಕ್ಕೆ ಸಂಬಂಧ ನಿಬಂಧಕರೇ ತೀರ್ಮಾನಿಸಬೇಕು. ಗೌ: ಮಧ್ಯಸ್ಥದಾರರಿಗೆ ವರ್ಗಾವಣೆ ಮಾಡಲು ಬರುವುದಿಲ್ಲ.

## ಸಹಕಾರ ಸಂಘಗಳ ಕಾಯ್ದೆಯಲ್ಲಿ ವಸೂಲಾತಿ ಆದೇಶ ಪಡೆದ ನಂತರ ಜಾರಿ – ಜಪ್ತಿಗೆ ಅನುಸರಿಸುವ ಕ್ರಮಗಳು :

ಸಹಕಾರ ಸಂಘಗಳ ಕಾಯ್ದೆಯಲ್ಲಿ ಸಂಘದ ಸದಸ್ಯರಿಂದ, ಆಡಳಿತ ಮಂಡಳಿ ಸದಸ್ಯರಿಂದ, ನೌಕರರಿಂದ ಮಾಜಿ ಸದಸ್ಯರಿಂದ, ಮಾಜಿ ನಿರ್ದೇಶಕರಿಂದ, ಮಾಜಿ ನೌಕರರಿಂದ ಹಾಗೂ ಕಾನೂನು ವಾರಸುದಾರರಿಂದ, ಡಿಕ್ರಿಯನ್ನು ಕಲಂ 69, ಕಲಂ 71, ಕಲಂ 99, ಕಲಂ 105, ಕಲಂ 106, ಕಲಂ 107, ಕಲಂ 108 ರಲ್ಲಿ ಪಡೆದ ಆದೇಶಗಳನ್ವಯ ಜಾರಿ ಮಾಡಲು ಕಲಂ 101 ಅನ್ವಯ ನಿಯಮಗಳನ್ನು ಅನುಸರಿಸಬೇಕು. ಅದಕ್ಕೆ ಪೂರಕವಾಗಿ ಸಹಕಾರ ಸಂಘಗಳ ನಿಯಮ 33ಎ ಯಿಂದ 49 ರವರೆಗೆ ನೀತಿ ನಿಯಮಗಳನ್ನು ರೂಪಿಸಲಾಗಿದೆ.

ಈ ವಸೂಲಾತಿ ಆದೇಶಗಳನ್ನು ಜಾರಿ ಮಾಡಲು ಕಳಂ 101 ರ ಅಧಿಕಾರದಲ್ಲಿ ಅಧಿಕಾರ ಚಲಾವಣೆ ಆಗುತ್ತದೆ. ಈ ಮೇಲ್ಕಂಡ ಆದೇಶಗಳನ್ನು ಸಿವಿಲ್ ಕೋರ್ಟ್‌ನ ಡಿಕ್ರಿಯಂತೆ ಜಾರಿ ಮಾಡತಕ್ಕದ್ದು. ಈ ಬಾಕಿಗಳನ್ನು ಭೂಕಂದಾಯ ಬಾಕಿ ಎಂದ ಸಹ ವಸೂಲಿ ಮಾಡಬಹುದು. ಹಾಗೂ ಈ ವಸೂಲಾತಿ ಪ್ರಕ್ರಿಯೆಯನ್ನು ಜಿಲ್ಲಾಧಿಕಾರಿ ಅಥವಾ ಅವರ ಪ್ರತಿನಿಧಿಗೆ ವಹಿಸತಕ್ಕದ್ದು. ಡಿಕ್ರಿ ಪಡೆದಾಗ ಜಾರಿಗೆ ದಿನಾಂಕ ಗೊತ್ತು ಪಡಿಸಿದ್ದರೆ ಆ ದಿನಾಂಕದಂದು ಅಥವಾ ವಸೂಲಾತಿ ಅಧಿಕಾರಿ ಮಾರಾಟಾಧಿಕಾರಿ ನಿಗಧಿ ಮಾಡಿದ ದಿನಾಂಕದಂದು ಜಾರಿ ಮಾಡತಕ್ಕದ್ದು.

ಆದರೆ, ಜಾರಿಯನ್ನು 12 ವರ್ಷದೊಳಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾರ ವಿರುದ್ಧ ಆದೇಶ ಮಾಡಲಾಗಿದೆಯೋ ಆ ಸ್ವತ್ತನ್ನು ಜಪ್ತಿಯ ಮೂಲಕ ಅಥವಾ ಜಪ್ತಿ ಮಾಡಲಾರದ ಹರಾಜು ಮೂಲಕ ಜಾರಿ ಮಾಡತಕ್ಕದ್ದು.

ಮಾರಾಟ ಮಾಡಿದ ನಂತರ ಸ್ಥಿರೀಕರಣಗೊಳಿಸುವ ಅಥವಾ ರದ್ದುಗೊಳಿಸುವಿಕೆ ಬಗ್ಗೆ ಅಥವಾ ಕಲಂ 103ರಲ್ಲಿ ಇರುವ ಹಕ್ಕು ಅಥವಾ ಆಕ್ಷೇಪಣೆ ಅಥವಾ ಇನ್ನಾವುದೇ ಪ್ರಶ್ನೆ ಉದ್ಭವಿಸಿದ ಸಂದರ್ಭದಲ್ಲಿ ರಿಜಿಸ್ಟ್ರಾರ್ ಅಥವಾ ಅವರಿಂದ ಅಧಿಕಾರ ಪಡೆದ ವ್ಯಕ್ತಿ ಆ ಪ್ರಶ್ನೆಗಳಿಗೆ ಆದೇಶದ ಮುಖಾಂತರ ನಿರ್ಧರಿಸತಕ್ಕದ್ದು.

ಯಾವುದೇ ಪ್ರಶ್ನೆ ಜಾರಿಯ ವಿಳಂಬದಲ್ಲಿ ವಿಳಂಬವಾಗಬಹುದೆಂದು ತನಿಖೆ ಮಾಡಲು ಅಥವಾ ತೀರ್ಮಾನಿಸಲು ನಿರಾಕರಿಸಬಹುದು.

ತನಿಖೆ ಮಾಡಿದ ಸಂದರ್ಭದಲ್ಲಿ ಒಂದು ಆಸ್ತಿ ಬೇರೆಯವರ ವಶದಲ್ಲಿದ್ದರೆ ಅವರಿಗೆ ಹಕ್ಕು ಇಲ್ಲ ಅಥವಾ ಇದೆ ಎಂದು ತೀರ್ಮಾನಿಸಿ ಎಲ್ಲಾ ಆಸ್ತಿ ಅಥವಾ ಭಾಗಶಃ ಆಸ್ತಿಯನ್ನು ಜಪ್ತಿಯಿಂದ ಬಿಡುಗಡೆ ಮಾಡಬಹುದು. ಅಥವಾ ಅಂತಹ ತನಿಖೆ ನಂತರ ಅರ್ಜಿ ತಿರಸ್ಕರಿಸಬಹುದು.

ಈ ತೀರ್ಮಾನದಿಂದ ಸಂಬಂಧಪಟ್ಟ ವ್ಯಕ್ತಿ ಒಂದು ವರ್ಷದ ಒಳಗಾಗಿ ಸಿವಿಲ್ ವ್ಯಾಜ್ಯ ಹೂಡಬಹುದು. ಮತ್ತು ಅಂತಹ ಸಂದರ್ಭದಲ್ಲಿ ನಿಬಂಧಕರ ಆದೇಶಕ್ಕೆ ಸಿವಿಲ್ ನ್ಯಾಯಾಲಯದ ತೀರ್ಪಿಗೆ ಒಳಪಡತಕ್ಕದ್ದೆಂದು ತಿಳಿಯತಕ್ಕದ್ದು.

ಐತೀರ್ಪು : ಅವಾರ್ಡಿನ ನಂತರ ಸಂಘವು ಸಹಕಾರ ಸಂಘಗಳ ಕಾಯ್ದೆ 1959 ಕಲಂ 101 ರಡಿಯಲ್ಲಿ ಅಮಲಬಜಾವಣೆ ಆದೇಶಕ್ಕಾಗಿ ಅರ್ಜಿಯನ್ನು ನಿಗಧಿತ ನಮೂನೆ – 1ರಲ್ಲಿ ಕೆಳಕಂಡ ಹಂತಗಳಲ್ಲಿ ನಿಗಧಿತ ಶುಲ್ಕದೊಂದಿಗೆ ಸಂಬಂಧಿಸಿದ ವಸೂಲಾಧಿಕಾರಿಗೆ ಸಲ್ಲಿಸತಕ್ಕದ್ದು.

**ಅಮಲ ಬಜಾವಣೆ ಶುಲ್ಕ :**

ಗರಿಷ್ಠ ಮೊತ್ತಕ್ಕೆ ಶೇಕಡಾ 1/2 ಮತ್ತು ಕನಿಷ್ಠ ಮೊತ್ತಕ್ಕೆ ಶೇಕಡಾ 3ರ ಶುಲ್ಕ ವಿಧಿಸಲು ಸರ್ಕಾರ/ನಿಬಂಧಕರು ಆಗಿಂದಾಗ್ಗೆ ಆದೇಶಿಸುತ್ತಾರೆ.

ವಸೂಲಾತಿ ಅಧಿಕಾರಿಗಳು ನಮೂನೆ 1ರ ಅರ್ಜಿಯನ್ನು ಪರಿಶೀಲಿಸಿ ನಂತರ ನಿಗಧಿತ ನಮೂನೆ–2 ರಲ್ಲಿ ಡಿಸ್ಟ್ರೆಂಟ್ ವಾರೆಂಟ್ (ತಗಾದೆ ನೋಟೀಸ್) ನಿಯಮ 34(3) ರಂತೆ ದ್ವಿಪ್ರತಿಗಳಲ್ಲಿ ಮಾರಾಟಾಧಿಕಾರಿಗಳಿಗೆ ಅಮಲಬಜಾವಣೆ ಪ್ರಕರಣಗಳನ್ನು ವಹಿಸುವುದು.

**(3) ನಿಯಮ 35 ಅಮಲಜಾರಿ ವಿಧಾನ :**

ನಿಬಂಧನೆ (34(2) ರಲ್ಲಿ ಹೇಳಿರುವಂತೆ ಅಮಲಜಾರಿ ನಡೆಸಲು ಯಾವೊಂದು ಕ್ರಮದಲ್ಲಿ ನಡೆಸಬೇಕೆಂದು ಡಿಕ್ರಿ ಪಡೆದವರು ಬಯಸದ ಹೊರತು ಜಾರಿ ಕ್ರಮವು ಸಾಮಾನ್ಯವಾಗಿ ಈ ರೀತಿ ನಡೆಯತಕ್ಕದ್ದು.

1. ಮೊದಲು ತೀರ್ಪು ಸಾಲಗಾರನ ಚರ ಆಸ್ತಿಗಳ ಮೇಲೆ ಜಾರಿ ನಡೆಸುವುದು ಅವಶ್ಯವೆನಿಸಿದರೆ ಸ್ಥಿರಾಸ್ತಿಯ ಮೇಲೂ ಅದೇ ಕಾಲದಲ್ಲಿ ಜಾರಿ ನಡೆಸಲು ನಿಯಮದಲ್ಲಿ ಅಡ್ಡಿ ಇರುವುದಿಲ್ಲ.
2. ಚರಾಸ್ತಿ ಇರದಿದ್ದರೆ ಅಥವಾ ಜಪ್ತಿ ಮಾಡಿದ ಮತ್ತು ಮಾರಾಟ ಮಾಡಿದ ಚರಾಸ್ತಿ ಅಥವಾ ಆಸ್ತಿಗಳ ಮಾರಾಟದ ಹಣವು ಡಿಕ್ರಿ ಪಡೆದವರ ಬೇಡಿಕೆ ಹಣವನ್ನು ಪೂರ್ತಿಯಾಗಿ ಪೂರೈಸಲಾಗದಿದ್ದಲ್ಲಿ ಡಿಕ್ರಿ ಪಡೆದವನಿಗೆ ಪರಭಾರೆ ಮಾಡಿದ ಆಸ್ತಿ ಇಲ್ಲವೆ ಬಾಕಿದಾರನಿಗೆ ಸೇರಿದ ಇತರೆ ಸ್ಥಿರಾಸ್ತಿಯು ಜಾರಿ ಮಾಡಲ್ಪಡತಕ್ಕದ್ದು.

**(4) ನಿಯಮ 36 :–**

ಜಮೀನಿನ ಮೇಲೆ ಬೆಳೆಗಳ ಸಹಿತ ನಿರ್ದಿಷ್ಟ ಚರ ಸ್ವತ್ತಿನ ಜಪ್ತಿ ಮತ್ತು ಮಾರಾಟ

**ಚರಸ್ವತ್ತಿನ ಜಪ್ತಿ ಮಾರಾಟದಲ್ಲಿ ಈ ನಿಯಮಗಳನ್ನು ಪಾಲಿಸತಕ್ಕದ್ದು.**

ಮಾರಾಟಾಧಿಕಾರಿಯು ಡಿಕ್ರಿದಾರರಿಗೆ ನಮೂನೆ 3ರಲ್ಲಿ ತಮ್ಮ ವಸೂಲಾತಿ ಕಾರ್ಯಕ್ರಮದ ಬಗ್ಗೆ ತಿಳಿಸಿದ ನಂತರ ಸಾಲಗಾರರಿಗೆ ನಿಯಮ 34(3) ರ ಪ್ರಕಾರ ನೀಡಲಾದ ತಗಾದೆ ನೋಟೀಸ್‌ನ್ನು

(ಡಿಸ್ಟ್ರೆಂಟ್) ವಾರಂಟ್‌ನ್ನು ಸಾಲಗಾರರಿಗೆ ಜಾರಿ ಮಾಡತಕ್ಕದ್ದು.

ಸಾಲಗಾರನು ಗೈರು ಹಾಜರಿದ್ದಲ್ಲಿ ಮೇಲಿನ ನೋಟೀಸ್‌ನ್ನು ಆತನ ಕುಟುಂಬದ ವಯಸ್ಕ ಸದಸ್ಯನ ಮೇಲೆ ಜಾರಿ ಮಾಡತಕ್ಕದ್ದು. ಹಾಗೆ ಜಾರಿ ಮಾಡಲಾಗದಿದ್ದಲ್ಲಿ ತೀರ್ಪು ಸಾಲಗಾರನ ವಾಸ ಸ್ಥಳದಲ್ಲಿ ಯಾವುದಾದರೂ ಎದ್ದು ಕಾಣುವ ಭಾಗದಲ್ಲಿ (ಮುಂಬಾಗಿಲು ಇತ್ಯಾದಿ) ತಗಾದೆ ನೋಟೀಸ್‌ನ ಒಂದು ಪ್ರತಿಯನ್ನು ಅಂಟಿಸತಕ್ಕದ್ದು. ನಂತರ ಮನೆಯಲ್ಲಿಯ ಅಥವಾ ಹೊರಗಿನ ಪದಾರ್ಥಗಳನ್ನು ಜಪ್ತಿ ಮಾಡತಕ್ಕದ್ದು. ಜಪ್ತಿ ಮಾಡಿದ ಸ್ವತ್ತಿನ ಪಟ್ಟಿಯನ್ನು ಯಾವ ಸ್ಥಳದಲ್ಲಿ ಸ್ವತ್ತನ್ನು ಇಡಬಹುದೋ ಆ ಸ್ಥಳ, ದಿನಾಂಕ ಬಗ್ಗೆ ಷರಾ ಬರೆಯಲ್ಪಟ್ಟು ಮಾರಾಟ ವೇಳೆಯ ತಿಳುವಳಿಕೆ ಪತ್ರ ಸಹಿತ ತೀರ್ಪು ಸಾಲಗಾರನ ಸಾಮಾನ್ಯ ವಾಸಸ್ಥಳದ ಮೇಲೆ ಅಂಟಿಸತಕ್ಕದ್ದು. ಡಿಕ್ರಿದಾರನ ವಶಕ್ಕೆ ಜಪ್ತಿ ಮಾಡಿದ ಸ್ವತ್ತನ್ನು ಮಾರಾಟಾಧಿಕಾರಿಯು ಒಪ್ಪಿಸತಕ್ಕದ್ದು.

1. ಮೇಲೆ ಹೇಳಿದ ಜಪ್ತಿಯನ್ನು ಸೂರ್ಯಸ್ತಮವಾದ ಮೇಲೆ ಅಥವಾ ಸೂರ್ಯೋದಯಕ್ಕೆ ಮೊದಲು ಮಾಡತಕ್ಕದಲ್ಲ.
2. ಜಪ್ತಿ ಮಾಡಲ್ಪಟ್ಟ ಆಸ್ತಿಯ ಮೌಲ್ಯ ಅತೀ ಹೆಚ್ಚಿಗೆಯಾಗಿರತಕ್ಕದ್ದಲ್ಲ. ಡಿಕ್ರಿದಾರರಿಗೆ ಸಾಲಗಾರರಿಂದ ಬರತಕ್ಕ ಮೊಬಲಗಿಗೆ ಸಾಕಾಗುವಷ್ಟು ಇರತಕ್ಕದ್ದು.
3. ಜಪ್ತಿಯ ಸಲುವಾಗಿ ವಾಸದ ಮನೆಯೊಳಗೆ ಪ್ರವೇಶ ಮಾಡಬಹುದು. ಆದರೆ ನಿರ್ಬಂಧಿಸಲ್ಪಟ್ಟ ಜನನಾದ ಅಥವಾ ಪದ್ಧತಿಯಂತೆ ಹೆಂಗಸರ ವಾಸದ ಉಪಯೋಗಕ್ಕೆ ಬಿಡಲಾದ ಸ್ಥಳ ಅಥವಾ ರೂಢಿಯ ಮೇರೆಗೆ ಖಾಸಗಿ ಸ್ಥಳಗಳೆಂದು ಪರಿಗಣಿಸಲ್ಪಟ್ಟ ಮನೆಯೊಳಗೆ ಪ್ರವೇಶಿಸುವ ಮೊದಲು ಪೋಲೀಸ್ ಠಾಣೆಯ ಅಧಿಕಾರಿಯ ಸಮಕ್ರಮದಲ್ಲಿ ಹೆಂಗಸರನ್ನು ಹೊರಸಾಗಿಸುವ ಬಗ್ಗೆ ನೋಟೀಸ್‌ನ್ನು ಕೊಟ್ಟ ತರುವಾಯ ಜನಾನಾ ಕೋಣೆಯೊಳಗಿನ ಸ್ವತ್ತಿನ ಜಪ್ತಿಗಾಗಿ ಪ್ರವೇಶ ಮಾಡಬಹುದು.
4. 1908ರ ಸಿ.ಸಿ.ಯ 60ನೇ ಕಲಂನನ್ವಯ ಜಪ್ತಿಯಿಂದ ವಿನಾಯಿತಿ ಪಡೆದು ಈ ಕೆಳಕಾಣಿಸಿದ ಚರಸ್ವತ್ತುಗಳನ್ನು ಜಪ್ತಿ ಅಥವಾ ಮಾರಾಟಕ್ಕೆ ಬರತಕ್ಕದ್ದಲ್ಲ.
   - ಎ) ಮಂಗಳ ಸೂತ್ರ
   - ಬಿ) ತೀರ್ಪು ಸಾಲಗಾರನು ಒಂದೇ ಜೊತೆ ಎತ್ತುಗಳನ್ನು ಹೊಂದಿದ್ದಲ್ಲಿ ಆ ಎತ್ತುಗಳನ್ನು
   - ಸಿ) ತೀರ್ಪು ಸಾಲಗಾರನು ತನ್ನ ಕಸಬಿಗೆ ಸಂಬಂಧಿಸಿದ ಕನಿಷ್ಠ ಉಪಕರಣಗಳನ್ನು
   - ಡಿ) ದಿನಬಳಕೆಯ ಉಡುಪುಗಳು
   - ಇ) ಕುಟುಂಬದ ಸದಸ್ಯರಿಗೆ ಘೋಷಣೆಗೊಳಿಸುವ ಆಹಾರಧಾನ್ಯ, ಇತ್ಯಾದಿ
   - ಎಫ್) ಪೂಜಾ ಸಾಮಾಗ್ರಿಗಳು
   - ಜಿ) ಶಾಲಾ ಮಕ್ಕಳ ಪಠ್ಯ ಪುಸ್ತಕಗಳು
   - ಹೆಚ್) ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಮಾನದಂತೆ ನಿಬಂಧಕರ ಕಛೇರಿಯಿಂದ 1983ರಲ್ಲಿ ವಿವರವಾದ ಸುತ್ತೋಲೆಯನ್ನು ಹೊರಡಿಸಿ–ಜಪ್ತಿ ಮಾಡಬಾರದಂತಹ ವಸ್ತುಗಳ ಪಟ್ಟಿಯನ್ನು ಲಗತ್ತಿಸಿದೆ.

   ಈ ರೀತಿ ಜಪ್ತಿ ಮಾಡಲಾದ ಚರ ಸ್ವತ್ತುಗಳ ವಿವರಗಳನ್ನೊಳಗೊಂಡಂತೆ ಎಲ್ಲಾ ವಸ್ತುಗಳ ಯಾದಿಯನ್ನು ನಮೂನೆ–4ರಲ್ಲಿ ತಯಾರಿಸಿ ನಮೂನೆ–5ರಲ್ಲಿ ಈ ಚರಸ್ವತ್ತುಗಳನ್ನು ಮಾರಾಟ ಮಾಡುವ ಬಗ್ಗೆ ಹರಾಜು ನೋಟೀಸ್‌ನ್ನು ತೀರ್ಪು ಸಾಲಗಾರನಿಗೆ ಖುದ್ದು ಜಾರಿ ಮಾಡಿ ಇನ್ನೊಂದು ಪ್ರತಿಯನ್ನು ಡಿಕ್ರಿದಾರ ಸಂಘದ ಕಾರ್ಯದರ್ಶಿಗೆ ಜಪ್ತಿ ಮಾಡಲ್ಪಟ್ಟ ಸ್ವತ್ತುಗಳನ್ನು ಭದ್ರತೆಗಾಗಿ ಹಸ್ತಾಂತರಿಸುವುದು.

5. ಈ ರೀತಿ ಜಪ್ತಿ ಮಾಡಲ್ಪಟ್ಟ ಚರಾಸ್ತಿಗಳನ್ನು ಈಗಾಗಲೇ ಬಹಿರಂಗವಾಗಿ ಮಾರಾಟ ಮಾಡಲು ನಿಗಧಿಪಡಿಸಿದ ದಿನಾಂಕಕ್ಕಿಂತ ಒಂದು ದಿನ ಮುಂದೆ ಮತ್ತು ಮಾರಾಟದ ದಿನ ಮತ್ತು ಸ್ಥಳದ ಬಗ್ಗೆ ಸದರಿ ತೀರ್ಪು ಸಾಲಗಾರನು ವಾಸಿಸುವ ಗ್ರಾಮದಲ್ಲಿ ಬಹಿರಂಗವಾಗಿ ಡಂಗುರು ಸಾರುವ ಮೂಲಕ ಮಾರಾಟದ ಸ್ಥಳ ಮತ್ತು ಸಮಯವನ್ನು ಘೋಷಿಸುವುದು.
6. ಈ ರೀತಿ ಜಪ್ತಿ ಮಾಡಲ್ಪಟ್ಟ ಸ್ವತ್ತುಗಳನ್ನು ಮಾರಾಟ ಮಾಡಲು ಜಪ್ತಿ ಮಾಡಿದ ದಿನಾಂಕದಿಂದ ಮಾರಾಟ ಮಾಡಲು ನಿಗಧಿಪಡಿಸಿದ ದಿನಾಂಕಕ್ಕೆ ಮಧ್ಯ 15 ದಿವಸಗಳ ಅಂತರವಿರಬೇಕು. ಆದರೆ ವಶಪಡಿಸಿಕೊಳ್ಳಲ್ಪಟ್ಟ ಸ್ವತ್ತು ಶೀಘ್ರವಾಗಿ ಮತ್ತು ಸ್ವಾಭಾವಿಕವಾಗಿ ನಾಶವಾಗುವುದಿದ್ದಲ್ಲಿ ಅಥವಾ ಅದನ್ನು ವಶದಲ್ಲಿಟ್ಟುಕೊಳ್ಳುವ ವೆಚ್ಚವು ಅರ್ಧ ಮೌಲ್ಯಕ್ಕಿಂತ ಅಧಿಕವಾಗುವ ಸಂಭವವಿರುವಲ್ಲಿ ಮಾರಾಟಾಧಿಕಾರಿಯು ಸದರಿ ಮೊತ್ತವನ್ನು ಮುಂದೆಯೇ ಪಾವತಿ ಮಾಡದ ಹೊರತು 15 ದಿನಗಳ ಅವಧಿಯು ಮುಗಿಯುವುದರ ಮುಂದೆ ಯಾವಾಗಲಾದರೂ ಅದನ್ನು ಮಾರಾಟ ಮಾಡಬಹುದು.
7. ನಿಗಧಿಪಡಿಸಿದ ಹರಾಜಿನ ದಿನಾಂಕದಂದು ಜಪ್ತಿ ಮಾಡಲ್ಪಟ್ಟ ಯಾದಿಯಲ್ಲಿ ನಮೂದಿಸಿರುವ ಎಲ್ಲಾ ವಸ್ತುಗಳನ್ನು ಹರಾಜಿನ ಸ್ಥಳದಲ್ಲಿ ಸಾರ್ವಜನಿಕವಾಗಿ ಪ್ರದರ್ಶಿಸತಕ್ಕದ್ದು. ಹಾಗೂ ಸ್ವತ್ತುಗಳ ತಹರೆಯ ಪ್ರಕಾರ ಲಾಟ ಮಾಡಿ ಕೊಳ್ಳಬಹುದು. ಒಂದು ಬಾರಿಗೆ ಒಂದೊಂದೇ ಲಾಟನ್ನು ಹರಾಜಿಗೆ ತರುವುದು. ಪ್ರಾರಂಭದಲ್ಲಿ ಮಾರಾಟಾಧಿಕಾರಿಯು ಸ್ವತ್ತುಗಳ ಅಂದಾಜು ಮೌಲ್ಯವನ್ನು ನಿಷ್ಕರ್ಶಿಸಿ ಬಿಡ್ಡುದಾರರ ಮುಂದೆ ಸರ್ಕಾರಿ ಸವಾಲೆಂದು ಲಾಟಿನ ಮೌಲ್ಯವನ್ನು ಘೋಷಿಸುವುದು. ಬಿಡ್ಡಿನಲ್ಲಿ ಕೂಡಿದ ಮೌಲ್ಯಕ್ಕೆ ಮಾರಾಟ ಮಾಡಬೇಕು ಅಥವಾ ಬಿಡುಬೇಕು ಎಂಬುದು ಮಾರಾಟಾಧಿಕಾರಿಯ ವಿವೇಚನೆಗೆ ಬಿಟ್ಟಿರುವ ವಿಷಯ.

ಹರಾಜನ್ನು ಸಕಾರಣಕ್ಕಾಗಿ ಮುಂದೂಡುವ ಅಧಿಕಾರವು ಮಾರಾಟಾಧಿಕಾರಿಗೆ ಇರುತ್ತದೆ. ಈ ರೀತಿ ಮುಂದೂಡಿದ ಹರಾಜನ್ನು ಮುಂದಿನ 7 ದಿವಸದೊಳಗಾಗಿ ಮರು ಹರಾಜಿಗೆ ನಿಗಧಿಪಡಿಸಿದ್ದರೆ ಪುನಃ ಹೊಸದಾಗಿ ಮಾರಾಟದ ನೋಟೀಸ್‌ನ್ನು ಸಂಬಂಧಪಟ್ಟವರಿಗೆ ನೀಡುವ ಅಗತ್ಯವಿರುವುದಿಲ್ಲ.

ನಿಯಮ 37 ರಡಿಯಲ್ಲಿ ಇತರ ಚರಾಸ್ಥಿ ಉದಾ:– ವೇತನ, ಚರಾಸ್ತಿ, ಶೇರು ಇತ್ಯಾದಿಗಳನ್ನು ಜಪ್ತಿ ಮಾಡಬಹುದಾಗಿರುತ್ತದೆ.

**ಸ್ಥಿರಾಸ್ತಿಗಳನ್ನು ಜಪ್ತಿ ಮಾಡಿ ಹಾಗೂ ಮಾರಾಟ ಮಾಡಿ ಹಣ ವಸೂಲಿ ಮಾಡುವ ವಿಧಾನಗಳು 38 2(ಎ) (ಬಿ):–**

ಸಹಕಾರ ಸಂಘಗಳ ಕಾನೂನು ಪ್ರಕಾರ ಈಗಾಗಲೇ ತೀರ್ಪು ಸಾಲಗಾರನ ಚರ ಸ್ವತ್ತುಗಳ ಜಪ್ತಿ ಹಾಗೂ ಮಾರಾಟದಿಂದ ಐತೀರ್ಪಿನ ಮೊತ್ತವು ಇತ್ಯರ್ಥಗೊಳ್ಳದೆ ಇರುವ ಸಂದರ್ಭದಲ್ಲಿ ಮಾರಾಟಾಧಿಕಾರಿಯು ಕಾಯ್ದೆ ಕಲಂ 38(2) ರನ್ವಯ ತೀರ್ಪು ಸಾಲಗಾರನು ಹೊಂದಿರುವ ಸ್ಥಿರಾಸ್ತಿಯನ್ನು ಜಪ್ತಿ ಮಾಡಿ ಮಾರಾಟ ಮಾಡುವ ಅವಕಾಶವಿರುತ್ತದೆ. ಈ ಪ್ರಕಾರ ನಿಗಧಿತ ನಮೂನೆ–6ರಲ್ಲಿ ತೀರ್ಪು ಸಾಲಗಾರನಿಗೆ ನೋಟೀಸ್ ಜಾರಿಯಾದ 10 ದಿವಸಗಳೊಳಗಾಗಿ ಐತೀರ್ಪಿನ ಮೊತ್ತವನ್ನು ಪಾವತಿಸುವಂತೆ ಕ್ರಮಕೈಗೊಳ್ಳುವುದು. ಒಂದು ವೇಳೆ ನಿಗಧಿತ ಸಮಯದಲ್ಲಿ ಈ ರೀತಿ ಪಾವತಿಸದಿದ್ದರೆ ಐತೀರ್ಪಿನಲ್ಲಿ ನಮೂದಿಸಿರುವ ತೀರ್ಪು ಸಾಲಗಾರನ ಸ್ಥಿರಾಸ್ತಿಗಳನ್ನು ಜಪ್ತಿ ಮಾಡಿ ಬಹಿರಂಗವಾಗಿ ಹರಾಜು ಮಾಡತಕ್ಕದ್ದು.

ಮೇಲೆ ತಿಳಿಸಿದಂತೆ ತೀರ್ಪು ಸಾಲಗಾರನಿಂದ ಕೊಟ್ಟ ಅವಧಿಯೊಳಗೆ ಐತೀರ್ಪಿನ ಮೊತ್ತವು ಸಂದಾಯವಾಗದಿದ್ದಲ್ಲಿ ಸಂಬಂಧಿಸಿದ ಮಾರಾಟಾಧಿಕಾರಿಯು ನಿಯಮ 38(2)(ಸಿ) ಪ್ರಕಾರ ನಿಗಧಿತ ನಮೂನೆ–7 ರಲ್ಲಿಯ ತಗಾದೆ ಪತ್ರದಲ್ಲಿದ್ದರೆ ಮತ್ತೊಮ್ಮೆ ತನ್ನ ವಿವೇಚನೆಯಲ್ಲಿ ಕಾಲಾವಕಾಶ

ನೀಡಬಹುದು. ಒಂದು ವೇಳೆ ಈ ರೀತಿ ಮತ್ತೊಮ್ಮೆ ನಿಗಧಿಪಡಿಸಿದ ಕಾಲದೊಳಗೆ ಬಾಕಿ ಹಣ ಬಾರದಿದ್ದಲ್ಲಿ ತೀರ್ಪು ಸಾಲಗಾರನ ಐತೀರ್ಪಿನಲ್ಲಿ ನಮೂದಿಸಿದಂತೆ ಸ್ಥಿರಾಸ್ತಿಗಳು ಜಪ್ತಿ ಮಾಡಲ್ಪಟ್ಟಿರುತ್ತದೆ ಎಂದು ತಿಳಿಯತಕ್ಕದ್ದು.

ಈ ರೀತಿ ಮಾರಾಟಾಧಿಕಾರಿಯಿಂದ ಜಪ್ತಿ ಮಾಡಲ್ಪಟ್ಟ ಸ್ಥಿರಾಸ್ತಿಗಳನ್ನು ಕೂಡಲೇ ಬಹಿರಂಗ ಹರಾಜಿಗೆ ತಂದು ಮಾರಾಟ ಮಾಡುವ ಕ್ರಮವನ್ನು ವಸೂಲಾತಿ ಅಧಿಕಾರಿ ನಿರ್ವಹಿಸತಕ್ಕದ್ದು. ಈ ಸಂಬಂಧ ನಿಯಮ 38(2)(ಡಿ) ಪ್ರಕಾರ ವಸೂಲಾತಿ ಅಧಿಕಾರಿಯು ನಿಗಧಿತ ನಮೂನೆ 8ರಲ್ಲಿ ಒಂದು ಸ್ಥಿರಾಸ್ತಿ ಬಹಿರಂಗ ಹರಾಜಿನ "ಇಸ್ತಿಹಾರು" ಪ್ರಕಟಣೆಯನ್ನು ಹೊರಡಿಸತಕ್ಕದ್ದು. ಈ ಮಾರಾಟ "ಇಸ್ತಿಹಾರಿನಲ್ಲಿ" ಮಾರಾಟಕ್ಕೆ ನಿಗಧಿಪಡಿಸಿದ ಸ್ಥಳ ಮತ್ತು ವೇಳೆಯನ್ನು ನಮೂದಿಸತಕ್ಕದ್ದು. ಮಾರಾಟ ಮಾಡಲ್ಪಡುವ ಜಪ್ತಿಯಾದ ಆಸ್ತಿಗಳ ವಿವರಗಳನ್ನು ಹಾಗೂ ತಹಲ್‌ವರೆಗೆ ಬರಬೇಕಾದ ಐತೀರ್ಪಿನ ಮೊತ್ತವನ್ನು ನಿರ್ಧಿಷ್ಟವಾಗಿ ನಮೂದಿಸತಕ್ಕದ್ದು. ಈ ಹರಾಜು ಇಸ್ತಿಹಾರನ್ನು ಮಾರಾಟಕ್ಕೆ ನಿಗಧಿ ಪಡಿಸಿದ ದಿನಾಂಕಕ್ಕಿಂತ 30 ದಿವಸಗಳ ಮುಂಚೆ ಸಂಬಂಧಿಸಿದ ವಸೂಲಾತಿ ಮಾಡಿದ್ದಾಗ ಕಛೇರಿಯಲ್ಲಿ ಡಿಕ್ರಿದಾರ ಸಂಘದ ಕಛೇರಿಯಲ್ಲಿ ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರ್ ರವರ ಕಛೇರಿಯಲ್ಲಿ ಹಾಗೂ ಹರಾಜಿಗೆ ಏರ್ಪಡಿಸಿದ್ದ ಗ್ರಾಮದ ಪಂಚಾಯಿತಿ ಕಛೇರಿಯಲ್ಲಿ ಪ್ರಕಟಿಸುವುದು. ಈ ರೀತಿ ಪ್ರಕಟಿಸಿದ ನಂತರ ಮಾರಾಟಾಧಿಕಾರಿಯು ಮಾರಾಟಕ್ಕೆ ಗೊತ್ತು ಪಡಿಸಿದ ಸ್ಥಿರ ಸ್ವತ್ತುಗಳ ಋಣಭಾರ ಪತ್ರ, ಆಸ್ತಿಗಳು, ಹಕ್ಕು ಪತ್ರಗಳು ಇತ್ಯಾದಿಗಳನ್ನು ಡಿಕ್ರಿ ಪಡೆದ ಸಹಕಾರ ಸಂಘದಿಂದ ಪಡೆಯತಕ್ಕದ್ದು.

ಅಲ್ಲದೆ ಹೀಗೆ ಹರಾಜಿಗೆ ತರುವ ಸ್ಥಿರಾಸ್ತಿಗಳ ಮಾರಾಟದ ವಿಷಯವನ್ನು ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸುವುದಲ್ಲದೆ ಸಾರ್ವಜನಿಕರಿಗೆ ಪ್ರಚುರಪಡಿಸಲು ಕರಪತ್ರಗಳನ್ನು ಹಂಚಲುಬಹುದು.

ಈ 30 ದಿವಸಗಳ ಅವಧಿಯೊಳಗೆ ಡಿಕ್ರಿದಾರರ ಸಂಘಕ್ಕೆ ಹಾಗೂ ತೀರ್ಪು ಸಾಲಗಾರನಿಗೆ ನಿಯಮ 38(ಡಿ) ಅನ್ವಯ ನಮೂನೆ-9 ರಲ್ಲಿ ಮಾರಾಟದ ದಿನಾಂಕವನ್ನು ನಿಗಧಿಪಡಿಸಿದ ಬಗ್ಗೆ ಹಾಗೂ ಸದರಿ ದಿನಾಂಕದಂದು ಹಾಜರಾಗಲು ನೋಟೀಸನ್ನು ನೀಡತಕ್ಕದ್ದು.

ನಿಗಧಿಪಡಿಸಿದ ಮಾರಾಟದ ದಿನಾಂಕಕ್ಕಿಂತ ಮುಂಚೆ 2 ದಿವಸಗಳು ಹಾಗೂ ಮಾರಾಟ ಪ್ರಾರಂಭಿಸಲು ಮುಂಚೆ ಮಾರಾಟದ ದಿನ ತೀರ್ಪು ಸಾಲಗಾರನು ವಾಸಿಸುವ ಗ್ರಾಮದಲ್ಲಿ ಅಧಿಕೃತವಾಗಿ ಬಹಿರಂಗ ಹರಾಜಿನ ವಿಷಯದ ಬಗ್ಗೆ ಹಾಗೂ ಸಾರ್ವಜನಿಕರಿಗೆ ಹರಾಜಿನಲ್ಲಿ ಭಾಗವಹಿಸಲು ಡಂಗುರ ಸಾರಲು ಏರ್ಪಾಡು ಮಾಡಬೇಕು.

ನಿಗಧಿಪಡಿಸಿದ ಸಮಯಕ್ಕೆ ಸರಿಯಾಗಿ ಸಾರ್ವಜನಿಕರಿಗೆ ಡಿಕ್ರಿದಾರ ಸಂಘದ ಕಾರ್ಯದರ್ಶಿ ಹಾಗೂ ಬಹಿರಂಗ ಹರಾಜಿನಲ್ಲಿ ಭಾಗವಹಿಸುವ ಸಾರ್ವಜನಿಕರಿಗೆ ರೂಬುರೂಬು ಈಗಾಗಲೇ ಪ್ರಕಟಿಸಿರುವ ಹರಾಜು ಇಸ್ತಿಹಾರು ಪ್ರಕಟಣೆಯನ್ನು ಬಹಿರಂಗವಾಗಿ ಎಲ್ಲರಿಗೂ ಮನದಟ್ಟು ಆಗುವಂತೆ ಗಟ್ಟಿಯಾಗಿ ಓದಿ ಹೇಳಬೇಕು. ಆ ದಿನದ ಹರಾಜಿನ ಮುಖ್ಯ ನಿಬಂಧನೆಗಳನ್ನು ಸಹ ಬಿಡ್ಡುದಾರರಿಗೆ ಮನವರಿಕೆ ಮಾಡಿಕೊಡುವುದು. ಐತೀರ್ಪಿನ ಪ್ರಕಾರ ವಸೂಲಾಗಬೇಕಾದ ಬಾಕಿ ಮೊತ್ತಕ್ಕೆ ಸಮನಾಗುವಷ್ಟೆ ಸ್ಥಿರಾಸ್ತಿಗಳನ್ನು ಮಾರಾಟಾಧಿಕಾರಿಯು ಸೂಕ್ತ ವಿವೇಚನೆಯೊಂದಿಗೆ ಹರಾಜಿಗೆ ತರುವುದು. ಮಾರಾಟವು ಅತ್ಯಂತ ಹೆಚ್ಚಿನ ಮೊತ್ತಕ್ಕೆ ಬಿಡ್ಡು ಮಾಡುವ ಬಿಡ್ಡುದಾರರಿಗೆ ನಿಲ್ಲತಕ್ಕದ್ದು. ಆದಾಗ್ಯೂ ಈ ರೀತಿ ನಡೆದ ಮಾರಾಟವನ್ನು ಬಿಡ್ಡುದಾರರಿಗೆ ನಿಲ್ಲಿಸುವ ಅಥವಾ ಮುಂದೂಡುವ ಅವಕಾಶವು ಮಾರಾಟಾಧಿಕಾರಿಯ ವಿವೇಚನೆಗೆ ಬಿಟ್ಟಿರುತ್ತದೆ. ಒಂದು ವೇಳೆ ಸಕಾರಣಕ್ಕಾಗಿ ಮಾರಾಟವನ್ನು 7 ದಿವಸಗಳಿಗೂ ಮೀರಿ ಮುಂದೂಡಲ್ಪಟ್ಟಲ್ಲಿ ಮುಂದಿನ ಮಾರಾಟದ ಹೊಸ ಇಸ್ತಿ ಹಾರನ್ನು ತಯಾರಿಸಿ ಪ್ರಕಟಿಸಬೇಕಾಗುತ್ತದೆ.

ಅಂತಿಮವಾಗಿ ಬಿಡ್ಡನ್ನು ನಿಲ್ಲಿಸಿದ ಬಿಡ್ಡುದಾರರಿಂದ ಮಾರಾಟಾಧಿಕಾರಿಯು ಬಿಡ್ಡು ಮಾಡಿದ ಮೊತ್ತದ ಶೇಕಡ 15 ಭಾಗವನ್ನು ಹಾಗೂ ಈ ಬಿಡ್ಡು ಆಸ್ತಿಯ ವರ್ಗಾವಣೆ ಅವಶ್ಯಕ ಸ್ಟ್ಯಾಂಪ್ ಪೇಪರ್

ಮೊತ್ತವನ್ನು ಸ್ಥಳದಲ್ಲಿಯೇ ಬಿಡ್ಡು ದಾರನಿಂದ ಪಡೆಯತಕ್ಕದ್ದು. ಬಿಡ್ಡು ಮಾಡಿದ ಮೊತ್ತದ ಉಳಿದ 85 ಭಾಗವನ್ನು ಮಾರಾಟದ ದಿನಾಂಕದಿಂದ 45 ದಿವಸದೊಳಗಾಗಿ ಬಿಡ್ಡುದಾರನು ಪಾವತಿಸತಕ್ಕದ್ದು. ಒಂದು ವೇಳೆ ಬಿಡ್ಡದಾರನು ಉಳಿದ ಮೊತ್ತವನ್ನು ಸಂದಾಯ ಮಾಡಲು ವಿಫಲವಾದಲ್ಲಿ ಮಾರಾಟಾಧಿಕಾರಿಯು ಸದರಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು. ಇಂತಹ ಪ್ರಸಂಗದಲ್ಲಿ ಸದರಿ ಸ್ಥಿರಾಸ್ತಿಯನ್ನು ಮರು ಮಾರಾಟಕ್ಕೆ ಇಡತಕ್ಕದ್ದು.

ಡಿಕ್ರಿದಾರನು ಆಸ್ತಿಯನ್ನು ಕೊಂಡುಕೊಳ್ಳುವುದಾದಲ್ಲಿ ಹರಾಜಿನ ಹಣವನ್ನು ಮತ್ತು ಡಿಕ್ರಿ ಮೇಲೆ ಬರಬೇಕಾಗಿದ್ದ ಮೊಬಲಗನ್ನು ಇವುಗಳನ್ನೊಂದುಕ್ಕೊಂದು ವಜಾ ಮಾಡತಕ್ಕದ್ದು.

ಆಸ್ತಿ ಹರಾಜಿನಲ್ಲಿ ಅತಿ ಹೆಚ್ಚಿನ ಬಿಡ್ಡುದಾರನಿಗೆ ಮಾರಾಟವ್ನನು ಬಿಡ್ಡುದಾರನ ಪರವಾಗಿ ಘೋಷಿಸುತ್ತಾ, ಹರಾಜಿನ ನಡುವಳಿಕೆಗಳನ್ನು ಮಾರಾಟಾಧಿಕಾರಿಯು ಪೂರ್ಣಗೊಳಿಸಿ ವಸೂಲಾತಿ ಅಧಿಕಾರಿಯವರಿಗೆ ಮಾರಾಟ ದೃಢೀಕರಣ ಸಲುವಾಗಿ ಪೂರ್ಣ ಪ್ರಸ್ತಾವನೆಯನ್ನು ಕಳುಹಿಸತಕ್ಕದ್ದು. ವಸೂಲಾತಿ ಅಧಿಕಾರಿಯು ಈ ರೀತಿ ಮಾರಾಟಾಧಿಕಾರಿಯಿಂದ ಪಡೆದಂತ ಮಾರಾಟದ ನಡವಳಿಕೆ ಅಥವಾ ಪ್ರಸ್ತಾವನೆಯನ್ನು ದೃಢೀಕರಿಸುವ ಸಂಬಂಧ ಮಾರಾಟವಾದ ದಿನಾಂಕದಿಂದ ಮುಂದಿನ 30 ದಿವಸದೊಳಗೆ ಕಾಲಾವಕಾಶ ಹೊಂದಿದ್ದು, 30 ದಿವಸಗಳನ್ನು ಕಳೆದ ನಂತರ ಮಾರಾಟ ನಡವಳಿಕೆಯನ್ನು ದೃಢೀಕರಿಸಬೇಕಾಗಿರುತ್ತದೆ. ಈ ಮಧ್ಯೆ ಮಾರಾಟವಾದ ನಂತರ ಮುಂದಿನ 30 ದಿವಸದೊಳಗೆ ತೀರ್ಪು ಸಾಲಗಾರರಿಂದಾಗಲೀ ಅಥವಾ ಇನ್ನಿತರ ಆಸಕ್ತಿಯುಳ್ಳ ವ್ಯಕ್ತಿಗಳಿಂದ ನಡೆದಿರುವ ಮಾರಾಟವನ್ನು ರದ್ದುಗೊಳಿಸಲು ಅರ್ಜಿ ಬಂದಲ್ಲಿ ವಸೂಲಾತಿ ಅಧಿಕಾರಿಯು ಸದರಿಯವರಿಂದ ನಿಯಮಗಳ ಪ್ರಕಾರ ಒಟ್ಟು ಬಿಡ್ಡಿನ ಮೊತ್ತ ಹಾಗೂ ಈ ಮೊತ್ತದ ಶೇಕಡ 5 ರಷ್ಟು ಹೆಚ್ಚುವರಿ ಹಣವನ್ನು ಸದರಿಯವರಿಂದ ಸ್ವೀಕರಿಸಿ ಮಾರಾಟವನ್ನು ರದ್ದುಗೊಳಿಸಬಹುದಾಗಿದೆ. ಹಾಗೂ ಬಿಡ್ಡುದಾರರಿಗೆ ಪೂರ್ಣ ಬಿಡ್ ಹಣವನ್ನು ಹಾಗೂ ಹೆಚ್ಚುವರಿ ಶೇಕಡ ಹಣವನ್ನು ಹಿಂತಿರುಗಿಸಲು ಕ್ರಮಕೈಗೊಳ್ಳುವುದು. ನಿಯಮ 38(6)(ಎ) ರನ್ವಯ ಮಾರಾಟದ ದಿನಾಂಕದಿಂದ 30 ದಿನಗಳು ಮುಕ್ತಾಯಗೊಂಡ ನಂತರ ಸದರಿ ಮಾರಾಟವನ್ನು ರದ್ದುಗೊಳಿಸಿ (4)ನೇ ಉಪ ನಿಬಂಧನೆಯ ಮೇರೆಗಾಗಲೀ ಅಥವಾ (5)ನೇಯ ಉಪನಿಬಂಧನೆಯ ಮೇರೆಗಾಗಲೀ ಯಾವುದೇ ಅರ್ಜಿಯು ಮಾಡಿಕೊಳ್ಳಲ್ಪಟ್ಟಿರದಿದ್ದಲ್ಲಿ ಇಲ್ಲವೆ ಅಂತಹ ಅರ್ಜಿಯನ್ನು ಮಾಡಿಕೊಂಡಿದ್ದು ಅದು ನಿರಾಕರಿಸಲ್ಪಟ್ಟಿದ್ದಲ್ಲಿ ವಸೂಲಿ ಅಧಿಕಾರಿಯು ಸದರಿ ಮಾರಾಟವನ್ನು ದೃಢೀಕರಿಸುವ ಒಂದು ಆದೇಶವನ್ನು ಮಾಡತಕ್ಕದ್ದು.

ನಿಯಮ 38(7) ರನ್ವಯ ಯಾವೊಂದು ಮಾರಾಟದ ದೃಢೀಕರಣದ ನಂತರ ವಸೂಲಿ ಅಧಿಕಾರಿಯು ಕೊಳ್ಳುವವನಿಗೆ ತನ್ನ ಮುದ್ರೆಯನ್ನು ಮತ್ತು ಸಹಿಯನ್ನು ಹೊಂದಿರುವಂಥ ಒಂದು ಪ್ರಮಾಣಪತ್ರವನ್ನು ಮಂಜೂರು ಮಾಡತಕ್ಕದ್ದು. ಮತ್ತು ಅಂಥ ಪ್ರಮಾಣ ಪತ್ರವು ಮಾರಾಟ ಮಾಡಲಾದ ಆಸ್ತಿಯ ವಿವರ ಮತ್ತು ಕೊಂಡುಕೊಳ್ಳುವವನ ಹೆಸರು ಇವುಗಳನ್ನು ಒಳಗೊಂಡಿರತಕ್ಕದ್ದು. ಮತ್ತು ಅದು ಅಂಥ ಕೊಳ್ಳುವವನಿಗೆ ಮಾಡಲಾದ ಮಾರಾಟದ ವಿಷಯದ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು. (ನಮೂನೆ 10) ಸದರಿ ನಮೂನೆಯನ್ನು ಸರ್ಕಾರಿ ಗೆಜೆಟ್‌ನಲ್ಲಿ ಪ್ರಕಟಿಸತಕ್ಕದ್ದು.

**ಮಾರಾಟವಾಗದ ಸ್ಥಿರಾಸ್ತಿಯನ್ನು ಸಂಘದ ಹೆಸರಿನಲ್ಲಿ ವರ್ಗಾಯಿಸುವುದು ನಿ. 38(ಎ) :**

ನಿಯಮ 38ಎ ರನ್ವಯ ಮತ್ತು ಸಹಕಾರ ಸಂಘಗಳ ಕಾಯ್ದೆ 1959 ಕಲಂ 101(ಬಿ)ರ ಮೇರೆಗೆ ಮಾರಾಟವಾಗದೆ ಇರುವ ಸ್ಥಿರಾಸ್ತಿ ವರ್ಗಾವಣೆ ಕುರಿತಾಗಿ ವಿಧಿವಿಧಾನ ನಿಯಮ 101(1) ಅಮಲಜಾರಿ ಪ್ರಕರಣಗಳಲ್ಲಿ ಸ್ಥಿರಾಸ್ತಿಯ ಹರಾಜಿನ ಸಮಯದಲ್ಲಿ ಖರೀದಿದಾರರು ಬಾರದೆ ಇರುವ ಸಂದರ್ಭದಲ್ಲಿ ಮಾರಾಟಾಧಿಕಾರಿಯು ಸಾಧ್ಯವಾದ ಮಟ್ಟಿಗೆ ತೀವ್ರವಾಗಿ ವಿಷಯವನ್ನು ನಿಬಂಧಕರು ಮತ್ತು ಸಂಬಂಧಿಸಿದ ಸಂಘಕ್ಕೆ : ಡಿಕ್ರಿದಾರರಿಗೆ ವರದಿಯನ್ನು ಸಲ್ಲಿಸತಕ್ಕದ್ದು.

ನಿಯಮ 10(2) ಸಂಘದ ಕಾರ್ಯದರ್ಶಿ : ಡಿಕ್ರಿದಾರರು ಮಾರಾಟಾಧಿಕಾರಿಗಳ ವರದಿಯು ತಲುಪಿದ ಆರು ತಿಂಗಳೊಳಗಾಗಿ ನಿಬಂಧಕರಿಗೆ ಆಸ್ತಿಯನ್ನು ತೆಗೆದುಕೊಳ್ಳುವ ಅಥವಾ ಬಿಡುಗಡೆ ಬಗ್ಗೆ ಅರ್ಜಿ ಸಲ್ಲಿಸಬೇಕು. ಅರ್ಜಿ ತಲುಪಿದ ನಂತರ ನಿಬಂಧಕರು ಸಾಲಗಾರನಿಗೆ ಮತ್ತು ಆಸ್ತಿಯಲ್ಲಿ ಆಸಕ್ತಿಯುಳ್ಳ ಇತರೆ ಎಲ್ಲರಿಗೂ ಆಸ್ತಿಯನ್ನು ಸಂಘಕ್ಕೆ ವರ್ಗಾಯಿಸುವ ಬಗ್ಗೆ ನೋಟೀಸ್‌ನ್ನು ಜಾರಿ ಮಾಡುವುದು. ನೋಟೀಸ್ ತಲುಪಿದ ಒಂದು ತಿಂಗಳೊಳಗಾಗಿ ಬಾಕಿ ಮೊತ್ತ ಬಡ್ಡಿ ಮತ್ತು ಇತರೆ ಖರ್ಚನ್ನು ನಿಬಂಧಕರಲ್ಲಿ ಠೇವಣಿ ಮಾಡತಕ್ಕದ್ದು. ಇದನ್ನು ತಪ್ಪಿದಲ್ಲಿ ನಿಬಂಧಕರು ಸದರಿ ಆಸ್ತಿಯನ್ನು ಸಂಘದ ಹೆಸರಿಗೆ ನಮೂನೆ–8 ರಲ್ಲಿ ದೃಢೀಕರಣ ಪತ್ರ ನೀಡುವುದು.

ಯಾವ ಆಸ್ತಿಯನ್ನು ಜಪ್ತಿ ಮಾಡಿದ ಮೇರೆಗೆ ಖಾಸಗಿಯಾಗಿ ಬೇರೆಯವರಿಗೆ ವರ್ಗಾಯಿಸಿದರೆ ಅಥವಾ ಹಿತಾಸಕ್ತಿಯನ್ನು ವರ್ಗಾಯಿಸಿದರೆ ಇಂತಹ ಜಪ್ತಿಯ ವಿರುದ್ಧ ಯಾವುದೇ ಸಾಲ ಅಥವಾ ಡಿವಿಡೆಂಡ್ ಕೊಡುವುದು ಕಾನೂನು ಬದ್ಧವಾಗಿರುವುದಿಲ್ಲ (ಕಲಂ 39)

ನಿಯಮಗಳ ಮೇರೆಗೆ ನೋಟೀಸ್ ಮತ್ತಿತರ ತಿಳುವಳಿಕೆ ಕೊಡಲು ನೇಮಿಸಲಾದ ವ್ಯಕ್ತಿಗಳಿಗೆ ವಸೂಲಿ ಅಧಿಕಾರಿಯು ಕಾಲಕಾಲಕ್ಕೆ ನಿರ್ಧಿಷ್ಟ ಪಡಿಸಬಹುದಾದ ದರಗಳ ಮೇಲೆ ಭತ್ಯೆ ಪಡೆಯಲು ಅರ್ಹರಿರುತ್ತಾರೆ. (ಕಲಂ 40).

ಮಾರಾಟ ಮಾಡುವ ವೆಚ್ಚಗಳನ್ನು ಸ್ಥಿರಾಸ್ತಿಯ ಜಪ್ತಿ ಡಿಕ್ರಿದಾರರು ಠೇವಣಿಯಾಗಿಟ್ಟ ಮೊತ್ತಕ್ಕಿಂತ ಹೆಚ್ಚಾದರೆ ಹೆಚ್ಚಿನ ಹಣವನ್ನು ಮಾರಾಟ ಮಾಡಿ ಬಂದ ಹಣದಿಂದ ಅಥವಾ ಸುಸ್ತಿ ಸಾಲ ಬಾಕಿದಾರನು ಕೊಟ್ಟ ಹಣದಿಂದ ಮಾರಾಟ ಮಾಡಿ ಉಳಿದ ಹಣ ಡಿಕ್ರಿದಾರನಿಗೆ ಕೊಡತಕ್ಕದ್ದು. ಖರೀದಿ ವಿವರ ದಾಖಲಿಸತಕ್ಕದ್ದು (ಕಲಂ 40).

ಖರೀದಿದಾರನ ತಪ್ಪಿನಿಂದಾಗಿ ಮರುಮಾರಾಟ ಮಾಡಿದ ಸಂದರ್ಭದಲ್ಲಿ ಬಂದ ಹಣ ಮೊದಲನೇ ಮಾರಾಟದ ಬೆಲೆಗಿಂತ ಕಡಿಮೆಯಾದರೆ ಆ ಕಡಿಮೆಯಾದ ಹಣವನ್ನು ಮೊದಲನೇ ಖರೀದಿದಾರನಿಂದ ವಸೂಲಿ ಮಾಡಲು ಹಕ್ಕಿರತಕ್ಕದ್ದು. ಆದರೆ ಮರುಮಾರಾಟದಿಂದ ಹೆಚ್ಚು ಹಣ ಬಂದಾಗ ಆ ಹೆಚ್ಚುವರಿ ಹಣದಲ್ಲಿ ಮೊದಲನೇ ಖರೀದಿದಾರನಿಗೆ ಯಾವುದೇ ಹಕ್ಕು ಇರತಕ್ಕದ್ದಲ್ಲ (ಕಲಂ 42).

### ಅಮಲಜಾರಿ ಪ್ರಕರಣ ಜಾರಿಗೊಳಿಸಲು ಉಪಯೋಗಿಸಲ್ಪಡುವ ನಮೂನೆಗಳು:

1. ನಮೂನೆ–1 : ಡಿಕ್ರಿ ಅಥವಾ ಆವಾರ್ಡಿನ ಅಮಲಜಾರಿಗಾಗಿ ದಾಖಲಿಸುವ ಅರ್ಜಿ
2. ನಮೂನೆ–2 : ಚರಾಸ್ತಿಯ ಜಪ್ತಿಗಾಗಿ ತಗಾದೆ ನೋಟೀಸ್
3. ನಮೂನೆ–4 : ನಮೂನೆ–5 ಮಾರಾಟಾಧಿಕಾರಿಯಿಂದ ಜಪ್ತಿ ಮಾಡಲ್ಪಟ್ಟ ಚರ ವಸ್ತುಗಳ ಯಾದಿ ಮತ್ತು ಸದರಿ ಚರ ವಸ್ತುಗಳ ಮಾರಾಟದ ಸಮಯ ಮತ್ತು ಸ್ಥಳದ ಬಗ್ಗೆ ನೋಟೀಸ್
4. ನಮೂನೆ–6 : ಅಡವು ಮಾಡಲ್ಪಟ್ಟ ಸ್ಥಿರಾಸ್ತಿಯ ಅಮಲಜಾರಿಗಾಗಿ ತಗಾದೆ ನೋಟೀಸು
5. ನಮೂನೆ–7 : ಸ್ಥಿರಾಸ್ತಿಯ ಜಪ್ತಿ ನೋಟೀಸು
6. ನಮೂನೆ–8 : ಸ್ಥಿರಾಸ್ತಿಯ ಮಾರಾಟದ ನೋಟೀಸು–ಮಾರಾಟದ ಘೋಷಣೆ
7. ನಮೂನೆ–9 : ಡಿಕ್ರಿ ಸಂಘ ಮತ್ತು ತೀರ್ಪು ಸಾಲಗಾರರಿಗೆ ಮಾರಾಟದ ನೋಟೀಸು
8. ನಮೂನೆ–10 ಮತ್ತು 11 : ಮಾರಾಟದ ಅನುಮೋದನೆ ಆದೇಶ ಮತ್ತು ದೃಢೀಕರಣ ಪತ್ರಗಳು.